B.L.D.E.Association's
Vachana Pitamaha
Dr. P. G. Halakatti Reserach
Centre Library,
Bijapur

••••••

BOOK - FLAP

033m
Shi.19
~~7670~~

G.A. No 7819

Acc No 7670

005

ಗ್ರಂಥಾಲಯ
ವಿಜಯಪುರ
586103
Library
FUR.
College

by Shri. B.S. Ganachari
Bijapur.

No.

Date..... Curator.

ACC. NO
0039

ಗ್ರಂಥಾಲಯ
ಬಿ. ಎಲ್. ಡಿ. ಇ. ಸಂಸ್ಥೆ
ಈ ಪುಸ್ತಕವು ಮೇಲಿನಿಂದ ಮುಂದಕ್ಕೆ ಹಾಕಿದ
ದಿನಾಂಕದಂದು ಹಾಜರಾಗಬೇಕು ಇಲ್ಲವಾದಲ್ಲಿ ದಂಡವನ್ನು ಪಾವತಿಸಬೇಕಾಗುವುದು
ವಿಜಾ. ಪೂ..

1944
ACC. NO
0094

ಶಿವಾನುಭವ

ವರ್ಷ ೧೯ | ಅಕ್ಟೋಬರ ೧೯೪೪. | ಸಂಚಿಕೆ ೧

ವೀರಶೈವ ಸಮಾಜೋನ್ನತಿಯ ಪ್ರಥಮೋಪಾಯ.

(ಶ್ರೀಗುರು ಸಂಗನಬಸವಸ್ವಾಮಿಗಳು ಮು. ಸುಕ್ಷೇತ್ರ ಬಂಥನಾಳ
ತಾ. ಇಂಡಿ, ಜಿ. ವಿಜಾಪೂರ.)

ಸಾಂಪ್ರತಕಾಲದಲ್ಲಿ ಅತ್ಯಂತ ಹೀನದೀನ ಸ್ಥಿತಿಯಲ್ಲಿರುವ ನಮ್ಮ ವೀರಶೈವ ಸಮಾಜವು ಸರ್ವಾಂಗಸುಂದರವಾಗಿಯೂ ಒಳ್ಳೇ ಓಜಸ್ಸಿನಿಂದಲೂ ತೇಜಸ್ಸಿನಿಂದಲೂ ಶೋಭಿಸಬೇಕಾದರೆ ಶಾರೀರಿಕಬಲ ಮಾನಸಿಕಬಲ ಧಾರ್ಮಿಕಬಲ ಔದ್ಯೋಗಿಕಬಲ ಸಾಂಪತ್ತಿಕಬಲ ಇವೇ ಮೊದಲಾದ ಬಲಗಳು ಅತ್ಯಾವಶ್ಯಕವಾಗಿರುತ್ತವೆ. ಆದರೆ ಈ ಎಲ್ಲವುಗಳಿಗಿಂತ ಮೊದಲು ಸಮಾಜಕ್ಕೆ ಸಂಘಟನಾಬಲವು ಅವಶ್ಯವಾಗಿರುತ್ತದೆ. ಇದೊಂದಿಲ್ಲದಿದ್ದರೆ ಮೇಲೆ ಉದಹರಿಸಿದ ಎಲ್ಲ ಬಲಗಳು ವ್ಯಕ್ತಿಗತವಾಗಿ ಪರಿಣಮಿಸಿ ಅದರಿಂದ ಸಮಾಜಕ್ಕೆ ಮಹತ್ತರದ ಹಿತವನ್ನು ಸಾಧಿಸಲು ಅನುಕೂಲವಾಗುವದಿಲ್ಲ.

ವೀರಶೈವರ ಏಕೀಕರಣ ಅರ್ಥಾತ್ ಸಂಘಟನೆ ಎಂದರೇನೆಂಬುದು ಇನ್ನೂ ಸೂಕ್ಷ್ಮ ವೀರಶೈವರಿಗೆಯೇ ತಿಳದಿರುವದಿಲ್ಲ. ಅಂದಬಳಿಕ ಹಳ್ಳಿಯಲ್ಲಿರುವ ಅಜ್ಞಜನರ ವಿಷಯಕ್ಕಂತೂ ಕೇಳಲೇಬಾರದು. ವೀರಶೈವ ಸಂಘಟನೆ ಎಂದ ಕೂಡಲೇ ಅವರು ಆಚಾರಲೋಪ ಧರ್ಮಲೋಪ ಜಾತಿಲೋಪವೆಂದು ತಿಳಿಯುತ್ತಾರೆ. ಆದರೆ ಹೀಗೆನ್ನುವದು ಅವರ ಕೇವಲ ಅಜ್ಞಾನ ದ್ಯೋತಕವಲ್ಲದೆ ಮತ್ತೇನು? ವಿಚಾರ

ಮಾಡಿನೋಡಿದರೆ ವೀರಶೈವ ಸಂಘಟನೆ ಎಂದರೆ ಏಕಂಕಾರವೂ ಅಲ್ಲ, ಗೋಲಂಕಾರವೂ ಅಲ್ಲ. ವೀರಶೈವ ಸಮಾಜದ ಹಕ್ಕು ಬಾಧ್ಯತೆಗಳ ಮೇಲೆ ಅನ್ಯಸಮಾಜದವಂದ ಆಗುವ ಆಘಾತಗಳನ್ನು ಹಾಗೂ ಆಕ್ರಮಣಗಳನ್ನು ತಡೆಯುವದೇ ವೀರಶೈವ ಸಂಘಟನೆಯಾಗಿರುತ್ತದೆ. ಹಿಂದೊಮ್ಮೆ ಬಸವಾದಿ ಪ್ರಮುಥರ ಕಾಲಕ್ಕೆ ವೀರಶೈವರ ಅಭ್ಯುದಯ ಸೂರ್ಯನು ನಡುನೆತ್ತಿಯ ಮೇಲೆ ಬಂದು ಅತ್ಯಂತ ಪ್ರಖರತೆಯಿಂದ ಮೆರೆಯುತ್ತಿದ್ದು ಅನಂತರ ಅನೇಕ ಕಾರಣಗಳ ಮೂಲಕ ದೂರ ಸರಿಯುತ್ತ ಸರಿಯುತ್ತ ಈಗಂತೂ ಮುಳಗುವ ಸ್ಥಿತಿಗೆಯೇ ಬಂದವನಾಗಿದ್ದು ಆ ಅಭ್ಯುದಯ ಸೂರ್ಯನ ಅವನತಿಗೆ ಕಾರಣಗಳಾವವೋ ಅವುಗಳನ್ನು ಶೋಧಮಾಡಿ ವೀರಶೈವ ಸಮಾಜದ ಪುನರ್ಘಟನೆಯನ್ನುಂಟು ಮಾಡುವದೇ ವೀರಶೈವ ಸಂಘಟನೆಯಾಗಿರುತ್ತದೆ. ಸಂಸ್ಕೃತಿ ದೃಷ್ಟಿಯಿಂದಲೂ ರಾಷ್ಟ್ರೀಯ ದೃಷ್ಟಿಯಿಂದಲೂ ಸಾಮಾಜಿಕ ದೃಷ್ಟಿಯಿಂದಲೂ ಧಾರ್ಮಿಕ ದೃಷ್ಟಿಯಿಂದಲೂ ವೀರಶೈವ ಸಮಾಜವು ಬಲವುಳ್ಳದ್ದಾಗುವಂತೆ ಮಾಡುವದೇ ವೀರಶೈವ ಸಂಘಟನೆಯಾಗಿದೆ.

ಸಂಸ್ಕೃತಿಯ ಮಹತ್ವ.

ಸಂಸ್ಕೃತಿ ಎಂದರೆ ಮಾನವರ ಮನಸ್ಸಿನ ಮೇಲಿನ ಸಂಸ್ಕಾರವು. ಭಾಷೆ, ಶಾಸ್ತ್ರ, ಕಲಾಕೌಶಲ್ಯ, ಧರ್ಮ ಮೊದಲಾದವುಗಳು ಮಾನವರ ವ್ಯವಹಾರದೊಳಗೆ ಅನೇಕ ರೂಪದಿಂದ ಸ್ಫುಟವಾಗುವ ಸಂಸ್ಕಾರಗಳ ಸಮುಚ್ಚಯಗಳಿಗೆ ಸಂಸ್ಕೃತಿ ಎನ್ನುತ್ತಾರೆ. ಈಗ ಇಂಥ ಪ್ರಮುಖ ಸಮಾಜಗಳೆಂದರೆ ಕ್ರಿಶ್ಚನ್, ಬೌದ್ಧ, ಇಸ್ಲಾಮ, ಹಿಂದೂ ಈ ನಾಲ್ಕೇ ಸಮಾಜಗಳೆಂದು ಹೇಳಬಹುದು.

೧೯೩೭ನೇ ಇಸ್ವಿಯ ವರೆಗಿನ ಗಣನೆಯ ಮೇರೆಗೆ ಇಡೀ ಭೂಮಂಡಲದಲ್ಲಿ ೨ ಅಬ್ಜ ೧೩ ಕೋಟಿ ೪೦ ಲಕ್ಷ ಜನರು ಇರುವರೆಂದು ಗೊತ್ತಾಗಿದೆ. ಇದರಲ್ಲಿ ಕೆಲವು ಕೋಟಿ ಕಾಡುಜನರಿರುವರೆಂದೂ ಕೆಲವು ಕೋಟಿ ನಾಸ್ತಿಕ ಜನರು ಇರುವರೆಂದೂ ತಿಳಿದರೂ ೭೫ ಕೋಟಿಯ ವರೆಗೆ ಕ್ರಿಶ್ಚನ್ ಸಂಸ್ಕೃತಿಯ ಜನರೂ ೨೫ ಕೋಟಿಯ ವರೆಗೆ ಇಸ್ಲಾಮ ಸಂಸ್ಕೃತಿಯ ಜನರೂ ಇದ್ದು ಇವರೆಲ್ಲರೂ ಶಾಸ್ತ್ರ ಹಾಗೂ ಶಸ್ತ್ರ ಮತ್ತು ಸತ್ತಿ ಇವುಗಳಿಂದ ಸಂಪನ್ನರಾಗಿದ್ದಾರೆ. ಆದರೆ ನಮ್ಮ ಹಿಂದೂ

ಸಮಾಜವು ಕೂಡಾ ೨೫ ಕೋಟಿಯ ವರೆಗೆ ಇದ್ದರೂ ಇದು ಛಿನ್ನ ವಿಚ್ಛಿನ್ನವಾಗಿಯೂ ಅವ್ಯವಸ್ಥಿತವಾಗಿಯೂ ಅತ್ಯಂತ ದುರ್ಬಲವುಳ್ಳದ್ದಾಗಿಯೂ ಇದೆ. ಇಂಥ ಸಮಾಜದಲ್ಲಿಯೇ ಒಂದು ಅಂಗವಾಗಿರುವ ನಮ್ಮ ವೀರಶೈವ ಸಮಾಜವು ೩೦ ರಿಂದ ೩೫ ಲಕ್ಷದ ವರೆಗೆ ಇರುವದು. ಈ ಅಲ್ಪ ಸಂಖ್ಯಾಕವಾದ ಸಮಾಜಕ್ಕಂತೂ ತನ್ನಲ್ಲಿ ಸತ್ತೆಯೂ ಇಲ್ಲ, ಸಾಮರ್ಥ್ಯವೂ ಇಲ್ಲ, ಹೊರಗೆ ರಕ್ಷಣವೂ ಇಲ್ಲ. ಮತ್ತೆ ತನ್ನೊಳಗಿನ ಯಾದವೀ ಕಲಹದಿಂದ ಅದು ಸಮೂಲ ನಷ್ಟವಾಗಿ ಹೋಗುವದೋ ಏನೋ ಎಂಬುವ ಸಂಶಯ ಸ್ಥಿತಿಯಲ್ಲಿದೆ. ಇಂಥ ಮರಣೋನ್ಮುಖ ಸ್ಥಿತಿಯಲ್ಲಿರುವ ಸಮಾಜವು ಸಜೀವವಾಗುವಂತೆಯೂ ಸಮರ್ಥವಾಗುವಂತೆಯೂ ಮಾಡಲು ಸಂಘಟನೆಯೇ ಅತ್ಯವಶ್ಯಕವಾದುದಲ್ಲವೇ? ಹಿಂದೂಸಮಾಜದ ಭಾಗಗಳಾಗಿರುವ ಇತರ ಅನೇಕ ಸಮಾಜಗಳು ತಮ್ಮ ತಮ್ಮ ಸಂಸ್ಕೃತಿಯನ್ನೂ ಸಾಮರ್ಥ್ಯವನ್ನೂ ಹೆಚ್ಚಿಸಿಕೊಳ್ಳಲು ಅತ್ಯಂತ ತೀವ್ರಗತಿಯಿಂದ ಪ್ರಯತ್ನಿಸುತ್ತಿರಲು ನಮ್ಮ ವೀರಶೈವ ಸಮಾಜವು ಕೂಡ ಅವುಗಳಂತೆ ಸಾಮರ್ಥ್ಯವುಳ್ಳದ್ದಾಗುವಂತೆ ಮಾಡುವಲ್ಲಿ ಮೊದಲನೇ ಕಾರ್ಯವೆಂದರೆ ಸಂಘಟನೆಯೇ ಸರಿ.

ರಾಜಕೀಯ ಮಹತ್ವ.

ರಾಜಕಾರಣ ದೃಷ್ಟಿಯಿಂದಲೂ ವೀರಶೈವ ಸಮಾಜವು ಸಂಘಟನೆಯುಳ್ಳದಾಗಲು ಅವಶ್ಯಕವಾಗಿದೆ. ಹಿಂದುಸ್ಥಾನ ದೇಶಕ್ಕೆ ಸ್ವರಾಜ್ಯವು ಬೇಕೆನ್ನುವ ಮಾತಿನಲ್ಲಿ ಯಾರದು ವಿರುದ್ಧವಿಲ್ಲವಷ್ಟೇ? ಆದರೆ ಸ್ವರಾಜ ಪ್ರಾಪ್ತಿಗೆ ಪ್ರಯತ್ನಿಸುವದಕ್ಕಾಗಿಯೂ ದೊರೆತ ಸ್ವರಾಜ್ಯವನ್ನು ಕರ್ನಾಟಕಪ್ರಾಂತದ ವತಿಯಿಂದ ಚನ್ನಾಗಿ ಆಳುವದಕ್ಕಾಗಿಯೂ ವೀರಶೈವ ಸಮಾಜವು ಯೋಗ್ಯತೆಯುಳ್ಳದ್ದಾಗುವದು ಅಗತ್ಯವಾದುದ್ದಾಗಿದೆ. ಭವಿಷ್ಯತ್ಕಾಲದಲ್ಲಿ ಪ್ರಜಾಸತ್ತೆಯು ಸ್ಥಾಪನೆಯಾಗುವದು ನಿಶ್ಚಿತವದೆ. ಅಂದ ಬಳಿಕ ಕರ್ನಾಟಕದಲ್ಲಿಯ ಪ್ರಜಾಸತ್ತೆಯಲ್ಲಿ ಬಹು ಸಂಖ್ಯಾಕರಾದ ವೀರಶೈವ ಸಮಾಜವು ಪ್ರತಿಬಿಂಬಿಸುವದು ಅತ್ಯಂತ ಅವಶ್ಯಕವಲ್ಲವೇ? ಹಿಂದುಸ್ಥಾನದಲ್ಲಿಯ ಬೇರೆ ಬೇರೆ ಪ್ರಾಂತಗಳಲ್ಲಿರುವ ಬಹು ಸಂಖ್ಯಾಕರಾದ ಜನರು ರಾಜ್ಯಪದ್ಧತಿಯಲ್ಲಿ ತಮ್ಮ ತಮ್ಮ ಸಂಸ್ಕೃತಿಯನ್ನು ಸ್ಪಷ್ಟವಾಗಿ ದೃಗ್ಗೋಚರ ಮಾಡುತ್ತಲಿರುವರು. ಅದರಂತೆ ಕರ್ನಾಟಕದಲ್ಲಿ ಬಹು ಸಂಖ್ಯಾಕರಾದ ವೀರಶೈವರು ಕೂಡ ಅಲ್ಪ ಸಂಖ್ಯಾಕರ

ಹಿತಕ್ಕೆ ಬಾಧೆ ಬರದಂತೆ ತಮ್ಮ ಸಂಸ್ಕೃತಿಯ ಹೆಚ್ಚಳವನ್ನು ಮಾಡಿ ತೋರಿಸುವದು ವಿಹಿತವಾದದ್ದಿರುತ್ತದೆ. ಪ್ರಯುಕ್ತ ಭಾವೀಕಾಲದಲ್ಲಿಯ ಪ್ರಜಾಸತ್ತಾತ್ಮಕ ರಾಜಪದ್ಧತಿಯಲ್ಲಿ ವೀರಶೈವ ಸಂಸ್ಕೃತಿಯ ವೈಶಿಷ್ಟ್ಯವನ್ನು ಕಾಯುವದರ ಸಲುವಾಗಿ ವೀರಶೈವ ಸಮಾಜವು ಈಗಿನಿಂದಲೇ ಸಂಘಟನೆಯುಳ್ಳದ್ದಾಗುವಂತೆ ಪ್ರಯತ್ನಿಸುವದು ಯೋಗ್ಯವಲ್ಲವೇ?

ವೀರಶೈವರಲ್ಲಿ ಜಾತಿ ಭೇದಗಳಿಲ್ಲ.

ವಾಚಕ ಮಹಾಶಯರೇ, ನಾವೆಲ್ಲರೂ ನಮ್ಮ ವೀರಶೈವ ಸಮಾಜದ ವಿಷಯವಾಗಿ ವಿಶೇಷ ಹೆಮ್ಮೆ ಪಡಬೇಕಾಗಿದೆ. ಯಾಕಂದರೆ ಶಾಸ್ತ್ರ ಹಾಗೂ ವ್ಯವಹಾರ ದೃಷ್ಟಿಯಿಂದ ವೀರಶೈವ ಸಮಾಜವು ಸಂಘಟನೆಯುಳ್ಳದ್ದಾಗಲು ಒಳ್ಳೇ ಅನುಕೂಲತೆಯುಳ್ಳದ್ದಿರುವದು. ಯಾವ ಬ್ರಾಹ್ಮಣ ಸಮಾಜವು ಚಾತುರ್ವರ್ಣಗಳೇ ತನ್ನ ವೈಶಿಷ್ಟ್ಯವೆಂದು ಹೇಳುತ್ತ ಬಂದಿರುವದೋ ಅದೇ ಬ್ರಾಹ್ಮಣ ಸಮಾಜವು ಈಗ ವರ್ಣಬದ್ಧವಾಗಿರದೆ ಜಾತಿಬದ್ಧವಾಗಿದೆಯೆಂದೂ ಮೊದಲು ವರ್ಣಬದ್ಧವಾಗಿದ್ದುದೇ ಹಿಂದುಸ್ತಾನದ ಅವನತಿಗೆ ಕಾರಣವಾಯಿತೆಂದೂ ಅದೇ ಸಮಾಜದಲ್ಲಿಯ ಅನೇಕ ವಿದ್ವಾಂಸರು ನಿಷ್ಪಕ್ಷಪಾತದಿಂದ ಸಾರಿ ಹೇಳಹತ್ತಿದ್ದಾರೆ. ಆದರೆ ಇತ್ತೀಜೆಗೆ ನಮ್ಮಲ್ಲಿಯ ಕೆಲವರು ತಾವೂ ಬ್ರಾಹ್ಮಣರಾಗಬೇಕೆಂಬ ಕುತೂಹಲದಿಂದ ನಮ್ಮಲ್ಲಿಯೂ ಚಾತುರ್ವರ್ಣಗಳಿವೆ ಎಂದು ಹೇಳಹತ್ತಿದ್ದಾರೆ. ಅವರಿಗೆ ನಮ್ಮ ಸಮಾಜದಲ್ಲಿ ವರ್ಣವ್ಯವಸ್ಥೆ ಮಾಡಿತೋರಿಸಿರೆಂದು ಕೇಳಿದರೆ ಬಾಯಿ ಬೆಳ್ಳಗೆ ಮಾಡಿಕೊಂಡು ಕೂಡ್ರುತ್ತಾರೆ. ಇರಲಿ.

ಎಲ್ಲ ಶಿವಾಗಮಗಳಲ್ಲಿ ಸೂಕ್ಷ್ಮಾಗಮವೇ ಅಧಿಕ ಪ್ರಮಾಣ ಭೂತವಾದುದೆಂದು ಆ ಸೂಕ್ಷ್ಮಾಗಮದ ಮೊದಲನೆಯ ಪಟಲದಲ್ಲಿ ಪರಮಾತ್ಮನೇ ಹೇಳಿದ್ದಾನೆ. ಆ ಆಗಮದಲ್ಲಿಯೇ ಎಲ್ಲ ವೀರಶೈವರಿಗೂ ಒಂದೇ ಒಂದಾದ ಶಿವಗೋತ್ರ ಮತ್ತು ಶಿವಸೂತ್ರವು ಇರುವವೆಂದು ಸ್ಪಷ್ಟವಾಗಿ ಹೇಳಿದೆ. "ಗೋತ್ರಂ ಚ ಶಿವಗೋತ್ರಂ ಚ ನಾಮಾಪಿ ಶಿವನಾಮ ಚ ಸದಾ ಶಿವೌಚ ಪಿತರೌ ಬಾಂಧವಾಃ ಶಿವಕಿಂಕರಾಃ (ಶ್ಲೋಕ ೪೧) ಪಟಲ ೭ ಸೂಕ್ಷ್ಮಾಗಮ). ಇನ್ನು ಕೆಲವರ ಅಭಿಪ್ರಾಯದಂತೆ ನಮಗೆ ಪಂಚ ಗೋತ್ರಗಳೂ ಪಂಚಸೂತ್ರಗಳೂ ಇವೆ ಎಂದು ಗ್ರಹಿಸಿದರೂ ಆ ಪ್ರತಿ

ಯೊಂದು ಗೋತ್ರಸೂತ್ರಗಳಿಗೆ ವೀರಶೈವರಲ್ಲಿಯೇ ಬೇರೆ ಬೇರೆ ಪಂಗಡದವರೆಂದು ತಿಳಿಯುವ ಅಯ್ಯನವರು ಬಣಜಿಗರು ಪಂಚಮುಸಾಲಿಯವರು ರಡ್ಡೇರು ಕುಡುವಕ್ಕಲಿಗರು ಆದಿಬಣಜಿಗರು ಗಾಣಿಗರು ಜೇಡರು ನೊಣಬರು ಸಾದರು ಉಪ್ಪಾರರು ಇವರೇ ಮೊದಲಾದವರೆಲ್ಲರು ಸಮಾನ ಸಂಬಂಧವುಳ್ಳವರಿದ್ದದ್ದು ಎಲ್ಲರಿಗೂ ಗೊತ್ತಾದ ವಿಷಯವೇ ಆಗಿದೆ. ಇದರಂತೆ ಅಷ್ಟಾವರಣಗಳು ಪಂಚಾಚಾರಗಳು ಷಟ್‌ಸ್ಥಲಗಳು ಕೂಡಾ ಎಲ್ಲರಿಗೂ ಸಮಾನವಾದವುಗಳೇ ಇವೆ. ಆಂದ ಬಳಿಕ ನಮ್ಮ ಕುಲ ಮೇಲು, ತಮ್ಮ ಕುಲ ಮೇಲೆಂದು ಬಡಿದಾಡುವದರಲ್ಲಿ ಯಾವ ಪ್ರಯೋಜನವದೆ? ಇತ್ತ ಶಾಸ್ತ್ರಾಧಾರವೂ ಇಲ್ಲ, ಅತ್ತ ವ್ಯವಹಾರವೂ ಇಲ್ಲ. ಹೇಗೆಂದರೆ ಗುಡಿ ಮಠ ಮೊದಲಾದ ಸಾರ್ವಜನಿಕ ಸ್ಥಾನಗಳಲ್ಲಿ ಎಲ್ಲರೂ ಕೂಡಿಯೇ ಅಡಿಗೆ ಮಾಡಿ ಎಲ್ಲರೂ ಕೂಡಿಯೇ ಊಟೋಪಚಾರಗಳನ್ನು ಮಾಡುವದು ಎಲ್ಲರ ಅನುಭವದ ಮಾತೇ ಆಗಿರುವದು. ಇನ್ನು ಉಚ್ಚಕುಲದವರೆನಿಸಿಕೊಳ್ಳುವವರ ಮನೆಯಲ್ಲಿ ಕಡಿಮೆ ಕುಲದವರೆನಿಸಿಕೊಳ್ಳುವವರು ಅಡಿಗೆ ನೀರು ಮೊದಲಾದವುಗಳನ್ನು ಮಾಡುತ್ತ ಬಂದಿರುವದು ರೂಢಿಯ ವಿಷಯವೇ ಆಗಿರುವದು. ಹೀಗಿದ್ದು ಅವರೇ ತಮ್ಮ ತಮ್ಮ ಮನೆಯಲ್ಲಿ ಅಡಿಗೆಯನ್ನು ಮಾಡಿದರೆ ಊಟವನ್ನೇಕೆ ಮಾಡಬಾರದು? ಏನು ಮನೆಯೇ ಕುಲಗೇಡಿಯೋ? ವಿಚಾರ ಮಾಡಿ ನೋಡಿದರೆ ಇದರಲ್ಲಿ ಯಾವ ತರದ ಹುರುಳಿಲ್ಲ. ಊಟ ಮಾಡಬಾರದೆಂಬುವದು ಕೇವಲ ದುರಭಿಮಾನವೇ ಸರಿ.

ಮೊದಲೇ ಅಲ್ಪ ಸಂಖ್ಯಾಕವಾದ ನಮ್ಮ ವೀರಶೈವ ಸಮಾಜವು ಈ ದುರಭಿಮಾನದಿಂದ ತೀರ ಆಕುಂಚಿತವಾಗಹತ್ತಿದೆ. ಇನ್ನು ಮೇಲೆಯೂ ಸಹ ಈ ಸಮಾಜವು ತನ್ನಲ್ಲಿಯೇ ತುಂಡು ತುಂಡಾಗುತ್ತ ಹೋಗಹತ್ತಿದರೆ ಇದರ ಅಸ್ತಿತ್ವವೇ ನಾಮಶೇಷವಾಗುವದರಲ್ಲಿ ಸಂದೇಹವಿಲ್ಲ. ಪ್ರಯುಕ್ತ ವೀರಶೈವ ಸಮಾಜಹಿತಚಿಂತಕರೇ, ನಿಮಗೆ ವೀರಶೈವ ಸಮಾಜದ ವಿಷಯದಲ್ಲಿ ನೈಜವಾದ ಕಳಕಳಿಯು ಇದ್ದರೆ ಮೊದಲು ನಿಮ್ಮ ಸಮಾಜದಲ್ಲಿ ಐಕ್ಯತೆಯನ್ನುಂಟುಮಾಡುವದೇ ಮುಖ್ಯ ಕಾರ್ಯವೆಂಬುದನ್ನು ನೆನಪಿನಲ್ಲಿಟ್ಟುಕೊಳ್ಳಬೇಕು. ಮೊದಲು ವೀರಶೈವರಲ್ಲಿಯ ಒಳಪಂಗಡಗಳು ಏಕೀಕರಣವಾಗುವಂತೆ ಪ್ರಯತ್ನಿಸಬೇಕು. ಎಲ್ಲ ಪಂಗಡಗಳಲ್ಲಿ ಪರಸ್ಪರ ಊಟೋಪಚಾರ ಮಾಡುವದಲ್ಲದೆ ಹೆಣ್ಣು ಗಂಡು

ಕೊಡತಕ್ಕೊಳ್ಳುವದನ್ನು ಕೂಡಾ ಮಾಡಬೇಕು. ಈ ಸಂಘಟನೆಗೆ ಪ್ರಯತ್ನಿಸುವವರಿಗೆ ಮೊದಲು ಮೊದಲು ಆತಂಕಗಳೂ ಅಡಚಣಿಗಳೂ ಬರುವದು ಸ್ವಾಭಾವಿಕವು. ಆದರೆ ಕಟ್ಟ ಕಡೆಗೆ ಅವರೇ ಸಮಾಜಕ್ಕೆ ಆದರ್ಶ ಪುರುಷರಾಗುತ್ತಾರೆ. ಕಷ್ಟದಂತೆ ಫಲವು ಸಿಕ್ಕೇ ಸಿಗುವದು. ಕಾರಣ ಧೈರ್ಯಶಾಲಿಗಳಾದ ಉತ್ಸಾಹೀ ಸುಶಿಕ್ಷಿತ ವೀರಶೈವ ಪುರುಷರು ಈ ಕಾರ್ಯಕ್ಕೆ ಮುಂದಡಿ ಇಡಲೆಂದು ಹಾರೈಸಿ ಈ ಲೇಖವನ್ನು ಪೂರೈಸುವೆನು.

ಕಕ್ಕಯ್ಯನ ಸೃಷ್ಟಿಯ ವಚನ.

(ಲೇಖಕರು— ಮು ಹ. ಪಾಟೀಲ. ಬಸವೇಶ್ವರ ಕಾಲೇಜ ಬಾಗಲಕೋಟ ಇವರಿಂದ ಸಂಗ್ರಹಿಸಲ್ಪಟ್ಟದ್ದು.)

ಆದಿ ಅನಾದಿ ನಿತ್ಯನ ತಿಳಿಯಲರಿಯದೆ ವಾಯಕ್ಕೆ ಪರಬ್ರಹ್ಮವ ನುಡಿಯುವ ವಾಯುಪ್ರಾಣಿಗಳೆತ್ತ ಬಲ್ಲರೋ. ಆ ಪರಬ್ರಹ್ಮದ ನಿಜದ ನಿಲವೆಂತೆಂದೊಡೆ:—ಆದಿಯೇ ದೇಹ. ಅನಾದಿಯೇ ನಿರ್ದೇಹ. ಆದಿಯೇ ಸಕಲ. ಅನಾದಿಯೇ ನಿಃಕಲ. ಆದಿಯೇ ಜಡ. ಅನಾದಿಯೇ ಅಜಡ. ಆದಿಯೇ ಕಾಯ. ಅನಾದಿಯೇ ಪ್ರಾಣ. ಈ ಎರಡರ ಯೋಗವ ಛೇದಿಸಿ ತನ್ನಿಂದ ತಾನೇ ತಿಳಿದು ನೋಡಲು ಆದಿಸಂಬಂಧವಪ್ಪ ಭೂತಂಗಳು ನಾನಲ್ಲ. ದಶವಿಧೇಂದ್ರಿಯಂಗಳು ನಾನಲ್ಲ. ಅಷ್ಟವಿದಂಗಳು, ಅರಿಷಡ್ವರ್ಗಂಗಳು, ಷಡೂರ್ಮಿಗಳು, ಸಡ್ಭಾವಿಕಾರಂಗಳು, ಷಟ್ಕರ್ಮಂಗಳು, ಷಡ್ಧಾತುಗಳು, ಸಪ್ತವ್ಯಸನಂಗಳು, ತನುತ್ರಯಂಗಳು, ಜೀವತ್ರಯಂಗಳು, ಆತ್ಮತ್ರಯಂಗಳು, ಮನತ್ರಯಂಗಳು, ಗುಣತ್ರಯಂಗಳು, ಭಾವತ್ರಯಂಗಳು, ತಾಪತ್ರಯಂಗಳು, ಅವಸ್ಥಾತ್ರಯಂಗಳು, ಅಂತಃಕರಣಂಗಳು, ಇಂತಿವಾದಿಯಾಗಿ ತೋರುವ ತೋರಿಕೆಯದು ನಾನಲ್ಲ. ನನ್ನೀನವಲ್ಲ. ಇಂತಿವೆಲ್ಲವು ನನ್ನಾಧೀನವಾಗಿಪ್ಪವು. ನಾನಿವರಾಧೀನದವನಲ್ಲ. ನಾನು ತೂರ್ಯಾತೀತವಪ್ಪ ಸತ್, ಚಿತ್, ಆನಂದ ನಿತ್ಯ ಪರಿಪೂರ್ಣವಸ್ತುವೇ

ತನ್ನಿರವೆಂದು ತಿಳಿವೆ. ಆ ತಿಳಿದ ಮಾತ್ರದಲ್ಲಿಯೇ ಅನಿತ್ಯದ ಬೆಸುಗೆಯ ಬಿಟ್ಟು ನಿರಾಳದಲ್ಲಿ ನಿಜವನೆಯ್ದಲರಿಯುವೆ, ಮತ್ತೆ ಭೌತಿಕತತ್ವ ಸಂಬಂಧಿಯಾಗುತ್ತಿರಲು, ಇಂತೀ ತತ್ವಾದಿ ತಾನೆಂತನಲು, ಆ ಪರಬ್ರಹ್ಮವಪ್ಪ ನಿತ್ಯ ನಿರಾಳ ನಿಃಶೂನ್ಯಲಿಂಗವೇ ತನ್ನ ಲೀಲಾ ವಿಲಾಸದಿಂದೆ ತಾನೇ ಸುನಾದ ಬಿಂದು ಪ್ರಕಾಶ ತೇಜೋಮೂರ್ತಿಯಾಗಿ ನಿಂದು. ಮಹಾಲಿಂಗವೆಂದೆನಿಸಿತ್ತು. ಆ ಮಹಾಲಿಂಗವೇ ಪಂಚಸಾದಾಖ್ಯವೆಂದೆನಿಸಿತ್ತು. ಆ ಪಂಚಸಾದಾಖ್ಯವೆ ಪಂಚಲಿಂಗ ಪ್ರಕಾಶವೆಂದೆನಿಸಿತ್ತು. ಆ ಪಂಚಲಿಂಗ ಪ್ರಕಾಶವೆ ಆ ಪಂಚಮುಖವೆಂದೆನಿಸಿತ್ತು. ಆ ಪಂಚಮುಖದಿಂದವೆ ಪಂಚಾಕ್ಷರಂಗಳುತ್ಪತ್ತಿ. ಆ ಪಂಚಾಕ್ಷರಂಗಳಿಂದವೆ ಪಂಚಕಲೆಗಳುತ್ಪತ್ತಿ. ಆ ಪಂಚಕಲೆಗಳಿಂದವೆ ಪಂಚಶಕ್ತಿಗಳುತ್ಪತ್ತಿ. ಆ ಶಕ್ತಿಗಳಿಂದವೆ ಜ್ಞಾನ, ಮನ, ಬುದ್ಧಿ, ಮತ್ತು ಅಹಂಕಾರಂಗಳು. ಜನನ ಅಜ್ಞಾನ, ಮನ, ಬುದ್ಧಿ, ಚಿತ್ತ, ಅಹಂಕಾರಂಗಳಿಂದವೆ ಪಂಚತನ್ಮಾತ್ರಂಗಳುತ್ಪತ್ತಿ. ಆ ಪಂಚತನ್ಮಾತ್ರಂಗಳಿಂದವೆ ಪಂಚಭೂತಂಗಳುತ್ಪತ್ತಿ. ಆ ಪಂಚಭೂತಂಗಳಿಂದವೆ ಪಂಚೀಕರಣವನೆಯ್ದಿ ಆತ್ಮಂಗೆ ಅಂಗವಾಗಿತ್ತು. ಆ ಅಂಗಕ್ಕೆ ಜ್ಞಾನೇಂದ್ರಿಯಂಗಳು, ಕರ್ಮೇಂದ್ರಿಯಂಗಳು, ಪ್ರತ್ಯಂಗವೆನಿಸಿತ್ತು. ಇಂತೀ ದೇಹಸಂಬಂಧಮುಂ ಶಿವನು ತನ್ನ ಚಿದಂಶಿಕನಪ್ಪ ಆತ್ಮಂಗೆ ಸಂಬಂಧಿಸಿದನು. ಆ ಸಂಬಂಧಿಸಿದ ಕಾಯದ ಪೂರ್ವಾಶ್ರಯವು ಇಲ್ಲವಾಯಿತ್ತು. ಅಲ್ಲಿಯೆ ಅಡಗಿಸಿ. ಆ ಕಾಯದ ಪೂರ್ವಾಶ್ರಯವನರಿದು ಮಹಾಘನಲಿಂಗವ ವೇಧಿಸಿಕೊಟ್ಟ ಶಿವ ತಾನೆ ಗುರುವಾಗಿ ಬಂದು ಆ ಮಹಾಘನಲಿಂಗವ ವೇಧಿಸಿಕೊಟ್ಟ ಪರಿಕ್ರಮವೆಂತೆಂದೊಡೆ ಆತ್ಮಂಗೂಡಿ ಪಂಚಭೂತಂಗಳನೆ ಷಡಂಗವೆಂದೆನಿಸಿ, ಆ ಲಿಂಗಕ್ಕೆ ಕಲೆಗಳನೆ ಷಡ್ವಿಧಶಕ್ತಿಗಳೆಂದೆನಿಸಿ, ಆ ಶಕ್ತಿಗಳಿಗೆ ಷಡ್ವಿಧಭಕ್ತಿಗಳನಳವಡಿಸಿ, ಆ ಭಕ್ತಿಗಳಿಗೆ ಭಾವ, ಜ್ಞಾನ, ಮನ, ಬುದ್ಧಿ, ಚಿತ್ತ, ಅಹಂಕಾರಗಳನೆ ಷಡ್ವಿಧ-ಹಸ್ತಂಗಳೆಂದೆನಿಸಿ, ಆ ಹಸ್ತಂಗಳಿಗೆ ಮಹಾಲಿಂಗವಾದಿಯಾದ ಪಂಚಲಿಂಗಗಳನೆ ಷಡ್ವಿಧ ಲಿಂಗಂಗಳೆಂದೆನಿಸಿ, ಆ ಲಿಂಗಗಳಿಗೆ ಷಡಕ್ಷರಿಯನೆ ಷಡ್ವಿಧಮಂತ್ರಂಗಳೆಂದೆನಿಸಿ, ಆ ಮಂತ್ರಂಗಳಿಗೆ ಹೃದಯಗೂಡಿ ಪಂಚೇಂದ್ರಿಯಂಗಳನೆ ಷಡ್ವಿಧಮುಖಂಗಳೆಂದೆನಿಸಿ, ಆ ಮುಖಂಗಳಿಗೆ ಪಂಚತನ್ಮಾತ್ರಯಂಗಳನೆ ದ್ರವಪದಾರ್ಥಂಗಳೆಂದೆನಿಸಿ, ಆ ದ್ರವಪದಾರ್ಥಂಗಳಿಗೆ ಆಯಾಯ

ಮುಖಂಗಳಲ್ಲಿ ನಿರಂತರ ಸಾವಧಾನದಿಂದ ಅರ್ಪಿತವಾಗಲೊಡನೆ ಅಂಗ ಸ್ಥಲಂಗಳಡಗಿ, ತ್ರಿವಿಧಲಿಂಗಾಂಗ ಸ್ಥಲಂಗಳುಳಿದು, ಕಾಯ ಗುರು, ಪ್ರಾಣ ಲಿಂಗ, ಜ್ಞಾನ ಜಂಗಮ, ಗುರುವಿನಲಿ ಶುದ್ಧಪ್ರಸಾದ, ಲಿಂಗದಲ್ಲಿ ಸಿದ್ಧಪ್ರಸಾದ, ಜಂಗಮನಲ್ಲಿ ಪ್ರಸಿದ್ಧ ಪ್ರಸಾದ, ಇಂತಿಪ್ಪ ತ್ರಿವಿಧಪ್ರಸಾದದಲಿ ಏಕಾರ್ಥವಾಗಿ ಮಹಾಘನಪರಪೂರ್ಣ ಪ್ರಸಾದವನೆಯ್ದಿ, ಶರಣ ಜ್ಞಾನಿಯೆನಲ್, ಜ್ಞಾನಿ ಮುನ್ನಡಿಯಲ್ ಅಜ್ಞಾನಿಯೆನಲ್, ಅಜ್ಞಾನಿ ಮುನ್ನಡಿಯಲ್, ಶೂನ್ಯನೆನಲ್, ಶೂನ್ಯ ಮುನ್ನಡಿಯಲ್, ದ್ವೈತಿಯೆನಲ್, ದ್ವೈತಿಮುನ್ನಡಿಯಲ್, ಅದ್ವೈತಿಯೆನಲ್, ಅದ್ವೈತಿಮುನ್ನಡಿಯಲ್, ಉಭಯಾತ್ಮಕ ತಾನೆಯಾಗಿ, ಇದು ಕಾರಣ ಇದರಾಗು ಹೋಗು ಸಕೀಲಸಂಬಂಧವ ಮುಲ್ಲಿಕಾರ್ಜುನಯ್ಯ ನಿಮ್ಮ ಶರಣರೀ ಬಲ್ಲರು.

ಅನ್ಯದೇವತಾಭಜನೆಯನ್ನು ಮಾಡಬಾರದು.

(ಲೇಖಕ:— ಶಿವಮೂರ್ತಿ.)

ಅನ್ಯದೇವತಾಭಜನೆಗೆ ವಿಮುಖನಾಗಿರುವುದೇ ಹನ್ನೊಂದನೆಯ ಆಚಾರ. ೯ ನೆಯ ಆಚಾರದಲ್ಲಿ ಕೇಡು ಜನರ ಸಹವಾಸ ಮಾಡ ಕೂಡದೆಂದೂ ೧೦ ನೆಯ ಆಚಾರದಲ್ಲಿ ಸಜ್ಜನರ ಸಂಗವನ್ನು ಬಿಡ ಬಾರದೆಂದೂ ಹೇಳಿದ್ದಾರೆ. ಆದರೆ ೯–೧೦ ನೆಯ ಆಚಾರಗಳು ಎಲ್ಲರಿಗೂ ಸುಲಭವಾಗಿ ತಿಳಿಯುವದರಿಂದ ಅವುಗಳ ವಿವರವನ್ನು ಇಲ್ಲಿ ಮಾಡಿಲ್ಲ. ಆದರೆ ಅನ್ಯದೇವತಾಭಜನೆಯ ನಿರಾಕರಣವು ವೀರಶೈವರಿಗೆ ಪ್ರಾಮುಖ್ಯವಾಗಿರುವದರಿಂದ ಅದನ್ನು ಇದರಡಿಯಲ್ಲಿ ವಿವಂಸಲಾಗಿದೆ.

ವೀರಶೈವರಿಗೆ ಶ್ರೀಗುರುವು ಕರುಣಿಸಿಕೊಟ್ಟ ಇಷ್ಟಲಿಂಗವೇ ಪರಮಾತ್ಮನ ಕುರುಹಾಗಿರುವದರಿಂದ ಅದರ ಪೂಜೆ–ಧ್ಯಾನ–ಭಜನೆಗಳನ್ನು ಮಾಡಬೇಕೇ ವಿನಾ ಇನ್ನುಳಿದ ಯಾವ ದೈವಗಳ ಪೂಜೆ ಭಜನೆಗಳನ್ನು ಮಾಡಕೂಡದೆಂದು ವೀರಶೈವ ಮತವು ಸಾರುತ್ತದೆ. ಯಾಕಂದರೆ ದೇವರು ಒಬ್ಬನೇ ಇದ್ದಾನೆ. ಇಷ್ಟಲಿಂಗವೇ ಆ ದೇವರು. ಆದುದರಿಂದ ಬ್ರಹ್ಮ, ವಿಷ್ಣು, ಮಹೇಶ್ವರ, ಗಣಪತಿ, ಶಕ್ತಿ, ಸರಸ್ವತಿ, ಲಕ್ಷ್ಮಿ ಮೊದಲಾದ ಸುಧಾರಕ ದೇವರುಗಳನ್ನು ವೀರಶೈವರು ಮನ್ನಿಸುವದಿಲ್ಲ. ಅದರಂತೆ ಮಾರಿ, ಮಸಣಿ, ಲಕ್ಕವ್ವ, ದ್ಯಾಮವ್ವ ದುರಗವ್ವ, ಮರಗವ್ವ ಮೊದಲಾದ ಅನಾಗರಿಕ ದೇವರುಗಳಿಗೂ ಅವರು ಮಹತ್ವಕೊಟ್ಟಿಲ್ಲ. ಗುಡಿಗುಂಡಾರ ತೀರ್ಥಕ್ಷೇತ್ರಗಳಲ್ಲಿ ಪ್ರಸ್ಥಾಪಿತವಾದ ಈಶ್ವರ, ಹನುಮಂತ, ವೀರಭದ್ರ, ಬಸವಣ್ಣ, ಪಾಂಡುರಂಗ, ಲಕ್ಷ್ಮೀನಾರಾಯಣ ಇತ್ಯಾದಿ ದೇವರುಗಳನ್ನೂ ಸಹ ವೀರಶೈವರು ನಿರಾಕರಿಸುವರು. ಅದರಂತೆ ಸೂರ್ಯ, ಚಂದ್ರ, ವರುಣ, ವಾಯು, ಅಗ್ನಿ ಮೊದಲಾದ ನಿಸರ್ಗರೂಪಗಳನ್ನೂ ವೀರಶೈವರು ದೇವರೆಂದು ತಿಳಿಯುವದಿಲ್ಲ. ಇಷ್ಟಲಿಂಗವೊಂದೇ ವೀರಶೈವರಿಗೆ ಪರದೈವವು.

ಜಗತ್ತಿನ ಆಸ್ತಿಕ ಧರ್ಮಗಳಲ್ಲಿ ನಾನಾ ದೈವಂಗಳು ಪರಮಾತ್ಮನ ಅನಂತ ಗುಣಶಕ್ತಿಗಳ ಪ್ರತೀಕಗಳೆಂದು ಭಾವಿಸಿ ಅವುಗಳ ಭಿನ್ನ ಭಿನ್ನ ನಾಮರೂಪಗಳನ್ನು ಕಲ್ಪಿಸಿ ಕೆಲವರು ಅವುಗಳ ಉಪಾಸನೆಯನ್ನು ಮಾಡುವಮಂಟು. ಈ ಎಲ್ಲ ದೇವರುಗಳಿಗೆ ಮಾಡುವ ನಮಸ್ಕಾರವು ವಿಶ್ವವ್ಯಾಪಿಯಾದ ಪರಮಾತ್ಮನಿಗೇ ಮುಟ್ಟುತ್ತದೆಂದು ಅವರ ಮತ. ಅದಕ್ಕಾಗಿ 'ಸರ್ವದೇವ ನಮಸ್ಕಾರಂ ಕೇಶವಂ ಪ್ರತಿಗಚ್ಛತಿ' ಎಂಬುದಾಗಿ ಹೇಳಿದ್ದಾರೆ. ಈ ಉದ್ದೇಶಗಳನ್ನಿಟ್ಟುಕೊಂಡೇ ಅವರು ಪರಮಾತ್ಮನ ಅನಂತ ಗುಣಶಕ್ತಿಗಳನ್ನೊಳಕೊಂಡ ವಿಗ್ರಹಗಳನ್ನು ಪುಣ್ಯಕರವಾದ ಮತ್ತು ಮಂಗಲಕರವಾದ ತೀರ್ಥಕ್ಷೇತ್ರಗಳನ್ನು ಸ್ಥಾಪಿಸಿ ಜನತೆಯಲ್ಲಿ ಭಕ್ತಿ ಭಾವಗಳನ್ನು ಬೆಳಿಸಿದ್ದೂ ಉಂಟು. ಆದರೆ ಗುಡಿಗುಂಡಾರಗಳ ದೇವರುಗಳಿಗೂ ಇಷ್ಟಲಿಂಗಕ್ಕೂ ಮಹದಂತರವಿದೆ.

ಗುಡಿಗುಂಡಾರಗಳ ದೇವರು ಸಾಮೂಹಿಕ ಪೂಜೆಗೆ ತಕ್ಕವಲ್ಲದೆ ಇಷ್ಟಲಿಂಗದಂತೆ ವ್ಯಕ್ತಿ ಪೂಜೆಗೆ ತಕ್ಕವಲ್ಲ. ದೇವರ ದರ್ಶನಕ್ಕೆ ಮನೆ ಮಾರು ಬಿಟ್ಟು ಗುಡಿಗುಂಡಾರಕ್ಕೆ ಹೋಗುವ ಅಡಚಣಿಯು ಎದೆಯ ಮೇಲಿರುವ ಲಿಂಗಪೂಜೆಗೆ ಬರುವದಿಲ್ಲ. ಇಂಥ ಕ್ಲಪ್ತವಾದ ವೇಳೆಯಲ್ಲಿಯೇ ಗುಡಿಯ ದೇವರ ದರ್ಶನಕ್ಕೆ ಹೋಗಬೇಕೇ ವಿನಾ ಇಷ್ಟಲಿಂಗದಂತೆ ಸದಾ ದೇವದರ್ಶನವು ನಮಗೆ ದೊರಕುವದಿಲ್ಲ. ಬೇರೆ ಬೇರೆ ದೇವರುಗಳು ಬೇರೆ ಬೇರೆ ಗುಣಶಕ್ತಿಗಳನ್ನು ಮಾತ್ರ ಅಳವಡಿ

ಸಿಕೊಂಡಿರುವಲ್ಲಿ ಇಷ್ಟಲಿಂಗವು ಅನಂತ ಗುಣಶಕ್ತಿಗಳ ಪರಂಧಾಮವಾಗಿರುತ್ತದೆ. ಪರಸ್ಥಳಕ್ಕೆ ಹೋದರೆ ಗುಡಿಯ ದೇವರ ದರ್ಶನ ತಪ್ಪುವಂತೆ ಇಷ್ಟಲಿಂಗದ ದರ್ಶನವೇನೂ ತಪ್ಪುವದಿಲ್ಲ. ಇಷ್ಟಲಿಂಗದ ಪೂಜೆ ಧ್ಯಾನ-ಭಜನೆಗಳಿಗಿರುವಷ್ಟು ಅನುಕೂಲತೆಗಳೂ ಸೌಕರ್ಯಗಳೂ ಬೇರಾವ ದೇವರಿಗೂ ಇರಲಾರವು. ನಮಗೆ ಇಷ್ಟವಾದ ಹೆಸರಿನಿಂದ ನಮ್ಮ ಲಿಂಗ ದೇವನನ್ನು ನಾವು ಕರೆಯಬಹುದು. ಆದುದರಿಂದ ಸಾಕಾರ ಪೂಜೆಯಲ್ಲಿ ಇಷ್ಟಲಿಂಗ ಪೂಜೆಯೇ ಶ್ರೇಷ್ಠವೆಂದು ಸಹಜವಾಗಿ ಒಪ್ಪುವ ಮಾತಾಗಿದೆ.

ಇನ್ನು ಆಸ್ತಿಕರಲ್ಲಿ ಕೆಲವರು ನಿರಾಕಾರವಾದಿಗಳಿರುವರು. ಅವರು ಪರಮಾತ್ಮನ ಸಾಕಾರ ವಿಗ್ರಹಗಳನ್ನೊಪ್ಪುವದಿಲ್ಲ. ಪ್ರಸಂಗ ಬಂದರೆ ಮೂರ್ತಿಗಳನ್ನು ಭೇದಿಸುವರು. ಅವರು ಕೇವಲ ನಿರಾಕಾರ ನಿರ್ಗುಣನಾದ ಪರವಸ್ತುವನ್ನಾರಾಧಿಸುವರು. ಪರಮಾತ್ಮನು ನಿರಾಕಾರನೂ ನಿರ್ಗುಣನೂ ಇರುವದೇನೋ ನಿಜ. ಅದರಂತೆ ಆತನು ಸಾಕಾರನೂ ಇದ್ದಾನೆಂಬುದೂ ನಿಜ. ಪರವಸ್ತುವಿನ ನಿಜತ್ವವನ್ನರಿಯಬೇಕಾದರೆ ಸಾಕಾರವಿಡಿದೇ ನಿರಾಕಾರದ ಮೆಟ್ಟಿಲನ್ನು ಹತ್ತಬೇಕೆಂದೂ ಕೇವಲ ನಿರಾಕಾರೋಪಾಸನೆಯು ಬಟ್ಟಬಯಲೆಂದೂ ನಮ್ಮವರು ಹೇಳುವದುಂಟು. ಬರೇ ನಿರಾಕಾರದ ಪೂಜಾ ಪ್ರಾರ್ಥನೆಗಳಿಂದ ದೈವೀಶಕ್ತಿಯು ಬಹು ಶೀಘ್ರವಾಗಿ ಮತ್ತು ಸುಲಭವಾಗಿ ಒಳವಡದೆಂದು ನಮ್ಮವರ ಮತ. ಅಂತೆಯೇ ಅವರು ಇಷ್ಟ ಪ್ರಾಣ ಭಾವಲಿಂಗಗಳನ್ನು ಕಲ್ಪಿಸಿರುವರು. ಇಷ್ಟವೇ ಸಕಲ (ಸಾಕಾರ), ಪ್ರಾಣವೇ ಸಕಲ ನಿಃಕಲ (ಸಾಕಾರ-ನಿರಾಕಾರ) ಭಾವವೇ ನಿಃಕಲ (ನಿರಾಕಾರ), ಅಂದರೆ ಯಾವ ಇಷ್ಟಲಿಂಗವನ್ನು ನಾವು ಬಾಹ್ಯದಲ್ಲಿ ಅರ್ಚಿಸುವೆವೋ ಅದರ ಅಸ್ತಿತ್ವವು ಮನದಲ್ಲಿಯೂ ಉಂಟು. ಆದರೆ ಬಾಹ್ಯದಂತೆ ಅದಕ್ಕೆ ಘನರೂಪವಾದ ಅಸ್ತಿತ್ವವಿಲ್ಲ. ಆದುದರಿಂದ ಪ್ರಾಣಲಿಂಗಕ್ಕೆ ಸಾಕಾರ ನಿರಾಕಾರವೆಂಬ ಹೆಸರು. ಆ ಪ್ರಾಣಲಿಂಗಾನು ಸಂಧಾನದಿಂದ ಮನುಷ್ಯನು ತನ್ಮಯನಾಗಿ ಪಾರವಶ್ಯವನ್ನು ಹೊಂದಲು ಎಲ್ಲವೂ ನಿರಾಕಾರ ನಿರ್ಗುಣ ನಿಶ್ಯೂನ್ಯಮಯವಾಗಿ ತೋರುವದು. ಅದೇ ಭಾವಲಿಂಗ ಪೂಜೆಯು. ಇದೇ ನಿರಾಕಾರ ಪೂಜೆಯು. ಇದೇ ವೀರಶೈವರು ಸಾಧಿಸುವ ಕೊನೆಯ ಗುರಿಯು. ಆದುದರಿಂದ ಕೇವಲ ನಿರಾಕಾರ ಪೂಜೆಗಿಂತಲೂ ಸಾಕಾರವಿಡಿದು ನಿರಾಕಾರಕ್ಕೆ ಸಾಗುವ ಪೂಜೆಯು ಅತಿ ಶ್ರೇಷ್ಠವೆಂದು ವೀರಶೈವರ ಮತವು.

ಆದುದರಿಂದ ಷಣ್ಮುಖ ಸ್ವಾಮಿಗಳು ತಮ್ಮದೊಂದು ವಚನದಲ್ಲಿ ಆಪ್ಪಣೆಕೊಡಿಸಿರುವದೇನಂದರೆ "ಶ್ರೀ ಗುರುಸ್ವಾಮಿಯು ಕರುಣಿಸಿ ಕೊಟ್ಟ ಇಷ್ಟಲಿಂಗವನ್ನು ಉರದಲ್ಲಿ ಧರಿಸಿಕೊಂಡು ಅದು ದೇವರೆಂದು ನಂಬದೆ ಧರೆಯ ಮೇಲೆ ಕಂಡ ಕಂಡ ದೇವರ ಕಂಡು ಕಲ್ಪಿಸಿ ಹರಿದಾಡುವ ಭಂಡ ಮಾದಿಗರ ಭಕ್ತರೆಂದರೆ ಅಘೋರ ನರಕ ತಪ್ಪದಯ್ಯಾ ಅಖಂಡೇಶ್ವರಾ." ಇದೇ ವಿಷಯದಲ್ಲಿ ಅಂಬಿಗರ ಚೌಡಯ್ಯನವರು ಹೇಳಿರುವದೇನಂದರೆ— "ಕಟ್ಟಿದಾ ಲಿಂಗವ ಬಿಟ್ಟು ಬೆಟ್ಟದಾ ಲಿಂಗಕ್ಕೆ ಹೋಗಿ ಹೊಟ್ಟೆಯಡಿಯಾಗಿ ಬೀಳುವ ಲೊಟ್ಟಿ ಮೂಳನ ಕಂಡೊಡೆ ಎಡಪಾದ ರಕ್ಷೆಯ ತೆಗೆದುಕೊಂಡು ಲಟ್ಟಲಟನೆ ಹೊಡೆಯೆಂದಾತ ನಮ್ಮ ಅಂಬಿಗರ ಚೌಡಯ್ಯನು." ಇಷ್ಟಲಿಂಗವ ಕಟ್ಟಿಕೊಂಡಿದ್ದರೂ ಕೆಲವು ಸಾಮಾನ್ಯ ಜನರು ತಿಳಿಯದೆ 'ಗತಾನುಗತಿಕೋ ಲೋಕಃ' ಎಂಬಂತೆ ಇನ್ನುಳಿದ ಜನರನ್ನು ನೋಡಿ ಗುಡಿಗುಂಡಾರಗಳಿಗೆ ಹೋಗುತ್ತಿರುವದನ್ನು ಕಂಡು ಅಂಥವರಿಗೆ ಶರಣರು ಕಿವಿಹಿಂಡಿ ಬುದ್ಧಿ ಹೇಳಿದ್ದಾರೆ.

ವೀರಶೈವರಲ್ಲಿ ದೇವಭಕ್ತ ಸಂಬಂಧವು ಸತಿ ಪತಿಗಳ ಸಂಬಂಧದಂತಿರುವದು. ಉಳಿದ ಮತದವರು ತಮ್ಮ ದೇವರನ್ನು ತಾಯಿ-ತಂದೆ-ಗುರು-ಮಿತ್ರರಂತೆ ಕಾಣುವರು. ಬಹು ಜನರನ್ನು ತಾಯಿ ತಂದೆಗಳೆಂದು ಭಾವಿಸಿ ವರ್ತಿಸಿದರೆ ಯಾವ ದೋಷವೂ ಇಲ್ಲ. ಆದರೆ ಸತಿಯು ಅನೇಕರನ್ನು ಪತಿಗಳೆಂದು ಭಾವಿಸಿದರೆ ವ್ಯಭಿಚಾರ ದೋಷವು ತಟ್ಟುವದು. ಆದರೆ ವೀರಶೈವರು 'ಶರಣ.ಸತಿ ಲಿಂಗ ಪತಿ' ಎಂಬ ಭಾವದಿಂದ ನಡೆಯುವವರಾದ್ದರಿಂದ ಅವರು ಲಿಂಗದ ವಿನಾ ಬೇರೊಂದು ದೈವಕ್ಕೆ ಎಂದೂ ಎರಗಲಾರರು. ಈ ವಿಷಯದಲ್ಲಿ ಬಸವಣ್ಣನವರು ಆಪ್ಪಣೆಕೊಡಿಸಿರುವದೇನಂದರೆ— "ದೇವನೊಬ್ಬ ನಾಮ ಹಲವು. ಪರಮ ಪತಿವ್ರತೆಗೆ ಗಂಡನೊಬ್ಬ. ಮತ್ತೊಂದಕ್ಕೆರಗಿದೊಡೆ ಕಿವಿ ಮೂಗ ಕೊಯ್ಯುವನು. ಹಲವು ದೈವದ ಎಂಜಲ ತಿಂಬುವವರನೇನೆಂಬೆನಯ್ಯಾ ಕೂಡಲಸಂಗಮ ದೇವಾ." ಇದಲ್ಲದೆ "ನಂಬಿದ ಹೆಂಡತಿಗೆ ಗಂಡನೊಬ್ಬನೇ ಕಾಣಿರೋ. ನಂಬಬಲ್ಲ ಭಕ್ತಂಗೆ ದೇವನೊಬ್ಬನೇ ಕಾಣಿರೋ. ಬೇಡ ಬೇಡ. ಅನ್ಯದೈವದ ಸಂಗ ಹೊಲ್ಲ. ಅನ್ಯದೈವವೆಂಬುದು ಹಾದರ ಕಾಣಿರೋ. ಕೂಡಲ ಸಂಗಮ ದೇವರು ಕಂಡರೆ ಮೂಗ ಕೊಯ್ಯುವ ಕಾಣಿರೋ."

ಒಬ್ಬ ದೇವನಲ್ಲಿ ಶ್ರದ್ಧೆಯನ್ನಿಟ್ಟು ಆರಾಧಿಸಿದರೆ ಮನಸ್ಸಿನ ಏಕಾಗ್ರತೆಯು ಬಹು ತೀವ್ರವಾಗಿ ಅಳವಟ್ಟು ಸುಖ ಶಾಂತಿಯು ಲಭಿಸುವದು. ಅನೇಕ ದೈವಂಗಳಲ್ಲಿ ಶ್ರದ್ಧೆಯನ್ನಿಟ್ಟು ಆಚರಿಸುನವರಂಗೆ ಮನಸ್ಸಿನ ಏಕಾಗ್ರತೆಯು ದೊರಕುವದು ಕಷ್ಟ. ಸುಖ ಶಾಂತಿಯು ದೊರೆಯುವದೂ ಕಷ್ಟ. ಅನೇಕ ದೈವಂಗಳನ್ನು ನಂಬುವವರು "ಯಾವ ದೇವರು ಹೆಚ್ಚು? ಯಾವ ದೇವರು ಕಡಿಮೆ?" ಎಂಬ ತರ ತಮ್ಮ ಭಾವಕ್ಕೆ ಸಿಲ್ಕಿ ಸಂಶಯಾತ್ಮರಾಗಿ ಅಧೋಗತಿಗಿಳಿಯುವರು. ಒಬ್ಬನೇ ದೇವರಲ್ಲಿ ಅರ್ಥಾತ್ ಇಷ್ಟಲಿಂಗದಲ್ಲಿ ಅಚಲವಾದ ಶ್ರದ್ಧೆಯನ್ನಿಟ್ಟವರು ಯಾವ ಸಂಶಯಕ್ಕೂ ಒಳಗಾಗದೆ ನಿಶ್ಚಲವಾದ ಅಮೃತ ಸುಖವನ್ನು ಸೇವಿಸುವರು.

ಶಿವನೇ ದೇವರೆಂದೂ ಶಿವನಲ್ಲದೆ ಅನ್ಯ ದೈವವಿಲ್ಲೆಂದೂ ವೀರಶೈವ ಮತವು ಸಾರುವದು. ಆ ಶಿವನೆಂದರಾರು? ಶಿವಶರಣರು ಸ್ಥಾವರಲಿಂಗಗಳನ್ನು ನಿಷೇಧಿಸಿದರೂ ಆ ಮುದ್ರಿಕೆಗಳನ್ನಿಟ್ಟುಕೊಂಡು ವಚನಗಳನ್ನು ರಚಿಸಿದುದೇಕೆ? ಎಂಬ ಪ್ರಶ್ನೆಯು ಹೊರಡುವದು. ಇದಕ್ಕೆ ಉತ್ತರ ವಿಷ್ಟೇ. ಶೈವರ ಶಿವನಿಗೂ ವೀರಶೈವರ ಶಿವನಿಗೂ ಮಹದಂತರವುಂಟು. ಶೈವರ ಶಿವನು ಪೌರಾಣಿಕನು. ಅವನಿಗೆ ಪಂಚಮುಖ, ದಶಭುಜ, ತ್ರಿನೇತ್ರಗಳುಂಟು. ಆತನು ಪಾರ್ವತೀ ಪತಿಯು. ಗಜಾನನ ಷಣ್ಮುಖರು ಆತನ ಮಕ್ಕಳು. ಆತನು ಧರೆಯಲ್ಲಿ ಪಂಚವಿಂಶತಿ ಲೀಲೆಗಳನ್ನು ತೋರಿಸಿದ್ದಾನೆ. ಇಂಥ ಶಿವನನ್ನು ವೀರಶೈವರು ಮನ್ನಿಸುವದಿಲ್ಲ. ವಿಶ್ವವ್ಯಾಪಿಯಾದ ಆ ಪರವಸ್ತುವಿಗೇ ಅವರು ಶಿವನೆಂದು ಕರೆಯುವರು. ಅವರ ಇಷ್ಟಲಿಂಗವೇ ಆ ಪರಶಿವನ ಕುರುಹು. ಅದರಂತೆ ಶರಣರ ಮುದ್ರಿಕೆಗಳಾದರೂ ಸ್ಥಾವರ ಲಿಂಗಗಳಾಗಿರದೆ ಕೇವಲ ಪರಶಿವನ ಸ್ವರೂಪಗಳೇ ಆಗಿರುತ್ತವೆ.

'ದೇವನೊಬ್ಬ ನಾಮ ಹಲವು' ಎಂದು ಹೇಳುವ ವೀರಶೈವರು ರಾಮ-ಹರಿ-ಕೃಷ್ಣ ಇತ್ಯಾದಿ ತಮಗಿಷ್ಟವಾದ ಹೆಸರುಗಳಿಂದ ಆ ಪರಮಾತ್ಮನನ್ನು ಕರೆದರೆ ಅಸಮಾಧಾನಬಡಬಹುದೇ ಹೇಗೆಂದು ಕೆಲವರು ಪ್ರಶ್ನಿಸಬಹುದು. ಅದಕ್ಕೆ ಉತ್ತರವಿಷ್ಟೇ. ಪರಮಾತ್ಮನಿಗೆ ಹೆಸರಿಡುವದು ಅವರವರ ಇಷ್ಟವು. ಪರಮಾತ್ಮನನ್ನು ಬೇಕಾದ ಹೆಸರಿನಿಂದ ಕರೆದರೂ ವೀರಶೈವರಿಗೆ ಅಸಮಾಧಾನವಿಲ್ಲ. ಆದರೆ ಆಯಾಯ ಹೆಸರುಗಳುಳ್ಳ ವಿಗ್ರಹಗಳನ್ನು ಜನರು ಆರಾಧಿಸಿದರೆ ಅದಕ್ಕೆ ವೀರಶೈವ

ಮತದ ಒಪ್ಪಿಗೆಯಿಲ್ಲ. ಅನೇಕ ಶರಣರು ರಾಮನಾಥ, ನೃಸಿಂಹಪ್ರಿಯ, ಹರಿಹರ ಎಂಬ ಅಂಕಿತಗಳಿಂದ ಇಷ್ಟಲಿಂಗವನ್ನು ಆರಾಧಿಸಿದ್ದುಂಟು. ಶೈವ-ವೈಷ್ಣವ ನಾಮ ಭೇದವು ಶೈವರಿಗೆ ತೋರುವಂತೆ ವೀರಶೈವರಿಗೆ ತೋರುವದಿಲ್ಲ. ತಮಗೆ ಇಷ್ಟವಾದ ಹೆಸರಿನಿಂದ ಪರಮಾತ್ಮನನ್ನು ಕರೆದು ಪೂಜಿಸಬೇಕೆಂದೇ ನಮ್ಮವರು ಇಷ್ಟಲಿಂಗವೆಂದು ಪರಮಾತ್ಮನ ಕುರುಹನ್ನು ತೋರಿಸಿದ್ದಾರೆ. ಇಷ್ಟಲಿಂಗಕ್ಕೆ ನಾಮ ಭಿನ್ನತೆಯಿರಬಹುದು. ಆದರೆ ಅದಕ್ಕೆ ರೂಪ-ಗುಣ-ಶಕ್ತಿಗಳ ಭಿನ್ನತೆಯಿಲ್ಲ.

ವೀರಶೈವರು ಸ್ಥಾವರ ಲಿಂಗ ಪೂಜಕರಾಗಿರದಿದ್ದರೆ ಅನೇಕ ಶೈವ ಗುಡಿಗಳ ಪೂಜಾರಿಗಳು ವೀರಶೈವರಿರುವುದೇಕೆ? ಎಂಬ ಬೇರೊಂದು ಪ್ರಶ್ನೆ ಹೊರಡುವದು. ಅದಕ್ಕೆ ಉತ್ತರವಿಷ್ಟೇ. ಆ ಪೂಜಾರಿಗಳಿಗೆ ಇಷ್ಟಲಿಂಗವಿದೆಯೋ ಇಲ್ಲವೋ? ಇದ್ದರೆ ಅದೇ ಅವರನ್ನು ಉದ್ಧಾರ ಮಾಡುವ ಪರವಸ್ತುವು. ಆದರೆ ಸ್ಥಾವರ ಲಿಂಗ ಪೂಜೆಯು ಹೊಟ್ಟೆಯ ಪಾಡಿಗಾಗಿ ಕೈಕೊಂಡ ಒಂದು ಕಾಯಕವು ಮಾತ್ರ. ಹಿಂದಿನ ಶೈವ ಅರಸರು ಯೋಗ್ಯ ಜನರಿಂದ ದೇವರ ಪೂಜೆಯು ಸಾಗಲೆಂದು ವೀರಶೈವ ಪೂಜಾರಿಗಳನ್ನು ನೇಮಿಸಿ ಭೂಮಿ ಸೀಮೆಗಳನ್ನು ಅವರಿಗೆ ಹಾಕಿ ಕೊಟ್ಟಿದ್ದರಿಂದ ಅವರ ವಂಶಿಕರು ಆ ಕಾಯಕಗಳನ್ನು ಮಾಡುತ್ತಾ ಬಂದಿದ್ದಾರೆ. ಆದರೆ ಸ್ಥಾವರ ಲಿಂಗವು ತವ ಗೆ ಪರಸುಖವನ್ನೀಯುವ ಪರವಸ್ತುವೆಂದಲ್ಲ. ಹಾಗಿದ್ದರೆ "ಕಲ್ಲ ದೇವರ ಮಾಡಿ ಕಲ್ಲ ಮನೆಯ ಮಾಡಿ ಆ ಕಲ್ಲ ಕಲ್ಲ ಮೇಲೆ ಕೆಡೆದರೆ ದೇವರತ್ತ ಹೋದರೋ? ಲಿಂಗ ಪ್ರತಿಷ್ಠೆಯ ಮಾಡುವವರಿಗೆ ನಾಯಕ ನರಕ ತಪ್ಪದು ಗುಹೇಶ್ವರಾ" ಎಂದು ಪ್ರಭುದೇವರು ಅಪ್ಪಣೆಕೊಡಿಸುತ್ತಿರಲಿಲ್ಲ.

ವೀರಶೈವರಿಗೆ ದೇವನೊಬ್ಬನೇ ಆಗಿದ್ದರೂ ಕ್ರಿಯಾ ಭೇದದಿಂದ ಆ ಪರವಸ್ತುವನ್ನು ಗುರು-ಲಿಂಗ-ಜಂಗಮವೆಂದು ತ್ರಿವಿಧವಾಗಿ ವಿಂಗಡಿಸಿರುವರು. ಅದರಿಂದ ಗುರು ಲಿಂಗ ಜಂಗಮರಲ್ಲಿ ತರ ತಮ ಭಾವವನ್ನೆಣಿಸಲಿಕ್ಕೆ ಬರುವದಿಲ್ಲ. ಗುರುವಿನಿಂದಲೇ ಲಿಂಗದ ಅರಿವಾಗುವದು. ಲಿಂಗಾನುಸಂಧಾನದಿಂದಲೇ ಜ್ಞಾನೋದಯವಾಗುವದು ಆ ಜ್ಞಾನವೇ ಮೋಕ್ಷ ಸಾಧನವು. ಆದುದರಿಂದ ಗುರು ಲಿಂಗ ಜಂಗಮಗಳು ಪರತರ ಮೋಕ್ಷಕ್ಕೆ ಕಾರಣವಾಗಿರುವದರಿಂದ ಅವೆಲ್ಲವೂ ಪರಶಿವನ ಸ್ವರೂಪ

ಗಳೆಂದೇ ವೀರಶೈವರು ಭಾವಿಸುವರು. ವೀರಶೈವ ಮತವು ಶೈವ ಧರ್ಮದಿಂದಲೇ ಉತ್ಪ್ರಾಂತಿ ಹೊಂದಿದ್ದರಿಂದ ಶಿವನೇ ಪರದೈವವೆಂದು ಅವರು ಭಾವಿಸಬೇಕಾಯಿತು. ದೇವರಿಗೆ ಮತ್ತೊಂದು ಹೆಸರನ್ನಿಡಲಿಕ್ಕೆ ಅವರು ಹೋಗಲಿಲ್ಲ. ಅದರಂತೆ ಹರಗುರುಚರಮೂರ್ತಿಗಳನ್ನೂ ಒಂದೇ ಭಾವದಿಂದ ಕಾಣುವ ಸಾಂಪ್ರದಾಯವೂ ಬಳಿಕೆಯಲ್ಲಿ ಬಂದಿತು. ಆದರೆ ಗುರು ಹೆಚ್ಚು ಜಂಗಮ ಕಡಿಮೆ ಅಥವಾ ಜಂಗಮ ಹೆಚ್ಚು ಗುರು ಕಡಿಮೆಯೆಂದು ಕೋಲಾಹಲವನ್ನೆಬ್ಬಿಸುವವರು ಧರ್ಮದ್ರೋಹಿಗಳು. ಅವರಿಗೆ ಧರ್ಮದ ಅರಿವೇ ಇಲ್ಲ. ಗುರುವು ಹೆಚ್ಚಲ್ಲ ಜಂಗಮ ಕಡಿಮೆಯಲ್ಲ. ಎರಡೂ ಒಂದೇ ಎಂದು ವೀರಶೈವ ಮತವು ಸಾರುತ್ತದೆ. ಒಂದೇ ಪರತರ ಲಿಂಗದ ಭಿನ್ನ ರೂಪಗಳೇ ಗುರು ಜಂಗಮಗಳು.

ಅನ್ಯ ದೇವರುಗಳನ್ನು ನಿರಾಕರಿಸಿ ಇಷ್ಟಲಿಂಗವನ್ನೇ ಪೂಜಿಸಿ, ಧ್ಯಾನಿಸಿ ಅದರಲ್ಲಿಯೇ ಮನಮಗ್ನವಾಗುವ ವೀರಶೈವರಿಗೆ ವೀರವ್ರತಿಗಳೆನ್ನುವರು. ವೀರರಾದವರೇ ಇಂಥ ವ್ರತಗಳನ್ನು ಪಾಲಿಸಲು ಸಮರ್ಥರಲ್ಲದೆ ನೂರೆಂಟು ದೈವಗಳನ್ನು ನಂಬುವ ಹೇಡಿಗಳೂ ಸಂಶಯಾತ್ಮರೂ ಸಾಮರ್ಥರಲ್ಲ. ಆದುದರಿಂದ ವೀರಶೈವರೆಲ್ಲ ವೀರವ್ರತಿಗಳಾಗಬೇಕೆಂದೇ ೧೧ ನೆಯ ಆಚಾರವು ಸಾರುತ್ತದೆ.

ಋಣ.

(ಕಟ್ಟಿಯ ಬಸವೇಶ್ವರ.)

ಋಣ ಋಣ ಋಣವೆಂದು ಬರಿದೆ ಗೊಣಗುವಿರಿ! ಋಣದ ಪ್ರಾಪ್ತಿಯನರಿಯರಿ! ಋಣದ ಮುಕ್ತಿಯ ಕಾಣಿರಿ! ಕೇಳಿರಯ್ಯ! ಗುರುವಿನಿಂದ ತನುವ ಪಡೆದು, ಗುರು ಋಣ ಪ್ರಾಪ್ತಿಯಾಯಿತ್ತು. ಲಿಂಗದಿಂದ ಮನವ ಪಡೆದು, ಲಿಂಗ ಋಣ ಪ್ರಾಪ್ತಿಯಾಯಿತ್ತು. ಜಂಗಮದಿಂದ ಧನವ ಪಡೆದು, ಜಂಗಮ ಋಣ ಪ್ರಾಪ್ತಿಯಾಯಿತ್ತು. ಇದು ಕಾರಣ ತನುವ ಗುರುವಿಂಗೆ ಕೊಟ್ಟು, ಮನವ ಲಿಂಗಕ್ಕೆ ಕೊಟ್ಟು, ಧನವ ಜಂಗಮಕ್ಕೆ ಕೊಟ್ಟು, ಋಣ ಮುಕ್ತರಾಗಿರಯ್ಯ! ಬಸವಲಿಂಗ ಪ್ರಿಯ ಕಟ್ಟಿಯ ಬಸವೇಶ್ವರನು ಋಣ ಭಾರಿಗಳನೊಲ್ಲ.

ಕನ್ನಡ ಭಕ್ತಿದೀಪಕ--ಬಸವಣ್ಣ.

(೫) ಬಸವಣ್ಣನು ಹಾಯ್ದ ಹೆಜ್ಜೆ.

(ಲೇಖಕ:— ಸಂಪಿ ಲಿಂಗಣ್ಣ)

ಬಾಳಿಗೆ ದೀಪ

ಬಸವಣ್ಣನೆಂಬ ಹಿಮನದಿಯು ಉಗಮಿಸಿದ್ದು ಬಾಗೇವಾಡಿಯ ಧವಳಗಿರಿಯಲ್ಲಿ. ಉಗಮಿಸಿದ ನದಿಯು ಮುಖ್ಯ ನದಿಯಾಗಿ ಸಮುದ್ರನಾಥನನ್ನು ಸೇರಬೇಕು; ಇಲ್ಲವೆ ಶಾಖಾನದಿಯಾಗಿ ಬೇರೊಂದು ನದಿಯನ್ನು ಬೆರೆತುಕೊಳ್ಳಬೇಕು. ಇವೆರಡು ಜೀವನ ರೀತಿಗಳು. ನಮ್ಮ ಹಿಮನದಿಯು ಮುಖ್ಯ ನದಿಯಾಗಿ, ಅನೇಕ ನದಿಗಳ ಸಂಗಡಿಗವಾಗಿ ಸಂಗಮ ಸಾಗರವನ್ನು ಸೇರಿಕೊಂಡಿತು. ಉನ್ನತವಾದ ಬೆಟ್ಟಕಾಡನ್ನು ಸಾವಕಾಶವಾಗಿ ದಾಟಿದ ಹಿಮನದಿಯು ಬಯಲುನಾಡನ್ನು ಪ್ರವೇಶಿಸಿ ತಿಳಿಗಂಗೆಯಾಗಿ, ಅಗಲವಾಗಿ, ಬಹುಜನೋಪಕಾರಿಯಾಗಿ ಹರಿಯಿತು; ಮುಂದೆ ತನ್ನಂಥವೇ ಆದ ಅದ್ಭುತ ನದಿಗಳನ್ನು ಅಳವಡಿಸಿಕೊಂಡು ಇನ್ನಿಷ್ಟು ವಿಶಾಲವಾಗಿ, ಇನ್ನಿಷ್ಟು ಆಳವಾಗಿ ಕಡಲರಾಜನ ರಾಣಿಯಾಗಿ ರಾಜಿಸಿತು. ಬಸವಣ್ಣನ ಹುಟ್ಟು ಶ್ರೇಷ್ಠವಾದ ಒಂದು ಬ್ರಾಹ್ಮಣ ಕುಟುಂಬದಲ್ಲಿ; ಆದರೂ ಚಂಚಲವಾದ ಪ್ರವಾಹದಂತೆ ಗಡಬಡಿಸಿ ಅಲ್ಲಿಂದ ಇಳಿದು ಬಂತು. "ಬಡ ಹಾರುವನೇಸು ಭಕ್ತನಾದರೆಯೂ ನೇಣಿನ ಹಂಗ ಬೀಡ. ಮಾಲಿಗಾರನೇಸು ಭಕ್ತನಾದರೆಯೂ ಬಾವಿಯ ಬೊಮ್ಮನ ಹಂಗ ಬಿಡ. ಬಣಜಿಗನೇಸು ಭಕ್ತನಾದರೆಯೂ ಒಟ್ಟಿಲ ಬೆನಕನ ಹಂಗ ಬಿಡ" ಎಂದು ಹೀಗಳಿದು ಮುಂದುವರಿದನು. ಮುಂದುವರಿದನು ಸರಿ. ಆದರೆ ಎತ್ತ ? "ಇಂವೆನ್ನ ದೇಹಕ್ಕೆ ಗ್ರಹಣವಾಯಿತ್ತು. ಇನ್ನೆಂದಿಗೆ ಮೋಕ್ಷವಹುದೋ ?" ಎಂದು ಚಿಂತಿಸಿ ಬಾಳಿಗೊಂದು ಬೆಳಕನ್ನು ಗಳಿಸಲು ಹಾತೊರೆದನು; ಚಿಕ್ಕ ಜೀವಕ್ಕೆ ಪುಟ್ಟ ಸಂಸಾರಿಗೆ ಒಂದು ಹಣತಿ ಸಾಕು; ಅಂಥವನ ಮನೆಗೆ ಸೊಡರಿನ ಬೆಳಕು ಸಾಕು. ಆದರೆ, ವಿಶಾಲ ಜೀವಕ್ಕೆ--ಮಹಾಸಂಸಾರಿಗೆ ಮಹಾಜ್ಯೋತಿ--ದಿವ್ಯ ಜ್ಯೋತಿ ಬೇಕಾಗುತ್ತದೆ.

" ವಿಶ್ವಜಿತನು, ದನುಜಜಿತನು, ಸರ್ವಜಿತನು, ಸುತ್ರಾಮಜಿತನು, ನೃಜಿತನು, ಊರ್ವಜಿತನು, ಅಚ್ಯುತಜಿತನು, ಸುಸಂವೇದ್ಯನು, ವೇದ ನಾದಾತೀತನು, ತುರೀಯ ಪರಮಾನಂದ ನಿರವಯಕೋಟಿ ಸೂರ್ಯ ಪ್ರಭೆಯ ಬೆಳಗಿನ ಸಹಸ್ರಕಿರಣದ ಅಗ್ರಪಟಲದ ಬೆಳಗು ಕೂಡಲ ಸಂಗಯ್ಯ"ನೇ ಬಸವಣ್ಣನ ಬಾಳಿಗೆ ಬೆಳಕು. ಆದರೆ ಆತನೆಲ್ಲಿ ? ಅದನ್ನು ಬಸವಣ್ಣನ ಬಾಯಿಂದಲೇ ಆಲಿಸುವಾ.

" ಎತ್ತೆತ್ತ ನೋಡಿದಡತ್ತತ್ತ ನೀನೇ ದೇವಾ. ಸಕಳ ವಿಸ್ತಾರದ ರೂಹು ನೀನೇ ದೇವಾ. ವಿಶ್ವತೋ ಬಾಹು ನೀನೇ ದೇವಾ. ವಿಶ್ವತೋ ಚಕ್ಷು ನೀನೇ ದೇವಾ. ವಿಶ್ವತೋ ಮುಖ ನೀನೇ ದೇವಾ. ವಿಶ್ವತೋ ಬಾಹು ನೀನೇ ದೇವಾ ಕೂಡಲ ಸಂಗಮದೇವಾ. "

ನಮಗೆ ಸಕಳ ವಿಸ್ತಾರ ಕಾಣಿಸಿದರೂ ಅದರ ರೂಹು ಗೋಚರಿಸದು. ಆದರೆ ಬಸವಣ್ಣನ ಅಂತರ್ ದೃಷ್ಟಿಗೆ ಅದು ಕಂಗೊಳಿಸಿದೆ. ಅವನ ಮನಕ್ಕೆ ಬಂದ ಸಕಳ ವಿಸ್ತಾರದ ರೂಹು ಎಂಥದೆಂದರೆ--

" ಹೊನ್ನಹಾವುಗೆಯ ಮೆಟ್ಟಿದವನ, ಮಿಡಿಯ ಮುಟ್ಟಿದ ಕೆಂಜಡೆಯವನ, ಮೈಯಲ್ಲಿ ವಿಭೂತಿ ಧರಿಸಿದವನ, ಕರದಲ್ಲಿ ಕಪಾಲವ ಪಿಡಿದವನ, ಅರ್ಧನಾರಿಯಾದವನ, ಸದ್ಭಕ್ತರ ಹೃದಯಲ್ಲಿಪ್ಪವನ ಎನ್ನ ಮನಕ್ಕೆ ಬಂದವನ, ಮಾಡಿದ ಪೂಜೆಯಲೊಪ್ಪುವನ " ರೂಹು.

ಮೂವತ್ತು ಮೂರುಕೋಟಿ ದೇವತೆಗಳನ್ನು ದಾಟಿ, ತ್ರಿಮೂರ್ತಿಗಳಲ್ಲೊಬ್ಬನಾದ ಕೂಡಲಸಂಗನನ್ನೇ ವರಿಸಿದ್ದೇಕೆ ? ಅರಗು ತಿಂದು ಕರಗುವ ದೈವವೂ ಉರಿಯ ಕಂಡರೆ ಮುರಟುವ ದೈವವೂ, ಅವಸರ ಬಂದರೆ ಮಾರುವ ದೈವವೂ ಅಂಜಿಕೆ ಬಂದರೆ ಹೂಳುವ ದೈವವೂ ಅವನಿಗ ಬೇಕಿಲ್ಲವಾಗಿತ್ತು. " ಆವಾಗಲೂ ಲೋಗರ ಮನೆಯ ಕಾಯ್ದು ಕೊಂಡಿಪ್ಪ " ನಾಯ ದೈವಗಳನ್ನು ತ್ಯಜಿಸಿದನು. " ವಿಷ್ಣುವ ಪೂಜಿಸಿ ಮುಡುಹ ಸುಡಿಸಿಕೊಂಬುದೂ, ಜಿನನ ಪೂಜಿಸಿ ಬತ್ತಲೆ ಇಪ್ಪುದೂ, ಮೈಲಾರನ ಪೂಜಿಸಿ ನಾಯಾಗಿ ಬೊಗಳುವುದೂ " ಅಸಹ್ಯವೆನಿಸಿ, ಸಹಜ ಭಾವನಿಜೈಕ್ಯ ಕೂಡಲ ಸಂಗಮದೇವನೊಬ್ಬನೇ ದೇವ"ನೆಂದು ಅವನನ್ನು ಅದರಿಸಿದನು. ಬಸವಣ್ಣನದೇ ರಾಜಮಾರ್ಗವಲ್ಲ; ಅದೇ ಪೂರ್ಣಸತ್ಯವಲ್ಲ; ಬಸವಣ್ಣನ ಪ್ರಕೃತಿ ಸ್ವಭಾವವು ಕೂಡಲ ಸಂಗ

ನನ್ನು ಒಲಿದರೆ, ಬೇರೊಬ್ಬ ಭಕ್ತನ ಪ್ರಕೃತಿ ಸ್ವಭಾವವು ವಿಷ್ಣುವನ್ನೋ ಜಿನನನ್ನೋ ಒಲಿಯಲು ಸ್ವತಂತ್ರವಾಗಿದೆಯೆಂಬುದನ್ನು ಮರೆತರಾಗದು. ಒಟ್ಟು ಯಾವ ಜೀವನವೇ ಆಗಲಿ, ಅದು "ಐದು ಮಾನವ ಕುಟ್ಟಿ ಒಂದು ಮಾನವ ಮಾಡು"ವ ಹೋರಾಟ; "ಮದವಳಿದು ನಿಜವುಳಿದರೆ ಬಳಿಕದು ಸತ್ಯ"ವಷ್ಟೇ? ಆ ಸತ್ಯವು ದೇವನೊಲಿದ ಜಾತಿಯವಂಗೆ ಕಟ್ಟಿಟ್ಟಿದೆ; ಯಾವ ದೇವನೊಲಿದರೂ ಅಷ್ಟೇ. "ಊರಿಂಗೆ ದಾರಿಯನು ಯಾರು ತೋರಿದರೇನು ? "

ಭಕ್ತಿಯ ರಾಜಮಾರ್ಗ.

ತನ್ನ ಬಾಳಿಗೊಂದು ದೀಪವನ್ನು ಗೊತ್ತುಪಡಿಸಿದ ಮೇಲೆ ಅದನ್ನು ತಲಪುವ ದಾರಿಯನ್ನು ನಿಶ್ಚಯಿಸಬೇಕಾದುದು ಮುಂದಿನ ಕೆಲಸ. ಬಸವಣ್ಣನಿಗೆ ತ್ರಿಮಾರ್ಗಗಳಲ್ಲೊಂದಾದ ಭಕ್ತಿಯೇ ರಾಜಮಾರ್ಗವಾಗಿ ತೋರಿತು; ಅದೇ ತನಗೆ ಒಗ್ಗುವಂಥದೆಂದು ಮನವರಿಕೆಯಾಯ್ತು. ಭಕ್ತಿಯಲ್ಲಿ ಅವನು ಭಾಂಡಾರಿ. ಜ್ಞಾನಕರ್ಮಗಳು ಆ ಭಕ್ತಿಗೆ ಹಿನ್ನೆಲೆಯಾಗಿ ಅದನ್ನು ಪುಟಗೊಡುವವು; ಕಪ್ಪಡಿಯಲ್ಲಿ ಗಳಿಸಿದ ಶಾಸ್ತ್ರಾಭ್ಯಾಸವೂ, ಕಲ್ಯಾಣದಲ್ಲಿ ಬಳಸಿದ ಮಂತ್ರಿಪದ ಕಾಯಕವೂ ಆತನ ಜ್ಞಾನ-ಕರ್ಮಗಳು. ತನುವಿನ ಹೇಳಿಕೆಯಲ್ಲದ್ದ ಮನವೆಂಬ ಸರ್ಪದಂಶವಾಗದಿರಬೇಕಾದರೆ,--"ನಿಚ್ಚಕ್ಕೆ ನಿಮ್ಮ ಪೂಜಿಸಬಲ್ಲಡೆ ಅದೇ ಗಾರುಡ" ಎಂದು ಭಕ್ತಿಯನ್ನು ಆದರಿಸಿದನು. "ನರವಿಂಧ್ಯದೊಳಗೆನ್ನ ಹುಲುಗಿಳಿಯ ಮಾಡಿ ಸಲಹುತ್ತ ಶಿವಶಿವ ಎಂದೋದಿಸಿ"ದರೆ ಸಾಕೆನ್ನುವ ಆರಂಭದ ಪಾಠವು ಮುಂದುವರಿದು, "ಅಷ್ಟವಿರ್ಧಾರ್ಚನೆ ಷೋಡಶೋಪಚಾರ" ಮಾಡುವುದಕ್ಕೂ, ಶಿವತತ್ವ ಪಾಡಿ ಶಿವನ ಮುಂದೆ ನಲಿದಾಡುವುದಕ್ಕೂ ಬಂದಿತು. "ಭಕ್ತಿಯೆಂಬ ನಿಧಾನವ ಸಾಧಿಸಲು ಶಿವಪ್ರೇಮವೆಂಬ ಅಂಜನ"ದ ಅವಶ್ಯಕತೆ ಕಂಡು ಬಂದಿತು. ಆ ಅಂಜನವನ್ನು ಹೇಗೆ ದೊರಕಿಸಬೇಕು? "ಸುರರ ಬೇಡಿದರಿಲ್ಲ, ನರರ ಬೇಡಿದರಿಲ್ಲ; ಕೂಡಲ ಸಂಗಮದೇವನಲ್ಲದೆ ಆರ ಬೇಡಿದರಿಲ್ಲ." ಆದ್ದರಿಂದ " ಚಂದ್ರಮನ ಬೆಳಗಿನ ಚಿಂತೆ ಚಕೋರನಿಗೆ, ಭಾನುವಿನ ಉದಯದ ಚಿಂತೆ ಅಂಬುಜಕ್ಕೆ, ಪರಿಮಳದ ಬಂಡುಂಬ ಚಿಂತೆ ಭ್ರಮರಕ್ಕೆ ಇರುವ ಹಾಗೆ, ಕೂಡಲ ಸಂಗಮದೇವನನ್ನು ನೆನೆಯುವುದೇ ಒಂದು ಚಿಂತೆಯಾಗಿ ಬಿಟ್ಟಿತು ಬಸವಣ್ಣನಿಗೆ. ಆ ಚಿಂತೆ ಮುಪ್ಪು ತರುವ ಚಿಂತೆಯಲ್ಲ;

ಅದು ಚಿರಂತನ ಚಿಂತೆ. ಆ ಚಿಂತೆಯ ವಿಷವನ್ನು ನುಂಗಿದ ನಂಜುಂಡನು ಅಡಿದರೆ ಕಾಲುದಣಿಯುವು; ನೋಡಿದರೆ ಕಣ್ಣು ದಣಿಯುವು; ಹಾಡಿದರೆ ನಾಲಗೆ ದಣಿಯದು. ಆ ಚಿಂತೆ ಅಜರಾಮರವಾಗಿಸುವ ಮಹಾ ನೆನಹು. ಆ ನೆನಹಿನ ಅನುಭವವನ್ನು ಬಸವಣ್ಣನು ಹಾಡಿಕೊಂಡಿದ್ದು ಹೇಗೆಂದರೆ—

"ಎನಗೆ ನಿಮ್ಮ ನೆನಹಾದಾಗಲೇ ಉದಯ, ಎನಗೆ ನಿಮ್ಮ ಮರಹಾದಾಗಲೆ ಅಸ್ತಮಾನ. ಎನಗೆ ನಿಮ್ಮ ನೆನಹನೇ ಜೀವ. ಎನಗೆ ನಿಮ್ಮ ನೆನಹವೇ ಪ್ರಾಣ."

ಇಷ್ಟೇ ಸಾಲದೆ, "ಎನ್ನ ಹೃದಯದಲ್ಲಿ ನಿಮ್ಮ ಚರಣದುಂಡಿಗೆಯನೊತ್ತಯ್ಯ." ಎಂದು ಹಾರಯಿಸಿದ್ದಾನೆ. ಎದೆ ಬಿರಿವಂತೆ, ಮನ ದಣಿವಂತೆ, ನಾಲಗೆ ನಲಿನಲಿದಾಡುವಂತೆ ನಾಮಾಮೃತವನ್ನು ತಂದರಿಸಿದರೆ, ಬಿರಿಮುಗುಳಂತೆ ಹೃದಯವು ಶ್ರೀಚರಣದ ಮೇಲೆ ಬಿದ್ದು ಉರುಳಲಾರವೇ?

"ಅಂಗಯ್ಯೊಳಗಣ ಲಿಂಗವ ನೋಡುತ್ತ, ಕಂಗಳು ಕಡೆಗೋಡಿ ವರಿಯುತ್ತ ಸುರಿವುತ್ತ ಎಂದಿಪ್ಪೆನೋ? ನೋಟವೇ ಪ್ರಾಣವಾಗಿ ಎಂದಿಪ್ಪೆನೋ? ಕೂಟವೇ ಪ್ರಾಣವಾಗಿ ಎಂದಿಪ್ಪೆನೋ?"

ಎಂದು ತವಕಿಸುತ್ತ—

"ಮನಮನ ಬೆರೆಸಿದಲ್ಲಿ ತನು ಕರಗದಿದ್ದರೆ, ಸೋಂಕಿನಲ್ಲಿ ಪುಳಕಂಗಳು ಹೊರಹೊಮ್ಮದಿದ್ದರೆ, ಕಂಡಾಗಳಶ್ರುಜಲಂಗಳು ಸುರಿಯದಿದ್ದರೆ, ನುಡಿವಲ್ಲಿ ಗದ್ಗದಂಗಳು ಪೊಣ್ಮದಿದ್ದರೆ ಅದು ಭಕ್ತಿಯೇ? ಭಕ್ತಿಗದು ಚಿಹ್ನ. ಎನ್ನಲ್ಲಿ ಇಲ್ಲವಾಗಿ ಅನು ಡಾಂಭಿಕ ಕಾಣಿರೇ"

ಎಂದು ಸಾಶಂಕನಾಗಿ ಸಾಧನೆಯನ್ನು ಮುಂದುವರಿಸಿ, ಪ್ರಾರ್ಥಿಸಿ, ಯಾಚಿಸಿ—

"ಅಡಿಗಡಿಗೆ ಲಿಂಗವನಡರಿಯಡರಿ ನೋಡಿ ನೋಡಿ ಕಂಗಳು ಕಡೆಗೋಡಿವರೆದುವಯ್ಯ. ಎನ್ನಶ್ರುಜಲಂಗಳು ಆಲಿಕಲ್ಲ ರೂಹಿನಂತೆ, ಅರಗಿನ ಪುತ್ಥಳಿಯಂತೆ, ತನು ಪುಳುಕಿತವಾದ ಬೆಮರ ಬಿಂದುಗಳೆಲ್ಲ. ಕೂಡಲಸಂಗನ ದರ್ಶನಸ್ಪರ್ಶನದಿಂದ ಮನ ಒಲಿದು ನೆರೆವ ಭರವನೇನ ಹೇಳುವೆನಯ್ಯ?

"ವಚನದಲ್ಲಿ ನಾಮಾಮೃತ ತುಂಬಿ, ನಯನದಲ್ಲಿ ನಿಮ್ಮ ಮೂರುತಿ ತುಂಬಿ, ಮನದಲ್ಲಿ ನಿಮ್ಮ ನೆನಹು ತುಂಬಿ, ಕಿವಿಯಲ್ಲಿ

ನಿಮ್ಮ ಕೀರ್ತಿ ತುಂಬಿ ಕೂಡಲಸಂಗಮದೇವ, ನಿಮ್ಮ ಚರಣಕಮಲ ದೊಳಾನು ತುಂಬಿ."

ಕೊನೆಗೆ ಭಕ್ತಿಯಿಂದ ತುಂಬಿದ ಬಸವಣ್ಣನು ತಾನು ಸಂಗನ ಚರಣಾರವಿಂದದ ತುಂಬಿಯಾದುದು ನಿಶ್ಚಯವೆಂದು ವಿಶ್ವಾಸದಿಂದ ತುಂಬಿ ಹೋದನು.

ನಿಲ್ಲು ಮೆಟ್ಟಲುಗಳು.

ಬಸವಣ್ಣನ ಕಾಲದ ಶರಣರು ಯಾವ ಮಾರ್ಗದಿಂದ ಹೊರಟರೂ ಅವರಿಗೆ ಷಟ್‌ಸ್ಥಲಗಳೇ ನಿಲ್ಲು ಮೆಟ್ಟಲುಗಳೆಂದು ಹೇಳುತ್ತಾರೆ. ಆದರೆ ಅವಾವವೂ ನಮಗೆ ಸ್ಪಷ್ಟ ತಿಳಿಯದು. ಭಕ್ತನ ಅಥವಾ ಸಾಧಕನ ಬಾಹ್ಯಾಂತರ-ಲಕ್ಷಣಗಳ ಮೇಲಿಂದ ಇದು ಇಂಥ ಸ್ಥಲವೇ ಎಂದು ನಿಶ್ಚಯಿಸುತ್ತಾರೆ. ಆ ಮಾತನ್ನು ಬಸವಣ್ಣನೂ ಒಂದು ಕಡೆ ವಿವರಿಸಿದ್ದಾನೆ.—

"ಭಕ್ತನೆಂತೆಂಬೆನಯ್ಯ ಭವಿಸಂಗ ಬಿಡದನ್ನಕ್ಕ? ಮಹೇಶ್ವರನೆಂತೆಂಬೆನಯ್ಯ ಪರಸ್ತ್ರೀ ಪರಧನದಾಸೆ ಬಿಡದನ್ನಕ್ಕ? ಪ್ರಸಾದಿಯೆಂತೆಂಬೆನಯ್ಯ ಆದಿವ್ಯಾಧಿ ನಷ್ಟವಾಗದನ್ನಕ್ಕ? ಪ್ರಾಣಲಿಂಗಿ ಎಂತೆಂಬೆನಯ್ಯ ಪ್ರಾಣ ಸ್ಥಿರವಾಗದನ್ನಕ್ಕ? ಶರಣನೆಂತೆಂಬೆನಯ್ಯ ಪಂಚೇಂದ್ರಿಯ ನಷ್ಟವಾಗದನ್ನಕ್ಕ? ಐಕ್ಯನೆಂತೆಂಬೆನಯ್ಯ ಜನನಮರಣವಿರಹಿತವಾಗದನ್ನಕ್ಕ?"

ಬಸವಣ್ಣನು ಭಕ್ತ; ಅವನದು ಭಕ್ತಿಮಾರ್ಗ. ತ್ರಿಮಾರ್ಗಗಳಲ್ಲಿ ಅದು ಉಳಿದವುಗಳಿಗಿಂತ ಸುಲಭವೆಂದು ಹೇಳುತ್ತಾರೆ. ಆದರೆ ಆ ಮಾರ್ಗದಲ್ಲಿದ್ದವರಿಗೆ ಅದು ಸಹ ಅತ್ಯಂತ ಬಿಕ್ಕಟ್ಟಿನದೆಂದು ತೋರುತ್ತಿರುತ್ತದೆ; ಅದು ಬಸವಣ್ಣನಿಗೆ ತಿಳಿದಿತ್ತು. ಅವನು ಹಿಂದಿನ ಭಕ್ತರ ಚರಿತ್ರಗಳನ್ನು ಅವಲೋಕಿಸಿದನು; ಮನನಮಾಡಿದನು. ಅವರು "ಇರಿಸಿಕ್ಕೊಂಡು ಭಕ್ತರಾದರು; ತರಿಸಿಕ್ಕೊಂಡು ಭಕ್ತರಾದರು; ಕೊರಿಸಿಕ್ಕೊಂಡು ಭಕ್ತರಾದರು." ಎಂಬ ಮಾತಿನಲಿ ಸಂದೇಹವೆ ಇರಲಿಲ್ಲ. ಆದರೆ ಭಕ್ತಿಯ ಸಂದುಕಟ್ಟಿನಲ್ಲಿ ಸಿಕ್ಕು ಬಿದ್ದ ಬಸವಣ್ಣನು ಹೀಗೆ ಅಂದುಕೊಳ್ಳುತ್ತಿದ್ದನು.

"ಭಕ್ತಿಯೆಂಬುದ ಮಾಡಬಾರದು. ಕರಗಸದಂತೆ ಹೋಗುತ್ತ ಕೊಯ್ವುದು. ಬರುತ್ತ ಕೊಯ್ವುದು. ಘಟಸರ್ಪನಲ್ಲಿ ಕೈದುಡುಕಿದರೆ ಹಿಡಿವುದು ಮಾಬುದೇ?"

ದೇವದೇವನು ಜ"ತ್ತಿಗೆ ಕರುಣಾಪರನಾಗಿದ್ದರೂ ಭಕ್ತನ ಪಾಲಿಗೆ ಕಠೋರ ಹೃದಯನೇ ಸರಿ; ಅತನು ಭಕ್ತನಿಗೆ ತರಕಟ ಕಾಡುವವನು; ಅಳಿಸುವ ನಗಿಸುವವನು; ಅದ್ದರಿಂದ ದೇವನು ಒಳ್ಳಿದನೇ? ಆದರೆ ಭಕ್ತರಕ್ಷಕ, ಭಕ್ತವತ್ಸಲ ಎಂಬ ಬಿರುದುಗಳು ಜೊಳ್ಳು ನುಡಿಗಳಲ್ಲ. ಸಣ್ಣನಹನ್ನಕ್ಕ ಅರೆದರೂ, ಬಣ್ಣಗಾಬನ್ನಕ್ಕ ಒರೆದರೂ ಕಡೆಗೆ ದೇವನೊಲಿದು ಸಲಹುವನು. ಯಾವಾಗ? ಅರೆದರೆ ಸಣ್ಣನಾಗಬೇಕು; ಒರೆದರೆ ಬಣ್ಣನಾಗಬೇಕು. ಅಲ್ಲಿಯ ವರೆಗೆ ಮಹಾ-ಧೈರ್ಯಬೇಕು; ಅತಿ ತಾಳ್ಮೆಬೇಕು. ಅವು ಬಸವಣ್ಣನಲ್ಲಿ ತುಂಬಾ ಇತ್ತು.

"ಎನಿಸೆನಿಸೆಂದರೂ ನಾ ಧೃತಿಗೆಡೆನಯ್ಯ. ಎಲುದೋರಿ ನರ ಹರಿದರೆ, ಕರುಳು ಕುಪ್ಪಳಿಸಿದರೆ ನಾ ಧೃತಿಗೆಡೆನಯ್ಯ. ಶಿರಹರಿದು ಅಟ್ಟಿನೆಲಕ್ಕೆ ಬಿದ್ದರೆ ನಾಲಗೆ ಕೂಡಲಸಂಗ ಶರಣೆನ್ನುತ್ತಿದ್ದಿತಯ್ಯ.

"ಒಣಗಿಸಿ ಗಣಗಣನೆ ಮಾಡಿದರೆಯೂ ಹರಣವುಳ್ಳನ್ನಕ್ಕ ನಿಮ್ಮ ಚರಣವ ನೆನೆವುದ ಮಾಣೆ; ಶರಣೆಂಬುದ ಮಾಣೆ ಮಾಣೆ. ಎನ್ನ ಹೊನ ವೇಲೆ ಕುಚಿಟ್ಟುಂಡಡೆಯೂ ಮಾಣೆ ಮಾಣೆ."

ಹೀಗೆ ಧೈರ್ಯವು ಎದೆಯಲ್ಲಿ, ನಿಷ್ಠೆ ಮನಸಿನಲ್ಲಿ, ಉಳ್ಳವಗೆ ಕಾಲಕರ್ಮಗಳು ಏನು ಮಾಡಬಲ್ಲವು? ಯಾವತಪ್ಪಿಲವೂ ಶುಭವು ಹೂರ್ತವೇ; ಸರ್ವಕರ್ಮಗಳೂ ಪುಣ್ಯದಾಯಿಗಳೇ. "ಎಮ್ಮವರು ಬೆಸಗೊಂಡರೆ ಶುಭಲಗ್ನವೆನ್ನಿರಯ್ಯ. ರಾಶಿಕೂಟ ಋಣ ಸಂಬಂಧವುಂಟೆಂದು ಹೇಳಿರಯ್ಯ. ಚಂದ್ರಬಲ ತಾರಾಬಲವುಂಟೆಂದು ಹೇಳಿರಯ್ಯ. ನಾಳಿನ ದಿನಕಿಂದಿನ ದಿನ ಲೇಸೆಂದು ಹೇಳಿರಯ್ಯ." ಎನ್ನುವ ಭಕ್ತನಿಗೆ ಸಕಲಗ್ರಹಬಲವೆಲ್ಲವೂ ಸಂಗನೇ ಆಗಿ ಬಿಡುವನು. "ಒಡಲ ಕಳವಳಕ್ಕಾಗಲಿ, ಬಾಯಸವಿಗಾಗಲಿ ಉಣ್ಣಲಾರೆ"ನೆಂದು ಬಸವಣ್ಣನು ಆಣೆಯಿಟ್ಟುಕೊಂಡಿದ್ದನು; ಎಲ್ಲರಿಗೂ ಸಹಜಕರ್ಮವಾದ ಊಟವನ್ನು ಬಸವಣ್ಣನು, ಕರಣವೃತ್ತಿಗಳಡಗುವ ಮಹಾ-ಸಾಧನೆಯನ್ನಾಗಿ ಮಾಡಿಕೊಂಡಿದ್ದನು. "ಮೌನವಲುಂಬುವುದು ಆಚಾರವಲ್ಲ; ಲಿಂಗಾರ್ಪಿತ ಮಾಡಿದ ಬಳಿಕ ತುತ್ತುತುತ್ತಿಗೊನ್ಮೆ ಶಿವಶರಣೆನುತಿರಬೇಕು. ಕೂಡಲ ಸಂಗನ ನೆನೆವುತ್ತ ಉಂಡರೆ ಕರಣವೃತ್ತಿಗಳಡಗುವವು." "ಅಟ್ಟಡಗೆಯ ವಿಷವನ್ನು ಕೊಟ್ಟಲ್ಲಪೆ ಉಣ್ಣೆನೆಂ"ಬ ಭಾಷೆಯ ಬಸವಣ್ಣನು, ಅದನ್ನು ಕೆಂಧಾವಿಯ ಭೋಗಯ್ಯನಿಂದ ಕಲಿತನು.

ಬಸವಣ್ಣನು ಲಿಂಗವಿಕಾರದಿಂದ ಅಂಗವಿಕಾರವನ್ನೂ ಜಂಗಮ ವಿಕಾರದಿಂದ ಧನವಿಕಾರವನ್ನೂ, ಪ್ರಸಾದವಿಕಾರದಿಂದ ಮನವಿಕಾರವನ್ನೂ ಕಳಕೊಂಡು ಅಚ್ಚಲಿಂಗೈಕ್ಯನಾದನು.

ಕಂಡುದೇನು?—ಹೇಗೆ?

ಎಲ್ಲಕ್ಕೂ ಮೊದಲು, ಬಸವಣ್ಣನಿಗೆ ತನ್ನ ಹಿಂದಿನ ಏಳು ಜನ್ಮಗಳ ಅರಿವು ಉಂಟಾಗಿತ್ತೆಂದು ತೋರುತ್ತದೆ. ಪ್ರಥಮಭವಾಂತರದಲ್ಲಿ ಶಿಲಾದನೆಂಬ ಗಣೇಶ್ವರನಾಗಿಯೂ, ಎರಡನೆಯ ಭವಾಂತರದಲ್ಲಿ ನೀಲಲೋಹಿತಗಣೇಶ್ವರನಾಗಿಯೂ ಹುಟ್ಟಿದನಂತೆ. ನೀಲಲೋಹಿತ, ಮನೋಹರ, ಕಾಲಲೋಚನ, ವೃಷಭ, ಬಸವ ಈ ಹೆಸರುಗಳು ಮುಂದಿನ ಐದು ಜನ್ಮದವಂತೆ. ಆ ಏಳು ಜನ್ಮಗಳಲ್ಲಿಯೂ ದೇವದೇವನ ಯಾವ ಯಾವ ಸೇವೆ ಕೈಕೊಂಡಿದ್ದನೆಂಬುದನ್ನು ತಿಳಿಸಿದ್ದಾನೆ. ಭೃತ್ಯ, ಕಾರುಣ್ಯ, ಲೀಲಾವಿನೋದಿ, ಪುನಃಪ್ರೇರಕ, ಸರ್ವಕಾಲ ಸಂಹಾರಕ, ದೇವವಾಹನ, ಒಕ್ಕುದವಿಕ್ಕುದಕ್ಕೆ ಯೋಗ್ಯ ಆಗುವಂತೆ ಕರುಣಿಸಿದರೆಂದು ವಿನ್ನವಿಸಿಕೊಂಡಿದ್ದಾನೆ.

ಲಿಂಗಧ್ಯಾನನಿರತನಾದ ಬಸವಣ್ಣನು ಸಂಗಮದೇವನ ಸ್ಪರ್ಶಸುಖವನ್ನು ಉಂಡಿದ್ದಾನೆ; ವೈತುಂಬ ಕಣ್ಣಗಳರಳಲು ಅವೆಲ್ಲವುಗಳಿಂದಲೂ ಅತನ ಅತುಲ ಸೌಂದರ್ಯಸುಧೆಯನ್ನು ಈಂಟಿದ್ದಾನೆ. "ಭಾವದ ಕೊನೆಯ ಮೊನೆಯ ಮೇಲೆ ಮನೆಯ ಮಾಡಿಕೊಂಡಿಪ್ಪ" ಸಂಗನನ್ನು ಕಂಡಿದ್ದಾನೆ. ಅಂತೆಲೇ—

"ನಿಮ್ಮ ನೋಟವನಂತ ಸುಖ. ನಿಮ್ಮ ಕೂಟ ಪರಮಸುಖವಯ್ಯ. ಅಷ್ಟಕೋಟಿರೋಮಂಗಳೆಲ್ಲ ಕಂಗಳಾಗಿ ನೋಡುತಿರ್ದನ. ಕೂಡಲಸಂಗಮದೇವಯ್ಯ, ನಿಮ್ಮ ನೋಡಿ ನೋಡಿ ಮನದಲ್ಲಿ ರತಿ ಹುಟ್ಟಿ, ನಿಮಿರ್ದುವೆನ್ನ ಕಳೆಗಳು" ಎಂದು ಘೋಷಿಸಿದ್ದಾನೆ.

ಆದರೆ, ಅತೀವ ಸ್ಪಷ್ಟವಾದ ನಿರ್ವಚನವನ್ನು ಕೆಳಗಿನ ಮಾತಿನಲ್ಲಿ ಹೇಳಿದ್ದಾನೆ. "ಪಶ್ಚಿಮ ಪದ್ಮಾಸನದಲ್ಲಿ ಕುಳ್ಳಿರ್ದು, ನಿಟ್ಟಿಲು ಮುರಿದು ತುಟಿ ಮಿಡುಕದೆ ಅಪ್ಪಯಾಡಿತ್ತಲ್ಲಾ! ಬಿಟ್ಟ ಕಣ್ಣ ಬಿಗಿದ ಹುಬ್ಬ ಬ್ರಹ್ಮರಂಧ್ರದಲ್ಲಿ ಕಟ್ಟಿ ಗುಡಿಯ. ಕೂಡಲಸಂಗಮದೇವ ಹಿಡಿವಡೆದ."

ಮನಃಪ್ರವೇಶಿಯಾಗಿ ಭಕ್ತನು ದೇವದೇವನನ್ನು ಪೂಜಿಸುತ್ತ ತನುಧರ್ಮವನ್ನು ಮರೆಯುವನು; ಹಾಗೂ ದೇವನ ಪ್ರತಿಬಿಂಬದಂತೆ

ರುವ ಶರಣನೇ ಅಂಥ ಐಕ್ಯಾನುಸಂಧಾನವನ್ನು ಪಡೆಯಬಲ್ಲನು. ಆಗ "ಕೂಡಲಸಂಗಮದೇವ, ನೀನೆನಗೆ ಚಿಕ್ಕ ತಮ್ಮ" ಎಂದೂ ಸಂಬೋಧಿಸಬಲ್ಲನು. ಉಂಬುವ ಬಟ್ಟಲೂ ನೋಡುವ ದರ್ಪಣವೂ ಕಂಚಿನವೇ. ಆದರೆ ಶಿಲ್ಪಿಯ ಕೈಗೆ ಒಕ್ಕ ಕಂಚು ದರ್ಪಣವಾಗುತ್ತದೆ; ಬಟ್ಟಲು-ದರ್ಪಣಗಳ ಜಾತಿ ಒಂದೇ ಆದರೂ ಬೆಲೆ ಬೇರೆ. ಕುಂಹಿಂಡು ಕಬ್ಬಿನ ತೋಟ ಹೊಕ್ಕರೆ, ಅವು ತಮ್ಮ ರಸದ ಹೊರಗಣ ಎಲೆಯನ್ನೇ ಮೆಲಿದವು; ನಿಮ್ಮನರಿದ ಮದಕರಿಯು ಮಾತ್ರ ಕಬ್ಬಿನ ತನ್ನಿರಸದ ಸವಿಯನ್ನು ಬಲ್ಲದು. ಐದೆಸೆಯಿಂದ ಸಾಯುವ ವರೆಗೂ ಕಟ್ಟಿಕೊಳ್ಳುವ ಲಿಂಗವಲ್ಲಿ ಬಸವಣ್ಣನು ಏನು ಕಂಡನು? ಕೇಳಿರಿ—

"ಜಗದಗಲ ಮುಗಿಲಗಲ ನಿಮ್ಮಗಲ ಪಾತಾಳದಿಂದತ್ತತ್ತ ನಿಮ್ಮ ಶ್ರೀಚರಣ. ಬ್ರಹ್ಮಾಂಡದಿಂದತ್ತತ್ತ ನಿಮ್ಮ ಶ್ರೀಮಗುಟ. ಅಗಮ್ಯ ಅಪ್ರಮಾಣ ಅಗೋಚರ ಅಪ್ರತಿಮ ಲಿಂಗವೇ ನೀವೆನ್ನ ಕರಸ್ಥಲಕ್ಕೆ ಬಂದು ಚುಳುಕಾದಿರಯ್ಯ ಕೂಡಲ ಸಂಗಮದೇವ." ಅಂಥ ಕೂಡಲ ಸಂಗಮದೇವರನ್ನು ತೋರಿದವ ಚೆನ್ನಬಸವಣ್ಣನೆಂದು ಪ್ರಾಮಾಣಿಕತೆಯಿಂದ ಬಸವಣ್ಣನು ಒಪ್ಪಿಕೊಂಡಿದ್ದಾನೆ

ಅದರ ಸವಿ.

ಸತ್ತವಂಗೇ ಸ್ವರ್ಗ ಕಾಣುವದು. ತಿಂದವನೇ ಕಲ್ಲು ಸಕ್ಕರೆಯ ಸವಿಯನ್ನು ಬಲ್ಲನು. ಲಂಡನದ ಭವ್ಯತೆಯಾಗಲಿ, ಪ್ಯಾರೀಸಿನ ವೈಭವವಾಗಲಿ ನಮಗೆ ಕಾಣಿಸುವುದು ಭೂಗೋಲ ಪುಸ್ತಕಗಳಲ್ಲಿ. ಪುಸ್ತಕವನ್ನೆಷ್ಟು ಓದಿದರೂ ಪ್ರತ್ಯಕ್ಷ ನೋಡಿದ್ದರ ಆನಂದವಾಗಲರಿಯದು. ವಾಚನದಿಂದ ಸಂದರ್ಶಿಸಿದರಂತೂ ಅದು ಸಾರ್ಥಕ. ಓದಿಯಾದ ಮೇಲೆ ಸಂದರ್ಶಿಸಿದರಂತೂ ಅದು ಪೂರ್ಣದರ್ಶನ. ಸಮುದ್ರದ ಆಳವನ್ನು ಅಳೆಯ ಹೊರಟ ಉಪ್ಪಿನ ಬೊಂಬೆಗಳು ಕರಗಿ ಹೋದವು, ಹೋಗಲಿ. ಜೀವಿಸಿದ್ದಾಗಲೇ ಭವ್ಯಜನ್ಮವನ್ನು ಗಳಿಸಿದ ಮಹಾನುಭಾವರ ಸಂದೇಶವೇ ನಮಗೀಗ ಬೇಕಾದುದು. ಸಂಗನ ಐಕ್ಯಸುಖವು "ಕನ್ನೆಯ ಸ್ನೇಹದಂತೆ, ನನೆಯೊಳಗಣ ಪರಿಮಳದಂತೆ; ತನ್ನೊಳಗೇ ನನ್ನನ್ನು ಬೈತಿಟ್ಟ ನನ್ನ ನಲ್ಲ ಎಲ್ಲರ ಪರಿಯಂತಲ್ಲ" ವೆಂದು ಸಾಧ್ವೀಸತಿಯಂತೆ ಬಸವಣ್ಣನು ಹೊಟ್ಟಿಬಿಚ್ಚಿ ಹೇಳಿದ್ದಾನೆ. ಮತ್ತೆ ಏನೆಂದು ಕೇಳಿದರೆ—

"ಕಂಗಳು ತುಂಬಿದ ಬಳಿಕ ನೋಡಲಿಲ್ಲ. ಕಿವಿ ತುಂಬಿದ ಬಳಿಕ ಕೇಳಲಿಲ್ಲ. ಕೈಗಳು ತುಂಬಿದ ಬಳಿಕ ಪೂಜಿಸಲಿಲ್ಲ. ಮನ ತುಂಬಿದ ಬಳಿಕ ನೆನೆಯಲಿಲ್ಲ." ಎಂದು ಉತ್ತರವನ್ನಿತ್ತಿದ್ದಾನೆ. ಇನ್ನು ಮುಂದೆ ಆತನ ಪ್ರಾಣಶರೀರಗಳ ರೀತಿಯೇ ಬೇರೆ. "ಕಾಯವು ಮಾತೆಯಾಗಿ, ಜೀವವು ಪಿತನಾಗಿ ಕೂಡಲಸಂಗಮದೇವನಂತಪ್ಪ ಮಗ ಹುಟ್ಟಿದನೆ" ಸ್ವರ್ಗವೇತಕ್ಕೆ? ಮೋಕ್ಷವೇತಕ್ಕೆ? ದೇವನೊಡನೆ ಬೆರೆತ ಜೀವನ ತ್ರಿವಿಧನಾಸ್ತಿಯಾಗಿರುವದರಿಂದ "ತಾನು ಬೇರೆ, ದೇವ ಬೇರೆ" ಎಂಬ ದ್ವಿಭಾವನೆಯು ಉಳಿಯುವದಿಲ್ಲ. ಆ ಅದ್ವೈತಾನಂದದಲ್ಲಿ ಭಕ್ತನು ದೇವನನ್ನು ಸ್ತುತಿಸಿದರೇನು? ತನ್ನನ್ನು ತಾನು ಹೊಗಳಿಕೊಂಡರೇನು? ಬಸವಣ್ಣನೂ ಹಾಗೇ ಮಾಡಿದ್ದಾನೆ. "ತ್ರಿವಿಧನಾಸ್ತಿಯಾದ ಬಳಿಕ ಎನ್ನ ನಾ ಹಾಡಿಕೊಂಡೆ ಕಾಣಾ." ಹೀಗೆ ನದಿಯೊಳಗೆ ನದಿ ಬೆರೆದಂತಾಗದನ್ನಕ್ಕ ಲಿಂಗವ ಪೂಜಿಸಿ ಫಲವೇನಯ್ಯ?" ಎಂದು ಪ್ರಶ್ನಿಸುವ ಬಸವಣ್ಣನಿಗೆ ಇಂದು ನಾವೇನು ಹೇಳಬೇಕು?

"ಗುರುವಿಗಿಂತ ಶಿಷ್ಯ ಮೇಲುಗೈ; ತಂದೆಗಿಂತ ಮಗ ಮೇಲುಗೈ." ಎನ್ನುವ ತೀವ್ರ ಪಕ್ಷದವರ ಮಾತನ್ನು ಅನಕ ಬದಿಗಿರಿಸಿ, "ಗುರುವಿನಂತೆ ಶಿಷ್ಯ, ತಂದೆಯಂತೆ ಮಗ" ಎನ್ನುವ ಮಂದಪಕ್ಷದವರ ಮಾತನ್ನಾದರೂ ನಾವು ಮನನ ಮಾಡಲಿಕ್ಕೆ ಬೇಕು. ಬಸವಣ್ಣನು ನಮ್ಮವನು, ನಮ್ಮ ನಾಡಿನವನು ಎಂಬ ಅಭಿಮಾನದಲ್ಲಿ ಅದೆಷ್ಟು ಶಕ್ತಿಯಿದ್ದರೂ, ಅಷ್ಟರಿಂದಲೇ ನಮ್ಮ ಕರ್ತವ್ಯವು ಕೊನೆಗಾಣುವದಿಲ್ಲ. ಅವನ ಜೀವನ, ಹೋರಾಟ, ಗೆಲವು, ಸಾರ್ಥಕತೆ ಇವನ್ನೆಲ್ಲ ಮನಗಂಡು "ಎಂದೋ ಎಂದು? ಈ ಸಂಸಾರ ದಂದುಗ ಹಿಂಗುವದು?" ಎಂಬ ರೇಜಕವನ್ನು ತೆಗೆದುಕೊಂಡ ದಿನವೇ ಆಯುಷ್ಯದಲ್ಲಿ ಸಾರ್ಥಕ ದಿನ. ಅಂದೇ ಹಳೆಯದರ ಮರಣವೂ ಹೊಸದರ ಜನ್ಮವೂ ಆದಂತೆ. ಅಂದಿಗೆ ಮರಿತ ಮಾನವನು ಅಳಿದು, ಅರಿತ ಶರಣನು ಉಳಿಯುವ ದಾರಿ ಆರಂಭವಾಯಿತೆನ್ನಬೇಕು. ಅದೆಷ್ಟೋ ಕನ್ನಡಿಗರ ಹೃದಯಮಂದಿರದಲ್ಲಿ ನಂದಿಹೋದ ದೀಪವನ್ನು ಮರಳಿ ಹೊತ್ತಿಸಿ, ನಂದಾದೀಪ ಮಾಡುವ ಸಾಮರ್ಥ್ಯವುಳ್ಳ "ಕನ್ನಡ ಭಕ್ತಿದೀಪಕ"ವು ಇಂದಿಗೂ ಬೆಳಗಿ ಕನ್ನತ್ತಲೆಯ ರಾತ್ರಿಯಲ್ಲಿಯೂ ಮಾರ್ಗದರ್ಶಿಯಾಗುತ್ತಲಿದೆ.

ಗುರು ಲಿಂಗ ಜಂಗಮ.

(ಲೇಖಕರು— ಬಸವಪ್ಪ ಚೆನ್ನಪ್ಪ ಪಟ್ಟೇದ.)

(೪)

ಈ ವಿಷಯದ ಮೇಲೆ ಇದು ನಾಲ್ಕನೆಯ ಲೇಖ. ಮೊದಲನೆಯದರಲ್ಲಿ ಸ್ವಗತ ಗುರು ಲಿಂಗ ಜಂಗಮಗಳ ಸ್ವರೂಪವನ್ನೂ ಅವುಗಳ ಆರಾಧನೆಯನ್ನೂ, ಎರಡನೆಯದರಲ್ಲಿ ಅವುಗಳ ಪರಸ್ಪರ ಸಂಬಂಧವನ್ನೂ, ಮೂರನೆಯದರಲ್ಲಿ ಸಮಾಜಾಂತರ್ಗತರೂ ಅಧಿಕಾರಾರೂಢರೂ ಎನಿಸಿದ ಕೃತ್ರಿಮ ಗುರು ಲಿಂಗ ಜಂಗಮರ ವಿವರಣೆಯನ್ನೂ ಕುರಿತು ಬರೆಯಲಾಗಿದೆ. ಈ ಸಾರೆ ಅವುಗಳ ಸೃಷ್ಟಿಗತ ಸ್ವರೂಪವನ್ನು ಅದು ಹೇಗೆ ಸೇವಿಸಬೇಕೆಂಬುದನ್ನು ಹೇಳಬೇಕಾಗಿದೆ. ಜಗತ್ತಿನೊಳಗಿನ ಪ್ರತಿಯೊಂದು ಪದಾರ್ಥದಲ್ಲಿ ಗುರು ಲಿಂಗ ಜಂಗಮಗಳು ತಾತ್ವಿಕ ರೀತಿಯಿಂದ ತೋರುತ್ತಿದ್ದರೂ, ನಿರಿಂದ್ರಿಯ ವರ್ಗದ ಬಗ್ಗೆಯಂತೂ ಆಲೋಚಿಸುವ ಕಾರಣವಿಲ್ಲ. ಸೇಂದ್ರಿಯ ವರ್ಗದಲ್ಲಿ ಪ್ರಾಣಿ ವನಸ್ಪತಿಗಳು ಬರುತ್ತವೆ. ಇವುಗಳಲ್ಲಿ ಪ್ರಾಣಿಗಳು ಚರನಾಗಿಯೂ ವನಸ್ಪತಿಗಳು ಅಚರವಾಗಿಯೂ ಇರುವವು. ಆದುದರಿಂದ ನಿಶ್ಚಲವಾದ ಈ ವನಸ್ಪತಿಗಳಾದರೂ ಅಷ್ಟೇನು ಗಣ್ಯವಾದವುಗಳಲ್ಲ. ಆದರೂ "ಲಿಂಗರೂಪಂ ಜಗತ್ಸರ್ವಂ" ಎಂದು ಮನಗಂಡ ಅನೇಕ ಸತ್ಪುರುಷರು ಅವನ್ನು ಸಹ ನೋಯಿಸಲಿಕ್ಕೆ ಹಿಂದು ಮುಂದಾಗುವರು. ಗಿಡ ಬಳ್ಳಿಗಳಲ್ಲಿದ್ದ ಹಣ್ಣು ಹೂ ಎಲೆಗಳನ್ನು ಸಹ ಹರಿಯಲು ಅವರು ಉದ್ಯುಕ್ತರಾಗುವದಿಲ್ಲ. ತಾವಾಗಿಯೇ ಉದುರಿ ಬಿದ್ದಂತಹವನ್ನೇ ಇವರು ಉಪಯೋಗಿಸುತ್ತಿರುವದನ್ನು ಕಂಡೂ ಕೇಳಿಯೂ ಬಲ್ಲವರನೇಕರುಂಟು. ಆದರೆ ಪ್ರಾಣಿಗಳಿಗೆ ಆಹಾರದ ಪೂರೈಕೆಯು ಮುಖ್ಯವಾಗಿ ವನಸ್ಪತಿ ಕೋಟಿಯಿಂದಲೇ ಆಗುತ್ತಿರುವದರಿಂದ, ಬಹುಜನ ಸಮಾಜವು ಅವನ್ನಾದರೂ ಬಹುಶಃ ನಿರಿಂದ್ರಿಯ ಸೃಷ್ಟಿಯಂತೆಯೇ ಕಾಣುವದು. ಇನ್ನುಳಿದುದು ಪ್ರಾಣಿಕೋಟಿಯು ಮಾತ್ರ. ಸಕಲ ಪ್ರಾಣಿಗಳನ್ನು ಆತ್ಮವತ್ ಭಾವಿಸಿ ವರ್ತಿಸಬೇಕೆಂದು ಧರ್ಮಶಾಸ್ತ್ರವು ಹೇಳುತ್ತದೆ. ಆದರೆ ಸ್ವಾರ್ಥಮೂಲಕ ಜಹು ಜನರು ಇದನ್ನು ಮನ್ನಿಸದಿರುವದು ದುಃಖದ ಸಂಗತಿಯು. ಯಾವ ಪ್ರಾಣಿಯನ್ನೂ ಪೀಡಿಸಬಾರದು. ಘಾತಿಸಬಾರದು.

ದಯದಿಂದಲೇ ಅವನ್ನು ನಡಿಸಿಕೊಳ್ಳಬೇಕು. ವನಕರು ಮೊದಲಾದವನ್ನ ಸರಿಯಾಗಿ ಕಾಪಾಡಿ ಉಪಚರಿಸಿ, ಅವುಗಳ ಪ್ರಯೋಜನವನ್ನು ಹೊಂದಬೇಕು. ಪೀಡಿಸುವ ಪ್ರಾಣಿಗಳನ್ನು (ಹುಲಿ, ಹಾವು, ತಿಗುಣಿ ಚಿಕ್ಕಾಡಾದಿಗಳನ್ನು), ಅವುಗಳ ಪೀಡೆಯನ್ನು ಪರಿಹರಿಸಿಕೊಳ್ಳುವ ಸಲುವಾಗಿ, ಹಿಂಸಿಸಲು ಅಡ್ಡಿಯಿಲ್ಲೆಂದು ಶಾಸ್ತ್ರಾಜ್ಞೆಯಿದ್ದರೂ ಶಕ್ಯವಿದ್ದಮಟ್ಟಿಗೆ ಅದನ್ನು ತಪ್ಪಿಸುವದೇ ಕರ್ತವ್ಯ. ಇನ್ನು ಪ್ರಾಣಿಗಳಲ್ಲೆಲ್ಲ ಶ್ರೇಷ್ಠನೆನಿಸುವ ಮನುಷ್ಯನ ವಿಷಯವಾಗಿ ಮಾತ್ರ ವಿವೇಚಿಸುವದು ಉಳಿಯಿತಷ್ಟೇ. ಇಂದಿನ ಬರವಣಿಗೆಯ ಮುಖ್ಯ ಉದ್ದೇಶವು ಅದೇ ಇರುವದು. ಮನುಷ್ಯನು ಜ್ಞಾನವಿಶಿಷ್ಟವಾದ ದೇಹವನ್ನು ಪಡೆದು ಜನ್ಮಿಸಿರುವದರಿಂದ, ಅವನು ಆತ್ಮೋದ್ಧಾರ ಮಾಡಿಕೊಳ್ಳುವದೇ ಅತ್ಯವಶ್ಯ ಕರ್ತವ್ಯ. ಅದೇ ಅವನ ಗುರಿಯಾಗಿರುವದು ವಿಹಿತ! ಆದರೂ ಮಾಯಾವಿಷ್ಟನಾಗಿ ವಿಷಯಗಳತ್ತ ಹೊರಳಿ ಸಂಸಾರ ಮಗ್ನನಾಗಿ, ದುಃಖ ಪರಂಪರೆಗೆ ಈಡಾಗುತ್ತಾನೆ. ಅದರಲ್ಲಿ ತಲೆಗೆ ಬಡೆದು ಅನುಭವಪಡೆದು ಅನೇಕರು ಅರಿವುಳ್ಳವರಾಗಿ ಎಚ್ಚರಿಯುವರು. ಇಂತಹರು ಜೀವನದಲ್ಲಿ ಸಂಸಾರದ ಉಪಭೋಗವನ್ನು ಹೊಂದುತ್ತಿದ್ದರೂ, ತಮ್ಮ ಉದ್ಧಾರವು ಅಂದರೆ ಲಿಂಗಾಂಗ ಸಾಮರಸ್ಯವು ತಪ್ಪದೆ ಒದಗುವಂತೆ ತನು, ಮನ (ಪ್ರಾಣ-ಜ್ಞಾನ)ಗಳ ವಿನಿಯೋಗವನ್ನು ಇಷ್ಟರೀತಿಯಲ್ಲಿ ಮಾಡುವರು. ಅದೇ ಅವರ ಭಕ್ತಿಯು. ಇಂತಪ್ಪ ಭಕ್ತಿಯಲ್ಲಿ ಚರಿಸುವವರೇ ಭಕ್ತರು. ಸಂಸಾರದ ವಿಷಯಗಳಿಗೆ ಮೋಹಿಸಿ ಅತ್ಯಾಸಕ್ತಿಯನ್ನು ಹೊಂದಿ ಜಿಹ್ವಾ ಗುಹ್ಯಾಲಂಪಟರಾಗಿ ಮೈಮರೆದು ವರ್ತಿಸಿ, ಭವಚಕ್ರದಲ್ಲಿ ಬೇಸರಿಲ್ಲದೆ ತೊಳಲಾಡುವವರೇ ಭವಿಗಳು.

ಭಕ್ತನಿಗೆ ಜನ್ಮಸಿದ್ಧ ಪ್ರಾಪ್ತವಾಗಿರುವ ದೇಹ ಪ್ರಾಣ ಜ್ಞಾನಗಳು, ಮಾಯಾವರಣದ ಮೂಲಕ ಮರವೆಗೊಳಗಾಗಿರುವದರಿಂದ, ಅವುಗಳನ್ನು ಎಚ್ಚರಿಸಿ ಶುದ್ಧಗೊಳಿಸಿ ತನ್ನ ಉದ್ಧಾರಕ್ಕೆ ಅನುಕೂಲಪಡಿಸಿಕೊಳ್ಳುವದು, ಮಹತ್ವದ ಕಾರ್ಯವಾಗಿದೆ. ಭೂಮಿಯಲ್ಲಿ ಸುವರ್ಣ ನಿದ್ದರೂ ಅದು ಕಲ್ಲು ಮಣ್ಣು ಮೊದಲಾದವುಗಳ ಮಿಶ್ರಣದಿಂದ ನಿರುಪಯುಕ್ತವಾಗಿರುವದಷ್ಟೇ, ಅದನ್ನು ಹೇಗೆ ಶೋಧಿಸಿ ಸಂಸ್ಕಾರಗೊಳಿಸಿ ಸಿದ್ಧಪಡಿಸಲಿಕ್ಕೆ ಸಂಶೋಧಕರು ಬೇಕೋ, ಹಾಗೆ ನಮಗಾದರೂ ದೇಹ ಪ್ರಾಣ ಜ್ಞಾನಗಳನ್ನು ಸಂಸ್ಕರಿಸಿ ನಿರ್ಮಲಗೊಳಿಸಿ ಗುರು ಲಿಂಗ

ಜಂಗವು ಸ್ವರೂಪವನೆಯ್ದಿಸಲಿಕ್ಕೆ ಸಮಾಜದಲ್ಲಿ ಅಧಿಕೃತರಾದ ಹೊಣೆಗಾರಿಕೆಯ ಗುರು ಜಂಗವರು ಬೇಕೆಂದು ತಿಳಿದು ಬುದ್ಧ್ಯಾ ಅವರು ನಿರ್ವಿತರಾಗಿರುವರು. ಇವರು ಸುಜ್ಞಾನಿಗಳೂ ನಿಃಸ್ವಾರ್ಥರೂ ಕರ್ತವ್ಯದಕ್ಷರೂ ಪರಹಿತಕಾಂಕ್ಷಿಗಳೂ ಇರಬೇಕಾದುದು ಅವಶ್ಯ.[1] ಆದುದರಿಂದಲೇ ಹಿಂದಣ ಲೇಖದಲ್ಲಿ ಅವರ ಬಗ್ಗೆ ಹೆಚ್ಚಿಗೆ ಚರ್ಚಿಸುವದು ಅನಿವಾರ್ಯವಾಯಿತು. ಅದಕ್ಕೆ ಸಂಬಂಧಿಸಿದ ಅನೇಕರಿಗೆ ಅದು ಕಟುವಾಗಿ ತೋರಬಹುದು. ಬಟ್ಟೆಗಳನ್ನು ತೊಳೆಯುವ ಮಡಿವಾಳನು, ಬಟ್ಟೆಗಳಿಗೆ ಪೆಟ್ಟುಹಾಕುವಂತೆ ಮೇಲೆ ಮೇಲೆ ನೋಡುವವರಿಗೆ ಕಾಣುತ್ತಿದ್ದರೂ, ಮಡಿವಳನ ಕಟಾಕ್ಷವು ಬಟ್ಟೆಗಳ ಮೇಲಿರದೆ ಅದಕ್ಕೆ ಅಂಟಿಕೊಂಡ ಮಲಿನತೆಯ ಕಡೆಗೇ ಇರುವದು. ಅದು ಹೊರಟುಹೋದರೆ, ಬಟ್ಟೆಗಳು ಹೆಚ್ಚು ಪ್ರಕಾಶಮಾನವಾಗಿ ಮತ್ತಿಷ್ಟು ಆದರಕ್ಕೂ ಪ್ರೇಮಕ್ಕೂ ಒಳಗಾಗುವವು. ಅದೇ ದೃಷ್ಟಿಯಿಂದ ನನ್ನ ಬರೆಹವನ್ನಾದರೂ ಕಾಣುವರೆಂದು ನೆನಿಸುತ್ತೇನೆ. ಅದು "ಅಧರಕ್ಕೆ ಕಹಿ ಎನಿಸಿದರೂ ಉದರಕ್ಕೆ ಸಿಹಿ" ಯಾಗಿರುವದೆಂಬದನ್ನು ಮರೆಯುಲಾಗದು, ಸಮಾಜಾಧಿಕೃತರಾದ ಈ ಗುರುಲಿಂಗಜಂಗವರ ಕಾರ್ಯವು ಯಶಸ್ವಿಯಾಗಬೇಕಾದರೆ, ಅದಕ್ಕೆ ಸಮಾಜದೊಳಗಿನ ಪ್ರತ್ಯೇಕ ವ್ಯಕ್ತಿಯು ಮನಃಪೂರ್ವಕವಾಗಿ ಸಹಾಯವಾಡಬೇಕು. ಅಲ್ಲದೆ ಅವರ ಬಗ್ಗೆ ಕೃತಜ್ಞತೆಯನ್ನು ವಹಿಸಬೇಕು. ಭಕ್ತಿಯುತರಾಗಿ ವರ್ತಿಸಬೇಕು. ಅದರಂತೆಯೇ ಅವರಿಂದ ಸಂಸ್ಕಾರ ಹೊಂದತಕ್ಕ ಶಿಷ್ಯರಾದರೂ ಸತತ ಪ್ರಯತ್ನದಿಂದ ತಾವು ನಿಜವಾದ ಭಕ್ತರಾಗುವಂತೆ ಸಾಹಸಪಡುವದು ಅತ್ಯಂತ ಇಷ್ಟವಾಗಿದೆ.

ಸಮಾಜವು ಸುಸೂತ್ರವಾಗಿ ಸಾಗಬೇಕೆಂದು ನೀತಿಧರ್ಮವು ಅವತರಿಸಿದೆ. ಆದುದರಿಂದ ಸಮಾಜ ಪ್ರಾಣಿಯಾದ ಮಾನವನು ಅದನ್ನು ತಪ್ಪದೆ ಅನುಸರಿಸಿ ನಡೆಯಲಿಕ್ಕೆ ಬದ್ಧನಾಗಿರುವನು. ಅದು ಅವನಿಗೆ ಬಿಡಲಾರದ ಕರ್ಮ. ನೀತಿಯನ್ನು ಪಾಲಿಸಿದರೆ ಸದಾಚಾರವು ನೆಲೆಗೊಳ್ಳುವದು. ನೀಚ ಸ್ವಾರ್ಥಕ್ಕೆ ಅಜ್ಞಾನದಿಂದ ಆಹುತಿಯಾಗಿ ಮನುಷ್ಯನು ನೀತಿಯನ್ನು ಧಿಕ್ಕರಿಸಿ ನಡೆದು, ಅಧೋಗತಿಗೀಡಾಗುತ್ತಾನೆ. ಮನೆಯ ಹಿರಿಯರೂ ಸಮಾಜದ ಮುಖಂಡರೂ ನೀತಿವಂತರಾದರೆ, ಆ ಕುಟುಂಬದ ಹಾಗು ಸಮಾಜದ ಜನರಾದರೂ ಅವರ ಮೇಲ್ಪಂಕ್ತಿಯನ್ನು ಮುಂದಿಟ್ಟುಕೊಂಡು ನಡೆಯುತ್ತಾರೆ. ಮನುಷ್ಯ ಪ್ರಾಣಿಯು ಅನುಕರಣಪ್ರಿಯನು. ಆದುದರಿಂದ ಹೊಣೆಗಾರ ವ್ಯಕ್ತಿಗಳಂತೂ ಬಹು ಎಚ್ಚರದಿಂದ ನೀತಿಯನ್ನು ಬಿಡದೆ ಪಾಲಿಸಲೇಬೇಕು. ವೀರಶೈವರು ಭವಿಗಳಲ್ಲ ಭಕ್ತರು. ದೇಹತ್ರಯದಲ್ಲಿ ಲಿಂಗತ್ರಯವನ್ನು ಧರಿಸಿ, ದಾಸೋಹತ್ರಯದಿಂದ ವರ್ತಿಸಿ ಮಲತ್ರಯವನ್ನು ನಾಶಗೊಳಿಸುವವರು. ಒಂದೇ ಒಂದು ಜನ್ಮದಲ್ಲಿ ಮುಕ್ತಿಯನ್ನು ಪಡೆಯತಕ್ಕವರು. ಅಂದ ಮೇಲೆ ಅವರು ಆದಷ್ಟು ಶುದ್ಧರೀತಿಯಿಂದ ಜಗತ್ತಿನಲ್ಲಿ ನಡೆದುಕೊಳ್ಳತಕ್ಕದ್ದೆಂಬದನ್ನು ಗಮನಿಸಬೇಕು.

ಭಕ್ತನು ವ್ಯಕ್ತಿಗತ ಗುರು (ದೇಹ), ಲಿಂಗ (ಪ್ರಾಣ), ಜಂಗವು (ಸುಜ್ಞಾನ)ಗಳ ಸೇವೆಯನ್ನು ಸರಿಯಾಗಿ ಮಾಡಿಕೊಂಡು ಉನ್ನತಿಯನ್ನು ಸಾಧಿಸುವಂತೆಯೇ, ಸಮಾಜದೊಳಗಿನ ಎಲ್ಲ ಜನರ ಗುರು ಲಿಂಗ ಜಂಗವು ಸೇವೆಗೆ, ತಾನು ಯಾವ ರೀತಿಯಿಂದಲೂ ವಿಘ್ನಕಾರಿಯಾಗದೆ ಒಳಿತಾಗಿ ಸಹಾಯವಾಗುವಂತೆ ವರ್ತಿಸುವದು ಅವನ ಪವಿತ್ರ ಕರ್ತವ್ಯವಾಗಿದೆ, ಗುರುವಿಗೆ ತನುವನ್ನೂ, ಲಿಂಗಕ್ಕೆ ಮನವನ್ನೂ, ಜಂಗವುಕ್ಕೆ ಧನವನ್ನೂ (ವಿಷಯ ರೂಪಿ ಸರ್ವ ಸಂಸಾರವನ್ನೂ) ಒಪ್ಪಿಸಿದಾಗಲೇ ಅವನ ಉದ್ಧಾರಕ್ಕೆ ಇಂಬುದೊರೆಯುವದು. ಶರೀರ ವ್ಯಾಪಾರವಾಗಿ ಸದಾಚಾರ ಸತ್ಕ್ರಿಯೆಗಳನ್ನನುಸರಿಸಿ ನಡೆಯುವದೇ, ಗುರುವಿಗೆ ತನುವನೊಪ್ಪಿಸುವದರ ಅರ್ಥವು. ಪ್ರಾಣದ ಜೀವಭಾವನೆಯು ನಷ್ಟವಾಗಿ ಅದು ಶುದ್ಧಾತ್ಮ ಸ್ವರೂಪವನೆಯ್ದುವಂತೆ, ಮನವು ವಿಷಯಗಳತ್ತ ಹರಿದಾಡುವದನ್ನು ನಿಲ್ಲಿಸಿ, ನಿರ್ಮಲತೆಯನ್ನು ಹೊಂದಿ ಲಿಂಗದಲ್ಲಿ (ಆತ್ಮನಲ್ಲಿ) ಸ್ಥಿರವಾದರೆ, ಮನವನ್ನು ಲಿಂಗಕ್ಕೆ ಅರ್ಪಿಸಿದಂತಾಗುವದು. ಜಂಗವುಕ್ಕೆ ಧನವನೊಪ್ಪಿಸುವದೆಂದರೆ, ವಿಷಯರೂಪ ಸರ್ವ ಪದಾರ್ಥಗಳನ್ನು (ಇವೇ ಧನ!) ಲಿಂಗಸ್ವರೂಪವೇ ಇದೆಂಬ ಅನುಭಾವವನ್ನು ಹೊಂದುವದೆಂದು ತಿಳಿಯಬೇಕು. ಇಂತಹ ದಾಸೋಹಿಗಳೇ ಭಕ್ತರೆಲ್ಲರೂ ಆಗಬೇಕಾದುದು ಅವರ ಕರ್ತವ್ಯ. ಆದುದರಿಂದ ಈ ಧ್ಯೇಯಸಾಧನೆಗೆ ಅನುಕೂಲವಾಗುವಂತೆ ಪ್ರತಿಯೊಬ್ಬನು ಉಳಿದವರೊ

---

೧ ಶಿವಾನುಭವ ಸಂಪುಟ ೧೪, ಸಂಚಿಕೆ ೧೧, ಪುಟ ೪೯೦–೫೦೦ ವರೆಗೆ, ದಾಸೋಹತ್ರಯದ ವಿಷಯವಾಗಿ ಬಂದಿರುವ ಲೇಖನವನ್ನು ಇಷ್ಟಪುಳ್ಳವರು ನೋಡಬಹುದು.

ಡನೆ (ಸಮಾಜದೊಡನೆ) ವ್ಯವಹರಿಸುವದು ಅವಶ್ಯವದೆ. ಅದನ್ನೇ ಇಲ್ಲಿ ವಿವರಿಸುವಾ.

ಸಮಷ್ಟಿಗುರು.

ಚರ್ಮಚಕ್ಷುವಿಗೆ ಗೋಚರವಾಗುವ ಸ್ಥೂಲ ಆಕಾರವೇ ಗುರು "ಯದ್ದೃಷ್ಟಂ ತನ್ನಶ್ವರಂ" ಎಂದು ಯಾವದನ್ನು ಹೇಳಿರುವರೋ ಅದೇ ಗುರು. ಈ ವಿಶ್ವರೂಪ ಮಹಾಕಾರವೇ ವಿರಾಡ್ಗುರು. ಮನುಜರಲ್ಲಿ ಅವನ ಶರೀರವೂ ಅದಕ್ಕೆ ಸಂಬಂಧಿಸಿದ ಸದಾಚಾರ ಸತ್ಕ್ರಿಯೆಗಳೂ ಗುರುವೆನಿಸಿದಂತೆಯೇ, ಸಮಾಜ ರೂಪಿ ಸಾಮೂಹಿಕ ಶರೀರವೂ ಅದರ ರೀತಿ ನೀತಿ ಆಚಾರಗಳೂ ಸ್ಥೂಲವಾನದಿಂದ ಸಮಷ್ಟಿಗುರುವೆಂದು ಹೇಳಲ್ಪಡುವವು. ಈ ಅತ್ಯಾವಶ್ಯಕವಿರುವ ನಡೆನುಡಿಗಳು ಸಮಾಜದಲ್ಲಿ ತಕ್ಕಂತೆ ಅಳವಡಬೇಕಾದರೆ, ನಾವು ನೀತಿ ಧರ್ಮವನ್ನು ಎಷ್ಟುಮಾತ್ರವೂ ಅತಿಕ್ರಮಿಸದೆ, ಬಹು ಎಚ್ಚರದಿಂದಲೂ ಧೈರ್ಯದಿಂದಲೂ ಬೆಂಬಳಿಸಬೇಕು. ಈ ಸಮಷ್ಟಿಗುರುಪೂಜೆಯನ್ನು ಕುರಿತು ಪ್ರಮಥಾಗ್ರಗಣ್ಯ ಬಸವಣ್ಣನವರು ಹೇಳಿರುವದೇನಂದರೆ:—

"ಕಳಬೇಡ, ಕೊಲಬೇಡ, ಹುಸಿಯನುಡಿಯಲುಬೇಡ, ಮುನಿಯಬೇಡ, ಅನ್ಯರಿಗೆ ಅಸಹ್ಯಪಡಬೇಡ, ತನ್ನ ಬಣ್ಣಿಸಬೇಡ, ಇದಿರ ಹಳಿಯಲುಬೇಡ; ಇದೇ ಅಂತರಂಗ ಶುದ್ಧಿ, ಇದೇ ಬಹಿರಂಗ ಶುದ್ಧಿ, ಇದೇ ನಮ್ಮ ಕೂಡಲಸಂಗಮದೇವನನೊಲಿಸುವ ಪರಿ."

ಇಲ್ಲಿ ಅಂತರಂಗ ಶುದ್ಧಿಯೆಂದರೆ ಆತ್ಮೋದ್ಧಾರ, ಬಹಿರಂಗ ಶುದ್ಧಿಯೆಂದರೆ ಸಮಾಜ ರಾಷ್ಟ್ರಾದಿಗಳ ಉದ್ಧಾರವೆಂದು ತಿಳಿಯಬೇಕು. ಕಳವು ಕೊಲೆ ಮೊದಲಾದ ಈ ಗುಣಗಳೆಲ್ಲ ಭವಿಗುಣಗಳು. ಅಂತೇ ಭಕ್ತರೆನಿಸುವವರಿಗೆ ಇವೆಲ್ಲ ಬೇಡವೆಂದು, ಭಕ್ತಿಬಂಡಾರಿ ಬಸವಣ್ಣನವರು ಉಪದೇಶಿಸಿದ್ದಾರೆ. ಈ ವಚನವು ಚಿಕ್ಕದಾಗಿದ್ದರೂ ಬಹು ಅರ್ಥಗರ್ಭಿತವಾಗಿದೆ. ಎಂತೆನೆ:- ಇದರಲ್ಲಿ ಬರೇ ಬಿಡಬೇಕಾದ ಗುಣಗಳನ್ನು ಮಾತ್ರ ಹೇಳಿರುವರು. ಆದರೂ ಅವುಗಳಿಂದ ಸೂಚಿತವಾಗುವ ಹಿಡಿಯಬೇಕಾದ ಗುಣಗಳನ್ನು ಸಹ ಇಲ್ಲಿ ನಾವು ಗಮನಕ್ಕೆ ತರುವದು ಅತ್ಯವಶ್ಯವದೆ. ಕಳಬೇಡವೆಂಬುದರಿಂದ ಕಾಯಕ ಮಾಡೆಂದೂ, ಕೊಲಬೇಡವೆಂಬುದರಿಂದ ದಯಾಪರನಾಗೆಂದೂ,—ಹುಸಿಯನುಡಿಯಲುಬೇಡೆಂಬುದರಿಂದ ದಿಟನುಡಿಯೆಂದೂ, ಮುನಿಯಬೇಡೆಂಬುದರಿಂದ ತಾಳ್ಮೆಯುಳ್ಳವನಾಗೆಂದೂ, ಅನ್ಯಂಗೆ ಅಸಹ್ಯಪಡಬೇಡೆಂಬುದರಿಂದ ಪರರ ವಿಷಯವಾಗಿ ಸಹ್ಯತೆ (ಸಹನಶೀಲತೆ)ಯುಳ್ಳವನಾಗೆಂದೂ, ತನ್ನ ಬಣ್ಣಿಸಬೇಡೆಂಬುದರಿಂದ ತನ್ನನ್ನು ಕೀಳಾಗಿ ಇಲ್ಲವೆ ಭೃತ್ಯನೆಂದು ಭಾವಿಸೆಂದೂ, ಇದಿರಹಳಿಯಲುಬೇಡೆಂಬುದರಿಂದ ಪರರ ಬಗ್ಗೆ ಪ್ರೇಮಾದರಗಳಿರಲೆಂದೂ ಹೇಳಿದಹಾಗಾಯತೆಂಬ ಊಹೆಯು ಸಹಜವಾಗಿಯೇ ಆಗುವದು, ಈ ರೀತಿ ಭಾವಿಸಿದರೆ ಈ ಗುಣಗಳೆಲ್ಲ ಧಾರ್ಮಿಕತನದ-ಸಮಾಜ ಧರ್ಮದ-ಮುಖ್ಯ ಲಕ್ಷಣಗಳೆಂಬುದು ಕೆಳಗಿನ ಪದ್ಯಗಳಿಂದ ಗೊತ್ತಾಗುವದು.

೧. "ಅಹಿಂಸಾ ಸತ್ಯಮಸ್ತೇಯಂ ಬ್ರಹ್ಮಚರ್ಯಂ ದಯಾಕ್ಷಮಾ ।
ದಾನಂ ಪೂಜಾ ಜಪೋ ಧ್ಯಾನಮಿತಿ ಧರ್ಮಸ್ಯ ಸಂಗ್ರಹಃ ॥"
[ಸಿ. ಶಿ.]

೨. "ಧೃತಿಕ್ಷಮಾಶಮೋಽಸ್ತೇಯಂ ಶೌಚಮಿಂದ್ರಿಯನಿಗ್ರಹಃ ।
ಧೀರ್ವಿದ್ಯಾ ಸತ್ಯಮಕ್ರೋಧೋದಶಕಂ ಧರ್ಮಲಕ್ಷಣಂ ॥"
[ಮ. ಭಾ.]

ಇವನ್ನು ಪಾಲಿಸುವದರಿಂದ ಸಮಾಜ ರಾಷ್ಟ್ರಾದಿಗಳ ಧಾರಣವೂ ಪೋಷಣವೂ ಆಗುವದಲ್ಲದೆ, ಭಕ್ತೋದ್ಧಾರಕ್ಕೆ ಒಳಿತಾಗಿ ಸಹಾಯವಾಗುವದು. ಸಮಷ್ಟಿ ಗುರುಲಿಂಗಜಂಗಮದ ಸೇವೆ ಘಟಿಸುವದು. ಅದು ಕೇಗೆಂಬುದು ಈ ವಚನದ ವಿವರಣೆಯಿಂದ ತಾನೇ ವಿದಿತವಾಗುವದು.

ಕಳಬೇಡ:— ಒಬ್ಬರು ಗಳಿಸಿದುದನ್ನು ಇನ್ನೊಬ್ಬರು ಅಪಹರಿಸುವದು ಕಳವೆನಿಸುತ್ತದೆ. ಇದನ್ನು ಯಾರೂ ಸಹಸಾ ಮಾಡಕೂಡದು. ಅದರೂ ದುಡಿಯಲಾರದ ಹೇಡಿಗಳನೇಕರು ಅನ್ಯರು ಗಳಿಸಿದುದನ್ನು ತುಡುಗಿನಿಂದ ಎಬ್ಬಿಸಿಕೊಂಡು ಹೋಗಿ, ತಮ್ಮ ಜೀವನವನ್ನು ಸಾಗಿಸಲಿಕ್ಕೆ ನೆಚ್ಚಿರುತ್ತಾರೆ. ಇದು ತೀರ ನಿಂದ್ಯ, ಅನ್ಯಾಯ. ಇದರಿಂದ ಸಮಾಜದಲ್ಲಿ ಶಾಂತಿಯುಳಿಯದು. ಅದೂ ಅಲ್ಲದೆ ಸಂಪದಭಿವೃದ್ಧಿಗೆ ದೊಡ್ಡ ಆತಂಕವಾಗುವದು. ಇದೇ ಮೇರೆಗೆ ಹಲವರು ವೈಗಳ್ಳತನದಿಂದ ಸಮಾಜದಲ್ಲಿ ಭಿಕ್ಷೆ ಬೇಡಿಕೊಂಡು ತಿಂದುಂಡು ಸುಖಿಸಲಿಕ್ಕೆ ಓಡಾಡು

ತ್ತಾರೆ. ಇದರಂತಹ ಅಸಹ್ಯತೆಯು ಇನ್ನೊಂದಿಲ್ಲ. ಕಳವು ಭಿಕ್ಷಗಳೆ
ರಡೂ ಅಧೋಗತಿಯ ಹೆದ್ದಾರಿಗಳು. ಭವಿಗಳ ನೀಚಕೃತ್ಯಗಳು. "ಬೇಡು
ವನ ಭಕ್ತ (ವೀರಶೈವ) ನಲ್ಲ" ಎಂದು ವಚನ ಶಾಸ್ತ್ರವು ಘಂಟಾಘೋ
ಷವಾಗಿ ಸಾರುತ್ತವೆ. ಈ ಮೇರೆಗೆ ಕಳವು ಭಿಕ್ಷೆಗಳು ನಿಷಿದ್ಧವಾದ
ಮೇಲೆ ಉಪಜೀವಿಸಲಿಕ್ಕೆ ಕಾಯಕದ ವಿನಾ ಸಾಧನವೇ ಉಳಿಯಲಿಲ್ಲ.
ಆದುದರಿಂದ ಲಿಂಗಾಯತರಲ್ಲಿ "ಪ್ರತಿಯೊಬ್ಬನು ಸತ್ಕಾಯಕದಿಂದಲೇ
ಜೀವಿಸಬೇಕೆಂ"ದು ಬಲವಾದ ಕಟ್ಟು ಹಾಕಿದ್ದಾರೆ. ಅದನ್ನು ಉಲ್ಲಂ
ಘಿಸಲು ಯಾರಿಗೂ ಬರುವಂತಿಲ್ಲ. ಈ ರೀತಿ ಕಾಯಕದಿಂದಲೇ ಸಂಪಾ
ದಿಸಿದುದನ್ನು ತಾನೊಬ್ಬನೇ ಉಪಭೋಗಿಸದೆ, ಅದರ ಬಹುಭಾಗ
ವನ್ನೆ ಇಲ್ಲವೆ ಶಕ್ಯವಾದಷ್ಟು "ಸತ್ಪಾತ್ರದಾನದಲ್ಲಿ ಪರೋಪಕಾರ ದಾನಾ
ದಿಗಳಲ್ಲಿ ಸವಿಸಬೇಕೆಂ"ದು ಆಜ್ಞಾಪಿಸಿದ್ದಾರೆ. ಅದು ಕೂಡ ಬಿದ್ದರೆ
ಭವಿತನಕ್ಕೆ ಎಳೆಯುವದೆಂಬುದೇ ಅವರ ಅಭಿಮತ. ಶ್ರೀ ಬಸವ
ಮಹಾತ್ಮರ ಈ ವಚನವನ್ನು ಗಮನಿಸಿರಿ.

"ಹೊನ್ನಿನೊಳಗೊಂದೊರೆಯ, ಸೀರೆಯೊಳಗೊಂದೆಳೆಯ, ಇಂದಿಂಗ
ನಾಳಿಂಗೆ ಬೇಕೆಂದೆನಾದಡೆ ನಿಮ್ಮಾಣೆ ನಿಮ್ಮ ಪ್ರಮಥರಾಣೆ, ನಿಮ್ಮ
ಶರಣರಿಗಲ್ಲದೆ ಮತ್ತೊಂದ ನರಿಯೆ. ಕೂ. ಸ. ದೇವ."

ಅಹಹ! ಇದೆಂತಹ ನಿರ್ಧಾರವು!! ಅವರು ಭಕ್ತಿಭಂಡಾರಿಗಳು.
ವೀರಶೈವಾಗ್ರೇಸರರು, ಅದರೂ ನಾವು ವಚನದ ಮರ್ಮವನರಿದು,
ಸತ್ಪಾತ್ರದಲ್ಲಿಯೂ ಸತ್ಕಾರ್ಯದಲ್ಲಿಯೂ ನಮ್ಮ ಸಂಪತ್ತಿಯನ್ನು ವೆಚ್ಚ
ಮಾಡಬೇಕು. ಆ ಕಾರ್ಯದಲ್ಲಿ ಸಹಸಾ ಅದರ ಅಪವ್ಯಯವಾಗಬಾ
ರದು. ನಿಜವಾದ ಆಚರಣೆಯು ಹೀಗಿದ್ದು, ಕಳವು ಮಾಡುವದು
ಭಕ್ತರಿಗೆ ಉಚಿತವೇ? ಗುರುಲಿಂಗ ಜಂಗಮಕ್ಕೆ ತನುಮನ ಧನಗಳನ್ನು
ನಿರ್ವಂಚನೆಯಿಂದ ಸಮರ್ಪಿಸುವ ಭಕ್ತರ ಕಾರ್ಯವೇ ಅದು? ಸಹಸಾ
ಅಲ್ಲ! ಕಳ್ಳತನದ ಇನ್ನೂ ಕೆಲವು ಪರ್ಯಾಯಗಳಿವೆ. ಲಂಚಬೊಕ್ಕ
ಸತನ, ಒಬ್ಬರಲ್ಲಿ ಕಡ ಸಾಲ ಒಯ್ದುದನ್ನು ತಿರುಗಿ ಮುಟ್ಟಿಸದಿರೋಣ,
ಒಬ್ಬರು ತಂದಿಟ್ಟುದನ್ನು ನುಂಗಿಬಿಡೋಣ, ಇತ್ಯಾದಿಗಳು ಪರಧನಾಪ
ಹರಣದಲ್ಲಿಯೇ ಬರುವವು. ಅದುದರಿಂದ ಭಕ್ತರು ಬಹು ಎಚ್ಚರದಿಂ
ದಿರಬೇಕು. ಇದಕ್ಕೂ ಮುಂದೆ ಹೋಗಿ, ಬಟ್ಟೆಯಲ್ಲಿ ಹೆರವರ ಯಾವ
ದಾದರೊಂದು ವಸ್ತುವು ಬಿದ್ದಿದ್ದಿರೆ ಅದನ್ನು ತಕ್ಕೊಳ್ಳುವದು ಸಹ

ಕಳವೇ ಆಗುವದೆಂದೂ, ತನಗೆ ಸದ್ಯಕ್ಕೆ ಬೇಕಾಗುವದಕ್ಕಿಂತ ಹೆಚ್ಚಾಗಿ
ಪದಾರ್ಥ ಹಣ ಮುಂತಾವವನ್ನು ಸಂಗ್ರಹಿಸುವದು ಸಹ ತುಡುಗೆನಿ
ಸುವದೆಂದೂ, ಅತಿ ಸೂಕ್ಷ್ಮರೀತಿಯಿಂದ ವಿಚಾರಿಸಿ ಹೇಳಿದ್ದಾರೆ. (ಇಲ್ಲಿ
ಗಳಿಯುವದೇ ಕೇವಲ ತಪ್ಪೆಂದು ಯಾರೂ ಭಾವಿಸಕೂಡದು. ವಹಿಸಿದ
ಕಾಯಕದಲ್ಲಿ ವೈಮುರಿ ದುಡಿದು ಬೇಕಾದಷ್ಟು ಸಂಗ್ರಹಿಸಬಹುದು.
ಆದರೆ ಹಾಗೆ ಸಂಗ್ರಹಿಸಿದುದನ್ನು ಗುರುಲಿಂಗಜಂಗಮಕ್ಕೆ ಅರ್ಥಾತ್
ಸಮಾಜಕ್ಕೆ ನಿರ್ವಂಚನೆಯಿಂದ ಸಲ್ಲಿಸಲು ಹಿಂಜರಿಯಬಾರದೆಂಬುದೇ
ಅದರ ಅರ್ಥ.; ಇದರಂತೆಯೇ ಯೋಗ್ಯ ಕಾರಣವಿಲ್ಲದೆ ಸುಮ್ಮಸುಮ್ಮನೆ
ಪರರು ಸ್ವಸಂತೋಷದಿಂದ ಏನಾದರೂ ಕೊಡಬಂದರೆ ಅದನ್ನು ಸ್ವೀಕ
ರಿಸುವದು ಸಹ ಶಿವಭಕ್ತರಿಗೆ ಮಾನ್ಯವಿಲ್ಲ. ಅನಿರ್ವಾಹವೆಂದು ಹಾಗೆ
ತಕ್ಕೊಂಡರೆ, ಹೊತ್ತು ಸಾಧಿಸಿ ಒಂದಿಲ್ಲೊಂದು ರೀತಿಯಿಂದ ಅವರಿಗೆ
ಮುಟ್ಟಿಸಿಯೇ ಸಂತೃಪ್ತರಾಗಬೇಕು. ಇದೆಲ್ಲ ಆಲೋಚಿಸಿದರೆ ಭಕ್ತರು
ಯಾವಾಗಲೂ ಸತ್ಕಾಯಕದಿಂದಲೇ ಬಾಳಬೇಕೆಂತಲೂ, ಇನ್ನೊಬ್ಬರ
ರಿಣದಲ್ಲಿ ಸಹಸಾ ಸಿಕ್ಕಬಾರದೆಂದೂ ಒಡೆದು ಕಾಣುತ್ತದೆ. ಪರಧನದ
ಬಗ್ಗೆ ವಚನಕಾರರು ಏನಂದಿರುವರೆಂಬದನ್ನು ಕೆಳಗಿನ ವಚನಗಳಲ್ಲಿ
ನೋಡಿರಿ.

೧. "ತೊರೆಯ ವಿೂವ ಅಣ್ಣಗಳಿರಾ, ತೊರೆಯವಿೂವ ಸ್ವಾವಿ
ಗಳಿರಾ, ತೊರೆಯಿಂಭೋ ತೊರೆಯಿಂಭೋ ಪರಧನದ ಆವಿ
ಷವ ತೊರೆಯಿಂಭೋ! ಪರನಾರಿಯ ಸಂಗವ ತೊರೆಯಿಂಭೋ!
ಇವ ತೊರೆಯದೆ ಹೋಗಿ, ತೊರೆಯ ವಿಂದಡೆ ಬರೆದೊರೆ
ಹೋಹುದು ಕೂ. ಸಂ. ದೇವ."

೨. "ಬಟ್ಟೆಯಲ್ಲಿ ಹೊನ್ನು ವಸ್ತ್ರ ಬಿದ್ದಿದ್ದರೆ, ನಾನು ಕೈಯ್ಯಲ್ಲಿ
ಎತ್ತಿದೆನಾದಡೆ ನಿಮ್ಮಾಣೆ ನಿಮ್ಮ ಪ್ರಮಥರಾಣೆ.....ಶಂಭು
ಜಕ್ಕೇಶ್ವರ"

ಕೊಲೆಬೇಡ – ಜೀವಘಾತವೆನಿಸುವದೇ ಕೊಲೆಯು. ಪರವಾ
ತ್ಮನೇ ಎಲ್ಲರ ಜೀವಗಳಲ್ಲಿ ಅಂತರಾತ್ಮನಾಗಿರುವದರಿಂದ, ಯಾವ ಪ್ರಾಣಿ
ಯನ್ನು ಕೊಲ್ಲುವದಾದರೂ ಹೊಲ್ಲವೇ ಸರಿ. ಕೊಲ್ಲುವದಂತೂ ಒತ್ತ
ಟ್ಟಿಗಿರಲಿ, ಕಾಡಿ ಪರಿಪರಿಯಿಂದ ಪೀಡಿಸುವದಾದರೂ ಮಾನಸಿಕ

ಕೊಲೆಯೇ ಆಗುವದು. ಇದು ಶಾರೀರಿಕ ಕೊಲೆಗಿಂತಲೂ ಒಂದು ರೀತಿಯಿಂದ ಬಹಳೇ ಕೆಡಕು. ಯಾಕಂದರೆ ಜೀವವು ಇದರಿಂದ ಅಜನ್ಮವಾಗಿ ಮರುಗುತ್ತಲೇ ಇರಬೇಕಾಗುವದು. "ಪರೋಪಕಾರಃ ಪುಣ್ಯಾಯ ಪಾಪಾಯ ಪರಪೀಡನಂ" ಎಂದು ಹೇಳಿರುವದರಿಂದ, ಪರದಾರ ಪರದ್ರವ್ಯಗಳನ್ನು ಬಯಸಿ ಅವಿಸ್ವಾಸ ಅಪ್ರಾಮಾಣಿಕತನದಿಂದ ವರ್ತಿಸುವದೂ, ಬಿರುನುಡಿ ಮುಂತಾದವುಗಳ ಯೋಗದಿಂದ ಅನ್ಯರ ಮನಸ್ಸನ್ನು ನೋಯಿಸುವದೂ ಕೂಡ ಹಿಂಸೆಯಲ್ಲಿಯೇ ಬರುವವು. ಇಂತಹ ಕಠೋರ ವೃತ್ತಿಗೆ ಸ್ವಾರ್ಥಪರಾಯಣತೆಯೇ ಕಾರಣವು. ಪರಮಾತ್ಮನಲ್ಲಿ ಐಕ್ಯಸಾಧಿಸಬೇಕೆಂಬುವ ಲಿಂಗಾಂಗಿಗಳಿಗೆ ಸ್ವಾರ್ಥವೆಲ್ಲಿಯದು, ಆಕಾರಣ ಭಕ್ತರು ಯಾವಾಗಲೂ ಅಹಿಂಸೆಯನ್ನೇ ಪಾಲಿಸಬೇಕು. ಈ ಬಗ್ಗೆ ವಚನ ಪ್ರಮಾಣಗಳುಃ—

೧. "ಕೊಲ್ಲೆನಯ್ಯಾ ಪ್ರಾಣಿಗಳ, ಮೆಲ್ಲೆನಯ್ಯಾ ಬಾಯಿಚ್ಛೆಗೆ, ಒಲ್ಲೆನಯ್ಯಾ ಪರಸತಿಯರ ಸಂಗವ, ಬಲ್ಲೆನಯ್ಯಾ ಮುಂದೆ ತೊಡಕುಂಟೆಂಬುದ, ಬಳ್ಳದ ಬಾಯಂತೆ ಒಂದೆಮನವ ಮಾಡಿ ನಿಲ್ಲೆಂದು ನಿಲಿಸಯ್ಯ ಕೂ. ಸಂ. ದೇವ."

೨. "ಪರಧನವನೊಲ್ಲಪ್ಪದೇ ವೃತ, ಪರಸ್ತ್ರೀಯ ಕೂಡದಿಪ್ಪುದೇ ಶೀಲ, ಸರ್ವಜೀವವ ಕೊಲ್ಲದಿಪ್ಪುದೇ ನೇಮ, ತಥ್ಯವಿಥ್ಯವ ತಿಳಿದಿಪ್ಪುದೇ ನಿತ್ಯ ನೇಮ; ಇದು ಈಶಾನ್ಯ ಮೂರ್ತಿ ಮಹಾಲಿಂಗಕ್ಕೆ ಸಂದೇಹವಿಲ್ಲದ ವೃತ."

೩. "ಕೊಲ್ಲುವವನೇ ಮಾದಿಗ, ಹೊಲಸು ತಿಂಬುವವನೇ ಹೊಲೆಯ.....ಕೂ. ಸಂ. ದೇವ."

(ಮುಂದುವರಿಯುವದು.)

ಆತ್ಮನಿವೇದನೆಯು.

ಶಿವಾನುಭವ ಪತ್ರಿಕೆಯನ್ನು ನಾವು ಪ್ರಾರಂಭಿಸಿ ಇಂದಿಗೆ ೧೮ ವರ್ಷಗಳಾದವು. ಅದರ ೧೯ನೆಯ ವರ್ಷವು ಈಗಿನ ಸಂಚಿಕೆಯಿಂದ ಪ್ರಾರಂಭವಾಗುತ್ತದೆ. ಈ ದೀರ್ಘ ಅವಧಿಯಲ್ಲಿ ಇದು ಯಾವ ವರ್ಷವೂ ನಿಲ್ಲಿಸಲ್ಪಟ್ಟಿಲ್ಲ. ಈವರೆಗೆ ಅದು ತನ್ನ ಉದ್ದೇಶಕ್ಕನುಸರಿಸಿಯೇ ಸತತವಾಗಿ ಕಾರ್ಯವಾಡುತ್ತ ಬಂದಿದೆ. ಇದು ವಾಚಕರ ನಿದರ್ಶನಕ್ಕೆ ಬಂದಿರಬಹುದು. ಈಚೆಗೆ ಬಹುಜನಸಮಾಜದಲ್ಲಿ ಅದರ ವಿಷಯವಾಗಿ ಆದರ ಬುದ್ಧಿಯು ಹೆಚ್ಚುತ್ತಲಿದ್ದುದು ನಮಗೆ ಉತ್ಸಾಹಕರವಾಗಿರುತ್ತಿದೆ. ಪತ್ರಿಕೆಯ ಮೂಲೋದ್ದೇಶಕ್ಕನುಸರಿಸಿ ಅದು ಮುಂದೆಯೂ ಪ್ರಕಟವಾಗುತ್ತ ಹೋಗುವದು. ಇದರಲ್ಲಿ ವಾಚಕರು ಅದಕ್ಕೆ ತಮ್ಮ ಬೆಂಬಲವನ್ನು ನೀಡುವರೆಂದು ನಾವು ಅವರಿಗೆ ನಮ್ರಪೂರ್ವಕವಾಗಿ ವಿನಂತಿಯನ್ನು ಮಾಡಿಕೊಳ್ಳುತ್ತೇವೆ.

ಕಾಗದದ ಕೊರತೆಗೋಸ್ಕರ ಅದಕ್ಕೆ ಹಿಂದಿನ ವರ್ಷ ಅತ್ಯಂತ ಬಿಕ್ಕಟ್ಟಿನ ಪ್ರಸಂಗವು ಒದಗಿತು. ಆಗ ನಮ್ಮ ವಿನಂತಿಯನ್ನು ಮನ್ನಿಸಿ ನಮ್ಮ ಚಂದಾದಾರರು, ಅವರಲ್ಲಿ ಮುಖ್ಯವಾಗಿ ಬೆಳಗಾವ ಜಿಲ್ಲೆಯಲ್ಲಿಯವರು ಅದಕ್ಕೆ ವಿಶೇಷ ಸಹಾಯ ಮಾಡಿದರು. ಅದರಿಂದ ಅದು ಬದುಕಿನಿಂತಿತು. ಹೀಗೆ ಸಹಾಯ ಮಾಡಿದ ಮಹನೀಯರ ಹೆಸರುಗಳನ್ನು ನಾವು ಕಾಲಕಾಲಕ್ಕೆ ಪತ್ರಿಕೆಯಲ್ಲಿ ಪ್ರಕಟಪಡಿಸುತ್ತ ಬಂದಿದ್ದೇವೆ. ಅವರಿಗೆ ನಮ್ಮ ಕೃತಜ್ಞತೆಯನ್ನು ಅರ್ಪಿಸುತ್ತೇವೆ. ಆದರೆ ಈ ಕಠಿಣ ಪರಿಸ್ಥಿತಿಯು ಈ ವರ್ಷವಾದರೂ ಕೂಡ ಹಿಮ್ಮೆಟ್ಟಿಲ್ಲ. ಅದು ಹೆಚ್ಚುತ್ತಲೇ ಇದೆ. ಆದ್ದರಿಂದ ನಮ್ಮ ವಾಚಕರು ಈ ವರ್ಷವಾದರೂ ತಮ್ಮ ಸಹಾಯವನ್ನು ಎಂದಿನಂತೆ ನೀಡುವರೆಂದು ನಾವು ಅವರಿಗೆ ವಿನಂತಿಮಾಡಿಕೊಳ್ಳುತ್ತೇವೆ.

ಶಿವಾನುಭವ ಪತ್ರಿಕೆಯು ಕೇವಲ ಸಂಶೋಧನೆಯ ಕಾರ್ಯಕ್ಕೋಸ್ಕರ ಉಂಟಾದದ್ದು ಇದೆ. ಈ ದೃಷ್ಟಿಯಿಂದ ಬರೆದ ಲೇಖನಗಳಿಗೆಲ್ಲ ನಾವು ಅದರಲ್ಲಿ ಇಂಬುಗೊಡುತ್ತ ಬಂದಿದ್ದೇವೆ. ಆದರೆ ಅವುಗಳಲ್ಲಿ ಪ್ರಕಟವಾದ ಲೇಖನಗಳಲ್ಲಿಯ ಅಭಿಪ್ರಾಯಗಳು ಲೇಖಕರವೇ ಹೊರ್ತು ಅವು ಪತ್ರಿಕಾಕಾರರವಲ್ಲವೆಂದು ಇಲ್ಲಿ ನಾವು ಹೇಳಬಯಸು

ತ್ತೇವೆ. ಹೀಗೆ ಅವರು ತಿಳಿದಲ್ಲಿ ಅನೇಕರು ಪತ್ರಿಕೆಯ ವಿಷಯವಾಗಿ ತಾಳಿರುವ ಆಕ್ಷೇಪಗಳು ಮೂರಾಗುವವೆಂದು ನಂಬಿದ್ದೇವೆ.

ಇನ್ನು ಮುಂದೆ ನಾವು ವೀರಶೈವೇತಿಹಾಸದ ಬಗ್ಗೆ ಲೇಖನ ಗಳನ್ನು ಹಿಂದಿನಂತೆಯೇ ಮುಂದುವರಿಸುವೆವು. ಅವುಗಳ ತರುವಾಯ ಧಾರ್ಮಿಕೇತಿಹಾಸ ವಿಷಯವನ್ನೂ ಕೈಕೊಳ್ಳಲು ಅಪೇಕ್ಷಿಸಿದ್ದೇವೆ. ಈ ನಮ್ಮ ಪ್ರಯತ್ನದಲ್ಲಿ ಲೇಖಕರು ನಮಗೆ ಎಂದಿನಂತೆ ಸಹಾಯವನ್ನು ನೀಡುತ್ತಿರಬೇಕೆಂದು ಅವರಿಗೆ ನಮ್ಮ ನಮ್ರ ವಿನಂತಿ ಇದೆ.

ಶಿವಾನುಭವ ಪತ್ರಿಕೆಗೆ ಸಹಾಯ.

ಶ್ರೀಮನ್ನಿರಂಜನ ಬಸವದೇವರು ಪುಟ್ಟಯ್ಯನಮಠ ಮು. ರಾಣೇ ಬೆನ್ನೂರು ಇವರು ರಾವಬಹಾದ್ದೂರ ಪಿ. ಜಿ. ಹಳಕಟ್ಟಿಯವರು ೧೧-೧೦-೪೪ಳ ನೇ ದಿವಸ ರಾಣೇಬೆನ್ನೂರಿಗೆ ಜಿಲ್ಲಾ ಸಾಹಿತ್ಯ ಪರಿಷತ್ತು ಧಾರವಾಡ ಇದಕ್ಕೋಸ್ಕರ ಆಗಮಿಸಿದಾಗ್ಗೆ ಶಿವಾನುಭವ ಪತ್ರಿಕೆಯ ಸಹಾಯಕ್ಕೋಸ್ಕರ ೫೫ ರೂಪಾಯಿಗಳನ್ನು ಅವರಿಗೆ ದಯಪಾಲಿಸಿದರು. ಇದಕ್ಕೋಸ್ಕರ ಶ್ರೀ ಸ್ವಾಮಿಗಳವರಿಗೆ ಅತ್ಯಂತ ಕೃತಜ್ಞರಾಗಿದ್ದೇವೆ. ಇದೇ ರೀತಿಯಾಗಿ ನಮ್ಮ ವಾಚಕರು ಸಹಾಯವನ್ನು ನೀಡಬೇಕೆಂದು ಅವರಿಗೆ ನಮ್ಮ ವಿನಂತಿ ಇದೆ.

ರಾ. ಬ. ಹಳಕಟ್ಟಿಯವರಿಗೆ ಮಾನಪತ್ರ.

೧೬-೧೦-೪೪ಳ ನೇ ದಿವಸ ರಾಣೇಬೆನ್ನೂರಿನ ಮಹಾ ಜನರು ಶ್ರೀ ವಿ. ಕೆ. ಗೋಕಾಕ. ಇವರ ಅಧ್ಯಕ್ಷತೆಯಲ್ಲಿ ಶ್ರೀಮನ್ನಿರಂಜನ ಬಸವದೇವರು ಪುಟ್ಟಯ್ಯನಮಠ ಇವರ ಮಠದಲ್ಲಿ ಸಭೆಸೇರಿ ರಾ ಬ ಹಳಕಟ್ಟಿಯವರು ಶೈಕ್ಷಣಿಕ, ವಾಙ್ಮಯಾತ್ಮಕ ಮೊದಲಾದ ಕ್ಷೇತ್ರಗಳಲ್ಲಿ ವಿಶೇಷ ಪರಿಶ್ರಮ ಪಟ್ಟದ್ದಕ್ಕೋಸ್ಕರ ಅವರಿಗೆ ಮಾನಪತ್ರವನ್ನು ಸುಂದರವಾದ ಬೆಳ್ಳಿಯ ಕರಂಡಕದಲ್ಲಿ ಅರ್ಪಿಸಿದರು. ಆ ಕಾಲದಲ್ಲಿ ಸಾಹಿತ್ಯ ಪರಿಷತ್ತಿಗೆ ಆಗಮಿಸಿದ ಪ್ರತಿನಿಧಿಗಳೂ ಧಾರವಾಡ ಶ್ರೀಮನ್ನಿರಂಜನ ಮೃತ್ಯುಂಜಯ ಸ್ವಾಮಿಗಳೂ ದಾವಣಗೆರೆಯ ವಿರಕ್ತಮಠದ ಶ್ರೀ ಸಿದ್ಧವೀರ ಸ್ವಾಮಿಗಳೂ ಮೊದಲಾದವರು ಆಗಮಿಸಿದ್ದರು. ಕಾರ್ಯಕ್ರಮಗಳು ಅತ್ಯಂತ ವಿಜೃಂಭಣೆಯಿಂದ ಜರಗಿದವು.

ಪುರ ಹೀಗೆ ಅನೇಕ ಮಹತ್ವದ ಗ್ರಾಮಗಳಲ್ಲಿ ವೀರಶೈವ ಮಠಗಳನ್ನು ಸ್ಥಾಪಿಸಿದನು. ಈ ಪ್ರಕಾರ ಬಸವಪ್ಪನಾಯಕನು ೧೫ ವರ್ಷಗಳ ವರೆಗೆ ಉತ್ತಮ ರೀತಿಯಿಂದ ರಾಜ್ಯಪಾಲನೆ ಮಾಡಿ ೧೭೫೫ ರಲ್ಲಿ ಕಾಲವಾದನು.

ಚೆನ್ನಬಸವಪ್ಪ: ಬಸವಪ್ಪನಾಯಕನ ತರುವಾಯ ಅವನ ಮಗನಾದ ಚೆನ್ನಬಸವಪ್ಪನಾಯಕನು ರಾಜ್ಯವಾಳಹತ್ತಿದನು. ಈತನು ೪ ವರ್ಷಗಳ ವರೆಗೆ ಮಾತ್ರ ರಾಜ್ಯವಾಳಿದನು.

ಸೋಮಶೇಖರ ನಾಯಕ – ಚೆನ್ನಬಸವಪ್ಪನಾಯಕನ ತರುವಾಯ ಬಸವಪ್ಪನಾಯಕನ ಹೆಂಡತಿಯಾದ ಚೆನ್ನವೀರಮ್ಮಾಜಿಯು ಸೋಮಶೇಖರ ನಾಯಕನೆಂಬವನನ್ನು ದತ್ತಕ ತೆಗೆದುಕೊಂಡಳು. ಅವನು ೧೭೫೭ ರಿಂದ ೧೭೬೩ ರ ವರೆಗೆ ಅಂದರೆ ಕೆಳದಿಯ ರಾಜ್ಯವನ್ನು ಹೈದರನಾಯಕನು ತೆಗೆದುಕೊಳ್ಳುವ ವರೆಗೆ ರಾಜ್ಯವಾಳಿದನು. ಈ ಎರಡೂ ಆಳಿಕೆಗಳಲ್ಲಿ ಉಭಯ ಅರಸರು ಚಿಕ್ಕವರಿದ್ದ ಕಾರಣ ಚೆನ್ನವೀರಮ್ಮಾಜಿಯೇ ರಾಜ್ಯಭಾರವನ್ನು ನಡಿಸುತ್ತಾ ಬಂದಳು.

ಚೆನ್ನವೀರಮ್ಮನು ರಾಜ್ಯಭಾರ ಕಾರ್ಯದಲ್ಲಿ ನಿಪುಣಳೂ ಧೈರ್ಯಸ್ಥಳೂ ಆಗಿದ್ದಳು. ತನ್ನ ಮಗನಾದ ಚೆನ್ನಬಸವಪ್ಪನ ಆಳಿಕೆಯಲ್ಲಿಯೂ ಸೋಮಶೇಖರನ ಆಳಿಕೆಯಲ್ಲಿಯೂ ಮರಾಠರ ಉಪಟಳವು ಬಹಳ ಹೆಚ್ಚಾಯಿತು. ಅವರು ಈ ಕಾಲದಲ್ಲಿ ಕರ್ನಾಟಕ ರಾಜ್ಯದಲ್ಲಿ ಆಗಿಂದಾಗ್ಗೆ ಅಭಿಯೋಗ ಮಾಡುತ್ತಾ ಬಂದರು. ಚೆನ್ನಬಸವಪ್ಪನ ಆಳಿಕೆಯಲ್ಲಿ ಮಹಾದಾಜಿ ಪುರಂಧರೆ ಎಂಬವನು ಕೆಳದಿಯ ರಾಜ್ಯವನ್ನು ಹೊಕ್ಕು ರಾಜಧಾನಿಗೆ ಮುತ್ತಿಗೆ ಹಾಕಿದನು. ಆದರೆ ಅದರಲ್ಲಿ ಅವನು ಯಶಸ್ಸನ್ನು ಹೊಂದದೆ ಹಿಂದಿರುಗಿ ಹೋಗಬೇಕಾಯಿತು. ಮುಂದೆ ಕೆಲವು ವರ್ಷಗಳ ಮೇಲೆ ಪಟವರ್ಧನರ ವಂಶಜನಾದ ಗೋಪಾಳರಾಯನು ರಾಜ್ಯವನ್ನು ಅಭಿಯೋಗಿಸಲು ಅವನಿಗೆ ವೀರಮ್ಮಾಜಿಯು ಹೇರಳ ಹಣವನ್ನು ಕೊಟ್ಟು ಹಿಂದಿರುಗಿಸಿದಳು. ಕೆಳದಿಯ ರಾಜ್ಯವು ಶ್ರೀಮಂತಿಕೆಯಲ್ಲಿ ಬಹಳ ಹೆಸರಾಗಿದ್ದದರಿಂದ ಅದನ್ನು ಅಭಿಯೋಗಿಸಿ ವ್ಯಾಪಾರದಲ್ಲಿ ಹೆಸರಾದ ಅಲ್ಲಿಯ ಗ್ರಾಮಗಳನ್ನು ಸುಲಿಯಲು ನೆರೆ ರಾಜರು ಬಹಳ ಹವಣಿಸುತ್ತಿದ್ದರು. ಆದರೆ ರಾಜ್ಯವು ಬಿಕ್ಕಟ್ಟಿನ ಅರಣ್ಯ ಪ್ರದೇಶದಲ್ಲಿ ಇದ್ದದರಿಂದ ಅದನ್ನು ಕೈವಶ ಮಾಡಿಕೊಳ್ಳುವದು ಅವರಿಗೆ ಬಹಳ ದುಸ್ತರವಾಗುತ್ತಿತ್ತು. ಇಂಥ ಸಮಯದಲ್ಲಿ ಅವರಿಗೆ ಕೆಲವು

ಕಪ್ಪ ಹಣವು ದೊರೆತ ಕೂಡಲೇ ಅವರು ತೆರಳಿ ಹೋಗುತ್ತಿದ್ದರು. ಆದರೆ ಪಶ್ಚಿಮ ಕರಾವಳಿ ಪ್ರದೇಶದಲ್ಲಿ ಕೆಳದಿಯ ರಾಜರು ಮರಾಟರ ಅಥವಾ ಪೋರ್ತುಗೀಜರ ಹಾವಳಿಗಳನ್ನು ಎಷ್ಟು ಮಾತ್ರವೂ ನಡೆಯ ಗೊಡುತ್ತಿದ್ದಿಲ್ಲ. ಇತ್ತಕಡೆಗೆ ಸೋಮಶೇಖರ ನಾಯಕನ ಕಾಲದಲ್ಲಿ ಪಶ್ಚಿಮ ತೀರದಲ್ಲಿಯ ಪ್ರದೇಶವನ್ನು ಮರಾಟರು ಸೂರೆ ಮಾಡಬೇಕೆಂದು ಅದನ್ನು ಆಳಿಯೋಗಿಸಲು ಕೆಳದಿಯ ಸೈನಿಕರು ಅವರನ್ನು ಸೋಲಿಸಿ ದರು ಮತ್ತು ಮಿಡಿಜೆ ಎಂಬ ಕೋಟೆಯನ್ನು ತಮ್ಮ ಕೈವಶ ಮಾಡಿ ಕೊಂಡರು. ಈ ಪ್ರಕಾರ ಕೆಳದಿಯ ಅರಸರು ತಮ್ಮ ಬಂದರ ಪ್ರದೇಶ ಗಳನ್ನು ಸುರಕ್ಷಿತವಾಗಿಟ್ಟುಕೊಂಡು ತಮ್ಮ ವ್ಯಾಪಾರಕ್ಕೆ ಹಾನಿಯ ನ್ನುಂಟುಮಾಡಗೊಡುತ್ತಿದ್ದಿಲ್ಲ.

ಜೆನ್ನವೀರಮ್ಮಾಜಿಯು ಈ ಪ್ರಕಾರ ಬಹಳ ಸಾಮರ್ಥ್ಯದಿಂದ ತನ್ನ ರಾಜ್ಯಭಾರವನ್ನು ನಡಿಸುತ್ತಾ ಬಂದಳು. ಅವಳು ಜಾಣಳೂ ಧೈರ್ಯಸ್ಥಳೂ ಇದ್ದದರಿಂದ ರಾಜ್ಯದಲ್ಲಿ ಎಷ್ಟು ಮಾತ್ರವೂ ಅಂತಸ್ಥ ಕಲಹಗಳು ಉತ್ಪನ್ನವಾಗದೆ ಸುಮಾರು ೧೦ ವರ್ಷ ಉತ್ತಮ ರೀತಿ ಯಿಂದ ರಾಜ್ಯಭಾರ ನಡಿಸಿದಳು. ಅವಳು ತನ್ನ ರಾಜ್ಯದ ಪೂರ್ವದ ಪರಂಪರೆಯ ಪ್ರಕಾರ ಅತ್ಯಂತ ಧಾರ್ಮಿಕ ಬುದ್ಧಿಯವಳೂ ಆಗಿದ್ದಳು. ಜೆನ್ನಬಸವಪ್ಪನಾಯಕನ ಆಡಳಿತೆಯ ಕಾಲದಲ್ಲಿ ಅನೇಕ ವೀರಶೈವ ಮಠಗಳಿಗೆ ದೊಡ್ಡ ದೇಣಿಗೆಗಳು ಅವಳಿಂದ ದೊರೆತದ್ದು ಕಂಡು ಬರುತ್ತದೆ. ಅನೇಕ ದೇವಾಲಯಗಳಿಗೆ ಸ್ವಾಸ್ಥಿಗಳು ದೊರೆತಿವೆ. ಜೆನ್ನವೀರಮ್ಮಾಜಿಯು ಶೃಂಗೇರಿಯ ಸ್ವಾಮಿಗಳನ್ನು ಬಹಳವಾಗಿ ಮನ್ನಿಸಿ ಅವರ ಸಾಲವನ್ನು ತೀರಿಸಿ ಬಿಟ್ಟಳು. ಅವಳು ಈ ಮಠಕ್ಕೆ ಭೂಸ್ವಾಸ್ಥಿಯನ್ನು ದಾನವಾಗಿ ಕೊಟ್ಟಳು. ಈ ಪ್ರಕಾರ ಜೆನ್ನವೀರಮ್ಮಾಜಿಯು ಅತ್ಯುತ್ತಮ ರೀತಿಯಿಂದ ರಾಜ್ಯಭಾರ ನಡಿಸುತ್ತ ಇರಲಾಗಿ ಬಲಾಢ್ಯನಾದ ಹೈದರ ನಾಯಕನು ದಾಳಿಯು ಕೆಳದಿಯ ರಾಜ್ಯದ ಮೇಲೆ ಉಂಟಾಯಿತು.

ಹೈದರಲ್ಲಿಯ ದಾಳಿಯು.

ಹೈದರ ಅಲ್ಲಿಯು ೧೭೬೧ ರಲ್ಲಿ ಮೈಸೂರು ರಾಜನ ಅಧಿಕಾರಗಳ ನ್ನೆಲ್ಲ ತಾನೇ ಆಕ್ರಮಿಸಿಕೊಂಡು ರಾಜ್ಯವಾಳಹತ್ತಿದ್ದನು. ಮುಂದೆ ಅವನು ಶ್ರೀರಂಗಪಟ್ಟಣ ಬೆಂಗಳೂರು ನಗರಗಳನ್ನು ಆಕ್ರಮಿಸಿ

ಮೈಸೂರು ಪ್ರಾಂತದ ಪೂರ್ವಭಾಗವನ್ನು ತನ್ನ ಕೈವಶ ಮಾಡಿ ಕೊಂಡನು. ಆ ಮೇಲೆ ಅವನು ಉತ್ತರಕ್ಕೆ ಹೊರಳಿ, ಹೊಸಕೋಟೆ, ದೊಡ್ಡ ಬಳ್ಳಾಪುರ ಇವುಗಳನ್ನು ತೆಗೆದುಕೊಂಡು ಚಿಕ್ಕ ಬಳ್ಳಾಪುರ, ಪೀರ್ಯ, ಪೆನುಕೊಂಡೆ ಮತ್ತು ಮಡಕಸಿರಾ ಈ ಪಟ್ಟಣಗಳನ್ನು ಕೈವಶ ಮಾಡಿಕೊಂಡನು. ಹೀಗೆ ಹೈದರ ಅಲ್ಲಿಯು ದೇಶದಲ್ಲಿ ಬಲಾಢ್ಯನಾಗುತ್ತ ಬರಲು, ರಾಯದುರ್ಗ ಮತ್ತು ಹರಪನಹಳ್ಳಿಯಲ್ಲಿಯ ಪಾಳ್ಯಗಾರರು ಅವನ ಪೋಷಕರಾದರು. ಮುಂದೆ ಅವನು ಚಿತ್ರಕಲ್ಲದುರ್ಗದ ಪಾಳ್ಯ ಗಾರನನ್ನು ಕೆಣಕಲು ಅವನೂ ಹೈದರನಿಗೆ ಶರಣಾಗತನಾದನು. ಹೀಗೆ ಹೈದರಲ್ಲಿಯು ಮೈಸೂರು ದೇಶದ ಬಹು ಭಾಗವನ್ನು ಆಕ್ರಮಿಸಿದ ಬಳಿಕ ಬೆದನೂರಿನ ರಾಜ್ಯದ ಒಳಹೊಕ್ಕನು. ಈ ಕಾಲದಲ್ಲಿ ಇತ್ತ ಕಡೆಯ ಚಿಕ್ಕ ಚಿಕ್ಕ ಪಾಳ್ಯಗಾರರು ಅವನನ್ನು ತಡೆಯದೆ ಹೋದರು. ಅವನ ದಂಡಾಳುಗಳೂ ಸಂಖ್ಯೆಯಲ್ಲಿ ಹೆಚ್ಚುತ್ತ ಬಂದರು. ಅವನು ಬೆದನೂರು ರಾಜ್ಯವನ್ನು ಅಭಿಯೋಗಿಸಲು ಅದಕ್ಕೆ ಹಿಂದೆ ಎಂದೂ ಒದಗದಂಥ ಒಂದು ಬಿಕ್ಕಟ್ಟಿನ ಸಮಯವು ಪ್ರಾಪ್ತವಾಯಿತು. ಈ ಕಾಲದಲ್ಲಿ ವೀರಮ್ಮಾಜಿಯು ಈ ಶತ್ರುವನ್ನು ತಡೆಯುವದು ಅಸಾಧ್ಯ ವೆಂದು ಎಣಿಸಿ, ಅವನಿಗೆ ಬಹು ಧನವನ್ನು ಕೊಟ್ಟು ಅವನನ್ನು ಹಿಂದಿರುಗಿಸಲು ಬಹಳ ಪ್ರಯತ್ನಿಸಿದಳು. ಆದರೆ ಅದು ನಿಷ್ಫಲವಾ ಯಿತು. ಹೈದರಲ್ಲಿಯು ಕುಮುಸಿಗೆ ಬಂದಾಗ್ಗೆ ಬೆದನೂರಿನ ಅರಸರು ತನ್ನ ಒಬ್ಬ ಹಿಂದಿನ ಮಂತ್ರಿಯನ್ನು ಅಲ್ಲಿ ಸೆರೆ ಇಟ್ಟಿದ್ದು ಇವನು ಹೈದರಲ್ಲಿಯನ್ನು ಕಂಡು, ಬಿದನೂರು ರಾಜ್ಯದ ಆಂತಸ್ಥ ಸ್ಥಿತಿ, ಅಲ್ಲಿದ್ದ ವಿಪುಲ ಧನಕನಕಗಳು, ರಾಜಧಾನಿಯ ರಕ್ಷಣೆಯ ವ್ಯವಸ್ಥೆ ಇವುಗಳ ನ್ನೆಲ್ಲ ತಿಳುಹಲು, ಹೈದರಲ್ಲಿಯು ಇಡೀ ರಾಜ್ಯವನ್ನು ತನ್ನ ಕೈವಶ ಮಾಡಿಕೊಳ್ಳಬೇಕೆಂದು ಬಗೆದನು. ಆದುದರಿಂದ ರಾಣಿಯು ಎಷ್ಟು ಧನವನ್ನು ಕೊಡಲು ಮುಂದುವರಿದರೂ ಅದನ್ನು ಹೈದರಲ್ಲಿಯು ನಿರಾಕರಿಸಿ, ರಾಜ್ಯದ ಒಳಹೊಕ್ಕು ರಾಜಧಾನಿಯ ಇದಿರಿಗೆ ಬಂದು ಅದನ್ನು ಮುತ್ತಿದನು. ಆದರೆ ಪಟ್ಟಣವನ್ನು ಪ್ರವೇಶ ಮಾಡಲು ಒಂದು ಅನುಕೂಲ ಕಳ್ಳದಾರಿಯನ್ನು ಅವನಲ್ಲಿದ್ದ ಈ ಬಿದನೂರಿನ ಮಂತ್ರಿಯು ತಿಳಿಸಲು, ಹೈದರಲ್ಲಿಯು ತನ್ನ ಸೈನ್ಯದ ಕೆಲ ಭಾಗವನ್ನು ತೆಗೆದು ಕೊಂಡು ಆ ಮಾರ್ಗದಿಂದ ಪಟ್ಟಣದ ಪ್ರವೇಶ ಮಾಡಿದನು. ಬಿದನೂರಿನ

ದಂಡಾಳುಗಳು ಬೇರೊಂದೆಡೆಗೆ ಹೈದರಲ್ಲಿಯ ಉಳಿದ ದಂಡಾಳುಗಳೊಡನೆ ಯುದ್ಧ ನಡಿಸಿದ್ದರು. ಹೀಗೆ ಹೈದರಲ್ಲಿಯು ಪಟ್ಟಣವನ್ನು ಪ್ರವೇಶ ಮಾಡಿದ ಕೂಡಲೆ, ರಾಜಧಾನಿಯನ್ನು ರಕ್ಷಿಸುವದು ಅವರಿಗೆ ಅಶಕ್ಯವಾಯಿತು. ಎಲ್ಲೆಲ್ಲಿಯೂ ಪಟ್ಟಣಿಗರು ಚದರಿ ಹೋಗಹತ್ತಿದರು. ಆಗ ವೀರಮ್ಮಾಜಿಯು ಪಟ್ಟಣವು ಶತ್ರುಗಳ ಕೈವಶವಾಗುವದೆಂದು ತಿಳಿದು ತನ್ನ ಅರಮನೆಗೆ ಬೆಂಕಿ ಹಚ್ಚಿ ಹೊರಬಿದ್ದಳು. ಪಟ್ಟಣಿಗರೆಲ್ಲರೂ ತಮ್ಮ ತಮ್ಮ ಮನೆಗಳನ್ನು ಬಿಟ್ಟುಕೊಟ್ಟು ಅರಣ್ಯ ಪ್ರದೇಶವನ್ನು ಆಶ್ರಯಿಸಿದರು. ಆಗ ಪಟ್ಟಣದ ಆಯಕಟ್ಟಿನ ಸ್ಥಳಗಳನ್ನು ಹೈದರಲ್ಲಿಯು ತಿಳಿದವನಾದ್ದರಿಂದ, ಅವನು ಅವುಗಳನ್ನು ಹಸ್ತಗತ ಮಾಡಿಕೊಂಡು ಪಟ್ಟಣವನ್ನು ಸುಲಿಗೆ ಮಾಡಲು ನಿಶ್ಚಯಿಸಿದನು. ಅದರಲ್ಲಿ ಈ ಕಾಲದಲ್ಲಿ ೮೦ ಸಾವಿರ ಮನೆಗಳಿದ್ದವೆಂಬ ಪ್ರತೀತಿ ಇದೆ. ಪಟ್ಟಣಿಗರು ವ್ಯಾಪಾರೋದ್ಯೋಗಗಳಲ್ಲಿ ಬಹು ಊರ್ಜಿತ ಸ್ಥಿತಿಯನ್ನು ಹೊಂದಿದವರಾದ್ದರಿಂದ ಶ್ರೀಮಂತಿಕೆಯಲ್ಲಿ ಬಹಳ ಹೆಸರಾಗಿದ್ದರು. ಹೈದರಲ್ಲಿಯು ಇವರೆಲ್ಲರ ಮನೆಗಳನ್ನು ಮೊದಲು ಕೀಲಿ ಹಾಕಿ ಮೊಹರು ಮಾಡಿದನು ಮತ್ತು ಉರಿಯುತ್ತಲಿದ್ದ ರಾಣಿಯ ಅರಮನೆಯನ್ನು ನಂದಿಸಿದನು. ಆ ಮೇಲೆ ಅವನು ಕ್ರಮವಾಗಿ ಪಟ್ಟಣಿಗರ ಮನೆಗಳೆಲ್ಲವನ್ನೂ ಸುಲಿದನು. ಈ ಸುಲಿಗೆಯಲ್ಲಿ ಅವನಿಗೆ ೧೮ ಕೋಟಿ ರೂಪಾಯಿಗಳು ದೊರೆದವು. ಈ ಹಣದ ಸಹಾಯದಿಂದಲೇ ತನ್ನ ರಾಜ್ಯವು ಮುಂದೆ ಸ್ಥಿರಪಟ್ಟಿತೆಂದು ಹೈದರನು ಆಗಿಂದಾಗ್ಗೆ ಹೇಳುತ್ತಿದ್ದನು.

ಪಟ್ಟಣವು ಈ ಪ್ರಕಾರ ವೈರಿಗಳ ಕೈವಶವಾಗಲು ರಾಣೀ ವೀರಮ್ಮಾಜಿಯು ತನ್ನ ರಾಜ್ಯವನ್ನು ಬಿಟ್ಟು ಪಶ್ಚಿಮ ತೀರದಲ್ಲಿರುವ ಬಸವರಾಜ ದುರ್ಗಕ್ಕೆ ಓಡಿ ಹೋದಳು. ಆದರೆ ಹೈದರನು ಅವಳನ್ನು ಕೈ ಸೆರೆ ಹಿಡಿಯಲು ದಂಡಾಳುಗಳನ್ನು ಕಳಿಸಲು ಅವಳು ಹೊನ್ನಾವರ, ಆ ಮೇಲೆ ಮಂಗಳೂರಿಗೆ ಓಡಿ ಹೋದಳು. ಅಲ್ಲಿಯೂ ಹೈದರನ ದಂಡಾಳುಗಳು ಬರಲು ಅವಳು ಬಲ್ಲಾಳ ರಾಯದುರ್ಗದಲ್ಲಿ ಅವಡ ಕೈಗೆ ಸಿಕ್ಕಿಬಿದ್ದಳು. ಆಗ ಹೈದರಲ್ಲಿಯು ಅವಳನ್ನೂ ಅವಳ ದತ್ತಕ ಮಗನನ್ನೂ ತುಮಕೂರು ಜಿಲ್ಲೆಯಲ್ಲಿರುವ ಮದ್ದಗಿರಿಯಲ್ಲಿ ಸೆರೆ ಇಟ್ಟನು.

ಹೀಗಿರಲು ಮರಾಠರು ಮುಂದೆ ಈ ಪ್ರದೇಶವನ್ನು ಪ್ರವೇಶಿಸಿದಾಗ ಅವರು ಅವಳನ್ನು ಸೆರೆಯಿಂದ ಮುಕ್ತವಾಡಲು ಅವಳು ಹೈದರಲ್ಲಿಯ

ರಾಜ್ಯದಲ್ಲಿರಲು ಶಕ್ಯವಿರದ್ದರಿಂದ ಪುಣೆಯಲ್ಲಿರಲು ಬಯಸಿ ಅಲ್ಲಿಗೆ ಹೊರಟಳು. ಆದರೆ ಅವಳು ದಾರಿಯಲ್ಲಿಯೇ ಮರಣ ಹೊಂದಿದಳು. ಅವಳ ದತ್ತಕ ಮಗನಾದ ಸೋಮಶೇಖರ ನಾಯಕನೂ ಕೂಡ ಪುಣೆ ಪಟ್ಟಣದಲ್ಲಿ ತೀರಿಕೊಂಡನು.

ಹೈದರನು ಬಿದನೂರು ಅತ್ಯಂತ ಬಿಕ್ಕಟ್ಟಿನ ಸ್ಥಳದಲ್ಲಿ ಇದ್ದದ್ದನ್ನು ಕಂಡು ಅವನು ಅದನ್ನು ತನ್ನ ರಾಜಧಾನಿಯನ್ನಾಗಿ ಮಾಡಬೇಕೆಂದು ಮೊದಲು ಬಯಸಿದನು. ಆದ್ದರಿಂದ ಅವನು ಅದಕ್ಕೆ ಹೈದರನಗರವೆಂಬ ಹೆಸರನ್ನಿಟ್ಟನು. ಅಲ್ಲಿ ಅವನು ಒಂದು ಭವ್ಯವಾದ ಅರಮನೆಯನ್ನು ಸಹ ಕಟ್ಟಿಸಲು ಉದ್ಯುಕ್ತನಾದನು. ಅಲ್ಲಿ ತನ್ನ ಟಂಕಶಾಲೆಯನ್ನು ಸ್ಥಾಪಿಸಿ, ತನ್ನ ಹೆಸರಿನ ನಾಣ್ಯಗಳನ್ನು ಹೊರಡಿಸಹತ್ತಿದನು. ಅಲ್ಲಿಯ ಮೊದಲಿನ ವ್ಯಾಪಾರೋದ್ಯೋಗಗಳನ್ನು ಹೆಚ್ಚಿಸಲೂ ಬಹಳ ಉತ್ತೇಜನ ಕೊಟ್ಟನು. ಆದರೆ ಈ ಪ್ರಯತ್ನಗಳೆಲ್ಲವೂ ನಿಷ್ಫಲವಾದವು. ಬಿದನೂರು ಮೊದಲಿನ ವೈಭವ ಸ್ಥಿತಿಯನ್ನು ಎಂದೂ ಹೊಂದಲಿಲ್ಲ.

ಅವನು ಬಿದನೂರಿನ ರಾಜ್ಯದಲ್ಲಿದ್ದ ಮೊದಲಿನ ಅಧಿಕಾರಿಗಳನ್ನು ತಳ್ಳದೆ ಅವರನ್ನು ಪ್ರಾರಂಭದಲ್ಲಿ ಅವರವರ ಸ್ಥಾನದಲ್ಲಿಯೇ ಇರಿಸಿದನು. ಆದರೆ ಪಟ್ಟಣದಲ್ಲಿ ಬಹು ಜನರು ತಮ್ಮ ಮೊದಲಿನ ಅರಸರನ್ನೇ ಬಯಸುತ್ತಿದ್ದದರಿಂದ ಕೆಲವರು ಹೈದರಲ್ಲಿಯ ವಿರುದ್ಧ ಒಳಸಂಚು ಮಾಡಿದರು. ಇದು ಹೈದರಲ್ಲಿಗೆ ಗೊತ್ತಾಗಲು ಅವನು ೩೦೦ ಜನರನ್ನು ಏಕ ಕಾಲದಲ್ಲಿ ಗಲ್ಲಿಗೆ ಏರಿಸಿದನು. ಮುಂದೆ ಪಟ್ಟಣಿಗರು ಅವನ ವಿರುದ್ಧ ಏನೂ ಮಾಡಲಾರದಾದರು.

ಈ ಪ್ರಕಾರ ಬಲಶಾಲಿಯಾದ ಹೈದರಲ್ಲಿಯು ಬಿದನೂರಿನ ರಾಜ್ಯವನ್ನು ಸಂಪೂರ್ಣವಾಗಿ ನಾಶಪಡಿಸಿದನು. ಇದು ೧೭೬೩ ಮಾರ್ಚ್ ತಿಂಗಳಿನಲ್ಲಿ ಸಂಭವಿಸಿತು. ಹೈದರಲ್ಲಿಯ ತರುವಾಯ ಬಿದನೂರು ಊರ್ಜಿತ ಸ್ಥಿತಿಯನ್ನು ಎಂದೂ ಹೊಂದಲಿಲ್ಲ. ಅದರ ವ್ಯಾಪಾರವು ಕುಗ್ಗಿತು. ಮೊದಲಿನ ಅದರ ಶ್ರೀಮಂತಿಕೆಯು ಬಯಲಾಗಿ ಹೋಯಿತು. ಈಗ ಅದು ಶಿವಮೊಗ್ಗೆ ಜಿಲ್ಲೆಯಲ್ಲಿ 'ನಗರ' ಎಂಬ ಹೆಸರಿನಿಂದ ೯-೧೦ ಸಾವಿರ ಜನವಸತಿಯುಳ್ಳ ಸಣ್ಣ ಗ್ರಾಮ ಮಾತ್ರವಾಗಿ ಉಳಿದಿದೆ.

---

೧೬ ನೇ ಪ್ರಕರಣ.

ಸ್ವಾದಿಯ ರಾಜರು.

ಸ್ವಾದಿಯ ರಾಜರು ಈಗ ಕಾರವಾರ ಜಿಲ್ಲೆಯಲ್ಲಿರುವ ಸಿರಸಿ, ಹಲ್ಯಾಳ, ಯಲ್ಲಾಪುರ, ಕಾರವಾರ, ಅಂಕೋಲಾ ಮತ್ತು ಕುಮಟಾ ತಾಲೂಕುಗಳಲ್ಲಿಯೂ ಸುವೆ ಪೇಶಾದಲ್ಲಿಯೂ ೧೫೫೫ ರಿಂದ ೧೭೬೩ ವರೆಗೆ ರಾಜ್ಯವಾಳಿದರು. ಇವರ ರಾಜಧಾನಿಯು ಸಿರಸಿ ತಾಲೂಕಿನಲ್ಲಿರುವ ಸ್ವಾದಿಯು. ರಾಜರ ಹೆಸರುಗಳನ್ನು ನಾವು ಕೆಳಗೆ ಕೊಟ್ಟಿದ್ದೇವೆ.

(೧)	ಇಮ್ಮಡಿ ಅರಸಪ್ಪನಾಯಕ	೧೫೫೫–೧೫೯೮
(೨)	ರಾಮಚಂದ್ರನಾಯಕ	೧೫೯೮–೧೬೧೮
(೩)	ರಘುನಾಥನಾಯಕ	೧೬೧೮–೧೬೩೮
(೪)	ಮಧುಲಿಂಗನಾಯಕ	೧೬೩೮–೧೬೭೪
(೫)	ಸದಾಶಿವರಾಜ	೧೬೭೪–೧೬೯೭
(೬)	ಬಸವಲಿಂಗರಾಜ	೧೬೯೭–೧೭೪೫
(೭)	ಇಮ್ಮಡಿ ಸದಾಶಿವರಾಯ	೧೭೪೫–೧೭೬೩

ಅರಸಪ್ಪರಾಜ:— (೧೫೫೫–೧೫೯೮) ವಿಜಯನಗರದ ಅರಸರಲ್ಲಿ ಅತ್ಯಂತ ಪ್ರತಾಪಶಾಲಿಯಾದ ಕೃಷ್ಣರಾಜನ ತಂದೆಗೆ ಮಕ್ಕಳಿರಲಿಲ್ಲ. ಆದ್ದರಿಂದ ಅವನು ತನ್ನ ತಂಗಿಯ ಮಗನಾದ ಅರಸಪ್ಪರಾಜನಿಗೆ ಯುವರಾಜ ಪಟ್ಟವನ್ನು ಕಟ್ಟಿದನು. ಆದರೆ ಮುಂದೆ ಅವನಿಗೆ ಮಕ್ಕಳಾದ್ದರಿಂದ ಅರಸಪ್ಪರಾಜನು ಪಟ್ಟಹೊಂದುವದು ನಿಂತಿತು. ಆದರೆ ಮುಂದೆ ಸ್ವಾದಿಯ ಸೀಮೆಗೆ ಅವನು ಸುಬೇದಾರನಾಗಿ ವಿಜಯನಗರದ ರಾಜನಿಂದ ನಿಯಮಿಸಲ್ಪಟ್ಟನು. ಅವನು ರಾಮರಾಜನ ಕಾಲದಲ್ಲಿ ಅವನಿಗೆ ಯಾವಾಗಲೂ ಸಹಾಯಕನಾಗಿ ರಾಜ್ಯವಾಳುತ್ತ ಬಂದನು. ಅವನು ಈ ಭಾಗದಲ್ಲಿ ಇದ್ದಾಗ್ಗೆ ಇಲ್ಲಿ ಜೈನ ಧರ್ಮೀಯರು ಬಹು ಪ್ರಾಬಲ್ಯವನ್ನು ಹೊಂದಿದ್ದರು. ಆರಂಭದಲ್ಲಿ ಅವನು ಅವರ ಧರ್ಮವನ್ನು ಪುರಸ್ಕರಿಸಿದರೂ ಕೂಡ ಅವನು ಅದನ್ನು ಬಿಟ್ಟು ಬ್ರಾಹ್ಮಣ ಧರ್ಮವನ್ನು ಬಲಪಡಿಸಿದನು. ಅವನು ಮುಖ್ಯವಾಗಿ ಹವಿಕ ಬ್ರಾಹ್ಮಣರಿಗೆ

ಬಹಳ ಉತ್ತೇಜನ ಕೊಟ್ಟು ಅವರ ಮೂಲಕ ಒಕ್ಕಲುತನದಲ್ಲಿ ಬಹಳ ಸುಧಾರಣೆಯನ್ನು ಮಾಡಿದನು. ಇವನ ಆಳಿಕೆಯಲ್ಲಿ ರಾಜ್ಯವು ಅಭ್ಯುದಯ ಸ್ಥಿತಿಯನ್ನು ಹೊಂದಿ ಅದರ ಆದಾಯವು ಬಹಳ ಹೆಚ್ಚಿತು.

ರಾಮಚಂದ್ರರಾಜಃ – (೧೫೯೮–೧೬೧೮) ಅರಸಪ್ಪರಾಜನ ತರುವಾಯ ಅವನ ಮಗನಾದ ರಾಮಚಂದ್ರ ರಾಜನು ಪಟ್ಟವೇರಿದನು. ಅವನು ತನ್ನ ತಂದೆಯು ಗೊತ್ತುಪಡಿಸಿದ ಧಾರ್ಮಿಕ ಮತ್ತು ರಾಜಕೀಯ ಪದ್ಧತಿಗಳನ್ನೇ ಸ್ಥಿರಪಡಿಸಿದನು. ಅವನು ದೇಶದಲ್ಲಿ ಶಾಂತತೆಯನ್ನು ಕಾಯ್ದುಕೊಂಡು ರಾಜ್ಯವಾಳಿದನು.

ರಘುನಾಥರಾಜಃ— (೧೬೧೮–೧೬೩೮) ಅವನ ಕಾಲದಲ್ಲಿ ದಾಳಿಗಾರರು ರಾಜ್ಯದಲ್ಲಿ ದಂಗೆ ಎಬ್ಬಿಸಿದರು. ಸೈನ್ಯದಲ್ಲಿಯೂ ಕಲಹಗಳಿದ್ದವು. ಆದರೆ ಅವುಗಳನ್ನು ಅರಸನು ಮುರಿದು ಶಾಂತತೆಯನ್ನು ಸ್ಥಾಪಿಸಿದನು. ಬನವಾಸಿ ಮಧುಕೇಶ್ವರನ ದೇವಾಲಯದಲ್ಲಿ ಒಂದು ಕಲಾಪೂರ್ಣವಾದ ತೂಗು ಮಂಚವಿದೆ. ಇದನ್ನು ಸಿದ್ಧಪಡಿಸಿ ಕಾಣಿಕೆಯಾಗಿ ದೇವಾಲಯಕ್ಕೆ ಕೊಟ್ಟವನು ಈತನೇ ಇದ್ದಾನೆಂದು ಅದರ ಮೇಲಿನ ಬರಹದಿಂದ ತಿಳಿದು ಬರುತ್ತಿದೆ.

ಮಧುಲಿಂಗರಾಜಃ – (೧೬೩೮–೧೬೭೪) ರಘುನಾಥರಾಜನ ತರುವಾಯ ಅವನ ಮಗನಾದ ಮಧುಲಿಂಗರಾಜನು ಪಟ್ಟವೇರಿದನು. ಇವನು ವೀರಶೈವ ಮತವನ್ನು ಅಂಗೀಕರಿಸಿದನು. ಇವನ ತರುವಾಯ ಬಂದ ರಾಜರೆಲ್ಲರೂ ವೀರಶೈವರಾಗಿಯೇ ಉಳಿದರು. ಇವನು ೧೬೭೪ ರಲ್ಲಿ ಕಾಲವಾದನು.

ಸದಾಶಿವರಾಜಃ—(೧೬೭೪–೧೬೯೭)ಸ್ವಾದಿಯ ಅರಸರಲ್ಲಿ ಈತನೇ ಅತ್ಯಂತ ಪ್ರಖ್ಯಾತಿಯನ್ನು ಹೊಂದಿದವನು. ಅವನು ಬಹು ಪರಾಕ್ರಮಿಯೂ ರಾಜಕಾರಣನಿಪುಣನೂ ಆಗಿದ್ದನು. ಅವನು ಮೊದಲು ತನ್ನ ಸೈನ್ಯದಲ್ಲಿ ಉತ್ತಮ ವ್ಯವಸ್ಥೆಯನ್ನುಂಟು ಮಾಡಿ ತನ್ನ ರಾಜ್ಯದ ಮೇರೆಯನ್ನು ೧೬೯೯ರ ಒಳಗಾಗಿ ಪಶ್ಚಿಮಕ್ಕೆ ಸಮುದ್ರ ತೀರದ ವರೆಗೂ ಹಬ್ಬಿಸಿದನು. ಕಾರವಾರವೇ ಅವನ ಮುಖ್ಯ ಬಂದರವಾಗಿತ್ತು. ಅಲ್ಲಿ ಇಂಗ್ಲಿಷ ಮತ್ತು ಪೋರ್ತುಗೀಜರ ವ್ಯಾಪಾರದ ಅಂಗಡಿಗಳಿದ್ದವು.

ಅವರು ಇಲ್ಲಿಂದ ಕರ್ನಾಟಕದ ಒಳಭಾಗಮೊಡನೆ ಬಹು ದೊಡ್ಡ ವ್ಯಾಪಾರವನ್ನು ಸಾಗಿಸುತ್ತ ಬಂದರು. ಅವರು ಸದಾಶಿವರಾಯನಿಗೆ ಕಾಣಿಕೆಯನ್ನು ಸಲ್ಲಿಸುತ್ತ ಬರುವರು.

ಸದಾಶಿವರಾಯನಿಗೆ ಶಿವಾಜಿಯ ಮಗನಾದ ಸಂಭಾಜಿಯೊಡನೆ ಯುದ್ಧ ಮಾಡುವ ಪ್ರಸಂಗವು ಪ್ರಾಪ್ತವಾಯಿತು. ಸ್ವಾದಿಯ ರಾಜ್ಯವು ಶ್ರೀಮಂತಿಕೆಯಲ್ಲಿ ಬಹಳ ಹೆಸರಾದದ್ದರಿಂದ ಮರಾಠರು ಅದನ್ನು ಸುಲಿಯಲು ಬಹಳ ಹವಣಿಸುತ್ತಿದ್ದರು. ಈ ಯುದ್ಧದ ಕಾಲದಲ್ಲಿ ಸಂಭಾಜಿಯು ತಾನು ಸ್ವತಃ ಸ್ವಾದಿಯ ಮೇಲೆ ದಂಡೆತ್ತಿ ಬಂದನು. ಆದರೆ ಅವನಿಗೆ ಅದರಲ್ಲಿ ಯಶಸ್ಸು ದೊರೆಯಲಿಲ್ಲ. ಸದಾಶಿವರಾಯನು ಅವನೊಡನೆ ಶೂರತನದಿಂದ ಕಾದಿ ಅವನನ್ನು ಹಿಮ್ಮೆಟ್ಟಿಸಿದನು. ಆಗ ಸಂಭಾಜಿಯು ಪೋರ್ತುಗೀಜರನ್ನು ತನ್ನ ಕಡೆಗೆ ಮಾಡಿಕೊಂಡು ಸ್ವಾದಿಯ ರಾಜ್ಯದ ಮೇಲೆ ಪುನಃ ನುಗ್ಗಲು ಪ್ರಯತ್ನಿಸಿದನು. ಆದರೆ ಪೋರ್ತುಗೀಜರು ಮರಾಠರೊಡನೆ ಸ್ನೇಹ ಬೆಳಿಸುವದು ತಮಗೆ ಅಹಿತವೆಂದು ತಿಳಿದದ್ದರಿಂದ ಸಂಭಾಜಿಗೆ ಸಹಾಯ ಮಾಡಲು ಅವರು ಹಿಂದೆಗೆದರು. ಇದರ ತರುವಾಯ ಸ್ವಾದಿಯ ಮೇಲಿನ ಸಂಭಾಜಿಯ ದಾಳಿಗಳು ನಿಂತು ಹೋದವು.

ಸ್ವಾದಿಯ ರಾಜ್ಯದಲ್ಲಿ ಅತ್ಯುತ್ತಮವಾದ ಮೆಣಸು ಬೆಳೆಯುತ್ತಿತ್ತು. ಇದರ ವ್ಯಾಪಾರವು ಇಲ್ಲಿ ಬಹಳವಾಗಿ ಬೆಳೆದಿತ್ತು. ಅರಸನು ಕೆಲವು ದಿನ ಸ್ವಾದಿಯಲ್ಲಿಯೂ, ಕೆಲವು ದಿನ ಸಾಂಬ್ರಾಣಿಯಲ್ಲಿಯೂ ಇದ್ದುಕೊಂಡು ರಾಜ್ಯವಾಳುತ್ತಿದ್ದನು. ಸಾಂಬ್ರಾಣಿಯು ಈ ಕಾಲದಲ್ಲಿ ಬಹಳ ದೊಡ್ಡ ಪಟ್ಟಣವಾಗಿತ್ತು. ಅದರಿಂದ ಅರಸನಿಗೆ ೩ ಲಕ್ಷ ರೂಪಾಯಿಗಳ ಉತ್ಪನ್ನವು ಬರುತ್ತಿತ್ತು.

ಅರಸನು ಶೂರನಾಗಿದ್ದಂತೆ ವಾಙ್ಮಯಾಭಿರುಚಿಯುಳ್ಳವನೂ, ಆಗಿದ್ದನು. ಅವನು 'ಸದಾಶಿವ ಪಂಚಶತಸೀತಿಗಳು' ಎಂಬ ಹೆಸರಿನ ಕಾವ್ಯವನ್ನು ರಚಿಸಿದ್ದಾನೆ.

೧೬೪೪ ರಲ್ಲಿ ಕಾರವಾರದಲ್ಲಿಯ ಇಂಗ್ಲಿಷ ವ್ಯಾಪಾರಸ್ಥರಿಗೂ ಪಟ್ಟಣದಲ್ಲಿಯವರಿಗೂ ಕೆಲವೊಂದು ಕಾರಣದ ಮೂಲಕ ಕದನವೆಸಗಿದ್ದು ತಿಳಿಯುತ್ತಿದೆ. ಇಂಗ್ಲಿಷ ಹಡಗುಪಡೆಯವರು ಪಟ್ಟಣದಲ್ಲಿ ಬಂದಾಗ್ಗೆ

ಶಿವಾನುಭವ

ವರ್ಷ ೧೯	ನವ್ಹೆಂಬರ ೧೯೪೪.	ಸಂಚಿಕೆ ೨

ಶಿವನೇ ಸರ್ವದೇವಶಿಖಾಮಣಿಯೆಂದು ಭಾವಿಸುವದು.

(ಲೇಖಕ:— ಶಿವಮೂರ್ತ)

ಶಿವನೇ ಸರ್ವದೇವಶಿಖಾಮಣಿಯೆಂದು ಅಚ್ಚೊತ್ತಿದಂತೆ ಭಾವಿಸುವದು ವೀರಶೈವರ ೧೨ ನೆಯ ಆಚಾರ. "ಶಿವನೇ ದೇವರೊಳುತ್ತಮಂ ಹರಹರಾ ಶ್ರೀ ಚೆನ್ನಸೋಮೇಶ್ವರಾ" ಎಂದು ಪಾಲ್ಕುರಿಕೆ ಸೋಮನಾಥ ಕವಿಯು ಹೇಳಿದ್ದಾನೆ. ಆದುದರಿಂದ 'ಶಿವ' ಎಂಬ ಶಬ್ದವು ಎಂದು ಹುಟ್ಟಿತು, ಅದರ ಬೆಳವಣಿಗೆಯು ಯಾವ ರೀತಿಯಿಂದಾಯಿತು, ಎಂಬದನ್ನು ವಿವರಿಸಿ ಶಿವನೇ ಸರ್ವದೇವಶಿಖಾಮಣಿಯು ಹೇಗೆಂಬದನ್ನು ವಿವೇಚಿಸುವದು ಈ ಲೇಖದ ಮುಖ್ಯೋದ್ದೇಶವು.

ವೇದಗಳಿಗಿಂತ ಪೂರ್ವದಲ್ಲಿ ಶಿವನಿಗೆ ರುದ್ರನೆಂಬ ಹೆಸರಿತ್ತೆಂದು "ಮ್ಯಾಕ್ಸಮುಲ್ಲರ" ಸಾಹೇಬರ ಮತವಿದೆ. ಇದೇ ಮತವನ್ನು ಗ್ರಹಿತವಾಗಿಟ್ಟುಕೊಂಡರೆ ವೇದಗಳು ಕ್ರಿ. ಶ. ಪೂರ್ವದಲ್ಲಿ ೫—೬ ಸಾವಿರ ವರ್ಷಗಳ ಹಿಂದೆ ಹುಟ್ಟಿ ಬೆಳೆದವೆಂದು ಪಂಡಿತರ ಅಭಿಪ್ರಾಯವುಂಟು. ಆದ್ದರಿಂದ 'ಶಿವ' ಶಬ್ದವು ಕ್ರಿ. ಶ. ಪೂರ್ವದಲ್ಲಿ ಕನಿಷ್ಟ ಪಕ್ಷ ೪-೧೦ ಸಾವಿರ ವರ್ಷಗಳ ಹಿಂದೆ ಬಳಿಕೆಯಲ್ಲಿದ್ದಿರಬೇಕೆಂದು ಊಹಿಸಬಹುದಾಗಿದೆ.

ಶಿವನು ದ್ರಾವಿಡರ ದೇವರು. ಆರ್ಯರ ದೇವರಲ್ಲ. ಆರ್ಯರು ಹಿಂದುಸ್ತಾನಕ್ಕೆ ಬರುವದಕ್ಕಿಂತ ಪೂರ್ವದಲ್ಲಿ ಶೈವ ಪಂಥವು ಇದೀ ಹಿಂದುಸ್ತಾನದಲ್ಲಷ್ಟೇ ಅಲ್ಲದೆ, ಸಿಲೋನ, ಸುಮಾತ್ರಾ, ಜಾವಾ, ಬಾಬಿ ಲೋನ ಮೊದಲಾದ ಪ್ರದೇಶಗಳಲ್ಲಿಯೂ ಹಬ್ಬಿತ್ತೆಂದು ಅಲ್ಲಿ ಶೋಧವಾದ ಅವಶೇಷಗಳಿಂದ ತರ್ಕಿಸಬಹುದಾಗಿದೆ. ಆದ್ದರಿಂದ ಶಿವನು ಭರತ ಖಂಡದ ಅತ್ಯಂತ ಪ್ರಾಚೀನವಾದ ದೇವತೆ, ಮತ್ತು ಅತಿ ದೊಡ್ಡ ಕ್ಷೇತ್ರವನ್ನು ವ್ಯಾಪಿಸಿಕೊಂಡ ದೇವತೆ ಎಂದು ಎಲ್ಲರೂ ಒಪ್ಪತಕ್ಕ ಮಾತೇ ಸರಿ.

ಭರತ ಖಂಡವು ಒಕ್ಕಲಿಗರ ನಾಡು. ದ್ರಾವಿಡರೆಲ್ಲ ಒಕ್ಕಲಿಗರು. ಆಂದ ಮೇಲೆ ಅವರು ತಮ್ಮ ದೇವರಿಗೆ 'ಶಿವ' ಎಂಬ ಹೆಸರನ್ನಿಟ್ಟಿರಬಹುದು. ಆ ದೇವರಿಗೆ ಒಕ್ಕಲಿಗನ ರೂಪವನ್ನು ಕೊಟ್ಟಂತೆ ಕಂಡು ಬರುತ್ತದೆ. ದೇವರಿಗೆ ಮನುಷ್ಯ ರೂಪವನ್ನು ಕಲ್ಪಿಸಿದವರು ದ್ರಾವಿಡರೇ. ಆದರೆ ದೇವರು ಮತ್ಸ್ಯ, ಕೂರ್ಮ, ವರಾಹ, ಸಿಂಹ, ಆನೆ ಇತ್ಯಾದಿಯೆಂದು ತಿಳಿದವರು ಆರ್ಯರು. ಒಕ್ಕಲಿಗನಿಗೆ ಮುಖ್ಯವಾಗಿ ಬೇಕಾದುದು ಭೂಮಿ, ಮಳೆ, ಎತ್ತು, ಕೂರಿಗೆ. ಭೂಮಿಗೆ ಪಾರ್ವತಿಯೆಂದೂ, ಮಳೆಗೆ ಗಂಗೆಯೆಂದೂ, ಎತ್ತಿಗೆ ನಂದಿಯೆಂದೂ, ಕೂರಿಗೆಗೆ ತ್ರಿಶೂಲವೆಂದೂ ಅವರು ಹೆಸರಿಟ್ಟಿರಬಹುದು. ಆ ಶಿವನಿಗೆ ಇರಲಿಕ್ಕೆ ಮನೆಯು ಬೇಕೆಂದು ಹೊಳೆಗಳುಳ್ಳ ಪ್ರದೇಶಗಳಲ್ಲಿ ಗುಡಿಗಳನ್ನು ಕಟ್ಟಿದರು. ಮಾನವನ ಪ್ರಾಥಮಿಕಾವಸ್ಥೆಯಲ್ಲಿ ಇಷ್ಟೇ ಕಲ್ಪನೆಯಿರಲಿಕ್ಕೆ ಸಾಕು.

ಶಿವನಿಗೆ ಯಾವ ಆಕಾರವನ್ನು ಕಲ್ಪಿಸಿದರೆಂಬದನ್ನು ವಿಚಾರಿಸೋಣ. ಶಿವನು ಭರತ ಖಂಡದ ರೂಪವನ್ನೇ ಶಿವನಿಗೂ ಕೊಟ್ಟಿರಬೇಕು. ಅದು ಹೇಗೆಂದರೆ ಕೈಲಾಸ (ಹಿಮಾಲಯ) ಪರ್ವತವೇ ಗೋಲಕ, ಉತ್ತರ ಹಿಂದುಸ್ತಾನ, ಆಸಾಮು ಬ್ರಹ್ಮದೇಶಗಳೇ ಜಲಹರಿ, ದಕ್ಷಿಣವೇ ಪೀಠ, ಈ ರೀತಿಯಾಗಿ ಭರತ ಖಂಡವೆಂಬ ರಾಷ್ಟ್ರ ಪುರುಷನೇ ಗುಡಿಯಲ್ಲಿ ಮೂರ್ತಿಗೊಂಡು ಕುಳಿತಂತೆ ವಿಗ್ರಹಗಳನ್ನು ಸ್ಥಾಪಿಸಿದರು. ಈ ವಿಗ್ರಹಗಳಿಗೆ ಲಿಂಗಗಳೆಂದು ಹೆಸರಿಟ್ಟರು.. ಇಂಥ ವಿಗ್ರಹಗಳು ಅತಿ ಪ್ರಾಚೀನ ಕಾಲದವೆಂಬದು ಹರಪ್ಪಾ, ಮಹೇಂಜೆದಾರೋಗಳಲ್ಲಿ ಹೊರಟ ಅವಶೇಷಗಳಿಂದ ಕಂಡು ಬರುತ್ತದೆ.

ಶಿವ ಶಬ್ದವು ವೇದಗಳಲ್ಲಿಲ್ಲ. ಅದು ಮೊದಲು ಸಂಸ್ಕೃತ ಶಬ್ದವೇ ಆಗಿದ್ದಿಲ್ಲ. ಅದರಂತೆ ಆ ಶಿವನ ಕುರುಹಾದ ಲಿಂಗ ಶಬ್ದವೂ ವೇದಗಳಲ್ಲಿಲ್ಲ. ಸಂಸ್ಕೃತದಲ್ಲಿ 'ಲಿಂಗ' ಶಬ್ದದ ಮೂಲಾರ್ಥವು 'ಶಿಶ್ನ'ವೆಂದಿರುವದರಿಂದ ಹಿಂದುಸ್ತಾನಕ್ಕೆ ಬಂದ ಆರ್ಯರು, ದ್ರಾವಿಡರು ಕರೆಯುವ ಆ ಲಿಂಗ ಶಬ್ದವನ್ನು ಕೇಳಿ ಲಿಂಗಗಳಿಗೆ 'ಶಿಶ್ನದೇವಾಃ' ಎಂದು ಹಾಸ್ಯವಾಡಿದಂತೆ ಕಂಡು ಬರುತ್ತದೆ. ಇಂಗ್ಲಿಷಿನಲ್ಲಿ ಆಣೆಕಲ್ಲಿಗೆ 'ಹೇಲ್' ಎಂದೆನ್ನುವರು.

ಯಾರಾದರೂ "ಇಂಗ್ಲಂಡಿನಲ್ಲಿ 'ಹೇಲ್' ಬೀಳುತ್ತದೆ." ಎಂದು ಹೇಳಿದರೆ ಅದನ್ನು ಕೇಳಿ ಕನ್ನಡಿಗರು ಹಾಸ್ಯವಾಡಬಹುದಲ್ಲವೇ? ಅದರಂತೆ ಆರ್ಯ ದ್ರಾವಿಡರಲ್ಲಿ ಲಿಂಗ ಶಬ್ದವು ಭಿನ್ನಾರ್ಥದಲ್ಲಿದ್ದರೂ ಅದು ಆರ್ಯರಿಗೆ ಕುಚೇಷ್ಟೆಯ ಸಾಧನವಾಯಿತು. ಆ ವೇದದ ಅರ್ಥವನ್ನು ನೋಡಿ ಎಷ್ಟೋ ಅರಣ್ಯ ಪಂಡಿತರು ಲಿಂಗಗಳ ಆಕಾರವನ್ನು ಮನಸ್ಸಿನಲ್ಲಿ ತಂದು ಮೇಲಿನ ಗೋಲಕವು ಶಿಶ್ನವೆಂದೂ ಕೇಳಗಿನ ಪೀಠವು ಯೋನಿಯೆಂದೂ ಲಿಂಗ ಪೂಜಕರು ಶಿಶ್ನದೇವ ಪೂಜಕರೆಂದೂ ಅಪಾರ್ಥಮಾಡಿದಂತೆ ಕಂಡುಬರುತ್ತದೆ. ಆರ್ಯರು ದ್ರಾವಿಡರ ವೈರಿಗಳಾದ್ದರಿಂದ ಲಿಂಗ ಶಬ್ದಾರ್ಥದ ಮೂಲಕ ಆ ತರಹದ ಕುಚೇಷ್ಟೆ ಮಾಡಲು ಅವಕಾಶವುಂಟಲ್ಲದೆ ನಿಜವಾಗಿ ಲಿಂಗ ವಿಗ್ರಹಗಳು ಯೋನಿ ಶಿಶ್ನಗಳ ಚಿಹ್ನಗಳೆಂದು ಭಾವಿಸುವದು ಅತ್ಯಂತ ಲಾಂಛನಾಸ್ಪದವಾಗಿದೆ.

ಆರ್ಯರು ಮೊಟ್ಟಮೊದಲು ಲಿಂಗಗಳಿಗೆ 'ಶಿಶ್ನದೇವಾಃ' ಎಂದು ಕರೆಯಲಾರಂಭಿಸಲು ದ್ರಾವಿಡರು ಸಂತಪ್ತರಾಗಿ ಆರ್ಯರನ್ನು ಸಂಹಾರ ಮಾಡಿ ರಕ್ತದ ಕಾವಲಿಗಳನ್ನು ಹರಿಸಿರಬಹುದು. ಎತ್ತ ನೋಡಿದತ್ತ ರುಧಿರದ ಭೀಷಣ ದೃಶ್ಯವೇ ಕಂಡುಬರಲು ಆರ್ಯರು ಅತ್ಯಂತ ಭಯಭೀತರಾಗಿ ಶಿವನಿಗೆ ರುದ್ರ (ರುಧಿರ)ನೆಂಬ ಹೆಸರಿನಿಂದ ಕರೆಯಲಾರಂಭಿಸಿದರು. ರುದ್ರನೆಂದರೆ ಭೀಕರ ಅಥವಾ ಭಯಂಕರ. ದ್ರಾವಿಡರು ಆರ್ಯರಿಗೆ ಭೀಕರವಾಗಿ ಕಂಡದ್ದರಿಂದ ಅವರಿಗೆ ಅಸುರರೆಂದೂ ಶಿವನೂ ಭಯಂಕರನಾಗಿ ತೋರಿದ್ದರಿಂದ ರುದ್ರನೆಂದೂ ಅವರು ಕರೆಗರು. 'ಶಿಶ್ನದೇವಾಃ' ಮತ್ತು 'ರುದ್ರ' ಈ ಶಬ್ದಗಳು ವೇದಗಳಲ್ಲಿ ಕಂಡುಬರುತ್ತವೆ. ವೇದಗಳಲ್ಲಿ ದ್ರಾವಿಡರಿಗೆ ಕಳ್ಳರು, ನೀಚರು, ಕಾಡರು, ಪಶುಗಳು ಎಂದು ಕರೆದಂತೆ ರುದ್ರನನ್ನೂ ಸ್ತೇನಾನಾಂ ಪತಿಃ, ತಸ್ಕರಾಣಾಂ

ಪತಿಃ, ಅರಣ್ಯಾನಾಂ ಪತಿಃ, ಪಶೂನಾಂ ಪತಿಃ ಇತ್ಯಾದಿಯಾಗಿ ವರ್ಣಿಸಿದ್ದುಂಟು. ದ್ರಾವಿಡರು ಆರ್ಯರಿಗೆ ನೊದಲು ಚೆನ್ನಾಗಿ ಕೈತೋರಿಸಿದ್ದರಿಂದಲೇ ಅವರ ದೇವರನ್ನು ಕಂಡರೆ ಆರ್ಯರಿಗೆ ಅತ್ಯಂತ ಭೀತಿಯುಂಟಾಯಿತು. ಆ ಭಯದಿಂದ ಅವರು ರುದ್ರನನ್ನು ಮರೆ ಹೊಕ್ಕು ಆರಾಧಿಸಿದಂತೆ ಕಂಡುಬರುತ್ತದೆ. 'ರುದ್ರ' ಶಬ್ದವನ್ನು ಉಚ್ಚರಿಸಲಿಕ್ಕೆ ಮತ್ತು ಉಚ್ಚರಿಸಿದ್ದನ್ನು ಕೇಳಲಿಕ್ಕೆ ಆರ್ಯರು ಅಂಜಿ ಗದಗದ ನಡಗುತ್ತಿದ್ದರೆಂದು ವೇದಗಳಲ್ಲಿ ವರ್ಣನೆಯಿದೆ. ಅಂದಮೇಲೆ ಲಿಂಗಗಳಿಗೆ 'ಶಿಶ್ನದೇವಾಃ' ಎಂದು ಕರೆದ ತಪ್ಪೇ ಆರ್ಯರಿಗೆ ಮುಳುವಾಯಿತು. ರುದ್ರನೆಂದರೆ ಅವರ ಎದೆ ಕೈಕಾಲುಗಳು ಥರಥರ ನಡಗುತ್ತಿದ್ದವು.

ಮುಂದೆ ಆರ್ಯರು ತಮ್ಮ ಮುಂಗಗುಣಕ್ಕನುಸರಿಸಿ ಶಿವನಿಗೆ ಜೇಷ್ಠೆಮಾಡದೆ ಬಿಟ್ಟಿಲ್ಲ. ಯಜ್ಞದಲ್ಲಿ ಆಹುತಿಯನ್ನರ್ಪಿಸುವಾಗ ಇಂದ್ರಾದಿ ದೇವತೆಗಳಿಗೆ ಮೊದಲು ಕೊಟ್ಟು ಎಲ್ಲ ತೀರಿದನಂತರ 'ರುದ್ರಾಯ ಪಶುಪತಯೇ ಸ್ವಾಹಾ' ಎಂದು ಬರಿಗೈ ತೋರಿಸಿ ಹಾಸ್ಯವಾಡುತ್ತಿದ್ದರು. ಬರಬರುತ್ತ ಆರ್ಯರು ಶಿವನಿಗೆ ಜೇಷ್ಠೆಗಾಗಿ ಸ್ಮಶಾನವಾಸಿ, ಕೃತ್ತಿವಾಸ, ಸಂಹಾರಕರ್ತ, ರುಂಡಮಾಲಾಧಾರಿ ಇತ್ಯಾದಿ ಹೆಸರುಗಳಿಂದ ಕರೆಯಲಾರಂಭಿಸಿದರು. ಆರ್ಯರಿಗೆ ಶಿವನು ಎಷ್ಟು ಭೀಕರನಾಗಿ ಕಂಡರೂ ಶೈವರಿಗೆ ಅರ್ಥಾತ್ ದ್ರಾವಿಡರಿಗೆ ಆತನು ಸರ್ವ ಮಂಗಳಕರನೂ ಕರುಣಾಸಮುದ್ರನೂ, ಶಾಂತಿಸಾಗರನೂ, ಮೋಕ್ಷದಾಯಕನೂ ಆಗಿದ್ದಾನೆ. ಅದರಂತೆಯೇ ದ್ರಾವಿಡರು ಶಿವನ ಗುಣಗಳನ್ನು ಎಲ್ಲೆಡೆಯಲ್ಲಿಯೂ ಜೋರಾಗಿ ಪ್ರಚಾರ ಮಾಡಹತ್ತಿದರು.

ಮುಂದೆ ಶೈವಪಂಥವು ಹೆಚ್ಚಾಗಿ ಬೆಳೆಯುತ್ತ ಹೋದಹಾಗೆ ಎಷ್ಟೋ ಆರ್ಯ ಋಷಿಗಳು ಆ ಪಂಥದಲ್ಲಿ ಸೇರಿಕೊಂಡರು. ಶಿವನು ಅವರಿಗೆ ಆರಾಧ್ಯ ದೇವತೆಯಾದನು. ಆ ಋಷಿಗಳು ಎಷ್ಟೋ ಉಪನಿಷತ್ತುಗಳನ್ನು ರಚಿಸಿದರು. ಆ ಉಪನಿಷತ್ತುಗಳಲ್ಲಿ ಶಿವನಿಗೆ ಪರಬ್ರಹ್ಮ ಸ್ಥಾನವು ಕೊಡಲ್ಪಟ್ಟಿತು. 'ಏಕೋ ಹಿ ರುದ್ರೋ ನ ದ್ವಿತೀಯಃ' ಎಂದು ಆರ್ಯ ಋಷಿಗಳು ಹಾಡಿಕೊಂಡರು. ಶ್ವೇತಾಶ್ವತರೋಪನಿಷತ್ತಿನಲ್ಲಿ ಶಿವನೇ ಪರವಸ್ತುವೆಂದು ಸಾರಿದ್ದಾಯಿತು. ಆಗಮಕಾಲದಲ್ಲಂತೂ ಶಿವನೇ ಸರ್ವಾಗಮಗಳ ಅಧಿನಾಯಕನಾದನು. ಎಷ್ಟೋ ಪುರಾಣ

ಗಳು ಶಿವೋಪಾಸನೆಯನ್ನೂ ಶಿವಲೀಲೆಗಳನ್ನೂ ಕೊಂಡಾಡಲಾರಂಭಿಸಿದವು. ಸ್ಥಾವರಲಿಂಗ ಪೂಜೆಯು ಹಾಸ್ಯಕ್ಕೆ ಗುರಿಯಾಗದೆ ಎಲ್ಲರ ಭಕ್ತಿ ಭಾವನೆಗಳಿಗೆ ಇಂಬುಗೊಟ್ಟಿತು. ಅಲ್ಲಲ್ಲಿ ಅನೇಕ ಶಿವಾಲಯಗಳು ಸ್ಥಾಪಿತವಾದವು. ವೇದಾಂತದಲ್ಲಿ ಪ್ರತಿಪಾದಿಸುವ 'ಶಿವಜೀವೈಕ್ಯ' ಶಬ್ದದಿಂದ ಶಿವನ ಪರಬ್ರಹ್ಮಸ್ವರೂಪವನ್ನು ಒಪ್ಪಿಕೊಂಡದ್ದಾಯಿತು. ಎಷ್ಟೋ ಬ್ರಾಹ್ಮಣರು ಶಿವನು ಬ್ರಾಹ್ಮಣ, ವಿಷ್ಣು ಕ್ಷತ್ರಿಯ, ಬ್ರಹ್ಮ ವೈಶ್ಯ, ಇಂದ್ರ ಶೂದ್ರನೆಂದು ಪ್ರತಿಪಾದಿಸಹತ್ತಿದರು. ಹರಿಹರರಲ್ಲಿ ಯಾರು ಹೆಚ್ಚೆಂಬ ಬಗ್ಗೆ ವಾಗ್ವಾದಗಳಾಗಿ ಹರನೇ ಅಧಿಕನೆಂದು ಬಹುಜನ ಪಂಡಿತರು ಪ್ರತಿಪಾದಿಸಿದರು. ಸೋತಂಥ ಕೆಲವು ಪಂಡಿತರು ಹರಿ ಹರರಲ್ಲಿ ಭೇದವನ್ನೆಣಿಸಬಾರದೆಂದು ಸಾರಿದರು. ಅಂತು ಯಾವ ಶಿವನಿಗೆ ವೇದಕಾಲದಲ್ಲಿ ಕೀಳ್ಪೆಶಿಯುಂಟಾಗಿದ್ದಿತೋ ಆತನೇ ಪುರಾಣ ಕಾಲದಲ್ಲಿ ಅತ್ಯಂತ ಶ್ರೇಷ್ಠ ದೇವತೆಯಾದನು. ಯಾವ ಇಂದ್ರನು ವೇದಕಾಲದಲ್ಲಿ ಅತ್ಯಂತ ಶ್ರೇಷ್ಠ ದೇವತೆಯಾಗಿದ್ದನೋ, ಯಾವನಿಗೆ ಅಗ್ರ ಆಹುತಿಯು ದೊರೆಯುತ್ತಿದ್ದಿತೋ, ಆತನು ಪುರಾಣಕಾಲದಲ್ಲಿ ಕನಿಷ್ಟ ದೇವತೆಯಾಗಿ ಶಿವ ವಿಷ್ಣುಗಳಿಗೆ ತಲೆವಾಗುವ ಪ್ರಸಂಗಬಂದಿತ.

ವೈಷ್ಣವ ಮತವು ಅರ್ಥಾತ್ ದ್ವೈತ ಸಿದ್ಧಾಂತವು ಶಿವಜೀವರಲ್ಲಿ ಭೇದವನ್ನು ಕಲ್ಪಿಸಿದರೂ ಶೈವಮತವು ಶಿವಜೀವರಲ್ಲಿ ಅಭೇದವನ್ನು ಸಾರಿ ಅದ್ವೈತ ಮತದ ಶ್ರೇಷ್ಠತೆಯನ್ನು ಜಗತ್ತಿಗೆ ಕಲ್ಪಿಸಿ ಕೊಟ್ಟಿತು.

ಈ ಪರಬ್ರಹ್ಮಸ್ವರೂಪಿಯಾದ ಶಿವನೇ ಮಹಾಲಿಂಗವೆಂದೂ ಆ ಜೀವನೇ ಅಂಗನೆಂದೂ ಹೆಸರಿಟ್ಟು ವೀರಶೈವ ಮತವು ಅದ್ವೈತ ಮತದಲ್ಲಿ ಕ್ರಾಂತಿಯನ್ನು ಮಾಡಿ 'ಶಕ್ತಿವಿಶಿಷ್ಟಾದ್ವೈತ'ವೆನಿಸಿಕೊಂಡಿತು. ಆ ಮಹಾಲಿಂಗವು ಚಿಚ್ಛಕ್ತಿಯನ್ನು ಕೂಡಿಕೊಂಡು ಭಾವ-ಪ್ರಾಣ ಇಷ್ಟ ರೂಪದಲ್ಲಿ ಜಗತ್ತಿನಲ್ಲಿ ವ್ಯಕ್ತವಾಯಿತು. ಅಂಗನು ಭಕ್ತ, ಮಹೇಶ, ಪ್ರಸಾದಿ, ಪ್ರಾಣಲಿಂಗಿ, ಶರಣ, ಐಕ್ಯ ಎಂಬ ಅವಸ್ಥೆಗಳುಳ್ಳಾತನಾಗಿ ಶ್ರದ್ಧಾ-ನಿಷ್ಠಾ-ಅವಧಾನ-ಅನುಭವ-ಸಮರಸ ಆನಂದಗಳೆಂಬ ಷಡ್ವಿಧ ಭಕ್ತಿಗಳಿಂದ ಕ್ರಮೇಣ ಆ ಇಷ್ಟ-ಪ್ರಾಣ-ಭಾವಲಿಂಗಗಳಲ್ಲಿ ಬೆರೆಯುತ್ತ ನಿರ್ವಯಲ ಸಮಾಧಿಯನ್ನು ಹೊಂದುವನೆಂಬ ಮತತತ್ವವು ಬೆಳಕಿಗೆ ಬಂದಿತು. ಇಂಥ ಶಿವನೇ ಅರ್ಥಾತ್ ಮಹಾಲಿಂಗವೇ ವೀರಶೈವರು ಆರಾಧಿಸುವ ಪರಾದೇವತೆಯು. ವೀರಶೈವರ ಶಿವನು ವೇದಗಳಲ್ಲಿ

ಹೇಳುವ 'ಶಿಶ್ನದೇವ'ನಲ್ಲ, ರುದ್ರನೂ ಅಲ್ಲ. ಪುರಾಣಕಾಲದಲ್ಲಿ ಹೇಳುವ ಸೃಷ್ಟಿಸಂಹಾರಕನೂ ಅಲ್ಲ. ಪಾರ್ವತೀಪತಿಯಲ್ಲ. ಗಣಪತಿ ಷಣ್ಮುಖರ ತಂದೆಯಲ್ಲ. ಶೈವರು ತೀರ್ಥಕ್ಷೇತ್ರಗಳಲ್ಲಿ ಸ್ಥಾಪಿಸಿದ ಆರಾಧ್ಯ ಸ್ಥಾವರ ಲಿಂಗವೂ ಅಲ್ಲ. ವೀರಶೈವರ ಶಿವನು ವ್ಯಕ್ತಿಗತವಾದ ಇಷ್ಟಲಿಂಗವು ಸಾಮೂಹಿಕವಾದ ಸ್ಥಾವರಲಿಂಗವಲ್ಲ. ಶ್ರೀಗುರುವು ತ್ರಿವಿಧ ದೀಕ್ಷೆಯಿಂದ ಶಿಷ್ಯನ ಮಸ್ತಕದ ಚಿತ್ಕಳೆಯನ್ನು ಉರಸ್ಥಲಕ್ಕೆ ತಂದು ಅಲ್ಲಿಂದ ಅದನ್ನು ಕರಸ್ಥಲಕ್ಕೆ ಕರುಣಿಸಿಕೊಟ್ಟ ಚಿಹ್ನವೇ ಇಷ್ಟಲಿಂಗವು. ಆ ಕರಸ್ಥಲದ ಇಷ್ಟಲಿಂಗವನ್ನು ಭಕ್ತನು ಬಾಹ್ಯದಲ್ಲಿ ಪೂಜಿಸಿ ಪ್ರಾಣದಲ್ಲಿ ಅನುಸಂಧಾನ ಮಾಡಿ ಭಾವದಲ್ಲಿ ಬೆರೆದು ತನ್ಮಯನಾಗುವದೇ ಪರತರಾನಂದವು. ಅದೇ ಐಕ್ಯವು ಅಥವಾ ಮೋಕ್ಷವು. ಇಂಥ ಲಿಂಗವೇ ಶಿವನೆಂದೂ ಇಂಥ ಶಿವನೇ ಸರ್ವ ದೇವ ಶಿಖಾಮಣಿಯೆಂದೂ ವೀರಶೈವರು ಹೇಳುವದುಂಟು.

ಶಿವನೇ ಸರ್ವೋತ್ತಮನೆಂದು ತಿಳಿದು ಆಚರಿಸುವವರು ವೀರಭಕ್ತರೆನಿಸಿಕೊಳ್ಳುವರು. ನಿಜವಾದ ವೀರಶೈವನು ಮೇಲೆ ನಿರೂಪಿಸಿದ ಲಿಂಗವನ್ನೇ ಪರಶಿವನೆಂದು ಆಚರಿಸಿದರೆ ಅವನಿಗೇ ವೀರಭಕ್ತನೆನ್ನಬೇಕು. ಹಾಗೆ ಆಚರಿಸುವದು ವೀರಶೈವನ ಮುಖ್ಯ ಕರ್ತವ್ಯವಾಗಿದೆ.

ಗುರು ಲಿಂಗ ಜಂಗಮ.

(ಲೇಖಕ:— ಬಸಪ್ಪ ಚೆನ್ನಪ್ಪ ಪಟ್ಟೇದ.)

(೪)

(ಹಿಂದಿನ ಸಂಚಿಕೆಯಿಂದ ಮುಂದೆಸಾಗಿದ್ದು.)

ಹುಸಿಯು ನುಡಿಯಲು ಬೇಡಃ— ಭಕ್ತರು ಹುಸಿ ನುಡಿಯುವದನ್ನು ಸರ್ವದಾ ತ್ಯಜಿಸಬೇಕು. ಅತ್ಯಂತ ಸತ್ಯವೂ ನಿತ್ಯವೂ ಆದ ಪರಮಾತ್ಮ ಸ್ವರೂಪವನ್ನು ಭಜಿಸಿ, ತದ್ರೂಪತೆಯ ಪಡೆಯ ಬಯಸುವ ಭಕ್ತಂಗೆ ಹುಸಿಯೊಡನಾಟವು ಅತ್ಯಂತ ಲಜ್ಜಾಸ್ಪದವಾದುದು. ಈ ಬಗ್ಗೆ ವಚನಕಾರರು ಹೇಳುವದನ್ನು ಆಲಿಸಿರಿ:—

೧ "ದಿಟವ ನುಡಿವುದು, ನುಡಿದಂತೆ ನಡೆವುದು, ಹುಸಿಯ ನುಡಿದು ತಪ್ಪುವ ಪ್ರಪಂಚಿಯನೊಲ್ಲ ಕೂಡಲ ಸಂಗಮದೇವ"

೨ "ಸತ್ಯವಿಲ್ಲದವರೊಡನೆ ಸಹಸ್ರಕ್ಕೊಮ್ಮೆ, ಲಕ್ಷಕ್ಕೊಮ್ಮೆ, ಕೋಟಿಗೊಮ್ಮೆಯಾದರೂ ನುಡಿಯಲಾಗದು. ಸುಡಲಿ ಅವರೊಡತನ ಮಾರಿಹೋಗಲಿ ಗುಹೇಶ್ವರ"

೩ "ಸತ್ಯದಲ್ಲಿ ನಡೆವುದು ಶೀಲ, ಸತ್ಯದಲ್ಲಿ ನುಡಿವುದು ಶೀಲ, ಸತ್ಯ ಸದಾಚಾರಗಳಲ್ಲಿ ವರ್ತಿಸಿ ಸತ್ಯವನರಿವುದೇ ಶೀಲ, ಕಾಣಿರೊ! ಮಹಾಲಿಂಗ ಗುರು ಶಿವಸಿದ್ಧೇಶ್ವರ ಪ್ರಭುವೇ—"

ಹೀಗೆ ವಿಧವಿಧವಾಗಿ ಅನೇಕರು ಹಾಡಿದ್ದಾರೆ. ಆದರೂ ಈಗ ಹುಸಿ ನಡೆನುಡಿಗಳಿಗೆ ಅಳತೆಯೇ ಇಲ್ಲದಾಗಿದೆ. ವ್ಯವಹಾರದಲ್ಲಿಯೂ ಕೋರ್ಟ ಕಚೇರಿಗಳಲ್ಲಿಯೂ ಸುಳ್ಳು ಮಾತಿನ ಸಾಕ್ಷಿಗಳನ್ನು ಬೇಕಾದಷ್ಟು ಕಾಣಬಹುದು. ಅಲ್ಪ ಸ್ವಲ್ಪ ಆಸೆ ತೋರಿಸಿದರೆ ಸಾಕು, ಸುಳ್ಳಿಗೆ ಸಂಪೂರ್ಣ ವೈಗೊಡುವರು. ಇದು ಭಕ್ತರಿಗೆ ಬಹು ಬಾಧಕವು. ಆದುದರಿಂದ ಹುಸಿಯನ್ನು ಬಿಟ್ಟು ಯಾವಾಗಲೂ ಸತ್ಯವಾದ ನಡೆನುಡಿಗಳನ್ನೇ ಅನುಸರಿಸಬೇಕು. ವ್ಯವಹಾರೋದ್ಯೋಗಗಳಲ್ಲಿ ಬಹಳ ಪ್ರಾಮಾಣಿಕತನದಿಂದ ನಡೆಯಬೇಕು. ಸತ್ಯಕ್ಕಿಂತ ಮಿಗಿಲಾದ ಧರ್ಮವೇ ಇಲ್ಲ. "ಸತ್ಯದಿಂದಲೆ ಜಗದ ಸಂಸ್ಥಿತಿ, ಸತ್ಯದಿಂದಲೆ ಧರ್ಮ ಸಂಸ್ಥಿತಿ....." ಇತ್ಯಾದಿ ಅದನ್ನು ಹೋಗಳಿದ್ದಾರೆ.

ಮುನಿಯಬೇಡಃ— ಮುನಿಯುವದೆಂದರೆ ಸಿಟ್ಟಾಗುವದು. ಸಿಟ್ಟು ಕಾಮದ (ಆಶೆಯ) ಕೂಸು. "ಕಾಮಾತ್ಕ್ರೋಧೋಽಭಿಜಾಯತೇ" ಎಂದು ಭಗವದ್ಗೀತೆಯು ಹೇಳುತ್ತದೆ. ಭಕ್ತರು ಅಹಂಕಾರ ಆಶೆಗಳನ್ನು ತೊರೆದು ಲಿಂಗೈಕ್ಯರಾಗಲಿಕ್ಕೆ ಹವಣಿಸುವರು. ಆದುದರಿಂದ ಲೌಕಿಕ ಹಾನಿವೃದ್ಧಿಗಳಿಗೆ ಅಷ್ಟೊಂದು ವೈಗೊಡದೆ, ತಮ್ಮ ಗುರಿಯ ಕಡೆಗೇ ಹೆಚ್ಚಾಗಿ ಗಮನಿಸಬೇಕು. ಅದಕ್ಕೆ ಸಹಾಯವಾಗಬೇಕಾದರೆ ಅವರು ಮುನಿಸನ್ನು ನೀಗಲೇಬೇಕು. ಸಾಧಕರಿಗೆ ಕೋಪವು ಅತ್ಯಂತ ಘಾತಕವು. ಭಕ್ತರು ನಿರಂತರ ಶಾಂತಿ ಸೈರಣೆಗಳನ್ನು ಅನುಸರಿಸುವದರಲ್ಲಿಯೇ ಇಷ್ಟವುಳ್ಳವರಾಗಿರಬೇಕು. ಸಿಟ್ಟಿನ ವಿಷಯದಲ್ಲಿ ಶ್ರೀ ಬಸವಣ್ಣನವರು:—

"ತನಗೆ ಮುನಿವರಿಗೆ ತಾನು ಮುನಿಯಲೇಕಯ್ಯ! ತನಗಾದ ದೇನು? ಅವರಿಗಾದದೇನು? ತನುವಿನ ಕೋಪ ತನ್ನ ಹಿರಿಯತನವ ಕೇಡು, ಮನದ ಕೋಪ ತನ್ನ ಅರುವಿನ ಕೇಡು. ಮನೆಯೊಳಗಣ ಕಿಚ್ಚು ಮನೆಯ ಸುಟ್ಟಲ್ಲದೆ ನೆರೆಮನೆಯ ಸುಡದು. ಕೂ. ಸಂ. ದೇವ" ಎಂದು ಹೇಳಿದ್ದಾರೆ. ಭಕ್ತರಾದವರೆಲ್ಲರು ಶಿವಸ್ವರೂಪವಾಗಿರುವದರಿಂದ ಯಾರು ಯಾರಮೇಲೆ ಸಿಟ್ಟಾಗಬೇಕು? ಕೋಪಗೊಳ್ಳುವದು ಅಜ್ಞಾನದ ಗುರುತು. ಇವರಂತೆಯೇ ಅನ್ಯರು ತನ್ನನ್ನು ನಿಂದಿಸಿದರೂ ಕೂಡ ಎಷ್ಟುಮಾತ್ರವೂ ಸಿಟ್ಟಿಗೇಳದೆ ಶಾಂತರೀತಿಯಿಂದ ಸಹಿಸಬೇಕೆಂದು ಅಣ್ಣನವರು ಹೇಳಿರುವರು.—

"ಕಾಣದ ತಾವಿನಲ್ಲಿ ಜರಿದರೆಂದರೆ, ಕೇಳಿ ಪರಿಣಾಮಿಸಬೇಕು. ಅದೇನು ಕಾರಣ? ಕೊಳ್ಳದೆ ಕೊಡದೆ ಅವರಿಗೆ ಸಂತೋಷವಾಗುವದಾಗಿ. ಎನ್ನ ಮನದ ತದ್ವೇಷವಳಿದು ನಿಮ್ಮ ಶರಣರಿಗೆ ಶರಣೆಂಬುದ ಕರುಣಿಸು ಕೂ. ಸಂ. ದೇ."

ಇವುಗಳನ್ನು ಲಕ್ಷಿಸಿದರೆ ಯಾವ ಕಾರಣದಿಂದಲೂ ಸಿಟ್ಟಿನ ಕೈಯಲ್ಲಿ ಬುದ್ಧಿಕೊಡಬಾರದೆಂಬುದು ಸ್ಪಷ್ಟವಾಗುತ್ತದೆ. ಸಿಟ್ಟಿನ ಯೋಗದಿಂದ ಸಮಾಜದಲ್ಲಿ ಅದೆಂತಹ ಭಯಂಕರ ಅನಾಹುತಗಳಾಗುತ್ತವೆಂಬದನ್ನು ದಿನಾಲು ನೋಡೇನೋಡುತ್ತೇವೆ. ಆ ಕಾರಣ ಯತ್ನ ಪೂರ್ವಕ ಸಿಟ್ಟನ್ನು ತೊರೆಯುವದೇ ಇಷ್ಟವಾದುದು.

ಅನ್ಯರಿಗೆ ಅಸಹ್ಯಪಡಬೇಡಃ— ಭವಿಗಳಲ್ಲಿ ಉಚ್ಚತ್ವ ನೀಚತ್ವ ಸ್ಪೃಶ್ಯಾಸ್ಪೃಶ್ಯತೆಗಳು ಇರುವವಷ್ಟೇ! ಅವೆಲ್ಲ ಅಹಂಕಾರದ ಪರಮಾವಧಿ ಲಕ್ಷಣ. ಅನ್ಯರು ತನಗಿಂತ ಕೀಳಾದವರೆಂದು ತಿಳಿದು ಅವರನ್ನು ಎಂದೂ ಹೀಯಾಳಿಸಬಾರದು. ನಿಜವಾಗಿ ಯಾರೂ ಮೇಲಲ್ಲ ಕೀಳಲ್ಲ; ಎಲ್ಲರೂ ಸಂಸಮಾನರು. ಈ ವಿಷಯವಾಗಿ ವಚನ ಶಾಸ್ತ್ರವು ಹೇಳುವದೇನಂದರೆ:—

೧. "ಎಂತಹನಾದಡೇನು? ಲಿಂಗ ಮುಟ್ಟಿದವನೇ ಕೀಳುಜಾತಿ. ಕುಲವಹುದು ತಪ್ಪದು ಲಿಂಗ ಮುಟ್ಟಲೊಡನೆ ..... ಕೂ. ಸಂ. ದೇವ."

೨. "ಹೊಲೆ ಗಂಡಲ್ಲದೆ ಪಿಂಡದ ನೆಲೆಗೆ ಆಶ್ರಯವಿಲ್ಲ. ಜಲ ಬಿಂದುವಿನ ವ್ಯವಹಾರ ಒಂದೇ. ಆಕೆ ಅಮಿಷ ಹರುಷ ವಿಷಯಾದಿ

ಗಳೆಲ್ಲ ಒಂದೇ. ಏನನೋದಿ ಏನು ಕೇಳಿದರೇನು ಫಲ? ಕುಲಜನೆಂಬುದಕ್ಕೆ ಆವುದು ದೃಷ್ಟ?.....ಕೂ. ಸಂ. ದೇವ ಲಿಂಗಸ್ಥಲವನರಿದವನೇ ಕುಲಜ".

ಎಂದು ಅಣ್ಣನವರು ಸ್ಪಷ್ಟವಾಗಿ ಹೇಳಿಬಿಟ್ಟಿದ್ದಾರೆ. ಹುಟ್ಟಿನಿಂದ ಎಲ್ಲರೂ ಸಮಾನರಾಗಿರುವರು. ಅವರಲ್ಲಿ ಅನೇಕರು ವೇದಶಾಸ್ತ್ರಾದಿಗಳನೋದಿದರೂ ಕೇಳಿದರೂ ಕೂಡ, ಲಿಂಗಮುಟ್ಟದಿದ್ದರೆ (ಆತ್ಮೋದ್ಧಾರವಾಗುವ ಸುಜ್ಞಾನ ಸದಾಚಾರಿಗಳು ಪ್ರಾಪ್ತಿಸದಿದ್ದರೆ) ಅದೆಲ್ಲ ವ್ಯರ್ಥವೆಂದೂ, ಅವರು ಇತರರಿಗಿಂತ ಮೇಲಾದವರಾಗರೆಂದೂ ಅಪ್ಪಣೆ ಕೊಡಿಸಿದ್ದಾರೆ. ಅಂದಮೇಲೆ ಅನ್ಯರನ್ನು ತಿರಸ್ಕರಿಸುವ ಹಕ್ಕು ಅದಾರಿಗೆ ಬರುವದು? ಪರಿಣತ ಜ್ಞಾನಿಗಳಂತೂ ಎಲ್ಲವನ್ನೂ ಐಕ್ಯರೂಪದಲ್ಲಿ ಕಾಣುವದಲ್ಲವೇ? ಒಟ್ಟಿಗೆ ಜ್ಞಾನಿಗಳಿರಲಿ, ಅಜ್ಞಾನಿಗಳಿರಲಿ, ಯಾರೂ ಪರರ ವಿಷಯವಾಗಿ ಅಸಹ್ಯಪಡಲಿಕ್ಕೆ ಕಾರಣವೇ ಇಲ್ಲ. ಇದಲ್ಲದೆ—

"ಮಡದಿಯ ಪ್ರಾಣಕ್ಕೆ ಮೊಲೆ ಮುಡಿ ಇದ್ದಿತ್ತೇ? ಒಡೆಯರ ಪ್ರಾಣಕ್ಕೆ ಇದ್ದಿತ್ತೇ ಯಜ್ಞೋಪವೀತ! ಕಡೆಯಲ್ಲಿದ್ದ ಅಂತ್ಯಜನು ಹಿಡಿದಿದ್ದನೇ ಕೈಯಲ್ಲಿ ಹಿಡಿಗೋಲ? ನೀನಿಕ್ಕಿದ ತೊಡಕನು ಈ ಲೋಕದ ಜಡರೆತ್ತ ಬಲ್ಲರು ರಾಮನಾಥ! "

ಎಂದು ದೇವರದಾಸಿಮಯ್ಯಗಳು ಕೇಳುತ್ತಾರೆ.— ಇವೆಲ್ಲ ಮಾನವ ಕೃತ ಭೇದಗಳು; ನಿಜವಾದುದಲ್ಲ. ಕೇವಲ ಸ್ವಾರ್ಥಪರ ಕಲ್ಪನೆಗಳು. ಇಂತಹ ಭೇದಭಾವನೆಯೇ ಮಾಯಾಮಲವೆಂದು ಹೇಳಲ್ಪಡುತ್ತದೆ. ತ್ರಿಮಲಗಳಲ್ಲಿ ಅದೊಂದಾಗಿದೆ. ನಿರ್ಮಾಯನಾಗುವದೇ ಭಕ್ತನ ಕರ್ತವ್ಯ. ಆಕಾರಣ ಸರ್ವರನ್ನು ಮುಖ್ಯವಾಗಿ ಭಕ್ತರನ್ನು ಸಮಭಾವನೆಯಿಂದಲೇ ಕಾಣುವದು ಅತ್ಯವಶ್ಯ. ನಮ್ಮ ಪಂಚಾಚಾರವಾದರೂ ಇದನ್ನೇ ಹೇಳುತ್ತದೆ. ಬಸವಣ್ಣನವರು:—

"ವಿಭೂತಿ ರುದ್ರಾಕ್ಷಿಯುಳ್ಳವರ ಲಿಂಗವೆಂಬೆ. ಅಂಗಲಿಂಗ ಸಹಿತ ಮನೆಗೆ ಬಂದರೆ ನೀನೆಂದು ನಂಬುವುದೆನ್ನ ಮನವು"

ಎಂದು ಪ್ರೇಯುಬ್ಬಿ ಹಾಡಿಕೊಂಡಿದ್ದಾರೆ. ಆದುದರಿಂದ ಶಿವ ಭಕ್ತರು ಎಲ್ಲರಲ್ಲಿಯೂ ಆದರಣೆ ಸಹನೆಗಳುಳ್ಳವರಾಗಬೇಕು. ಒಬ್ಬರ

ಉತ್ಕರ್ಷದಿಂದ ತಾನು ಸಂತೋಷವುಳ್ಳವನಾಗಬೇಕೇ ವಿನಾ ಮತ್ಸ್ಯ ಗ್ರಸ್ತನಾಗಕೂಡದು. ಎಲ್ಲವೂ ತನಗೇ ಆಗಬೇಕೆಂಬ ರಾಕ್ಷಸೀಯ ಭಾವನೆಯುಳ್ಳ ಭವಿಗಳು ಮಾತ್ರ, ಅನ್ಯರ ಬಗ್ಗೆ ಅಸಹ್ಯತೆಯನ್ನು ಧರಿಸಬಹುದು. ವೀರಶೈವರು ಅದನ್ನು ಸಂಪೂರ್ಣ ವರ್ಜ್ಯ ಪಡಿಸಬೇಕ್ಕದ್ದು ಅತ್ಯವಶ್ಯ.

ತನ್ನ ಬಣ್ಣಿಸಬೇಡಃ— ಯಾರೇ ಆಗಲಿ, ತಮ್ಮ ಸ್ತುತಿಯನ್ನು ತಾವೇ ಮಾಡಿಕೊಳ್ಳುವದು ಎಷ್ಟುಮಾತ್ರವೂ ಸರಿಯಲ್ಲ. ಅದು ಅಹಂಕಾರವನ್ನೇ ವ್ಯಕ್ತಮಾಡುತ್ತದೆ. ಅಹಂಕಾರವು ಭಕ್ತರಿಗೆ ಎಂದೂ ಎಷ್ಟು ಮಾತ್ರವೂ ಸಲ್ಲದು. ಶ್ರೀಬಸವಣ್ಣನವರಂತೂ.—

"ಆತ್ಮಸ್ತುತಿ, ಪರನಿಂದೆ, ಕೇಳಿಸದಿರಯ್ಯ ನಿಮ್ಮ ಧರ್ಮ. ಆನು ಭಕ್ತನು, ಎನ್ನಲ್ಲಿ ಲೇಸುಂಟೆಂದು ಪರಿಣಾಮಿಸಿದರೆ ನಿಮಗಾನುದ್ಧಾರಿಯಯ್ಯ ಕೂ. ಸಂ. ದೇವಾ ನಿಮ್ಮ ಶರಣರ ಲೇಸೇ ಎನ್ನ ಲೇಸಯ್ಯ."

ಎಂದು ಬೇಡಿಕೊಂಡಿದ್ದಾರೆ. ಅನ್ಯರ ಗುಣಗಳನ್ನು ಕಂಡು ಬಣ್ಣಿಸುವದು ಲೌಕಿಕ ಸಾಂಪ್ರದಾಯವಾಗಿದ್ದರೂ, ಅದು ಕೂಡ ತ್ಯಾಜ್ಯವೆಂದೇ ಆ ಮಹಾನುಭಾವರು ತಮ್ಮ ಬೇರೊಂದು ವಚನದಲ್ಲಿ ವ್ಯಕ್ತಪಡಿಸಿ ಗೊಳಿಸಿದ್ದಾರೆಃ—

೧ "ಎನ್ನವರೊಲಿದು ಹೊನ್ನ ಶೂಲಕ್ಕೆ ಇಕ್ಕಿದರಯ್ಯ ಎನ್ನ ಹೊಗಳಿ ಹೊಗಳಿ. ಅಯ್ಯೋ ನಿಮ್ಮ ಮನ್ನಣೆಯೇ ಮುಸೆದಲಗಾಗಿ ತಾಗಿತ್ತಯ್ಯ. ಅಯ್ಯೋ ನೊಂದೆನು, ಸೈರಿಸಲಾರೆನು. ಕೂ. ಸಂ. ದೇವ"

೨ "ಎನ್ನವರೊಲಿದು ಹೊನ್ನ ಶೂಲಕ್ಕಿಕ್ಕಿದರಯ್ಯ! ಅಹಂಕಾರ ಪೂರಾಯ ಗಾಯದಲ್ಲಿ ಅದೆಂತು ಬದುಕುವೆನೆಂತು ಜೀವಿಸುವೆ! ಜಂಗಮವಾಗಿ' ಬಂದು ಜರಿದು ಶೂಲವನಿಳುಹಿ ಪ್ರಸಾದದ ಮುದ್ದನಿಕ್ಕಿ ಸಲಹು ಕೂ. ಸಂ. ದೇವ."

ತಾನು ಹೆಚ್ಚಿನವನೆಂದು ಭಕ್ತನು ಸಹಸಾ ಬಯಸಕೂಡದೆಂದು, ಈ ವಚನಗಳಿಂದ ಜಿನ್ನಾಗಿ ವ್ಯಕ್ತವಾಗುತ್ತದೆ. ಅವನು ಯಾವಾಗಲೂ ಭೃತ್ಯ (ವಿನಯ) ಭಾವವನ್ನೇ ತಾಳಬೇಕು. ನಮ್ಮ ಪಂಚಾಚಾರಗಳಲ್ಲಿ ಭಕ್ತರಿಗೆಲ್ಲ ಈ ಭೃತ್ಯಾಚಾರವು ಒಂದು ಮುಖ್ಯ ಆಚಾರವಾಗಿ ಬೋಧಿತವಾಗಿದೆ. ಇನ್ನು ಶ್ರೀ ಬಸವಣ್ಣನವರ ಭೃತ್ಯಾಚಾರವನ್ನು ನೋಡಿರಿ:—

"ಎನಗಿಂತ ಕಿರಿಯರಿಲ್ಲ, ಶಿವಭಕ್ತರಿಗಿಂತ ಹಿರಿಯರಿಲ್ಲ. ನಿಮ್ಮ ಪಾದ ಸಾಕ್ಷಿ, ಎನ್ನ ಮನ ಸಾಕ್ಷಿ. ಕೂ. ಸಂ. ದೇವಾ ಎನಗಿದೇ ದಿಬ್ಯ"

ಈ ವಚನದಲ್ಲಿ ಅಣ್ಣನವರು ವ್ಯಕ್ತಪಡಿಸಿದಂತೆ ಪ್ರತಿಯೊಬ್ಬನು—ಗುರು ಜಂಗಮರು ಸಹ ತಾನು ಎಲ್ಲರಿಗಿಂತ ಕಿರಿಯನೆಂದೇ ಅಂತಃಕರಣದಲ್ಲಿ ಧೃಡವಾಗಿ ನಂಬಿರಬೇಕು. ಅದರಂತೆ ಅನ್ಯರನ್ನು ಯಾವಾಗಲೂ ಆದರ ಭಾವದಿಂದಲೇ ಕಾಣುತ್ತಿರಬೇಕು. ಇದೇ ಭಕ್ತರ ಉದ್ಧಾರಕ್ಕೆ ಸಹಾಯಕಾರಿಯಾದುದು.

ಇದಿರ ಹಳಿಯಲು ಬೇಡಃ— ತನ್ನ ಹೊಗಳಿಕೊಳ್ಳುವದು ಅದೆಷ್ಟು ಮೂರ್ಖತನವಾಗುವದೋ ಅಷ್ಟೇ ಇನ್ನೊಬ್ಬರನ್ನು ಹಳಿಯುವದಾದರೂ ಮೂರ್ಖತನವಾಗುತ್ತದೆ. ಜಗತ್ತಿನಲ್ಲಿ ಯಾರೂ ಪೂರ್ಣತ್ವವುಳ್ಳವರಿಲ್ಲ. ಒಂದಿಲ್ಲೊಂದು ರೀತಿಯಿಂದ ಕೊರತೆ ಎಂಬುದು ಸರ್ವರಲ್ಲಿಯೂ ಇದ್ದೇ ಇರುವದು; ಇನ್ನು ಕೆಲವರಲ್ಲಿ ಹೆಚ್ಚಾಗಿರಬಹುದು ಇಷ್ಟೆ! ಅಷ್ಟರಿಂದಲೇ ಅವರನ್ನು ಕಂಡು ಧಿಕ್ಕರಿಸಿ ನುಡಿಯುವದು ಇಲ್ಲವೆ ನಡೆಯುವದು ಸುಜ್ಞತನವಾಗಲಾರದು. ಅವರ ದೋಷಗಳು ಅಜ್ಞಾನಮೂಲಕವಾಗಿದ್ದರೆ, ತಿಳಿಹೇಳಿ ಅವನ್ನು ಹೋಗಲಾಡಿಸಬೇಕು. ಬಡತನದಿಂದುಂಟಾಗಿದ್ದರೆ, ತನ್ನಿಂದಾದಷ್ಟು ಸಹಾಯ ಮಾಡಿ ದೂರೀಕರಿಸಲು ಯತ್ನಿಸಬೇಕು. ಅಂಗವೈಶಾಲ್ಯ ಮೂಲಕವಿದ್ದರೆ, ಸಹಾನುಭೂತಿಯಿಂದ ಕನಿಕರಪಟ್ಟು ನೆರವಾಗಬೇಕು. ಮನಸ್ಸು ಯಾವಾಗಲೂ ಇದಿರು ನೋಡುವ ಸ್ವಭಾವವುಳ್ಳದು. ತನ್ನಲ್ಲಿ ದೋಷಗಳಿಷ್ಟಿದ್ದರೂ ಅವು ಅದಕ್ಕೆ ಕಾಣುವದೇ ಇಲ್ಲ. ಆದುದರಿಂದಲೇ ಶ್ರೀ ಬಸವೇಶ್ವರ ದೇವರು ಅದನ್ನು—

"ತನ್ನ ವಿಚಾರಿಸಲೊಲ್ಲದೀ ಮನವು. ಇದಿರ ವಿಚಾರಿಸಹೋಹುದೀಮನವು. ಏನ ಮಾಡುವೆನೀ ಮನವನು? ಎಂತು ಮಾಡುವೆನೀ ಮನವನು? ಕೂಡಲಸಂಗನ ಶರಣರು ಮೆಚ್ಚದ ಮನವನು?"

ಎಂದು ಹೇಯಾಳಿಸಿರುವರು. ಪರರನ್ನು ನಿಂದಿಸುವದರಿಂದ ಅದಾವ ಲಾಭವೂ ಆಗವೆ, ಅವರ ಮನವನ್ನು ನೋಯಿಸಿ ದ್ವೇಷಮಾತ್ರ ಕಟ್ಟಿ ಕೊಳ್ಳಲಿಕ್ಕೆ ಕಾರಣವಾಗುವದು. ಎಲ್ಲರೂ ಶಿವರೂಪವಿರುವದರಿಂದ್ಹ ಆದರದಿಂದಲೂ ಸೇವ್ಯ ಬುದ್ಧಿಯಿಂದಲೂ ಕಾಣಬೇಕು. ಪ್ರತಿಯೊಬ್ಬನಲ್ಲಿ ನಿಂದ್ಯ ಗುಣಗಳು ಹಲಕೆಲವಿರುವಂತೆ, ಅನೇಕ ವಂದ್ಯ ಗುಣಗಳೂ ಇರುವವು. ಅವನ್ನು ನಾವು ನೋಡಿ ಆ ಬಗ್ಗೆ ಸಂತೋಷಭರಿತರಾಗ ಬೇಕು. ಛಿದ್ರಗಳನ್ನೇ ಹುಡುಕಿ ಅವನ್ನೇ ಎತ್ತಿ ಹಳಿಯುತ್ತ ಹೋಗು ವದು ದುಷ್ಟತನವು. ಭಕ್ತನು ಯಾವಾಗಲೂ ವಿನಯಶೀಲನಾಗಿರ ಬೇಕು. ಈ ಬಗ್ಗೆ ಶ್ರೀ ಬಸವಣ್ಣನವರುಃ—

"ಕಂಡ ಭಕ್ತರಿಗೆ ಕೈಮುಗಿವಾತನೇ ಭಕ್ತ. ಮೃದುವಚನವೇ ಸಕಲ ಜಪಂಗಳಯ್ಯ. ಮೃದುವಚನವೇ ಸಕಲ ಜಪಂಗಳಯ್ಯ. ಸದು ವಿನಯವೇ ಸದಾಶಿವನ ಒಲುಮೆಯಯ್ಯ. ಕೂ. ಸಂ. ದೇವ."

ಎಂದು ನುಡಿದಿದ್ದಾರೆ. ಇದನ್ನು ಬಗೆದರೆ ಸಕಲರೊಡನೆ ವಿನ ಯದಿಂದಲೇ ನಡೆದುಕೊಳ್ಳಬೇಕೆಂಬುದು ವ್ಯಕ್ತವಾಗುತ್ತದೆ. ಹಳಿಯು ವದು ಬಹು ಕೀಳುತನವೂ ಅಜ್ಞಾನದ ಪರಮಾವಧಿಯೂ ಆಗಿರುವದು. ಅದನ್ನು ಭಕ್ತರು ಸಂಪೂರ್ಣ ಬಿಟ್ಟುಬಿಡಬೇಕು.

ಈವೇರೆಗೆ ಆರಂಭದಲ್ಲಿ ಕೊಟ್ಟ "ಕಳಬೇಡ....." ಎಂಬ ವಚ ನದ ಸ್ಥೂಲಮಾನದ ಸ್ಪಷ್ಟೀಕರಣವಾಯಿತು. ಮನುಷ್ಯನು ನೀತಿಯನ್ನು ತೊರೆದು ನಡೆಯಲಿಕ್ಕೆ ಮುಖ್ಯವಾಗಿ ಅವನ ಸ್ವಾರ್ಥಬುದ್ಧಿಯೇ ಕಾರ ಣವು. ವಿಷಯಭೋಗಲಾಲಸೆಯೇ ಅವನನ್ನು ಗತಿಗೆಡಿಸುವದು, ಬತ ಗೆಡಿಸುವದು. ಹೊನ್ನು ಹೆಣ್ಣುಗಳ ವ್ಯೋಹವೇ ಅವನಿಗೆ ಹೆಚ್ಚಾಗಿ ಅನಿವಾರ್ಯವಾದುದು. ಆಕಾರಣ ಪರಧನ ಪರಸ್ತ್ರೀಯ ವಿಷಯವಾಗಿ ಭಕ್ತನು ಅತ್ಯಂತ ಶುದ್ಧನಾಗಿರಬೇಕೆಂದು ವಚನಶಾಸ್ತ್ರವು ಬಹು ಪರಿ ಯಿಂದ ಬೋಧಿಸುತ್ತದೆ. ಹೆಣ್ಣಿನ ವಿಷಯವಾಗಿ ತುಸು ಹೆಚ್ಚಾಗಿ ಇಲ್ಲಿ ವಿವರಿಸುವದು ಅಪ್ರಾಸಂಗಿಕವಾಗಲಾರದೆಂದು ನೆನಿಸುತ್ತೇನೆಃ— ಒಬ್ಬ ಮನುಷ್ಯ ಬಹು ದ್ರವ್ಯ ವೆಚ್ಚವಾಡಿ ಸ್ವೀಕರಿಸಿದ ವನಿತೆಯನ್ನು ಮತ್ತೊಬ್ಬನು ಅಪಹರಿಸುವದು ಅನೇಕ ರೀತಿಯಿಂದ ಅಪರಾಧಕ್ಕೆ ಕಾರಣವಾಗುತ್ತದೆ. (೧) ಅಕೆಯ ಪಾತಿವ್ರತ್ಯವನ್ನು—ದೇಹ ಪಾವಿತ್ರ್ಯ

ವನ್ನು— ಕದ್ದಂತಾಗುವದು. (೨) ಅವಳ ಹಾಗು ಅವಳ ಪತಿ ಮುಂತಾದ ಸಂಬಂಧಿಕರ ಮಾನಭಂಗ ಒದಗುವದು. (೩) ದ್ವೇಷಾಗ್ನಿಯನ್ನು ಹುಟ್ಟಿಸಿ ಹೊತ್ತಿಸಿ ಪ್ರಜ್ವಲಿಸಲಿಕ್ಕೆ ಮಾರ್ಗಮಾಡಿಟ್ಟಂತಾಗುವದು. (೪) ಸಮಾಜ ಶಾಂತತೆಯನ್ನು ಹಾಳುಮಾಡಿ ಅನರ್ಥಕ್ಕೆ ಗುರಿಮಾಡಿದ ದೋಷ ಬೆಂಬಳಿಸುವದು. (೫) ತನ್ನ ಪ್ರಪಂಚವನ್ನೂ ನಾಶಗೊಳಿಸಿ ಹಾಳು ಮಾಡಿಕೊಳ್ಳುವದಲ್ಲದೆ, ಅವಳ ಹಾಗು ಅವಳ ಗಂಡನ ಘಾತಮಾಡಿ ದಂತೆಯೂ ಆಗುವದು. ಇತ್ಯಾದಿ. ಈ ಪರಸತಿ ವ್ಯಸನದ ಬಳಿವಿಡಿದು ಕಳವು ಕೊಲೆ ಹುಸಿಗಳು ಆಮಂತ್ರಿಸಿದಂತೆ ಬಂದು ಸೇರಿಕೊಳ್ಳುವವು. "ತನ್ನ ಮೂಗು ಕೊಯ್ದುಕೊಂಡು ಅನ್ಯರಿಗೆ ಅಪಶಕುನ ಮಾಡುವ ದೆಂ"ದರೆ ಇದೇ! ಈ ಬಗ್ಗೆ ಬಸವೇಶರದೇವರುಃ—

೧ "ಹೋಗಬಿಟ್ಟು ಮರಳಿ ಹಿಂದೆ ನೋಡಿ, ಮತ್ತಾಗಬೇಕೆಂಬ ಸಂದೇಹವುಳ್ಳನ್ನಕ್ಕ ಅದೇ ಪರದಾರ! ನಾಯಕನರಕ ತಪ್ಪದು. ಅನ್ಯವಧು ವೆಂಬುದು ಕೂ. ಸಂ. ದೇವಾ ನಿಮ್ಮ ರಾಣಿವಾಸ"

೨ "ನೋಡಲಾಗದು, ನುಡಿಸಲಾಗದು, ಪರಸ್ತ್ರೀಯರ ಬೇಡ ಕಾಣೆರೋ. ತಗರ ಬೆನ್ನಲ್ಲಿ ಹರಿದ ಸೊಣಗನಂತೆ ಬೇಡ ಕಾಣೆರೋ. ಒಂದಾಸೆಗೆ ಸಾವಿರ ವರುಷ ನರಕದಲದ್ದುವ ಕೂ. ಸಂ. ದೇವ."

೩ "ಹರಿವ ಹಾವಿಂಗಂಜೆ, ಉರಿಯ ನಾಲಿಗೆಗಂಜೆ, ಸುರಿಗೆಯ ಮೊನೆಗಂಜೆ, ಒಂದಕ್ಕಂಜುವೆ ಒಂದಕ್ಕಳಕುವೆ. ಮುನ್ನಂಜದ ರಾವ ಣನೇವಿಧಿಯಾದ? ಅಂಜುವೆನಯ್ಯ ಕೂ. ಸಂ. ದೇವ."

ಎಂದು ಅತ್ಯಂತ ನಿರ್ದಾಕ್ಷಿಣ್ಯವಾಗಿ ಹೇಳಿದ್ದಾರೆ. ಅದರಂತೆಯೇ ಚೆನ್ನಬಸವಣ್ಣನವರುಃ—

"ದಾಸಿಯ ಸಂಗ ಕಸ–ನೀರು ಹೊರಿಸಿತ್ತು. ವೇಶಿಯ ಸಂಗ ಎಂಜ ಲುತಿನಿಸಿತ್ತು. ಪರಸ್ತ್ರೀಯರ ಸಂಗ ಪಂಚಮಹಾಪಾತಕ ತಂದಿತ್ತು. ಈ ತ್ರಿವಿಧವು ನಾಸ್ತಿಯಾದಲ್ಲದೆ ಭಕ್ತನಲ್ಲ. ಭಕ್ತಿಯಿಲ್ಲದೆ ಮುಕ್ತಿಗೆ ಸಲ್ಲ. ನಮ್ಮ ಕೂ. ಚೆ. ಸಂಗನಲ್ಲಿ."

ಇದೇ ಮೇರೆಗೆ ಶಿವಲಿಂಕ ಮಂಚಣ್ಣನವರುಃ—

"ಪರಧನವನೊಲ್ಲದಿಪ್ಪುದೇ ವ್ರತ, ಪರಸ್ತ್ರೀಯರ ಕೂಡದಿಪ್ಪುದೇ ಶೀಲ, ಸರ್ವಜೀವನ ಕೊಲ್ಲದಿಪ್ಪುದೇ ನೇಮ, ತಥ್ಯವ ಮಿಥ್ಯವ ತಿಳಿದಿ

ಪ್ಪವೇ ನಿತ್ಯನೇಮ. ಇದು ಈಶಾನ್ಯಮೂರ್ತಿ ಮಲ್ಲಿಕಾರ್ಜುನ ಲಿಂಗಕ್ಕೆ ಸಂದೇಹವಿಲ್ಲದ ವ್ರತ."

ಎಂದು ಬೋಧಿಸಿದ್ದಾರೆ. ಈ ಮೇಲೆ ವಿವರಿಸಿದಂತೆ ಅನಿಷ್ಟವ ತೊರೆದು, ಇಷ್ಟವನು ಆಚರಿಸಿ, ಇಷ್ಟಲಿಂಗ ಪೂಜಾಪರನಾಗಿ ಭಕ್ತನು ನಡೆದುಕೊಂಡರೆ, ಅವನ ಹಾಗು ಸಾಮಾಜಿಕ (ಸಮಷ್ಟಿ) ಗುರು ಪೂಜೆಯೂ ಸಹಜವಾಗಿಯೇ ನೆರವೇರುವದು. ಭಕ್ತೋದ್ಧಾರವೂ ಆಗುವದು. ಸಮಾಜಾದಿಗಳ ಉದ್ಧಾರವೂ ಆಗುವದು. ಇದಕ್ಕಿಂತ ಮಿಗಿಲಾದುದು ಇನ್ನಾವುದಿರುವದು!

(ಮುಂದುವರಿಯುವದು.)

ರಾವಬಹಾದ್ದೂರ ಹಳಕಟ್ಟಿಯವರಿಗೋಸ್ಕರ ಮಾನಪತ್ರ ಸಮಾರಂಭವು.

ತಾ॥ ೧೧ ಮತ್ತು ೧೨ ನೇ ಅಕ್ಟೋಬರ ತಾರೀಖುಗಳಲ್ಲಿ ರಾಣೇಬೆನ್ನೂರಲ್ಲಿ ಧಾರವಾಡ ಜಿಲ್ಲಾ ಸಾಹಿತ್ಯ ಪರಿಷತ್ತು ಪ್ರೀ॥ ವ್ಹಿ. ಕೆ. ಗೋಕಾಕ ಇವರ ಅಧ್ಯಕ್ಷತೆಯಲ್ಲಿ ಸೇರಿದ್ದಿತು. ಪರಿಷತ್ತಿನ ಉದ್ಘಾಟನ ಸಮಾರಂಭವನ್ನು ರಾ॥ ಬ॥ ಪಿ. ಜಿ. ಹಳಕಟ್ಟಿಯವರು ನೆರವೇರಿಸಿದರು. ಅವರು ರಾಣೇಬೆನ್ನೂರಿಗೆ ಬಂದ ಈ ಸಮಯದಲ್ಲಿ ಅಲ್ಲಿಯ ಮಹಾಜನರು ಪ್ರೀ॥ ವ್ಹಿ. ಕೆ. ಗೋಕಾಕ ಇವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಅವರಿಗೆ ಮಾನಪತ್ರವನ್ನು ಕೊಡುವ ಸಮಾರಂಭವನ್ನು ನೆರವೇರಿಸಿದರು. ಈ ಕಾಲಕ್ಕೆ ಪಟ್ಟಣಿಗರು ಮಾತ್ರವಲ್ಲದೆ ಪರಿಷತ್ತಿಗೆ ಬಂದ ಮಹನೀಯರನೇಕರು ಸಭೆಗೆ ಬಂದಿದ್ದರು. ಸಭೆಯು ಶ್ರೀ ಬಸವದೇವರು ಪುಟ್ಟಯ್ಯನಮಠ ಇವರ ಭವ್ಯವಾದ ಮಠದಲ್ಲಿ ಸೇರಿದ್ದಿತು.

ಮಠದಲ್ಲಿ ವಾರ್ಷಿಕೋತ್ಸವವಿದ್ದುದರಿಂದ ಆದಕ್ಕೋಸ್ಕರ ಶ್ರೀಮನ್ನಿರಂಜನ ವೃತ್ಯುಂಜಯ ಸ್ವಾಮಿಗಳು ಧಾರವಾಡ, ಶ್ರೀ ಸಿದ್ಧವೀರ ಸ್ವಾಮಿಗಳು ವಿರಕ್ತಮಠ ಮೊದಾವಣಗೆರೆ ಮೊದಲಾದ ಅನೇಕ ಸ್ವಾಮಿಗಳೂ ಆಗಮಿಸಿದ್ದರು.

ಮಾನಪತ್ರವನ್ನು ಪಟ್ಟಣದ ಪ್ರಮುಖ ನಾಗರಿಕರೂ ಜಿಲ್ಲಾ ಸ್ಕೂಲ್ ಬೋರ್ಡಿನ ಚೇರಮನ್ನರೂ ಆದ ಶ್ರೀಯುತ ಸಿದ್ದಪ್ಪ ಬಣಗಾರ ಇವರು ಓದಿ ಸುಂದರವಾದ ಬಳ್ಳಿಯ ಕರಂಡದಲ್ಲಿ ರಾ॥ ಬ॥ ಹಳಕಟ್ಟಿಯವರಿಗೆ ಅರ್ಪಿಸಿದರು. ಆ ಮೇಲೆ ರಾವಬಹಾದ್ದೂರವರು ರಾಣೇಬೆನ್ನೂರು ಮತ್ತು ಈ ಭಾಗದಲ್ಲಿ ಪ್ರಚಾರ ಹೊಂದುತ್ತಲಿರುವ ಶಿವಾನುಭವದ ಚಟುವಟಿಕೆಗಳನ್ನು ಶ್ಲಾಘಿಸುತ್ತ ಪಟ್ಟಣಿಗರ ಬಗ್ಗೆ ತಮಗಿರುವ ಕೃತಜ್ಞತೆಯನ್ನು ತೋರಿಸಿದರು. ಪ್ರೀ॥ ಗೋಕಾಕರವರು ರಾ॥ ಬ॥ ಹಳಕಟ್ಟಿಯವರು ಮಾಡಿದ ವಾಙ್ಮಯ ಸೇವೆಯನ್ನು ಬಹಳವಾಗಿ ಸ್ತುತಿಸಿದರು. ಆ ಮೇಲೆ ಶ್ರೀಮನ್ನಿರಂಜನ ವೃತ್ಯುಂಜಯ ಸ್ವಾಮಿಗಳವರು ಬೋಧಪರ ಭಾಷಣ ಮಾಡಿದರು. ಈ ಪ್ರಕಾರ ಈ ಮಾನಪತ್ರ ಸಮಾರಂಭವು ಉತ್ತಮ ರೀತಿಯಿಂದ ಜರಿಗಿತು. ಮಾನಪತ್ರದ ವಿವರವು ಕೆಳಗೆ ಕೊಡಲ್ಪಟ್ಟಿದೆ.

ಮಾನಪತ್ರವು.

ಕರ್ನಾಟಕದಲ್ಲಿ ಕಡು ಪರಿಚಿತರಾಗಿರುವ ಮಹನೀಯರೇ,

ಧಾರವಾಡ ಜಿಲ್ಲೆಯ ಐದನೆಯ ಸಾಹಿತ್ಯ ಸಮ್ಮೇಲನವನ್ನು ಪ್ರಾರಂಭಿಸುವ ಮಹತ್ವದ ಕಾರ್ಯಕ್ಕೆ ಆಗಮಿಸಿದ ತಮ್ಮ ಸುಮಂಗಲ ಸುಸಮಯವನ್ನು ಸಾಧಿಸಿ ರಾಣೇಬೆನ್ನೂರ ಪುರನಿವಾಸಿಗಳಾದ ನಾವು ಪುರಪರವಾಗಿ ತಮಗೆ ಹೃತ್ಪೂರ್ವಕವಾಗಿ ಮಮತೆಯ ಮರ್ಯಾದೆಯ ಒಲೆಯನ್ನು (ಮಾನಪತ್ರ) ಸಮರ್ಪಿಸಲು ಮುಂದುವರಿದಿರುತ್ತೇವೆ. ನಾವು ಕೈಕೊಂಡ ಈ ಕಾರ್ಯಕ್ಕೆ ತಾವು ಹುಟ್ಟು ನಾಡಿನಲ್ಲಿ ಮಾಡಿದ ಬಗೆ ಬಗೆಯ ನೀಟವೂ ಮಾಟವೂ ಆದ ಒಳ್ಳೆಯ ಉಜ್ವಲಗಳೇ ಕಾರಣವಾಗಿರುತ್ತವೆಂದು ವಿದಿತಪಡಿಸುತ್ತೇವೆ.

ಸೂಜ್ಞರೇ,

ಕರ್ನಾಟಕದಲ್ಲಿ ಬಹು ದಿನಗಳ ಹಿಂದೆ ಪದವೀಧರರಾಗಿ ನಾಡಿಗೆ ಶೋಭೆಯನ್ನು ತಂದವರಲ್ಲಿ ತಾವೊಬ್ಬರು. ಪದವಿ ಪ್ರಾಪ್ತಿಯಲ್ಲಿ ಸಂಪಾದಿಸಿದ ಶಿಕ್ಷಣವನ್ನು ಅವ್ಯಾಹತವಾಗಿ ಮುಂದುವರಿಸಿ, ಜ್ಞಾನ ಭಾಂಡಾರದ ಕ್ಷೇತ್ರವನ್ನು ವಿಸ್ತರಿಸಿ, ಅದರ ಉಪಯೋಗವನ್ನು ಹೆಚ್ಚಾಗಿ ಜನತೆಗೆ ನೀಡಿದವರಲ್ಲಿ ತಾವೊಬ್ಬರು. ಸಂಶೋಧನದಲ್ಲಿ ಮನಸ್ಸು ಹಾಕಿ, ಬಿಡುವಿಲ್ಲದಂತೆ ಕೆಲಸ ಮಾಡಿ ಅದರಲ್ಲಿ ಸಫಲತೆ ಹಾಗೂ ಯಶಸ್ಸು ಪಡೆದವರಲ್ಲಿ ತಾವೊಬ್ಬರು. ತಾವು ಮೊಟ್ಟಮೊದಲು ವಕೀಲಿಯ ಉದ್ಯೋಗವಲ್ಲಿ ತೊಡಗಿ, ಅದರಲ್ಲಿ ತಕ್ಕ ಯಶೋಭಾಗಿಗಳಾಗಿ ಇರುತ್ತಿರುವಾಗ ಒಮ್ಮೆಲೇ ಉದ್ಯೋಗದ ದಿಕ್ಕು ಬದಲಿಸಿ, ಈಗ ಮುಂದುವರಿದಿರುವ ಹಾಗೂ ಪ್ರಕಾಶಮಯವಾಗಿರುವ ಉಜ್ಜ್ವಗದಲ್ಲಿ ಮನಸ್ಸುಹಾಕಿದಿರಿ. ಇದು ತಮ್ಮಲ್ಲಿಯ ಒಂದು ವೈಶಿಷ್ಟ್ಯವಾಗಿರುವದು. ತಮ್ಮ ಮನಸ್ಸಿನ ಕ್ರಾಂತಿಯು ತಮ್ಮಯ ಈಗಿನ ಉಜ್ವಲ ಚರಿತ್ರಕ್ಕೆ ಕಾರಣವಾಗಿ, ಕರ್ನಾಟಕಕ್ಕೆ ವಿಧವಿಧದ ಸಹಾಯವನ್ನುಂಟು ಮಾಡಿರುವದು.

ಶಿಕ್ಷಣಾಭಿಮಾನಿಗಳೇ,

ತಮ್ಮ ಶಿಕ್ಷಣದಲ್ಲಿಯ ಜ್ಞಾನ, ತಮ್ಮ ಶಿಕ್ಷಣದಲ್ಲಿಯ ಅಭಿಮಾನ, ತಮ್ಮ ಶಿಕ್ಷಣದ ನಿರ್ವ್ಯಾಜ ಧ್ಯಾನ, ಇವು ನಿಜವಾಗಿಯೂ ಬಣ್ಣಿಸತಕ್ಕವು! ಅಂತೆಯೇ ಇವುಗಳಿಂದ ತಾವು ಎಲ್ಲಿಡೆಯಲ್ಲಿಯೂ ಗೌರವವನ್ನು ಪಡೆದಿರುವಿರಿ. ತಮ್ಮ ಸದ್ಯದ ನೆಲೆವೀಡಾಗಿರುವ ವಿಜಾಪುರದಲ್ಲಿ ವೀರಶೈವ ಶಿಕ್ಷಣ ಫಂಡು, ಸಿದ್ಧೇಶ್ವರ ಧರ್ಮಾದಾಯ ಶಿಕ್ಷಣ ಫಂಡು ಶೇಖರಿಸಿ, ಅದರ ಒಕ್ಕೂರವಿನಿಂದ ಜಿಲ್ಲಾ ವೀರಶೈವ ವಿದ್ಯಾವರ್ಧಕ ಸಂಘ, ಸಿದ್ಧೇಶ್ವರ ಮಾಧ್ಯಮಿಕ ಶಾಲೆ ಮೊದಲಾದವುಗಳನ್ನು ಸ್ಥಾಪಿಸಿ, ಇವುಗಳ ಹಿರಿಯತನವನ್ನು ವಹಿಸಿ ಇವುಗಳ ಉತ್ಕರ್ಷಕ್ಕೆ ನಿಚ್ಚ ಹೆಚ್ಚಿನ ಉಚ್ಚ ಪ್ರಯತ್ನ ಮಾಡುತ್ತಿರುವಿರಿ. ಈ ಮೊದಲು ಬಹು ದಿನಗಳವರೆಗೆ ವಿಜಯಪುರದ ನಗರಸಭೆಯ ಶಾಲಾ ಸಂಘದ ಒಡೆಯರಾಗಿ, ಅತ್ಯಂತ ದಕ್ಷತೆಯಿಂದ-ಆಸ್ಥೆಯಿಂದ-ನಿಷ್ಕಲಂಕ ಪ್ರೇಮದಿಂದ-ನಿರಿಚ್ಛೆಯಿಂದ ಕೆಲಸ ಮಾಡುತ್ತ ಶಿಕ್ಷಕ, ಶಿಕ್ಷಿಕೆಯರಲ್ಲಿ ಒಂದು

ಬಗೆಯ ಉತ್ಸಾಹವನ್ನು ಹುಟ್ಟಿಸಿ ಶಿಕ್ಷಣದಲ್ಲಿ ಅನೇಕ ಏರ್ಪಾಡು ಮಾರ್ಪಾಡುಗಳನ್ನು ಮಾಡಿರುವಿರಿ. ಸರಕಾರದವರು ನಿಯಮಿಸಿದ ಪ್ರಾಥಮಿಕ ಶಿಕ್ಷಣ ಮಂಡಲ, ಕನ್ನಡ ಪಠ್ಯ ಪುಸ್ತಕ ಮಂಡಲ, ಪ್ರಾಥಮಿಕ ಶಾಲಾ ಅಭ್ಯಾಸ ಪತ್ರಿಕಾ ಮಂಡಲ, ಕನ್ನಡ ಸಂಶೋಧನ ಮಂಡಲ, ಮುಂಬಯಿ ವಿಶ್ವವಿದ್ಯಾಲಯ ಮೊದಲಾದ ಅನೇಕ ಶೈಕ್ಷಣಿಕ ಮಂಡಲಗಳಲ್ಲಿ ಸದಸ್ಯರಾಗಿ ಉಪಯುಕ್ತ ಕಾರ್ಯ ಮಾಡಿರುವಿರಿ-ಮಾಡುತ್ತಿರುವಿರಿ. ಒಟ್ಟಿಗೆ ಇಲಾಖೆಯಲ್ಲಿ ಶಿಕ್ಷಣಕ್ಕೆ ಸಂಬಂಧಿಸಿದ ಪ್ರತಿಯೊಂದು ಉಚ್ಚ ಸಂಸ್ಥೆಯಲ್ಲಿ ತಮ್ಮ ಅಂಗವಿಲ್ಲೆಂದು ಹೇಳಲಿಕ್ಕೆ ಬರುವಂತಿಲ್ಲ.

ಮಹಾನುಭಾವರೇ,

ನಿಮ್ಮ ಕಾರ್ಯಕ್ಷೇತ್ರವು ಎಷ್ಟು ವ್ಯಾಪಕವಾಗಿರುತ್ತದೆಂಬುವದಕ್ಕೆ ನಿಮ್ಮ ಪ್ರತಿಷ್ಠೆಯು ಎಷ್ಟು ಉಜ್ವಲವಾಗಿರುತ್ತದೆಂಬುವದಕ್ಕೆ ಬಳ್ಳಾರಿಯ ಕರ್ನಾಟಕ ಸಾಹಿತ್ಯ ಪರಿಷತ್ತಿಗೆ, ಧಾರವಾಡದಲ್ಲಿ ಆದ ಕರ್ನಾಟಕ ಏಕೀಕರಣ ಪರಿಷತ್ತಿಗೆ, ಪುಣೆಯಲ್ಲಿ ಜರುಗಿದ ನೇಕಾರ ಪರಿಷತ್ತಿಗೆ, ಧಾರವಾಡದಲ್ಲಿ ಜರುಗಿದ ವೀರಶೈವ ಮಹಾಸಭೆಗೆ ತಾವು ಅಧ್ಯಕ್ಷರಾದದ್ದು, ಕಳೆದ ವರ್ಷ ತಮ್ಮ ೬೪ ನೆಯ ವರ್ಷದ ವರ್ಧಂತ್ಯುತ್ಸವವು ವಿಜಾಪುರದಲ್ಲಿಯೂ ಬೇರೆ ಗ್ರಾಮಗಳಲ್ಲಿಯೂ ಅತ್ಯುತ್ಸಾಹದಿಂದ-ವಿಜೃಂಭಣೆಯಿಂದ ಸಾಂಗವಾದದ್ದೂ, ನಿಧಿಯನ್ನು ಸಲ್ಲಿಸಿದ್ದೂ ಪ್ರತ್ಯಕ್ಷ ದ್ಯೋತಕಗಳಾಗಿವೆ.

ಕನ್ನಡ ಸಾಹಿತ್ಯಾಭಿಮಾನಿಗಳೇ,

ಮೇಲೆ ಮುಂಡಿಸಿದ ಕಾರ್ಯಗಳಲ್ಲದೆ ನೀವು ಕರ್ನಾಟಕದಲ್ಲಿ ಮಾಡಿದ ಸಾಹಿತ್ಯ ಸೇವೆಯು ಎಂದೂ ಮರೆಯದ್ದಾಗಿದೆ. ನೀವು ಮಾಡಿದ ಆ ಸೇವೆಯು ನಿಜವಾಗಿಯೂ ಅಮರವಾಗಿ ಉಳಿಯುವದೆಂದರೆ ಅತ್ಯುಕ್ತಿಯಾಗಲಾರದು! ಬಹು ದಿವಸಗಳಿಂದ ಮನೆ. ಮತ ಮೊದಲಾದವುಗಳಲ್ಲಿ ಕಗ್ಗತ್ತಲೆಯೊಳಗೆ ಹುಳಹತ್ತಿ ಚಲ್ಲಾ ಪಿಲ್ಲಿಯಾಗಿ ಬಿದ್ದಿದ್ದ-ಹುದುಗಿಕೊಂಡಿದ್ದ ವಚನ ಭಂಡಾರವನ್ನು ಬೆಳಿಗೆ ಹಾಕಿ-ಬೆಳ

ಕಿಗೆ ತಂದು-ಸರಿಪಡಿಸಿ-ಕ್ರಮಗೊಳಿಸಿ-ಪ್ರಸಾರಗೊಳಿಸಿ ಕನ್ನಡಿಗರಿಗೆ ಅಮೌಲ್ಯ ವಚನ ಸಾಹಿತ್ಯಾಮೃತವನ್ನು ಉಣ್ಣಿಸಿರುವಿರಿ-ಉಣ್ಣಿಸುತ್ತಿರುವಿರಿ. ವಚನ ಸಾಹಿತ್ಯದಂಥ ಓಜಸ್ವಿಯೂ, ತೇಜಸ್ವಿಯೂ ಆದ ಸ್ಫೂರ್ತಿದಾಯಕ ಜ್ಞಾನ ಭಾಂಡಾರವು ಮತ್ತೊಂದಿಲ್ಲ. ಒಟ್ಟಿಗೆ ತಮ್ಮ ಆಯುಷ್ಯದ ಬಹು ಭಾಗವು ವಚನ ಸಾಹಿತ್ಯವನ್ನು ಅರಿಸಿ-ಅರಿಸಿ ಪ್ರಕಾಶಗೊಳಿಸುವದರಲ್ಲಿಯೇ ವ್ಯಸಲು ತೆಗೆದಂತಾಗಿದೆ. ನೀವು ಸಾಗಿಸುತ್ತಿರುವ "ಶಿವಾನುಭವ ಪತ್ರಿಕೆಯು" ಕಳೆದ ೧೮ ವರ್ಷಗಳಿಂದ ವೀರಶೈವ ಸಾಹಿತ್ಯ-ವೀರಶೈವ ಇತಿಹಾಸ-ತತ್ವ ಮೊದಲಾದವುಗಳನ್ನು ಸರಳವಾಗಿ ಸ್ಪಷ್ಟವಾಗಿ ವಿಮರ್ಶಿಸುತ್ತ ಸಕಲ ಜಾತಿಯ ಗುಣ ಗ್ರಾಹಕ ಸೂಜ್ಞ ಬಾಂಧವರಿಗೆ ತುಂಬಾ ಪ್ರಿಯಕರವೂ ಆಕರ್ಷಕವೂ ಆಗಿರುವದು. ಅವರಂತೆಯೇ, ತಾವು ಹೊರಡಿಸುತ್ತಿರುವ 'ನವಕರ್ನಾಟಕ' ಪತ್ರಿಕೆಯಾದರೂ ಜನ ಪ್ರಿಯವಾಗಿರುವದು. ಸಂತತ ಅವಿರತ ಶ್ರಮವನ್ನು ವಹಿಸಿ, ಸರ್ವ ವಚನಕಾರರ-ಪುರಾತನ ಪ್ರತಿಭಾ ಶಾಲಿಗಳಾದ ಗ್ರಂಥಕಾರರ ಹೆಚ್ಚು ಕಡಿಮೆ (೬೦) ಗ್ರಂಥಗಳನ್ನು ಪ್ರಕಾಶಗೊಳಿಸಿ ಸಾಹಿತ್ಯದಲ್ಲಿ ಹೊಸ ಬೆಳಕನ್ನು ಉಂಟು ಮಾಡಿರುವಿರಿ. ಅವುಗಳಲ್ಲಿ ಎಷ್ಟೋ ಗ್ರಂಥಗಳು ಮುಂಬಯಿ ವಿದ್ಯಾಖಾತೆಯಿಂದಲೂ ಮುಂಬಯಿ, ಮೈಸೂರ ವಿಶ್ವವಿದ್ಯಾಲಯಗಳಲ್ಲಿಯೂ ಮಾನ್ಯವಾಗಿ ಪಠ್ಯಪುಸ್ತಕಗಳಾಗಿವೆ.

ಮಾನ್ಯರೇ,

ಒಟ್ಟಿಗೆ ನೀವು ಮಾಡಿದ ಕಾರ್ಯಗಳು ಉಜ್ವಲವಾಗಿರುವವು; ಉಪಯುಕ್ತವಾಗಿರುವವು. ಸಂಸ್ಮರಣೀಯವಾಗಿರುವವು. ದೇವರು ತಮಗೆ ಉದ್ದಂಡಾಯುಷ್ಯವನ್ನು ದಯಪಾಲಿಸಲೆಂದೂ, ಆರೋಗ್ಯ ಸಂಪದವನ್ನು ಹೆಚ್ಚಿಸಲೆಂದೂ ಪ್ರಾಂಜಲವಾಗಿ ಬೇಡುತ್ತೇನೆ. ಹಾಗೂ ತಮ್ಮಿಂದ ಕರ್ನಾಟಕಕ್ಕೆ ಇನ್ನೂ ಘನತರವಾದ ಬಗೆಬಗೆಯ ಸೇವೆ ಸಲ್ಲಲೆಂದೂ ಉತ್ಕಟೇಚ್ಛೆಯನ್ನು ವ್ಯಕ್ತ ಮಾಡುತ್ತೇವೆ.

ಶ್ರೀ. ಎಸ್. ಕೆ. ಬಣಗಾರ. ಶ್ರೀ ವ್ಹಿ. ಎಸ್. ಹಿರೇಮಠ, ಶ್ರೀ ಎಸ್. ಬಿ. ಹನಗೋಡಿಮಠ, ಶ್ರೀ ಬಿ. ಎಮ್. ಅಂಕಲಕೋಟಿ,

ಶ್ರೀ ಕೇ. ಸಿ. ಎಮ್ಮಿ, ಶ್ರೀ ಕೇ ಎಮ್. ಹರಪನಹಳ್ಳಿ, ಶ್ರೀ ಕೆ. ಕೆ. ಆನಿಸೆಟ್ಟರ, ಶ್ರೀ ಆರ್. ಕೆ. ಮುರಿಯಾನಿ, ಶ್ರೀ ಶಾಂತಪ್ಪ ನಗರಕರ, ಶ್ರೀ ಎನ್. ಜೀ. ಪಾಟೀಲ, ಶ್ರೀ ಮೂಲಚಂದ ಕೇಸಾಜಿ, ಶ್ರೀ ಸಿ. ಎಸ್. ಕುರವತ್ತಿ. ಶ್ರೀ ಜಮಾಲಖಾನ ನದ್ದೀಮುಲ್ಲಾ, ಶ್ರೀ ಡಿ. ಟಿ. ಮಿರಜಕರ, ಶ್ರೀ ಸಿ. ಎಸ್. ಬೆಂಗಳೂರ, **ಶ್ರೀ ರಾ. ಬ ಎಸ್ ಎಸ್ ನಾಯಿಕ.** ಶ್ರೀ ಎಸ್. ಎಮ್. ಮುಳಿಮಠ, ಶ್ರೀ ಬಿ. ಬಿ. ಬೂದಿಹಾಳಮಠ, ಶ್ರೀ ಬಿ. ಟಿ. ಗುಡ್ಡದ, ಶ್ರೀ ಪಿ. ಸಿ. ಸಿ. ಬದಾಮಿ, ಶ್ರೀ ಸಿ. ಎಸ್. ಜಂಬಿಗಿ, ಶ್ರೀ ವ್ಹಿ. ಸಿ. ರಿತ್ತಿಸೆಟ್ಟರ, ಶ್ರೀ ಎಸ್. ಎಮ್. ನಾಯಿಕ, ಶ್ರೀ ಶಿವರುದ್ರಪ್ಪ ಹೆದ್ದೇರಿ, ಶ್ರೀ ಚನಬಸನಗೌಡ ಪಾಟೀಲ, ಶ್ರೀ ಸಿ. ಜಿ ಕುರವತ್ತಿ, ಶ್ರೀ ಎಮ್. ಡಿ. ನಾಯಿಕ, ಶ್ರೀ ಬಿ. ಕೆ. ಕುರವತ್ತಿ, ಶ್ರೀ ಕೆ. ವ್ಹಿ. ಮಠಪತಿ, **ಶ್ರೀ ಖಾ. ಸಾ. ಎಸ್. ಎನ್. ಫೌಜದಾರ.** ಶ್ರೀ ಆರ್. ಜಿ. ಅಜ್ಜೆವಡಿಮಠ, ಶ್ರೀ ಬಿ. ಜಿ. ಜೊಯಿಸ, ಶ್ರೀ ಟಿ. ಎಫ್. ಮೆಹರವಾಡೆ, ಶ್ರೀ ಜಿ. ಬಿ. ಗುರನ್ನಿ, ಶ್ರೀ ಟಿ. ಬಿ. ಪಾಸ್ತೆ, ಶ್ರೀ ಕೆ. ವ್ಹಿ. ಆನಿಸೆಟ್ಟರ, ಶ್ರೀ ಜಿ. ಡಿ. ನಾಯಿಕ, ಶ್ರೀ ಗುಡ್ಡಪ್ಪ ತಾಸಿಲ್ದಾರ, ಶ್ರೀ ಸೈಯದಮೀರ ಪಾಟೀಲ, ಶ್ರೀ ಎನ್. ಎಸ್. ನೂರಂದೇವರಮಠ; ಶ್ರೀ ಎಮ್. ಬಿ. ಕಟ್ಟಿಮನಿ, ಶ್ರೀ ಸಿ. ಬಿ. ಮಾಕನೂರ, ಶ್ರೀ ಎನ್. ಎಮ್. ಹೊಸಂಗಡಿ, ಶ್ರೀ ಡಾ. ಎಸ್. ಜಿ. ಪಾಟೀಲ.

ರಾಣೇಬೆನ್ನೂರ, ದಿನಾಂಕ, ೧೯೪೪ ನೆಯ ಅಕ್ಟೋಬರ ೧೨ ಗುರುವಾರ.

ವೀರಶೈವರಿಗೋಸ್ಕರ ಸ್ವತಂತ್ರ ಕಾನೂನು.

ಈ ಮಹತ್ವದ ವಿಷಯವು ವೀರಶೈವರ ಲಕ್ಷವನ್ನು ಈಚೆಗೆ ಎಳೆದಿದೆ. ವೀರಶೈವರು ತಮಗೊವಗುವ ಹಾನಿಯನ್ನು ಕಾಯದೆಯ ದ್ವಾರಾ ದೂರಮಾಡಿಕೊಳ್ಳಬಹುದಾಗಿದೆ. ಯೋಗ್ಯ ಕಾಯದೆಯನ್ನು ಮಾಡಿಕೊಳ್ಳುವ ಈಗಿನ ಸಂಧಿಯನ್ನು ಅವರು ಕಳೆದುಕೊಳ್ಳಬಾರದು. ಅವರು ತಮಗೆ ಅನ್ವಯಿಸಬಹುದಾದ ಕಾಯದೆಯ ನಿಜಸ್ಥಿತಿಯನ್ನು ಗೊತ್ತುಪಡಿಸುವ ಭಾರವನ್ನು ಕೋರ್ಟುಗಳ ಮೇಲೆ ಇಗೆಯದೆ, ಅದಕ್ಕೆ ನಿಶ್ಚಿತ ಸ್ವರೂಪನ್ನು ಕೊಟ್ಟು ಒಂದು ಆಕ್ಟಿನ ಮೂಲಕ ತಾವೇ ತಮಗುಂಟಾಗುವ ಹಾನಿಯನ್ನು ದೂರ ಮಾಡಿಕೊಳ್ಳಬೇಕು. ಇದು ಅವರ ಪ್ರಗತಿಯ ದ್ಯೋತಕವಾಗಿದೆ. ಯಾಕಂದರೆ ಸಮಾಜದಲ್ಲಿ ಆಗುವ ಬದಲಾವಣೆಗಳಿಗನುಸರಿಸಿ ಕಾಯದೆಯಲ್ಲಿಯೂ ಬದಲಾವಣೆ ಗಳಾಗುವದು ಅವಶ್ಯವೂ ಸಮಾಜಾಭಿವೃದ್ಧಿಗೆ ಸಹಾಯಕವೂ ಆಗುವದರಲ್ಲಿ ಏನೂ ಸಂದೇಹವಿರಲಾರದು.

ಸರಕಾರದವರು 'ರಾವ ಕಮಿಟಿ' ಎಂಬ ಹೆಸರಿನಿಂದ ಒಂದು ಕಾಯದೆಯ ತಜ್ಞ ಮಂಡಳಿಯನ್ನು ಕೆಲವು ವರ್ಷಗಳ ಹಿಂದೆ ನಿಯಮಿಸಿದರು. ಈ ಮಂಡಳಿಯವರು ಹಿಂದೂ ಕಾಯದೆಯಲ್ಲಿ ಮಾರ್ಪಾಡುಗಳನ್ನು ಮಾಡುವ ವಿಷಯವಾಗಿ ಮಾಡಿದ ಸೂಚನೆಗಳು ಕೇಂದ್ರ ಕಾಯದೆ ಮಂಡಳದಲ್ಲಿ ವಿಚಾರಕ್ಕೋಸ್ಕರ ಬಂದಿವೆ. ಅವು ಅಂಗೀಕೃತವಾದರೆ ಹಿಂದೂ ಸಮಾಜವೆಲ್ಲ ಅವುಗಳಿಗೆ ಬದ್ಧವಾಗುತ್ತಿದೆ. ಕಮೀಟಿಯವರು ಇಪ್ಪರಲ್ಲಿ 'ಹಿಂದೂ ವಾರಸಾ ಬಿಲ್ಲು' ಮತ್ತು 'ಹಿಂದೂ ವಿವಾಹ ಬಿಲ್ಲು' ಎಂದು ಎರಡು ಬಿಲ್ಲುಗಳನ್ನು ಸಿದ್ಧಪಡಿಸಿದ್ದಾರೆ. ಈಗ ಪ್ರಚಲಿತವಿರುವ ಹಿಂದೂ ಕಾಯದೆಯಲ್ಲಿ ವೀರಶೈವರಿಗೆ ರೂಢ್ರ ಕಾಯದೆಯು ಹಚ್ಚಲ್ಪಡುವದರಿಂದ ಕೋರ್ಟುಗಳಲ್ಲಿ ಅವರಿಗೆ ಬಹಳ ಅನ್ಯಾಯಗಳಾಗಿರುತ್ತವೆ. ಆದರೆ ರಾವ ಕಮೀಟಿಯವರು ಈ ಭೇದವನ್ನು ಮನ್ನಿಸದೆ ಎಲ್ಲರಿಗೂ ಅನ್ವಯಿಸುವಂತೆ ಈ ಬಿಲ್ಲನ್ನು ಸಿದ್ಧಪಡಿಸಿದ್ದಾರೆ. ಇದರಿಂದ ವೀರಶೈವರಲ್ಲಿ ರಂಡೀ ಮಕ್ಕಳಿಗೆ ವಾರಸಾ

ಕತ್ವ ಮೊರೆಯುವ ಈಗಿನ ಪದ್ಧತಿಯು ನಷ್ಟವಾಗುವದೆಂದು ಭಾವಿಸಲ್ಪಟ್ಟಿದೆ. ಸ್ತ್ರೀಯರಿಗೆ ಹೆಚ್ಚಿನ ಮತ್ತು ಸ್ವತಂತ್ರವಾದ ಹಕ್ಕುಗಳಿರಬೇಕೆಂಬುದು ಇನ್ನೊಂದು ಮಹತ್ವದ ಬದಲಾವಣೆಯು ಈ ಬಿಲ್ಲುಗಳಲ್ಲಿದೆ. ಪ್ರಕೃತ ಹಿಂದೂ ಸಮಾಜಸ್ಥಿತಿಯಲ್ಲಿ ಇದು ಬಹುಜನ ಸಮ್ಮತಿಯನ್ನು ಹೊಂದಬಹುದಾಗಿದೆ. ವೀರಶೈವರ ತತ್ವದ ಪ್ರಕಾರ ಸ್ತ್ರೀಯರಿಗೆ ಪುರುಷರಿಗಿರುವಷ್ಟೇ ಅಧಿಕಾರಗಳಿವೆ. ಆದ್ದರಿಂದ ಈ ಬದಲಾವಣೆಗೆ ವೀರಶೈವರೂ ತಮ್ಮ ಸಮ್ಮತಿಯನ್ನಿತ್ತೇಯುವದು ಕ್ರಮಪ್ರಾಪ್ತವಾಗಿದೆ. ಹೀಗೆ ಅನೇಕ ಉಪಯುಕ್ತ ಯೋಜನೆಗಳು ಈ ಮಸೂದೆಗಳಲ್ಲಿವೆ.

ಮಠಸ್ತರ ಕಾಯದೆ.

ಮಠಸ್ತರ ಕಾಯದೆಯ ವಿಷಯವಾಗಿ ಸೂಚನೆ ಮಾಡಲಿಕ್ಕೆ ವೀರಶೈವ ಮಹಾಸಭೆಯಲ್ಲಿ ವಿ॥ ಹ್ಹಿ. ಬಿ. ಹಾಲಭಾವಿ ನಿವೃತ್ತ ಸಬ್‌ಜಜ್ಜ ಇವರ ಅಧ್ಯಕ್ಷತೆಯಲ್ಲಿ ಒಂದು ಮಂಡಳವು ಸ್ಥಾಪಿಸಲ್ಪಟ್ಟಿತು. ಈ ಮಂಡಳದವರು "ಲಿಂಗಾಯತ ಮಠಗಳ ಆಸ್ತಿಗೆ ಉತ್ತರಾಧಿಕಾರವನ್ನು ನಿಯಮನ ಮಾಡುವ ಕಾನೂನು" ಎಂಬ ಹೆಸರಿನಿಂದ ಒಂದು ಪತ್ರಿಕೆಯನ್ನು ಪ್ರಕಟಿಸಿದ್ದಾರೆ.

ಮಠಗಳ ಕಾಯದೆಯನ್ನು ನಿರ್ಧರಿಸಲು ವೀರಶೈವ ವಾಙ್ಮಯದಲ್ಲಿ ಅಧಿಕೃತ ಗ್ರಂಥವು ಈ ವರೆಗೂ ಉಪಲಬ್ಧವಾಗಿಲ್ಲ. ಆದ್ದರಿಂದ ಸ್ಥಾನಿಕ ರೂಢಿಗೆ ಅನುಸರಿಸಿ ಮಠಗಳ ವ್ಯಾಜ್ಯಗಳನ್ನು ಕೋರ್ಟಿನವರು ತೀರ್ಮಾನಿಸಬೇಕಾಗುತ್ತದೆ. ಮಠಗಳು ವೈಯ್ಯಕ್ತಿಕ ಸಂಸ್ಥೆಗಳಿರದೆ ಸಾಮಾಜಿಕ ಸಂಸ್ಥೆಗಳಾಗಿರುವದರಿಂದ ಇವುಗಳ ವ್ಯಾಜ್ಯಗಳು ಗ್ರಾಮಗಳಲ್ಲಿ ಉಗ್ರವಾದ ಪಕ್ಷಗಳನ್ನು ಉಂಟು ಮಾಡುತ್ತಿವೆ. ಇದರಿಂದ ಜನರಲ್ಲಿ ದ್ವೇಷಗಳು ಉಂಟಾಗಿ ಮಠಗಳ ಉದ್ದೇಶಗಳು ಭಂಗ ಹೊಂದುತ್ತಲಿವೆ. ಇದರಿಂದ ಮಠಗಳಿಗಿರತಕ್ಕ ಕಾಯದೆಗಳು ನಿಶ್ಚಿತ ಸ್ವರೂಪದಿಂದ ಅನ್ವಯಿಸಲ್ಪಟ್ಟದ್ದಾದರೆ ಇಂಥ ವ್ಯಾಜ್ಯಗಳು ಕಡಿಮೆಯಾಗುವದರಲ್ಲಿ ಏನೂ ಸಂದೇಹವಿರಲಾರದು.

ಮಹಾ ಸಭೆಯಿಂದ ನಿಯಮಿಸಲ್ಪಟ್ಟ ಮಂಡಳದವರು ಈಗ ಸಿದ್ಧಪಡಿಸಿ ಪ್ರಸಿದ್ಧಿಸಿದ ಕಾನೂನು ಇನ್ನೂ ಬಹಳ ಅನಿಶ್ಚಯಾತ್ಮಕ ಸ್ವರೂಪದಲ್ಲಿದ್ದು ಅದು ವ್ಯಾಜ್ಯಗಳನ್ನು ದೂರಮಾಡಲಾರದೆಂದು ನಮಗೆ ತೋರುತ್ತದೆ. ಈ ಬಗ್ಗೆ ಕೆಲವು ಉದಾಹರಣೆಗಳನ್ನು ನಾವು ಕೆಳಗೆ ಕೊಡುತ್ತೇವೆ.

ವಿರಕ್ತ ಮಠಗಳಿಗೆ ಅಥವಾ ಶಿಷ್ಯವರ್ಗ ಮತ್ತು ಪುತ್ರವರ್ಗ ಮಠಗಳಿಗೆ ಉತ್ತರಾಧಿಕಾರಿಯನ್ನು ನೇಮಿಸುವಲ್ಲಿ ಆ ಮಠಗಳ ಶಿಷ್ಯರು ಸರ್ವಾನುಮತದಿಂದಾಗಲಿ ಬಹುಮತದಿಂದಾಗಲಿ ನೇಮಿಸಲು ಹಕ್ಕುದಾರರಿದ್ದಾರೆಂದು ಒಂದು ಸೂಚನೆಯು ಇದರಲ್ಲಿ ಇದೆ. ಒಂದು ಗ್ರಾಮದಲ್ಲಿ ಅನೇಕ ಮಠಗಳಿರುತ್ತವೆ. ಗ್ರಾಮಗಳಲ್ಲಿಯವರು ತಮ್ಮ ತಮ್ಮ ಮಠಗಳನ್ನು ಗೊತ್ತುಪಡಿಸಿಕೊಂಡು ಅವುಗಳಿಗೆಯೇ ನಡೆಯುವರುಮಂಟು. ಉಳಿದ ಮಠಗಳಿಗೋಸ್ಕರ ಅವರು ವಿರೋಧವನ್ನಾಗಲಿ ಅಥವಾ ಉದಾಸೀನತೆಯನ್ನಾಗಲಿ ತಾಳಿರುತ್ತಾರೆ. ಆದ್ದರಿಂದ ವಿರೋಧ ಭಾವವುಳ್ಳ ಮತದಾರರ ಮತವನ್ನು ಸ್ವೀಕರಿಸಲು ಆ ಮಠದ ಅನುಯಾಯಿಗಳು ಒಪ್ಪಲಿಕ್ಕಿಲ್ಲ. ಈ ಸ್ಥಿತಿಯು ಬಹುತರ ಎಲ್ಲ ಗ್ರಾಮಗಳಲ್ಲಿಯೂ ಇರುತ್ತದೆ. ವೈಸೂರು ಪ್ರಾಂತದಲ್ಲಿ ಅನೇಕ ಉಪಪಂಗಡಗಳಿದ್ದು ಅವುಗಳೊಂದೊಂದು ಮಠಗಳಾಗಿವೆ. ಉತ್ತರ ಕರ್ನಾಟಕದಲ್ಲಿಯೂ ಕೆಲವು ಕಡೆಗೆ ಹೀಗೆಯೇ ಇದೆ. ಆದ್ದರಿಂದ ಮಠದ ಶಿಷ್ಯರಾರು, ಅವರಲ್ಲಿ ಮತಕೊಡತಕ್ಕವರಾರು, ಚುನಾವಣೆಯು ಯಾವ ಪದ್ಧತಿಯನ್ನು ಅನುಸರಿಸಬೇಕು, ಎಂಬ ವಿಷಯಗಳನ್ನು ಗೊತ್ತುಪಡಿಸದೆ ಇದ್ದರೆ ಉತ್ತರಾಧಿಕಾರಿ ನೇಮಿಸುವ ಬಗ್ಗೆ ವ್ಯಾಜ್ಯಗಳು ಹೋಗಲಾರವೆಂದು ನಮಗೆ ತೋರುತ್ತದೆ.

ಮಠಾಧಿಕಾರಿಯಾದ ಬಳಿಕ ಮಠದ ಆಸ್ತಿಯ ಮೇಲೆ ಅವನ ಹಕ್ಕು ಎಷ್ಟರ ಮಟ್ಟಿಗೆ ಇರತಕ್ಕದ್ದು, ಅದರ ಮೇಲೆ ಅವನ ಪೂರ್ಣ ಸ್ವಾಮಿತ್ವವಿರತಕ್ಕುದೋ ಹೇಗೆ, ಇದ್ದಿದ್ದಾದರೆ ಅದರ ಎಂಥ ಆಸ್ತಿಯ ಮೇಲೆ, ಒಂದುವೇಳೆ ಈ ಸ್ವಾಮಿತ್ವವು ನಿಯಂತ್ರಿತವಾಗಿದ್ದರೆ ನಿಯಂತ್ರಣಕ್ಕೋಸ್ಕರ ಯಾವ ಅಧಿಕಾರಿಯು ಇರತಕ್ಕದ್ದು, ಮಠದ ಆದಾಯವನ್ನು ಹೇಗೆ ವಿನಿಯೋಗಿಸಬೇಕು, ಇವೇ ಮೊದಲಾದ ವಿಷಯಗಳನ್ನು ನಿರ್ಧರಿಸಬೇಕಾಗುತ್ತದೆ. ಇವುಗಳು ಇದರಲ್ಲಿ ನಿರ್ಧರಿಸಲ್ಪಟ್ಟಿಲ್ಲ. ಇದರಿಂದ ಮಠದ ಉದ್ದೇಶಗಳು ಪೂರ್ಣವಾಗಲಾರವು.

ಮಠಾಧಿಕಾರಿಯು ಅಯೋಗ್ಯ ವರ್ತನೆಯುಳ್ಳವನಾಗಿದ್ದರೆ ಅವನನ್ನು ತಳ್ಳಿಹಾಕುವ ಅಧಿಕಾರವಿದೆಯೋ ಹ್ಯಾಗೆ ಎಂಬುದರ ಉಲ್ಲೇಖವು ಈ ಸೂಚಿತ ಕಾನೂನಿನಲ್ಲಿಲ್ಲ. ಮಠಾಧಿಕಾರಿಯು ಕೆಲವೊಂದು ಯೋಗ್ಯತೆಯುಳ್ಳವನಿರಬೇಕಾಗಿದ್ದರೆ ಆ ಯೋಗ್ಯತೆಯನ್ನು ಅವನು

ಮುಂದೆ ಕಳಕೊಂಡರೆ ಅದರೊಡನೆ ಅವನ ಅಧಿಕಾರವೂ ಹೋಗತಕ್ಕದ್ದು ನ್ಯಾಯಸಮ್ಮತವು. ಈ ವಿಷಯವಾಗಿಯೂ ಯೋಗ್ಯ ನಿರ್ಧಾರಗಳು ಇದರಲ್ಲಿಲ್ಲ.

"ಪುತ್ರವರ್ಗಮಠದ ಪಟ್ಟಾಧಿಕಾರವನ್ನು ಆ ಕುಟುಂಬದ ಇತರ ಜನರು ಮಠದ ಪದ್ಧತಿಯ ಪ್ರಕಾರ ಶಿಷ್ಯರ ಸಮ್ಮತಿಯಿಂದಾಗಲಿ ಅವರ ಸಮ್ಮತಿ ಇಲ್ಲದೆಯಾಗಲಿ ನೇಮಿಸಿ ಅಧಿಕಾರ ಕೊಡಬಹುದು." ಎಂದು ಈ ಸೂಚನಾಪತ್ರಿಕೆಯಲ್ಲಿ ಹೇಳಿದೆ. ಇದು ಅತ್ಯಂತ ಅನಿಶ್ಚಯಾತ್ಮಕ ಭಾಷೆಯಲ್ಲಿದೆ. "ಕುಟುಂಬದ ಇತರ ಜನರು" ಎಂದರೆ ಯಾರು, ಅವರು ಎಷ್ಟು ತಲೆಯ ವರೆಗಿನವರು ಇರಬೇಕು, ಎಂಬುದರ ನಿರ್ದೇಶಗಳಿಲ್ಲ. ಅಥವಾ ಅವರು ಸಂಯುಕ್ತ ಕುಟುಂಬದವರಷ್ಟೇ ಇರಬೇಕೋ ಹೇಗೆ ಇದೂ ತಿಳಯುವದಿಲ್ಲ. ಒಂದು ವೇಳೆ ಅಣ್ಣ ತಮ್ಮಂದಿರಲ್ಲಿಯೇ ವ್ಯಾಜ್ಯಗಳುಂಟಾದಲ್ಲಿ ಈ ಬಗೆಯ ನಿಯಮವು ಕೋರ್ಟುಗಳಿಗೆ ಸಹಾಯಕಾರಿಯಾಗಲಾರದು. ಮುಂದೆ—"ಮಠದ ಪದ್ಧತಿಯ ಪ್ರಕಾರ" ಮತ್ತು "ಶಿಷ್ಯರ ಸಮ್ಮತಿಯಿಂದಾಗಲಿ, ಅವರ ಸಮ್ಮತಿ ಇಲ್ಲದೆಯಾಗಲಿ, ನಿಯಮಿಸಿ" ಎಂಬ ಶಬ್ದಗಳು ಇಲ್ಲಿ ಇವೆ. ಇಲ್ಲಿ ಮಠದ ಪದ್ಧತಿಯನ್ನು ನಿಶ್ಚಯಪಡಿಸದೆ ಹೋದರೆ ಇಂಥ ಕಾನೂನಿನಿಂದ ಏನು ಪ್ರಯೋಜನ?

ಮಠದ ಕಾರ್ಯಗಳು "ಲಿಂಗಾಯತನ ಜನ್ಮ, ಲಗ್ನ, ಮರಣ ಮುಂತಾದ ವಿಧಿಗಳನ್ನು ಮಾಡುವದು ಮತ್ತು ಲಿಂಗದೀಕ್ಷೆ ಮಾಡುವದು ಇವು ಪಟ್ಟಾಧಿಕಾರಿಯು ಲಿಂಗಾಯತ ಸಮಾಜದ ಸಂಬಂಧವಾಗಿ ಮಾಡತಕ್ಕ ಕರ್ತವ್ಯಗಳು" ಎಂದು ಗಳನೇ ನಿಯಮದಲ್ಲಿದೆ. ಈ ಕರ್ತವ್ಯಗಳು ಪೂರ್ಣವಾಗಿಲ್ಲೆಂದು ನಮಗೆ ತೋರುತ್ತದೆ. ಇವು ಇನ್ನೂ ಹೆಚ್ಚಿಗೆ ವ್ಯಾಪಕವಾಗಿರುವದು ಆವಶ್ಯವಾಗಿರುತ್ತದೆ.

ಮಠದ ಪಟ್ಟಾಧಿಕಾರಿಯು ತನ್ನ ಜೀವಮಾನದಲ್ಲಿ ತನ್ನ ಉತ್ತರಾಧಿಕಾರಿಯನ್ನು ನೇಮಿಸುವ ಸ್ವತಂತ್ರ ಹಕ್ಕು ಅವನಿಗೆ ಇರುತ್ತದೆಂಬ ಅಭಿಪ್ರಾಯವು ಈ ಪತ್ರಿಕೆಯಲ್ಲಿದೆ. ಮಠಗಳು ಸಾರ್ವಜನಿಕ ಸ್ವರೂಪುಳ್ಳವುಗಳಿದ್ದರೆ, ಮಠದ ಪಟ್ಟಾಧಿಕಾರಿಗೆ ಇಂಥ ಅಧಿಕಾರವು ಅನಿರ್ಬಂಧವಾಗಿರುವದು ಸರಿಯಾಗಲಾರದು.

ಇವೆಲ್ಲ ವಿಷಯಗಳು ವಾದಗ್ರಸ್ತವಾಗಿವೆ. ಇವುಗಳು ನಿರ್ಧಾರವಾಗದೆ ಹೋದಲ್ಲಿ ಮತದ ವ್ಯಾಜ್ಯಗಳು ನಿಲ್ಲಲಾರವು. ಈಗಿನ ಪರಿಸ್ಥಿತಿಯಲ್ಲಿ ಕೇವಲ ವಿರಕ್ತಮತಗಳು ಮತ್ತು ಶಿಷ್ಯವರ್ಗ ಗುರುಸ್ಥಲ ಮತಗಳು ಇವುಗಳಿಗೆ ಮಾನ್ಯ ಅನ್ವಯಿಸುವಂಥ ಕಾಯದೆಯನ್ನು ಮಾಡಿಕೊಳ್ಳುವದು ಹೆಚ್ಚಿಗೆ ವ್ಯವಹಾರ್ಯವಾದೀತೆಂದು ನನಗೆ ತೋರುತ್ತದೆ. ಅವುಗಳಷ್ಟೇ ಸಮಾಜವ ಮತಗಳೆಂದು ಭಾವಿಸಿ ಮದ್ರಾಸ ಇಲಾಪೆಯಲ್ಲಿ ಹೇಗೆ ಧಾರ್ಮಿಕ ಸಂಸ್ಥೆಗಳು ನಿಯಂತ್ರಣಗೊಳಿಸಲ್ಪಟ್ಟಿವೆಯೋ ಹಾಗೆಯೇ ಇವುಗಳನ್ನು ಮೊದಲು ನಿಯಂತ್ರಣಗೊಳಿಸಬೇಕು.

ಒಟ್ಟಿಗೆ ಮತಗಳ ಬಗ್ಗೆ ಕಾಯದೆ ಇರುವದು ಅವಶ್ಯವು. ಅದು ಅನಿಶ್ಚಯಾತ್ಮಕವಿರುವದರಿಂದ ಸಮಾಜದ ಹಣವು ವ್ಯಾಜ್ಯಗಳ ಮೂಲಕ ಬಹಳ ಹಾಳಾಗುತ್ತಿದೆ. ಈ ಸ್ಥಿತಿಯನ್ನು ನಾವು ಅವಶ್ಯವಾಗಿ ದೂರ ಮಾಡಿಕೊಳ್ಳಬೇಕು. ಅದರೆ ಯಾವ ವಿಷಯಗಳ ಬಗ್ಗೆ ಅವು ಇರತಕ್ಕವೆಂಬುದನ್ನು ಗೊತ್ತುಪಡಿಸಬೇಕು.

ಮೊದಲು ಬೇರೆ ಬೇರೆ ಪ್ರಾಂತಗಳಲ್ಲಿರುವ ರೂಢಿಗಳನ್ನು ನಾವು ಸ್ಥಾನಿಕ ನಿರೀಕ್ಷಣೆ ಮಾಡಿ ಗೊತ್ತುಪಡಿಸಿಕೊಂಡು ಅವುಗಳ ಮತ್ತು ಈಗ ಉಪಲಬ್ಧವಿರುವ ಗ್ರಂಥಗಳ ಸಹಾಯದಿಂದ ವೀರಶೈವ ಮತಗಳ ಪದ್ಧತಿಗಳ ಬಗ್ಗೆ ಒಂದು ಅಧಿಕೃತ ಗ್ರಂಥವನ್ನು ಸಿದ್ಧಪಡಿಸುವದು ಅವಶ್ಯವೆಂದು ತೋರುತ್ತದೆ. ಹೀಗೆ ಸಿದ್ಧಪಡಿಸಿ ಅದರೊಳಗೆ ಹೇಳಿದ ವಿಷಯಗಳು ಯೋಗ್ಯವೂ ಸತ್ಯವೂ ಎಂದು ಸಾರ್ವಜನಿಕವಾಗಿ ಕಂಡುಬಂದಲ್ಲಿ ಅವುಗಳಿಗನುಸಾರವಾಗಿ 'ವೀರಶೈವರ ಕಾಯದೆ'ಯನ್ನು ನಿರ್ಮಿಸಿಕೊಳ್ಳುವದು ಹೆಚ್ಚಿಗೆ ಸುಲಭವಾಗುವದು. ಆದ್ದರಿಂದ ಮಹಾಸಭೆಯ ಕಾರ್ಯಕರ್ತರ್ಯಗಳು ಈ ರೀತಿ ಪ್ರಯತ್ನಿಸುವದು ಹೆಚ್ಚಿಗೆ ಪ್ರಯೋಜನವಾದದ್ದು ಎಂದು ನಮಗೆ ತೋರುತ್ತದೆ.

ಅವರು ಒಂದು ಆಕಳನ್ನು ಕದ್ದು ಅದನ್ನು ಕೊಂದರು. ಆಗ ಪಟ್ಟಣದಲ್ಲಿಯ ಜನರು ಸಿಟ್ಟಿಗೆದ್ದು ಅವರ ಅಂಗಡಿಯನ್ನು ಮುತ್ತಿದರು. ಅಲ್ಲಿದ್ದ ಮೆಣಸನ್ನು ಹಾಳುಮಾಡಿದರು. ಆದರೆ ಇಂಗ್ಲಿಷರು ಜನರಿಗೆ ತಾವು ಹಾನಿ ತುಂಬಿಕೊಡುವೆವೆಂದು ಹೇಳಿದ ಬಳಿಕ ಜಗಳವು ನಿಂತಿತು. ಇದರಿಂದ ಆಗಿನ ಕಾಲದ ಜನರಲ್ಲಿ ಎಷ್ಟು ಸ್ವಾಭಿಮಾನವು ವಾಸಮಾಡುತ್ತಿತ್ತೆಂಬುದೂ ಇಂಗ್ಲಿಷರು ಎಷ್ಟು ದುರ್ಬಲಸ್ಥಿತಿಯಲ್ಲಿದ್ದರೆಂಬುದೂ ತಿಳಿಯುತ್ತಿದೆ.

ಸದಾಶಿವರಾಜನು ತನ್ನ ರಾಜ್ಯದಲ್ಲಿ ಘಟ್ಟದ ಮೇಲಿನ ಸೀಮೆಗೆ ಬಾಲಾಘಾಟವೆಂತಲೂ ಸಮುದ್ರ ತೀರದ ಪ್ರದೇಶಕ್ಕೆ ಪಯಣಘಾಟವೆಂತಲೂ ವಿಂಗಡಿಸಿ ರಾಜ್ಯ ವ್ಯವಸ್ಥೆಯನ್ನು ಮಾಡಿ ಅಲ್ಲಲ್ಲಿಯ ಪರಿಸ್ಥಿತಿಗನುಸರಿಸಿ ಕಂದಾಯವನ್ನೆತ್ತುತ್ತ ರಾಜ್ಯವಾಳುತ್ತಿದ್ದನು. ಈಪ್ರಕಾರ ಸದಾಶಿವರಾಜನು ಬಹು ವೈಭವದಿಂದಲೂ ಜಾಣತನದಿಂದಲೂ ರಾಜ್ಯವಾಳಿದನು.

ಬಸವಲಿಂಗರಾಜಃ— ಸದಾಶಿವರಾಜನ ತರುವಾಯ ಅವನ ಮಗನಾದ ಬಸವರಾಜನು ಪಟ್ಟವೇರಿದನು. ಅವನು ೧೬೭೭ ರಿಂದ ೧೬೯೫ ರವರೆಗೆ ಅಂದರೆ ೪೮ ವರ್ಷಗಳ ವರೆಗೆ ರಾಜ್ಯಭಾರಮಾಡಿದನು. ಇವನು ತನ್ನ ತಂದೆ ಸದಾಶಿವರಾಯನಕಿಂತಲೂ ಹೆಚ್ಚಾದ ಘನತೆಯಿಂದಲೂ ವೈಭವದಿಂದಲೂ ರಾಜ್ಯವಾಳಿದನು. ಅವನು ತನ್ನ ರಾಜ್ಯದ ಮೇರೆಯನ್ನು ಹೆಚ್ಚಿಸಿ, ಅದನ್ನು ದಕ್ಷಿಣಕ್ಕೆ ವಿರ್ಜಾನ ಬಂದರದ ವರೆಗೆ ಬೆಳಿಸಿದನು. ಅವನ ರಾಜ್ಯದಲ್ಲಿ ಕಾರವಾರ ಅಂಕೋಲಾ, ಕದರಮಡಿ ಮತ್ತು, ವಿರ್ಜಾನ ಎಂಬ ಮುಖ್ಯ ಬಂದರಗಳುಂಟಾಗಿ ಅವುಗಳ ಮೂಲಕ ಪರದೇಶಗಳ ಕೂಡ ಬಹು ದೊಡ್ಡ ವ್ಯಾಪಾರವು ನಡೆಯುತ್ತಿತ್ತು ಅವನ ರಾಜ್ಯದಲ್ಲಿ ಇಂಗ್ಲಿಷರೂ ಪೋರ್ತುಗೀಜರೂ ಅಂಗಡಿಗಳನ್ನು ಹಾಕಿಕೊಂಡು ವ್ಯಾಪಾರ ಮಾಡುವರು. ಇಂಗ್ಲಿಷರು ಕಾರವಾರದಲ್ಲಿಯೂ ಹಲ್ಯಾಳದಲ್ಲಿಯೂ ತಮ್ಮ ಅಂಗಡಿಗಳನ್ನು ಹಾಕಿದ್ದರು. ಆದರೆ ಅವರಿಗೂ ಬಸವಲಿಂಗರಾಜನಿಗೂ ವಿರೋಧಗಳು ಉಂಟಾಗಿ ಆಗಿಂದಾಗ್ಗೆ ಕದನಗಳೇಳುತ್ತಿದ್ದವು. ಈ ಪರಕೀಯರು ಕೇವಲ ವ್ಯಾಪಾರಿಗಳಾಗಿರದೆ ದಂಡಾಳುಗಳನ್ನು ತೆಗೆದುಕೊಂಡು ದೇಶದ ಅಂತಸ್ಥ ಕಲಹಗಳಲ್ಲಿ ಸೇರಿ

ಕೊಳ್ಳಲು ಯಾವಾಗಲೂ ಯತ್ನಿಸುತ್ತಿದ್ದರು. ಆದರೆ ಸ್ವಾದಿ ಮತ್ತು ಕೆಳದಿಯ ರಾಜರು ಅವರ ವರ್ಚಸ್ಸನ್ನು ತಮ್ಮ ರಾಜ್ಯದಲ್ಲಿ ಬೆಳೆಯ ದಂತೆ ಜಾಣತನದಿಂದ ವರ್ತಿಸುತ್ತ ಬಂದರು. ೧೭೧೫ ರಲ್ಲಿ ಬಸವ ಲಿಂಗ ರಾಜನಿಗೆ ಕಾರವಾರದಲ್ಲಿಯ ಇಂಗ್ಲಿಷರ ಫ್ಯಾಕ್ಟರಿಯನ್ನು ಮುತ್ತುವ ಪ್ರಸಂಗವು ಬಂದೊದಗಿತು. ಅವನು ೨ ತಿಂಗಳ ವರೆಗೆ ಅದನ್ನು ಮುತ್ತಿದನು. ಇಂಗ್ಲಿಷ ನೌಕಾಪಡೆಯು ಈ ಮುತ್ತಿಗೆಯನ್ನೆಬ್ಬಿಸಲು ಎಷ್ಟು ಪ್ರಯತ್ನಬಟ್ಟರೂ ಅದು ಸಾಧ್ಯವಾಗಲಿಲ್ಲ. ಆದರೆ ಕಡೆಗೆ ಒಬ್ಬ ದೊಡ್ಡ ವ್ಯಾಪಾರಸ್ತನ ಮಧ್ಯಸ್ಥಿಕೆಯಿಂದ ಉಭಯತರಲ್ಲಿ ಒಡಂಬಡಿಕೆ ಯಾಯಿತು.

ಮುಂದೆ ಬಸವಲಿಂಗರಾಜನು ಕಾರವಾರದ ಉತ್ತರಕ್ಕೆ ಕಾಳೀ ನದಿಯ ಮುಖದಲ್ಲಿ ಮೊದಲಿದ್ದ ಕೋಟೆಯನ್ನು ಕೆಡವಿ ಅಲ್ಲಿ ತನ್ನ ತಂದೆಯ ಹೆಸರಿನಿಂದ 'ಸದಾಶಿವಗಡ' ಎಂಬ ಬಲವಾದ ಕೋಟೆ ಯನ್ನು ಕಟ್ಟಿಸಿದನು. ಮುಂದೆ ಅವನಿಗೂ ಇಂಗ್ಲಿಷರಿಗೂ ಕೂಡಿ ಬಾರದ್ದರಿಂದ ಇಂಗ್ಲಿಷರು ಅವನ ರಾಜ್ಯದಲ್ಲಿಯ ಅಂಗಡಿಗಳನ್ನು ಕಿತ್ತು ಕೊಂಡು ಮದ್ರಾಸದ ಕಡೆಗೆ ಹೋಗಿ ಅಲ್ಲಿ ನಿಂತುಕೊಂಡರು. ಅಲ್ಲಿ ಅವರೂ ಫ್ರೆಂಚರೂ ವ್ಯಾಪಾರ ನಡಿಸಿದರು. ಮುಂದೆ ಈ ಉಭಯತರು ಕರ್ನಾಟ ನವಾಬನ ರಾಜ್ಯಕಾರಭಾರದಲ್ಲಿ ಕೈಹಾಕಿ ಒಬ್ಬರನ್ನೊಬ್ಬರು ಸ್ಪರ್ಧಿಸುತ್ತ ರಾಜ್ಯವನ್ನು ಸೆಳೆದುಕೊಳ್ಳುವ ಕಾರ್ಯಗಳನ್ನು ಆರಂಭಿ ಸಿದ್ದು ಇತಿಹಾಸ ಪ್ರಸಿದ್ಧವಿದೆ. ಆದರೆ ಅವರ ಈ ಆಟವನ್ನು ಸ್ವಾದಿಯ ಮತ್ತು ಕೆಳದಿಯ ರಾಜರು ತಮ್ಮ ರಾಜ್ಯಗಳಲ್ಲಿ ನಡಿಯಗೊಡಲಿಲ್ಲ.

ಬಸವಲಿಂಗರಾಜನ ಕೂಡ ಪೋರ್ತುಗೀಜರು ಸಹಕಾರದಿಂದ ವರ್ತಿಸಿದರು. ೧೬೯೭ ಮತ್ತು ೧೭೦೯ ರಲ್ಲಿ ಅವರು ಬಸವಲಿಂಗರಾಜನ ಕೂಡ ಒಂದು ಒಡಂಬಡಿಕೆ ಮಾಡಿಕೊಂಡು ಸ್ನೇಹದಿಂದ ವರ್ತಿಸುತ್ತ ಬಂದರು. ಇದರಿಂದ ಅವರು ತಮ್ಮ ವ್ಯಾಪಾರವನ್ನು ಕರ್ನಾಟಕದ ಕೂಡ ಯಾವ ತೊಂದರೆಗಳಿಲ್ಲದೆ ನಡಿಸುತ್ತ ಬಂದರು.

ಈ ಕಾಲದಲ್ಲಿ ಪೇಶ್ವೆಯರು ಪ್ರಬಲರಾಗಿ ಕರ್ನಾಟಕದಲ್ಲಿ ದಾಳೀ ಮಾಡಿ ಪ್ರೌಢ ಎತ್ತುವ ಪ್ರಯತ್ನದಲ್ಲಿ ತೊಡಗಿದ್ದರು. ೧೭೨೭ ರಲ್ಲಿ ಪೇಶ್ವೆ ಬಾಳಾಜಿ ಬಾಜೀರಾಯನು ಕರ್ನಾಟಕದಲ್ಲಿ ದಾಳೀ ಮಾಡಿದನು.

ಅವನು ಸ್ವಾದೀ ರಾಜಧಾನಿಯ ಮೇಲೇರಿ ಹೋಗಿ ಅದನ್ನು ಸುಲಿದನು. ಆಗ ಬಸವಲಿಂಗರಾಜನು ಅವನಿಗೆ ಚೌಥವನ್ನು ಕೊಡಬೇಕಾಯಿತು. ಆದರೆ ಪೇಶ್ವೆಯರ ಪ್ರಾಬಲ್ಯವು ಮುಂದೆ ಕಡಿಮೆಯಾಗಲು ಅವನು ಇದನ್ನು ಕೊಡುವದನ್ನು ನಿಲ್ಲಿಸಿಬಿಟ್ಟನು. ೧೭೫೯ ರಲ್ಲಿ ಪೋರ್ತುಗೀಜರಿಗೂ ಮರಾಠರಿಗೂ ಕದನಗಳಿದ್ದವು. ಅವುಗಳಲ್ಲಿ ಬಸವಲಿಂಗರಾಜನು ಪೋರ್ತುಗೀಜರ ಪಕ್ಷವನ್ನು ವಹಿಸಿ ಅವರಿಗೆ ಸಹಾಯ ಮಾಡಿದನು.

ಸ್ವಾದಿಯ ರಾಜ್ಯವು ಅತ್ಯಂತ ನಿಬಿಡವಾದ ಅರಣ್ಯ ಪ್ರದೇಶದಲ್ಲಿ ದ್ದದರಿಂದ ಅದು ಎಷ್ಟು ಶ್ರೀಮಂತವಿದ್ದರೂ ವಿರೋಧಿಗಳು ಅದರ ಮೇಲೇರಿ ಬಂದು ಅದನ್ನು ಕೈವಶಮಾಡಿಕೊಳ್ಳಲು ಸಾಹಸ ಮಾಡು ತ್ತಿದ್ದಿಲ್ಲ. ಈ ಪ್ರಕಾರ ಬಸವಲಿಂಗರಾಜನು ತನ್ನ ರಾಜ್ಯದಲ್ಲಿ ಪರಕೀಯರ ಪ್ರವೇಶಕ್ಕೆ ಇಂಬುಗೊಡದೆ ಅದನ್ನು ಉತ್ತಮ ರೀತಿಯಿಂದ ೪೮ ವರ್ಷ ಗಳವರೆಗೆ ಪರಿಪಾಲನೆ ಮಾಡಿದನು.

ಇಮ್ಮಡಿ ಸದಾಶಿವರಾಜಃ— ಬಸವಲಿಂಗರಾಜನ ತರುವಾಯ ಅವನ ಮಗನಾದ ಇಮ್ಮಡಿ ಸದಾಶಿವರಾಜನು ಪಟ್ಟವೇರಿದನು. ಅವನು ೧೭೪೫ ರಿಂದ ೧೭೬೩ ರ ವರೆಗೆ ರಾಜ್ಯವಾಳಿದನು. ಇವನು ಬಹಳ ದುರ್ಬಲನಾಗಿದ್ದನು. ಮತ್ತು ತನ್ನ ವೇಳೆಯನ್ನು ಸ್ತ್ರೈರವೃತ್ತಿಯಲ್ಲಿಯೇ ಕಳೆಯುತ್ತಿದ್ದನು. ೧೭೫೦ ರಲ್ಲಿ ಅವನ ರಾಜ್ಯವನ್ನು ಮರಾಠರು ಅಭಿ ಯೋಗಿಸಿದರು. ಅವರಿಗೆ ಅವನು ಒಂದು ಲಕ್ಷ ರೂಪಾಯಿಗಳ ಕಪ್ಪ ವನ್ನು ಕೊಡಬೇಕಾಯಿತು. ಅದರಿಂದ ಜನರ ಮೇಲೆ ಬಹು ಹೆಚ್ಚಾದ ಕರಭಾರವನ್ನು ಅವನು ಹಾಕಬೇಕಾಯಿತು.

ಅವನ ಕಾಲದಲ್ಲಿ ಪೋರ್ತುಗೀಜರು ಬಹಳ ಪ್ರಾಬಲ್ಯವನ್ನು ಹೊಂದಿದರು. ಅವನಿಗೆ ಹಣದ ಕೊರತೆಯಾದದ್ದರಿಂದ ಮೊದಲು ಇಂಗ್ಲಿಷರಿಗೆ ಹಣಕೊಡಲು ಕೇಳಿಕೊಂಡನು. ಅವರು ತಮಗೆ ರಾಜ್ಯ ದಲ್ಲಿ ವ್ಯಾಪಾರ ನಡಿಸಲು ಅನುಕೂಲ ಮಾಡಿಕೊಟ್ಟರೆ ಮಾತ್ರ ಹಣ ಕೊಡುವೆವೆಂದು ಹೇಳಿದರು. ಆದರೆ ಪೋರ್ತುಗೀಜರು ಅದಕ್ಕೆ ಅಡ್ಡ ಬಂದು ಅರಸನೊಡನೆ ತಾವೇ ಒಪ್ಪಂದ ಮಾಡಿಕೊಂಡು, ಅದರ ಪ್ರಕಾರ ಅವನ ರಾಜ್ಯದಲ್ಲಿ ೪ ಹಳ್ಳಿಗಳನ್ನು ಪಡೆದರು. ಮತ್ತು

೧೭೨೦ ರಲ್ಲಿ ಪೀರ ಎಂಬಲ್ಲಿಯೂ ೧೭೨೪ ರಲ್ಲಿ ಕಾರವಾರದ ದಕ್ಷಿಣಕ್ಕೆ ಬಯತಪೋಲಿನ ಸಮೀಪದಲ್ಲಿಯೂ ಕೋಟೆಗಳನ್ನು ಕಟ್ಟಲಿಕ್ಕೆ ಒಪ್ಪಿಗೆಯನ್ನು ಪಡೆದರು. ೧೭೨೪ ರಲ್ಲಿ ಮರಾತರು ಪುನಃ ರಾಜ್ಯವನ್ನು ಅಭಿಯೋಗಿಸಲು ರಾಜನು ಅವರಿಗೆ ಕಪ್ಪವನ್ನು ಕೊಟ್ಟು ಹಿಂದಿರುಗಿಸಬೇಕಾಯಿತು. ಮುಂದೆ ೧೭೬೩ ರಲ್ಲಿ ಹೈದರಲ್ಲಿಯು ಬಿದನೂರನ್ನು ಆಕ್ರಮಿಸಿ ಆ ರಾಜ್ಯವನ್ನು ನಷ್ಟ ಮಾಡಿದನು. ಆ ಮೇಲೆ ಅವನು ಅಲ್ಲಿಂದ ಸ್ವಾದಿಯ ರಾಜ್ಯವನ್ನು ಅಭಿಯೋಗಿಸಲು ರಾಜನು ಸಮುದ್ರ ತೀರದಲ್ಲಿರುವ ಶಿವೇಶ್ವರ ಎಂಬಲ್ಲಿಗೆ ಓಡಿಹೋದನು. ಆಗ ಹೈದರಲ್ಲಿಯ ಸೇನಾಪತಿಯಾದ ಹೈಬತಜಂಗನು ರಾಜ್ಯವನ್ನೆಲ್ಲ ಆಕ್ರಮಿಸಿದನು. ಅವನು ಸ್ವಾದಿ, ಶಿವೇಶ್ವರ, ಸದಾಶಿವಗಡ, ಅಂಕೋಲಾ ಈ ಗ್ರಾಮಗಳನ್ನು ಕೈವಶಮಾಡಿಕೊಳ್ಳಲು, ಅರಸನು ಪೋರ್ತುಗೀಜರ ಸೀಮೆಗೆ ಓಡಿ ಹೋಗಿ ಅಲ್ಲಿ ಆಶ್ರಯಪಡೆದನು. ಪೋರ್ತುಗೀಜರು ಅವನ ಉಪಜೀವನಕ್ಕೋಸ್ಕರ ಪೆನಶನ್ನವನ್ನು ಕೊಡಹತ್ತಿದರು.

ಸವಾಯಿ ಬಸವಲಿಂಗರಾಜಃ— ಇಮ್ಮಡಿ ಸದಾಶಿವರಾಜನ ತರುವಾಯ ಸವಾಯಿ ಬಸವಲಿಂಗರಾಜನು ಅವನ ಅಸ್ತಿಗೆ ಒಡೆಯನಾದನು. ಮುಂದೆ ಮೈಸೂರಿನ ಕೊನೆಯ ಯುದ್ಧವು ಪ್ರಾರಂಭವಾಗಿ ಅದರಲ್ಲಿ ಟೀಪುಸುಲ್ತಾನನು ಮರಣಹೊಂದಿದನು. ಈ ಕಾಲದಲ್ಲಿ ಸವಾಯಿ ಬಸವಲಿಂಗರಾಜನು ತನ್ನ ರಾಜ್ಯವನ್ನು ದೊರಕಿಸಬೇಕೆಂದು ದಂಡನ್ನು ಕೂಡಿಸಿ ಅದನ್ನು ಅಭಿಯೋಗಿಸಿದನು. ಅಷ್ಟರಲ್ಲಿ ಇಂಗ್ಲಿಷರ ಸೇನಾಪತಿಯಾದ ಕರ್ನಲ್ ವೆಲ್ಲೆಸ್ಲೆಯು ಈ ಭಾಗದಲ್ಲಿ ನುಗ್ಗಿದನು. ಈ ಪ್ರಾಂತವು ನಿರುಪಯೋಗವಾದುದೆಂದು ಇಂಗ್ಲಿಷರಿಗೆ ಭಾಸವಾಗಬೇಕೆಂದು ಸವಾಯಿ ಬಸವಲಿಂಗರಾಜನು ಈ ಭಾಗದಲ್ಲಿದ್ದ ಬೆಲೆಯುಳ್ಳ ತೋಟಗಳನ್ನು ಕಡಿಸಿಹಾಕಿ ಜನರಿಗೆ ಬಹಳ ಹಾನಿಮಾಡಿದನು. ಆದರೆ ವೆಲ್ಲೆಸ್ಲೆಯು ಇದನ್ನು ಗಣಿಸದೆ ಸಾಂಬ್ರಾಣಿ, ಹಲ್ಯಾಳ, ಸುಪೆ ಈ ಗ್ರಾಮಗಳನ್ನು ಕೈವಶಮಾಡಿಕೊಂಡು ರಾಜ್ಯವನ್ನೆಲ್ಲ ತನ್ನ ಸ್ವಾಧೀನದಲ್ಲಿ ತೆಗೆದುಕೊಂಡನು. ಅಂದಿನಿಂದ ಕಾರವಾರ ಜಿಲ್ಲೆಯು ಕಂಪನಿ ಸರಕಾರಕ್ಕೆ ಜೋಡಿಸಲ್ಪಟ್ಟಿತು.

ಸವಾಯಿ ಬಸವಲಿಂಗರಾಜನು ಪೋರ್ತುಗೀಜರ ಆಶ್ರಯವನ್ನು ಹೊಂದಿ ಅಲ್ಲಿಯೇ ಇರಹತ್ತಿದನು. ಅವನು ೧೮೩೪ ರಲ್ಲಿ ತೀರಿಕೊಂ

ಡನು. ಅವನ ತರುವಾಯ ಅವನ ಮಗನಾದ ಸದಾಶಿವರಾಜನು ಅವನ ಅಸ್ತಿಗೆ ಒಡೆಯನಾದನು. ಅವನು ಕೆಲವು ತಿಂಗಳು ಮಾತ್ರ ಜೀವಿಸಿದ್ದನು. ಅವನ ತರುವಾಯ ಅವನ ತಮ್ಮನಾದ ವೀರರಾಜೇಂದ್ರ ಒಡೆಯರು, ಅವನ ತರುವಾಯ ಅವನ ಮಗನಾದ ಸವಾಯಿ ಬಸವಲಿಂಗರಾಜೇಂದ್ರ ಒಡೆಯರು, ಅವನ ತರುವಾಯ ಸವಾಯಿ ವೀರ ಸದಾಶಿವರಾಜೇಂದ್ರ ಒಡೆಯರು, ಆಧಿಪತ್ಯಕ್ಕೆ ಬಂದರು. ಕಡೆಯವರು ಕೆಲವು ವರ್ಷಗಳ ಹಿಂದೆ ತೀರಿಕೊಂಡರು. ಪೋರ್ತುಗೀಜ ಸರಕಾರದವರು ರಾಜಮನೆತನಕ್ಕೆ ಸಲ್ಲುವ ಎಲ್ಲ ಬಹುಮಾನಗಳನ್ನೂ ೧೯ ತೋಪುಗಳ ಸಲಾಮುಗಳನ್ನೂ ಈವರೆಗೂ ಈ ಮನೆತನಕ್ಕೆ ಕೊಡುತ್ತ ಬಂದಿದ್ದಾರೆ. ಅವರು ಈಗಿರುವ ಸ್ಥಳವು ಗೋವೇ ಪ್ರಾಂತದಲ್ಲಿರುವ ಬಾಂದೇವಾಡಿಯಾಗಿರುತ್ತದೆ.

---

೧೭ ನೇ ಪ್ರಕರಣ.

ಬೀಳಗಿಯ ರಾಜರು.

ಬೀಳಗಿಯು ಈಗ ಕಾರವಾರ ಜಿಲ್ಲೆಯಲ್ಲಿದ್ದು ಇಲ್ಲಿ ಒಂದು ವೀರಶೈವ ರಾಜಮನೆತನವು ೧೫ನೇ ಶತಮಾನದಿಂದ ೧೮ ನೇ ಶತಮಾನದ ಅಂತ್ಯಭಾಗದ ವರೆಗೆ ರಾಜ್ಯವಾಳುತ್ತಿತ್ತು. ಈ ರಾಜ್ಯದ ಮುಖ್ಯ ಭಾಗವು ಉತ್ತರಕ್ಕೆ ಸ್ವಾದಿರಾಜ್ಯ ಮತ್ತು ದಕ್ಷಿಣಕ್ಕೆ ಕೆಳದಿಯ ರಾಜ್ಯ ಇವುಗಳ ಮಧ್ಯಪ್ರದೇಶದಲ್ಲಿ ಅಂದರೆ ಈಗಿನ ಸಿದ್ದಾಪುರ ತಾಲೂಕಿನಲ್ಲಿತ್ತು. ಮೊದಲು ಈ ರಾಜ್ಯದ ರಾಜಧಾನಿಯು ಐಸೂರು ಅಂದರೆ ಈಗಿನ ಜಂದ್ರಗುತ್ತಿಯು. ಆಮೇಲೆ ಕೆಲವು ಕಾಲ ಗತಿಸಿದ ಬಳಿಕ ಬೀಳಿಗೆಯು ಆಗಿದ್ದಿತು. 'ಬೀಳಗಿ ಅರಸರ ವಂಶಾವಳಿ' ಎಂಬ ಹೆಸರಿನ ಕಾವ್ಯವಿದ್ದು ಅದರ ಆಧಾರದಿಂದ ಕೆಳಗೆ ಕಾಣಿಸಿ ವಂಶಾವಳಿಯನ್ನು ನಾವು ಸಿದ್ಧಮಾಡಿದ್ದೇವೆ.

ಬೀಳಗಿ ಅರಸರ ವಂಶಾವಳಿ.

ಆಂಡಣ್ಣ.

ಪಾರಿಶ್ವಭೂಪ

ಮುಂಡಣ್ಣ ಒಡೆಯರ್

ಕಲ್ಲಪ್ಪ ಭೂಪ — ಬೋಳಭೂಪ — ಅಮ್ಮಣ್ಣನೃಪ

ಮುಂಡಣ್ಣ — ನರಪ

ಭೈರವನೃಪಾಲ — ಕಲ್ಲಪ್ಪ ಒಡೆಯರ — ನರಸಿಂಹಭೂಪ + ಹರಿಯಮ್ಮ

೧ ನೇ ಘಂಟೀಂದ್ರ — ಮುಂಡಣ್ಣಭೂಪ

ತಿಮ್ಮಣ್ಣ — ಲಕ್ಷ್ಮಣ

ವೀರಪ್ಪ ಒಡೆಯರ್+ವೀರಮಾಂಬೆ

ರಂಗರಾಜ+ಜಿಲುವಮ್ಮ

೨ ನೇ ಘಂಟೀಂದ್ರ+(೧) ರಾಮಾದೇವಿ
(೨) ವೀರಮಾಂಬೆ

ತಮ್ಮರಸ ಒಡೆಯರ್+ರಾಮಾಂಬಾಜಿ

೩ ನೇ ಘಂಟೀಂದ್ರ ಅಥವಾ ಮುಮ್ಮಡಿ ಘಂಟೀಂದ್ರ

೪ ನೇ ಘಂಟೀಂದ್ರ ಅಥವಾ ಸಿದ್ದಪ್ಪ ಒಡೆಯರ್
ಮೌನ ಘಂಟೀಂದ್ರ+ಚೆನ್ನಮದೇವಿ

ಘಂಟಿಮ್ಮ

ಶಿವಪ್ಪನಾಯಕ+(೧) ಶಾಂತಮ್ಮ (೧) ಗೌರಮ್ಮಾಜಿ

ಇಮ್ಮಡಿ ಶಿವಪ್ಪ+ಶಾಂತಮ್ಮಾಜಿ

೧ ನೇ ಸೋಮುಶೇಖರ+(೧) ವೀರಮ್ಮಾಜಿ
+(೨) ಚನ್ನಮುಲ್ಲಾಂಬೆ

೨ ನೇ ಸೋಮುಶೇಖರ+(೧) ನೀಲಮಾಂಬಿಕೆ (೨) ಚನ್ನಮಾಂಬೆ

ಭದ್ರಪ್ಪ — ಬಸವೇಂದ್ರ+(೧) ದೇವಮ್ಮಾಜಿ
(೨) ವೀರಮ್ಮಾಜಿ

ಶಾಂತವೀರ ರಾಜ

ಸೋಮುಶೇಖರ+ಚನ್ನಮ್ಮಾಜಿ

ಬಸವಲಿಂಗರಾಜ+ಸೌಭದ್ರಮ್ಮಾಜಿ

ಸೋಮುಶೇಖರರಾಜ

ಆಂಡಣ್ಣಃ— ಬೀಳಗಿ ರಾಜರ ಮೂಲಪುರುಷನಾರೆಂಬುದು ನಮಗೆ ಇನ್ನೂ ತಿಳಿದು ಬಂದಿಲ್ಲ. ಆದರೆ ಆಂಡಣ್ಣನೆಂಬುವನು ಐಸೂರು ಪಟ್ಟಣದಲ್ಲಿ ರಾಜ್ಯವಾಳುತ್ತಿದ್ದುದು ಬೀಳಗಿ ಅರಸರ ವಂಶಾವಳಿಯಿಂದ ತಿಳಿದು ಬರುತ್ತದೆ. ಈ ಐಸೂರು ಈಗಿನ ಚಂದ್ರಗುತ್ತಿಯು ಇರುತ್ತದೆ. ಇದು ಉನ್ನತವಾದ ಪರ್ವತ ಶಿಖರದಲ್ಲಿ ಬಹು ಭದ್ರವಾಗಿ ಕಟ್ಟಲ್ಪಟ್ಟತ್ತು.

ನರಸಿಂಹಭೂಪಃ— ಆಂಡಣ್ಣನ ತರುವಾಯ ಕೆಲವು ತಲಾಂತರಗಳ ತರುವಾಯ ನರಸಿಂಹಭೂಪನು ಪ್ರಸಿದ್ಧಿಗೆ ಬಂದನು. ಅವನು ವಿಜಯನಗರದ ಕೃಷ್ಣರಾಯನ ಕಾಳಗಗಳಲ್ಲಿ ವಿಶೇಷ ಪರಾಕ್ರಮವನ್ನು ತೋರಿಸಿದನು. ಅದರಿಂದ ಅವನಿಗೆ 'ಎಂಟು ದಂಡಿಗೆಯ ಮಲೆತರಿರಾಯ ಮನ್ನೆಯರ ಗಂಡ' ಎಂದು ಮೊದಲಾಗಿ ಬಿರುದುಗಳು ಕೊಡಲ್ಪಟ್ಟವು. ಮತ್ತು ಕೃಷ್ಣರಾಯನು ಅವನಿಗೆ ತನ್ನ ಮಗಳಾದ ಹರಿಯಮ್ಮನನ್ನು ಕೊಟ್ಟು ಲಗ್ನಮಾಡಿದನು.

೧ನೇ ಘಂಟೀಂದ್ರಃ— ಇವನು ನರಸಿಂಹಭೂಪನ ಮಗನು. ಬೆಟ್ಟದ ಮೇಲಿರುವ ತನ್ನ ರಾಜಧಾನಿಯನ್ನು ಬಿಟ್ಟುಕೊಟ್ಟು ಬೀಳಗಿಯಲ್ಲಿ ಬಂದು ಇರಲಿಕ್ಕೆ ಹತ್ತಿದನು. ಅದಕ್ಕೆ ಅವನು ಕೋಟೆ ಕೊತ್ತಲುಗಳನ್ನು ಕಟ್ಟಿಸಿದನು. ಅವನು ಸುತ್ತಲಿನ ಪ್ರದೇಶಗಳನ್ನು ಆಕ್ರಮಿಸಿ ಬೇಡ ಕಡವೆ, ಕುಣುಜೆ, ಕುಂಡಲಿ, ಮೂಗುಂದರ ಇಲ್ಲಿ ಕೋಟೆಗಳನ್ನು ಕಟ್ಟಿಸಿದನು.

ರಂಗರಾಜಃ— ಇವನ ಕಾಲದಲ್ಲಿ ವಿಜಯನಗರದ ರಾಜ್ಯವು ಹಾಳಾಗಿ ಮುಸಲ್ಮಾನ ರಾಜರು ಸುತ್ತಲಿನ ಪ್ರದೇಶಗಳನ್ನು ಆಕ್ರಮಿಸಹತ್ತಿದ್ದರು. ಅದರಂತೆ ಇವನ ರಾಜ್ಯದ ಮೇಲೆ ಹಾವಳಿಗಳಾಗಲು ಬಿಕ್ಕಟ್ಟಿನ ಪ್ರದೇಶದ ಮೂಲಕ ಅವರ ಆಟವು ಇವನ ಮೇಲೆ ಏನೂ ಸಾಗಲಿಲ್ಲ.

೨ನೇ ಘಂಟೀಂದ್ರಃ— ಇವನು ರಂಗರಾಜನ ಮಗನು. ಈತನ ಒಂದು ಶಿಲಾಶಾಸನವು ಉಪಲಬ್ಧವಿದ್ದು ಅದು ಕ್ರಿ. ಶ. ೧೫೯೩ ನೇ ಇಸ್ವಿಯದು ಇದೆ. ಇವನು ಬೀಳಗಿ ಅರಸರಲ್ಲಿ ಪ್ರಖ್ಯಾತನಾದನು.

ಶಿವಶರಣರ ಚರಿತ್ರೆಗಳು.

ಭಾಗ ೨.

ಬೊಂತಾದೇವಿ.

ಬೊಂತಾದೇವಿಯು ಕಾಶ್ಮೀರದೇಶದಲ್ಲಿಯ ಮಾಂಡವ್ಯಪುರವೆಂಬ ಪಟ್ಟಣದಲ್ಲಿ ರಾಜ್ಯವಾಳುತ್ತಿದ್ದ ಅರಸನ ಮಗಳು. ಆಕೆಯು ಹುಟ್ಟಿದಾಗಿನ ಹೆಸರು ನಿಜದೇವಿ ಎಂಬುದಾಗಿತ್ತು. ಅವಳು ಚಿಕ್ಕಂದಿನಿಂದಲೂ ಕೇವಲ ಶಿವಭಕ್ತಿಯಿಂದ ಆಚರಿಸುವವಳಾಗಿದ್ದಳು. ಅವಳು ದೊಡ್ಡವಳಾದ ಬಳಿಕ ಅವಳಲ್ಲಿ ವೈರಾಗ್ಯ ಭಾವವು ಹೆಚ್ಚಿತು. ಆಗ ಅವಳು ತನ್ನ ತಂದೆಯ ರಾಜವೈಭವವನ್ನು ತೊರೆದಳು. ತನ್ನ ಉಡಿಗೆತೊಡಿಗೆಗಳನ್ನು ಸಹ ಬಿಟ್ಟುಕೊಟ್ಟು ದಿಗಂಬರಿಯಾದಳು! ಆಗ ತಂದೆತಾಯಿಗಳು ಅವಳಿಗೆ— ಎಲೆ ಮಗಳೇ, ಇದೆಲ್ಲಿಯ ಭ್ರಾಂತಿ ನಿನಗೆ? ಈ ಮಾರ್ಗವನ್ನು ಬಿಟ್ಟು ಬಿಡು, ಎಂದು ಎಷ್ಟು ಬೋಧಿಸಿದರೂ ಅದು ಅವಳಿಗೆ ರುಚಿಸಲಿಲ್ಲ. ಅವಳು ಅವರಿಗೆ— ನನಗೆ ಶಿವನ ಭ್ರಾಂತಿಯುಂಟಾಗಿದೆ. ನನಗೆ ನಿಮ್ಮ ರಾಜವೈಭವವು ಬೇಡ. ಕಲ್ಯಾಣದಲ್ಲಿ ಬಸವಾದಿ ಪ್ರಮಥರು ಶಿವಾನುಭವ ಮಾರ್ಗವನ್ನು ಬೋಧಿಸುತ್ತಲಿದ್ದಾರೆ, ಅವರಿದ್ದೆಡೆಗೆ ಹೋಗುವೆನು, ಎಂದು ಹೇಳಿ ತನ್ನ ದೇಶವನ್ನು ತೊರೆದು ಕಲ್ಯಾಣಕ್ಕೆ ಹೊರಡಲನುವಾದಳು!

ಆಗ ತಂದೆತಾಯಿಗಳು ಎಷ್ಟು ಪರಿಯಿಂದ ಹೇಳಿದರೂ ಶಿವದೇವಿಯು ತನ್ನ ನಿಶ್ಚಯವನ್ನು ಬಿಡಲಿಲ್ಲ. ಅವಳು ಪಾದಚಾರಿಯಾಗಿ ಘೋರಾರಣ್ಯಗಳನ್ನು ಪ್ರವೇಶಿಸುತ್ತ ಮಾರ್ಗಕ್ರಮಣ ಮಾಡಹತ್ತಿದಳು. ಅವಳು ಅತ್ಯಂತ ಲಾವಣ್ಯವತಿಯು. ಮಾರ್ಗದಲ್ಲಿ ಅವಳನ್ನು ಬಹು ಜನರು ಕಂಡು ಅವಳಿಗೆ ಮೋಹಿತರಾದರು. ಅವರು ತಮ್ಮೊಡನೆ ಸುಖವಾಗಿರಲು ಅವಳಿಗೆ ಬಹಳ ಹೇಳಿಕೊಂಡರು. ಆದರೆ ವೈರಾಗ್ಯಶೀಲೆಯಾದ ನಿಜದೇವಿಯು ಅವರನ್ನು ನಿರಾಕರಿಸಿದಳು. ಒಂದು ದಿನ ಶಿವನು ಅವಳನ್ನು

ಪರೀಕ್ಷಿಸಬೇಕೆಂದು ಒಬ್ಬ ಸುಂದರ ಪುರುಷನ ವೇಷವನ್ನು ಧಾರಣಮಾಡಿ ಅವಳಿದ್ದೆಡೆಗೆ ಬಂದು— ಎಲೇ ನಿಜದೇವಿಯೇ, ನೀನು ನನ್ನ ಸತಿಯಾಗಿ ನನ್ನೊಡನೆ ಸುಖವಾಗಿ ಬಾಳು, ಎಂದು ಹೇಳಕೊಂಡನು. ಆದರೆ ನಿಜದೇವಿಯು ಅವನಾರೆಂಬುದನ್ನು ತತ್ಕ್ಷಣವೇ ತನ್ನ ಸುಜ್ಞಾನದಿಂದ ತಿಳಿದು ನಗುತ್ತ— ನೀನಾರೆಂಬುದು ನನಗೆ ತಿಳಿಯಿತು. ನೀನು ಕಾಮುಕೈರಿ ಎಂಬುದನ್ನು ನಾನು ಬಲ್ಲೆನು. ಆದರೆ ಆ ಕಾಮ ನನಗಿಲ್ಲ, ಹೋಗು, ಎಂದೆನ್ನಲು ಶಿವನು— ಅಹಾ ಇವಳು ನನ್ನನ್ನು ಗುರುತಿಸಿದಳು, ಎಂದು ಬಯಲಾಗಿ ಹೋದನು. ಮುಂದೆ ನಿಜದೇವಿಯು ಮಾರ್ಗಕ್ರಮಣ ಮಾಡುತ್ತಿರಲು, ಶಿವನು ಒಬ್ಬ ವಾಣಿಜನ ವೇಷವನ್ನು ಧರಿಸಿ ಪುನಃ ಅವಳೆಡೆಗೆ ಬಂದು— ನಿಜದೇವಿಯೇ, ನನಗೆ ಯಾರೂ ಇಲ್ಲ. ನೀನೆನಗೆ ಸತಿಯಾಗಿರು ಎಂದೆನ್ನಲು ಅವಳು— ನಿನ್ನ ಜಡೆ, ತೊಡೆಗಳ ಮೇಲೆ ಗಂಗೆ ಗೌರಿಯರೆಂಬ ಸ್ತ್ರೀಯರಿದ್ದಾರೆ. ಷಣ್ಮುಖ, ವೀರಭದ್ರ, ವಿನಾಯಕರೆಂಬ ಪುತ್ರರು ಇದ್ದಾರೆ. ಇಂಥ ನಿನ್ನನ್ನು ವರಿಸಿದರೆ, ಕಲ್ಯಾಣದ ಶರಣರು ನನ್ನನ್ನು ನೋಡಿ ನಗಲಿಕ್ಕಿಲ್ಲವೇ? ಕೈಲಾಸದ ಪ್ರಮಥರು ಮೆಚ್ಚರು, ಎಂದು ನುಡಿಯಲು ಶಿವನು ಅವಳ ವಿರಕ್ತಿಯನ್ನು ನೋಡಿ ಮೆಚ್ಚಿ ಪ್ರತ್ಯಕ್ಷನಾಗಿ— ಎಲೇ ನಿಜದೇವಿಯೇ, ನಿನ್ನ ವೈರಾಗ್ಯಕ್ಕೆ ನಾನು ಮೆಚ್ಚಿದೆನು. ನನ್ನ ಮಾತನ್ನು ನೀನು ಕೇಳು. ನೀನು ಹೀಗೆ ದಿಗಂಬರಿಯಾಗದೆ ನಾನು ನಿನಗೆ ಈಗ ಕೊಡುವ ಬೊಂತೆ (ಕೌದಿ)ಯನ್ನು ತೆಗೆದುಕೋ. ಇದನ್ನು ನೀನು ಹೊದ್ದುಕೊಂಡು, ಮಾರ್ಗಕ್ರಮಣವನ್ನು ಮಾಡು, ಎಂದು ಹೇಳಲು, ನಿಜದೇವಿಯು ಶಿವನ ಅಪ್ಪಣೆಯನ್ನು ಮೀರಲಾರದೆ ಹಾಗೆಯೇ ಮಾಡುವೆನೆಂದು ಹೇಳಿ ಅದನ್ನು ಹೊದೆಯಲಿಕ್ಕೆ ಪ್ರಾರಂಭಿಸಿದಳು. ಅಂದಿನಿಂದ ಅವಳಿಗೆ 'ಬೊಂತಾದೇವಿ' ಎಂಬ ಹೆಸರು ಪ್ರಾಪ್ತವಾಯಿತು.

ಹೀಗೆ ಬೊಂತಾದೇವಿಯು ಮಾರ್ಗದಲ್ಲಿ ಅನೇಕ ಕಷ್ಟಗಳನ್ನು ಸಹಿಸುತ್ತ ಕಲ್ಯಾಣಪಟ್ಟಣಕ್ಕೆ ಬಂದು ತಲ್ಪಿದಳು. ಆದರೆ ಅವಳು ಅಲ್ಲಿ ತಾನಾರೆಂಬುದನ್ನು ಯಾರಿಗೂ ತಿಳಿಸಲಿಲ್ಲ. ಗುಪ್ತ ಭಕ್ತಿಯಿಂದ ಪಟ್ಟಣದಲ್ಲಿ ಇರಲಿಕ್ಕೆ ಹತ್ತಿದಳು. ಅವಳು ಬಸವೇಶ್ವರ, ಅಲ್ಲಮಪ್ರಭು ಮೊದಲಾದ ಶಿವಶರಣರಿದ್ದ ಶಿವಾನುಭವಮಂಟಪವನ್ನು ಸೇರಿ, ಅಲ್ಲಿ ನಡೆಯುತ್ತಿದ್ದ ಶಿವಾನುಭವವನ್ನು ಆಲಿಸುವವಳಾದಳು. ಇಷ್ಟೇಅಲ್ಲ, ಅವಳೂ

ತನ್ನ ಶಿವಾನುಭವವನ್ನು ವಚನಗಳ ಮೂಲಕ ನಿರೂಪಿಸುವವಳಾದಳು. ಅವಳು ಬಸವೇಶ್ವರನ ಸನ್ನಿಧಿಯಲ್ಲಿ ಅವನ ದಿವ್ಯವಾದ ಮಂದಿರದಲ್ಲಿರಲಿ, ಇಲ್ಲವೆ ಪಟ್ಟಣದಲ್ಲಿದ್ದ ತಿಪ್ಪೆಗಳ ಮೇಲಿರಲಿ, ಅವೆಲ್ಲವೂ ಸರಿ ಎಂದು ಭಾವಿಸಿ ಕಲ್ಯಾಣಪಟ್ಟಣದಲ್ಲಿ ಕಾಲಕಳೆಯಹತ್ತಿದಳು. ಆದರೆ ಅವಳಾರೆಂಬುದನ್ನು ಯಾರೂ ಅರಿತಿರಲಿಲ್ಲ. ಅವಳನ್ನು ಅರಿತವನು ಶಿವಜ್ಞಾನಿಯಾದ ಅಲ್ಲಮಪ್ರಭುವು ಮಾತ್ರ.

ಹೀಗೆ ಬೊಂತಾದೇವಿಗೆ ಅನೇಕ ವರ್ಷಗಳು ಸಂದಿಹೋದವು. ಮುಂದೆ ಪಟ್ಟಣದಲ್ಲಿ ಮಧುವರಸ ಹರಳಯ್ಯಗಳ ಮೂಲಕ ಬಿಜ್ಜಳನಿಗೂ ಶಿವಶರಣರಿಗೂ ಮನಸ್ತಾಪಗಳುಂಟಾದವು. ಬಿಜ್ಜಳನು ಹರಳಯ್ಯ ಮಧುವಯ್ಯಗಳನ್ನು ಕೊಲೆಬಡಿಸಿದನು. ಇದರಿಂದ ಪಟ್ಟಣದಲ್ಲಿ ರಕ್ತಪಾತಗಳುಂಟಾದವು. ಬಹುಜನ ಶಿವಶರಣರು ಪಟ್ಟಣವನ್ನು ಬಿಟ್ಟು ತೊಲಗಿದರು. ಆಗ ಮಹಾದೇವಿಯಕ್ಕನೂ ಶ್ರೀಶೈಲಕ್ಕೆ ಹೊರಡಲು ಸನ್ನದ್ಧಳಾದಳು. ಅವಳು ಹೋಗುವದನ್ನು ನೋಡಿ ಶಿವಶರಣರು— ಮಹಾದೇವಿಯಕ್ಕನಂಥ ವೀರಭಕ್ತೆಯರು ಕಲ್ಯಾಣದಲ್ಲುಂಟೇ? ಎಂದು ದುಃಖಿಸುತ್ತಿರಲು, ಅಲ್ಲಮಪ್ರಭುವು ಅದನ್ನು ಕೇಳಿ, ಬೊಂತಾದೇವಿಯನ್ನು ಅವರಿಗೆ ತೋರಿಸಿ— ನಿಮಗೆ ಗೊತ್ತಿಲ್ಲ. ಇಗೋ ಈ ಬೊಂತಾದೇವಿಯು ಇಲ್ಲಿದ್ದಾಳೆ. ಇವಳು ಕಾಶ್ಮೀರದೇಶದ ಅರಸನ ಕುವರಿಯು. ಇವಳ ಚರಿತೆಯು ಮಹಾದೇವಿಯಕ್ಕನಕಿಂತಲೂ ಬಹಳ ಹೆಚ್ಚಿನದು. ವೀರವಿರಕ್ತಿ ಭಾವವುಳ್ಳವಳು. ಅವಳು ಇಂಥ ಸಮಯದಲ್ಲಿ ಕಲ್ಯಾಣಪಟ್ಟಣವನ್ನು ತೊರೆದು ಹೋಗುವವಳಲ್ಲ. ಅವಳು ಇಲ್ಲಿಯೇ ಇರುವಳು ಎಂದು ಆಕೆಯ ಮಹತ್ವವನ್ನು ಅವರಿಗೆ ವಿವರಿಸಿ, ಅವರನ್ನು ಸಂತೈಸಿ, ತಾನು ಶ್ರೀಶೈಲಕ್ಕೆ ಹೊರಡುವವನಾದನು.

ಬೊಂತಾದೇವಿಯು ಕಡೆಯವರೆಗೆ ಕಲ್ಯಾಣಪಟ್ಟಣದಲ್ಲಿಯೇ ಉಳಿದು ಅಲ್ಲಿಯೇ ತನ್ನ ಇಷ್ಟಲಿಂಗದಲ್ಲಿ ಅಡಗಿದಳು. ಆ ಸಮಯದಲ್ಲಿ ಒಂದು ಅದ್ಭುತವಾಯಿತು. ಅವಳು ತಾನುಟ್ಟಿದ್ದ ಶಿವನು ಕೊಟ್ಟಿದ್ದ ಬೊಂತೆಯನ್ನು ಗಗನಕ್ಕೆ ಹಾರಿಸಲು ಅದು ಅಲ್ಲಿಯೇ ಬಯಲಾಯಿತು ಮತ್ತು ಅದರೊಡನೆಯೇ ತಾನೂ ನಿರವಯವವನ್ನು ಹೊಂದಿದಳು.

ಬೊಂತಾದೇವಿಯು ವಚನಕಾರ್ತಿಯು. ಅವಳ ಎರಡು ವಚನಗಳು ಮಾತ್ರ ನಮಗೆ ಉಪಲಬ್ಧವಾಗಿವೆ. ಅವುಗಳನ್ನು ನಾವು ಕೆಳಗೆ ಕೊಟ್ಟಿದ್ದೇವೆ.

ಬೊಂತಾದೇವಿಗೆ ಬೆಂತಲಾದೇವಿ ಎಂಬ ಇನ್ನೊಂದು ಹೆಸರಿದೆ. ಪುರಾತನ ದೇವಿಯರ ತ್ರಿವಿದಿಯಲ್ಲಿ ಈಕೆಯ ವಿಷಯವಾಗಿ ಹೇಳಿರುವದೇನೆಂದರೆ—

ಭ್ರಾಂತಿ ಭ್ರಮೆಗಳನಳಿದು ಕಂತು ಕಾಲರನೊದೆದು
ಅಂತಕಾಂತಕನ ಧ್ಯಾನ ಮುಸ್ಪರಿಗೊಂಡ
ಬೆಂತಲಾದೇವಿ ಶರಣಾಗು.

ಇದರಲ್ಲಿ ಬೊಂತಾದೇವಿಯು ನಿಜವನ್ನರಿತವಳು, ಕಾಮನನ್ನೂ ಯಮನನ್ನೂ ಜಯಿಸಿದವಳು ಎಂದು ಕವಿಯು ಹೇಳಿ ಅವಳು ಪರಮಾತ್ಮನ ಧ್ಯಾನದಲ್ಲಿ ಅತ್ಯಂತವಾಗಿ ನಿರತಳಾದವಳು ಎಂದು ಅವಳನ್ನು ಸ್ಮರಿಸಿದ್ದಾನೆ.

ವಚನಗಳು.

(೧) ಊರೊಳಗಣ ಬಯಲು, ಊರಹೊರಗಣ ಬಯಲು ಎಮಂಟೇ? ಊರೊಳಗಣ ಬ್ರಾಹ್ಮಣ ಬಯಲು, ಊರಹೊರಗಣ ಹೊಲೆಯ ಬಯಲೆಂದುಮಂಟೇ? ಎಲ್ಲಿ ನೋಡಿದರೆ ಬಯಲೊಂದೇ. ಭಿತ್ತಿಯಿಂದೊಳಹೊರಗೆಂಬ ನಾಮವೈಸೆ. ಎಲ್ಲಿ ನೋಡಿ ಕರೆದರೆ ಓ ಎಂಬಾತನೇ ಬಿಡಾಡಿ.

ಧಾನಃ—ಜಾತಿಭೇದವೆಂಬುದಿಲ್ಲ. ಅದು ಕೃತ್ರಿಮವಾದುದು ಎಂಬುವನ್ನು ಬೊಂತಾದೇವಿಯು ಅತ್ಯಂತ ತಾತ್ವಿಕರೀತಿಯಿಂದ ಈ ವಚನದಲ್ಲಿ ಬೋಧಿಸಿದ್ದಾಳೆ.

(೨) ಪರಮಪ್ಪ ನಾಥ ಎಂಬ ಲಿಂಗ ತೆರನೆರೆಗಳಿಗೊಂಬೇ ಗಾಳಿ ಹಾರುತಿಪ್ಪ ಒಂದೇ ಅನಿಲನಿಂದ ದೇಹ ಸರಪಟ್ಟಗಳೊಳಗೆಲ್ಲ ಕರೆದರೆ ಓ ಎಂಬಾತನೇ ಬಿಡಾಡಿ.

ಧಾನಃ— ವಚನವು ಅಶುದ್ಧವಿದೆ. ಆದರೆ ಭಾವವು ೧ನೇ ವಚನದಲ್ಲಿದ್ದಂತೆಯೇ ಇರುತ್ತಿದೆಂದು ತೋರುತ್ತಿದೆ.

ಈಕೆಯ ಮುದ್ರಿಕೆಯು 'ಓ ಎಂಬಾತನೇ ಬಿಡಾಡಿ' ಎಂದಿದ್ದು ಇದರಮೇಲಿಂದ ಪರಮಾತ್ಮನ ಸ್ವರೂಪನ್ನು ಕುರಿತು ಅವಳ ವಚನಗಳಲ್ಲಿ ನಿರೂಪಣೆ ಹೆಚ್ಚಾಗಿ ಇದ್ದುದಾಗಿ ನಾವು ಊಹಿಸುತ್ತೇವೆ.

ಗೊಗ್ಗವ್ವೆ.

ಕೇರಳದೇಶದಲ್ಲಿ[೧] ಅವಲೂರೆಂಬ ಪುರವಿದೆ. ಅಲ್ಲಿ ಅತ್ಯಂತ ಶಿವಭಕ್ತಿಯುತರಾದ ದಂಪತಿಗಳಿದ್ದು ಅವರ ಉದರದಲ್ಲಿ ಗೊಗ್ಗವ್ವೆಯು ಜನಿಸಿದಳು. ಅವರ ಸಹವಾಸದಿಂದ ಗೊಗ್ಗವ್ವೆಯೂ ಕೂಡ ಶಿವಭಕ್ತಿಯುತಳಾಗಿ ಬೆಳೆದಳು. ಅವಳಿಗೆ ಯೌವ್ವನವು ಪ್ರಾಪ್ತವಾಯಿತು. ಆಗ ಅವಳ ತಾಯಿತಂದೆಗಳು ಅವಳಿಗೆ ಲಗ್ನಮಾಡಬೇಕೆಂದು ಬಯಸಿ ಯೋಗ್ಯ ವರನನ್ನು ಶೋಧಿಸಲು ಪ್ರಾರಂಭಿಸಿದರು. ಇದನ್ನು ಗೊಗ್ಗವ್ವೆಯು ತಿಳಿದು ಅವಳು ತಾಯಿತಂದೆಗಳಿಗೆ—ನಾನು ಲಗ್ನವಾಗುವದಿಲ್ಲ. ಶಿವನ ಸೇವೆಯಲ್ಲಿಯೇ ಇರುವೆನೆಂದು ಹೇಳಿದಳು. ಆದರೆ ತಾಯಿತಂದೆಗಳು ಹೀಗಿರುವದು ಸರಿಯಾದುದಲ್ಲ, ಎಂದು ತಿಳಿಸಿ ವರನ ಶೋಧದಲ್ಲಿ ತೊಡಗಿದರು. ಆಗ ಗೊಗ್ಗವ್ವೆಯು ತನ್ನ ಇಚ್ಛೆಯು ನೆರವೇರದೆಂದು ಭಾವಿಸಿ ಅವಳು ಯಾರಿಗೂ ತಿಳಿಯದಂತೆ ಮನೆಯನ್ನು ಬಿಟ್ಟು, ಪಟ್ಟಣದಲ್ಲಿದ್ದ ಗೊಗ್ಗೇಶ್ವರನ ದೇವಾಲಯದಲ್ಲಿ ಹೋಗಿ ಅವಿತುಕೊಂಡು ಕುಳಿತಳು. ತಾಯಿತಂದೆಗಳು ಅವಳನ್ನು ಎಷ್ಟು ಹುಡಿಕಿದರೂ ಆಕೆಯು ಸಿಕ್ಕಲಿಲ್ಲ. ಮೂರು ದಿವಸಗಳ ವರೆಗೆ ಹುಡಿಕಿದರು. ಆಗ ಅವರು ಅತ್ಯಂತ ಮನ ಮರುಗಿ ಉಪತಾಪಿಸುತ್ತ ಮಗಳನ್ನು ಹುಡುಕುತ್ತ ಹುಡುಕುತ್ತ ಗೊಗ್ಗೇಶ್ವರನ ದೇವಾಲಯಕ್ಕೆ ಬಂದು ಅವರು ಲಿಂಗದ ಮುಂದೆ ನಿಂತು— ಗೊಗ್ಗೇಶ್ವರನೇ, ನಿನಗೆ ಬೇಡಿಕೊಂಡು ಮಗಳನ್ನು ಪಡೆದೆವು. ಅವಳಿಗೆ ನಿನ್ನ ಹೆಸರನ್ನೇ ಇಟ್ಟೆವು. ಇನ್ನುಮೇಲೆ ನೀನೇ ಅಕೆಗೆ ಕಲ್ಯಾಣವನ್ನು ಮಾಡು. ಎಂದು ಲಿಂಗಕ್ಕೆ ಬೇಡಿಕೊಂಡು ವಂದಿಸಿ ಮನೆಗೆ ಹೋದರು.

ಗೊಗ್ಗವ್ವೆಯು ದೇವಾಲಯದಲ್ಲಿ ಮರೆಗೆ ನಿಂತು ಇದನ್ನೆಲ್ಲ ಕೇಳುತ್ತಿದ್ದಳು. ಅವಳು ತಾಯಿತಂದೆಗಳು ದೇವರಿಗೆ ಹೇಳಿದ ಮಾತನ್ನು ಕೇಳಿ ಗುಡಿಯಿಂದ ಮನೆಗೆ ಬಂದಳು. ಅವಳು ಬರಲು ತಾಯಿತಂದೆಗಳು ಅತ್ಯಂತ ಹರುಷಿತರಾಗಿ ಮಗಳಿಗೆ—ನೀನು ಮದುವೆಯನ್ನೊಲ್ಲದಿದ್ದರೆ ಬಿಟ್ಟುಬಿಡು. ನಿನ್ನ ಮನಸ್ಸಿಗೆ ಬಂದಂತೆ ಲಿಂಗಪೂಜೆಯನ್ನು ಮಾಡಿಕೊಂಡಿರು ಎಂದು ಹೇಳಿದರು. ಅದಕ್ಕೆ ಗೊಗ್ಗವ್ವೆಯು—ನನಗೆ

---

೧. ಈಗಿನ ಮಲಬಾರ ಪ್ರಾಂತ.

ಲಿಂಗಪೂಜೆಯ ರೀತಿಯು ಗೊತ್ತಿಲ್ಲ. ನಾನು ಶಿವಾಲಯಕ್ಕೆ ಹೋಗಿ ದೀಪವನ್ನು ಹತ್ತಿಸಿ, ದೇವಂಗೆ ಧೂಪವನ್ನಿಕ್ಕೆ ಮಾತ್ರ ಬರುವೆನು. ಇದೇ ನನ್ನ ಪೂಜೆಯು, ಎಂದು ಹೇಳಿ ಅವಳು ದಿನಾಲು ಗುಡಿಗೆ ಹೋಗಿ ತುಪ್ಪದಿಂದ ದೀಪವನ್ನು ಹತ್ತಿಸಿ, ಕರ್ಪೂರ ಅಗರು ಕುಮುಂಜನ ದಿಂದ ಧೂಪವನ್ನಿಕ್ಕುವಳು. ಆಮೇಲೆ ಲಿಂಗಕ್ಕೆ ಶರಣೆಂದು ಮನೆಗೆ ತಿರುಗಿ ಬರುವಳು. ಇದೇ ಅವಳ ಲಿಂಗಪೂಜೆಯು. ಅವಳು ತಪ್ಪದೆ ಈ ಕ್ರಮವನ್ನು ಇಟ್ಟುಕೊಂಡಿದ್ದರಿಂದ ಅವಳಿಗೆ ಲೋಕದಲ್ಲಿ 'ಧೂಪದ ಗೊಗ್ಗವ್ವೆ' ಎಂಬ ಹೆಸರಾಯಿತು.

ಹೀಗಿರುವಲ್ಲಿ ಒಂದು ದಿನ ಶಿವನು ಅವಳನ್ನು ಪರೀಕ್ಷಿಸಬೇಕೆಂದು ಬಯಸಿ ಅವನು ರೂಪುಳ್ಳ ಸುಂದರ ಪುರುಷನಾಗಿ ಕಯ್ಯಲ್ಲಿ ಅಲಗನ್ನು ಹಿಡಿದುಕೊಂಡು ಗೊಗ್ಗವ್ವೆಯನ್ನು ಕಂಡು— ನೀನು ಇನ್ನು ಮೇಲೆ ನನ್ನ ಸತಿಯಾಗಿರಬೇಕು. ನನ್ನನ್ನು ನೀನು ವರಿಸದಿದ್ದರೆ ಈ ಅಲಗಿನಿಂದ ನಿನ್ನನ್ನು ಇರಿಯುವೆನು, ಎಂದು ಅವಳನ್ನು ಭೀತಿ ಗೊಳಿಸಿದನು. ಆದರ ಗೊಗ್ಗವ್ವೆಯು ಅದಕ್ಕೆ ಅಂಜಲಿಲ್ಲ. ಅವಳು ಅವನಿಗೆ— ನಾನು ನಿನ್ನನ್ನು ವರಿಸುವದಿಲ್ಲ, ಎಂದು ನುಡಿಯಲು ಆ ವೇಷಧಾರಿಯಾದ ಶಿವನು ಅಲಗನ್ನೆತ್ತಿ ಅವಳ ಶಿರಸ್ಸನ್ನು ಕತ್ತರಿಸುವಾಗ ಆ ಶರಣೆಯು ಶಿವನನ್ನು ಸ್ಮರಿಸುತ್ತ 'ಶಿವನೇ' ಎಂದು ಉಚ್ಚರಿಸಲು ಶಿವನು ಅವಳಿಗೆ ಪ್ರತ್ಯಕ್ಷನಾಗಿ—ನಾನು ನಿನಗೆ ಮೆಚ್ಚಿದೆನು. ನಿನಗೆ ಬೇಕಾದದ್ದನ್ನು ಬೇಡು ಕೊಡುವೆನೆಂದೆನಲು ಅವಳು— ನನಗೇನು ಬೇಡ. ನಾನು ಶಿವಭಕ್ತರ ಬಳಿಯಲ್ಲಿದ್ದುಕೊಂಡು ಅವರಿಗೆ ನನ್ನ ಭಕ್ತಿಯನ್ನು ಸಲ್ಲಿಸುವಂತೆ ಮಾಡು, ಎಂದೆನಲು ಶಿವನು ಪ್ರೀತನಾಗಿ ಹಾಗೆಯೇ ಆಗಲಿ ಎಂದು ನುಡಿದನು. ಆದರೆ ಅವನು ಅಷ್ಟಕ್ಕೆ ಬಿಡದೆ ಗೊಗ್ಗವ್ವೆಗೆ ತಾನೇ ಗುರುವಾಗಿ ಅವಳಿಗೆ ವೀರಶೈವೋಪದೇಶವನ್ನು ಮಾಡಿದನು. ಆಮೇಲೆ ಅವಳಿಗೆ— ನೀನು ದಿನಾಲು ಶಿವಭಕ್ತರಲ್ಲಿಗೆ ಹೋಗಿ ಅವರ ಪೂಜೆಗೋಸ್ಕರ ಧೂಪವನ್ನರ್ಪಿಸುತ್ತಿರು, ಈ ಕಾಯಕವನ್ನು ಅನುಸರಿಸುತ್ತ ಶಿವಾನುಭವವುಳ್ಳವಳಾಗು ಎಂದು ಹೇಳಿ ಅಂತರ್ಧಾನನಾದನು. ಅಂದಿನಿಂದ ಗೊಗ್ಗವ್ವೆಯು ತನ್ನ ಧೂಪದ ಕಾಯಕವನ್ನು ಭಕ್ತರಲ್ಲಿ ನಡಿಸುತ್ತ ಶಿವಾನುಭವದಲ್ಲಿದ್ದಳು.

ಹೀಗೆ ಗೊಗ್ಗವ್ವೆಯು ಕಾಲಕಳೆಯುತ್ತಿರಲು ಕೇರಳದೇಶದ ರಾಜನಾದ ಚಾರಮರಾಯನು ಕೇವಲ ಶಿವಭಕ್ತಿಯುತನಾಗಿ ಕುಡಗಲೂರು ಎಂಬ ಪಟ್ಟಣದಲ್ಲಿ ರಾಜ್ಯವಾಳುತ್ತಿದ್ದನು. ಅವನು ಒಂದು ದಿನ ಪರಮಾತ್ಮನು ನಂಬಿಣ್ಣನೆಂಬ ಶಿವಶರಣನನ್ನು ಕೈಲಾಸಕ್ಕೆ ಕರೆದೊಯ್ದನೆಂಬ ವಾರ್ತೆಯನ್ನು ಕೇಳಿ ಅವನನ್ನು ಕಾಣಬೇಕೆಂದು ತನ್ನ ಸೇನೆಯೊಂದಿಗೆ ಅವನನ್ನು ಸುತ್ತಲೂ ಹುಡುಕಹತ್ತಿದನು. ಆಗ ಅವನು ಗೊಗ್ಗವ್ವೆಯು ಇದ್ದ ಅವಲೂರು ಗ್ರಾಮಕ್ಕೆ ಬರಲಾಗಿ ಅವಳು ಒಬ್ಬ ಭಕ್ತನ ಮನೆಯಲ್ಲಿ ಧೂಪವನ್ನಿಕ್ಕಿ ತಿರುಗಿ ಬರುವದನ್ನು ಕಂಡನು. ಗೊಗ್ಗವ್ವೆಯು ದಾರಿಯಲ್ಲಿ ಚಾರಮರಾಯನನ್ನು ಕಂಡು ಅವನಿಗೆ— ನೀವಿದೆಲ್ಲಿಗೆ ಗಮಿಸುತ್ತೀರಿ ಎಂದು ಕೇಳಲು ಅವನು— ನಂಬಿಣ್ಣನು ಶಿವನೊಡನೆ ಕೈಲಾಸಕ್ಕೆ ಹೋದುದನ್ನು ಕೇಳಿ ನಾನು ಅವನನ್ನು ಹುಡುಕುತ್ತಲಿದ್ದೇನೆ. ಅವನು ಇನ್ನೂ ಸಿಕ್ಕಿಲ್ಲ. ಅವನನ್ನು ಕಾಣುವ ಬಗೆಕೇಗೆ? ಎಂದು ಕೇಳಲು ಗೊಗ್ಗವ್ವೆಯು ಅದಕ್ಕೆ ನಕ್ಕು—ನಂಬಿಣ್ಣನು ಎಂದಾದರೂ ನಿಮಗೆ ಮರ್ತ್ಯಲೋಕದಲ್ಲಿ ಸಿಕ್ಕುವದುಂಟೇ? ಅವನನ್ನು ಕಾಣಲು ನೀವು ಕೈಲಾಸಕ್ಕೆ ಹೋಗಬೇಕು ಎಂದು ಹೇಳಿದಳು. ಅದಕ್ಕೆ ಚಾರಮನು ಅವಳಿಗೆ— ಆ ಕೈಲಾಸಕ್ಕೆ ಹೇಗೆ ಹೋಗಬೇಕು, ಅದೆಷ್ಟು ದೂರವಿದೆ? ಎಂದು ಕೇಳಿದನು. ಅದಕ್ಕೆ ಗೊಗ್ಗವ್ವೆಯು— ಕೈಲಾಸವು ದೂರವಿಲ್ಲ. ಅದು ಇಲ್ಲಿಂದ ಒಂದೇ ಗೇಣು ಮಾತ್ರ ದೂರವಿದೆ ಎಂದು ನುಡಿದಳು. ಅದಕ್ಕೆ ಚಾರಮನು ಬಹಳ ಆಶ್ಚರ್ಯಚಕಿತನಾಗಿ— ನನಗೆ ಆ ದಾರಿಯನ್ನು ತೋರಿಸುತ್ತೀಯಾ? ಎಂದು ಕೇಳಲು ಗೊಗ್ಗವ್ವೆಯು ಅರಸನಿಗೆ ತನ್ನ ಧೂಪದ ಕಾಯಕದ ರೀತಿಯನ್ನು ವಿವರಿಸಿ ನೀನು ಆತ್ಮಲಿಂಗಕ್ಕೆ ಹೀಗೆಯೇ ಭಕ್ತಿಯಿಂದ ಧೂಪವನಿಕ್ಕಿದಲ್ಲಿ ಮೇಲಕ್ಕೆ ಹೋಗುವ ಅದರ ಹೊಗೆಯಲ್ಲಿಯೇ ನಿನಗೆ ಕೈಲಾಸದ ದಾರಿಯು ಕಾಣುವದು. ಆ ದಾರಿಯಿಂದ ಅಲ್ಲಿಗೆ ಹೋಗೆಂದು ಅವನಿಗೆ ತಿಳಿಸಿದಳು. ಆಗ ಶಿವಭಕ್ತನಾದ ಚಾರಮನು ಅಕೆಯಿಂದ ಆತ್ಮಲಿಂಗದ ಸ್ವರೂಪನ್ನು ತಿಳಿದುಕೊಂಡು ಧೂಪವನಿಕ್ಕಲು ಅದರಿಂದ ಕೈಲಾಸದ ದಾರಿಯು ಅವನಿಗೆ ಕಾಣಲು ಅವನು ಅದರಿಂದಲೇ ಶಿವನೆಡೆಗೆ ಹೋದನು. ಹೀಗೆ ಗೊಗ್ಗವ್ವೆಯು ಚಾರಮರಾಯನಿಗೆ ತನ್ನ ಕಾಯಕದ ರೀತಿಯನ್ನು ತಿಳಿಸಿ ಅವನಿಗೆ ಮೋಕ್ಷದ ದಾರಿಯನ್ನು ತೋರಿಸಿದಳು.

ಗೊಗ್ಗವ್ವೆಯು ವಚನಕಾರ್ತಿಯು ಇದ್ದಾಳೆ. ಅವಳು ತನ್ನ ಶಿವಾನುಭವವನ್ನು ವಚನಗಳ ಮೂಲಕ ನಿರೂಪಿಸಿದ್ದಾಳೆ. ನಮಗೆ ದೊರಿತ ಅವಳ ಆರು ವಚನಗಳನ್ನು ನಾವು ಮುಂದೆ ಕೊಟ್ಟಿದ್ದೇವೆ.

ಈಪ್ರಕಾರ ಗೊಗ್ಗವ್ವೆಯು ಜನರಿಗೆ ಬೋಧಿಸುತ್ತ ತನ್ನ ಕಾಯಕವನ್ನು ನಡಿಸುತ್ತ ಭಕ್ತರಿಗೆ ಧೂಪವನ್ನು ನೀಡುತ್ತ ಅದರ ಹೊಗೆಯೊಳಗೆಯೇ ಲಿಂಗದೊಡನೆ ಕೂಡಿದಳು.

ಪುರಾತನ ದೇವಿಯರ ತ್ರಿವಿದಿಯಲ್ಲಿ ಈಕೆಯನ್ನು ವರ್ಣಿಸಿದ್ದು ಹೇಗೆಂದರೆ—

ಮೂರು ಲೋಕಗಳರಿಯೆ ಚಾರಮರಾಯನಿಗೆ
ಮಾರಹರನೂರ ದಾರಿಯನ್ನು ತೋರಿಸಿದ
ನೀರೆ ಗೊಗ್ಗವ್ವೆ ಶರಣಾಗು.

ಗೊಗ್ಗವ್ವೆಯ ಹೆಸರು ಗಣಸಹಸ್ರದಲ್ಲಿ ಬಂದಿವೆ. ಅವಳು ಪುರಾತನಳು. ಬಸವೇಶ್ವರನು ತನ್ನ ವಚನಗಳಲ್ಲಿ ಚಾರಮರಾಯನನ್ನು ಬಹಳ ಸ್ತುತಿಸಿದ್ದಾನೆ. ಆದ್ದರಿಂದ ನಂಬಿಯಣ್ಣನೂ ಚಾರಮನೂ ಗೊಗ್ಗವ್ವೆಯೂ ಬಸವೇಶ್ವರನಕಿಂತಲೂ ಮೊದಲಿನವರಾಗಿರಬಹುದು.

ಗೊಗ್ಗವ್ವೆಯ ಹೆಸರು ಉತ್ತರ ಕರ್ನಾಟಕದಲ್ಲಿ ಇನ್ನೂ ರೂಢಿಯಲ್ಲಿದೆ. ಯಾವಳಾದರೂ ಬಾಲಿಕೆಯು ಅಥವಾ ಸ್ತ್ರೀಯು ತನ್ನ ತಲೆಗೂದಲುಗಳನ್ನು ಬಾಚಿಕೊಳ್ಳದೆ ಅಸ್ತವ್ಯಸ್ತವಾಗಿಟ್ಟುಕೊಂಡು ಹೊಲಸು ಬಟ್ಟೆಯನ್ನು ಹಾಕಿಕೊಂಡಿದ್ದರೆ, ಜನರು ಅವಳಿಗೆ ನೀನು 'ದೀಪದ ಗೊಗ್ಗವ್ವೆ' ಯಾಗಿದ್ದೀಯೇ, ಎಂದು ಬಿಟ್ಟುಮಾಡುವದುಂಟು. ಈ ಶಬ್ದವು ಕೃಷ್ಣಾತೀರ ಮತ್ತು ಉತ್ತರ ವಿಜಾಪುರ ಭಾಗಗಳಲ್ಲಿ ಪ್ರಚಲಿತವಿದೆ. ಆದರೆ ಪಶ್ಚಿಮ ಧಾರವಾಡ ಜಿಲ್ಲೆಯಲ್ಲಿ 'ದೀಪದ ಗೊಗ್ಗವ್ವೆ' ಎಂಬ ಶಬ್ದದಬದಲು 'ನೀನು ಗೊಗ್ಗವ್ವೆಯಾಗಿದ್ದೀಯೇ' ಎಂದು ಮಾತ್ರ ಅನ್ನುವದುಂಟು.

ಜನರು ಹೇಗೆ ಕುಂಬಾರ ಗುಂಡಯ್ಯನನ್ನು ಪರಿಹಾಸಪೂರ್ವಕವಾಗಿ ನುಡಿಯುವದುಂಟೋ, ಹಾಗೆಯೇ ಗೊಗ್ಗವ್ವೆಯನ್ನು ಈ ಪ್ರಾಂತದ ಜನರು ಹೀಗೆ ನುಡಿಯುತ್ತಿರುವದು ಬಹು ಖೇದಕರವಾದದ್ದು. ಈ ಉಭಯರ ಚರಿತ್ರೆಗಳು ಜನರಿಗೆ ಗೊತ್ತಿರುವದಿಲ್ಲಾದ್ದರಿಂದ ಈ ಸ್ಥಿತಿ

ಶಿವಾನುಭವ

ವರ್ಷ ೦೯ | ಡಿಸೆಂಬರ ೧೯೪೪. | ಸಂಚಿಕೆ ೩

ಬೊಂತಾದೇವಿ, ಮಹಾದೇವಿಯಕ್ಕ ಮತ್ತು ಗೊಗ್ಗವ್ವೆಯರು.

ಬಸವೇಶ್ವರನ ಕಾಲದಲ್ಲಿ ಆಗಿ ಹೋದ ಶಿವಶರಣ ಶಿವಶರಣೆಯರ ವಿಷಯವಾಗಿ ಸಂಶೋಧನ ಮಾಡುತ್ತ ಹೋದ ಹಾಗೆ ಮಹತ್ತರವಾದ ಧರ್ಮ ಜಾಗ್ರತಿಯನ್ನುಂಟುಮಾಡಿದಂಥವರ ಹೊಸ ಹೊಸ ಹೆಸರುಗಳು ನಮಗೆ ಹೆಚ್ಚಾಗಿ ದೊರೆಯುತ್ತ ಹೋಗುತ್ತವೆ. ಇವರಲ್ಲಿ ಬಹು ಜನರು ಸ್ತ್ರೀಯರಿರುತ್ತಾರೆ. ಈ ಸ್ತ್ರೀಯರೂ ಕೂಡ ಧರ್ಮ ಪ್ರಸಾರ ಕಾರ್ಯದಲ್ಲಿ ಅತ್ಯಂತ ಪರಿಶ್ರಮವಹಿಸಿದ್ದು ಅವರ ಚರಿತ್ರೆಗಳಿಂದ ತಿಳಿದುಬರುತ್ತದೆ. ಅವರು ಇದರಲ್ಲಿ ಅನೇಕ ಕಷ್ಟಗಳನ್ನು ಸಹಿಸಿದ್ದಾರೆ, ಮನೆಮಾರು ಬಿಟ್ಟಿದ್ದಾರೆ, ಅನೇಕ ತರದ ಹಿಂಸೆಗಳಿಗೆ ಒಳಗಾಗಿದ್ದಾರೆ. ಆದರೂ ಕೂಡ ಅವರು ತಮ್ಮ ಧರ್ಮೋದ್ಧಾರದ ಕಾರ್ಯಗಳಿಂದ ಚ್ಯುತರಾಗಿಲ್ಲ. ಇಂಥ ಮಹಾನುಭಾವರ ಕಾರ್ಯಗಳ ಪರಿಣಾಮವಾಗಿ ವೀರಶೈವ ಧರ್ಮವು ಬಸವೇಶ್ವರನ ಕಾಲದಲ್ಲಿ ಎಲ್ಲ ಕಡೆಗೂ ಪಟ್ಟವಾಗಿ ಪಸರಿಸಿತು. ಇಂಥ ಸ್ತ್ರೀಯರಲ್ಲಿ ಉಡುತಡಿಯ ಮಹಾದೇವಿಯಕ್ಕ, ಕಾಶ್ಮೀರ ದೇಶದ ಬೊಂತಾದೇವಿ, ಕೇರಳ ದೇಶದ ಗೊಗ್ಗವ್ವೆ ಇವರು ಅತ್ಯಂತ ಶ್ರೇಷ್ಠ ಸ್ಥಾನವನ್ನು ಹೊಂದಿದ್ದಾರೆ. ಇವರ ಚರಿತ್ರೆಗಳನ್ನು ನಾವು ನಿರೀಕ್ಷಿಸಿದಲ್ಲಿ ಬಸವೇಶ್ವರನ ಕಾಲದಲ್ಲಿ ಹೆಂಗಳೆಯರು ಯಾವ ಉದಾತ್ತ ಧ್ಯೇಯದಿಂದ ಕಾರ್ಯ ಮಾಡುತ್ತಲಿದ್ದರೆಂಬುದನ್ನು ನಾವು ಚನ್ನಾಗಿ ತಿಳಿಯಬಹುದಾಗಿದೆ.

ಬೊಂತಾದೇವಿಯು ಕಾಶ್ಮೀರ ದೇಶದರಸನ ಮಗಳು. ಅವಳು ರಾಜವೈಭವದಲ್ಲಿ ಸುಖದಿಂದಿರಬಹುದಾಗಿತ್ತು. ಆದರೆ ಅವಳು ಆ ವೈಭವವನ್ನು ತೊರೆದು ಶಿವಾನುಭವದ ಮಾರ್ಗವನ್ನು ಅನುಸಂಸು ವನಳಾದಳು. ಅವಳಿಗೆ ಸಂಸಾರ ಸುಖವು ಬೇಡಾಯಿತು. ಲಗ್ನವಾ ಗುವದನ್ನು ನಿರಾಕರಿಸಿದಳು. ತನ್ನ ಉತ್ತಮ ತರದ ಉಡುಪು ತೊಡ ಪುಗಳನ್ನು ಬಿಟ್ಟು ಕೊಟ್ಟು ದಿಗಂಬರಿಯಾದಳು! ಅವಳು ದಿಗಂಬರಿ ಯಾಗಿ ಪಾದಚಾರಿಯಾಗಿ ಕಲ್ಯಾಣದಲ್ಲಿದ್ದ ಶಿವಶರಣರನ್ನು ಕಾಣಲು ಹೊರಟಳು. ಉಡುತಡಿಯ ಮಹಾದೇವಿಯಕ್ಕನೂ ಹೀಗೆಯೇ ಆಚರಿಸಿದ್ದಾಳೆ. ಅವಳು ಮೊದಲು ಕೌಶಿಕರಾಜನ ರಾಣಿಯಾದಳು. ರಾಣಿಯಾಗಿ ರಾಜ್ಯ ಸುಖವನ್ನು ಬಯಸಲಿಲ್ಲ. ಅವಳು ರಾಜನಿಗೆ—ನೀನು ವೀರಶೈವ ದೀಕ್ಷೆಯನ್ನು ಕೊಂದು ಮತ್ತು ಶಿವಾನುಭವದಂತೆ ನಡೆ ಎಂದು ಬೋಧಿಸಿದಳು. ಆದರೆ ಅವನು ಅದನ್ನು ನಿರಾಕರಿಸಿದಳು. ಇದರಿಂದ ಮಹಾದೇವಿಯಕ್ಕನಿಗೆ ತನ್ನ ನಡೆಯಂತೆ ನಡೆಯಲು ಶಕ್ಯವಾಗದ್ದರಿಂದ ಅವಳು ತನ್ನ ಪತಿಯಾದ ರಾಜನೊಡನೆ ಸುಖವಾಗಿರಲು ಬಯಸದೆ ಬೊಂತಾದೇವಿಯಂತೆ ದಿಗಂಬರಿಯಾದಳು. ದಿಗಂಬರಿಯಾಗಿ ಅವಳಂತೆಯೇ ಶಿವಾನುಭವ ಮಂಟಪದಲ್ಲಿದ್ದ ಅಲ್ಲಮಪ್ರಭು ಬಸವಾದಿಗಳನ್ನು ಕಾಣಲು ಹೊರಟಳು. ಈ ಉಭಯತರು ಲಾವಣ್ಯವತಿಯರು. ಬೊಂತಾದೇವಿಯನ್ನು ಮಾರ್ಗದಲ್ಲಿ ಅನೇಕ ಸಿರಿವಂತರು ಕಂಡು ತಮ್ಮನ್ನು ವರಿಸಲಿಕ್ಕೆ ಅವಳಿಗೆ ಬಹಳ ಹೇಳಿಕೊಂಡರು. ಆದರೆ ಅವಳು ಈ ಸಂಸಾರ ಸುಖವನ್ನು ನಿರಾಕರಿಸಿದಳು. ಅವಳಂತೆಯೇ ಮಹಾದೇವಿಯಕ್ಕನಾದರೂ ಪಾದಚಾರಿಯಾಗಿ ಮಾರ್ಗಕ್ರಮಣ ಮಾಡುತ್ತಿರುವಲ್ಲಿ ಅನೇಕರು ಅವಳಿಗೆ ಮೋಹಿತರಾದರು. ಆದರೆ ಅವಳು ಎಲ್ಲರನ್ನೂ ಧಿಕ್ಕರಿಸಿ ತನಗೆ ಚನ್ನಮಲ್ಲಿಕಾರ್ಜುನನೇ ಗಂಡನೆಂದು ಭಾವಿಸಿ ಅವನ ಸೇವೆಯಲ್ಲಿರಲು ಹಾತೊರೆದಳು. ಹೀಗೆ ಉಭಯತರು ಕಲ್ಯಾಣನಗರವನ್ನು ಸೇರಿ ಬಸವಾದಿ ಶಿವಶರಣರಿದ್ದೆಡೆಯಲ್ಲಿ ಶಿವಾನುಭವ ಗೋಷ್ಠಿಗಳಲ್ಲಿ ಆನಂದಿಸುತ್ತ ಕಾಲಕಳೆಯಹತ್ತಿದರು.

ಮಹಾದೇವಿಯಕ್ಕನು ಕಡೆಯ ವರೆಗೂ ದಿಗಂಬರಿಯಾಗಿ ಉಳಿದಳು. ಆದರೆ ಬೊಂತಾದೇವಿಯು ಕೆಲವೊಂದು ಕಾರಣದ ಮೂಲಕ ದಿಗಂಬರ ವೇಷವನ್ನು ಬಿಟ್ಟು ಕೊಟ್ಟು. ಬೊಂತೆ ಎಂದರೆ ಒರಟಾದ

ಒಂದು ಕೌದಿಯನ್ನು ಹೊದೆದುಕೊಂಡು ಇರಹತ್ತಿದಳು. ಅವಳು ಕಲ್ಯಾಣಕ್ಕೆ ಬಂದ ಬಳಿಕ, ಅವಳು ತಾನಾರೆಂಬುದನ್ನು ಅರಿಗೂ ತಿಳಿಸಲಿಲ್ಲ. ಗುಪ್ತವಾಗಿಯೇ ಇದ್ದಳು. ಇದು ಅವಳ ವೈಶಿಷ್ಟ್ಯವಾಗಿದೆ. ನಿಜವಾಗಿ ಶಿವಶರಣರು ಯಾವಗಲೂ ನಿರಿಚ್ಛಾವೃತ್ತಿಯವರು. ಜನರು ತಮ್ಮನ್ನು ಹೊಗಳಬೇಕೆಂದು ಅವರು ಎಂದೂ ಬಯಸುವದಿಲ್ಲ. ಹೀಗೆ ಬೊಂತಾದೇವಿಯು ಕಲ್ಯಾಣದಲ್ಲಿ ತನಗೆ ಸಿಕ್ಕಿದ ಸ್ಥಳದಲ್ಲಿ ಇದ್ದುಕೊಂಡು ಶಿವಾನುಭವ ಮಂಟಪದಲ್ಲಿ ನಡೆಯುತ್ತಿದ್ದ ಶಿವಾನುಭವ ಗೋಷ್ಠಿಗಳನ್ನು ಕೇಳುತ್ತ ಆನಂದದಿಂದ ಕಾಲಕಳೆಯ ಹತ್ತಿದಳು. ಮಹಾದೇವಿಯಕ್ಕನಾದರೂ ಹೀಗೆಯೇ ವರ್ತಿಸಿದ್ದಾಳೆ. ಇಬ್ಬರೂ ಶ್ರೇಷ್ಠ ಶಿವಾನುಭವಿಗಳು. ಇಬ್ಬರೂ ವಚನಕಾರರು. ಮಹಾದೇವಿಯಕ್ಕನ ವಚನಗಳು ಎಂಥ ಅಗಾಧವಾದ ವಿಚಾರಗಳಿಂದ ತುಂಬಿಕೊಂಡಿವೆಂಬುದು ಈಗ ಎಲ್ಲರಿಗೂ ತಿಳಿದದ್ದಾಗಿದೆ. ಆದರೆ ನಮಗೆ ಬೊಂತಾದೇವಿಯ ವಚನಗಳು ಬಹಳ ದೊರೆತಿಲ್ಲ. ಅವುಗಳಾದರೂ ಓಜಸ್ಸುಳ್ಳವುಗಳಿರಬೇಕೆಂದು ನಾವು ಊಹಿಸಬಹುದಾಗಿದೆ. ಹೀಗೆ ಈ ಉಭಯ ಶಿವಶರಣೆಯರಲ್ಲಿ ಒಂದು ವಿಲಕ್ಷಣವಾದ ಸಾಮ್ಯತೆಯು ಕಂಡು ಬರುತ್ತದೆ.

ಮುಂದೆ ಕಲ್ಯಾಣ ಪಟ್ಟಣದಲ್ಲಿ ಮಧುವರಸ ಹರಳಯ್ಯಗಳ ಮೂಲಕ ವಿಪ್ಲವಗಳುಂಟಾದವು. ಆಗ ಬೊಂತಾದೇವಿಯು ತನ್ನನ್ನು ಪ್ರಕಟಮಾಡಿಕೊಳ್ಳುವ ಪ್ರಸಂಗವು ಬಂದಿತು. ಅವಳಾರೆಂಬುದನ್ನು ತಿಳಿದವನು ಅಲ್ಲಮಪ್ರಭುವು ಒಬ್ಬನೇ. ಅವನು ಈ ಕಾಲದಲ್ಲಿ ಶಿವಶರಣರನ್ನು ಕರೆದು ಬೊಂತಾದೇವಿಯನ್ನು ತೋರಿಸಿ — ಇವಳು ಯಾರೆಂಬುದು ನಿಮಗೆ ಗೊತ್ತಿಲ್ಲ. ಇವಳು ಕಾಶ್ಮೀರ ದೇಶದ ಅರಸನ ಕುವಾರಿಯು. ಅತ್ಯಂತ ಧೀರೆಯು. ಮಹಾದೇವಿಯಕ್ಕನಕಿಂತಲೂ ಶ್ರೇಷ್ಠಳು. ಇವಳು ಈಗಿನ ಕಠಿಣಕಾಲದಲ್ಲಿ ಕಲ್ಯಾಣದಲ್ಲಿಯೇ ಇರುವಳು ಎಂದು ಹೇಳಿ ಶಿವಶರಣರನ್ನು ಧೈರ್ಯಗೊಳಿಸುವವನಾದನು. ಮುಂದೆ ಬೊಂತಾದೇವಿಯು ಕಲ್ಯಾಣ ಪಟ್ಟಣದಲ್ಲಿಯೇ ಇದ್ದುಕೊಂಡು ಅಲ್ಲಿಯೇ ಸಮಾಧಿಯನ್ನು ಹೊಂದಿದಳು.

ಗೊಗ್ಗವ್ವೆಯ ಚರಿತ್ರೆಯಾದರೂ ಬಹು ಮಟ್ಟಿಗೆ ಮಹಾದೇವಿಯಕ್ಕ ಬೊಂತಾದೇವಿಯರಂತೆಯೇ ಇದೆ. ಅವಳು ಅವರಂತೆಯೇ ಲಗ್ನವಾಗುವದನ್ನು ನಿರಾಕರಿಸಿದಳು. ತಾಯಿ ತಂದೆಗಳು ಲಗ್ನವಾಗೆಂದು

ಅವಳಿಗೆ ಬಹಳ ಕೇಳಿದರು. ಆದರೆ ಅವಳು ಮನೆಯನ್ನು ಬಿಟ್ಟು ಯಾರಿಗೂ ಸಿಗದಂತೆ ಅಡಗಿಕೊಂಡಳು. ತಾಯಿ ತಂದೆಗಳು ತನ್ನ ಲಗ್ನ ಮಾಡಬೇಕೆಂಬ ಹಟವನ್ನು ಬಿಟ್ಟುಕೊಟ್ಟರೆಂದು ತಿಳಿದ ಕೂಡಲೆ ಅವಳು ಮನೆಗೆ ಬಂದಳು. ಅವಳಾದರೂ ಅತ್ಯಂತ ಲಾವಣ್ಯವತಿಯು. ಅನೇಕರು ಅಕೆಯನ್ನು ವರಿಸಲು ಬಹಳ ಇಚ್ಛಿಸಿದರು. ಕೆಲವೊಬ್ಬನಂತು ಅವಳನ್ನು ಬಲಾತ್ಕಾರದಿಂದ ಲಗ್ನವಾಗಲು ಪ್ರಯತ್ನಿಸಿದನು. ಅಲಗಿನಿಂದ ಅವಳನ್ನು ಕೊಡೆಯಲು ಸಹ ಮುಂದುವರಿದನು. ಆದರೆ ಆ ಧೀರೆಯು ಅವನಿಗೊಳಗಾಗಲಿಲ್ಲ, ಅವಳು ಶಿವಾನುಭವದ ನಡೆಯಲ್ಲಿರಲು ಅಪೇಕ್ಷಿಸಿ ಶಿವಶರಣೆಯಾಗಿ ಕಾಲಕಳೆಯ ಹತ್ತಿದಳು. ಅವಳು ಶರಣು ಮಾರ್ಗಕ್ಕೆ ಅನುರೂಪವಾದ ಒಂದು ಕಾಯಕವನ್ನು ಆರಂಭಿಸಿದಳು. ಭಕ್ತರಿಗೆ ಧೂಪವನ್ನು ಪೂರೈಸುವ ಕಾಯಕವನ್ನು ಕೈಕೊಂಡಳು. ಇದೇ ಅವಳಿಗೆ ಪರಮಾತ್ಮನ ಸೇವೆಯಾಯಿತು. ಈ ಸೇವೆಯೇ ಅವಳಿಗೆ ಪೂಜಾ ಕಾರ್ಯವಾಗಿ ಪರಿಣಮಿಸಿತು. ಈ ಪ್ರಕಾರ ಗೊಗ್ಗವ್ವೆಯು ಶಿವಾನುಭವದ ಮಾರ್ಗದಂತೆ ಆಚರಿಸಹತ್ತಿದಳು. ಅವಳು ವಚನಕಾರಳೂ ಇದ್ದಾಳೆ. ನಮಗೆ ದೊರೆತ ಅವಳ ವಚನಗಳಲ್ಲಿ ನಿತ್ಯನೇಮಗಳ ಮಹತ್ವವನ್ನು ಬಹು ಚನ್ನಾಗಿ ಅವಳು ವಿವರಿಸಿದ್ದಾಳೆ. ಈ ನೇಮಗಳು ಕೇವಲ ಬಾಹ್ಯ ಆಚರಣೆಗೆ ಮಾತ್ರ ಸಂಬಂಧ ಪಟ್ಟವಿರದೆ ಅವುಗಳು ಅಂತರ್ಜ್ಞಾನವನ್ನು ಹೊಂದುವ ಸಾಧನಗಳೆಂದು ಅವಳು ತನ್ನ ವಚನಗಳಲ್ಲಿ ಹೇಳಿದ್ದಾಳೆ. ಹೀಗೆ ಅವಳು ಆಚರಿಸುತ್ತಿರಲು ಒಂದು ದಿನ ಅವಳು ತನ್ನ ರಾಜನಾದ ಚಾರಮರಾಯನನ್ನು ಕಾಣುವ ಸಮಯವು ಬಂದೊದಗಿತು. ಅವನನ್ನು ಕಂಡಾಗ ಅವಳು ಅವನಿಗೆ ಶಿವಾನುಭವದ ಮೂಲಕ ಕೈಲಾಸಕ್ಕೆ ಹೋಗುವ ಹಾದಿಯನ್ನು ತೋರಿಸಿದಳು. ಅವನು ಅವಳಿಗೆ ಕೈಲಾಸವೆಲ್ಲಿದೆಂದು ಕೇಳಿದನು. ಅವಳು ಅದಕ್ಕೆ ಕೈಲಾಸವು ಕೆಲವೊಂದು ಉನ್ನತವಾದ ಪರ್ವತ ಪ್ರದೇಶವಲ್ಲ, ಈ ಪ್ರದೇಶವು ಶಿವಾನುಭವಿಗೆ ಒಂದೇ ಒಂದು ಗೇಣು ಮಾತ್ರ ದೂರವಿದೆಂದು ಅವಳು ಚಾರಮರಾಯನಿಗೆ ಒಹು ಸೂಕ್ಷ್ಮವಾಗಿ ಬೋಧಿಸಿದಳು ಅಂದರೆ ಅದು ತನ್ನಲ್ಲಿಯೇ ಇರುತ್ತದೆಂಬ ಭಾವವು ಅವಳ ಜೋಳಿಗೆಯಲ್ಲಿದೆ. ಹೀಗೆ ಗೊಗ್ಗವ್ವೆಯು ಮಹಾದೇವಿಯಕ್ಕ, ಬೊಂತಾದೇವಿಯರಂತೆ ವಚನಕಾರಳಾಗಿ ಶಿವಾನುಭವವನ್ನು ಜನರಿಗೆ ಬೋಧಿಸುತ್ತ ಶಿವಶರಣರಲ್ಲಿ ಶ್ರೇಷ್ಠ ಸ್ಥಾನವನ್ನು ಹೊಂದಿದ್ದಾಳೆ.

ಮಹಾದೇವಿಯಕ್ಕನ ಜನ್ಮಸ್ಥಳವು ಈಗ ಶಿವಮೊಗ್ಗೆ ಜಿಲ್ಲೆಯಲ್ಲಿರುವ ಬಳಿಗಾವಿಗೆ ಸಮೀಪವಿರುವ ಉಡುತಡಿಯಾಗಿರುತ್ತದೆ. ಈ ಭಾಗದಲ್ಲಿ ಬಸವೇಶ್ವರನ ಕಾಲದಲ್ಲಿ ಅನೇಕ ಶಿವಶರಣ ಶಿವಶರಣೆಯರು ಉದಯವಾಗಿದ್ದಾರೆ. ಕಾಶ್ಮೀರ ದೇಶವು ಪುರಾತನ ಕಾಲದಲ್ಲಿ ಶೈವ ಧರ್ಮಕ್ಕೆ ಆಶ್ರಯಸ್ಥಾನವಾಗಿತ್ತು. ಆದ್ದರಿಂದ ಅಲ್ಲಿಂದ ಬಹುಜನ ಶೈವ ಪಂಡಿತರು ಕರ್ನಾಟಕಕ್ಕೆ ಆಗಮಿಸಿದರು. ಅವರಂತೆಯೇ ಬೊಂತಾದೇವಿಯೂ ಕರ್ನಾಟಕಕ್ಕೆ ಬಂದಿದ್ದಾಳೆ. ಶಿವಶರಣರಲ್ಲಿ ಅತ್ಯಂತ ಪ್ರಸಿದ್ಧಿಯನ್ನು ಹೊಂದಿದ ಮೋಳಿಗೆಯ ಮಾರಯ್ಯನೂ ಅವನ ಹೆಂಡತಿಯಾದ ಮಹಾದೇವಿಯೂ ಕಾಶ್ಮೀರ ದೇಶದವರು. ಗೊಗ್ಗವ್ವೆಯು ಕೇರಳ ದೇಶದವಳೆಂದು ಗ್ರಂಥಗಳಲ್ಲಿ ಹೇಳಿರುತ್ತದೆ. ಆದರೆ ಅಕೆಯು ಹುಟ್ಟಿದ ಊರಾದ ಅವಲೂರು ಮತ್ತು ಚಾರಮನ ರಾಜಧಾನಿಯಾದ ಕೂಡಗಲೂರು ಇವು ಮಲಾಬಾರ ಪ್ರಾಂತದಲ್ಲಿದ್ದುದು ನಮಗೆ ದೊರೆತಿಲ್ಲ. ಕೊಡಗನೂರು ಎಂಬ ಹೆಸರಿನ ಗ್ರಾಮವು ಶಿವಮೊಗ್ಗೆ ಜಿಲ್ಲೆಯಲ್ಲಿಯೂ ದಾವಣಗೆರೆಯ ಸಮೀಪದಲ್ಲಿಯೂ ವಿಜಾಪುರ ಜಿಲ್ಲೆಯಲ್ಲಿ ತಾಳೀಕೋಟೆಯ ಸಮೀಪದಲ್ಲಿಯೂ ಹೀಗೆ ಮೂರು ಸ್ಥಳಗಳು ನೋರೆಯುತ್ತವೆ. ವಿಜಾಪುರ ಜಿಲ್ಲೆಯಲ್ಲಿ ಕಾರಗನೂರು, ಕೊಡಗನೂರು ಎಂಬ ಎರಡು ಗ್ರಾಮಗಳು ಸಮಿಸಮೀಪವಾಗಿದ್ದು ಇವುಗಳಲ್ಲಿ ಕಾರಗನೂರು ಚಾರಮುಂಡಯನ ಪಟ್ಟಣವೆಂದು ಅಲ್ಲಿ ಪ್ರತೀತಿ ಇದೆ. ಈ ಗ್ರಾಮದಲ್ಲಿ ಪುರಾತನ ಅವಶೇಷಗಳು ಬಹಳ ಇವೆ. ಆದರೆ ಗೊಗ್ಗವ್ವೆಯು ಇದ್ದ ಅವಲೂರು ಅದಕ್ಕೆ ಸಮೀಪವಾಗಿ ನಕಾಶೆಯಲ್ಲಿ ಕಂಡು ಬರುವದಿಲ್ಲ. ಗೊಗ್ಗೇಶ್ವರನ ದೇವಾಲಯವಿದ್ದ ಸ್ಥಳಗಳನ್ನು ನಾವು ಶೋಧಿಸಬೇಕು. ಅಂದರೆ ಈ ವಿಷಯದ ಮೇಲೆ ಪ್ರಕಾಶವು ಬೀಳಬಹುದು.

ಈಪ್ರಕಾರ ಶಿವಾನುಭವವು ಒಂದುಕಾಲದಲ್ಲಿ ಉತ್ತರಕ್ಕೆ ಕಾಶ್ಮೀರ ದೇಶದಿಂದ ದಕ್ಷಿಣಕ್ಕೆ ಮಲಾಬಾರ ಪ್ರಾಂತದ ವರೆಗೆ ಜನತೆಯಲ್ಲಿ ಪ್ರಸಿದ್ಧಿಯನ್ನು ಹೊಂದಿತ್ತೆಂದು ತೋರುತ್ತದೆ. ಅದರ ಪ್ರಭಾವವು ಜನ ಸಾಮಾನ್ಯರಲ್ಲಿ ಹೇಗೆ ಪಸರಿಸಿತ್ತು, ಸ್ತ್ರೀಯರು ಸಹ ಅದಕ್ಕೆ ಮೆಚ್ಚಿ ಹೇಗೆ ಅದನ್ನು ಪಸರಿಸಲು ಕಾರಣರಾದರು. ಇವೇ ಮೊದಲಾದ ವಿಷಯಗಳು ಈ ಮೂವರು ಮಹಿಳೆಯರ ಚರಿತ್ರೆಗಳಿಂದ ವಾಚಕರಿಗೆ ತಿಳಿಕೆಯಾಗದಿರದು.

ಗುರು ಲಿಂಗ ಜಂಗಮ.

(ಲೇಖಕ:— ಶ್ರೀಯುತ ಬಸಪ್ಪ ಚೆನ್ನಪ್ಪ ಪಟ್ಟೇದ.)

(ಹಿಂದಿನ ಸಂಚಿಕೆಯಿಂದ ಮುಂದೆಸಾಗಿದ್ದು.)

ಸಮುಷ್ಟಿಲಿಂಗ.

ಪ್ರತಿಯೊಂದು ಸ್ಥೂಲವಸ್ತುವಿನಲ್ಲಿ ಸೂಕ್ಷ್ಮರೀತಿಯಿಂದ ವಾಸಿಸುವ ಚೈತನ್ಯಾತ್ಮಕ ವಸ್ತುವೇ ಲಿಂಗ. ಇಡಿ ಜಗತ್ತಿನಲ್ಲಿ ಅಂತರ್ಯಾಮಿಯಾಗಿ ಸಾರ್ವತ್ರಿಕ ವ್ಯಾಪಿಸಿರುವ ಮಹಾಚೈತನ್ಯಾತ್ಮಕ ವಸ್ತುವೇ ಮಹಾಲಿಂಗ; ಜನಾಂಗವನ್ನು ವ್ಯಾಪಿಸಿ ನಿಂತ ಚೈತನ್ಯಾತ್ಮಕವೇ ಸಮುಷ್ಟಿ ಲಿಂಗ. ಈ ಸಾಮೂಹಿಕ ಲಿಂಗವಾದರೂ ವ್ಯಕ್ತಿಗತ ಲಿಂಗದಂತೆ ಅಂತರ್ಗತವಾದುದು ಅದೃಶ್ಯವಾದುದು. ಅದನ್ನು ಪೂಜಿಸುವುದೆಂದರೆ— ಸಮಾಜದೊಳಗಿನ ಪ್ರತಿಯೊಬ್ಬ ಭಕ್ತನು, ಉಳಿದೆಲ್ಲರೊಡನೆ ಅವರ ಆತ್ಮದ ಸಂತೋಷವೃತ್ತಿಯು ಅಳಿಯದಂತೆ ನೋಡಿಕೊಳ್ಳುವದಲ್ಲದೆ, ತಿರುಗಿ ಅದು ಯೋಗ್ಯ ಸಂಗತಿಯನ್ನು ಉಭಯವಿಧ—ಐಹಿಕ ಅಮುಷ್ಮಿಕ-ದಲ್ಲಿಯೂ ಪಡೆಯಲು, ತನ್ನಿಂದ ಒಳಿತಾಗಿ ಸಹಾಯವಾಗುವಂತೆ ವರ್ತಿಸುವದೆಂದರಿಯಬೇಕು. ವ್ಯಕ್ತಿಗತ ಪ್ರಾಣಲಿಂಗ ಪೂಜೆಯು ಸಫಲವಾಗಬೇಕಾದರೆ, ತನ್ನ ದೇಹವೇ ದೇವಾಲಯ, ಒಳಗಿರುವ ಪ್ರಾಣವೇ ಶಿವಲಿಂಗ ಎಂದು ದೃಢವಾಗಿ ನಂಬಿ, ತನ್ನನ್ನು ಸಂಪೂರ್ಣ ಇಲ್ಲವೆನಿಸಿ (ನಿರಹಂಕಾರಿಯಾಗಿ), ತನ್ನ ಕರಣೇಂದ್ರಿಯಗಳೆಲ್ಲ ಆ ಶಿವಲಿಂಗದ ಕರಣೇಂದ್ರಿಯಗಳಾಗಿ, ತಾನು ಏನನ್ನೂ ಮಾಡದೆ, ಮಾಡುವವನೂ ಭೋಗಿಸುವವನೂ ಅಂತರ್ಯಾಮಿ ಶಿವನೇ ಎಂದು ಸಹಜಭಾವವುಳ್ಳವನಾಗಬೇಕು; ಹಾಗು ಅವನು ಮಾಡುವ ಮಾಟ (ಕರ್ಮ) ಗಳೆಲ್ಲ ನಿರುಪಾಧಿಕವಾಗಬೇಕು. ಹೀಗಾದರೆ ಆಯಿತು. ಇದರಲ್ಲಿಯೇ ಸಮುಷ್ಟಿಲಿಂಗ ಪೂಜೆಯು ಸಹ ಈಡೇರಿಬಿಡುವದು. ಈ ಅವಸ್ಥೆಯನ್ನು ಶ್ರೀ ಬಸವಣ್ಣನವರು:—

೧. "ತನುವು ನಿಮ್ಮದೆಂದ ಬಳಿಕ ಎನಗೆ ಬೇರೆ ತನುವಿಲ್ಲ. ಮನ ನಿಮ್ಮದೆಂದ ಬಳಿಕ ಎನಗೆ ಬೇರೆ ಮನವಿಲ್ಲ. ಧನ ನಿಮ್ಮದೆಂದ ಬಳಿಕ ಎನಗೆ ಬೇರೆ ಧನವಿಲ್ಲ. ಇಂತೀ ತ್ರಿವಿಧವು ನಿಮ್ಮದೆಂದ ಬಳಿಕ ಎನಗೆ ಬೇರೆ ವಿಚಾರವುಂಟೇ ಕೂ. ಸಂ. ದೇವ."

೨. "ಮಾಡುವಾತ ನಾನಲ್ಲವಯ್ಯ! ನೀಡುವಾತ ನಾನಲ್ಲವಯ್ಯ! ಬೇಡುವಾತ ನಾನಲ್ಲವಯ್ಯ! ನಿಮ್ಮ ಕಾರುಣ್ಯವಲ್ಲದೆ. ಎಲೆ ದೇವಾ ಮನೆಯ ತೊತ್ತಲಿಸಿದರೆ ಒಡತಿ ಮಾಡಿಕೊಂಬಂತೆ, ನಿನಗೆ ನೀನೇ ಮಾಡಿಕೋ ಕೂ. ಸಂ. ದೇವ."

ಎಂದಿರುವರು. ಇಂತಹ ಶರಣನ ಲಿಂಗಪೂಜೆಯೆಂತಿರುವುದೆಂದರೆ—

"ಆತ್ಮಾತ್ವಂ, ಗಿರಿಜಾ ಮತಿಃ, ಸಹಚರಾಃ ಪ್ರಾಣಾಃ, ಶರೀರಂ ಗೃಹಂ, ।
ಪೂಜಾತೇ ವಿಷಯೋಪಭೋಗರಚನಾ, ನಿದ್ರಾಸಮಾಧಿಃ ಸ್ಥಿತಿಃ, ॥
ಸಂಚಾರಃ ಪದಯೋಃ ಪ್ರದಕ್ಷಿಣವಿಧಿಃ, ಸ್ತೋತ್ರಾಣಿ ಸರ್ವಾಗಿರೋ ।
ಯದ್ಯತ್ಕರ್ಮಕರೋಮಿತತ್ತದಖಿಲಂ ಶಂಭೋತವಾರಾಧನಂ ॥"

ಇಂತು ಲಿಂಗಾರಾಧನೆಯನೆಸಗುತ ಆತನು ಸ್ವಸ್ಥನಾಗಿಯೇ ಇರುವನು. ಅವನು ಯಾವ ದ್ವಂದ್ವಕ್ಕೂ ತನ್ನಲ್ಲಿ ಇಂಬಿಲ್ಲದಂತೆ ಅಲಿಪ್ತನಾಗಿ, ಪ್ರಾಪಂಚಿಕ ನಿತ್ಯ ವ್ಯವಹಾರದಲ್ಲಿ—

"ಎಡರಿನಲ್ಲಿದೆಗುಂದದುಬ್ಬದೆ ಪೊಡವಿಯಧಿಪತಿಯಾಗೆ ಬಡತನ ।
ವಡಸಿದರೆ ಕಂಗೆಡದೆ ವಿತ್ತವ ಗಳಸಿ ಗರ್ವಿಸದೆ ॥
ಮಡದಿ ಮನೆ ಮನೆವಾರ್ತೆ ಮಕ್ಕಳ । ಲೊಡವೆಯತಿ ಕಡುಮುವ.ತೆ
ಯಿಲ್ಲದೆ ।
ವ್ಯಡ ಸುಭಕ್ತಿಯಲಿರಲು ಮೋದವಪಡೆವೆನವನೆಂದ ॥"

ಎಂಬಂತೆ ತೊಡಗಿ ಕರ್ತವ್ಯತತ್ಪರನಾಗುವನು. ಲೌಕಿಕ ರೀತಿಯಿಂದ ಪ್ರಪಂಚವು ಬೆಳೆದರೂ ಸರಿಯೇ, ಅಳಿದರೂ ಸರಿಯೇ! ಅದೆಲ್ಲ ಶಿವ ಪ್ರಪಂಚವು. ತನಗಾವ ತೆರದಿಂದಲೂ ಸಂಬಂಧಿಸದುದಲ್ಲವೆಂದು ದೃಢ ಸಂಕಲ್ಪವುಳ್ಳವನಾಗಿರುವನು. ಭಕ್ತನು ಬುದ್ಧ್ಯಾ ಕರ್ತವ್ಯವನೆಂದೂ ಕಪ್ಪಿಸನು. ಶಿವನಂತಹ ಅಸಾಧಾರಣ ಪ್ರಪಂಚವು ಇನ್ನಾವುದೂ ಇಲ್ಲವಷ್ಟೇ. ಅವನು ತನ್ನ ಪ್ರಪಂಚಕ್ಕಾಗಿ ಸರ್ವದಾ ಅವಿಶ್ರಾಂತ ದುಡಿಯುತ್ತಲೇ ಇರುವನು. ಆದರೂ ತಾನು ಅದಾವ ರೀತಿಯಿಂದಲೂ ಅದಕ್ಕೊಳಗಾಗದೆ ಸ್ವತಂತ್ರನಾಗಿಯೇ ಇರುವನು. ಭಕ್ತನ ಪ್ರಪಂಚ

ವಾದರೂ ಹೀಗೆಯೇ ಇರಬೇಕು. ನಿರ್ಹೇತುಕವಾಗಿ ಅದರೂ ಜಗತ್ಕಲ್ಯಾಣಕ್ಕಾಗಿ ಅನವರತ ಕರ್ತವ್ಯನಿಮಗ್ನನಾಗಿಯೇ ಇರಬೇಕು. ಹೀಗಿರುವದರಿಂದಲೇ ಅವನ ಉದ್ಧಾರವೂ ಸಾಮಾಜಿಕ ಗುರುಲಿಂಗ ಜಂಗಮ ಪೂಜೆಯೂ ನೇರವೇರುವವು. ಶ್ರೀ ಬಸವೇಶ್ವರ ದೇವರು ಹಾಡಿರುವಂತೆ:

" ಹೊನ್ನಿನೊಳಗೊಂದೊರೆಯ, ಸೀರೆಯೊಳಗೊಂದೆಳೆಯ, ಇಂದಿಂಗ ನಾಳಿಂಗೆ ಬೇಕೆಂದೆನೆಂದೊಡೆ ನಿಮ್ಮಾಣೆ ನಿಮ್ಮ ಪ್ರಮಥರಾಣೆ. ಶರಣರಿಂಗಲ್ಲದೆ ಮತ್ತೊಂದನರಿಯೆ ಕೂ. ಸ. ದೇವ!

ಎಂದು ವರ್ತಿಸಲು ಸಮರ್ಥನಾಗುವನು. ಸರ್ವಪ್ರಾಣಿಗಳನ್ನು ಮುಖ್ಯವಾಗಿ ಸಮಾಜವನ್ನು ಆತ್ಮವತ್ ಭಾವಿಸಿ ನಡೆಯುವ ಶಕ್ತಿಯು ಸ್ವಾಭಾವಿಕವಾಗಿಯೇ ಸ್ಫುರಿಪಡುವದು. " ದೇಶಸೇವೆಯೇ ಈಶಸೇವೆ" ಎಂದು ತ್ರಿಕರಣ ಪೂರ್ವಕವಾಗಿ ಜರಗಿಸುವ ಸ್ಫೂರ್ತಿಯು ಬೇರೂರುವದು. ಇಂತಹ ಅತ್ಯುಚ್ಚವಾದಾಚಾರವು, ವಿಶ್ವಬಂಧುತ್ವವನಷ್ಟೇ ಏಕೆ? ಅದಕ್ಕೂ ಮುಂದೆ ಸಾವಿರಾರು ಮಡಿ ಮುಂದೆ ಸಾಗಿ ಹೋಗಿ ಬೆಳೆದು ಮಹೋನ್ನತವಾದುದಲ್ಲವೇ!

ಸಮಷ್ಟಿ ಜಂಗಮ ಪೂಜೆ.

ಈ ಸೃಷ್ಟಿಯ ಸ್ಥೂಲ ಸೂಕ್ಷ್ಮಗಳೆರಡಕ್ಕೂ ಮೂಲಕಾರಣವಾದ ಪರಾತ್ಪರ ವಸ್ತುವೇ ಅನಾದಿ ಜಂಗಮವು. ಜನಸಮೂಹದಲ್ಲಿ ಹುಟ್ಟಿ ಕೊಂಡಿರುವ ಆ ಪರವಸ್ತುವಿನ ಸ್ವರೂಪವೇ ಸಮಷ್ಟಿ ಜಂಗಮವು. ಭಕ್ತನು ತಾನು ಶಿವಾನುಭಾವಿಯೂ ಮಹಾನುಭಾವಿಯೂ ಆಗಿ ಲಿಂಗಾಂಗಸಾಮರಸ್ಯವಡೆಯುವಂತೆಯೇ, ಸಮಾಜದೊಳಗಿನ ಪ್ರತಿಯೊಬ್ಬರು ಅರ್ಥಾತ್ ಎಲ್ಲರೂ ಆ ಗುರಿಗೆ ಮುಟ್ಟುವಂತೆ ಶಕ್ಯವಿದ್ದ ರೀತಿಯಲ್ಲೆಲ್ಲ ಪ್ರಯತ್ನಿಸುವದಾದರೂ ಅತನ ಪವಿತ್ರ ಹಾಗು ಅವಶ್ಯ ಕರ್ತವ್ಯವಾಗಿದೆ. ಹೀಗೆ ನೋಡಿಕೊಳ್ಳುವದೇ ಸಮಷ್ಟಿ ಜಂಗಮ ಪೂಜೆಯು. ಶಿವಾನುಭವ ಸಂಘಗಳ ಪ್ರಚಾರದಿಂದಲೇ ಈ ಕಾರ್ಯವು ಕೈಗೂಡುವದು. ಅದುದರಿಂದಲೇ ರಾ. ಬ. ಹಳಕಟ್ಟಿಯವರು ಅವುಗಳ ಬೆಳೆವಣಿಗೆಯ ಸಲುವಾಗಿ ಇಷ್ಟೊಂದು ಹಂಬಲಿಸುತ್ತಿರುವರು. ನಮ್ಮ ಮತತತ್ವಗಳು ನಮಗೆ ಗೊತ್ತಿಲ್ಲದಿರುವದರಿಂದಲೇ ಈಗಿನ ದುರವಸ್ಥೆಗೆ

ನಾವು ಒಳಗಾಗಿದ್ದೇವೆ. ಶಿವಾನುಭವ ಸಂಘಗಳು ಹೆಚ್ಚಿ ಅವುಗಳ ಕಾರ್ಯಕ್ಷಮತೆಯು ಬೆಳೆಯುತ್ತ ನಡೆದಂತೆ, ಈ ವಿಷಯಗಳಲ್ಲಿ ಸಮಾಜವು ತಲೆ ಎತ್ತಿ ಮೆರೆಯುವಂತಾಗುವದು.

ಜಂಗಮವೆಂದರೆ ಸುಜ್ಞಾನ. ಸೃಷ್ಟಿಯಲ್ಲಿ ಉದರ ಪೋಷಣೆ ಮಾಡಿಕೊಳ್ಳುವ ಲೌಕಿಕ ವಿದ್ಯೆಗಳು ಅನೇಕವುಂಟು. ಆದರೆ ಅವೇನು ಜ್ಞಾನವಲ್ಲ, ಸತ್ಪುರುಷರ ದೃಷ್ಟಿಯಲ್ಲಿ ಅವೆಲ್ಲ ಅಜ್ಞಾನವೇ. "ಅಧ್ಯಾತ್ಮ ವಿದ್ಯಾವಿದ್ಯಾಸು" ಎಂಬಂತೆ. ಅಧ್ಯಾತ್ಮ ಜ್ಞಾನವನ್ನುಮಾಡಿಕೊಡುವ ವಿದ್ಯೆಯೇ ಸುಜ್ಞಾನವು. ಇದೇ ಜಂಗಮವು! ಅಥವಾ ಅದನ್ನು ಪಡೆದು ಅದರಂತೆ ತಪ್ಪದೆ ಆಚರಿಸುವ ಮಹಾನುಭಾವಿಯೇ ಜಂಗಮನು. ಷಟ್‌ಸ್ಥಲಮಾರ್ಗದಲ್ಲಿ ಶರಣಪದಕ್ಕೇರಿ ಪ್ರಸಾದಲಿಂಗವನ್ನು ಭಜಿಸುವವರೇ ಜಂಗಮರು. ವೀರಶೈವರು ಆಚಾರಲಿಂಗ, ಗುರುಲಿಂಗ, ಶಿವಲಿಂಗ, ಚರಲಿಂಗ, ಪ್ರಸಾದಲಿಂಗ, ಮಹಾಲಿಂಗಗಳೆಂಬಾರು ಲಿಂಗಗಳನ್ನು ಭಜಿಸುವ ಭಕ್ತರಾದುದರಿಂದ, ಅವರು ಷಟ್‌ಸ್ಥಲಜ್ಞಾನವನ್ನು ತದಂತರ್ಗತ ನೂರೊಂದು ಸ್ಥಲಗಳನ್ನು—ಕರತಲಾಮಲಕವಾಗುವಂತೆ ಮಾಡಿಕೊಂಡು ಆಚರಿಸಿ, ಲಿಂಗಾಂಗ ಸಾಮರಸ್ಯಪಡೆದು ಕೃತಾರ್ಥರಾಗಬೇಕಲ್ಲವೇ? ಹೀಗಾದರೇನೇ "ಏಕೇನ ಜನ್ಮನಾ ಮುಕ್ತಿರ್ವೀರಾಣಾಂತು ಮಹೇಶ್ವರೀ" ಎಂಬ ಪರಮಾತ್ಮನ ವಾಕ್ಯದ ಸಾರ್ಥಕ್ಯವಲ್ಲವೇ! ಇಂತಹ ಜಂಗಮಸ್ಥಿತಿಯನ್ನು ಶ್ರೀಬಸವೇಶ್ವರರು ಹೀಗೆ ಹೇಳಿದ್ದಾರೆ.

೧. "ಅಳಿಯನ ಕಂಡರೆ ನಾಚಿಂಬೆ ಮಗಳೇ. ಅಳಿಯನ ಕಂಡರೆ ತೊಲಗೆಂಬೆ ಮಗಳೇ. ನಾಚುವರೆ ಮರೆಯಿಲ್ಲ, ತೊಲಗುವರೆ ನೆಲವಿಲ್ಲ. ಇಬ್ಬರಿಗೊಬ್ಬ ಗಂಡನಾದಬಳಿಕ ಇನ್ನೆಲ್ಲಿಯ ಮರೆ ಮಗಳೇ!"

೨. "ಲಿಂಗಪೂಜಿಸಿ ಫಲವೇನಯ್ಯ, ಸಮರತಿ, ಸಮಕಳಿ, ಸಮಸುಖವರಿಯದನ್ನಕ್ಕ? ಲಿಂಗವಪೂಜಿಸಿ ಫಲವೇನಯ್ಯ, ಕೂ. ಸಂ. ದೇವರ ಪೂಜಿಸಿ ನದಿಯೊಳಗೆ ನದಿ ಬೆರೆದಂತಾಗದನ್ನಕ್ಕ?"

ಹೀಗೆ ಎನಿತೆನಿತೂ ಭೇದಭಾವವುಳಿಯದೆ ಜಗದೊಡನೆ ಮುಖವಾಗಿ ಸಮಾಜದೊಡನೆ ಬೆರೆದೇಕವಾಗುವಂತೆ ಆಚರಿಸುವದೇ ಸಮಷ್ಟಿ ಜಂಗಮಪೂಜೆಯು ಕಂಡಿರಾ!

ಹೀಗಾಗಬೇಕಾದರೆ ಮೊಟ್ಟಮೊದಲು ನಾವು ಅವಶ್ಯವಾಗಿ ಸರ್ವಾ
ಜದಲ್ಲಿ ಅದಾವ ಸುಧಾರಣೆಯನ್ನು ಮಾಡಬೇಕೆಂಬ ಪ್ರಶ್ನೆ ಮುಂದೆ
ಬಂದುನಿಲ್ಲುತ್ತದೆ. ಅದರ ಉತ್ತರವೆಂದರೆ— ಸಾಮಾಜಿಕ ಬಲವಾದ
ಸಂಘಟನೆ, ಎಂದು ಹೇಳಬೇಕಾಗುವುದು. ಹಾಗೆ ಸಮಾಜವು ಸಂಘಟನ
ಹೊಂದಿ ಬಲಶಾಲಿಯಾಗಬೇಕಾದರೆ ಕೆಲಸಂಗತಿಗಳು ಅವಶ್ಯ ಅವೆಃ—
(೧) ಎಲ್ಲರಿಗೂ ಸಾಮಾಜಿಕ ಸಮಾನತೆ ಹಾಗು ಸ್ವಾತಂತ್ರ್ಯಗಳು
ಪ್ರಾಪ್ತವಾಗಬೇಕು. ಕಾಯಕದ ಕಡೆ ನೋಡುವ ದುಷ್ಟ ಸಾಂಪ್ರದಾ
ಯವು ಸಂಪೂರ್ಣ ಅಳಿದುಹೋಗದೆ ಇದು ಕೈಗೂಡದು. (೨) ಸ್ವಂತ
ಪ್ರಯತ್ನದಿಂದ ತಮ್ಮ ಲೌಕಿಕ ಹಾಗು ಪಾರಮಾರ್ಥಿಕ ಉನ್ನತಿಯನ್ನು
ಹೊಂದಲಿಕ್ಕೆ ಸರ್ವರಿಗೂ ಮುಕ್ತದ್ವಾರವಿರಬೇಕು. ಮುಖ್ಯವಾಗಿ ಸ್ತ್ರೀಯ
ರಿಗೆ ಹೆಚ್ಚು ಅವಕಾಶಕೊಡಬೇಕು. (೩) ಅನ್ನ ಕನ್ಯಾ ವ್ಯವಹಾರವು
ಸಮಾಜದಲ್ಲೆಲ್ಲ ಅಪ್ರತಿಹತವಾಗಿ ಸಾಗಬೇಕು. (೪) ಅನ್ಯಮತೀಯರು
ಹೊಸದಾಗಿ ಲಿಂಗಾಂಗಿಗಳಾಗಿದ್ದರೆ, ಅವರನ್ನು ಅದಾವ ಭೇದವೆಣಿಸದೆ
ಸಮಾಜದಲ್ಲಿ ಏಕೀಕರಿಸಿಕೊಂಡು ನಡೆಯಬೇಕು. ಈ ಎಲ್ಲ ರೀತಿಯಿಂದ
ವರ್ತಿಸಲಿಕ್ಕೆ ನಮ್ಮ ಧರ್ಮತತ್ವಗಳು ಬಹು ಅನುಕೂಲವಾಗಿರುತ್ತವೆ.
ವಿಷಮತೆಯಿಂದ ಸಮಾಜವು ಒಡೆದು ಪುಡಿಪುಡಿಯಾಗುತ್ತದೆ. ಇದಕ್ಕೆ
ನಮ್ಮ ಹಾಗು ಹಿಂದುಸಮಾಜವು ಉತ್ತಮ ದೃಷ್ಟಾಂತವಾಗಿವೆ. ಸಮಾ
ಜವು ಬೆಳೆದು ಅಭಿವೃದ್ಧಿಗೆ ಬರಬೇಕಾದರೆ, ಅದರಲ್ಲಿ ಅಖಂಡ ಶಾಂತತೆ
ನೆಲಿಸಿರುವದು ಅತ್ಯವಶ್ಯ. ಅದರಿಂದ ಉದ್ಯೋಗ ವ್ಯಾಪಾರಗಳು ಹೆಚ್ಚಿ,
ಸಮಾಜವು ಸಂಪದ್ಯುಕ್ತವಾಗುವದು. ಇಂತಹ ಸಮಾಜವು ಜಗತ್ತಿನಲ್ಲಿ
ಸುಖದಿಂದಲೂ ವೈಭವದಿಂದಲೂ ಬಾಳುವದು. ನಮ್ಮ ಬಸವಾದಿ ಪ್ರಮ
ಥರು ಇಂತಹದೇ ಸಮಾಜವನ್ನು ನಿರ್ಮಿಸಲಿಕ್ಕೆ ಬಹು ಪ್ರಯಾಸಪಟ್ಟು,
ವೀರಶೈವಮತವನ್ನು ಸರ್ವಾಂಶದಿಂದಲೂ ಸಂಸ್ಕರಿಸಿ ಪ್ರಕಾಶಮಾ
ನವಾಗಿ ಮಾಡಿದರು. ಇಂತಹ ಮತವು ಜಗತ್ತಿನಲ್ಲಿ ಬೇರೊಂದು ಸಿಗುವದೇ
ದುರ್ಲಭ! "ನ ವೀರಶೈವ ಸದೃಶಂ ಮತಮಸ್ತಿ ಜಗತ್ರಯೇ" ಎಂದು ಆಗಮ
ದಲ್ಲಿ ಪ್ರೋಕ್ತವಾದುದೇನು ಸುಳ್ಳೇ! ಇಂತಹ ಅಪ್ರತಿಮ ಧರ್ಮದಲ್ಲಿ ನಾವು
ಜನ್ಮಿಸಿಯೂ ಕೂಡ, ಅದರ ಫಲವನ್ನು ಪಡೆಯದೆಹೋದರೆ, ನಮ್ಮಂತಪ
ದೆಸೆಗೇಡಿಗಳು ಇನ್ನಾರಾದರೂ ಇರಬಹುದೇ? ಈ ಲೋಕದಲ್ಲಿ ನಾವು
ಸುತ್ತುಮುತ್ತಲಿನ ಭವಿಗಳನ್ನು ಕಂಡು ಅವರಂತೆಯೇ ವರ್ತಿಸಲಿಕ್ಕೆ

ಕವಡಿಸಬಾರದು, ಶಿವಭಕ್ತರಾದ ನಮ್ಮ ಮಾರ್ಗವು ಅವರಿಂದ ಕೇವಲ
ಭಿನ್ನವದೆ. ಅದನ್ನು ಲಕ್ಷ್ಯಕ್ಕೆ ತಂದು ಅರಿತು ಮನನಿಸಿ, ಆಪ್ರಕಾರ
ಆಚರಿಸಿದರೆ, ಸಮಾಜ ಸೇವೆ ರಾಷ್ಟ್ರಸೇವೆಗಳಾಗಿ ನಮ್ಮ ಜನ್ಮೋದ್ಧಾ
ರವೂ ಆಗುವದು.

ಸಿಂಹಾವಲೋಕನ.

ಗುರು ಲಿಂಗ ಜಂಗಮದ ವಿಷಯವಾಗಿ ನಾಲ್ಕು ಲೇಖಗಳಲ್ಲಿ
ಯಥಾಮತಿ ನಿರೂಪಿಸಲಾಯಿತು. ಈ ಕೊನೆಯ ಲೇಖದಲ್ಲಿ ಸಾಮಾ
ಜಿಕ (ಸಮಷ್ಟಿ) ಗುರುಲಿಂಗಜಂಗಮವನ್ನು ಅದು ಹೇಗೆ ಆರಾಧಿಸ
ಇಹ ಪರಸೌಖ್ಯಪಡೆಯಬೇಕೆಂಬುದನ್ನು ಮುಂದಿಟ್ಟಿದೆ. ಈ ಸಮಷ್ಟಿ
ಸ್ವರೂಪದ ಗುರುಲಿಂಗಜಂಗಮ ಪೂಜೆಯನ್ನು ಈಗ ನಾವು ಪೂರಾ
ಮರೆತುಬಿಟ್ಟಿದ್ದೇವೆ. ಅದೂಅಲ್ಲದೆ ಅದರ ವ್ಯಷ್ಟಿ (ಸ್ವಂತ) ಸ್ವರೂಪಾ
ರಾಧನೆಯನ್ನಾದರೂ ಅದೆಷ್ಟು ಜನರು ಮಾಡುತ್ತಿರುವರೆಂಬದನ್ನು ಮನ
ದಲ್ಲಿ ತಂದರೆ, ಪ್ರೋತ್ಸಾಹನ್ನುಂಟುಮಾಡದು. ಹೀಗೆ ನಾವು (ಬಹು
ಜನಸಮಾಜವು) ವಿವೇಕ ಭ್ರಷ್ಟರಾಗಿ, ಕೇವಲ ಕೃತ್ರಿಮವೂ ಸ್ಥೂಲವೂ
ಆದ ಕಣ್ಣಿಗೆ ಕಾಣುವ ಗುರುಲಿಂಗಜಂಗಮದ ನಿರರ್ಥಕ ಪೂಜೆಯ
ದೆನ್ನಮಾತ್ರ ಹತ್ತಿದೆವು. ಈಗಿನ ಕಲಿಕಾಲದಲ್ಲಿಯಂತೂ ಅದು ಸಹ
ಮಾಯವಾಗಹತ್ತಿದೆ. ಇಂತಹ ಪರಮಾವಧಿ ಶೋಚನೀಯ ಸ್ಥಿತಿಗೆ
ನಾವು ಮುಟ್ಟಿದುದರಿಂದಲೇ ನಮ್ಮ ಅಧೋಗತಿಗೆ ಪಾರಾವಾರವಿಲ್ಲ
ವಾಗಿದೆ. ಇದನ್ನೆಲ್ಲ ಒಳಿತಾಗಿ ಗಮನಿಸಿ, ಇನ್ನಮೇಲೆ ಗುರುಲಿಂಗ
ಜಂಗಮದ ನಿಜಸ್ವರೂಪವನ್ನರಿತು ಅದರ ವ್ಯಷ್ಟಿ ಸಮಷ್ಟಿ ಪೂಜೆಯು
ಯಥಾಸಾಂಗ ನೆರವೇರುವಂತೆಯೂ ಅದಕ್ಕೆ ಸಹಾಯವಾಗುವ "ಹಾಗೆ"
ಸಮಾಜದಲ್ಲಿ ಸ್ಥೂಲ ಅಧಿಕೃತ ಗುರುಜಂಗಮ ನಿಯೋಜನೆಯು ಏರ್ಪಾ
ಡಾಗುವಂತೆಯೂ ಯೋಗ್ಯ ಸುಧಾರಣೆಯಾಗುವದೆಂದು ಆಶಿಸುತ್ತೇನೆ.
ಆದೇಕೆ! ಒತ್ತಾಯದಿಂದ ಸೂಚಿಸುತ್ತೇನೆ.

ವೀರಶೈವ ಸಂಸ್ಕೃತಿ ಮತ್ತು ವೀರಶೈವ ಅಭಿಮಾನ

(ಲೇ॥– ಸುಶೀಲಾದೇವಿ ಭಸ್ಮಾಂಗದೇವರು ಕೃಷ್ಣರಾಜನಗರ ಮೈಸೂರ ಜಿಲ್ಲಾ.)

ಈಗ್ಗೆ ಸುಮಾರು ಇಪ್ಪತ್ತೈದು ವರ್ಷಗಳಿಂದೀಚೆ ನಮ್ಮೀ ಸಮಾಜದಲ್ಲಿ ಅನೇಕ ವಿದ್ಯಾವಂತರು ಪದವೀಧರರು ಮುಂದೆ ಬಂದಿರುತ್ತಾರೆ. ಇವರಲ್ಲಿ ವ್ಯಾಪಾರವನ್ನು ಅನೇಕರು ತಮ್ಮ ಮುಖ್ಯ ಕಾಯಕವನ್ನಾಗಿ ಆರಿಸಿಕೊಂಡಿರುತ್ತಾರೆ. ಕೆಲವರು ಸರ್ಕಾರದ ವೃತ್ತಿಯಲ್ಲಿರುತ್ತಾರೆ. ವ್ಯವಹಾರ ಮಾಡತಕ್ಕ ನಾವುಗಳು ಬೆಂಗಳೂರು, ಮೈಸೂರು ದಾವಣಗೆರೆ, ತುಮಕೂರು, ಧಾರವಾಡ, ಬೊಂಬಾಯಿ ಮೊದಲಾದ ಪಟ್ಟಣಗಳಿಗೆ ಹೋಗುವುದು ಬರುವುದು ಸ್ವಾಭಾವಿಕವಾಗಿರುತ್ತೆಯಷ್ಟೆ. ಅಲ್ಲಿಗೆ ಒಂದೆರಡು ಸಾರಿ ಹೋದಾಗ ಹೇಗೋ ಕಷ್ಟಪಟ್ಟು ನಮ್ಮ ಸಂಸ್ಕೃತಿಯನ್ನು ಉಳಿಸಿಕೊಳ್ಳುವುದು ದುಸ್ತರವಾದರೂ ಪ್ರಯತ್ನ ಮೂಲಕ ಸ್ವಾಭಿಮಾನ ಸಂಸ್ಕೃತಿಗಳನ್ನು ಕಾಪಾಡಿಕೊಂಡು ಬರುತ್ತೇವೆ.

ಸಮಾಜದ ಧರ್ಮ, ವ್ಯಕ್ತಿಯ ಧರ್ಮ ಇವುಗಳನ್ನು ಉಳಿಸಿಕೊಂಡು ಬರುವುದು ಪ್ರತಿಯೊಬ್ಬನ ಕರ್ತವ್ಯವಲ್ಲವೇ! ಮೇಲ್ಕಂಡ ಪಟ್ಟಣಾದಿಗಳಲ್ಲಿ ಆಚಾರ ವಿಚಾರಸ್ಥರಿಗೆ ಊಟ ವಸತಿಗಳಿಗೆ ಅನುಕೂಲವೇ ಇಲ್ಲ. ಸ್ವಾಭಿಮಾನಿಗಳಾದ ಇವರಿಗೆ ಇದರಿಂದ ಬೇಸರ ಬಂದು ಮನಸ್ಸು ಕೆಡುವುದು ಸ್ವಾಭಾವಿಕವಾಗಿದೆ. ಅನೇಕ ಹಿರಿಯರು ತಮ್ಮ ವ್ಯಾಪಾರ ಉದ್ಯಮಗಳನ್ನು ಕೈಬಿಟ್ಟು ಬಿಟ್ಟರು. ಒಂದಾನೊಂದು ಕಾಲದಲ್ಲಿ ವ್ಯಾಪಾರವು ವೀರಶೈವರ ವಶದಲ್ಲಿತ್ತೆಂಬುದು ಕರ್ನಾಟಕ ಚರಿತ್ರೆಯಿಂದಲೂ ರಾ. ಬ. ಹಳಕಟ್ಟಿಯವರು ಹೊರಪಡಿಸಿರುವ ವೀರಶೈವ ರಾಜರುಗಳ ಚರಿತ್ರೆಯಿಂದಲೂ ಗೊತ್ತಾಗುತ್ತಿದೆ. ಆ ವ್ಯಾಪಾರಾದಿಗಳಿಂದ ಗಳಿಸಿದ ದ್ರವ್ಯವನ್ನು ವ್ಯಾಪಾರಸ್ಥರಾದ ಧರ್ಮಾಭಿಮಾನಿಗಳು ಜಂಗಮಕ್ಕೆ ಧನವನ್ನು ಒಪ್ಪಿಸಬೇಕೆಂಬ ಧರ್ಮವಿಡಿದು ಜಂಗಮಕ್ಕೆ ಸಲ್ಲಿಸಿ ಕೃತಕೃತ್ಯರಾಗಿರುತ್ತಾರೆ. ಆ ಜಂಗಮ ಪುಂಗವರೂ ಅನೇಕ ಆಶ್ರಮಗಳನ್ನು, ಹಾಸ್ಟಲುಗಳನ್ನು ಕಟ್ಟಿಸಿ ನಮ್ಮ ಸಮಾಜದಲ್ಲಿ ವಿದ್ಯಾಭ್ಯಾಸವು ದಿನೇ ದಿನೇ ಬೆಳೆಯುವಂತೆ ಮಾಡಿರುವುದು ಇಡೀ ಹಿಂದೂದೇಶಕ್ಕೆ ಮಾರ್ಗದರ್ಶಿಯಾಗಿದೆ. ಆದರೆ ಈಗ ವ್ಯಾಪಾರವು ನಮ್ಮ ಕೈಬಿಟ್ಟು ಹೋಗಿರುವುದು ನಮ್ಮಗಳ ಅವನತಿಯನ್ನು ಸೂಚಿಸುತ್ತದೆ. ಕಾರಣ ಆಚಾರ ವಿಚಾರಸ್ಥರು ವ್ಯಾಪಾರ ವ್ಯವಹಾರಗಳನ್ನು ಮಾಡುತ್ತಿಲ್ಲ. ಧರ್ಮಾಭಿಮಾನಿಗಳು ಸರಳ ಜೀವಿಗಳು ಮೂಲೆಗೆ ಕೂತರು.

ಇನ್ನೂ ಕೆಲವು ವ್ಯಾಪಾರಸ್ಥರು, ವ್ಯವಹಾರಸ್ಥರು, ಪದವೀಧರರು, ಸರ್ಕಾರಿ ಉದ್ಯೋಗಸ್ತರು ಉಪಾಯವಿಲ್ಲದೆ ಭವಿಪಾಕವನ್ನು ಕೊಂಡು ಭವಿಗಳ ವಸತಿಯಲ್ಲಿ ಇರಬೇಕಾಗಿ ಬಂದಿರುವುದರಿಂದ ಧರ್ಮಾಭಿಮಾನವು ಆಚಾರ ವಿಚಾರಗಳು ಕ್ರಮವಾಗಿ ಮರೆಯಾಗುತ್ತಲಿವೆ ಎಂಬುದು ಸರ್ವರಿಗೂ ತಿಳಿದಂತಾಗಿದೆ. ಈಗಿನ ಸಮಾಜದ ಹಿರಿಯರ ನಡತೆ ಮುಂದಿನ ಜನಾಂಗಕ್ಕೆ ಮೇಲ್ಪಜ್ಞೆಯಾಗಿ ಅವರ ಧರ್ಮದ ಮೇಲೆ ಪರಿಣಾಮವಾಗುತ್ತದೆಯಷ್ಟೆ. ಇದನ್ನನುಸಾರವಾಗಿ ಯಾವ ಧರ್ಮಾಭಿಮಾನಿಗಳ ಹಾಸ್ಟಲು ಆಶ್ರಮಗಳಲ್ಲಿ ವಿದ್ಯಾಭ್ಯಾಸವನ್ನು ಮಾಡಿದ ಹೆಚ್ಚಿನ ತರುಣರೂ ಕೂಡ ನಾಲಿಗೆ ರುಚಿಗೋ ಅನಾನುಕೂಲದಿಂದಲೋ ಭವಿಪಾಕವನ್ನು ಕೊಂಡು ತಿನ್ನುವ ಸಮಯ ವದಗಿ ಆಚಾರ ವಿಚಾರಗಳು ಸಂಪೂರ್ಣ ಮರೆಯಾಗಿವೆ. ಅಲ್ಲದೆ ಸಮಾಜದ ಪವಿತ್ರವಾದ ಸಂಪತ್ತು ಅನ್ಯಾಯವಾಗಿ ಖರ್ಚು ಆಗುವುದಲ್ಲದೆ ವೀರಶೈವ ಸಂಸ್ಕೃತಿಗೆ ಉಸುರಿನಂತೆಯೂ, ಬೆನ್ನುಮೂಳೆಯಂತೆಯೂ ಇರುವ ಆಚಾರ ಧರ್ಮಗಳೂ ಮತ್ತು ಅಭಿಮಾನವೂ ನಂದಿಹೋಗುತ್ತಲಿರುವುದು ಎಲ್ಲರಿಗೂ ಕಾಣುತ್ತಲಿದೆ. ಅಷ್ಟೇ ಅಲ್ಲದೆ ಅನೇಕ ತರುಣರೂ ಕೂಡ ನಮ್ಮ ಧರ್ಮದ ಪ್ರಗತಿಯ ಕಡೆಗೆ ಮನಗೊಡದೆ ಅನ್ಯರ ಧರ್ಮವನ್ನು ಹಿಂಬಾಲಿಸುತ್ತಾ ಕೇವಲ ಹೊನ್ನು, ಹೆಣ್ಣು, ಮಣ್ಣುಗಳಿಗೋಸ್ಕರ ದಿಕ್ಕಾಪಾಲಾಗಿ ಹೋಗುತ್ತಲಿರುವುದನ್ನು ಮತ್ತು ಹೋಗಿರುವುದನ್ನು ಕಣ್ಣಾರ ನೋಡಬಹುದಾಗಿದೆ. ಇದೆಲ್ಲವನ್ನು ಪರಿಶೀಲಿಸಿದರೆ ಸ್ವಧರ್ಮಾಭಿಮಾನವು ಲೇಶಾಂಶವೂ ಇಲ್ಲವೆಂದು ತೋರುತ್ತದೆ. ಕೆಲವು ವಿದ್ಯಾವಿಹೀನರಾದ ಹಳ್ಳಿಯವರಿಗಿಂತಲೂ ಕೆಲವು ವಿದ್ಯಾವಂತರಾದ ಆಧುನಿಕ ನಾಗರಿಕರು ಸಮಾಜಕ್ಕೆ ಬಹಳವಾದ ಧರ್ಮಾಭಿಮಾನದ ದ್ರೋಹವನ್ನು ಮಾಡುತ್ತಲಿರುತ್ತಾರೆ ಮತ್ತು ಮಾಡಿಯೂ ಇರುತ್ತಾರೆ. ಅನೇಕ ಶರಣರು ತಮ್ಮನ್ನೇ ಸೂರೆಗೊಟ್ಟು ಕಾಪಾಡಿಕೊಂಡು ಬಂದ ಅಷ್ಟಾವರಣ, ಪಂಚಾಚಾರ, ಷಟ್‌ಸ್ಥಲಗಳ

ಸಕ್ರಿಯೆ, ಸವ್ಯಜ್ಞಾನಗಳು ಬೆಳಕಿಗೆ ಬರುತ್ತಲಿಲ್ಲ. ಎಷ್ಟೋ ಪ್ರಚಾರಗಳು ನಡೆದರೂ ಸ್ವಾಭಿಮಾನವಿಲ್ಲದವರು ಧರ್ಮಾಭಿಮಾನವೂ ಜ್ಞಾನವೂ ಸಹ ಇಲ್ಲದೆ ತಾವು ಭವಭಾರಿಗಳಾಗಿ ಹೋಗುವುದೂ ಅಲ್ಲದೆ ತಮ್ಮನ್ನೇ ನಂಬಿರುವ ಸ್ತ್ರೀಪುರುಷ ಸುತಾದಿಗಳನ್ನು ಮತ್ತು ಗುರು ಲಿಂಗಜಂಗಮರನ್ನು ತಪ್ಪು ದಾರಿಗೆಳೆಯುವರು. ಇನ್ನೂ ಈ ವಿಚಾರದಲ್ಲಿ ವಿವರಿಸಲು ನನ್ನಾತ್ಮವು ಒಪ್ಪಿಯೂ ಒಪ್ಪದು. ಸಮಾಜವೆಂಬ ಸಂಸಾರದ ಗುಟ್ಟನ್ನು ರಟ್ಟುಮಾಡುವುದು ಒಂದು ದೋಷವೆಂದು ಇಷ್ಟರಲ್ಲಿಯೇ ಮುಗಿಸಿರುತ್ತೇನೆ.

ವೀರಶೈವ ಸಂಸ್ಕೃತಿಯ ಅಭಿಮಾನಿಗಳೇ, ನೀವೂ ಕೂಡ ಸ್ವಲ್ಪ ಹೊತ್ತಾದರೂ ಈ ಲೇಖನದೊಂದಿಗೆ ವಿಚಾರಿಸಿರಿ. ನೀವುಗಳು ಅನೇಕ ಸಭೆ, ಸಂಘ, ಆಶ್ರಮ, ಹಾಸ್ಟಲುಗಳು ಇವುಗಳನ್ನು ನೆರವೇರಿಸಿ ಸಮಾಜದಲ್ಲಿಯೂ ಹೊರಗಿನ ಪ್ರಪಂಚದಲ್ಲಿಯೂ ಕೀರ್ತಿಶಾಲಿಗಳಾಗಿದ್ದೀರಿ. ಹಾಗೆಯೇ ಸಮಾಜದ ಸ್ವಾಭಿಮಾನಗಳನ್ನೂ ಸಂಸ್ಕೃತಿಗಳನ್ನೂ ಕಾಪಾಡಿಕೊಂಡು ಬರುವಂತಹ ಊಟ ವಸತಿಗಳನ್ನು ದೊಡ್ಡ ದೊಡ್ಡ ನಗರಗಳಲ್ಲಿಯಾದರೂ ಕಲ್ಪಿಸಿಕೊಡಬೇಕು. ಇದರಿಂದ ಧರ್ಮಾಭಿಮಾನಿಗಳೂ ತಮ್ಮ ವ್ಯವಹಾರವನ್ನು ಎಂದಿನಂತೆಯೇ ನೆರವೇರಿಸುವರು. ಮತ್ತು ಮುಂದಿನ ಜನಾಂಗಕ್ಕೆ ಮೇಲ್ಪಙ್ತಿಯಾಗುವರು. ಊಟ ವಸತಿಗಳಿಗೂ ತಮ್ಮ ಪಾಲಿನ ಸಹಾಯವನ್ನೂ ಮಾಡುವರು. ನಮ್ಮಲ್ಲಿ ಅನೇಕ ಫಂಡುಗಳು ಪುಸ್ತಕದಲ್ಲಿ ಹೊಳೆಯುತ್ತಲಿರುವುವು. ಟ್ರಿಜರಿಗಳಲ್ಲಿ ಬೆಳೆಯುತ್ತಲಿರುವುವು. ಅವುಗಳಲ್ಲಿ ಕೆಲವು ಭಾಗವನ್ನಾದರೂ ಉಪಯೋಗಿಸಿ ಸದ್ಯದಲ್ಲಿನ ಕೊರತೆಗಳನ್ನು ಹೋಗಲಾಡಿಸಬಹುದು.

ನನ್ನ ಅಣ್ಣತಮ್ಮಿಂದಿರೂ, ಬಂಧುಬಾಂಧವರೂ, ಅಕ್ಕತಂಗಿಯರೂ ಮತ್ತು ಪಂಡಯಸ್ತರು ಆದ ಸಮಾಜ ಬಂಧುಗಳಲ್ಲಿ ನನ್ನ ಕಡೆಯ ಪ್ರಾರ್ಥನೆ ಏನೆಂದರೆ—

ಮುಂದಿನ ಜನಾಂಗದ ಸತ್ಕ್ರಿಯಾಚಾರ, ಸದ್ವಿಚಾರ, ಸಂಸ್ಕೃತಿಗಳ ಮೇಲಾದರೂ ಕರುಣವಿಟ್ಟು ಕೇವಲ ಇಂದ್ರಿಯೇಚ್ಛೆ, ಒಣ ಜಂಭ, ದಾಕ್ಷಿಣ್ಯಕ್ಕಾಗಿ ಭವಿಗಳ ಪಾಕವನ್ನು ತಿಂದು, ತೇಗಿ, ಭವಭಾರಿಗಳಾಗುವವರನ್ನು ಕ್ಷಮಿಸಿ, ಅವರುಗಳಿಗೆ ಧರ್ಮಾಭಿಮಾನವನ್ನು ಮುಂದಟ್ಟು ಮಾಡಿಕೊಡಬೇಕು.

ಗುರುಲಿಂಗ ಜಂಗಮಾದಿ ಮತಸ್ತರುಗಳಲ್ಲಿಯೂ ಬಿನ್ನಹವೇನೆಂದರೆ, ಭವಿಯ ವಾಕಕ್ಕೆ ಬಾಯ್ಬೆರೆದು, ಧರ್ಮಾಭಿಮಾನವಿಲ್ಲದವರು ತಮ್ಮ ಗಮನಕ್ಕೆ ಬಂದಕೂಡಲೆ ಅವರಿಗೆ ತಿಳಿವಳಿಕೆಗಳನ್ನು ನಿರ್ದಾಕ್ಷಿಣ್ಯವಾಗಿ ಹೇಳಿ ತಮ್ಮ ಕರ್ತವ್ಯವನ್ನು ನೆರವೇರಿಸುವುದರ ಮೂಲಕ ಸತ್ಯ ಸಾಕ್ಷಾತ್ಕಾರವನ್ನು ಮಾಡಿಕೊಳ್ಳಬೇಕು. ಮತ್ತು ಇದರಿಂದ ತನ್ನನ್ನು ತಾನೇ ವಂಚಿಸುವ ದೋಷವನ್ನು ದೂರವಮಾಡಿಕೊಳ್ಳುವುದರ ಮೂಲಕ ಒಳಗೂ ಹೊರಗೂ ಶಿವಾನುಭಾವಿಗಳಾಗಬೇಕು.

ಅನೇಕ ಆಶ್ರಮಗಳನ್ನೂ, ಹಾಸ್ಟಲುಗಳನ್ನೂ, ಉಚಿತ ಭೋಜನ ವಿದ್ಯಾಶಾಲೆಗಳನ್ನು ನೆರವೇರಿಸಿರತಕ್ಕಂಥ ಪುಣ್ಯವಂತರುಗಳಲ್ಲಿಯೂ, ಗುರುಜಂಗಮರಲ್ಲಿಯೂ ವಿಜ್ಞಾಪನೆಃ— ತಮ್ಮನ್ನೇ ಆಶ್ರಯಿಸಿರುವ ವಿದ್ಯಾರ್ಥಿಗಳಿಗೆ ತಮ್ಮ ವೀರಶೈವ ಧರ್ಮದ ಜ್ಞಾನವನ್ನೂ, ಅನುಭವವನ್ನೂ, ಮಾಡಿಸಿಕೊಡಬೇಕು. ಕೇವಲ ಅನ್ನವಸತಿಗಳನ್ನೇ ಕಲ್ಪಿಸಿಕೊಟ್ಟಲ್ಲಿ ವಿದ್ಯಾರ್ಥಿಗಳನ್ನೂ ಸಮಾಜವನ್ನೂ ಉದ್ಧಾರ ಮಾಡಿದಂತಾಗುವುದಿಲ್ಲ. ಅದಕ್ಕೆ ಬದಲಾಗಿ ಅವರನ್ನು ಸತ್ಯ ಧರ್ಮದ ಕುರುಡರನ್ನಾಗಿ ಮಾಡಿದಂತಾಗುತ್ತದೆ. ವ್ಯವಹಾರಿಕ, ರಾಜಕೀಯ, ವಿದ್ಯಾಭ್ಯಾಸವನ್ನೂ ಧಾರ್ಮಿಕ ವಿದ್ಯಾಭ್ಯಾಸವನ್ನೂ ಜೊತೆಯಲ್ಲಿಯೇ ದಾನ ಮಾಡಿ ಮುಂದಿನ ಜನಾಂಗವಾದ ಈಗಿನ ವಿದ್ಯಾರ್ಥಿಗಳಿಗೆ ಸತ್ಯವಾದ ಸರಳವಾದ, ಸ್ವತಂತ್ರವಾದ, ಧರ್ಮದ ಅನುಭವವನ್ನೂ ಮಾಡಿಸಿಕೊಡಬೇಕು. ಧಾರ್ಮಿಕ ವಿದ್ಯಾಭ್ಯಾಸವಿಲ್ಲದೆ ಕೇವಲ ವ್ಯವಹಾರಿಕ ರಾಜಕೀಯ ವಿದ್ಯಾಭ್ಯಾಸದಿಂದಲೂ ಮತ್ತು ವ್ಯವಹಾರಿಕ ರಾಜಕೀಯ ವಿದ್ಯಾಭ್ಯಾಸವಿಲ್ಲದೆ ಧಾರ್ಮಿಕ ವಿದ್ಯಾಭ್ಯಾಸದಿಂದಲೂ, ಯಾವ ಸಮಾಜವೂ, ಯಾವ ದೇಶವೂ, ಯಾವ ನಾಡೂ, ಮುಂದುವರಿಯಲಾರದು. ಸ್ವತಂತ್ರಾಭಿಮಾನಿಗೆ ಸ್ವಂತದಿ ನೇದಿಹ ಬಟ್ಟೆಯ ಧರಿಸುವುದು ಹೇಗೆ ಅನಶ್ಯಕವೋ ಹಾಗೆಯೇ ಸ್ವತಂತ್ರವಾದ ಗುರುಲಿಂಗಜಂಗಮಾರ್ಚನೆ ಪಾದೋದಕ ಪ್ರಸಾದಗಳು ವಿಶ್ವಪ್ರೇಮಿ, ವಿಶ್ವಪ್ರೇಮಿಯೂ, ಸರಳ ಜೀವಿಯೂ, ಮಿತವ್ಯಯಿಯೂ ಆದ ಧರ್ಮಾಭಿಮಾನಿಗೆ ಅವಶ್ಯಕ. ಇದರಿಂದ ಸಮಾಜದಲ್ಲಿ ಮತ್ತು ನೆರೆಹೊರೆಯವರಲ್ಲಿ ಮಮತೆ, ಸಹನೆ, ಸೌಹಾರ್ದಗಳು ತಾನಾಗಿಯೇ ಬರುವವು. ಆಗ ಲಿಂಗಾಂಗ ಸಾಮರಸ್ಯದ ಮೊದಲನೆಯ ಅಂಕದ ಅನುಭವವಾಗುವುದು.

ಅನೇಕ ವೀರಶೈವ ಸಂಸ್ಥೆಗ ಅಧ್ಯಕ್ಷರೂ, ಕಾರ್ಯದರ್ಶಿಗಳೂ ಮೊದಲಾದ ಸದಸ್ಯರೂ ಕೂಡ ಪವಿತ್ರವಾದ ಊಟ ವಸತಿಗಳ ವಿಚಾರದಲ್ಲಿ ತಮ್ಮ ಪೂರ್ಣಬೆಂಬಲವನ್ನು ಸಮಾಜಕ್ಕೆ ನೀಡಬೇಕೆಂದು ಆಶಿಸುತ್ತೇನೆ. ಅನೇಕ ಸಭೆಗಳಲ್ಲಿ ಅಪ್ಪಣೆಕೊಡಿಸುವ ಭಾಷಣಕಾರರು ಅಧ್ಯಕ್ಷರೂ ಕೂಡ, ತಮ್ಮ ಭಾಗದಲ್ಲಿರುವ ಮೇಲ್ಪಂಙ್ತಿಯಾಗಿರುವ ಸಮಾಜದ ಜವಾಬ್ದಾರಿಗಳನ್ನು ಪರಿಶೀಲಿಸಬೇಕೆಂದೂ, ಊಟ ವಸತಿ ಆಚಾರವಿಚಾರಗಳ ಬಗ್ಗೆ ಹೆಚ್ಚಿನ ಪ್ರಚಾರಗಳನ್ನೂ ಮಾಡಬೇಕು. ವೀರಶೈವರ ವ್ಯಾಪಾರ, ವಿದ್ಯಾಭಿವೃದ್ಧಿ, ಸಮಾಜ ಸುಧಾರಣೆ, ವ್ಯವಹಾರಗಳನ್ನೂ ಮೇಲ್ಪಟ್ಟಕ್ಕೇರಿಸಬೇಕು. ಸ್ವತಂತ್ರವಾದ ವೀರಶೈವ ಜನಾಂಗಕ್ಕೆ ಸರಕಾರಿ ಕಾಯಿದೆಗಳು, ಆಸ್ತಿಪಾಸ್ತಿಗಳ ವಿಚಾರದಲ್ಲಿ ಪ್ರತ್ಯೇಕವಾಗಿರಬೇಕು.

ಸಾಹಿತ್ಯಾಭಿಮಾನಿಗಳೂ ಕೂಡ ನಮ್ಮ ಸಾಹಿತ್ಯ ಪ್ರಚಾರದೊಂದಿಗೆ ನಮ್ಮ ಸತ್ಯವಾದ ನಡೆನುಡಿಗಳನ್ನು ಕಾರ್ಯತಃ ಮಾಡಿ ತೋರಬೇಕು. ಮುಂದಿನ ಜನಾಂಗವಾದ, ನಮ್ಮ ವಿದ್ಯಾರ್ಥಿಗಳಿಗೂ ಮಕ್ಕಳಿಗೂ, ಸತ್ಯವಾದ ಸುಲಲಿತವಾದ ಮಾರ್ಗವನ್ನು ತೋರಿಸಿ ಅನುಭವಿಸಿಕೊಡಬೇಕು ಎಂಬುದಾಗಿ ಬೇಡುತ್ತೇನೆ.

ಸಮಾಜದ ಮಹಿಳೆಯರೂ ಕೂಡ ತಮ್ಮ ತಮ್ಮ ಚಿಕ್ಕಪುಟ್ಟ ಸಂಸಾರದಲ್ಲಿರುವವರನ್ನೂ ಸಕ್ರಿಯೆ, ಸಮ್ಯಜ್ಞಾನವುಳ್ಳವರನ್ನಾಗಿ ಸುಲಭದಲ್ಲಿ ಮಾಡಬಹುದೆಂದು ಆಶಿಸುತ್ತೇನೆ. "ನುಡಿಯಲ್ಲಿ ಎಚ್ಚತ್ತು ನಡೆಯಲ್ಲಿ ತಪ್ಪಿದರೆ, ಹಿಡಿದಿರ್ಪ ಲಿಂಗವು ಒಡನೆ ಮರೆಯಾಗುವದು" ಎಂಬುದನ್ನು ಪ್ರತಿಯೊಬ್ಬ ಸಾಹಿತ್ಯ ಪ್ರಚಾರಕನೂ ಮತ್ತು ಸಮಾಜದ ವ್ಯಕ್ತಿಯೂ ಮನಗಾಣಬೇಕೆಂಬುದೇ ನನ್ನ ಕೋರಿಕೆ.

ಮುಂಟಾಗಿದೆಂದು ತೋರುತ್ತದೆ. ಆದರೆ ಈ ಮಹಾನುಭಾವರು ಹೆಚ್ಚಿನ ತರಗತಿಯವರೆಂದು ಅವರ ಚರಿತ್ರೆಗಳಿಂದ ತಿಳಿದುಬರುತ್ತಿದೆ. ಚರಿತ್ರೆಗಳು ಗೊತ್ತಿರದ್ದರಿಂದ ಯಾವ ಸ್ಥಿತಿಯುಂಟಾಗುತ್ತದೆಂಬದಕ್ಕೆ ಇದೊಂದು ಉದಾಹರಣೆಯಾಗಿದೆ.

ವಚನಗಳು.

(೧) ಉದ್ದವನೆಯ್ದುವದಕ್ಕೆ ಗದ್ದುಗೆ ಇಲ್ಲದೆ ಏರಬಾರದು. ಚಿದ್ರೂಪನನರಿವುದಕ್ಕೆ ಅರ್ಚನೆ, ಪೂಜೆ. ನಿತ್ಯನೇಮವಿಲ್ಲದೆ ಕಾಣಬಾರದು. ಅದ ಸತ್ಯದಿಂದ ಮಾಡಿ ಅಸತ್ಯವ ಮರೆದಡೆ ಇದೇ ಸತ್ಯ ನಾಸ್ತಿನಾಥಾ.

(೨) ಅನಲ ಕೊಂಡ ಭೋಗಕ್ಕೆ ಪರಿಪ್ರಕಾರ ಉಂಟೇ? ಲಿಂಗ ಮುಟ್ಟಿದಂಗಕ್ಕೆ ಮುತ್ತೆ ಪುಣ್ಯವೆಂಬುದು ಹುಸಿ ನಾಸ್ತಿ ನಾಥಾ.

(೩) ಪೊಲೆ ಮುಡಿ ಬಂದರೆ ಹೆಣ್ಣೆಂಬರು. ಮೀಸೆ, ಕಾಸೆ ಬಂದರೆ ಗಂಡೆಂಬರು. ಈ ಉಭಯದ ಜ್ಞಾನ ಹೆಣ್ಣೋ ಗಂಡೋ? ನಾಸ್ತಿ ನಾಥಾ.

(೪) ಭಕ್ತರು ಜಂಗವುದಲ್ಲಿ ಕಟ್ಟಿ ಹೊರಲೇಕೆ? ಧೂಪದ ಹೊಗೆ ಎತ್ತ ಹೋದರೂ ಸರಿ. ಇದು ಸತ್ಯವೆಂದೆ ನಾಸ್ತಿ ನಾಥಾ.

(೫) ಮಾರುತನಲ್ಲಿ ಬೆರೆದ ಗಂಧದಂತೆ, ಸುರತದಲ್ಲಿ ಬೆರೆದ ಸುಖದಂತೆ, ಮೆಚ್ಚಿನಲ್ಲಿ ಕೊಡುವ ಉಚಿತದಂತೆ ಭಕ್ತರಿಗಿದೇ ಹಾದಿ ಎಂದೆ ನಾಸ್ತಿ ನಾಥಾ.

(೬) ಗಂಡು ನೋಹಿಸಿ ಹೆಣ್ಣು ಹಿಡಿದರದು ಒಬ್ಬರೊಡವೆ ಎಂದರಿಯಬೇಕು. ಹೆಣ್ಣು ನೋಹಿಸಿ ಗಂಡ ಹಿಡಿದರೆ ಉತ್ತರವಾವುದೆಂದರಿಯಬೇಕು. ಈ ಎರಡರ ಭಯವ ಕಳೆದು ಸುಖಿಯು ತಾನಾಗಬಲ್ಲಡೆ ನಾಸ್ತಿ ನಾಥನು ಪರಿಪೂರ್ಣನೆಂಬೆ.

ದಸರಯ್ಯ.

ದಸರಯ್ಯನೆಂಬ ಶಿವಶರಣನು ರಾಮಗೊಂಡೆ ಎಂಬ ಗ್ರಾಮದಲ್ಲಿ ವಾಸ ಮಾಡುತ್ತಿದ್ದನು. ಅವನು ಶಿವಾನುಭವಿಯಾಗಿ ಏಕೋತ್ತರ ಮಹೇಶ್ವರ ಸ್ಥಲದಲ್ಲಿ ಒಂದು ಸ್ಥಲವಾದ ಧರ್ಮಾಚಾರದಲ್ಲಿದ್ದುಕೊಂಡು ತನ್ನ ಆಚರಣೆಗಳನ್ನು ನಡಿಸುತ್ತಾ ಇದ್ದನು. ಧರ್ಮಾಚಾರವುಳ್ಳವನ ರೀತಿಗಳಾವವೆಂದರೆ:—

(೧) ಭಕ್ತ ಶಾಂತನಾಗಿರಬೇಕು. ತನ್ನ ಕುರಿತು ಬಂದ ಠಾವಿನಲ್ಲಿ ಸತ್ಯನಾಗಿರಬೇಕು. ಭೂತಹಿತವಹ ವಚನವ ನುಡಿಯಬೇಕು. ಲಿಂಗಜಂಗಮದಲ್ಲಿ ಕುಂದುನಿಂದೆಗಳಿಲ್ಲದಿರಬೇಕು. ಸಕಲ ಪ್ರಾಣಿಗಳ ತನ್ನಂತೆ ಭಾವಿಸಬೇಕು. ತನುಮನಧನವ ಗುರುಲಿಂಗಜಂಗಮಕ್ಕೆ ಸಮರ್ಪಿಸಬೇಕು. ಅಪಾತ್ರದಾನವ ಗೆಯ್ಯದಿರಬೇಕು. ಇದೇ ಮೊದಲಲ್ಲಿ ಬೇಹ ಶೌಚ ನೋಡಾ. ಲಿಂಗವ ಪೂಜಿಸಿ ಪ್ರಸಾದವ ಪಡೆವಡೆ ಎನಗಿದೇ ಸಾಧನವು ನೋಡಾ ಕೂಡಲಸಂಗಮದೇವಾ.

(೨) ತನ್ನ ಗುಣವ ಹೊಗಳಬೇಡ. ಇದಿರ ಗುಣವ ಹಳಿಯಬೇಡ. ಕೆಮ್ಮನೊಬ್ಬರ ನುಡಿಯಬೇಡ. ನುಡಿದು ನುಂಪಿತನಾಗಬೇಡ. ತನ್ನ ಮನ ವಿಕಳನಾಗಿ ಇದಿರ ಮನವ ನೋಯಿಸಬೇಡ. ತಾನು ಬದುಕುವವೆಸುದಿನ? ಸಮತೆ ಸಮಾಧಾನ ತುಂಬಿ ತುಳುಕಬೇಕು. ಮಹಾಲಿಂಗ ಕಲ್ಲೇಶ್ವರ ನಿಚ್ಚಳ ನಿಜವನರಿತ ಬಳಿಕ ಸಕಲರೊಳಗೆ ಬಚ್ಚಬರಿಯ ಮರುಳಾಗಿರಬೇಕು.

ದಸರಯ್ಯನು ಧರ್ಮಾಚಾರದ ಈ ತತ್ವಗಳಂತೆ ನಡೆಯುತ್ತ ತನ್ನ ನುಡಿಯಲ್ಲಿ "ಸಚರಾಚರ ಪ್ರಾಣಿಗಳೆಲ್ಲವು ಸುಖದಿಂದ ಬಾಳಲಿ" ಎಂದು ಆಶೀರ್ವದಿಸುತ್ತ ಸಂಚರಿಸುವನು. ಸಕಲ ಪ್ರಾಣಿಗಳನ್ನು ತನ್ನಂತೆಯೇ ಭಾವಿಸುವನು. ಪ್ರಾಣಿಗಳಿಗೆ ಎಷ್ಟು ಮಾತ್ರವು ಹಿಂಸೆ ಮಾಡುತ್ತಿರಲಿಲ್ಲ. ಹೀಗೆ ಅವನು ಅಹಿಂಸಾ ವ್ರತವನ್ನು ತನ್ನ ಆಚರಣೆಯಲ್ಲಿ ಮುಖ್ಯವಾಗಿ ಟ್ಟುಕೊಂಡು ಶಿವಾನುಭವದಂತೆ ನಡೆಯುವನು. ಅವನು ತನ್ನ ಶಿವಾನುಭವದ ಜೋಳಿಯಲ್ಲಿ ಅನಿತ್ಯವಾದ ಸಂಸೃತಿಯನ್ನು ನಂಬಲಾಗದು, ಹಿತವರಾದವರನ್ನು ಸ್ತುತಿಸಲಾಗದು, ಅಹಿತರಾದವರನ್ನು ನಿಂದಿಸಲಾ

ಗದು, ಮನ ಮುಂದುವರಿದು ಆರನ್ನೂ ಧಿಕ್ಕರಿಸಲಾಗದು, ಸುವಿಚಾರವನ್ನು ಇತರರಿಂಗೆ ಹೇಳಿದೆನೆಂದು ತನ್ನ ಬಣ್ಣಿಸಲಾಗದು ಹಿಗ್ಗಲಾಗದು, ಅಜ್ಞಾನದಿಂದ ಮನವಿಕಳನಾಗಿ ಪರರ ಮನವ ನೋಯಿಸಲಾಗದು, ಕ್ಷಮೆ, ದಮೆ, ಶಾಂತಿ ಸದಾಚಾರ, ಸದ್ಭಕ್ತಿ ಇವುಗಳಿಂದೊಡಗೂಡಿರಬೇಕು, ಶಿವತತ್ವಾನುಭವದಲ್ಲಿ ಎರಡಿಲ್ಲವೆಂದು ತಿಳಿಯಬೇಕು, ಯಾರಾವರೂ ನಿಂದಿಸಿದರೆ ತಗ್ಗಲಾಗದು, ನಂದಿಸಿದರೆ ಹಿಗ್ಗಲಾಗದು, ಸದಾಚಾರ ಸದ್ಭಕ್ತಿಯುಳ್ಳ ಶರಣರಲ್ಲಿ ಶಿವನಿರುವನೆಂದು ಭಾವಿಸಬೇಕು, ತಾನು ಹೆರವರನ್ನು ನಿಂದಿಸದೆ, ತಾನು ಅವರ ನಿಂದೆಗೆ ಒಳಗಾಗದೆ, ಸದಾಚಾರ ಸದ್ಭಕ್ತಿಯಲ್ಲಿರುವದೇ ಶಿವಧರ್ಮವೆಂದು ತಿಳಿಯಬೇಕು, ನಡೆನಲ್ಲಿ ನುಡಿವಲ್ಲಿ ಜೀವ ಹಿಂಸೆ ಮಾಡಕೂಡದು, ಎಂದು ಬೋಧಿಸುತ್ತ ಅದರಂತೆ ತಾನೂ ನಡೆಯುತ್ತ ಜನರಲ್ಲಿ ಅತ್ಯಂತ ಪ್ರಸಿದ್ಧನಾಗಿದ್ದನು. ಹೀಗೆ ಅವನು ಶಿವಾನುಭವದಂತೆ ನಡೆಯುತ್ತಿರುವಲ್ಲಿ ಚರಾಚರ ಪ್ರಾಣಿಗಳಲ್ಲೆಲ್ಲ ಅವನು ಅತ್ಯಂತ ಪ್ರೀತಿಯನ್ನು ವಹಿಸಿದವನಾಗಿದ್ದನು. ಇದರಿಂದ ಅವನಲ್ಲಿ ಒಂದು ಅಗಾಧವಾದ ಶಕ್ತಿಯು ಉಂಟಾಗಿ ಅದರ ಮೂಲಕ ಅವನು ಸಚರಾಚರ ಪ್ರಾಣಿಗಳ ಸಾವುನೋವುಗಳನ್ನೂ ಅವುಗಳು ಹೊಂದುವ ಕುಂದುಕೊರತೆಗಳನ್ನೂ ಅಂತರ್ಜ್ಞಾನದಿಂದ ತಿಳಿಯುವವನಾದನು. ಶಿವಚೈತನ್ಯವು ತನ್ನಲ್ಲಿ ಪ್ರಸ್ಫುರಿಸಹತ್ತಲು ಚರಾಚರ ಪ್ರಾಣಿಗಳಲ್ಲಿಯ ಬಯಕೆಗಳ ಅರಿವು ದಸರಯ್ಯನಿಗೆ ಉಂಟಾಗಹತ್ತಿತು. ಹೀಗೆ ದಸರಯ್ಯನು ಶಿವಾನುಭವದ ಆಚರಣೆಯನ್ನು ಪಾಲಿಸುತ್ತ ಬಂದನು.

ಹೀಗಿರಲು ಅವನು ಒಂದು ದಿವಸ ತನ್ನ ಪೂಜೆಗೆ ಪುಷ್ಪವನ್ನು ತ್ತುವಕ್ಕೊಸ್ಕರ ತೋಟಕ್ಕೆ ಹೋಗಿ ಅಲ್ಲಿ ಒಂದು ಗಿಡದ ಮೇಲಿನ ಪುಷ್ಪವನ್ನು ಮೇಲೆತ್ತಲು, ಆಗ ಆ ಗಿಡವು 'ಅಯ್ಯೋ ನಾನುನೊಂದೆನು' ಎಂಬ ಸ್ವರವು ಅವನಿಗೆ ಕೇಳಬಂದಿತು. ಅದನ್ನು ಕೇಳಿ ದಸರಯ್ಯನು ಬಹಳ ಮೃದುವಾಗಿ ಆ ಪುಷ್ಪವನ್ನು ಮುಟ್ಟಲು, ಅದು ನರಳುವ ಶಬ್ದವು ಕೇಳಬಂದಿತು. ಆದರೂ ದಸರಯ್ಯನು ತನ್ನ ಪೂಜೆಗೋಸ್ಕರ ಅದನ್ನು ಹರಿದುಬಿಡಲು ಅದರೊಳಗಿಂದ ಹರಿದುಬಂದ ರಸ ಪ್ರವಾಹವು ರಕ್ತದ ಧಾರೆಯಾಗಿ ಬೀಳುವಂತೆ ಅವನ ದೃಷ್ಟಿಗೆ ಕಂಡಿತು. ಅದನ್ನು ದಸರೇಶ್ವರನು ಕಂಡು ಅತ್ಯಂತ ಮನಸ್ಸನ್ನು ನೊಂದವನಾಗಿ— ಅಯ್ಯೋ ಗಿಡ

ಗಳ ಮೇಲಿರುವ ಹೂವುಗಳನ್ನು ಕೊಯ್ಯುವದು ಹಿಂಸೆಯಲ್ಲವೇ? 'ದಯದಿಂದ ಬಿಟ್ಟು ಧರ್ಮವದಾವುದು? ದಯವೇ ಬೇಕು ಸಕಲ ಪ್ರಾಣಿಗಳಲ್ಲಿ. ದಯವೇ ಧರ್ಮದ ಮೂಲವು?' ಎಂದಿರುವ ಗುರು ವಾಕ್ಯವನ್ನು ನೆನಪಿಗೆ ತಂದು ದಸರಯ್ಯನು ತನ್ನ ಲಿಂಗಪೂಜೆಗೋಸ್ಕರ ಬೇಕಾಗಿದ್ದ ಹೂವುಗಳನ್ನು ಕೊಯ್ಯುವದನ್ನು ಆಕ್ಷಣವೇ ಬಿಟ್ಟು ಕೊಟ್ಟನು.

ಮುಂದೆ ದಸರಯ್ಯನು ತಾನು ಹೂವನ್ನು ಕೊಯ್ದು ಗಿಡದ ಕೆಳಗೆ ಪೂಜೆಯನ್ನು ಮಾಡಬೇಕೆಂದು ಸ್ಥಳವನ್ನು ಅಣಿಮಾಡಿ ಚಾಪೆಯನ್ನು ಮರೆಗಟ್ಟಿ ಅಲ್ಲಿ ಉದುರಿಬಿದ್ದ ಪುಷ್ಪಗಳನ್ನು ಎತ್ತಿ ತಂದು ಲಿಂಗಾರ್ಚನೆಯನ್ನು ಮಾಡುವವನಾದನು. ಈ ರೀತಿಯಾಗಿ ಅವನು ಬಿದ್ದ ಹೂವುಗಳನ್ನು ದಿನಾಲು ಆರಿಸಿತರುತ್ತ ತನ್ನ ನಿತ್ಯ ಲಿಂಗಾರ್ಚನೆಯನ್ನು ಮಾಡುವವನಾದನು. ಇದೇ ಅವನ ಲಿಂಗಪೂಜೆಯ - ನಿತ್ಯಕ್ರಮವಾಯಿತು.

ಅವನ ಈ ಅಹಿಂಸಾಭಾವವು ದಿನೇದಿನೇ ಹೆಚ್ಚುತ್ತಲೇ ಹೋಯಿತು. ಅವನು ಪುಷ್ಪಗಳನ್ನು ಹರಿಯುವದು ಮಾತ್ರವಲ್ಲ, ಗಿಡಗಳ ಟೊಂಗೆಗಳು ನೊಂದಾವೆಂದು ಅವುಗಳನ್ನು ಬಲವಾಗಿ ಬಗ್ಗಿಸುತ್ತಿರಲಿಲ್ಲ. ದಾರಿ ನಡಿಯುವಲ್ಲಿ ಜೀವಜಂತುಗಳಿಗೆ ಹಿಂಸೆಯಾದೀತೆಂದು ಸಾವಧಾನದಿಂದ ನಡೆಯುವನು. ಯಾವಾಗಲೂ ಹಿತಕರವಾದ ನುಡಿಗಳನ್ನೇ ಎಲ್ಲರಗೂಡ ನುಡಿಯುವನು. ಯಾರ ಮನಸ್ಸನ್ನೂ ನೋಯಿಸನು. ಈ ವರ್ತನೆಯು ಅವನಲ್ಲಿ ಹೆಚ್ಚುತ್ತಲೇ ಬಂದಿತು. ಹೀಗೆ ಪಶುಪಕ್ಷಿ, ವನಸ್ಪತಿ, ಮನುಷ್ಯರು ಇವರುಗಳೆಲ್ಲಲ್ಲ ಅಹಿಂಸೆಯನ್ನು ತಾಳಿದವನಾದನು. ಈ ಅಹಿಂಸೆಯು ಕೇವಲ ಬಾಹ್ಯ ಅಂಗಕ್ಕೆ ಮಾತ್ರವಲ್ಲ, ಪ್ರಾಣಿಗಳೆಲ್ಲವುಗಳ ಮನ, ಬುದ್ಧಿ, ಚಿತ್ತ ಇವುಗಳಿಗೆ ಸಹ ನೋವು ಉಂಟಾದೀತೆಂದು ಬಹು ಸಮಾಧಾನದಿಂದ ವರ್ತಿಸುವನು.

ಅವನ ಈ ಅಹಿಂಸಾ ವರ್ತನೆಯ ಮೂಲಕ ನಾಡಿನಲ್ಲೆಲ್ಲ ಅವನ ಕೀರ್ತಿ ವಾರ್ತೆಗಳು ಬಹಳ ಹಬ್ಬಿದವು. ಅವನು ಒಬ್ಬ ಶ್ರೇಷ್ಠ ಶರಣನೆಂದು ಲೋಕದ ಜನರು ನುಡಿಯ ಹತ್ತಿದರು. ಆದರೆ ಜಗತ್ತಿನಲ್ಲಿ ದುರ್ಜನರು ತುಂಬಿರುತ್ತಾರೆ. ಅವರು ಮಾತ್ರ ದಸರಯ್ಯನ ಈ ಕೀರ್ತಿ

ಯನ್ನು ಕೇಳಿ ಅಸೂಯೆಯುಳ್ಳವರಾಗಿ ಅದನ್ನು ಸಹಿಸಲಾರದಾದರು. ಅವರು ತಮ್ಮ ತಮ್ಮೊಳಗೆ--ನಮ್ಮೂರಲ್ಲಿ ದಸರಯ್ಯನೆಂಬುವನಿದ್ದಾನಂತೆ. ಅವನು ಯಾರನ್ನೂ ನಿಂದಿಸುವದಿಲ್ಲವಂತೆ. ಅವನು ಗಿಡದಲ್ಲಿಯ ಪುಷ್ಪವನ್ನೆತ್ತಿದ ಕೂಡಲೆ ಗಿಡವು ರಕ್ತವನ್ನು ಸುರಿಸಿತಂತೆ. ಈತನ ಕ್ಷಮೆಯೆದೆಯನ್ನು ನಾವು ಪರೀಕ್ಷಿಸುವೆವು, ಎಂದು ಅತ್ಯಂತ ಆವೇಶವನ್ನು ತಾಳಿ ದಸರಯ್ಯನಿಗೆ ಕೇಡುಬಗೆಯುವವರಾದರು.

ಈ ದುರ್ಜನರು ಒತ್ತಟ್ಟಿಗೆ ಸೇರಿ ಒಂದು ಕುಯುಕ್ತಿಯನ್ನು ತೆಗೆದು ಊರಲ್ಲಿ ಒಬ್ಬ ದುಷ್ಟನು ಶರೀರದಲ್ಲಿ ಪುಷ್ಟನಾಗಿ ಕಳವು ಮಾಡುತ್ತಿರಲು ಅವನು ಅಧಿಕಾರಿಗಳ ಕೈಗೆಸಿಕ್ಕಿಬೀಳಲು ಅವರು ಪೂರ್ವದ ಪದ್ಧತಿಯಂತೆ ಅವನ ಕಯ್ಗಳನ್ನು ಕಡಿಸಿಹಾಕಿಸಿದ್ದರು. ಆದರೂ ಆ ದುಷ್ಟನು ತನ್ನ ಮೊದಲಿನ ಕ್ರೂರ ಸ್ವಭಾವವನ್ನು ಬಿಡದೆ ಗ್ರಾಮದಲ್ಲಿ ವರ್ತಿಸುತ್ತಿದ್ದನು. ಅವನನ್ನು 'ಮೋಟಮಲ್ಲುಗ' ನೆಂದು ಜನರು ಕರೆಯುತ್ತಿದ್ದರು. ಅವನನ್ನು ಈ ದುರ್ಜನರು ಹುಡಿಕಿಕೊಂಡು ಬಂದು ಅವನಿಗೆ ಬೋಧಿಸಿ, ತಮ್ಮೊಳಗೆ ಮಾತಾಡಿಕೊಂಡು ಮೊದಲು ಅವನ ತಲೆಯನ್ನು ಬೋಳಿಸಿ, ಅವನಿಗೆ ಭಸಿತವನ್ನು ಉದ್ಧೂಳಿಸಿ, ಅವನ ಸೆಜ್ಜೆಯಲ್ಲಿ ಲಿಂಗವನ್ನಿಡದಿ ಅದನ್ನು ಬರಿದಾಗಿಟ್ಟು, ಅದಕ್ಕೆ ಶಿವಧಾರವನ್ನು ಮಾತ್ರ ಕಟ್ಟಿ, ಕಾವಿ ಕಾಷಾಯಾಂಬರವನ್ನು ಉಡಿಸಿ ಅವನಿಗೆ ಜಂಗಮ ವೇಷವನ್ನು ಅಳವಡಿಸಿದರು. ಆಮೇಲೆ ಅವರು ಅವನಿಗೆ--ನೀನು ಇನ್ನುಮೇಲೆ ದಸರಯ್ಯನ ಬೆನ್ನಹಿಂದೆಹೋಗಿ, ನಿನ್ನ ಮೋಟುಗಯ್ಯಿಂದ ಅವನನ್ನು ಗುದ್ದಿ ಗುದ್ದಿ ಒಳಿತಾಗಿ ನೋಯಿಸು ಎಂದು ಹೇಳಿಕಳುಹಿದರು.

ಆಗ ಆ ಮೋಟನು ಅಂಗಜೇಷ್ಟೆಗಳನ್ನು ಮಾಡುತ್ತ, ಬಿಂಕದಿಂದ ಬೆರಿಯುತ್ತ, ದಸರಯ್ಯನಿದ್ದೆಡೆಗೆ ಬಂದು ಅವನೊಡನೆ ಜಗಳ ತೆಗೆಯಬೇಕೆಂದು ಅವನ ಮೇಲೆ ತಾನೇ ನುಗ್ಗಿ--ಎಲೋ ದಸರಯ್ಯನೇ, ನಿನ್ನ ಕಣ್ಣು ಕಾಣುವದಿಲ್ಲವೇ? ನಿನ್ನ ಸೊಕ್ಕು ಎಷ್ಟು? ನಿನ್ನನ್ನು ಕರೆದರೆ ನುಡಿಯದೆ ಹೋಗುತ್ತೀಯಲ್ಲ. ಇದು ನಿನ್ನ ತಪ್ಪಲ್ಲವೇ? ಎಂದು ಗರ್ಜಿಸಿ ತನ್ನ ಮೋಟುಗಯ್ಯಿಂದ ಅವನನ್ನು ಹೊಡೆಯಹತ್ತಿದನು.

ಆಗ ದಸರಯ್ಯನು ಇವನು ಅಂಗಹೀನನು, ಮೋಟನು ಎಂಬುದನ್ನು ನೋಡಿ, ಅವನನ್ನು ತಾನು ಹಿಂಸೆ ಮಾಡಬಾರದೆಂದು ತನ್ನ

ವ್ರತವನ್ನು ನೆನೆದು ಸುಮ್ಮನೆ ಅವನಿಂದ ಹೊಡಿಸಿಕೊಳ್ಳುತ್ತ ನಾಗಿ ನಿಂತುಬಿಟ್ಟನು! ಆದರೂ ಆ ಮೋಟನು ಅವನನ್ನು ತನ್ನ ಮೋಟುಸೈಗಳಿಂದ ಹೊಡೆಯುವದನ್ನು ಬಿಡಲಿಲ್ಲ. ಆಗ ದಸರಯ್ಯನ ಸಿರವು ಒಡೆಯಿತು, ನೆಲೈ ಸೀಳಿತು, ರಂಧ್ರಗಳೊಳಗಿಂದ ರಕ್ತವು ಹರಿಯತೊಡಗಿತು. ಆದರೂ ಅವನು ಎಷ್ಟುಮಾತ್ರವೂ ಸಿಟ್ಟನ್ನು ಹೊಂದಲಿಲ್ಲ. ಆದರೆ ಆ ಮೋಟನು ಹೊಡೆಯುವಲ್ಲಿ ಅವನ ಕೈನೊಂದುತ್ತವೆಯಲ್ಲಾ ಎಂದು ಅವನಿಗೋಸ್ಕರ ಪರಿತಪಿಸಿದನು! ಇದನ್ನು ಆ ಮೋಟನಿಗೆ ಹೇಳಬೇಕೆನ್ನುವಷ್ಟರಲ್ಲಿ—ಹೀಗೆ ಹೇಳಿದರೆ ಆ ಮೋಟನ ಮನಸ್ಸು ನೊಂದೀತಲ್ಲಾ ಎಂಬ ವಿಚಾರವು ಹೊಳೆಯಲು ಅವನು ಕೂಡಲೆ ಸುಮ್ಮನಾದನು. ಆಗ ಆ ಮೋಟನು ದಸರಯ್ಯನನ್ನು ಹೊಡೆದು ಹೊಡೆದು ಅವನೇ ಶ್ರಮಬಟ್ಟು ಕಡೆಗೆ ಸುಮ್ಮನಾದನು. ಆಗ ದಸರಯ್ಯನು ಎದ್ದುನಿಂತು, ಆ ಮೋಟನನ್ನು ಹಿಡಿದು ಅವನ ಮೈಯ್ಯನ್ನು ತಡವರಿಸುತ್ತ—ಹರಹರಾ! ಏನುಕಾರಣ ಇಷ್ಟು ಬಳಲಿದಿರಿ, ಚರಲಿಂಗವೇ! ನಿಮ್ಮ ಹಸ್ತಗಳು ನೊಂದವೇ? ದೇವಾ! ಎಂದು ನುಡಿಯುತ್ತ ಆ ವೇಷಧಾರಿಯಾದ ಜಂಗಮನ ಕೈಕಾಲುಗಳನ್ನು ತಡವರಿಸಿ ಒತ್ತಹತ್ತಿದನು. ನೆರೆದ ಜನರು ಅದನ್ನು ನೋಡಿ ಚಕಿತರಾದರು. ಅಷ್ಟರಲ್ಲಿ ಒಂದು ಅದ್ಭುತವಾಯಿತು. ದಸರಯ್ಯನು ಅಹಿಂಸಾ ವ್ರತವನ್ನು ಅಚ್ಚಳಿಯದೆ ಪಾಲಿಸುತ್ತ ಬಂದಿದ್ದರಿಂದ ಅವನ ಮಹಿಮೆಯು ಆಗ ಹೊರಬಿದ್ದಿತು. ಅವನ ಪ್ರೇಮಪೂರಿತವಾದ ಹಸ್ತಸ್ಪರ್ಶನವು ಆ ಮೋಟನಿಗೆ ಆದಕೂಡಲೆ ಅವನ ಮೋಟಗೈಗಳು ಕೂಡಲೆ ಚಿಗಿತವು. ಅವನ ಬರಿದಾದ ಸೆಜ್ಜೆಯಲ್ಲಿ ನಿಜವಾದ ಲಿಂಗವು ಪ್ರಕಟವಾಯಿತು. ಅವನು ನಿಜವಾದ ಜಂಗಮನೇ ಆದನು!

ಅದನ್ನು ಆ ಮೋಟನು ನೋಡಿ ತನ್ನಿಂದ ಆದ ಮಹಾಪರಾಧವನ್ನು ತಿಳಿದವನಾಗಿ ದಸರೇಶ್ವರನ ಕ್ಷಮೆಯನ್ನು ಬೇಡಿಕೊಂಡನು. ಅದನ್ನು ನೋಡಿ ಪುರದಲ್ಲಿದ್ದ ದುಷ್ಟರು ದಸರಯ್ಯನ ಸಮೀಪಕ್ಕೆ ಬಂದು ಅವನನ್ನು ವಂದಿಸಿ—ದಸರಯ್ಯನೇ, ನಿನ್ನನ್ನು ಹೊಡೆಯಲಿಕ್ಕೆ ಕಳಿಸಿದವರು ನಾವು. ದಯಾಘನನಾದ ಶಿವನೆಂಬ ಸಮುದ್ರಕ್ಕೆ ನೀನು ಚಂದ್ರಮನಂತಿದ್ದೀ. ನಿನ್ನನ್ನು ಹಿಂಸೆ ಮಾಡಿದರೂ ಈ ಮೋಟನು ಸದ್ಗತಿಯನ್ನು ಹೊಂದಿದನು. ಇದೆಂಥ ಅದ್ಭುತವು! 'ದುರ್ಜನರ ಹಿತಕರ

ವೈತ್ಯೈಲ್ಯಂತಲೂ ಸಜ್ಜನರ ಹಗೆತನವೇ ಲೇಸು' ಎಂಬ ನಾಣ್ನುಡಿಯು ಇಂದಿನ ನಿನ ನಮ್ಮ ತಿಳುವಳಿಕೆಗೆ ಬಂದಿತು, ಎಂದೆನ್ನುತ್ತ ಅವರು ದಸರಯ್ಯನಿಗೆ ಸಾಷ್ಟಾಂಗವೆರಗಿದರು. ದಸರಯ್ಯನು ಅವರಿಗೆ ಅಭಯವನ್ನು ಕೊಟ್ಟು ಅವರನ್ನು ಕಳಿಸಿದನು. ಇದರಿಂದ ಅವನ ಕೀರ್ತಿಯು ಜಗತ್ತಿನಲ್ಲಿ ಮತ್ತಿಷ್ಟು ಹಬ್ಬಿತು. ಹೀಗೆ ಅವನು ಅಹಿಂಸಾಚರಣೆಯನ್ನು ಆಚರಿಸುತ್ತ ದಸರೇಶ್ವರಲಿಂಗವೆಂಬ ತನ್ನಿಷ್ಟಲಿಂಗದಲ್ಲಿ ಬಯಲಾದನು.

ದಸರಯ್ಯನು ವಚನಕಾರನಿದ್ದಾನೆ. ಅವನ ೧೦ ವಚನಗಳನ್ನು ನಾವು ಮುಂದೆ ಉದಹರಿಸಿದ್ದೇವೆ. ಅವುಗಳಲ್ಲಿ ಶ್ರೇಷ್ಠತಮವಾದ ತತ್ವಗಳಿದ್ದು ಅವುಗಳನ್ನೆಲ್ಲ ನಾವು ಇಲ್ಲಿ ಕೊಟ್ಟಿದ್ದೇವೆ. ಅವುಗಳಲ್ಲಿ ಶಿವಾನುಭವದ ತತ್ವಗಳು ತುಂಬಿತುಳುಕುತ್ತವೆ. ಅವು ಅಶುದ್ಧವಾಗಿದ್ದರೂ ಅವುಗಳ ಮರ್ಮವನ್ನು ನಾವು ಕಂಡುಹಿಡಿಯಬಹುದಾಗಿದೆ. ಮೊದಲು ನಾವು ಬರೆದ ಭಾವವನ್ನು ತಿಳಿದು ಆಮೇಲೆ ಮೂಲ ವಚನಗಳ ಅರ್ಥವನ್ನು ವಾಚಕರೇ ಮಾಡಿಕೊಳ್ಳಬೇಕೆಂದು ನಮ್ಮ ನಮ್ರ ಸೂಚನೆ ಇದೆ.

ದಸರಯ್ಯನ ಹೆಸರು ಗಣಸಹಸ್ರದಲ್ಲಿ ಬಂದಿರುತ್ತದೆ. ಆದ್ದರಿಂದ ಅವನು ವೀರಶೈವರಿಗೆಲ್ಲ ಅತ್ಯಂತ ಪೂಜ್ಯನಾಗಿದ್ದಾನೆ.

ವಚನಗಳು.

ಕೆಳಗಿನ ೧ನೇ ವಚನದಿಂದ ದಸರಯ್ಯನು ಉದುರಿಬಿದ್ದ ಹೂವುಗಳನ್ನು ಎತ್ತಿಕೊಂಡು ಪೂಜೆಮಾಡುತ್ತಿದ್ದುದು ನಿಜವೆಂದು ಕಂಡುಬರುತ್ತದೆ. ಅವನು ಹೀಗೇಕೆ ಮಾಡುತ್ತಿದ್ದನೆಂಬುದಕ್ಕೆ ಕೆಲವೊಂದು ಅಲೌಕಿಕ ಕಾರಣವು ಹಿಂದೆ ಅವನ ಚರಿತ್ರೆಯಲ್ಲಿ ಹೇಳಿಸೆ. ಆದರೆ ಈ ವಚನದಲ್ಲಿ ಇದಕ್ಕೆ ತಾತ್ವಿಕ ಮತ್ತು ಸಮಂಜಸವಾದ ಕಾರಣಗಳನ್ನು ವಚನಕಾರನು ಹೇಳಿದ್ದಾನೆ.

ವಚನ ೧ :— ಉದುರಿ ಬೀಳುವನ್ನಕ್ಕ ನಿನ್ನ ಹಂಗಯ್ಯ! ಉದುರಿ ಬಿದ್ದಲ್ಲಿ ಬಳಿಕ ಎನ್ನೊಡವೆಯಯ್ಯ ತಂದೆ! ನಾ ಪೂಜಿಸುವನ್ನಕ್ಕ ನೀ ದೇವ. ಎನ್ನ ಪೂಜೆಗೊಳಗಾದಲ್ಲಿ ನೀ ಭಕ್ತ, ನಾ ನಿತ್ಯನಯ್ಯ.

ಇಂತೀ ಸರ್ವದಯಾ ವಸ್ತು ಬೀಜವಲಾ ನೀನು. ಸರ್ವ ಮಲತ್ರಯ ದೂರನೇ, ಸರ್ವಾಂಗ ಸಂತೋಷಿಯೇ, ನಿಗರ್ವಿಯೇ, ಎಲೆ ದಸರೇಶ್ವರ ಲಿಂಗವೇ, ತಥ್ಯವಿಥ್ಯವ ಬಿಟ್ಟಿನಗೆ ನಿನ್ನ ಕಾರುಣ್ಯಪ್ರಸಾದವ ಕರು ಣಿಸಯ್ಯ.

ಭಾವಃ— ದಸರಯ್ಯನು ಯಾವ ತರದ ವಸ್ತುಗಳನ್ನು ಪರಮಾತ್ಮ ನಿಗರ್ಪಿಸಬೇಕೆಂಬುದನ್ನು ಇಲ್ಲಿ ವಿವರಿಸಿದ್ದಾನೆ. ಅವನು ಹೇಳುವ ದೇನೆಂದರೆ— ಅರ್ಪಿಸುವ ವಸ್ತುಗಳು ನನ್ನವಿರಬೇಕೇ ಹೊರ್ತು ಹೆರ ವರವಿರಬಾರದು. ಆದರೆ ಗಿಡದ ಮೇಲಿದ್ದ ಹೂವುಗಳು ನನ್ನವಲ್ಲ. ಅವು ಪರಮಾತ್ಮನಿಗೆ ಸಂಬಂಧಪಟ್ಟ ಗಿಡಿದವಿರುತ್ತವೆ. ಆದ್ದರಿಂದ ಅವುಗಳನ್ನು ಅರ್ಪಿಸಲಿಕ್ಕೆ ನನಗೆ ಬರಲಾರದು. ಆದರೆ ಅವು ಗಿಡದ ಮೇಲಿಂದ ಕೆಳಗೆ ಬಿದ್ದ ಬಳಿಕ ಅವು ಗಿಡದವಲ್ಲ. ಅವುಗಳನ್ನು ನಾನು ತೆಗೆದುಕೊಂಡ ಕೂಡಲೆ ಅವು ನನ್ನವಾಗುತ್ತವೆ. ಆದ್ದರಿಂದ ಅವುಗ ಳನ್ನು ನಾನು ಅರ್ಪಿಸುತ್ತೇನೆ. ಇದರ ಮೇಲಿಂದ ಗಿಡದ ಮೇಲಿದ್ದ ಹೂವು ಗಳನ್ನರ್ಪಿಸುವದು ನ್ಯಾಯವಲ್ಲ ಎಂಬ ಅಭಿಪ್ರಾಯವನ್ನು ದಸರಯ್ಯನು ಈ ವಚನದ ಮೊದಲಿನ ವಾಕ್ಯದಲ್ಲಿ ಹೇಳಿದ್ದಾನೆ.

ಮುಂದೆ, ದಸರಯ್ಯನಿಗೆ ಕೆಳಗೆ ಬಿದ್ದ ಹೂವುಗಳು ಬಾಡಿದವು ಗಳು, ಆದ್ದರಿಂದ ಅವು ಪರಮಾತ್ಮನಿಗೆ ಹೇಗೆ ಅರ್ಪಿತವಾಗಬಹುದು, ಎಂಬ ಸಂಶಯವು ಬಂದು ಅದಕ್ಕೆ ಅವನು ಸಮಾಧಾನವನ್ನು ಇದರ ಮುಂದಿನ ವಾಕ್ಯದಲ್ಲಿ ಹೇಳಿದ್ದಾನೆ. ಅದು ಯಾವದೆಂದರೆ— "ನಾ ಪೂಜಿಸುವನ್ನಕ್ಕ ನೀ ದೇವ! ಎನ್ನ ಪೂಜೆಗೊಳಗಾದಲ್ಲಿ ನೀ ಭಕ್ತ, ನಾ ನಿತ್ಯನಯ್ಯ" ಎಂದಿರುತ್ತದೆ. ಎಂದರೆ ನಾನು ಯಾವ ವರೆಗೆ ಕೆಲ ವೊಂದು ವಸ್ತುವನ್ನು ತೆಗೆದುಕೊಂಡು ಭಕ್ತಿಯಿಂದ ನಿನಗರ್ಪಿಸಿ ಪೂಜಿ ಸುತ್ತೇನೆಯೋ ಆ ವರೆಗೆ ನಾನು ಭಕ್ತನು, ನೀನು ದೇವನು. ಆದರೆ ನೀನು ನನಗೆ ಇಂಥಿಂಥ ವಸ್ತುವೇ ಬೇಕೆಂದು ಅಪೇಕ್ಷೆಪಟ್ಟರೆ, ಆಕ್ಷಣವೇ ನೀನು ದೇವನಾಗಲಾರಿ, ನೀನು ಕೇವಲ ಭಕ್ತನು ಎಂದು ದಸರಯ್ಯನು ಹೇಳುತ್ತಾನೆ. ಆದ್ದರಿಂದ ನಾನು ಕೊಡುವ ಹೂವುಗಳು ಬಾಡಿದವಿ ದ್ದರೂ ಅವುಗಳನ್ನು ನಾನು ಭಕ್ತಿಯಿಂದ ನಿನಗೆ ಕೊಟ್ಟಲ್ಲಿ ಅವುಗ ಳನ್ನು ನೀನು ಪ್ರೀತಿಯಿಂದ ಸ್ವೀಕರಿಸಲೇಬೇಕು. ನೀನು ಅವು ಬಾಡಿದ ವೆಂದು ಸ್ವೀಕರಿಸದಿದ್ದರೆ, ನಿನಗೆ ಆಶೆ ಎಂಬುದಿದೆ ಎಂದು ನಾನು

ಶೀಲು. ನೀನು ದೇವನಲ್ಲ, ನೀನು ಕೇವಲ ಭಕ್ತನೆಂದು ನಾನು ತಿಳಿ ಯುತ್ತೇನೆ ಎಂದು ಹೇಳುತ್ತಾನೆ. ಅಂದರೆ ಬಿದ್ದಂಥ ಮತ್ತು ಬಾಡಿ ದಂಥ ಹೂವುಗಳಿದ್ದರೂ ಅವುಗಳನ್ನು ಭಕ್ತಿಯಿಂದ ಅರ್ಪಿಸಿದಲ್ಲಿ ದೋಷ ವಲ್ಲವೆಂದು ದಸರಯ್ಯನ ಅಭಿಪ್ರಾಯವು. ಯಾಕಂದರೆ ಕೊಟ್ಟ ಹೂವು ಗಳಲ್ಲಿ ಇವು ಶುಚಿಯಾದವುಗಳು, ಇವು ಅಶುಚಿಯಾದವುಗಳು ಎಂಬ ಭಾವವು ಪರಮಾತ್ಮನಲ್ಲಿ ಇರಕೂಡದು. ಪ್ರೇಮುಳ ಮನಸ್ಸಿನಿಂದ ಅವುಗಳನ್ನು ಕೊಟ್ಟಬ್ಬಾದರೆ ಅವು ಎಂಥವಿದ್ದರೂ ಅವುಗಳನ್ನು ಅವನು ಸ್ವೀಕರಿಸಲೇಬೇಕೆಂದು ವಚನಕಾರನು ಹೇಳುತ್ತಾನೆ.

ಮುಂದೆ ವಚನಕಾರನು ಪರಮಾತ್ಮನ ಗುಣಗಳನ್ನು ವಿವರಿಸುತ್ತ ಹೋಗಿ ಇಂಥ ಶ್ರೇಷ್ಠತರ ವಸ್ತುವು ಪರಮಾತ್ಮನು ಇರುವದರಿಂದ ಪರಮಾತ್ಮನಿಗೆ ಶುದ್ಧಾಶುದ್ಧ ಭಾವವಿರಕೂಡದೆಂಬ ಭಾವವನ್ನು ಅವನು ಮುಂದಿನ ವಾಕ್ಯಗಳಲ್ಲಿ ತೋರಿಸಿದ್ದಾನೆ. ಆಂಥ ಆ ಗುಣಗಳು ಯಾವನೆಂದರೆ— ಪರಮಾತ್ಮನು ಸರ್ವಜೀವದಯಾಭರಿತನಾಗಿ ಎಲ್ಲ ದರಲ್ಲಿ ಬೀಜರೂಪನಾಗಿ ಇದ್ದಾನೆ. ಅವನಿಗೆ ಆಣವಮಲ, ಮಾಯಾ ಮಲ, ಕಾರ್ಮಿಕಮಲ ಎಂಬ ಮಲತ್ರಯಗಳು ಇರುವದಿಲ್ಲ. ಅವನ ಸರ್ವಾಂಗವೆಲ್ಲ ಸಂತೋಷಮಯವಾಗಿದೆ. ಅವನು ನಿಗರ್ವಿಯು. ಅವ ನಲ್ಲಿ ತಥ್ಯವಿಥ್ಯವೆಂಬುವಿಲ್ಲ. ಆದ್ದರಿಂದ ವಸ್ತುಗಳ ಬಾಹ್ಯ ಶುಚಿ ಮತ್ತು ಅಶುಚಿಗಳು ಅವನಿಗೆ ಅಂಟಲಾರವು. ಬಾಡಿದಂಥ ಮತ್ತು ಬಿದ್ದಂಥ ಹೂವಿದ್ದರೂ ಕೂಡ ಅದು ಅವನಿಗೆ ಅರ್ಪಿತವು. ಈಪ್ರಕಾರ ವಚನಕಾರನು ಹೇಳಿ ಎಲೋ ಪರಮಾತ್ಮನೇ ನಾನು ಕೊಟ್ಟುದನ್ನು ನೀನು ಸ್ವೀಕರಿಸಿ ನನಗೆ ನಿನ್ನ ಕಾರುಣ್ಯಪ್ರಸಾದನನ್ನು ಕೊಡು ಎಂದು ದೇವರನ್ನು ಕುರಿತು ಪ್ರಾರ್ಥಿಸುತ್ತಾನೆ.

ವಚನ ೨ಃ— ಶಿವನಲ್ಲಿ ಅನುಭಾವಿಯಾದಲ್ಲಿ, ಇದಿರೆಲ್ಲಿ, ತಾನೆಲ್ಲಿ? ತಾನೆಲ್ಲಿ, ಇದಿರೆಲ್ಲಿ? ಭಿನ್ನಭಾವವನ್ಯರಲ್ಲಿ ತೋರಿದಲ್ಲಿ, ಆ ಗುಣ ತನ್ನನೇ ಅನ್ಯ ವೆನಿಸುವುದು. ತನ್ನಯ ಶಾಂತಿ ಅನ್ಯರಲ್ಲಿ ತೋರಿ, ಅಲ್ಲಿ ಭಿನ್ನಭಾವ ವಿಲ್ಲದಿರೆ ಅಪರಸ್ಯರಲ್ಲ, ಎಮ್ಮವರೆಂಬರು. ಅದು ತನ್ನ ಗುಣ. ಅನ್ಯವಲ್ಲ ವೆಂಬುದನರಿದಲ್ಲಿ, ತನ್ನೊಪ್ಪ ದರ್ಪಣದಲ್ಲಿ ತೋರುವಂತೆ. ಇದಕ್ಕೆ ಸಂದೇಹವಿಲ್ಲ ದಸರೇಶ್ವರಲಿಂಗವನರಿವುದಕ್ಕೆ.

ಭಾವಃ— ಶಿವಾನುಭವವನ್ನು ಹೊಂದಬೇಕು. ಅದನ್ನು ಹೊಂದಿದಲ್ಲಿ ಭಿನ್ನಭಾವವು ಅಳಿದುಹೋಗುವದು. ಆಗ ಇದಿರು ತಾನು ಎಂಬುದು ಹೋಗಿಬಿಡುವದು. ಆದರೆ ತಾನು ಭಿನ್ನಭಾವವನ್ನಿಟ್ಟುಕೊಂಡು ವರ್ತಿಸಿದಲ್ಲಿ ಅದರ ಪರಿಣಾಮವು ಅನ್ಯರ ಮೇಲೆಯೂ ಆಗುವದು. ಆಗ ಅದು ತನ್ನನ್ನು ವಿಂಗಡಿಸಿ ಬಿಡುವದು. ಅಂದರೆ ಪರಸ್ಪರ ಭಿನ್ನಭಾವವುಂಟಾಗುವದು. ಆದ್ದರಿಂದ ತನ್ನಲ್ಲಿ ಶಾಂತಿ ಎಂಬುದು ಇರಬೇಕು. ಅಂದರೆ ಎಲ್ಲರೂ ಒಂದೇ ಎಂಬ ಭಾವವಿರಬೇಕು. ಹೀಗಿದ್ದರಿ ಆ ಸಮಾನತ್ವಭಾವವು ಅನ್ಯರಲ್ಲಿಯೂ ತೋರುವದು. ಆಗ ಹೆರವರು ತನಗೆ ಹೊರತಾದವರೇಂಬ ಭಾವವು ಅಳಿದುಬಿಡುವದು. ಹೀಗೆ ತನ್ನವರು ಬೇರೆಯವರು ಎಂಬುದು ತನ್ನನ್ನೇ ಅವಲಂಬಿಸಿದೆ. ತಾನು ಯಾವ ರೂಪಾಗಿರುತ್ತಾನೋ ಅದೇ ರೂಪು ಕನ್ನಡಿಯಲ್ಲಿ ತೋರುತ್ತದೆ. ಹಾಗೆಯೇ ಇದು ಇರುತ್ತದೆ. ಈ ಸ್ಥಿತಿಯುಂಟಾದ ಕೂಡಲೆ ಪರಮಾತ್ಮನ ಅರಿವು ಮನುಷ್ಯನಲ್ಲಿ ಆಗುತ್ತದೆ. ಆದ್ದರಿಂದ ವಿಶ್ವವೆಲ್ಲವೂ ಒಂದೇ ಎಂಬ ಭಾವದಿಂದ ಎಲ್ಲರೂ ಆಚರಿಸತಕ್ಕದ್ದು. ಇಂಥ ಆಚರಣೆಯಿಂದ ಪರಮಾತ್ಮನ ಅರಿವು ಉಂಟಾಗುತ್ತದೆ.

ವಚನ ೩ಃ— ಸರ್ವಮಯ ನೀನಾದಲ್ಲಿ ಅವುದನಹುದೆಂಬೆ? ಅವುದನಲ್ಲವೆಂಬೆ? ಸರ್ವ ಚೈತನ್ಯ ನಿನ್ನ ತಂತ್ರಗಳಿಂದಾಡುವವಾಗಿ ಇನ್ನಾವುದ ಕಾಯುವೆ? ಇನ್ನಾವುದ ಕೊಲುವೆ? ತರುಲತೆ ಸ್ಥಾವರ ಜೀವಂಗಳೆಲ್ಲ ನಿನ್ನ ಕಾರುಣ್ಯದಿಂದ ಒಗೆದವು. ಅದ ಹರಿದು ಇನ್ನಾರಿಗರ್ಪಿಸುವೆ ತೊಟ್ಟು ಬೀಳುವನ್ನಕ್ಕ?

ಭಾವಃ— ಪುಷ್ಪಗಳನ್ನು ಹರಿದು ಅರ್ಪಿಸಲಾಗದೆಂಬ ವಿಷಯವನ್ನು ದಸರಯ್ಯನು ಪುನಃ ಈ ವಚನದಲ್ಲಿ ಎತ್ತಿ ಹೇಳಿದ್ದಾನೆ. ಪರಮಾತ್ಮನು ವಿಶ್ವವ್ಯಾಪಿಯಾಗಿದ್ದಾನೆ. ಆದ್ದರಿಂದ ಇಂಥ ವಸ್ತುವು ಅಹುದು, ಇಂಥ ವಸ್ತುವು ಅಲ್ಲವೆಂದು ಹೇಳಲಿಕ್ಕೆ ಬರಲಾರದು. ಎಲ್ಲವೂ ಪರಮಾತ್ಮನ ತಂತ್ರದಿಂದ ವ್ಯವಹರಿಸುತ್ತವೆ. ಆದ್ದರಿಂದ ಅವುಗಳನ್ನು ಕಾಯುವ ಸಾಮರ್ಥ್ಯವು ನನ್ನಲ್ಲಿಲ್ಲ. ಅಥವಾ ನಾಶ ಮಾಡುವ ಸಾಮರ್ಥ್ಯವೂ ನನ್ನಲ್ಲಿಲ್ಲ. ಜಗತ್ತಿನಲ್ಲಿ ತರುಲತೆಗಳು, ಸ್ಥಾವರ ಜೀವಗಳು (ಅಂದರೆ ಖನಿಜಗಳು, ಉದ್ಭಿಜಗಳು) ಅನೇಕವಿರುತ್ತವೆ. ಅವೆಲ್ಲವೂ ಪರಮಾತ್ಮನ ಕಾರುಣ್ಯದಿಂದ ವಿಶ್ವದಲ್ಲಿ ಉಂಟಾ

ಗಿರುತ್ತವೆ. ಅವುಗಳ ಮೇಲೆ ನನ್ನ ಸ್ವಾಮಿತ್ವವಿಲ್ಲ. ಆದ್ದರಿಂದ ಅವುಗಳನ್ನು ಹಿಂಯಲು ನನಗೆ ಸ್ವಾತಂತ್ರ್ಯವಿಲ್ಲ. ಅಥವಾ ಅವುಗಳನ್ನು ಹರಿದು ನಿನಗೆ ಕೊಡಲೂ ನನಗೆ ಸ್ವಾತಂತ್ರ್ಯವಿಲ್ಲ. ಇಂಥವುಗಳನ್ನು ನಿನಗರ್ಪಿಸಲು ನನಗೆ ಬಾಧ್ಯತೆಯು ಇರಲಾರದು. ಆದ್ದರಿಂದ ಪುಷ್ಪ ತಳಿರು ಇವುಗಳನ್ನು ಗಿಡದಿಂದ ಹರಿದುಕೊಡಲು ನನಗೆ ಬಾರದು. ಆದರೆ ಅವುಗಳು ಬಿದ್ದುಹೋದ ಬಳಿಕ ಅವುಗಳನ್ನು ನಾನು ನಿನಗೆ ಅರ್ಪಿಸುವೆ ಎಂದು ಹೇಳುತ್ತಾನೆ.

ವಚನ ೪ಃ— ಪೃಥ್ವಿಯಂಶಿಕ ಅಂಗವಾಗಿ, ಅಪ್ಪುವಿನಂಶಿಕ ಶುಕ್ಲ, ಶೋಣಿತವಾಗಿ, ತೇಜದಂಶಿಕ ಕ್ಷುಧೆಯಾಗಿ, ವಾಯುವಿನಂಶಿಕ ಆತ್ಮನಾಗಿ, ಆಕಾಶದಂಶಿಕ ಬ್ರಹ್ಮರಂಧ್ರವಾಗಿ ಇಂತೀ ಐದರ ಗುಣವುಳ್ಳನ್ನಕ್ಕ ನೆಲ್ಲ ಸೋಲು ಬಿಡದು. ಇವನಲ್ಲಿಗಲ್ಲಿಗೆ ಇಂಬಿಟ್ಟು ಇಂತೀ ಲಲ್ಲೆಯ ಬಿಡಿಸಯ್ಯ ಎನ್ನಲ್ಲಿ. ನಿಮಗೆ ಋಲ್ಲತನ ಬೇಡ. ಅದು ಎನ್ನ ಸೋಂಕಲ್ಲ. ಅದು ನಿನ್ನ ಸೋಂಕು ದಸರೇಶ್ವರಲಿಂಗ.

ಭಾವಃ— ಜಗತ್ತಿನಲ್ಲಿ ಪಂಚಭೂತಗಳಿವೆ. ಅವುಗಳಿಂದಲೇ ಮನುಷ್ಯನ ದೇಹವು ಉಂಟಾಗಿದೆ. ಪೃಥ್ವಿಯಿಂದ ಶರೀರವು, ಅಪ್ಪುವಿನಿಂದ ಶುಕ್ಲ ಮತ್ತು ರಕ್ತಗಳು, ತೇಜಸ್ಸಿನಿಂದ ಹಸಿವೆಯು, ವಾಯುವಿನಿಂದ ಆತ್ಮನು, ಆಕಾಶದಿಂದ ಬ್ರಹ್ಮರಂಧ್ರ, ಹೀಗೆ ಮನುಷ್ಯನಿಗೆ ಉಂಟಾಗುತ್ತವೆ. ಮನುಷ್ಯನು ಈ ಪಂಚಮಹಾಭೂತಗಳಿಗೆ ಒಳಗಾಗಿ ನಡೆಯುವ ವರೆಗೆ ಅವನಿಗೆ ಜಗತ್ತಿನಲ್ಲಿ ಜಯಾಪಜಯಗಳು ಬಿಡವು. ಆದ್ದರಿಂದ ಇವುಗಳಿಗೆ ಮನುಷ್ಯನು ಒಳಗಾಗಿ ನಡೆಯಕೂಡದು. ಅವುಗಳಿಂದ ಅವನು ದೂರಾಗಿರಬೇಕು. ಈ ಸ್ಥಿತಿಯುಂಟಾಗುವಂತೆ ನನಗೆ ಕರುಣಿಸಬೇಕೆಂದು ವಚನಕಾರನು ಪರಮಾತ್ಮನನ್ನು ಕುರಿತು ಬೇಡಿಕೊಳ್ಳುತ್ತಾನೆ. ಯಾಕಂದರೆ ಈ ಪಂಚಭೂತಗಳು ಉಂಟಾದದ್ದು ಪರಮಾತ್ಮನ ಮೂಲಕ. ಆದ್ದರಿಂದ ಅವುಗಳ ಸೋಂಕನ್ನು ದೂರ ಮಾಡುವದು ಅವನ ಕಡೆಗೆ ಇರುವದೇ ಹೊರತು ಅದು ನನ್ನ ಕಡೆಗೆ ಇಲ್ಲ ಎಂದು ಹೇಳುತ್ತಾನೆ.

ವಚನ ೫ಃ— ಎಲು, ನರ, ಚರ್ಮ, ಮಜ್ಜೆ, ಮಾಂಸದೊಳಗಾದ ತ್ರಿವಿ ಎನ್ನಂಗದೊಳು ಹುಟ್ಟಿ ಮಲ, ಹುಣ್ಣು, ಹುಗುಳುಗಳಲ್ಲಿ

ಬೀಳುವುದ ಕಂಡು ಅವನು ನಾ ರಕ್ಷಿಸಿದೆನೇ? ಅವು ಬೀಳಬೇಕೆಂದು ನಾ ಶಿಕ್ಷಿಸಿದೆನೇ? ಇಂತೀ ಜೀವದ ದೃಷ್ಟವ ಕಂಡು ಎನಗಿದಿತ್ತಣ ಸರ್ವಜೀವ ದಯೆ? ಇದರ ಲೇಪವ ಬಿಡಿಸಾ ಚನ್ನದಸರೇಶ್ವರ ಲಿಂಗಾ.

ಭಾವಃ— ಜಗತ್ತಿನಲ್ಲಿ ಅನೇಕ ಕ್ರಿಮಿಕೀಟಗಳು ಇವೆ. ಅವು ನನ್ನ ಎಲವು, ನರ, ಚರ್ಮ, ಮಜ್ಜೆ, ಮಾಂಸಗಳಲ್ಲಿ ಇವೆ. ಅವು ಅಲ್ಲಿಯೇ ಹುಟ್ಟುತ್ತವೆ. ಮತ್ತು ಅವು ಅಲ್ಲಿಯೇ ಹುಟ್ಟಿ ನನ್ನ ಮಲ ದೊಳಗಿಂದಲೂ ಹುಣ್ಣುಹುಗುಳುಗಳ ಮೂಲಕವೂ ಹೊರಬಿದ್ದು ಸಾಯುತ್ತವೆ. ಇವನ್ನು ನಾನು ನೋಡುತ್ತೀನೆ. ಆದರೆ ಅವುಗಳನ್ನು ಅಲ್ಲಿ ಕಾಪಾಡಿದವರು ಯಾರು? ಅಥವಾ ಅವುಗಳನ್ನು ಹೊರಗೆ ಹಾಕಿ ಅವು ಸಾಯುವಂತೆ ಮಾಡಿ ಶಿಕ್ಷಿಸಿದವರು ಯಾರು? ಜೀವಜಂತುಗಳು ಹೀಗೆ ಹುಟ್ಟುವದು ಸಾಯುವದು ಕಂಡುಬರುತ್ತದೆ. ಇದನ್ನು ನೋಡಿ ಸರ್ವ ಜೀವ ದಯೆ ಎಂಬುದು ಎಲ್ಲಿ ಉಳಿಯಿತು, ಎಂದು ವಚನಕಾರನು ಕೇಳುತ್ತಾನೆ. ಇದೊಂದು ದೊಡ್ಡ ತೊಂದರೆ ಎಂದು ಹೇಳಿ ಈ ತೊಂದರೆಯಿಂದ ನನ್ನನ್ನು ಬಿಡಿಸೆಂದು ಪರಮಾತ್ಮನನ್ನೇ ವಚನಕಾರನು ಪ್ರಾರ್ಥಿಸಿಕೊಳ್ಳುತ್ತಾನೆ. ಬುದ್ಧಿಪೂರ್ವಕವಾಗಿ ಹಿಂಸೆಮಾಡಿದ್ದು ಹಿಂಸೆ ಎಂದೆನಿಸುತ್ತದೆ, ಆದರೆ ತಾನಾಗಿಯೇ ಸತ್ತು ಹೋದುದು ಹಿಂಸೆ ಎನಿಸಲಾರದೆಂಬ ಭಾವವು ಇದರಲ್ಲಿದೆ.

ವಚನ ೬ :— ಸರ್ವಜೀವ ನಿನ್ನ ಹಾಹೆ ಎಂಬೆನೇ? ಅದು ಭಿನ್ನ ಭಾವ. ತ್ರಿಗುಣಾತ್ಮಕರುಂಟು. ಅವರು ನಿನಗನ್ಯರೆಂಬೆನೇ? ಆ ತ್ರಿಗುಣಾತ್ಮಕರು ನಿನ್ನ ತಿಲಾಂಶ. ಇಂತೀ ಸರ್ವಭೂತಕ್ಕೆ ನಿನ್ನದಯೆ. ಎನಗಿದೇಕೆ? ಗೆಲ್ಲ ಸೋಲವೆಂಬ ಖುಲ್ಲತನ ಎಲ್ಲ ಜೀವಕ್ಕು ಸರಿ. ಅದು ಅರುಣೋದಯದಂತೆ. ಎನ್ನ ಚಿತ್ತದಲ್ಲಿ ಸರ್ವಜೀವಕ್ಕೆಲ್ಲಕ್ಕೂ ದಯೆಯ ಮಾಡು ಚನ್ನದಸರೇಶ್ವರಲಿಂಗಾ.

ಭಾವಃ— ಜನರು ಜಗತ್ತಿನಲ್ಲಿ ಹುಟ್ಟಿದ ಪ್ರಾಣಿಗಳೆಲ್ಲವೂ ನಿನ್ನ 'ಹಾಹೆ' ಎಂದರೆ ಪ್ರತಿರೂಪು ಎಂದು ಹೇಳುತ್ತಾರೆ. ಇದು ತಪ್ಪು. ಇದರಿಂದ ದೇವರು ಬೇರೆ, ಜಗತ್ತು ಬೇರೆ ಎಂದು ಹೇಳಿದಂತಾಗುತ್ತದೆ. ಹೀಗೆ ತಿಳಿಯುವದು ತಪ್ಪಾದದ್ದು. ಯಾಕಂದರೆ ಅವು ಯಾವತ್ತು ಒಂದೇ ಸ್ವರೂಪು ಎಂದು ತಿಳಿಯಬೇಕು. ಬೇರೆ ಕೆಲವರು ಉತ್ಪತ್ತಿ

ಸ್ಥಿತಿಲಯಗಳಿಗೆ ಕಾರಣರಾದ ಬ್ರಹ್ಮ ವಿಷ್ಣು ರುದ್ರರೆಂಬವರಿದ್ದಾರೆ. ಅವರಿಂದ ಜಗತ್ತು ಉಂಟಾಗಿದೆ ಎಂದು ಹೇಳುತ್ತಾರೆ. ಹೀಗೆ ಹೇಳುವದೂ ತಪ್ಪು. ಯಾಕಂದರೆ ಈ ಮೂವರನ್ನು ಪರಮಾತ್ಮನಿಗೆ ಹೋಲಿಸಿ ನೋಡಿದರೆ ಅವರು ಅತ್ಯಂತ ಸಣ್ಣವರು ಎಂದು ತಿಳಿಯಬೇಕಾಗುತ್ತದೆ. ಆದರೆ ಜಗತ್ತಿನಲ್ಲಿಯ ಎಲ್ಲ ಜೀವಿಗಳಿಗೆ ಆಧಾರವಾಗಿರುವದು ಪರಮಾತ್ಮನ ದಯೆಯು ಒಂದು ಮಾತ್ರ. ಇದೇ ಹೆಚ್ಚಿನದು. ಅದರ ಮೇಲೆಯೇ ಜಗತ್ತು ನಡಿಯುತ್ತದೆ. ಜಗತ್ತಿನಲ್ಲಿ ಕಾಣುವ ಗೆಲವು ಗಳು ಸೋಲುಗಳು ಎಲ್ಲ ಜೀವಿಗಳಿಗಿದ್ದು ಈ ಜೀವಿಗಳು ಪರಮಾತ್ಮನ ದಯೆಯ ಮೇಲೆಯೇ ಅವಲಂಬಿಸಿರುತ್ತವೆ. ಅವನ ಈ ದಯೆಯು ಎಲ್ಲರ ಮೇಲೆಯೂ ಇರುತ್ತದೆ. ಸೂರ್ಯನ ಮುಂಜಾವಿನ ಪ್ರಕಾಶವು ಹೇಗೆ ಜಗತ್ತಿನಲ್ಲಿರುವ ಸಣ್ಣ ದೊಡ್ಡ ವಸ್ತುಗಳ ಮೇಲೆಲ್ಲ ಸರಿಯಾಗಿ ಬೀಳುತ್ತಿದೆಯೋ ಹಾಗೆಯೇ ಪರಮಾತ್ಮನ ಈ ದಯೆಯು ಎಲ್ಲ ವಸ್ತುಗಳ ಮೇಲೆಯೂ ಪಸರಿಸಿರುತ್ತದೆ. ಈ ವಿಧದ ಭಾವವು ನನ್ನ ಚಿತ್ತದಲ್ಲಿ ಇರಬೇಕು, ಇಷ್ಟೇ ಅಲ್ಲ, ಸರ್ವಜೀವಿಗಳ ಮೇಲೂ ಇರಬೇಕು. ಎಲೋ ಪರಮಾತ್ಮನೇ ಇಂಥ ನಿನ್ನ ದಯೆಯು ನನ್ನಲ್ಲಿ ಇರಲೆಂದು ವಚನಕಾರನು ಪರಮಾತ್ಮನನ್ನು ಕುರಿತು ಬೇಡಿಕೊಳ್ಳುತ್ತಾನೆ.

ಕೆಲವು ವಚನಕಾರರು ಜಗತ್ತಿನಲ್ಲಿರುವ ಶಕ್ತಿ, ಭಕ್ತಿ, ತತ್ವಗಳಿಗೆ ಮಹತ್ವಕೊಟ್ಟಿದ್ದಾರೆ. ಆದರೆ ದಸರಯ್ಯನು ಹೀಗೆ ಭಾವಿಸದೆ ಪರಮಾತ್ಮನ ದಯೆಗೆ ಅಷ್ಟೇ ಮಹತ್ವಕೊಟ್ಟಿರುತ್ತಾನೆ. ಇದು ಅತನ ವೈಶಿಷ್ಟ್ಯವಾಗಿದೆ.

ವಚನ ೭ :— ನುಡಿಯಲ್ಲಿ ಕಿಂಕರತ್ವವನರಿದು, ಕರವ ಬೀಸು ವಲ್ಲಿ ತುಷಾರ ಕೀಟವನರಿದು, ಅಡಿ ಇಡುವಲ್ಲಿ ಪೊಡವಿಯಲ್ಲಿ ಹೊರ ಹೊಮ್ಮಿದ ಜೀವನ ಜೀತನಾದಿಗಳನರಿದು, ಮತ್ತೆ ಗಿಡನ ಹಿಡಿವಲ್ಲಿ ಮತ್ತೊಂದ ಒಡಗೂಡುವಲ್ಲಿ ಒಡಗೂಡಿ ಬಿಡುವಲ್ಲಿ ಸರ್ವದಯಕ್ಕೆ ಹುದಿಪುಚ್ಚವಿಲ್ಲದಿರಬೇಕು. ಇಂತೀ ಸಡಗರದ ಚಿತ್ತ ದಸರೇಶ್ವರ ಲಿಂಗವ ನೊಡಗೂಡುವ ಭಕ್ತಿ.

ಭಾವಃ— ಹಿಂಸೆ ಎಂಬುದು ನುಡಿಯಲ್ಲಿಯೂ ಉಂಟು. ಆದರೆ ಆ ಹಿಂಸೆಯನ್ನು ಸೇವಾಭಾವದಿಂದ ದೂರವಾಡಬೇಕೆಂದು ವಚನಕಾ

ರನು ಹೇಳುತ್ತಾನೆ. ನಾವು ಅತ್ತಿತ್ತ ಅಡ್ಡಾಡುವಾಗ ಕರಗಳನ್ನು ಬೀಸು
ತ್ತೇವೆ. ಆಗ ಹವೆಯಲ್ಲಿ ಅತ್ಯಂತ ಸೂಕ್ಷ್ಮವಾದ ಕ್ರಿಮಿಗಳಿದ್ದು ಅವು
ಗಳ ಹಿಂಸೆಯಾಗಕೂಡದು. ದಾರಿ ನಡಿಯುವಲ್ಲಿ ಭೂಮಿಯಿಂದ
ಹೊರಬೀಳುವಂಥ ಕ್ರಿಮಿಕೀಟಕಗಳನ್ನು ನಾವು ತುಳಿಯಬಹುದು.
ಇದನ್ನು ತಿಳಿದುಕೊಂಡು ಅವುಗಳ ಹಿಂಸೆಯಾಗದಂತೆ ನಾವು ನಡೆಯು
ಬೇಕು. ಹಾಗೆಯೇ ಗಿಡಗಳ ಟೊಂಗೆಗಳನ್ನು ಹಿಡಿಯುವಲ್ಲಿ ಅವುಗಳ
ಟೊಂಗೆಗಳನ್ನು ಬಗ್ಗಿಸಿ ಎರಡನೆಯ ಟೊಂಗೆಗಳಿಗೆ ಅವುಗಳನ್ನು ಹಚ್ಚು
ವಲ್ಲಿ, ಹೀಗೆ ಹಚ್ಚಿ ಅವುಗಳನ್ನು ಪುನಃ ಬಿಡುವಲ್ಲಿ ಅವುಗಳನ್ನು
ಮೆಲ್ಲನೆ ಹಿಡಿದುಬಿಡಬೇಕು. ಅವುಗಳು ನೊಂದಾವೆಂಬ ತಿಳುವಳಿಕೆ
ಯಿಂದ ಇರಬೇಕು. ಈ ತರದ ದಯಾಭಾವದಿಂದ ಚಿತ್ತವು ತುಂಬಿ
ಕೊಂಡಿರಬೇಕು. ಈ ತೆರದ ವರ್ತನೆಯಿಂದ ಪರಮಾತ್ಮನೊಡನೆ ಸಾಮ
ರಸ್ಯ ಸ್ಥಿತಿಯು ಪ್ರಾಪ್ತವಾಗುತ್ತದೆಂದು ವಚನಕಾರನು ಹೇಳುತ್ತಾನೆ.

ವಚನ ೮ :— ಎಲ್ಲವನರಿವಲ್ಲಿ ಕಡೆಯಲ್ಲಿ ಕೊಲ್ಲಬೇಕೆಂಬುದೊಂದು
ಭೇದ ಉಂಟೇ? ಶಾಸ್ತ್ರವನೆಲ್ಲ ಕಲಿತಲ್ಲಿ ನೆಲ್ಲ ಸೋಲಕ್ಕೆ ಹೋರಬೇ
ಕೆಂಬುದು ಕಡೆಯಲ್ಲಿ ಒಂದು ಸೊಲ್ಲುಂಟೇ? ಪುರಾಣವನೆಲ್ಲವ
ನೋದಿದಲ್ಲಿ ಸರ್ವ ಜೀವವ ಕೊಲ್ಲು, ಕೊರೆ ಎಂಬುದೊಂದು ದಳ್ಳುರಿ
ಯುಂಟೇ? ಶ್ರುತಿಯ ಕೇಳುವಲ್ಲಿ, ಸ್ಮೃತಿಯನಂಗೀಕರಿಸುವಲ್ಲಿ ಸರ್ವ
ಹತವ ಮಾಡಬೇಕೆಂಬುದೊಂದು ಗತಿಯುಂಟೇ? ಇಂತೀ ಆತ್ಮನಲ್ಲಿ
ಸರ್ವಭೂತ ಹಿತವುಳ್ಳವಂಗೆ ಅತ ಅತೀತ ಸ್ವಯವಸ್ತು ದಸರೇಶ್ವರ
ಲಿಂಗವು.

ಭಾವಃ— ಧರ್ಮಗ್ರಂಥಗಳನ್ನೆಲ್ಲ ಜನರು ಓದುತ್ತಾರೆ. ಯಾವ
ಗ್ರಂಥ ಓದಿದರೂ ಅವುಗಳಲ್ಲಿ ಜೀವ ಹಿಂಸೆ ಮಾಡಬೇಕೆಂದು ಎಲ್ಲಾದರೂ
ಹೇಳಿದ್ದುಂಟೇ? ಹೇಳಿಲ್ಲವೆಂದು ವಚನಕಾರನ ಅಭಿಪ್ರಾಯವು. ಹಾಗೆಯೇ
ಅನೇಕ ತರ್ಕಶಾಸ್ತ್ರಗಳನ್ನು ಜನರು ಕಲಿಯುತ್ತಾರೆ. ಹೀಗೆ ಕಲಿತು
ಕೊಂಡು ಜನರೊಡನೆ ವಾಗ್ವಾದ ಮಾಡಿ ಅವರನ್ನು ಗೆಲ್ಲಬೇಕು,
ಹೋರಾಡಬೇಕು ಎಂದು ಎಲ್ಲಾದರೂ ಅವುಗಳಲ್ಲಿ ಒಂದು ನುಡಿಯಾ
ದರೂ ಇದೆಯೇ ಹೇಗೆ? ಇಲ್ಲವೆಂದು ವಚನಕಾರನು ಹೇಳುತ್ತಾನೆ.
ಯಾಕಂದರೆ ಇದು ಸಹ ಜೀವ ಹಿಂಸೆಯಾಗುವದೆಂದು ಅವನ ಅಭಿ

ಪ್ರಾಯವು. ಜನರು ಪುರಾಣಗಳನ್ನು ಓದುತ್ತಾರೆ. ಆದರೆ ಅವುಗ
ಳಲ್ಲಿ ಎಲ್ಲಾದರೂ ಜೀವಿಗಳನ್ನು ಕೊಲ್ಲಬೇಕು, ಕೊರೆಯಬೇಕು ಎಂಬ
ಬಹು ಕಠೋರವಾವಂಥ ಮತ್ತು ಹೃದಯವನ್ನು ಸುಟ್ಟುಬಿಡುವಂಥ
ವಿಚಾರಗಳಿರುತ್ತವೆಯೋ ಹೇಗೆ? ಇಲ್ಲವೆಂದು ವಚನಕಾರನ ಅಭಿ
ಪ್ರಾಯವು. ಶ್ರುತಿ ಸ್ಮೃತಿಗಳನ್ನು ಕೇಳುವಲ್ಲಿ ಅವುಗಳ ತತ್ವಗಳಂತೆ
ನಡಿಯುವಲ್ಲಿ ಜೀವ ಹಿಂಸೆ ಮಾಡಬೇಕೆಂದು ಎಲ್ಲಾದರೂ ಹೇಳಿ
ದುದುಂಟೇ? ಇಲ್ಲವೆಂಬ ಭಾವವು ಇದರಲ್ಲಿದೆ. ಮನುಷ್ಯನು ಈ ವೃತ್ತಿ
ಯುಳ್ಳವನಾಗಿ ಜೀವಮಯವಾದ ಈ ಜಗತ್ತಿನ ಸಲುವಾಗಿ ದಯಾಭಾ
ವವುಳ್ಳವನಾಗಿ ವರ್ತಿಸಬೇಕೆಂದು ವಚನಕಾರನು ಹೇಳಿದ್ದಾನೆ. ಹೀಗೆ
ನಡಿಯುವನನು ಅತೀತನು, ಸ್ವಯವಸ್ತುವು. ಇಷ್ಟೇಅಲ್ಲ, ಅವನು
ಪ್ರತ್ಯಕ್ಷ ಪರಮಾತ್ಮನು ಎಂದು ವಚನಕಾರನು ಇಲ್ಲಿ ಹೇಳುತ್ತಾನೆ.

ವಚನ ೯ :— ಒಂದನಹುದೆನಬೇಡ. ಒಂದನಲ್ಲವೆನಬೇಡ. ಉಭ
ಯವುಳ್ಳನ್ನಕ್ಕ ಬಹು ದುಃಖದೊಡಲು. ಅಮೃತವ ಕುಡಿಯಕೊಟ್ಟು
ವಿಷವ ಕುಡಿದನೆನಬೇಡ. ವಿಷವ ಕುಡಿಯ ಕೊಟ್ಟು ಅಮೃತವ ಕುಡಿದ
ನೆನಬೇಡ. ಅಗುಣ ತಮ್ಮಲ್ಲಿಯೇ ದ್ವಯ. ಇಂತೀ ಗುಣವ ನಿನ್ನ
ನೀ ಕೇಳಿ ತಿಳಿದಡೆ ನಿನಗದು ಅನ್ಯ ಭಿನ್ನವಿಲ್ಲ. ಅದು ತನ್ಮಯ ಮೂರ್ತಿ
ದಸರೇಶ್ವರ ಲಿಂಗವು.

ಭಾವಃ— ಒಂದು ವಸ್ತುವು ಅಹುದು, ಒಂದು ವಸ್ತುವು ಅಲ್ಲ
ಎಂದನಬೇಡ. ಅದು ಅಸತ್ಯವು. ಅದು ಭಿನ್ನಭಾವವು. ಈ ತೆರದ ಭಿನ್ನ
ಭಾವವಿದ್ದರೆ ಅಲ್ಲಿ ದುಃಖವಿರುತ್ತದೆ. ಆದ್ದರಿಂದ ನೀನು ಅಮೃತವನ್ನು
ಕುಡಿಯಕೊಟ್ಟು, ವಿಷವನ್ನು ಕುಡಿದನೆಂದು ಮತ್ತು ವಿಷವನ್ನು ಕುಡಿಯ
ಕೊಟ್ಟು ಅಮೃತವನ್ನು ಕುಡಿದನೆಂದು ಹೇಳಬೇಡ. ಈಪ್ರಕಾರದ ಸತ್ಯ
ಮತ್ತು ಅಸತ್ಯ ಇವುಗಳು ನಿನ್ನ ಮೇಲೆಯೇ ಅವಲಂಬಿಸಿವೆ. ಈ ವಿಪ
ರೀತ ಭಾವವು ನಿನ್ನಲ್ಲಿಯೇ ಇರುತ್ತದೆ. ಇದನ್ನು ನೀನು ಕೇಳಿ ತಿಳಿ
ದಲ್ಲಿ ಎಲ್ಲ ವಸ್ತುಗಳು ಒಂದೇ ಎಂಬ ಭಾವವು ನಿನ್ನಲ್ಲಿ ಒಡಮೂಡ
ಹತ್ತುತ್ತದೆ. ಈ ಭಾವವು ನಿನ್ನಲ್ಲಿ ಒಡಮೂಡಿದ ಕೂಡಲೆ ನೀನೇ
ಪರಬ್ರಹ್ಮವಸ್ತುವಾಗುವಿ ಎಂದು ವಚನಕಾರನು ಹೇಳುತ್ತಾನೆ.

೧೦ನೇ ವಚನವು ಬಹು ಅಶುದ್ಧವಿದೆ. ಆದ್ದರಿಂದ ಅದನ್ನು ಇಲ್ಲಿ ಉದಹರಿಸಿಲ್ಲ.

ಹಿಂಸೆ, ಮತ್ತು ಅಹಿಂಸೆ ಇವುಗಳ ತಾತ್ವಿಕ ವಿವೇಚನೆಯು ಮೇಲಿನ ವಚನಗಳಲ್ಲಿ ಇರುತ್ತದೆ. ಪ್ರತಿಯೊಂದು ವಚನವು ಅತ್ಯಂತ ಮಹತ್ವ ದ್ದಿರುವದರಿಂದ ನಮಗೆ ದೊರೆದ ಎಲ್ಲ ವಚನಗಳನ್ನು ಇಲ್ಲಿ ಉದ ಹರಿಸಿದ್ದೇವೆ.

ಹಾವಿನಹಾಳ ಕಲ್ಲಯ್ಯ

ವಿಜಾಪುರ ಪಟ್ಟಣದ ವಾಯವ್ಯ ದಿಕ್ಕಿಗೆ ೩೬ ಮೈಲುಗಳ ಮೇಲೆ ಹಾವಿನಹಾಳ ಎಂಬ ಹೆಸರಿನ ಗ್ರಾಮವಿದೆ. ಅಲ್ಲಿ ಶಿವನಯ್ಯನೆಂಬ ಅಕ್ಕಸಾಲಿಗನೂ ಅವನ ಹೆಂಡತಿ ಸೋಮವ್ವೆ ಎಂಬವಳೂ ವಾಸ ಮಾಡುತ್ತಿದ್ದರು. ಅವರು ಅಕ್ಕಸಾಲೆಯ ಕಾಯಕವನ್ನು ಮಾಡುತ್ತ ಉಸಜೀವಿಸುವವರಾಗಿದ್ದರು. ಅವರಿದ್ದ ಗ್ರಾಮದಲ್ಲಿ ಕಲ್ಲಿನಾಥನ ದೇವಾ ಲಯವಿದ್ದು ತಮಗೊಬ್ಬ ಮಗನನ್ನು ಕೊಡಬೇಕೆಂದು ದೇವಂಗೆ ಬೇಡಿ ಕೊಳ್ಳಲು ಒಬ್ಬ ಪುತ್ರನು ಜನಿಸಿದನು. ಅವನಿಗೆ ಕಲ್ಲಯ್ಯನೆಂದು ಕಲ್ಲಿ ನಾಥನ ಹೆಸರನ್ನೇ ಇಟ್ಟು ಅವನನ್ನು ಪ್ರೀತಿಯಿಂದ ಬೆಳೆಯಿಸುತ್ತ ಬಂದರು. ಅವನು ದೊಡ್ಡವನಾದ ಬಳಿಕ ಅವನಿಗೆ ತಮ್ಮ ಕುಲದ ಉದ್ಯೋಗವಾದ ಚಿನ್ನಗಾಯಕವನ್ನು ಚನ್ನಾಗಿ ಅರುಹಿ ಅದರಲ್ಲಿ ಅವನನ್ನು ನಿಷ್ಣಾತನನ್ನಾಗಿ ಮಾಡಿದರು. ಆದರೆ ಕಲ್ಲಯ್ಯನು ಕಲ್ಲಿನಾಥನ ಬಗ್ಗೆ ಅತ್ಯಂತ ಭಕ್ತಿಭಾವವನ್ನು ತಾಳಿದವನಾಗಿ ದಿನಾಲು ಶಿವಾರ್ಚನೆಯನ್ನು ಮಾಡಿ ದೇವರನ್ನು ಸ್ತುತಿಸುವದರಲ್ಲಿಯೇ ತನ್ನ ವೇಳೆಯನ್ನೆಲ್ಲ ಕಳೆ ಯುವನು. ಅವನಲ್ಲಿ ಪರಮಾತ್ಮನ ಬಗ್ಗೆ ಹೆಚ್ಚು ಹೆಚ್ಚು ಅನುರಾ ಗವು ಉಂಟಾಗಿ, ಅವನ ಧ್ಯಾನದಲ್ಲಿಯೇ ಯಾವಾಗಲೂ ಉಳಿದು ಬಿಡುವನು.

ಹೀಗಿರುವಲ್ಲಿ ಹಾವಿನಹಾಳ ಗ್ರಾಮದಿಂದ ೧೪ ಮೈಲುಗಳ ಮೇಲಿ ರುವ ಮಂಗಳವಾಡದಲ್ಲಿ ಬಿಜ್ಜಳ ನೃಪನು ರಾಜ್ಯವಾಳುತ್ತಿರಲು ಅವನು

ಅಕ್ಕಸಾಲಿಗ ಕೆಲಸದಲ್ಲಿ ಶಿವನಯ್ಯನ ಮತ್ತು ಅವನ ಮಗ ಕಲ್ಲಯ್ಯನ ಬಾಹ್ಯೆಯನ್ನು ಕೇಳಿದವನಾಗಿ ಚಿನ್ನದ ಒಂದು ಸಾವಿರದ ಗಟ್ಟಿಯನ್ನು ತನ್ನ ಮನೆಯ ನಾಯಕನಾದ ಕಸಿಕಿಲ ನಾರಣನೆಂಬವನ ಕಡೆಗೆ ಕೊಟ್ಟು ಈ ಚಿನ್ನದಿಂದ ಒಂದು ಸುಂದರವಾದ ಉತ್ತರಿಗೆಯನ್ನು ಅವರಿಂದ ಮಾಡಿಸಬೇಕೆಂದು ಹೇಳಿಕಳುಹಿದನು. ಅದರಂತೆ ಆ ಗಟ್ಟಿ ಯನ್ನು ಶಿವನಯ್ಯನ ಕಡೆಗೆ ಕೊಟ್ಟು ನಾರಣನು ರಾಜಧಾನಿಗೆ ತಿರುಗಿ ಹೋದನು.

ಶಿವನಯ್ಯನು ಆ ಗಟ್ಟಿಯನ್ನು ಆನಂದದಿಂದ ಸ್ವೀಕರಿಸಿ ತಾನು ಕೈಕೊಂಡ ಕೆಲಸವನ್ನು ಮಾಡಹತ್ತಲು ಅದು ತನ್ನ ವಶವಲ್ಲವೆಂದು ತೋಚಹತ್ತಿತು. ಅದು ತನ್ನ ಮಗನಿಗೆ ಮಾತ್ರ ಸಾಧ್ಯವೆಂದು ತಿಳಿದ ವನಾಗಿ ತನ್ನ ಮನದಲ್ಲಿ—ನನ್ನ ಮಗನು ಯಾವ ಕೆಲಸವನ್ನೂ ಮಾಡುವದಿಲ್ಲ, ಅವನಿಗೆ ಶಿವನ ಹುಚ್ಚು ಹಿಡಿದಿದೆ, ಅವನು ಮನೆ ವಾರ್ತೆಯನ್ನು ಲಕ್ಷಿಸನು, ಎಂದು ಚಿಂತಿಸುತ್ತಿರಲು, ಮರುದಿನ ಮಧ್ಯ ರಾತ್ರಿಯಲ್ಲಿ ತನ್ನ ಮಗನನ್ನೆಬ್ಬಿಸಿ ಅವನಿಗೆ— ಎಲೋ ಮಗನೇ ಹೀಗೆ ಜಗದೊಳಗೆ ಅನುದ್ಯೋಗಿಯಾಗಿರುವದು ಸರಿಯೇ? ಅಕಟಕಟಾ! ನೀನು ಹೀಗೆ ಎಂದಾದರೂ ಕಾಲಕಳೆಯಬೇಕೇ? ನೀನು ಕಲ್ಲಿನಾಥನ ದೇವಾಲಯವೆಂದರೆ ಅಲ್ಲಗೆ ಹೋಗಿಬಿಡುತ್ತೀ. ಹೀಗಾದರೆ ನೀನು ಹೇಗೆ ಧನವನ್ನು ಗಳಿಸುವಿ? ಉದ್ಯೋಗ ಮಾಡದೆ ಹೋದರೆ ಪರ ಮಾತ್ಮನು ಎಂದಿಗಾದರೂ ತಾನಾಗಿ ನಿನಗೆ ಕೊಡುವನೇ? ಜಗತ್ತಿ ನಲ್ಲಿ ನಿನ್ನ ಹಸ್ತಕೌಶಲ್ಯಕ್ಕೆ ಯಾರೂ ಎಣೆ ಇಲ್ಲ. ಪ್ರಾಯದಲ್ಲಿ ನೀನು ಹಣಗಳಿಸದಿದ್ದರೆ ಮುಪ್ಪಿನ ಕಾಲದಲ್ಲಿ ಅದನ್ನು ಗಳಿಸುವದು ಹೇಗೆ? ನೀನು ಕಲ್ಲಿನಾಥನ ದೇವಾಲಯಕ್ಕೆ ಹೋಗುವದನ್ನು ನಾನು ನಿಲ್ಲಿಸಿ ಬಿಡುವೆನು ಎಂದು ತಂದೆಯು ನಿಷ್ಠುರವಾಗಿ ಹೇಳಿದನು.

ಆಗ ಕಲ್ಲಯ್ಯನು ಅತ್ಯಂತ ಮನಸ್ಸಿನಲ್ಲಿ ನೊಂದು ಬಹಳ ಶೋಕ ವನ್ನು ತಾಳಿ ಕಡುಗೋಪದಿಂದ ತಂದೆಗೆ— ನೀನು ನನ್ನನ್ನು ಕೊಂದರೂ, ಕಡಿದರೂ, ಸೀಳಿದರೂ, ಹೋಳಿದರೂ, ನಾನು ಕಲ್ಲಿನಾಥನ ಪಾದ ವನ್ನು ಬಿಡೆನು. ಛಡ! ಛಡ!! ನೀನೆಲ್ಲಿಯ ತಂದೆ? ನಾನೆಲ್ಲಿಯ ನಿನ್ನ ಮಗ? ನನಗೆ ಮೃಡನೇ ತಾಯಿತಂದೆ. ಸತ್ತು ಹೋಗುವ

ನಿನ್ನಂಥ ತಂದೆ ತಾಯಿಗಳು ನನಗೆ ಬೇಡ. ನನಗೆ ಈ ಪ್ರಪಂಚವು ಬೇಡ. ಎಂದೆನ್ನಲು, ಶಿವನಯ್ಯನು ಅತ್ಯಂತ ಉಗ್ರ ಕೋಪವನ್ನು ತಾಳಿ ತನ್ನ ಮಗನನ್ನು ಒಳಿತಾಗಿ ತಳಿಸಿದನು.

ಆಗ ಕಲ್ಲಯ್ಯನು ಮತ್ತಿಷ್ಟು ಕೆರಳಿದವನಾಗಿ, ಕೋಪದಿಂದ ಅವನ ಮೆಯ್ಯು ನಡುಗುತ್ತಿರಲು— ನಾನು ಇನ್ನುಮೇಲೆ ಈ ಲೋಕದಲ್ಲಿ ಇರಲಾರೆನು ಎಂದು ನುಡಿದು ಕತಾರಿಯೊಂದನ್ನು ತೆಗೆದುಕೊಂಡು ಕಲ್ಲಿನಾಥನ ದೇವಾಲಯಕ್ಕೆ ಬಂದು ದೇವರೆದುರಿಗೆ ನಿಂತು— ಎಲೋ ದೇವರೇ, ನೀನಿರಲು ತಂದೆಯು ನನಗೆ ಹೀಗೆ ಬಡಿಯಬೇಕೇ? ಅವನು ತಂದೆಯಲ್ಲ. ನೀನೇ ನನಗೆ ತಂದೆಯು, ಎಂದೆನ್ನುತ್ತ, ತನ್ನ ಕಯ್ಯಲ್ಲಿದ್ದ ಕತಾರಿಯಿಂದ ತನ್ನ ಹೊಟ್ಟೆಯನ್ನು ಇರಿದುಕೊಂಡನು. ಆಗ ಅವನ ಕರುಳುಗಳು ಹೊರಬಿದ್ದವು. ನೆತ್ತರು ಸುತ್ತಲೂ ಹರಿಯತೊಡಗಿತು. ಆಗ ಕಲ್ಲಯ್ಯನು ಕಲ್ಲಿನಾಥನನ್ನು ಬಿಗಿದಪ್ಪಿ ಅವನ ಧ್ಯಾನದಲ್ಲಿರಲು ಪರಮಾತ್ಮನು ಅವನಿಗೆ— ಎಲೋ ಕಲ್ಲಯ್ಯನೇ, ಹೀಗೆ ಮಾಡದಿರು. ನೀನು ಮುಂದೆ ವೇದಬೋಧಕರನ್ನು ಗೆಲ್ಲಬೇಕಾಗಿದೆ. ನಿನ್ನಿಂದ ಅನೇಕ ಮಹತ್ವದ ಕಾರ್ಯಗಳಾಗಬೇಕಾಗಿವೆ. ರೇಪಣಸಿದ್ಧನ ಮಗನಾದ ರುದ್ರಮುನಿಯು ಅತ್ಯಂತ ಜ್ಞಾನಿಯು. ಅವನು ನಿನಗೆ ಗುರುವಾಗಿ ಬರುವವನಾಗಿದ್ದಾನೆ. ಅವನನ್ನು ನೀನು ಕಾಣು. ಅಂಜದಿರು ಎಂದು ಪ್ರತ್ಯಕ್ಷವಾಗಿ ಬುದ್ಧೀ ಹೇಳಿದಂತೆ ಕೇಳಿಸಿತು.

ಅಷ್ಟರಲ್ಲಿ ಪೂಜಾರಿಯು ಬಂದು ದೇವಾಲಯದ ಬಾಗಿಲನ್ನು ತೆರೆದುನೋಡಲು ಸುತ್ತಲೂ ನೆತ್ತರು ಚೆಲ್ಲಿತ್ತು, ಕಲ್ಲಯ್ಯನು ದೇವರ ಪಾದದೆಡೆಯಲ್ಲಿ ತಲೆ ಇಟ್ಟು ಮೂರ್ಛೆಹೋಗಿದ್ದನು. ಅದನ್ನು ಅವನು ಕಂಡು ಅಲ್ಲಿ ನಿಲ್ಲಲಂಜಿ, ಊರ ಜನರಿಗೆ ಅದನ್ನು ತಿಳಿಸಲು ತಾಯಿ ತಂದೆಗಳೂ ಊರವರೂ ಅಲ್ಲಿಗೆ ಬಂದು ಕಲ್ಲಯ್ಯನನ್ನು ಮೇಲಕ್ಕೆ ಬ್ಬಿಸಿ, ಹೊರಗೆ ಬಿದ್ದ ಕರುಳುಗಳನ್ನು ಹೊಟ್ಟೆಯಲ್ಲಿ ಸೇರಿಸಿ ದೇವರ ಪ್ರಸಾದವನ್ನು ಮೇಲಿ ಹಚ್ಚಿ, ವಿಭೂತಿಯನ್ನು ಮೆಯ್ಯಲ್ಲಿ ಉದ್ಧೂಳಿಸಿ ಉಪಚರಿಸುತ್ತಿರಲು ಕಲ್ಲಯ್ಯನು ಮೂರ್ಚ್ಛೆ ತಿಳಿದು ಎಚ್ಚತ್ತನು. ಅವನು ಜೀವಂತನಾದನೆಂಬುದನ್ನು ಪುರಜನರೆಲ್ಲರೂ ನೋಡಿ ಹರುಷಿತರಾಗಿ ಅವನನ್ನು ಮನೆಗೆ ಕಳಿಸಿಕೊಟ್ಟರು.

ಆಮೇಲೆ ಕೆಲವು ದಿನಗಳು ಹೋಗಲು ರೇವಣಸಿದ್ಧೇಶ್ವರನು ಪಾವಿನಹಾಳ ಗ್ರಾಮಕ್ಕೆ ಬರುವವನಾದನು. ಆಗ ಕಲ್ಲಯ್ಯನು ಅವನನ್ನು ಕಂಡು ಅವನ ಪಾದದಲ್ಲಿ ಬಿದ್ದು—ಎಲೇ ಗುರುವೇ ನೀನು ನನಗೆ ಕರುಣಿಸು ಎಂದು ಹೇಳಲು, ರೇವಣಸಿದ್ಧನು ತನ್ನ ಮುಂದೆ ನಿಂತಿದ್ದ ತನ್ನ ಮಗನಾದ ರುದ್ರಮುನಿಗೆ—ನೀನು ಈ ಕಲ್ಲಯ್ಯನಿಗೆ ದೀಕ್ಷೆಯನ್ನು ಕೊಡು, ಎಂದು ಹೇಳಲು ರುದ್ರಮುನಿಯು ಅವನಿಗೆ ತಾನು ಗುರುವಾಗಿ ಶ್ರೇಷ್ಠತರವಾದ ಶಿವಜ್ಞಾನವನ್ನು ಬೋಧಿಸಿ ದೀಕ್ಷೆಯನ್ನು ಮಾಡುವವನಾದನು.

ಅಂದಿನಿಂದ ಕಲ್ಲಯ್ಯನು ಶಿವಾನುಭವ ಶಾಸ್ತ್ರವನ್ನು ಅಭ್ಯಸಿಸುವವನಾದನು. ಪರಮಾತ್ಮನ ಕೇವಲ ಭಕ್ತನಾಗಿ ಶಿವಾನುಭವದಲ್ಲಿರತ್ತಿದನು. ಯಾವಾಗಲೂ ಹರಶರಣರೊಡನೆ ಇರುವನು. ಪುರಾತನರ ವಚನಗಳನ್ನು ಹಾಡುವನು. ಆಗ ದೇಶದಲ್ಲಿದ್ದ ಲೋಕಾಯತರನ್ನೂ, ಬೌದ್ಧರನ್ನೂ, ವಿಪ್ರರನ್ನೂ, ಚಾರ್ವಾಕರನ್ನೂ ಶಾಸ್ತ್ರಮುಖದಿಂದ ಸೋಲಿಸಿ, ಲೋಕದಲ್ಲಿ ಅತ್ಯಂತ ಪ್ರಸಿದ್ಧಿಯನ್ನು ಹೊಂದಿದನು.

ಹೀಗಿರುವಲ್ಲಿ ಅವನು ಒಂದು ದಿವಸ ಕಲ್ಲಿನಾಥನನ್ನು ಪೂಜಿಸುತ್ತಿರಲು ಒಂದು ಸರ್ಪವು ಅವನ ಹಿಂಬದಿಗೆ ಬಂದು ಅವನನ್ನು ಕಚ್ಚಿತು. ಆದರೆ ಅದರ ವಿಷವು ಅವನಿಗೆ ಏನೂ ಬಾಧೆಮಾಡಲಿಲ್ಲ, ಇಷ್ಟೇಅಲ್ಲ, ಆ ಸರ್ಪವೇ ಅವನ ಹಿಂದೆ ಸತ್ತುಬಿದ್ದಿತು. ಕಲ್ಲಯ್ಯನಿಗೆ ಅದು ಗೊತ್ತಾಗಲು ಅವನು ಮನಸ್ಸು ನೊಂದವನಾಗಿ—ಎಲೋ ದೇವನೇ, ನಾನು ಎಷ್ಟು ನಿಷ್ಠುರನು! ನಾನು ವಿಷಕ್ಕೆ ವಿಷವಾಗಿ ಸೀದೆನೇ? ಈ ಹಾವು ನನ್ನಿಂದ ಸತ್ತಿತೇ? ಎಂದು ಶೋಕಿಸುತ್ತ, ಈ ಹಾವು ಬದುಕಲಿ ಎಂದೆನ್ನಲು ಅದಕ್ಕೆ ಕೂಡಲೆ ಜೀವವು ಬಂದಿತು ಮತ್ತು ಅದು ಅತ್ತಿತ್ತ ಹರಿದಾಡಹತ್ತಿತು. ಆಗ ನೆರೆದ ಜನರು ಕಲ್ಲಯ್ಯನ ಮೇಲಿನ ಪರಮಾತ್ಮನ ಕೃಪೆಯು ಎಷ್ಟು ಘನತರವಾದದ್ದು, ಎಂದು ಪೊಕಳಿಸುತ್ತ ಪರಮಾತ್ಮನನ್ನು ಸ್ತುತಿಸುವವರಾದರು. ಹೀಗೆ ಕಲ್ಲಯ್ಯನು ಪಾವಿನಹಾಳದಲ್ಲಿ ಅತ್ಯಂತ ಭಕ್ತಿಯಿಂದ ಕಾಲಕಳೆಯುತ್ತ ಬಂದನು.

ಹೀಗಿರುವಲ್ಲಿ ಸೊನ್ನಲಿಗೆ ಎಂದರೆ ಈಗಿನ ಸೊಲ್ಲಾಪುರದಲ್ಲಿ ಕಪಿಲಸಿದ್ಧಮಲ್ಲಿಕಾರ್ಜುನನ ಅತ್ಯಂತ ಪ್ರಸಿದ್ಧ ದೇವಾಲಯವಿದ್ದು

ಆಲ್ಲಿದ್ದ ಮಲ್ಲಿಕಾರ್ಜುನನ ಪ್ರಕಾಶದಂತೆಯೇ ಉನ್ನತವಾದ ಪ್ರಕಾಶ
ವನ್ನು ಸಿದ್ಧರಾಮನೆಂಬ ಶಿವಯೋಗಿಯು ತಾಳಿದವನಾಗಿ ಲೋಕದಲ್ಲಿ
ಅತ್ಯಂತ ಪ್ರಸಿದ್ಧನಾಗಿದ್ದನು. ಆಗ ಕಲ್ಲಿನಾಥನು ಅವನ ಸ್ನೇಹವನ್ನು
ಸಂಪಾದಿಸಬೇಕೆಂದು ಬಯಸಿ ಸೊನ್ನಲಾಪುರಕ್ಕೆ ಬಂದು ಅಲ್ಲಿಯೇ
ಶಿವಾನುಭವದಲ್ಲಿ ಹಲವು ದಿನ ಕಾಲಕಳೆಯುವವನಾದನು. ಹೀಗಿರು
ವಲ್ಲಿ ಆಲ್ಲಿ ಒಬ್ಬ ಭಕ್ತೆಯು ಶಿವನಲ್ಲಿ ಅತ್ಯಂತ ಭಕ್ತಿಭಾವವುಳ್ಳವ
ಳಾಗಿ ಪುರಾತನರ ಸ್ತುತಿಗಳನ್ನು ಮಾಡುತ್ತಾ ಅವುಗಳಲ್ಲಿ ತಲ್ಲೀನ
ಳಾಗಿರುವದನ್ನು ಕಲ್ಲಯ್ಯನು ದಿನಾಲು ನೋಡುತ್ತಿದ್ದನು. ಆಗ ಅವನು
ಅವಳಲ್ಲಿ ಅನುರಾಗವನ್ನು ಹೊಂದಿ ಅವಳನ್ನು ಲಗ್ನವಾದನು. ಮುಂದೆ
ಅವಳು ಗರ್ಭಿಣಿಯಾಗಿ ಒಬ್ಬ ಹೆಣ್ಣು ಮಗುವನ್ನು ಹೆತ್ತಳು. ಅವ
ಳಿಗೆ ಕಲ್ಲಿನಾಥನ ಹೆಸರನ್ನೇ ಅಂದರೆ 'ಕಲ್ಲವ್ವೆ' ಎಂಬ ಹೆಸರಿಟ್ಟು
ನಾಮಕರಣ ಮಾಡಿದನು. ಕಲ್ಲವ್ವೆಯು ತನ್ನ ತಂದೆಯಂತೆಯೇ
ಶಿವಭಕ್ತಿಯಲ್ಲಿ ಬೆಳೆಯುವವಳಾದಳು.

ಕಲ್ಲಯ್ಯನು ಮಹಾಶಿವಜ್ಞಾನಿಯು. ಅವನು ತನ್ನ ಶಿವಾನುಭ
ವವನ್ನು ವಚನಗಳ ಮೂಲಕ ಜೋಳಿಸಹತ್ತಿದನು. ಅವನ ವಚನ
ಗಳಲ್ಲಿ ೬೦ ವಚನಗಳನ್ನು ನಾವು ಶಿವಾನುಭವ ಗ್ರಂಥಮಾಲೆಯಲ್ಲಿ
ಪ್ರಸಿದ್ಧಿಸಿದ್ದೇವೆ. ವಚನವಾಙ್ಮಯದಲ್ಲಿ ಅವನ ವಚನಗಳಿಗೆ ಉಚ್ಚ
ಸ್ಥಾನವಿದೆ. ಅವು ಅತ್ಯಂತ ಮನೋಹರವೂ ಉಚ್ಚವಿಚಾರವುಳ್ಳವೂ
ಇರುತ್ತವೆ. ಯಾವ ವಚನ ಸಂಗ್ರಹಕಾರನೂ ಕೂಡ ಅವುಗಳನ್ನು ತನ್ನ
ಗ್ರಂಥದಲ್ಲಿ ಉದಹರಿಸದೆ ಬಿಟ್ಟಿಲ್ಲ. ಹಾಗೆಯೇ ಕಲ್ಲಯ್ಯನು ಬೋಧ
ಕನೂ ಆಗಿದ್ದಾನೆ. ಅವನ ಹೆಸರಿನ ಸ್ಥಾನಗಳು ಕಲಬುರ್ಗಿ ಜಿಲ್ಲೆ
ಯಲ್ಲಿ ಸುರಪುರದ ದಕ್ಷಿಣಕ್ಕೆ ಮತ್ತು ಬಳ್ಳಾರಿ ಜಿಲ್ಲೆಯಲ್ಲಿ ಬಳ್ಳಾರಿಗೆ
ಸಮೀಪವಿದ್ದು ಅವುಗಳಲ್ಲಿ ಅವನ ಪ್ರಸಿದ್ಧಿಯು ಇದೆ. ಇದರಿಂದ ಅವನು
ಶಿವಾನುಭವವನ್ನು ಬೋಧಿಸುತ್ತ ದೇಶದಲ್ಲಿ ಸಂಚಾರ ಮಾಡಿದ್ದು ಕಂಡು
ಬರುತ್ತಿದೆ. ಮಹಾಪುರುಷರು ಹಲವು ದಿನ ವಾಸವಾಗಿದ್ದ ಗ್ರಾಮ
ಗಳಿಗೆ ಅವರ ಮೂಲ ಗ್ರಾಮಗಳ ಹೆಸರುಗಳನ್ನು ಇಟ್ಟಿದ್ದು ಅನೇಕ
ಕಡೆಗೆ ಕಂಡುಬರುತ್ತದೆ. ಆದ್ದರಿಂದ ಈ ಎರಡು ಗ್ರಾಮುಗಳಿಗೂ
'ಹಾವಿನಹಾಳ' ಎಂಬ ಹೆಸರುಗಳು ಬಂದಿರಬಹುದು.

ಹೀಗೆ ಹಾವಿನಹಾಳ ಕಲ್ಲಯ್ಯನು ತನ್ನ ಗ್ರಾಮದಲ್ಲಿರುತ್ತಿರಲು
ಒಂದು ದಿನ ಅವನ ಮಗಳು ಅವನ ಲಿಂಗಾರ್ಚನೆಗೆಂದು ಹೊಳೆ
ಯಿಂದ ನೀರು ತರುತ್ತಿರಲು ದಾರಿಯಲ್ಲಿ ಸೋಮಯಾಜಿ ಎಂಬ
ಬ್ರಾಹ್ಮಣನು ಅವಳನ್ನು ಅಕಸ್ಮಾತ್ತಾಗಿ ಮುಟ್ಟಲು ಆ ಬಾಲಿಕೆಯು
ಛಲಿಯು ಮುಟ್ಟಿದ ಉದಕವನ್ನು ತರಬಹುದೇ ಎಂದು ಹರಿವೆಯನ್ನು
ಅಲ್ಲಿಯೇ ಒಡೆದುಬಿಟ್ಟಳು. ಆಗ ಆ ಬ್ರಾಹ್ಮಣನು ಕೋಪದಿಂದ ಅವಳು
ಹೀಗೆ ಮಾಡಿದ್ದನ್ನು ಉಳಿದ ಬ್ರಾಹ್ಮಣರಿಗೆ ತಿಳಿಸಲು ಅವರೆಲ್ಲರು
ನೆರೆದು ಕಲ್ಲಯ್ಯನ ಕಡೆಗೆ ಬಂದು-- ನಿನ್ನ ಮಗಳನ್ನು ಸೋಮಯಾಜಿ
ಗಳು ಮುಟ್ಟಿದ ಕೂಡಲೆ ಅವಳು ಹರಿವೆಯನ್ನು ಒಡೆದುಬಿಟ್ಟಳು.
ಬ್ರಾಹ್ಮಣರನ್ನು ಮುಟ್ಟಿದರೆ ದೋಷವುಂಟೇ? ಅಷ್ಟಾದಶವರ್ಣಗಳಲ್ಲಿ
ಬ್ರಾಹ್ಮಣರು ಶ್ರೇಷ್ಠರು. ಇಂಥವರನ್ನು ನೀವು ಮುಟ್ಟಲಾರದೇ?
ಎಂದು ಕೇಳಿದರು.

ಕಲ್ಲಯ್ಯನು ಅವರ ಜಾತ್ಯಂಧತೆಯನ್ನು ತಿಳಿದವನಾಗಿ-- ನನ್ನ
ಮಗಳು ಮಾಡಿದ್ದು ಯೋಗ್ಯವು. ಶಿವನ ಭಕ್ತರ ಮನೆಯಲ್ಲಿದ್ದ ನಾಯಿ
ಸಹ ಬ್ರಾಹ್ಮಣರನ್ನು ಮುಟ್ಟುವದಿಲ್ಲ. ಅಂದಬಳಿಕ ಪರಮಾತ್ಮನ
ಭಕ್ತರು ನಿಮ್ಮಂಥವರನ್ನು ಎಂದಾದರೂ ಮುಟ್ಟಬಹುದೇ? ಎಂದೆ
ನ್ನಲು ಬ್ರಾಹ್ಮಣರು-- ನಾವು ನಾಯಿಗಿಂತ ಕಡೆಯಾದೆವೇ? ನಾವು
ವೇದಗಳನ್ನು ಚನ್ನಾಗಿ ಪಠಿಸಬಲ್ಲವರು. ನೀನು ನಿನ್ನ ನಾಯಿಯಿಂದ
ಆ ವೇದಗಳನ್ನು ಓದಿಸಿದರೆ ಮಾತ್ರ ನಾವು ಕಡಿಮೆ ಎಂದು ಒಪ್ಪು
ತ್ತೇವೆ ಎಂದು ಹೇಳಿದರು.

ಆಗ ಕಲ್ಲಯ್ಯನು--ಹಾಗೆಯೇ ಆಗಲಿ. ನಾಯಿಯಿಂದಲೇ ವೇದ
ವನ್ನು ಓದಿಸುವೆನು ಎಂದಂದು ತನ್ನ ಮನೆಯಲ್ಲಿ 'ಗಂಭೀರನಾದ'
ಎಂಬ ಹೆಸರಿನ ಕಪ್ಪುಬಣ್ಣದ ನಾಯೊಂದಿತ್ತು, ಅದನ್ನು ಅವನು ಕರೆ
ಯಲು ಅದು ಇದಿರಿಗೆ ಬಂದುನಿಂತಿತು. ಆಗ ಕಲ್ಲಯ್ಯನು ತನ್ನ ಮನದಲ್ಲಿ
ಧ್ಯಾನಿಸುತ್ತ ಆ ನಾಯಿಗೆ--ಲಿಂಗೋಚ್ಛಿಷ್ಟವನ್ನು ದಿನಾಲು ನೀನು ಭುಂಜಿ
ಸುತ್ತಿರುವಿ. ಗಂಭೀರನಾವನೇ, ವೇದವನ್ನು ಉಚ್ಚರಿಸಲು ಸಿದ್ಧನಾಗು
ಎಂದು ಅದಕ್ಕೆ ಆಜ್ಞಾಪಿಸಿ ಆ ಬ್ರಾಹ್ಮಣರಿಗೆ-- ನೀವು ಯಾವ ವೇದದ
ಭಾಗವನ್ನು ಈ ನಾಯಿಯು ಓದಬೇಕೆಂದು ಅಪೇಕ್ಷಿಸುತ್ತೀರಿ ಎಂದು
ಕೇಳಲು ಅವರು--ಯಜುರ್ವೇದವೆನಲು, ಆ ನಾಯಿಯು ತನ್ನ ಹೃದಯ

ಕಮಲದಲ್ಲಿ ಲಿಂಗಮೂರ್ತಿಯನ್ನು ನೆಲೆಗೊಳಿಸಿ ಆದಿಶಕ್ತಿಯನ್ನು ಪ್ರಸ್ಥಾ
ರಿಸಿ, ನಾಸಾಗ್ರದಲ್ಲಿ ಶಶಿ ರವಿಗ್ನಿಯನ್ನು ವೇಧಿಸುತ್ತ ಅಕ್ಷರತ್ರಯದ ಮೂಲಕ
ಬಿಂದುನಾದ ಕಳೆಗಳನ್ನು ಸಮಗೊಳಿಸಿ ಉದಾತ್ತಾನುದಾತ್ತಗಳಿಂದ ಕೂಡಿ
ಕೊಂಡು ಸುಸ್ವರದಿಂದ ವೇದ ಭಾಗವನ್ನು ನುಡಿಯಹತ್ತಿತು. ಅದನ್ನು
ಕೇಳಿ ಎಲ್ಲರೂ ಅಚ್ಚರಿಗೊಂಡರು. ನೆರೆದ ವಿಪ್ರರು ಕಲ್ಲಯ್ಯನನ್ನು
ಸ್ತೋತ್ರ ಮಾಡಿ ಅವನಿಗೆ ಸಾಷ್ಟಾಂಗವೆರಗಿದರು. ಆಗ ಕಲ್ಲಯ್ಯನು
ಅವರನ್ನು ಕ್ಷಮಿಸಿ ಮನೆಗೆ ಕಳಿಸಿ ತನ್ನ ನಿತ್ಯದ ಲಿಂಗಾರ್ಚನೆಯನ್ನು
ಮುಗಿಸಿದನು.

ಕಲ್ಲಯ್ಯನು ಶ್ರೀ ಸಿದ್ಧರಾಮನ ಭೆಟ್ಟಿಗೆಂದು ಆಗಿಂದಾಗ್ಗೆ ಸೊಲ್ಲಾ
ಪುರಕ್ಕೆ ಹೋಗುತ್ತಿದ್ದನು. ಹಾವಿನಹಾಳು ಸೊಲ್ಲಾಪುರದಿಂದ ೧೮ ಮೈಲು
ಮಾತ್ರ ದೂರವಿದೆ. ಸಿದ್ಧರಾಮನ ಸನ್ನಿಧಿಯಲ್ಲಿ ಅವನೂ ಕೇದಾರ
ಗುರುಗಳೂ ಯಾವಾಗಲೂ ಶಿವಗೋಷ್ಠಿಯಲ್ಲಿ ಕಾಲಕಳೆಯುವರು.
ಹೀಗಿರಲು ಕಲ್ಲಯ್ಯನಿಗೆ ಅವಸಾನ ಕಾಲವು ಪ್ರಾಪ್ತವಾಯಿತು. ಆಗ
ಅವನು ಸೊನ್ನಲಿಗೆಯಲ್ಲಿಯೇ ಸಮಾಧಿಸ್ಥನಾದನು. ಅವನ ಸಮಾಧಿಯು
ಸಿದ್ಧರಾಮೇಶ್ವರ ದೇವಾಲಯದ ಪ್ರಾಕಾರದಲ್ಲಿ ಈಗಲೂ ಕಾಣಬರುತ್ತಿದೆ.
ಈ ಪ್ರಕಾರ ಹಾವಿನಹಾಳ ಕಲ್ಲಯ್ಯನು ಶಿವಾನುಭವಿಯಾಗಿ ವೀರಶೈವ
ಧರ್ಮದ ವಿಶಾಲ ತತ್ವಗಳನ್ನು ವಚನಗಳ ಮೂಲಕ ಜನರಲ್ಲಿ ಬೋಧಿಸುತ್ತ
ವೀರಶೈವ ಶರಣರಲ್ಲಿ ಅತ್ಯಂತ ಪ್ರಸಿದ್ಧಿಯನ್ನು ಹೊಂದಿದ್ದಾನೆ. ಅವನು
ಸಂಸ್ಕೃತ ಬಲ್ಲವನೂ, ವೇದಶಾಸ್ತ್ರಾಗಮಗಳನ್ನು ಚೆನ್ನಾಗಿ ತಿಳಿದವನೂ
ಆಗಿದ್ದನೆಂಬುದಕ್ಕೆ ಅವನ ವಚನಗಳೇ ಸಾಕ್ಷಿಯಾಗಿವೆ. ಅವನ ಹೆಸರು
ಗಣಸಹಸ್ರದಲ್ಲಿ ಬಂದಿರುತ್ತದೆ. ಆದ್ದರಿಂದ ಅವನು ವೀರಶೈವರಿಗೆ
ಅತ್ಯಂತ ಪೂಜ್ಯನಾಗಿದ್ದಾನೆ.

ಹಾವಿನಹಾಳ ಗ್ರಾಮದಲ್ಲಿ ಕಲ್ಲಿನಾಥನ ದೇವಾಲಯವು ಈಗಲೂ
ಇದೆ. ಈ ಗ್ರಾಮದ ಪಕ್ಕದಲ್ಲಿ ಬೋರೀ ಹಳ್ಳವೆಂಬ ದೊಡ್ಡ ಹಳ್ಳವು
ಹರಿಯುತ್ತಿದೆ. ಅದರ ದಂಡೆಗೆ ಸಮೀಪವಾಗಿಯೇ ಈ ಗುಡಿಯು ಇದೆ.
ಪ್ರತಿವರ್ಷ ಈ ದೇವಾಲಯದ ಜಾತ್ರೆಯಾಗುತ್ತದೆ. ಆ ಕಾಲದಲ್ಲಿ
ಜನರು ಕಲ್ಲಯ್ಯನ ಮಹಿಮೆಯನ್ನು ವರ್ಣಿಸುವ ಅವನ ಚರಿತ್ರೆಯನ್ನು
ಕೇಳುವ ಸಾಂಪ್ರದಾಯವಿದೆ. ಈ ಗ್ರಾಮವಿದ್ದ ಪ್ರದೇಶದಲ್ಲಿಯೇ ರೇವ

ಣಸಿದ್ಧ, ರುದ್ರಮುನಿಗಳು ಒಂದು ಕಾಲದಲ್ಲಿ ವಾಸವಮಾಡಿಕೊಂಡಿದ್ದ
ಮಂಗಳವಾಡ, ಸಿದ್ಧನಕೆರೆ, ಮಸನೂರು ಈ ಸ್ಥಳಗಳು ೧೫ ರಿಂದ ೧೮
ಮೈಲು ದೂರವಿವೆ.

ಹಾವಿನಹಾಳ ಕಲ್ಲಯ್ಯನ ಚರಿತ್ರೆಯಲ್ಲಿ ಬಸವೇಶ್ವರನ ಸಂಬಂಧವು
ಬರುವದಿಲ್ಲ. ಅವನು ಕಲ್ಯಾಣಕ್ಕೆ ಹೋದದ್ದರ ಉಲ್ಲೇಖವು ಯಾವ
ಗ್ರಂಥದಲ್ಲಿಯೂ ಇರುವದಿಲ್ಲ. ಆದ್ದರಿಂದ ಅವನು ಬಸವೇಶ್ವರನಕಿಂ
ತಲೂ ಸ್ವಲ್ಪ ಹಿಂದಿನವನಾಗಿರಬೇಕು. ಬಿಜ್ಜಳನು ಮಂಗಳವಾಡದಲ್ಲಿ
ಮೊದಲು ಮಂಡಲಾಧೀಶ್ವರನಾಗಿ ರಾಜ್ಯವಾಳಿದನು. ಆಗ ರೇವಣಸಿ
ದ್ಧೇಶ್ವರನು ಅಲ್ಲಿಗೆ ಬಂದು ತನ್ನ ಮಹಾತ್ಮ್ಯವನ್ನು ಪ್ರಕಟಮಾಡಿದ್ದಾನೆ.
ಇದೇ ಕಾಲಕ್ಕೆಯೇ ಹಾವಿನಹಾಳ ಕಲ್ಲಯ್ಯನೂ ಪ್ರಸಿದ್ಧಿಗೆ ಬಂದಿರ
ಬಹುದು. ಮುಂದೆ ಬಿಜ್ಜಳನು ಕಲ್ಯಾಣದ ಚಾಲುಕ್ಯರ ರಾಜ್ಯವನ್ನು
ಆಕ್ರಮಿಸಿ ಚಕ್ರಾಧಿಪತಿಯಾದನು. ಆದರೆ ಆ ವರೆಗೆ ರೇವಣಸಿದ್ಧ
ಮತ್ತು ಹಾವಿನಹಾಳ ಕಲ್ಲಯ್ಯಗಳು ಜೀವಿಸಿದ ಹಾಗೆ ತೋರುವದಿಲ್ಲ.
ಆದರೆ ರುದ್ರಮುನಿಯು ಮಾತ್ರ ಕಲ್ಯಾಣದಲ್ಲಿದ್ದದ್ದರ ಉಲ್ಲೇಖಗಳಿರುತ್ತವೆ.
ಆದ್ದರಿಂದ ಬಸವ ಮತ್ತು ರುದ್ರಮುನಿ ಇವರಕಿಂತಲೂ ಸ್ವಲ್ಪ ಮೊದಲು
ಹಾವಿನಹಾಳ ಕಲ್ಲಯ್ಯನು ಪ್ರಸಿದ್ಧಿಗೆ ಬಂದು ಶಿವಾನುಭವದ ಕಾರ್ಯ
ಗಳನ್ನು ಮಾಡಿ, ಸೊನ್ನಲಿಗೆಯಲ್ಲಿ ಅವಸಾನವನ್ನು ಹೊಂದಿರಬೇಕೆಂದು
ತೋರುತ್ತದೆ.

ಜಂಬೂರು ಮಹಾಕಾಳಯ್ಯ.

ವರ್ಣಾಶ್ರಮ ಧರ್ಮಗಳು ವೇದಾಧಿಕಾರವು ಬ್ರಾಹ್ಮಣ, ಕ್ಷತ್ರಿಯ,
ವೈಶ್ಯರಿಗೆ ಮಾತ್ರವಿದ್ದು ಬೇರೆ ಯಾವ ಸಮಾಜದವರಿಗೂ ಇಲ್ಲೆಂದು
ಭಾವಿಸಿದ್ದಾರೆ. ಆದ್ದರಿಂದ ಅವರು ವೇದಗಳನ್ನು ಗುಪ್ತವಾಗಿಟ್ಟು
ಕೊಂಡು ಅಪರಿಗಳ ಅಭ್ಯಾಸವನ್ನೂ ಪಠನವನ್ನೂ ಇತರರಿಗೆ ಹೇಳುವದಿ
ಲ್ಲ. ಈಪ್ರಕಾರ ಅವರು ಹಿಂದೂಸಮಾಜದಲ್ಲಿ ಶ್ರೇಷ್ಠವರ್ಣದವರೆಂದೂ
ಕೀಳುವರ್ಣದವರೆಂದೂ ಎರಡು ವಿಭಾಗಗಳನ್ನು ಕಲ್ಪಿಸಿದ್ದಾರೆ. ಅವರು
ಬ್ರಾಹ್ಮಣ ಸ್ತ್ರೀಯು ಸಹ ಶೂದ್ರಳೆಂದು ಭಾವಿಸಿ ಅವಳಿಗೂ ವೇದಾ

ಧಿಕಾರವನ್ನು ಕೊಟ್ಟಿರುವದಿಲ್ಲ. ಆದರೆ ಹಿಂದೂ ಸಮಾಜದಲ್ಲಿ ಕೆಲವು ಧರ್ಮಗಳಿದ್ದು ಅವು ಈ ತತ್ವವನ್ನು ನಿರಾಕರಿಸಿ ಎಲ್ಲರಿಗೂ ಸಮಾನಾಧಿಕಾರವನ್ನು ಕೊಟ್ಟಿರುತ್ತವೆ. ಇಂಥ ಧರ್ಮಗಳಲ್ಲಿ ವೀರಶೈವ ಧರ್ಮವು ಒಂದಾಗಿರುತ್ತದೆ. ಆದ್ದರಿಂದ ಅದರಲ್ಲಿ ಆಗಿಹೋಗಿರುವ ಶಿವಶರಣರು ವೇದಗಳ ಬಗ್ಗೆ ಇಂಥ ಅಕುಂಚಿತ ವೃತ್ತಿಯನ್ನು ತಾಳಿರುವದಿಲ್ಲ. ಇದಕ್ಕೆ ಉದಾಹರಣೆಯಾಗಿ ಹಾವಿನಹಾಳ ಕಲ್ಲಯ್ಯನು ನಾಯಿಯಿಂದ ವೇದವನ್ನು ಓದಿಸಿದ್ದು ಇರುತ್ತದೆ. ಇದನ್ನು ಹಿಂದಿನ ಚರಿತ್ರೆಯಲ್ಲಿ ಹೇಳಿದೆ. ಅವನಂತೆಯೇ ಜಂಬೂರು ಮಹಾಕಾಳಯ್ಯನೆಂಬ ಇನ್ನೊಬ್ಬ ಶರಣನು ಆಚರಿಸಿದ್ದಾನೆ.

ಮಲೆಯ ದೇಶದಲ್ಲಿ ಹಿರಿಯಜಂಬೂರು ಎಂಬ ಹೆಸರಿನ ಗ್ರಾಮವಿದೆ. ಈ ಗ್ರಾಮವು ಈಗ ಶಿವಮೊಗ್ಗೆ ಜಿಲ್ಲೆಯಲ್ಲಿರುವ ಶಿರಾಳಕೊಪ್ಪಕ್ಕೆ ಪೂರ್ವದಿಕ್ಕಿನಲ್ಲಿ ನಾಲ್ಕು ಮೈಲು ದೂರವಿದೆ. ಇದಕ್ಕೆ ಸಮೀಪವಾಗಿಯೇ ಬಳ್ಳಿಗಾವಿ, ಅನಿವಿಷಾರ್ಯಕ್ಷೇತ್ರ, ಉಡುಗಣಿ (ಉಡುತಡಿ) ಇವೇ ಮೊದಲಾದ ಶಿವಶರಣರ ಸ್ಥಾನಗಳಿವೆ. ಈ ಜಂಬೂರು ಗ್ರಾಮದಲ್ಲಿ ಮಹಾಕಾಳಯ್ಯನೆಂಬ ಒಬ್ಬ ಶ್ರೇಷ್ಠ ಶಿವಭಕ್ತನು ವಾಸಮಾಡಿಕೊಂಡಿದ್ದನು. ಅವನು ಶಿವಾನುಭವಿಯಾಗಿ ಅತ್ಯಂತ ಭಕ್ತಿಭಾವದಿಂದ ಲಿಂಗಾರ್ಚನೆಯನ್ನು ಮಾಡುತ್ತ ಲಿಂಗಾನುಸಂಧಾನಿಯಾಗಿ ಆಚರಿಸುತ್ತಲಿದ್ದನು. ಅವನ ಆಚರಣೆಯ ಮೂಲಕ ಅವನ ಪ್ರಾಣವು ಅವನ ಆಧೀನದಲ್ಲಿಯೇ ಉಳಿದು ಅವನು ತನ್ನ ಶಿರವನ್ನು ಲಿಂಗಕ್ಕೆ ಅರ್ಪಿಸಿದರೂ ಕೂಡ ಅದನ್ನು ಪುನಃ ಪಡೆದುಕೊಳ್ಳುವ ಸಾಮರ್ಥ್ಯವನ್ನು ಹೊಂದಿದನು. ಇದರಿಂದ ಅವನು ಶ್ರೇಷ್ಠ ಶಿವಭಕ್ತನು, ಮಹಿಮನು ಎಂದು ಪ್ರಾತಿಯನ್ನು ಜನರಲ್ಲಿ ಪಡೆದವನಾದನು.

ಹೀಗಿರುವಲ್ಲಿ ಮಹಾಕಾಳಯ್ಯನಿದ್ದ ಗ್ರಾಮವು ಬ್ರಾಹ್ಮಣರ ಮಹತ್ವದ ಒಂದು ಅಗ್ರಹಾರವಾಗಿತ್ತು. ಅಲ್ಲಿ ಒಂದು ದಿನ ಬ್ರಾಹ್ಮಣರು ವೇದಪಠನವನ್ನು ಮಾಡುತ್ತ ಇದ್ದರು. ಆಗ ಮಹಾಕಾಳಯ್ಯನು ಅಲ್ಲಿಗೆ ಬರುವದನ್ನು ಬ್ರಾಹ್ಮಣರು ಕಂಡು ಅವನಿಗೆ–ಇಲ್ಲಿ ವೇದಪಠನವು ನಡಿದಿದೆ. ಇತ್ತ ಕಡೆಗೆ ನೀನು ಬರಬೇಡ ಎಂದೆನಲು ಅವನು ಅದೇಕೆಂದು ಕೇಳಲು ಅವರು--ಇಲ್ಲಿ ಹೋಮವಸಿಕ್ಕಿದ್ದೇವೆ. ವೇದವನೋದುವದನ್ನು ಶಿವಭಕ್ತರು ಕೇಳಲಾಗದು. ಅದಕ್ಕೆ ಮಹಾಕಾಳಯ್ಯನು--ವೇದಜ್ಞನು

ಶಿವಾನುಭವ

ವರ್ಷ ೧೯	ಫೆಬ್ರುವರಿ ೧೯೪೫.	ಸಂಚಿಕೆ ೫

ಬಸವೇಶ್ವರನು ವೀರಶೈವ ಧರ್ಮವನ್ನು ವಿಶ್ವಧರ್ಮವನ್ನಾಗಿ ಮಾಡಿದ್ದು.

(ಲೇಖಕರು— ಶ್ರೀಯುತ ಎಸ್. ಜಿ. ಹಂಜಿ, ಎಂ. ಎ., ಬಿ. ಟಿ.
ಮು. ಬೈಲಹೊಂಗಲ.)

ಮನುಷ್ಯನು ಈ ಜಗತ್ತಿನಲ್ಲಿ ಸುಖಶಾಂತಿ ಸಮಾಧಾನಗಳನ್ನು ಪಡೆಯಬೇಕಾದರೆ ಅವನಿಗೆ ಧರ್ಮವು ಅವಶ್ಯವಾಗಿ ಬೇಕು. ಈ ಜಗತ್ತನ್ನು ನಿರ್ಮಾಣ ಮಾಡಿದ ಪರಮಾತ್ಮನ ಕೆಲವು ನಿಯಮಗಳಿಗನುಸಾರವಾಗಿ ಜಗತ್ತಿನ ಎಲ್ಲ ಚಲನವಲನಗಳು ನಡೆಯುತ್ತವೆ. ಆ ನಿಯಮಗಳನ್ನು ಉಲ್ಲಂಘಿಸಿದವರಿಗೆ ಪಾಪವೂ ದುಃಖವೂ ಉಂಟಾಗುವವು. ಮತ್ತು ಪರಮಾತ್ಮನ ನಿಯಮಗಳನ್ನು ಮನುಷ್ಯನು ತನ್ನ ದೇಶ, ಕಾಲ ಪರಿಸ್ಥಿತಿಗಳಿಗನುಸಾರವಾಗಿ ಏನಾದರೂ ಮಾಡಿಕೊಂಡು ಅವುಗಳಂತೆ ನಡೆಯುಲಿತ್ನಿಸುವನು. ಇವೇ ಬೇರೆ ಬೇರೆ ದೇಶಗಳಲ್ಲಿ ಬೇರೆ ಬೇರೆ ರೀತಿಯಿಂದ ಪ್ರಚಲಿತವಾದ ಧರ್ಮಗಳಾಗಿರುತ್ತವೆ. ಆದರೆ ಎಲ್ಲ ಧರ್ಮಗಳ ಉದ್ದೇಶವು ಒಂದೇ ಇರುತ್ತದೆ. ಒಂದು ಪಕ್ಷಿಯನ್ನು ಬೇರೆ ಬೇರೆ ದಿಕ್ಕುಗಳಲ್ಲಿ ನಿಂತು ಗುರಿಯಿಟ್ಟು ಹೊಡೆಯುವಂತೆ, ಒಂದು ಸಮುದ್ರವನ್ನು ಬೇರೆ ಬೇರೆ ಪ್ರದೇಶಗಳಲ್ಲಿ ಹರಿಯುವ ನದಿಗಳು ಬಂದು ಕೂಡುವಂತೆ ಎಲ್ಲ ಧರ್ಮಗಳು ಪರಮಾತ್ಮನ ಹತ್ತಿರವೇ ಮಾನವನನ್ನು ಒಯ್ಯುವಂತೆ ಪ್ರಯತ್ನಿಸುತ್ತವೆ. ಅವುಗಳ ಸ್ಥಾಪಕರು, ಪುನರುದ್ಧಾರಕರು ಒಳ್ಳೇ ಸದುದ್ದೇಶದಿಂದಲೇ ಅವುಗಳ ಪ್ರಚಾರವನ್ನು ಮಾಡಿದ್ದಾರೆ. ಅವರಲ್ಲಿರುವ ಪರಮಾತ್ಮನ ಬಗ್ಗೆ ಉತ್ಕಟ ಪ್ರೇಮ, ಎಲ್ಲ ಜನರು

ಪರಮಾತ್ಮನ ಮಕ್ಕಳು ಎಂಬ ಭಾವನೆ, ಮತ್ತು ಎಲ್ಲರೂ ತಮ್ಮ ಸಾಧನದಿಂದ ಪರಮಾತ್ಮನನ್ನು ಕಾಣಬಲ್ಲರೆಂಬ ವಿಚಾರಗಳು ಪ್ರತಿಯೊಂದು ಧರ್ಮದ ತತ್ವಗಳಲ್ಲಿ ಕಾಣಬಹುದು. ಆದರೆ ಜಗತ್ತಿನಲ್ಲಿ ಸ್ವಾರ್ಥವು ಹೆಚ್ಚಾಗಿ, ಮೇಲು ಕೀಳೆಂಬ ಭಾವನೆಗಳು ಪ್ರಬಲವಾಗಿ ಅಯಾ ಧರ್ಮಗಳಲ್ಲಿರುವ ವಿಶಾಲಭಾವನೆಗಳೆಲ್ಲ ಅಡಗಿ ಸಂಕುಚಿತ ಭಾವನೆಗಳು ಮಾತ್ರ ವಂಶಪರಂಪರೆಯಿಂದ ಬಂದು ಬಿಟ್ಟಿರುತ್ತವೆ. ಇವುಗಳ ಮೂಲಕ ಧರ್ಮದ ಹೆಸರಿನಿಂದ ಅಧರ್ಮದ ಮತ್ತು ದುಷ್ಟ ಕಾರ್ಯಗಳು ಹೆಚ್ಚಾಗಿ ಜನರಲ್ಲಿ ಸುಖಶಾಂತಿಗಳ ಅಭಾವವು ಹೆಚ್ಚಾಗಿರುವದು.

ಸದ್ಯಕ್ಕೆ ಜಗತ್ತಿನಲ್ಲಿ ಅನೇಕ ಧರ್ಮಗಳು ಪ್ರಚಲಿತವಿರುತ್ತವೆ. ಮತ್ತು ಅವುಗಳಲ್ಲಿ ಪುನಃ ಅನೇಕ ಮತಗಳು, ಪಂಗಡಗಳು ಇರುತ್ತವೆ. ಮತ್ತು ಪ್ರತಿಯೊಂದು ಧರ್ಮದಲ್ಲಿ ಸಾಮಾನ್ಯವಾಗಿ ಮಾನವನ ಉನ್ನತಿಗೆ ಸಹಾಯವಾಗುವ ತತ್ವಗಳು, ಇದ್ದೇ ಇರುತ್ತವೆ. ಆ ಆ ಧರ್ಮಸ್ಥಾಪಕರಾದರೂ ಒಳ್ಳೇ ವಿಶಾಲಹೃದಯದಿಂದ ಅವುಗಳ ತತ್ವಗಳನ್ನು ಮಾನವನ ಉದ್ಧಾರಕ್ಕಾಗಿಯೇ ನಿರ್ಮಿಸಿದರು. ಆದರೆ ಕಾಲ್ಯದ ಹುಗದಲ್ಲಿ ಧರ್ಮದ ನಿಜವಾದ ತತ್ವಗಳನ್ನು ಅರಿಯದೆ ತಮ್ಮ ಮನಸ್ಸಿಗೆ ಬಂದಂತೆ ಆ ತತ್ವಗಳನ್ನು ಹೊಂದಿಸಿಕೊಳ್ಳುತ್ತಾ ಸಂಕುಚಿತ ಭಾವನೆಯಿಂದ ವರ್ತಿಸಹತ್ತಿದ್ದಾರೆ. ಅದುದರಿಂದಲೇ ಜನರಲ್ಲಿ ನಿಜವಾದ ಬಂಧುತ್ವವು ಹೋಗಿ ಅಂತಃಕಲಹಗಳು ಹೆಚ್ಚಾಗಹತ್ತಿವೆ. ಮತ್ತು ಜನರಲ್ಲಿ ಧರ್ಮದ ನಿಜವಾದ ತತ್ವಗಳ ಜ್ಞಾನವಿಲ್ಲದೆ ಕೇವಲ ಪಂಗಡ ಪಂಗಡಗಳಲ್ಲಿಯೇ ಜಗಳಗಳು ಹೆಚ್ಚಾಗಿ ಐಕ್ಯಭಾವನೆಯು ಎಳ್ಳಷ್ಟೂ ಕಂಡು ಬರುವದಿಲ್ಲ

ನಮ್ಮ ಭರತ ಖಂಡದಲ್ಲಿ ಅತಿ ಪೂರ್ವಕಾಲದಲ್ಲಿ ದ್ರಾವಿಡರ ಒಂದು ಧರ್ಮವು ಪ್ರಚಾರದಲ್ಲಿತ್ತು. ಮುಂದೆ ಅದೇ ಬದಲಾಗುತ್ತಾ ಕಾಲ ಕಾಲಕ್ಕೆ ಏರ್ಪಾಡುಗಳನ್ನು ಹೊಂದುತ್ತಾ ಹಿಂದು ಧರ್ಮವೆಂದು ಹೆಸರನ್ನು ಪಡೆಯಿತು. ಇದರಲ್ಲಿಯೂ ಅನೇಕ ಮತಗಳಿದ್ದು ಶೈವರ ಧರ್ಮವೊಂದಿದ್ದು ಶಿವನೇ ಇವರ ದೇವನಾಗಿದ್ದನು. ಮತ್ತು ಋಗ್ವೇದದಲ್ಲಿ ರುದ್ರನನ್ನು ಹೊಗಳುವ ಸೂಕ್ತಗಳಿವೆ. ಈ ರುದ್ರನೇ ಮುಂದೆ ರುದ್ರಶಿವನೂ, ಪೌರಾಣಿಕ ಹುಗದಲ್ಲಿ ಶಿವನೂ ಆದನೆಂದು ಪ್ರಸಿದ್ಧವಿದೆ. ಉಪನಿಷತ್ತುಗಳಲ್ಲಿಯೂ ರುದ್ರ ಶಿವನ ಪ್ರತಿಷ್ಠೆ ಬಹಳ. ಆದುದರಿಂದ

ವೇದ, ಬ್ರಾಹ್ಮಣ, ಉಪನಿಷತ್ತುಗಳ ಕಾಲದಲ್ಲಿ ರುದ್ರ ಶಿವನು ಆರ್ಯರ ಪ್ರತಿಷ್ಠ ದೇವನು. ಇವನೇ ಮುಂದೆ ಪೌರಾಣಿಕ ಕಾಲದಲ್ಲಿ ಶಿವ, ಮಹಾದೇವ, ಶಂಕರನೆಂದು ಹೆಸರು ಪಡೆದು ತ್ರಿಮೂರ್ತಿಗಳಲ್ಲಿ ಒಬ್ಬನಾದನು. ಮತ್ತು ಶಿವನು ಅತಿ ಪ್ರಾಚೀನ ದೇವರಲ್ಲಿ ಒಬ್ಬನೆಂದು ಅನೇಕ ಆಧಾರಗಳಿವೆ. ಮಹಾಭಾರತದಲ್ಲಿ, ಅರ್ಜುನನು ಪಾಶುಪತಾಸ್ತ್ರದ ಸಲುವಾಗಿ ತಪಸ್ಸನ್ನು ಮಾಡಿ, ಮಣ್ಣಲಿಂಗವನ್ನು ಮಾಡಿ ಪೂಜಿಸಿ, ಶಿವನನ್ನು ಒಲಿಸಿ ಅದನ್ನು ಪಡೆದನೆಂದು ಕತೆಯಿದೆ. ವೇದವಿದ್ಯಾಪಾರಂಗತನೂ, ಶಿವಭಕ್ತನೂ ಆದ ರಾವಣನನ್ನು ಕೊಂದ ಬ್ರಹ್ಮಹತ್ಯೆಯ ಪಾಪವನ್ನು ಕಳೆದುಕೊಳ್ಳುವದಕ್ಕಾಗಿ ಶ್ರೀರಾಮಚಂದ್ರನು ರಾಮೇಶ್ವರ ಲಿಂಗವನ್ನು ಸ್ಥಾಪನ ಮಾಡಿದ್ದು, ಅದು ಹಿಂದುಸ್ತಾನದ ಜ್ಯೋತಿರ್ಲಿಂಗಗಳಲ್ಲಿ ಒಂದಾಗಿದ್ದು, ಪುರಾಣ ಮತ್ತು ಇತಿಹಾಸ ಪ್ರಸಿದ್ಧವಿದೆ. ಕೃಷ್ಣನೂ, ಕೂಡ ತಪಸ್ಸನ್ನು ಮಾಡಿ ಶಿವನಿಂದ ಎಂಟು ವರಗಳನ್ನು ಪಡೆದನೆಂದು ವರ್ಣನೆಯಿದೆ. ಪಾತಂಜಲಿಯೂ ಕೂಡ ಪಾಣಿನಿಯಲ್ಲಿ ತ್ರಿಶೂಲಧಾರಿಗಳಾದ ಶಿವಭಾಗವತರನ್ನು ವರ್ಣಿಸಿದ್ದಾನೆ. ಕ್ರಿಸ್ತ ಶಕ ಪೂರ್ವದಲ್ಲಿ ಜೈನ ಶಿಲಾಶಾಸನಗಳಲ್ಲಿಯೂ ಕೂಡ ಶಿವನೆಂಬ ಹೆಸರು ಕಂಡು ಬರುವದು. ಮಹಾಕವಿಗಳಾದ ಕಾಲಿದಾಸ, ಬಾಣ, ಭವಭೂತಿ ಇವರು ಶಿವನನ್ನು ವರ್ಣಿಸಿರುವರು. ಹೀಗೆ ಇನ್ನೂ ಕೆಲವು ಆಧಾರಗಳಿರುವವು.

ಶೈವ ಧರ್ಮವು ಹಿಂದೂ ಧರ್ಮದ ಒಂದು ಅಂಗವಾಗಿದ್ದು, ಇದರಲ್ಲಿಯೂ ಕೆಲವು ಪಂಥಗಳಿವೆ. ಅವುಗಳಲ್ಲಿ ಮಾಹೇಶ್ವರರು ಅಥವಾ ಕಾಶ್ಮೀರ ಶೈವರು, ಶೈವ ಸಿದ್ಧಾಂತಿಗಳು, ವೀರಶೈವರು ಅಥವಾ ಲಿಂಗವಂತರು, ಕಾಳಾಮುಖರು. ಮೊದಲಾದವರ ಪಂಥಗಳು ಮುಖ್ಯವಾಗಿವೆ. ಇನ್ನು ಹಿಂದೂ ಧರ್ಮ, ಶೈವ ಧರ್ಮ, ಮತ್ತು ವೀರಶೈವ ಧರ್ಮ, ಇವುಗಳನ್ನು ಯಾರು ಪ್ರಸ್ಥಾಪಿಸಿದರೆಂಬುದನ್ನು ಹೇಳಲಿಕ್ಕೆ ಬರುವದಿಲ್ಲ ಇವು ಕಾಲ ಕಾಲಕ್ಕೆ ಅನೇಕ ತತ್ವಜ್ಞಾನಿಗಳಿಂದ, ಧರ್ಮ ಸುಧಾರಕರಿಂದ ಮಾರ್ಪಾಡುಗಳನ್ನು ಹೊಂದುತ್ತ ಬಂದಿವೆ. ವೀರಶೈವ ಧರ್ಮವಾದರೂ ಬಹು ಪ್ರಾಚೀನವಾಗಿದ್ದು ನಡುವೆ ಅನೇಕ ಬದಲಾವಣೆಗಳನ್ನು ಹೊಂದುತ್ತಾ ೧೨ ನೆಯ ಶತಮಾನದಲ್ಲಿ ಬಸವಾದಿ ಪ್ರಮಥರ ನೇತೃತ್ವದಲ್ಲಿ ಅದು ಒಳ್ಳೇ ಪರಿಪೂರ್ಣತೆಯನ್ನೂ ಪರಿಪಕ್ವ ಸ್ಥಿತಿ

ಯನ್ನೂ ಹೊಂದಿ, ಭರತ ಖಂಡದಲ್ಲಿ ಒಂದು ಮಾದರಿಯ ಧರ್ಮವಾಗಿ ಒಳ್ಳೇ ವೈಭವದಿಂದ ಪ್ರಸಾರವಾಯಿತು.

ಬಸವೇಶ್ವರ ಮೊದಲಾದ ಶಿವಶರಣರ ಪೂರ್ವದಲ್ಲಿ ಈ ಧರ್ಮದ ಸ್ವರೂಪವು ಹೇಗೆಯೇ ಇರಲಿ, ಅದರ ಪೂರ್ಣಸ್ವರೂಪವ ಈಗ ಸ್ಪಷ್ಟವಾಗಿ ಕಂಡು ಬರುವದು. ಬಸವೇಶ್ವರನು ಚಿಕ್ಕಂದಿನಿಂದಲೇ ಧರ್ಮದ ನಿಜವಾದ ತತ್ವಗಳನ್ನು ಕಂಡು ಹಿಡಿದು ಇಡೀ ಮಾನವ ಜನಾಂಗಕ್ಕೆ ಅನ್ವಯಿಸುವಂತೆ ವೀರಶೈವ ಧರ್ಮವನ್ನು ವಿಶ್ವಧರ್ಮವನ್ನಾಗಿ ಮಾಡಿದನು. ಅವನು ವೇದ, ಆಗಮ, ಉಪನಿಷತ್ತು, ಪುರಾಣ, ಇತಿಹಾಸ ಮೊದಲಾದ ಗ್ರಂಥಗಳನ್ನು ಸಂಪೂರ್ಣವಾಗಿ ಅಭ್ಯಾಸ ಮಾಡಿ, ತುಲನಾತ್ಮಕ ದೃಷ್ಟಿಯಿಂದ ಅವುಗಳನ್ನು ವಿಮರ್ಶಿಸಿ ಎಲ್ಲ ಜನರಿಗೂ ಆಚರಿಸಲಿಕ್ಕೆ ಸುಲಭಸಾಧ್ಯವಾದ ಧರ್ಮವನ್ನು ಪ್ರಸಾರ ಮಾಡಿದನು. ಮತ್ತು ಈ ಗ್ರಂಥಗಳಲ್ಲಿಯ ಉದಯೋಗವಿಲ್ಲದ ಹಿಂಸಾತ್ಮಕ ತತ್ವಗಳನ್ನು ಬಿಟ್ಟು ಒಳ್ಳೇ ತತ್ವಗಳನಷ್ಟೇ ಆಯ್ಕೆಕೊಂಡನು. ಅಂದರೆ ಇವನು ಕೇವಲ ಗ್ರಂಥಸ್ಥ ಧರ್ಮವನ್ನು ಪ್ರಚಾರ ಮಾಡಲಿಲ್ಲ ಉಳಿದ ಶಿವಶರಣರಂತೆ ಅವನೂ ಪರಮಾತ್ಮನ ಸಾಕ್ಷಾತ್ಕಾರವನ್ನು ಪಡೆದವನಿದ್ದು ಸತ್ಯ, ಪ್ರೇಮಗಳಿಂದ ಕೂಡಿದ, ನಿಜವಾದ ಮೋಕ್ಷವನ್ನು ಸಾಧಿಸುವ, ಸದಾ ಸುಖ ಶಾಂತಿಗಳನ್ನು ದಯಪಾಲಿಸುವ, ಪಂಡಿತ ಪಾಮರರಿಗೂ ಕೂಡ ಸುಲಭವಾಗಿ ಆಚರಿಸಲಿಕ್ಕೆ ಬರುವ, ತನ್ನ ಸಂಪೂರ್ಣ ಅನುಭವದಿಂದೊಡಗೂಡಿದ ವಿಶ್ವಧರ್ಮ (*Universal Religion*) ವನ್ನು ಪರಿಚಿಸಿದನು. ಈ ಧರ್ಮದಲ್ಲಿಯ ತತ್ವಗಳು ಸಕಲ ಮಾನವರಿಗೂ ಆದರಣೀಯವಾಗಿದ್ದು ಪರಮಾತ್ಮನ ಪ್ರೇರಣೆಯಿಂದಲೇ ಈ ಕಾರ್ಯವು ಆಯಿತೆಂದು ಹೇಳಬಹುದು. ಆಯಾ ಕಾಲಪರಿಸ್ಥಿತಿಗನುಸಾರವಾಗಿ ಒಳ್ಳೇ ಮಾರ್ಪಾಡುಗಳನ್ನು ಹೊಂದುತ್ತಾ ಬಂದ ವೀರಶೈವ ಧರ್ಮವು ಒಳ್ಳೇ ಸುಸಂಸ್ಕೃತವಾದ ಧರ್ಮವಾಯಿತು. ಒಂದೊಂದು ಧರ್ಮದಲ್ಲಿ ಒಂದೊಂದು ಉತ್ತಮ ತತ್ವಗಳಿರುವವು. ಆದರೆ ಪ್ರತಿಯೊಂದು ಧರ್ಮದ ಉತ್ಕೃಷ್ಟ ತ್ರಮ ಗುಣಗಳು ಮತ್ತು ತತ್ವಗಳು ಈ ಧರ್ಮದಲ್ಲಿ ಕಂಡುಬರುತ್ತವೆ. ಆದುದರಿಂದ ಈ ಧರ್ಮವು ಎಲ್ಲ ಧರ್ಮಗಳ ಸಾರಸಂಗ್ರಹವೇ ಎಂದು ಹೇಳಬಹುದು. ಇದಲ್ಲದೆ ವೇದ, ಆಗಮ, ಉಪನಿಷತ್ತು, ಪುರಾಣ, ಇತಿಹಾಸ ಮೊದಲಾದವುಗಳ ಸಾರಸಂಗ್ರಹವಾದರೂ ವೀರಶೈವ

ಧರ್ಮವೇ ಎಂದು ಅನ್ನಬಹುದು. ಇಂಥ ಸರ್ವಾಂಗ ಸುಂದರವಾದ ಪರಿಪೂರ್ಣವಾದ, ಸುರಂಸ್ಪೃಶ್ಯವಾದ, ಪರಿಪಕ್ವ ಸ್ಥಿತಿಯನ್ನು ಹೊಂದಿದ, ವೀರಶೈವ ಧರ್ಮವನ್ನು ಬಸವೇಶ್ವರನು ವಿಶ್ವಧರ್ಮವನ್ನಾಗಿ ಹೇಗೆ ಮಾಡಿದನೆಂಬದನ್ನು ನೋಡುವಾ

ಮೊದಲು ವೀರಶೈವ ಧರ್ಮದ ಮೂಲ ತತ್ವಗಳನ್ನು ತಿಳಿಕೊಳ್ಳುವದು ಅವಶ್ಯವು.

ವಿಶಜ್ಞೇನೋಚ್ಯತೆ ವಿದ್ಯಾ ಶಿವಜ್ಞೇನೈಕ್ಯ ಬೋಧಿನಾ।
ತಸ್ಮಾಂ ರಮಂತೆ ಯೇ ಶೈವಾ ವೀರಶೈವಾಸ್ತ ತೇ ಮತಾಃ ॥
ವೇದಾಂತ ಜನ್ಯಂ ಯದ್ಜ್ಞಾನಂ ವಿದ್ಯೇತಿ ಪರಿಕೀರ್ತ್ಯತೇ।
ವಿದ್ಯಾಯಾಂ ರಮತೇ ಯಃ ಸ ವೀರ ಇತ್ಯಭಿಧೀಯತೇ ॥
ವಿದ್ಯಾಯಾಂ ಶಿವರೂಪಾಯಾಂ ರಮಂತೇ ಯೇ ವಿಶೇಷತಃ।
ತಸ್ಮಾದೇತೇ ಮಹಾಭಾಗಾ ವೀರಶೈವ ಇತಿ ಸ್ಮೃತಾಃ ॥

ಸಿದ್ಧಾಂತ ಶಿಖಾಮಣಿಯೆಂಬ ಗ್ರಂಥದೊಳಗಿನ ಮೇಲಿನ ಪದ್ಯದಿಂದಲೂ ಮತ್ತು ಶ್ರೀ ನೀಲಕಂಠಾಚಾರ್ಯರ ಕ್ರಿಯಾಸಾರ ಎಂಬ ಗ್ರಂಥದೊಳಗಿನ ಪದ್ಯಗಳಿಂದಲೂ ಶಿವಶೈವೈಕ್ಯ ಸಾಧನ ಕುಶಲರೂ ಶಿವಜ್ಞಾನ ಸಂಪನ್ನರೂ ವೀಲ್ಲಂಘಿತವೂ ವಿರೋಧರಹಿತವೂ ಆದ ಶಿವಭಕ್ತಿಯುಕ್ತರೂ ವೇದೋಕ್ತವಾದ ಲಿಂಗಧಾರಣ ಸಂಪನ್ನರೂ ಮೋಕ್ಷ ಮಾತ್ರ ಫಲಾಪೇಕ್ಷೆಯುಳ್ಳವರೂ ಆದವರೇ ವೀರಶೈವರೆಂದು ಕರೆಯಿಸಿಕೊಳ್ಳುತ್ತಾರೆ.

"ವೀರ" ನೆಂದರೆ ಶೂರ "ಶೈವ" ನೆಂದರೆ ಶಿವನನ್ನು ಪೂಜಿಸತಕ್ಕವನು. ಶಿವನೆಂದರೆ ಸತ್ಯವು. ಆದ ದಿಂದ ವೀರಶೈವನೆಂದರೆ ಸತ್ಯ ಮೂರ್ತಿಯನ್ನು ನಂಬಿ ಆ ಶಿವನಲ್ಲಿರುವ ಎಲ್ಲ ಶಕ್ತಿಗಳು ತನ್ನಲ್ಲಿರುವವೆಂದು ತಿಳಿದು ಸಂಸಾರದ ಕಷ್ಟನಷ್ಟಗಳನ್ನು ಒಳ್ಳೇ ಧೈರ್ಯದಿಂದ ಎದುರಿಸುವವನು. ಅವನು ಸಂಸಾರದ ಕಷ್ಟಗಳಿಗೆ ಅಂಜುವ ಕಾರಣವಿಲ್ಲ. ಸಂಸಾರದಲ್ಲಿಯೂ ಇದ್ದುಕೊಂಡು ಭಕ್ತಿ, ಜ್ಞಾನ, ಕರ್ಮ ಯೋಗಗಳಿಂದ ಒಡಗೂಡಿದ ಪರಮಾತ್ಮಯೋಗ ಅಥವಾ ಶಿವಯೋಗವನ್ನು ಆಚರಿಸತಕ್ಕವನು. ಇದರಿಂದ ಜಗತ್ತು ಶಿವ ಮತ್ತು ತಾನು ಈ ಮೂರೂ ವಸ್ತುಗಳು ಒಂದೇ ಎಂಬ ಅದ್ವೈತ ಜ್ಞಾನವುಂಟಾಗುವದು. ಎಲ್ಲ ಕಾರ್ಯಗಳನ್ನು ಶಿವಾರ್ಪಣ ಬುದ್ಧಿಯಿಂದ ಮಾಡುತ್ತಾ ಶಿವನಲ್ಲಿ

ಒಂದಾಗುವನು. ಈ ಜಗತ್ತು ಶಿವನ ಭಕ್ತಿ ಸ್ವರೂಪವು. ಜೀವನು ಭಕ್ತಿಯಿಂದ ಶಿವನೊಳಗೆ ಕೂಡಬಲ್ಲನು.

ವೀರಶೈವ ಧರ್ಮವು ಹಿಂಸಾಮಯ ಯಜ್ಞಯಾಗಾದಿಗಳನ್ನು ಮತ್ತು ಫಲಾಪೇಕ್ಷೆಯುಳ್ಳ ವಿಧಿನಿಷೇಧಗಳನ್ನು ಒಗೊಂಡ ವೇದದ ಕರ್ಮಕಾಂಡವನ್ನು ಬಿಟ್ಟು ಜ್ಞಾನಕಾಂಡವನ್ನು ಮಾತ್ರ ಸ್ವೀಕರಿಸಿರುತ್ತದೆ. ವೀರಶೈವನು ವಿಚಾರವಾದಿ (*Ration alist*)ಯಿದ್ದು ಅನುಭವ ಮತ್ತು ಸದಸದ್ವಿವೇಕ ಇವುಗಳಿಂದ ಪರಮಾರ್ಥವೆನಿಸಿರುವ ಮೂಢರೂಢಿ, ಅಂಧವಿಶ್ವಾಸ, ಅಂಧಾನುಕರಣ. ದುರಾಗ್ರಹ ಮತ್ತು ದುರಭಿಪ್ರಾಯಗಳನ್ನು ಖಂಡಿಸುವನು ಅವನು ಸತ್ಯ ಪ್ರೇಮಿಯಿದ್ದು ಅಹಿಂಸಾ ಧರ್ಮದಿಂದ ಜಗತ್ತಿನಲ್ಲಿ ಪ್ರಭುರಾಜ್ಯ ಅಥವಾ ದೇವರಾಜ್ಯ (*Kingdom of God*) ವನ್ನು ಸ್ಥಾಪಿಸುವದಕ್ಕಾಗಿಯೇ ಜೀವಿಸುತ್ತಾನೆ.

ವೀರಶೈವ ಧರ್ಮದಲ್ಲಿ ಏಕದೇವತೋಪಾಸನೆ ಅಂದರೆ ಒಬ್ಬನೇ ದೇವರನ್ನು ಪೂಜಿಸುವದು ಆದೆ. ಆ ದೇವನು (*Supreme God*) ಎಲ್ಲ ಲಕ್ಷಣಗಳಿಂದ ಪರಿಪೂರ್ಣನು, ಸಚ್ಚಿದಾನಂದನು, ನಿತ್ಯಪರಿಪೂರ್ಣನು, ಶಕ್ತಿಯುತನು, ಜಗತ್ತಿನ ಸೃಷ್ಟಿ ಸ್ಥಿತಿಲಯಗಳಿಗೆ ಅವನ ಶಕ್ತಿಯೇ ಕಾರಣವು ಅಷ್ಟಾವರಣ, ಪಂಚಾಚಾರ, ಷಟ್‌ಸ್ಥಲ ಇವು ವೀರಶೈವ ಧರ್ಮದ ಮೂಲ ತತ್ವಗಳು. ಗುರು, ಲಿಂಗ, ಜಂಗಮ, ಪಾದೋದಕ, ಪ್ರಸಾದ, ವಿಭೂತಿ, ರುದ್ರಾಕ್ಷಿ, ಮತ್ತು ಮಂತ್ರ ಇವು ಅಷ್ಟಾವರಣಗಳು. ಗುರು, ಲಿಂಗ, ಜಂಗಮಗಳು ಪೂಜಾ ವಸ್ತುಗಳು ಮತ್ತು ಪರಮಾತ್ಮನ ಪ್ರತಿನಿಧಿಗಳು. ಭಸ್ಮರುದ್ರಾಕ್ಷಿ ಮತ್ತು ಶಿವಮಂತ್ರ ಇವುಗಳನ್ನು ಪರಮಾತ್ಮನ ಪೂಜೆ ಸಾಧನೆಗಾಗಿ ಉಪಯೋಗಿಸಬೇಕು. ಮತ್ತು ಪಾದೋದಕ ಪ್ರಸಾದಗಳು ಇವು ಗುರು ಲಿಂಗ ಜಂಗಮರು ಕೊಟ್ಟ ಫಲಗಳು. ಲಿಂಗಾಚಾರ, ಸದಾಚಾರ, ಗಣಾಚಾರ, ಭೃತ್ಯಾಚಾರ ಮತ್ತು ಶಿವಾಚಾರ ಇವು ಪಂಚಾಚಾರಗಳು. ಲಿಂಗವಿಲ್ಲದೆ ಬೇರೆ ಯಾವದೂ ಇಲ್ಲವೆಂದು ತಿಳಿದು ನಡೆಯುವದೇ ಲಿಂಗಾಚಾರ. ಶುದ್ಧ ಕಾಯಕವನ್ನೇ ಮಾಡಿ, ಗುರು, ಲಿಂಗ, ಜಂಗಮಕ್ಕೆ ಮಾಡಿ ನೀಡಿ ಸತ್ಯದಿಂದ ನಡೆಯುವದೇ ಸದಾಚಾರ. ಶಿವನಿಂದೆ, ಗುರುನಿಂದೆ, ಭಕ್ತನಿಂದೆ, ಪ್ರಮಥನಿಂದೆ ಇವುಗಳನ್ನು ಕೇಳದಿರುವದೇ ಗಣಾಚಾರ. ಶಿವಶರಣರೇ ಹಿರಿಯರಾಗಿ ತಾವು ಕಿರಿಯರಾಗಿ ಇರುವದೇ ಭೃತ್ಯಾಚಾರ. ಶಿವಭಕ್ತರಲ್ಲಿ ಜಾತಿ

ಮತ ಕುಲಗಳನ್ನು ನೋಡದೆ ಶಿವ ಪ್ರಸಾದ ತೆಗೆದುಕೊಳ್ಳುವದೇ ಶಿವಾಚಾರ. ಭಕ್ತಿ, ಮಹೇಶ, ಪ್ರಸಾದಿ, ಪ್ರಾಣಲಿಂಗಿ, ಶರಣ. ಐಕ್ಯ ಇವೆ ಷಟ್‌ಸ್ಥಲಗಳು. ಕರ್ಮ, ಜ್ಞಾನ, ವೈರಾಗ್ಯ, ಭಕ್ತಿ ಇವುಗಳಲ್ಲಿ ಭಕ್ತಿಯೇ ಪ್ರಮುಖ್ಯ. ದಾಸೋಹಂ ಭಾವ ಅಂತಃಕರಣ ಶುದ್ಧಿ, ಮನ ಶುದ್ಧಿ, ಬುದ್ಧಿಯ ನಿರ್ಮಲತೆ, ಮಹಾಜ್ಞಾನ ಹಾಗೂ ಶಿವೈಕ್ಯ ಇವೇ ಷಟ್‌ಸ್ಥಲದ ಲಕ್ಷಣಗಳು.

ವೀರಶೈವರಲ್ಲಿ ಬ್ರಾಹ್ಮಣಾದಿ ಚಾತುರ್ವರ್ಣಗಳಿಲ್ಲ. ಅವುಗಳ ಸಂಬಂಧ ಕರ್ಮಗಳಾಗಲಿ, ಪಂಚಸೂತಕಗಳಾಗಲೀ ಇಲ್ಲ. ಅದುದರಿಂದ ಇವರು "ಅತಿವರ್ಣಿಗಳು" ಮತ್ತು ಇವರಿಗೆ ಬ್ರಹ್ಮಚರ್ಯಾದಿ ನಾಲ್ಕು ಆಶ್ರಮಗಳ ಸಂಬಂಧ ಕರ್ಮಗಳಿಲ್ಲ. ಅದುದರಿಂದ ಇವರಿಗೆ ಅತ್ಯಾಶ್ರಮಿಗಳೆಂದು ಹೆಸರು ಬಂದಿದೆ. ವೀರಶೈವರೆಲ್ಲರೂ ಸಮತಾಭಾವವುಳ್ಳವರು. ಸಣ್ಣವರು, ದೊಡ್ಡವರು, ಸ್ತ್ರೀಯರು, ಪುರುಷರು, ಹುಡುಗರು, ಎಲ್ಲರೂ ಪರಸ್ಪರ ಪೂಜ್ಯರು. ಸ್ತ್ರೀ ಪುರುಷರಿಗೆ ಧಾರ್ಮಿಕ ಸಂಸ್ಕಾರ ಮತ್ತು ಕ್ರಿಯೆಗಳ ಭೇದವಿಲ್ಲ. ಉದ್ಯೋಗ ಭೇದದಿಂದಾಗಲಿ, ಜನ್ಮದಿಂದಾಗಲಿ, ಯಾರೂ ಮೇಲು ಕೀಳಾಗುವದಿಲ್ಲ. ವೀರಶೈವರ ಕಾಯಕ ತತ್ವವು ಶ್ರಮ ಗೌರವ (*Digni ty of labour*) ತತ್ವವನ್ನು ಆಚರಣೆಯಲ್ಲಿ ತಂದು ಪರಿಪೂರ್ಣ ಎಲ್ಲರನ್ನೂ ಸುಸಂಪನ್ನರನ್ನಾಗಿ ಮಾಡುವದು.

ಒಂದು ಧರ್ಮವು ವಿಶ್ವಧರ್ಮವಾಗಬೇಕಾದರೆ ಅದರಲ್ಲಿ ಭೂಮಂಡಲದಲ್ಲಿರುವ ಸಕಲ ಮಾನವಂಗೂ ಯಾವ ತರದ ಭೇದ ಭಾವಗಳಿಲ್ಲದೆ ಅನ್ವಯಿಸುವ ತತ್ವಗಳಿರಬೇಕಾಗುವದು ಮತ್ತು ಅದರಿಂದ ಪ್ರತಿಯೊಬ್ಬ ವ್ಯಕ್ತಿಯು ತನ್ನ ಸತತ ಸಾಧನದಿಂದ ಆತ್ಮೋನ್ನತಿಯನ್ನು ಮಾಡಿಕೊಂಡು ತಿಡೀ ಮಾನವದ ಉನ್ನತಿಗಾಗಿ ಪ್ರಯತ್ನ ಮಾಡಲಿಕ್ಕೆ ಅನುವು ಆಗಬೇಕು. ಕೇವಲ ತನ್ನದೊಂದು ಉನ್ನತಿಯನ್ನು ಮಾಡಿಕೊಂಡು ಸುಮ್ಮನೆ ಕುಳಿತರೆ ಉಳಿದವರ ಬಗ್ಗೆ ಯಾರು ಲಕ್ಷ ಕೊಡಬೇಕು? ಬಸವೇಶ್ವರನು ವೀರಶೈವ ಧರ್ಮವನ್ನು ಯಾವ ಜಾತಿ ಭೇದಗಳಿಲ್ಲದೆ ಎಲ್ಲ ಜಾತಿಯವರಿಗೂ ಸ್ವೀಕರಿಸಲಿಕ್ಕೆ ಬಾಗಿಲವನ್ನು ತೆರೆದಿಟ್ಟನು. ಆದರಿಂದ ಅಸ್ಪೃಶ್ಯರು, ಸ್ತ್ರೀಯರು, ಪಾಪಿಷ್ಠರು ಸಹ ಪುನೀತರಾಗಿ

ಸನ್ಮಾರ್ಗಕ್ಕೆ ಹತ್ತಿ ತಮ್ಮ ಸದ್ಗತಿಯನ್ನು ಹೊಂದಿ, ತಮ್ಮ ಸಮಾಜದ ಉನ್ನತಿಯನ್ನು ಮಾಡಿದರೂ ವೀರಶೈವ ಧರ್ಮವನ್ನು ಸ್ವೀಕಾರ ಮಾಡಿದ ಪ್ರತಿಯೊಬ್ಬ ವ್ಯಕ್ತಿಯು ಎಲ್ಲರಂತೆ ಸಮಾನನು ಎಂದು ಸಾರಿ ಹೇಳಿ ಮತ್ತು ಅವನಿಗೆ ಸಮಾಜದಲ್ಲಿ ಯೋಗ್ಯ ಸ್ಥಾನವನ್ನು ಕಲ್ಪಿಸಿ ಕೊಟ್ಟನು. ಇದರಿಂದ ವ್ಯಕ್ತಿ ಹಾಗೂ ಸಮಾಜ ಇವುಗಳ ಪರಸ್ಪರ ನಿಕಟ ಸಂಬಂಧ ಉತ್ಪನ್ನವಾಗಿ ಸುಸಂಘಟಿತವಾದ ಸಮಾಜವು ಉತ್ಪನ್ನವಾಯಿತು.

ಪರಮಾತ್ಮನ ಬಗ್ಗೆ ಅನುಭವ ಅಥವಾ ಸಾಕ್ಷಾತ್ಕಾರವೂ ವಿಶ್ವ ಧರ್ಮದ ಮುಖ್ಯ ಲಕ್ಷಣವಾಗಿದ. ಬಸವೇಶ್ವರನು ಧರ್ಮದ ಎಲ್ಲ ಗ್ರಂಥಗಳನ್ನ ಸಂಪೂರ್ಣವಾಗಿ ವಿಮರ್ಶಾತ್ಮಕ ದೃಷ್ಟಿಯಿಂದ ಪರಿಶೀಲಿಸಿ ಸತ್ಯ ಧರ್ಮದ ಮತ್ತು ವಿಶ್ವಧರ್ಮದ ತತ್ವಗಳನ್ನು ಕಂಡು ಹಿಡಿದಿದ್ದನು. ಇದಲ್ಲದೆ ಅವನು ಪರಮಾತ್ಮನ ಸಾಕ್ಷಾತ್ಕಾರವನ್ನು ಪಡೆದ ಸಂಪೂರ್ಣವಾಗಿ ದೈವಸಿದ್ಧಿಯನ್ನು ಹೊಂದಿದ್ದನು. ಅದರಿಂದಲೇ ಅತಸ್ತತ್ವದ ಅನುಭವವನ್ನು, ಧಾರ್ಮಿಕ ಸ್ಫೂರ್ತಿಯನ್ನು, ಹಾಗೂ ಬುದ್ಧಿಯನ್ನು ಮತ್ತು ನಿಶ್ಚಲವಾದ ಭಕ್ತಿಯನ್ನು ಕಂಡನು. ಭರತಖಂಡದ ಬೇರೆ ಬೇರೆ ಭಾಗಗಳಿಂದ ಜನರು ತಂಡ ತಂಡವಾಗಿ ಬಂದು ವೀರಶೈವ ಧರ್ಮವನ್ನು ಸ್ವೀಕರಿಸಿದರು. ಬಸವೇಶ್ವರನ ಪೂರ್ವದಲ್ಲಿ ಈ ಧರ್ಮವು ಅಸ್ತಿತ್ವದಲ್ಲಿದ್ದರೂ ಇಷ್ಟು ಭಂದಿಂದ ಪ್ರಸಾರವಾಗಿದ್ದಿಲ್ಲ ಇದಕ್ಕೆ ಮುಖ್ಯ ಕಾರಣವೆಂದರೆ ಬಸವೇಶ್ವರನ ದಿವ್ಯ ಪ್ರಭಾವವೇ ಎಂದು ಹೇಳಬಹುದು.

ವಿಶ್ವಧರ್ಮದಲ್ಲಿ ಪ್ರತಿಯೊಬ್ಬ ವ್ಯಕ್ತಿಯ ಆಧ್ಯಾತ್ಮಿಕ ಉನ್ನತಿಗೆ ಸ್ಥಾನವಿದ್ದು, ಅವನು ತನ್ನಬಲದಿಂದ ಈ ಲೌಕಿಕ ಬಂಧನಗಳನ್ನು ದಾಟಿ ಒಂದು ತರದ ಅನುಪಮವಾದ, ದಿವ್ಯ ಆತ್ಮಾನಂದವನ್ನು ಪಡೆಯುವನು. ಅವನು ಈ ಸಂಸಾರದಲ್ಲಿದ್ದರೂ ಕೂಡ ಅದರ ಸಂಪರ್ಕವಿಲ್ಲದೆ ಕೆಸರಿನಲ್ಲಿ ಬೆಳೆದ ಕಮಲದಂತೆ ನಿರ್ಲಿಪ್ತನಾಗಿರುವನು. ಈ ಸಂಸಾರವೇ ಅವನ ಸಾಧನದ ಭೂಮಿ. ಅವನು ಗಿರಿ ಗಂವರಗಳಿಗೆ ಹೋಗಿ ಕಠಿಣವಾದ ಉಗ್ರ ತಪಸ್ಸನ್ನು ಕೈಕೊಳ್ಳುವ ಕಾರಣವಿಲ್ಲ. ಉಪವಾಸ ಮೊದಲಾದ ವ್ರತಗಳನ್ನು ಮಾಡುವ ಅವಶ್ಯವಿಲ್ಲ. ಆದರೆ ಪರಮಾತ್ಮನ ಅನನ್ಯ ಭಕ್ತನಾಗಿ ತನ್ನ ಸಂಸಾರವನ್ನು ಸುಸೂತ್ರವಾಗಿ ಸಾಗಿಸಿಕೊಂಡು ಅದರ ತೊಡರು ಎಡರುಗಳನ್ನು ಒಳ್ಳೇ ಆನಂದದಿಂದ, ಧೈರ್ಯದಿಂದ ಸಹಿಸಿ ಮತ್ತು ಜಾಗರೂಕತೆಯಿಂದ ದಾಟಿ ಹೆಚ್ಚಿನ ತರಗತಿಯ

ಆನಂದವನ್ನು ಪಡೆಯುವನು. ಬಸವೇಶ್ವರನು ಇವೇ ತತ್ವಗಳನ್ನು ಅಗ ಪ್ರಚಾರದಲ್ಲಿ ತಂದನು

ವಿಶ್ವಧರ್ಮದಲ್ಲಿ ದೇವರ ಬಗ್ಗೆ ಉದಾತ್ತವಾದ ಸುಸಂಸ್ಕೃತವಾದ ಕಲ್ಪನೆಗಳಿರುವವು. ಒಬ್ಬನೇ ಒಬ್ಬ ಪರಮಾತ್ಮನು. ಅವನು ವಿಶ್ವದ ಪ್ರತಿಯೊಂದು ವಸ್ತುವಿನಲ್ಲಿದ್ದಾನೆ ಅವನು ಮಾನವನ ತಾಯಿ ತಂದೆ, ಪಿತಪಿಂತಕನು. ಸಿಕ್ಕ ಸಿಕ್ಕ ನೂರಾ ಎಂಟು ದೇವತೆಗಳು ದೇವರಲ್ಲ. ಮೂಢ ಧರ್ಮದ ಕಲ್ಪನೆಗಳಿಗಂತೂ ಎಳ್ಳಷ್ಟೂ ಅವಕಾಶವಿರುವದಿಲ್ಲ.

ವೀರಶೈವ ಧರ್ಮದ ವಸ್ತು ವಿಶ್ವ ಧರ್ಮದ ಮೂಲ ತತ್ವಗಳು ಹೀಗಿದ್ದು ಬಸವೇಶ್ವರನು ಅವುಗಳ ತಳಹದಿಯ ಮೇಲೆ ವೀರಶೈವ ಧರ್ಮವನ್ನು ಪುನುರುಜ್ಜೀವನಗೊಳಿಸಿದನು. ನಮ್ಮ ಭರತ ಖಂಡದಲ್ಲಿ ಅನೇಕ ಧಾರ್ಮಿಕ ಪಂಗಡಗಳಿದ್ದು ಅವುಗಳಲ್ಲಿ ಯಾವಾಗಲೂ ಅಂತಃ ಕಲಹಗಳಿರುತ್ತವೆ. ಈ ಸ್ಥಿತಿಯು ಮೊದಲಿನ ಕಾಲದಲ್ಲಿಯೂ ಇತ್ತೆಂದು ಕಂಡು ಬರುತ್ತದೆ. ಬಸವೇಶ್ವರನು ಅವತರಿಸಿದ ಕಾಲದಲ್ಲಿಯೂ ಕರ್ನಾಟಕದಲ್ಲಿ ಇದೇ ಸ್ಥಿತಿಯುಂಟಾಗಿತ್ತು. ಆಗ ಬೌದ್ಧ, ಜೈನ ಧರ್ಮಗಳು ಊರ್ಜಿತ ಸ್ಥಿತಿಯಲ್ಲಿದ್ದವು. ಮತ್ತು ಮುಂದೆ ಪಾಶುಪತ, ಕಾಳಾಮುಖ ಮೊದಲಾದ ಅನೇಕ ಶೈವ ಪಂಥಗಳು ಪ್ರಸಾರವಾದವು. ಇವುಗಳಲ್ಲೆಲ್ಲ ಪರಸ್ಪರ ಜಗಳಾಟ ಹೋರಾಟ ಆಗಾಗ್ಗೆ ಜರಗುತ್ತಿದ್ದವು. ಹಾಗೆಯೇ ಶೈವ ವೈಷ್ಣವ ಪಂಥಗಳಲ್ಲಿಯೂ ವೈಮನಸ್ಸು ಇದ್ದೇ ಇತ್ತು. ಇಂತಹ ಪರಿಸ್ಥಿತಿಯಲ್ಲಿಯೇ ಬಸವೇಶ್ವರನು ಅವತರಿಸಿ ವೀರಶೈವ ಧರ್ಮವನ್ನು ಪ್ರಸಾರ ಮಾಡಿದನು. ಅವನು ಮೊದಲು ಪರಮಾತ್ಮನು ಒಬ್ಬನೇ ಇದ್ದಾನೆ, ಅವನು ಎಲ್ಲ ವಸ್ತುಗಳಲ್ಲಿ ಇದ್ದಾನೆ ಎಂಬ ತತ್ವವನ್ನು ಸಾರಿ ಹೇಳಿದನು.

೧ ದೇವನೊಬ್ಬ, ನಾಮ ಹಲವು. ಪರನು ಪತಿವ್ರತೆಗೆ ಗಂಡನೊಬ್ಬ ಮತ್ತೊಂದಕ್ಕೆಂದಿಗಿದರೆ ಕವಿ ಮೂಗ ಕೊಯ್ವನು. ಹಲವು ದೈವದ ಬೆಂಜಲ ತಿಂಬವರೇನೆಂಬೆ ಕೂಡಲ ಸಂಗಮ ದೇವಾ ?'

೨ ನಂಬಿದ ಹೆಂಡತಿಗೆ ಗಂಡನೊಬ್ಬ ಕಾಣಿರೋ. ನಂಬಬಲ್ಲ ಭಕ್ತಂಗೆ ದೇವನೊಬ್ಬ ಕಾಣಿರೋ. ಬೇಡ, ಬೇಡ, ಅನ್ಯ ದೈವದ ಸಂಗ ಕೊಲ್ಲ. ಬೇಡ, ಬೇಡ, ಅನ್ಯ ದೈವಪೆಂಬುದು ಹಾದರ ಕಾಣಿರೋ. ಕೂಡಲಸಂಗಮದೇವ ಕಂಡರೆ ಮೂಗ ಕೊಯ್ವ ಕಾಣಿರೋ.

೩ ಎತ್ತೆತ್ತ ನೋಡಿದತ್ತತ್ತ ನೀನೇ ದೇವಾ. ಸಕಲ ವಿಸ್ತಾರದ ರೂಹು ನೀನೇ ದೇವಾ. ವಿಶ್ವತೋ ಬಾಹು ನೀನೇ ದೇವಾ. ವಿಶ್ವತೋ ಚಕ್ಷು ನೀನೇ ದೇವಾ. ವಿಶ್ವತೋ ಪಾದ ನೀನೇ ದೇವಾ, ಕೂಡಲಸಂಗಮದೇವಾ.

ಈ ಪ್ರಕಾರ ಬಸವೇಶ್ವರನು ಪರಮಾತ್ಮನು ವಿಶ್ವವ್ಯಾಪಿಯೆಂಬ ಸಂಗತಿಯನ್ನು ಹೇಳಿದ್ದಾನೆ. ಸಿಕ್ಕ ಸಿಕ್ಕ ವಸ್ತುಗಳು ದೇವರಲ್ಲೆಂಬ ಸಂಗತಿಯನ್ನು ಹೀಗೆ ಹೇಳಿರುವನು.

೪. "ಹಾಳು ಮೊಂಡಿಗಳಲ್ಲಿ, ಊರ ದಾರಿಗಳಲ್ಲಿ, ಕೆರೆ ಬಾವಿ ಹೂಗಿಡ ಮರಂಗಳಲ್ಲಿ, ಗ್ರಾಮದ ಮಧ್ಯದಲ್ಲಿ, ಚೌಪಥ ಪಟ್ಟಣ ಪ್ರದೇಶದಲ್ಲಿ, ಹಿರಿಯಾಲದ ಮರದಲ್ಲಿ, ಮನೆಮಾಡಿ ಕರಿವೆಮ್ಮ, ಹಸುಗೂಸು, ಬಸುರಿ, ಬಾಣತಿ, ಕುವಾಂತಿ, ಕೊಡಗೂಸೆಂಬ, ಹಿಂದುಂಬ, ತಿರಿದುಂಬ, ಬೀರಯ್ಯ, ಪೇಚರ, ಗಾವಿಲ, ಅಂತರದೆಂತರ, ಕಾಳಯ್ಯ, ಮೂಳಯ್ಯ, ಕೇತಯ್ಯಗಳೆಂಬ ನೂರು ಮಡಿಕೆ—ನಮ್ಮ ಕೂಡಸಂಗಮದೇವರಿಗೆ ಶರಣೆಂಬುದೊಂದೇ ದೊಡ್ಡ ಸಾಲದೇ?"

ಒಬ್ಬನೇ ದೇವನೆಂಬ ತತ್ವದ ಮೇಲೆಯೇ ತನ್ನ ಸಾಮಾಜಿಕ ವಿಚಾರಗಳನ್ನೂ, ಧಾರ್ಮಿಕ ಆಚರಣೆಗಳನ್ನೂ ನೆಲೆಗೊಳಿಸಿದನು. ಅದುದರಿಂದಲೇ ಅನೇಕ ಪಂಥಗಳು ವೀರಶೈವ ಧರ್ಮವನ್ನು ಸ್ವೀಕರಿಸಿದವು. ಇದರಿಂದ ಸಮಾಜದಲ್ಲೆಲ್ಲ ಪರಸ್ಪರ ಪ್ರೀತಿ ಸೌಹಾರ್ದ್ರಗಳು ಬೆಳೆದು ಕರ್ನಾಟಕವು ಬಲಾಢ್ಯ ದೇಶವಾಯಿತು. ಇದು ಪರಮಾತ್ಮನು ಒಬ್ಬನೇ ಇದ್ದು ಅವನು ವಿಶ್ವವ್ಯಾಪಿಯೆಂಬ ತತ್ವದ ಪರಿಣಾಮವು. ಈ ತತ್ವವುಳ್ಳ ವೀರಶೈವ ಧರ್ಮವು ನಿಜವಾಗಿಯೂ ವಿಶ್ವಧರ್ಮವಾಗಿರುತ್ತದೆ. ಇದಲ್ಲದೆ ಲಿಂಗಾಂಗ ಸಾಮರಸ್ಯದ ಮೂಲಕ ಆತ್ಮವಿಕಾಸವನ್ನು ಮಾಡಿಕೊಂಡು ಆ ದೇವನಲ್ಲಿ ಬೆರೆಯಬಹುದೆಂದು ತಾದಾತ್ಮ್ಯ ಭಾವವನ್ನು ಹೊಂದಲು ಸಾಧ್ಯವೆಂದು ತೋರಿಸುವ ಧಾರ್ಮಿಕ ಭಾವನೆಯು ಇಡೀ ಭರತ ಖಂಡದ ಧಾರ್ಮಿಕ ವಿಚಾರಗಳಲ್ಲಿ ನಿಜವಾಗಿಯೂ ಒಳ್ಳೇ ಕ್ರಾಂತಿಯನ್ನುಂಟು ಮಾಡಿದೆ.

---

೧೨೩ ಬಸವೇಶ್ವರನ ವಚನಗಳು ಪುಟ ೯೩. ವಚನ ೮೬, ೯೦ ಪುಟ ೬೯, ವಚನ ೬.

೫. "ಮರ್ತ್ಯಲೋಕವೆಂಬುದು ಕರ್ತಾರನ ಕಮ್ಮಟವಯ್ಯ! ಇಲ್ಲಿ ಸಲ್ಲುವರು ಅಲ್ಲಿಯೂ ಸಲ್ಲುವರಯ್ಯ! ಇಲ್ಲಿ ಸಲ್ಲದವರು ಅಲ್ಲಿಯೂ ಸಲ್ಲರಯ್ಯ! ಕೂಡಲಸಂಗಮದೇವಾ"

ಈ ವಚನದಿಂದ ಮರ್ತ್ಯಲೋಕವೆಂಬ ಟಂಕಸಾಲೆಯಲ್ಲಿ ಮನುಷ್ಯನು ಜೋಕ್ಯ ನಾಣ್ಯವಾಗಿ ಹೊರಬಿದ್ದರೆ ಮುಂದೆಯೂ ಚನ್ನಾಗಿಯೇ ಆಗುವನು. ಅದೇ ಮೊದಲೇ ಪೊಟ್ಟು ನಾಣ್ಯವಾಗಿ ಹೊರಬಿದ್ದರೆ ಎಲ್ಲಿ ಹೋದಲ್ಲಿಯೂ ಪೊಟ್ಟಯೇ ಸರಿ ಎಂದು ತಿಳಿದು ಬರುವದು. ಅದುದರಿಂದಲೇ ಮನುಷ್ಯನು ಈ ಲೋಕದಲ್ಲಿರುವಾಗಲೇ ಸದಾಚರಣೆಯಿಂದ ನಡೆದು ತಾನಿರುವಲ್ಲಿಯೇ ಮುಕ್ತಿಯನ್ನು ಪಡೆಯುಲಿಕ್ಕೆ ಬರುವದೆಂದು ಬಸವೇಶ್ವರನು ಹೇಳಿದ್ದಾನೆ. ಅದುದರಿಂದ ವೀರಶೈವ ಧರ್ಮವನ್ನು ಪಾಲಿಸುವವರಿಗೆ ಪರಲೋಕದ ಆಶೆಯಿಲ್ಲ. ನರಕದ ಅಂಜಿಕೆಯಿಲ್ಲ. ಪಾಪ ಪುಣ್ಯಗಳ ಭಯವಿಲ್ಲ. ಇದೇ ಸಂಗತಿಯನ್ನು ಇನ್ನೂ ಹೆಚ್ಚು ಮಾರ್ಮಿಕವಾಗಿ ಹೀಗೆ ಹೇಳಿದ್ದಾನೆ.

೬ ದೇವಲೋಕ, ಮರ್ತ್ಯ ಲೋಕವೆಂಬುದು ದೇರಿಲ್ಲ ಕಾಣಿರೋ. ಸತ್ಯ ನುಡಿವುದೇ ದೇವಲೋಕ, ಮಿಥ್ಯವ ನುಡಿವುದೇ ಮರ್ತ್ಯಲೋಕ. ಆಚಾರವೇ ಸ್ವರ್ಗ, ಅನಾಚಾರವೇ ನರಕ. ಕೂಡಲಸಂಗಮದೇವ ನೀವೇ ಪ್ರಮಾಣ.

೭ ಪುಣ್ಯ ಪಾಪಗಳೆಂಬುವು ತಮ್ಮ ಇಷ್ಟವು ಕಂಡಿರಯ್ಯಾ. "ಅಯ್ಯಾ" ಎಂದೊಡೆ ಸ್ವರ್ಗ, "ಎಲವೋ" ಎಂದೊಡೆ ನರಕ. ದೇವ ಭಕ್ತ ಜಯ ಜಯ" ಎಂಬ ನುಡಿಯೊಳಗೆ ಕೈಲಾಸ ವೈದುದು ಕೂಡಲಸಂಗಮದೇವಾ.

೮ ಅಯ್ಯಾ ಸ್ವರ್ಗ ಲೋಕ ತಾನಿರ್ದಲ್ಲಿ, ಮರ್ತ್ಯ ಪಾತಾಳ ತಾನಿರ್ದಲ್ಲಿ. ಶಾಂಭವ ಶಿವಲೋಕ ತಾನಿರ್ದಲ್ಲಿ. ತನ್ನಿಂದಧಿಕಮಪ್ಪ ಮತ್ತೊಂದು ಲೋಕವಿಲ್ಲಾಗಿ ಇವೆಲ್ಲ ತನ್ನಾಧೀನವಲ್ಲದೆ, ಅವಂಗಾಧೀನ ತಾನಲ್ಲ ನೋಡಾ ಅಪ್ರಮಾಣ ಕೂಡಲ ಸಂಗಮ ದೇವಾ.

ಹೀಗೆ ಪುಣ್ಯ ಪಾಪಗಳನ್ನು ಗಳಿಸುವದು ತನ್ನ ಕೈಯಲ್ಲಿಯೇ ಇರುವದೆಂದೂ, ತಾನಿದ್ದುದೇ ತನ್ನ ಕೃತಿಗಳಿಂದ ಸ್ವರ್ಗ ನರಕಗಳಾಗುವದನ್ನು ಸ್ಪಷ್ಟ ಮಾಡಿದನು. ಇದರಿಂದ ವೀರಶೈವ ಧರ್ಮದಲ್ಲಿ ಆಚಾ

ಕ್ಕೆ ಹೆಚ್ಚು ಪ್ರಾಧಾನ್ಯವದೆ. ಪ್ರತಿಯೊಬ್ಬ ಶಿವಶರಣನು ಆಚಾರಕ್ಕೆಯೇ ಹೆಚ್ಚು ಮಹತ್ವವನ್ನು ಕೊಟ್ಟಿದ್ದನ್ನು ಅವರ ವಚನಗಳಲ್ಲಿ ಕಾಣಬಹುದು. ಸ್ವತಃ ಬಸವೇಶ್ವರನೇ ತಾ॥ ಆಚಾರಗಳುಳ್ಳ ಆದರ್ಶ ಶರಣನೆಂದು ಮಹಾದೇವಿಯಕ್ಕನು ವರ್ಣಿಸಿದ್ದಾಳೆ. ಆಚಾರದ ತಳಹದಿಯ ಮೇಲೆ ನಿಂತಿದ್ದ ವೀರಶೈವ ಧರ್ಮವು ಆಚಾರ ಧರ್ಮವೆಂದೇ ಹೇಳಬಹುದು. ಇನ್ನು ಲಿಂಗ ದೀಕ್ಷೆಯಾದ ಕೂಡಲೆ ಜನ್ಮದಿಂದ ಬಂದ ಜಾತಿ ಹೀನತ್ವವು ಹೋಗುವದೆಂಬ ಉದಾತ್ತವಾದ ತತ್ವವನ್ನು ಅಡಂಡೆಮುಲ್ಲ ತಂದನು. ಇದರಿಂದ ಈ ಜನ್ಮದಲ್ಲಿಯ ಸುಖ ದುಃಖಗಳು ಪೂರ್ವ ಕರ್ಮದ ಫಲ. ಗಳೆಂದೂ, ಹಿಂದಿನ ಜನ್ಮಗಳಲ್ಲಿಯ ಕೆಟ್ಟ ಕರ್ಮದ ಫಲವನ್ನು ಅನು ಭೋಗಿಸುವ ವರೆಗೆ ಈ ಜನ್ಮದ ಪುಣ್ಯವು ಮೋಕ್ಷವನ್ನು ಕೊಡಲಾರದೆಂದೂ ಬೋಧಿಸುವ ನಿರಾಶಾಜನಕವಾದ "ಕರ್ಮ" ತತ್ವದ ಬದಲು ಲಿಂಗದೀಕ್ಷೆಯಾದ ಕೂಡಲೆ ಹಿಂದಿನ ಕರ್ಮಗಳೆಲ್ಲ ಅಳಿದು ಹೋಗು ವವೆಂಬ ನಂಬಿಗೆಯನ್ನು ಜನರಲ್ಲಿ ಉಂಟು ಮಾಡಿದನು. "ಸರ್ವಂ ಶಿವ ಮಯಮ್ ಜಗತ್". ಜಗತ್ತೆಲ್ಲವೂ ಶಿವಮಯವಾಗಿರುವದು, ಪರಮಾ ತ್ಮನು ಪ್ರತಿಯೊಬ್ಬನ ಅಂತರಂಗವಲ್ಲಿಯೂ ಇದ್ದಾನೆ ಮತ್ತು ಅವನು ಸತತ ಸಾಧನದಿಂದ ಪ್ರತಿಯೊಬ್ಬನಿಗೂ ಪ್ರಸನ್ನನಾಗಬಲ್ಲನೆಂದು ಮನ ವರಿಕೆ ಮಾಡಿಕೊಟ್ಟನು ಲಿಂಗ ದೀಕ್ಷೆ ಪಡೆದವರೆಲ್ಲರೂ ಯಾವ ಜಾತಿಯ ವರೇ ಇದ್ದರೂ ಎಲ್ಲರೂ ಸಮಾನರು ಎಂದು ಸಾರಿ ಹೇಳಿ ಅವರಿಗೆ ಸಮಾ ಜದಲ್ಲಿ ಸರಿಸಮಾನವಾದ ಹಕ್ಕುಗಳನ್ನು ಒದಗಿಸಿಕೊಟ್ಟನು. ಬಹುಕಾ ಲದಿಂದ ಅತ್ಯಂತ ಹೀನಾವಸ್ಥೆಯಲ್ಲಿದ್ದ ಅಸ್ಪೃಶ್ಯರ ಉದ್ಧಾರವೂ ಬಸ ವೇಶ್ವರನಿಂದಲೇ ಆಯಿತು. ಹೀಗೆ ಬಸವೇಶ್ವರನು ಇಡೀ ಮಾನವ ವರ್ಗವನ್ನೇ ಉದ್ಧಾರ ಮಾಡಿದನೆಂದು ಹೇಳಬಹುದು.

೯. "ಕೊಲ್ಲುವನೇ ಮಾದಿಗ ಹೊಲಸು ತಿಂಬುವನೇ ಹೊಲೆಯ. ಕುಲವೇನೋ, ಅವಂದಿರ ಕುಲವೇನೋ? ಸಕಲ ಜೀವಾತ್ಮಂಗೆ ಲೇಸನೇ ಬಯಸುವ ನಮ್ಮ ಕೂಡಲಸಂಗನ ಶರಣರೇ ಕುಲಜರು."

೧೦. "ದೇವ ದೇವ ಬಿನ್ನಪವ ಅವಧಾರು ವಿಪ್ರವೊದಲು ಅಂತ್ಯಜ ಕಡೆಯಾಗಿ ಶಿವಭಕ್ತರಾದವರನೆಲ್ಲರನು ಒಂದೇ ಎಂದೆ.

೪, ೫, ೬, ೭, ೮ ಬಸವೇಶ್ವರನ ವಚನಗಳು. ಪುಟ ೮೩ ವಚನ ೩೦, ಪುಟ ೨೪, ವ. ೪೨ ಪುಟ ೪೬ ವ. ೧೨೫, ೧೨೬. ವೀರಶೈವ ತತ್ವ ಪ್ರಕಾಶ ವ. ೨.

ತಾರುವ ಮೊದಲು ಶ್ವಪಚರ ಕಡೆಯಾಗಿ ಭವಿಯಾದವರನೆಲ್ಲರನು ಒಂದೇ ಎಂಬೆ. ಹೀಗೆಂದು ನಂಬುವುದೆನ್ನ ಮನವು, ಈ ನುಡಿದ ನುಡಿ ಯೊಳಗೆ ಎಳ್ಳ ಮೊನೆಯಷ್ಟು ಸಂದೇಹವುಳ್ಳರೆ, ನೀನಂದೇ ಮೂಗ ಕೂಯ್ಯಾ, ಕೂಡಲಸಂಗಮದೇವಾ."

ಹೀಗೆ ಬಸವೇಶ್ವರನು ಶಿವಭಕ್ತರೆಲ್ಲರೂ ಸರಿಸಮಾನರು ಎಂದು ತನ್ನ ವಚನಗಳಲ್ಲಿ ಸಾರಿಹೇಳಿದ್ದಾನೆ.

ಎಲ್ಲರೂ ಸರಿಸಮಾನರೆಂದ ಮೇಲೆ ಸ್ತ್ರೀಯರೂ ಸಹ ಪುರುಷರ ಸಮಾನರು ಎಂದು ಹೇಳಿ ಬಸವೇಶ್ವರನು ಸ್ತ್ರೀಯರ ಉನ್ನತಿಗೆ ಪ್ರೋತ್ಸಾಹ ಕೊಟ್ಟನು. ಮತ್ತು ಸಮಾಜದಲ್ಲಿ ಅವರಿಗೆ ಸರಿಯಾದ ಸ್ಥಾನಮಾನಗಳನ್ನು ಒದಗಿಸಿಕೊಟ್ಟನು. ಅವರಿಗೂ ಆತ್ಮವಿದೆ, ಅವರೂ ಪುರುಷರ ಹಾಗೆ ಧರ್ಮವನ್ನು ಆಚರಿಸಿ ತಮ್ಮ ಮೋಕ್ಷವನ್ನು, ತಮ್ಮ ಪತಿಗಳ ಸದ್ಗತಿಯನ್ನು ಪಡೆಯಬಲ್ಲರೆಂಬುದನ್ನು ತಿಳಿಸಿಕೊಟ್ಟನು. ಅವರೂ ಕೂಡ ಬ್ರಹ್ಮಚರ್ಯವ್ರತವನ್ನು ಮಹಾದೇವಿಯಕ್ಕನಂತೆ ಪಾಲ ನಮಾಡಬಹುದು.

೧೧. "ಮಡದಿಯ ಪ್ರಾಣಕ್ಕೆ ಮೇಲೆ ಮುಡಿ ಇದ್ದಿತ್ತೇ? ಒಡೆಯನ ಪ್ರಾಣಕ್ಕೆ ಇದ್ದಿತ್ತೇ ಯಜ್ಞೋಪವೀತ? ಕಡೆಯಲ್ಲಿದ್ದ ಅಂತ್ಯ ಜನು ಹಿಡಿದಿದ್ದನೆ ಪ್ರಾಣದಲ್ಲಿ ಹಿಡಿಗೋಲ? ನೀ ತೊತಕಕ್ಕಿದ ತೊಡ ಕನೇ ಲೋಕದ ಜಡರೇನು ಬಲ್ಲರೈ ರಾಮನಾಥಾ?"

ಎಂದು ದೇವರದಾಸಿಮಯ್ಯನೆಂಬ ಶರಣನು ಪ್ರಶ್ನ ಕೇಳಿದ್ದಾನೆ. ಬಸವೇಶ್ವರನ ಪ್ರೋತ್ಸಾಹದಿಂದ ಆಗ ಅನೇಕ ಸ್ತ್ರೀಯರು ಮುಂದೆ ಬಂದು ಎಷ್ಟೋ ವಚನಗಳನ್ನು ರಚಿಸಿದ್ದಾರೆ. ಹೀಗೆ ಬಸವೇಶ್ವರನು ಸಮಾಜದಲ್ಲಿರುವ ಪ್ರತಿಯೊಬ್ಬ ವ್ಯಕ್ತಿಯ ಉನ್ನತಿಗೆ ಪ್ರೋತ್ಸಾಹ ಕೊಟ್ಟು ವೀರಶೈವ ಧರ್ಮವನ್ನು ಪ್ರಚಾರ ಮಾಡಿದನು.

ಬಸವೇಶ್ವರನು ವೀರಶೈವ ಸಮಾಜದಲ್ಲಿರುವ, ಪ್ರತಿಯೊಬ್ಬ ವ್ಯಕ್ತಿಗೆ ಸರಿಸಮಾನವಾದ ಹಕ್ಕುಗಳನ್ನು ಕೊಟ್ಟ ಮತ್ತೊಂದು ಮಹತ್ವದ ಕಾರ್ಯವನ್ನು ಮಾಡಿದನು. ಪ್ರತಿಯೊಬ್ಬ ಮನುಷ್ಯನು ಒಂದು ಕಾಯಕ ಅಥವಾ ಉದ್ಯೋಗವನ್ನು ಮಾಡಿಯೇ ತನ್ನ ಉದರ ನಿರ್ವಾಹವನ್ನು

೯ ೧೦, ಬಸವೇಶ್ವರ ವಚನಗಳು ಪುಟ ೮೯ ವ ೬೪, ಪುಟ ೧೦೮ ವ ೭ ೧೨ ಶೂನ್ಯ ಸಂಪಾದನೆ ಪುಟ ೨೫೭ ವ ೧೪.

ಸಾಗಿಸಬೇಕೆಂದೂ, ಪರಧನ, ಪರವಸ್ತುಗಳಿಗೆ ಎಂದಿಗೂ ಆಶೆಮಾಡಬಾರದೆಂದೂ ಬೋಧಿಸಿದನು. ಸಮಾಜಕ್ಕೆ ಉಪಯುಕ್ತವಿದ್ದ ಯಾವ ಉದ್ಯೋಗವೂ ಕೀಳಲ್ಲ, ಎಂಬ ನೂತನ ತತ್ವವನ್ನು ಸ್ಥಾಪಿಸಿದನು. "ಕಾಯಕವೇ ಕೈಲಾಸ" ವೆಂದು ಸಾರಿ ಹೇಳಿ ಕಾಯಕದಿಂದಲೇ ಮುಕ್ತಿ ಎಂಬ ಉದಾತ್ತ ತತ್ವವನ್ನು ಜನರಲ್ಲಿ ಬೀರಿದನು. ಇದರಿಂದ ವೀರಶೈವ ಸಮಾಜದಲ್ಲಿ "ಕೀಳು" ಎಂದು ತಿಳಿದ ಎಷ್ಟೋ ಉದ್ಯೋಗಗಳು ಪವಿತ್ರವೆನಿಸಿದವು. ಮತ್ತು ಅವುಗಳನ್ನು ಜನರು ಒಳ್ಳೇ ಉತ್ಸಾಹದಿಂದ ಜರುಗಿಸಹತ್ತಿದರು. ಸ್ವಾರ್ಥದ ಸಲುವಾಗಿ ಹೆಚ್ಚು ಗಳಿಸಬೇಕೆಂಬ ಹವ್ಯಾಸವನ್ನು ಬಿಡಿಸಿದನು. ದಿನದ ಕೂಲಿ ದಿನಕ್ಕೆ ಸಲ್ಲಬೇಕೆಂಬ ತತ್ವವನ್ನು ಪ್ರತಿಯೊಬ್ಬ ಶರಣನು ಪಾಲಿಸುತ್ತಿದ್ದನು. ಈ ಸಂಗತಿಯನ್ನು ಕೆಳಗಿನ ವಚನದಿಂದ ಕಾಣಬಹುದು.

೧೨. "ಸತ್ಯ ಶುದ್ಧ ಕಾಯಕದಲ್ಲಿ ಬಂದ ದ್ರವ್ಯದಲ್ಲಿ ಚಿತ್ತ ವಿಶ್ವಾಸದಿಂದವಾಗದಿರಬೇಕು. ನೇಮದ ಕೂಲಿ ಅಂದಿನ ನಿತ್ಯ ನೇಮದಲ್ಲಿ ಸಂದಿರಬೇಕು. ನೇಮದ ಕೂಲಿಯ ಬಿಟ್ಟು, ಹೇಮದಾಸೆಗೆ ಕಾಮಿಸಿ, ದ್ರವ್ಯವ ಹಿಡಿದರೆ ತಾ ಮಾಡುವ ಸೇವೆ ನಷ್ಟವಯ್ಯ! ನಿನ್ನಾಸೆ ವೇಷದ ಪಾಶಕ್ಕೆ ನೀನೇ ಹೋಗು. ನನಗೆ ನನ್ನ ಜಂಗಮದ ಪ್ರಸಾದದಾಗು ಚಂದೇಶ್ವರ ಲಿಂಗಕ್ಕೆ ಪ್ರಾಣವಯ್ಯ."

ಲಿಂಗಮುಖವಾದ ಜಂಗಮರು ಜಗತ್ತಿನ ಹಿಂಗಿಗರು. ಅವರು ಭಕ್ತರು ಗಳಿಸಿದ ದ್ರವ್ಯದಿಂದ ಜೀವಿಸಬಾರದೆಂದು ಹೇಳಿದನು. ಅವರಾದರೂ ಕಾಯಕದಿಂದಲೇ ಜೀವಿಸತಕ್ಕದ್ದು. ಅವರಿಗಾದರೂ ಕಾಯಕದಿಂದಲೇ ಮುಕ್ತಿ.

೧೩. "ಗುರುವಾದರೂ ಕಾಯಕದಿಂದಲೇ ಜೀವನ್ಮುಕ್ತಿ. ಲಿಂಗವಾದರೂ ಕಾಯಕದಿಂದಲೇ ಶಿಲೆಯ ಕುಲ ಹರಿವುದು, ಜಂಗಮವಾದರೂ ಕಾಯಕದಿಂದ ವೇಷದ ಪಾಶ ಹರಿವುದು. ಇದು ಚನ್ನಬಸವಪ್ರಿಯ ಚಂದೇಶ್ವರ ಲಿಂಗದ ಅಂವು"

ಕಾಯಕದ ಮಹತ್ವವು ಇನ್ನು ಹೆಚ್ಚು ಚನ್ನಾಗಿ ಕೆಳಗಿನ ವಚನದಿಂದ ಕಂಡು ಬರುವದು.

೧೪. "ಕಾಯಕದಲ್ಲಿ ನಿರತನಾದಡೆ ಗುರುದರ್ಶನವಾದಡೂ ಮರೆಯಬೇಕು, ಲಿಂಗಪೂಜೆಯಾದಡೂ ಮರೆಯಬೇಕು, ಜಂಗಮು ಮುಂದಿದ್ದರೂ ಹಂಗು ಹರಿಯಬೇಕು, ಕಾಯಕವೇ ಕೈಲಾಸವಾದ ಕಾರಣ. ಅಮಳೇಶ್ವರ ಲಿಂಗವಾಯಿತ್ತಾದಡೂ ಕಾಯಕದೊಳಗು"

ಕಾಯಕ ತತ್ವದಿಂದ ವೀರಶೈವ ಸಮಾಜದಲ್ಲಿ ಭಿಕ್ಷೆ ಬೇಡುವದಕ್ಕೆ ಸ್ವಲ್ಪಾದರೂ ಅವಕಾಶವಿಲ್ಲ. ಇದರಿಂದ ಪ್ರತಿಯೊಬ್ಬ ವೀರಶೈವನು ತಾನು ಕಾಯಕವನ್ನು ಕೈಕೊಂಡು ಅದು ಪವಿತ್ರವೆಂದು ಭಾವಿಸಿ, ತಾನು ಪಡೆದ ದ್ರವ್ಯದಿಂದ ತಾನು ಉಪಭೋಗಿಸುವ ಎಲ್ಲ ವಸ್ತುಗಳನ್ನು ಅಂಗ ಲಿಂಗಮುಖದಿಂದ ಪ್ರಸಾದ ರೂಪವಾಗಿ ಸೇವಿಸಬೇಕೆಂಬ ಈ ಉದಾತ್ತ ತತ್ವವು ತ್ಯಾಗ ಭೋಗಗಳನ್ನು ಕೂಡಿಸುವ ವಿಶಿಷ್ಟವಾದ ಶಕ್ತಿಯು ವೀರಶೈವ ಧರ್ಮದಲ್ಲಿ ಉತ್ಪನ್ನವಾಯಿತು.

ವೀರಶೈವ ಧರ್ಮದಲ್ಲಿ ಆಚಾರಕ್ಕೆ ಮಹತ್ವವಿರುವದರಿಂದ ನಡೆ ನುಡಿಗಳಲ್ಲಿ ಭಿನ್ನತೆಯಿಲ್ಲ. ನುಡಿದಂತೆ ನಡೆಯುಬೇಕು. ಬಾಯಿಂದ ದೊಡ್ಡ ದೊಡ್ಡ ತತ್ವದ ಮಾತುಗಳನ್ನು ಹೇಳಿ ಅದರಂತೆ ನಡೆಯದಿದ್ದರೆ ಅವನು ಊರ್ಜಿತ ಸ್ಥಿತಿಯನ್ನು ಹೊಂದಲಾರನು. ವೀರಶೈವನು ವಿಚಾರವಾದಿಯಿದ್ದುದರಿಂದ ತನ್ನ ಬುದ್ಧಿ ಮತ್ತು ಸದಸದ್ವಿವೇಕ ಇವುಗಳಿಂದ ತನ್ನ ತನುಮನಗಳನ್ನು ಶುದ್ಧವಾಗಿಟ್ಟುಕೊಂಡು ಆತ್ಮವಿಕಾಸವನ್ನು ಪಡೆದು ಅಷ್ಟಾವರಣ, ಪಂಚಾಚಾರಗಳನ್ನು ಆಚರಣೆಯಲ್ಲಿ ತಂದು ಷಟ್‌ಸ್ಥಲ ತತ್ವದ ಪ್ರಕಾರ ತನ್ನ ಜೀವನದ ಸಾರ್ಥಕವನ್ನು ಮಾಡಿ ಇದೇ ಜನ್ಮದಲ್ಲಿ ಮುಕ್ತನಾಗಬಲ್ಲನು. ಸಂಸಾರದಲ್ಲಿದ್ದ ಪ್ರತಿಯೊಬ್ಬ ಮನುಷ್ಯನು ದೇವತ್ವವನ್ನು ಪಡೆಯಬೇಕಾದರೆ ಕಾಯಪ್ರಧಾನವಾದ ಅಷ್ಟಾವರಣಗಳನ್ನು ಆಚರಿಸಬೇಕು. ಮತ್ತು ನೀತಿಪ್ರಧಾನವಾದ ಪಂಚಾಚಾರಗಳನ್ನು ಪಾಲಿಸಬೇಕು. ತರುವಾಯ ಜ್ಞಾನಪ್ರಧಾನವಾದ ಷಟ್‌ಸ್ಥಲಗಳನ್ನು ದಾಟಿ ಸೈಂಕ್ಯ ಪ್ರಧಾನವಾದ ಲಿಂಗಾಂಗ ಸಾಮರಸ್ಯವನ್ನು ಹೊಂದಬೇಕಾಗುವದು. ನಿಜವಾಗಿ ವಿಚಾರಮಾಡಿ ನೋಡಿದರೆ ವೀರಶೈವ ಧರ್ಮವು ಯಾವ ಧರ್ಮಕ್ಕೂ ವಿರುದ್ಧವಾಗಿಲ್ಲ. ಅದು ಎಲ್ಲ ಧರ್ಮಗಳ ತತ್ವಗಳನ್ನೊಳಗೊಂಡಿದೆ. ಜೈನರ ಅಹಿಂಸಾ ತತ್ವವೂ, ಬೌದ್ಧರ ಸಮಾನತಾವಾದವೂ, ಶೀಖರ ಧರ್ಮನಿಷ್ಠೆಯೂ ಇದರಲ್ಲಿ ಕೂಡಿವೆ.

ಎಲ್ಲ ಧರ್ಮಗಳ ಮೂಲತತ್ವವಾದ ಅಹಿಂಸೆಯು ವೀರಶೈವ ಧರ್ಮದಲ್ಲಿ ಪ್ರಾಮುಖ್ಯವಾಗಿದೆ. ಅದನ್ನು ಬಸವೇಶ್ವರನು ಹೀಗೆ ಹೇಳಿದ್ದಾನೆ.

೧೫. "ದಯವಿಲ್ಲದ ಧರ್ಮವಾವುದಯ್ಯ? ದಯವೇ ಬೇಕು ಸಕಲ ಪ್ರಾಣಿಗಳಲ್ಲಿ. ದಯವೇ ಧರ್ಮದ ಮೂಲವಯ್ಯ ಕೂಡಲಸಂಗಯ್ಯನಂತಲ್ಲದೊಲ್ಲನಯ್ಯ."

ವೀರಶೈವ ಧರ್ಮದ ತತ್ವಗಳು ವಿಶಾಲವಾಗಿದ್ದರೂ ಅವುಗಳಲ್ಲಿ ಜೀವಕಳೆ ತುಂಬಿ ಪ್ರತ್ಯಕ್ಷ ಆಚರಣೆಯಲ್ಲಿ ತಂದು ಅದನ್ನು ಸಕಲ ಮಾನವರಿಗೂ ಉಪಯುಕ್ತವಾದ ವಿಶ್ವಧರ್ಮವನ್ನಾಗಿ ಮಾಡಿದ ಶ್ರೇಯಸ್ಸು ಬಸವೇಶ್ವರನಿಗೆ ಸಲ್ಲತಕ್ಕದ್ದು. ಒಟ್ಟಿನ ಮೇಲೆ ಹೇಳುವದಾದರೆ ವೀರಶೈವ ಧರ್ಮವು ನಿಜವಾಗಿಯೂ ವಿಶ್ವಧರ್ಮವು. ಅದರಲ್ಲಿ ಎಲ್ಲ ಧರ್ಮಗಳ ಉದಾತ್ತವಾದ ತತ್ವಗಳಿವೆ. ಅದು ಯಾವ ಧರ್ಮದ ವಿರುದ್ಧವಿಲ್ಲ. ಇಷ್ಟೇ ಅಲ್ಲ ಅದು ಪ್ರತಿಯೊಂದು ಧರ್ಮದ ಉತ್ತಮೋತ್ತಮ ತತ್ವಗಳನ್ನು ಕೂಡಿಕೊಂಡು ತನ್ನದೇ ಆದ ಒಂದು ವಿಶಿಷ್ಟತೆಯನ್ನು ಪಡೆದು ಸಕಲರಿಗೂ ಆಚರಣೆಗೆ ಬರುವಂತಹದಿರುವದು. ಇಂತಹ ವೀರಶೈವ ಧರ್ಮವನ್ನು ಬಸವೇಶ್ವರನು ತನ್ನ ಅನುಪಮವಾದ ಭಕ್ತಿ, ಧೈರ್ಯ ವಿಶ್ವಾಸಗಳಿಂದ ವಿಶ್ವಧರ್ಮವನ್ನಾಗಿ ಮಾಡಿದನು. ಅದುದರಿಂದಲೇ ಬಸವೇಶ್ವರನ ಖ್ಯಾತಿಯನ್ನು ಕೇಳಿ ದೇಶ ದೇಶಗಳಿಂದ ಜನರು ಬಂದು ಈ ಧರ್ಮ ಸ್ವೀಕಾರ ಮಾಡಿ ಒಂದು ಉತ್ತಮ ಒಳ್ಳೇ ಸಮಾಜವನ್ನು ನಿರ್ಮಾಣ ಮಾಡಿದರು. ಪತಿತರನ್ನು, ಪಾಪಿಗಳನ್ನು, ಎಲ್ಲರನ್ನು ಪಾವನರನ್ನಾಗಿ ಮಾಡಿದ ಈ ಧರ್ಮವು ಸ್ವಲ್ಪ ಕಾಲದಲ್ಲಿಯೇ ವಿಸ್ತಾರವಾಗಿ ಹಬ್ಬಿತು.

---

೧೩ ವಚನ ಶಾಸ್ತ್ರಸಾರ ಭಾಗ ೧ (ಉ) ಪುಟ ೨೩೮.
೧೪ ,, ,, ,, ೧ ,, ,, ೧೪
೧೫ ಬಸವೇಶ್ವರನ ವಚನಗಳು ಪುಟ ೩೭ ವ. ೧೪೩.

ಮರೆಯಬೇಡ ಎಂದು ಹಿತಬೋಧೆ ಮಾಡಿದನು. ಅದಕ್ಕೆ ಅದಯ್ಯನು ಪ್ರತಿಜ್ಞೆ ಮಾಡಿದನು — ನನಗೆ ಮೊದಲು ಸೋಮಯ್ಯನ ಭಕ್ತಿಯು. ಅದೇ ನನಗೆ ಲಾಭವು. ಅನಂತರ ಇನ್ನಿತರ ವಿಷಯುಗಳ ಮೇಲೆ ಪ್ರೀತಿಯು ಎಂದು ಹೇಳಿ ತನ್ನ ತಂದೆತಾಯಿಗಳಿಗೆ ನಮಸ್ಕರಿಸಿ ಕರ್ನಾಟಕ ದೇಶಕ್ಕೆ ಹೊರಟನು.

ಆದಿಶಿಷ್ಟಯ್ಯು ಅಥವಾ ಅದಯ್ಯನು ಮೊದಲು ಅಣ್ಣಿಗೇರಿಗೆ ಬಂದನು. ಇದು ಧಾರವಾಡ ಜಿಲ್ಲೆ ನವಲಗುಂದ ತಾಲೂಕಿನಲ್ಲಿದೆ. ಅಲ್ಲಿ ತನ್ನ ವ್ಯವಹಾರವನ್ನು ಕೆಲವು ದಿವಸ ನಡಿಸಿ ಮುಂದೆ ಅಲ್ಲಿಂದ ದಕ್ಷಿಣಕ್ಕೆ ೨೨ ಮೈಲು ದೂರವಿರುವ ಪುಲಿಗೆರೆ ಅಂದರೆ ಈಗಿನ ಲಕ್ಷ್ಮೇಶ್ವರಕ್ಕೆ ಬಂದನು. ಪುಲಿಗೆರೆಯು ಈ ಕಾಲದಲ್ಲಿ ಕರ್ನಾಟಕದಲ್ಲಿ ಅತ್ಯಂತ ಪ್ರಸಿದ್ಧವಾದ ಪಟ್ಟಣವಾಗಿತ್ತು. ಅಲ್ಲಿ ಚಂದ್ರಾದಿತ್ಯನೆಂಬ ರಾಜನು ಆಳುತ್ತಿದ್ದನು. ಪಟ್ಟಣದಲ್ಲಿ ಅನೇಕ ಸುಂದರವಾದ ಜೈತ್ಯಾಲಯಗಳೂ ದೊಡ್ಡ ಬಾಜಾರಗಳೂ ವಿಸ್ತಾರವಾಗಿ ಹಬ್ಬಿದ್ದವು. ಅದಯ್ಯನು ತನ್ನ ಪಸಾರದೊಂದಿಗೆ ನಗರವನ್ನು ಪ್ರವೇಶಿಸಿ ಬೀದಿಯಿಂದ ಗವಿಸುವಾಗ ಬತ್ತಲೆ ಇದ್ದ ಗೊಂಬೆಗಳುಳ್ಳ ಜಿನಾಲಯುಗಳೇ ಅವನ ಕಣ್ಣಿಗೆ ಬೀಳ ಹತ್ತಿದವು. ಅವನು ಅವುಗಳಲ್ಲಿ ಇರದೆ ಒಂದು ಶಿವಾಲಯವನ್ನು ಹುಡುಕುತ್ತ ಹೋದನು. ಮುಂದೆ ಹೋಜೇಶ್ವರನೆಂಬ ಶಿವಾಲಯವು ಅವನ ದೃಷ್ಟಿಗೆ ಬಿತ್ತು. ಆಗ ಅವನು ಅಲ್ಲಿಯೇ ತನ್ನ ಪಸಾರವನ್ನು ಇಟ್ಟು ಪಟ್ಟಣವನ್ನು ನೋಡಬೇಕೆಂದು ಬೀದಿಗಳನ್ನು ಸುತ್ತುತ್ತ ಹೋದನು.

ಈ ಪುಲಿಗೆರೆ ಪಟ್ಟಣದಲ್ಲಿ 'ಸುರಹೊನ್ನೆ ಬಸದಿ' ಎಂಬ ಹೆಸರಿನ ಜಿನಾಲಯವು ದೇಶದಲ್ಲೆಲ್ಲ ಅತ್ಯಂತ ಪ್ರಸಿದ್ಧವಾಗಿತ್ತು. ಅದರಲ್ಲಿಯ ಹಸ್ತಕೌಶಲ್ಯಗಳ ಕೆಲಸದಿಂದ ಅದು ಕಣ್ಣಿಗೆ ಬಹು ಮನೋಹರವಾಗಿ ಕಂಗೊಳಿಸುತ್ತಿತ್ತು. ಅದರ ಪೂಜಾರಿಯು ಪಾರಿಸಪಂಡಿತನೆಂಬುವನು. ಅವನಿಗೆ ಪದ್ಮಾವತಿ ಎಂಬ ಹೆಸರಿನ ಮಗಳಿದ್ದಳು. ಅವಳು ಯೌವ್ವನಾವಸ್ಥೆಯನ್ನು ಹೊಂದಿದ್ದರೂ ಇನ್ನೂ ಅವಿವಾಹಿತಳಾಗಿ ಉಳಿದಿದ್ದಳು. ಅವಳು ತನ್ನ ಗೃಹದ ಪೊಗಸಾಲೆಯಲ್ಲಿ ನಿಂತಿರುವಾಗ ಅದಯ್ಯನು ತನ್ನ ಇದಿರಿನಲ್ಲಿ ದಾರಿಯಿಂದ ಬರುವದನ್ನು ಕಂಡಳು. ಅದಯ್ಯನೂ ಕೂಡ ಅವಳನ್ನು ಅದೇ ಕಾಲದಲ್ಲಿ ಕಾಣಲಾಗಿ ಉಭಯರು ಪರಸ್ಪರ ಅನುರಾಗವನ್ನು ಹೊಂದಿದವರಾದರು. ಪದ್ಮಾವತಿಯು

ಅವನಾರೆಂಬುದನ್ನು ತಿಳಿದುಕೊಂಡು ಅವನನ್ನು ಮದುವೆಯಾಗುವೆ
ನೆಂದು ತಂದೆಗೆ ಹೇಳಲು ಅವನು ಒಪ್ಪಲಾಗಿ ಉಭಯತರು ಲಗ್ನ
ವಾದರು. ಆಮೇಲೆ ಅವರು ಪಾರಿಸನ ಮನೆಯ ನೆರೆಯಲ್ಲಿ ಇದ್ದ
ಒಂದು ಗೃಹದಲ್ಲಿ ನಿಂತುಕೊಂಡು ಸುಖವಾಗಿ ತಮ್ಮ ಪ್ರಪಂಚವನ್ನು
ಸಾಗಿಸಹತ್ತಿದರು. ಪದ್ಮಾವತಿಯು ತನ್ನ ಜಿನಮತವನ್ನು ಬಿಟ್ಟು ಆದಯ್ಯ
ನಂತೆಯೇ ಶಿವಭಕ್ತಿಯುಳ್ಳವಳಾಗಿ ಆಚರಿಸಹತ್ತಿದಳು. ಹೀಗೆ ಅವರು
ಅನೇಕ ವರ್ಷಗಳ ವರೆಗೆ ಪುಲಿಗೆರೆಯಲ್ಲಿ ಕಾಲಕಳೆದರು.

ಈ ಕಾಲದಲ್ಲಿ ಶಿವಾನುಭವದ ತತ್ವಗಳು ದೇಶದಲ್ಲೆಲ್ಲ ಪ್ರಸಾರ
ವಾಗಹತ್ತಿದ್ದವು. ಅವುಗಳಿಗೆ ಆದಯ್ಯನು ಒಲಿದವನಾಗಿ ಅವನೂ ಶಿವಾ
ನುಭವಿಯಾಗಿ ವಚನಗಳನ್ನು ರಚಿಸತೊಡಗಿದನು. 'ಸೌರಾಷ್ಟ್ರ ಸೋಮೇ
ಶ್ವರಾ' ಎಂಬುದೇ ಅವನ ಮುದ್ರಿಕೆಯು. ಅವನ ೧೫೧ ವಚನಗಳನ್ನು
ನಾವು ಶಿವಾನುಭವ ಗ್ರಂಥಮಾಲೆಯಲ್ಲಿ ಪ್ರಸಿದ್ಧಿಸಿದ್ದೇವೆ. ಅವುಗಳಲ್ಲಿ
ಷಟ್‌ಸ್ಥಲ ಶಾಸ್ತ್ರದ ತತ್ವಗಳು ಬಹು ಸ್ಫುಟವಾಗಿ ಮತ್ತು ವ್ಯವಸ್ಥಿತ
ವಾಗಿ ನಿರೂಪಿತವಾಗಿರುತ್ತವೆ. ಅವನ ಭಾಷೆಯು ಅತ್ಯಂತ ಗಾಂಭೀ
ರ್ಯವುಳ್ಳದ್ದು ಮತ್ತು ಮನೋಹರವಾದದ್ದು. ಅವನು ಸಂಸ್ಕೃತವನ್ನು
ಚನ್ನಾಗಿ ಬಲ್ಲವನಾಗಿದ್ದನೆಂಬುದು ಅವನ ವಚನಗಳಲ್ಲಿಯು ಸಂಸ್ಕೃತ
ಅವತರಣಗಳಿಂದ ಕಂಡುಬರುತ್ತದೆ. ಹೀಗೆ ಅವನು ವಾಸ ಮಾಡು
ತ್ತಿರಲಾಗಿ ಪಟ್ಟಣದಲ್ಲಿ ಕೆಳಗಿನಂತೆ ಒಂದು ಘಟನೆಯು ಉಂಟಾ
ಯಿತು.

ಒಂದು ದಿನ ಆದಯ್ಯನು ಪದ್ಮಾವತಿಯ ಕೂಡ ಪಟ್ಟಣದ ಪೂರ್ವ
ದಿಕ್ಕಿನಲ್ಲಿದ್ದ ಒಂದು ತೋಟದಲ್ಲಿ ವಿಹಾರಕ್ಕೋಸ್ಕರ ಹೋಗಿದ್ದನು.
ಆಗ ಅಲ್ಲಿ ಕೆಲವು ಜಂಗಮರು ಇದ್ದದ್ದನ್ನು ಕಂಡು ಅವರೀರ್ವರು
ಅವರನ್ನು ನಮಸ್ಕರಿಸಲಾಗಿ ಆ ಜಂಗಮರು— ನಾವು ಈ ಪಟ್ಟಣವನ್ನು
ಪ್ರವೇಶಿಸಲಾಗಿ ಯಾವ ದೇವಾಲಯವಿದ್ದರೂ ಅದರಲ್ಲಿ ಬತ್ತಲೆ ಇದ್ದ
ದೊಂಬಿಗಳೇ ಕಾಣುತ್ತಿವೆ. ಶಿವಭಕ್ತರು ನಮಗೆ ಎಲ್ಲಿಯೂ ಗೋಚರ
ವಾಗಲಿಲ್ಲ. ಆದ್ದರಿಂದ ನಾವು ಈ ಉದ್ಯಾನ ವನಕ್ಕೆ ಬಂದಿದ್ದೇವೆ.
ನಿಮ್ಮನ್ನು ಕಂಡು ನಮಗೆ ಬಹಳ ಹರುಷವಾಯಿತ್ತು. ನಾವು ಇನ್ನೂ
ಉಪವಾಸವಿದ್ದೇವೆ ಎಂದು ಹೇಳಲು ಆದಯ್ಯನು— ನೀವು ನಮ್ಮಲ್ಲಿ
ಭೋಜನಕ್ಕೆ ಬರಬೇಕು. ನಾನು ನಿಮ್ಮನ್ನು ಕರೆಯಲಿಕ್ಕೆ ಬರುತ್ತೇನೆ.

ಅವರೆಗೆ ನೀವು ಇಲ್ಲಿಯೇ ಇರಬೇಕು ಎಂದು ಹೇಳಿ ತನ್ನ ಹೆಂಡತಿ
ಯೊಡನೆ ಮನೆಗೆ ಬಂದನು. ಪದ್ಮಾವತಿಯು ಅತಿಥಿಗಳಿಗೋಸ್ಕರ ಪಾಕ
ವನ್ನು ಮಾಡಿ ಅವರನ್ನು ಕರೆತರಲು ಆದಯ್ಯನನ್ನು ಉದ್ಯಾನ ವನಕ್ಕೆ
ಕಳಿಸಿದಳು.

ಆಗ ಆದಯ್ಯನು ಹೊರಗೆ ಹೋದ ಸ್ವಲ್ಪ ಹೊತ್ತಿನಲ್ಲಿಯೇ ಕೋಪಣ
(ಕೊಪ್ಪಳ) ದ ಕಡೆಯಿಂದ ಕೆಲವು ಶ್ರಾವಕರು ಪಾರಿಸಶೆಟ್ಟಿಯ ಮನೆಗೆ
ಬರಲಾಗಿ ಅವನು ಅವರಿಗೆ ಪರ್ವವನ್ನು ಮಾಡಿಸುತ್ತಿರಲು ಅದಕ್ಕೆ
ಬೋನವು ಸಾಲದೆ ಹೋಯಿತು. ಆಗ ಪಾರಿಸನ ಹೆಂಡತಿಯು ತನ್ನ
ಮಗಳ ಮನೆಗೆ ಬಂದು ಅವಳಿಗೆ— ನಮ್ಮ ಮನೆಗೆ ಶ್ರಾವಕರು ಬಂದಿ
ದ್ದಾರೆ. ಅವರಿಗೆ ಅನ್ನವು ಕಡಿಮೆಯಾಗಿದೆ. ನೀನು ಈಗ ಸಿದ್ಧಪಡಿ
ಸಿದ ಬೋನವನ್ನು ಕೊಡು ಎಂದು ಕೇಳಿದಳು. ಅದಕ್ಕೆ ಪದ್ಮಾವ
ತಿಯು— ಜಂಗಮಂಗೋಸ್ಕರ ಅನ್ನವನ್ನು ಸಿದ್ಧಪಡಿಸಿದ್ದೇನೆ. ಅದನ್ನು
ನಾನು ಕೊಡಲಾರೆನೆಂದು ಹೇಳಲು ಅವಳ ತಾಯಿಯು— ಅನ್ನವನ್ನು
ಕಡವಾಗಿಯಾದರೂ ಕೊಡು ಎಂದು ಒತ್ತಿ ಹೇಳಲು ಅವಳು— ಜಂಗ
ಮರು ಹಸಿದುಬಂದಿದ್ದಾರೆ. ಅವರಿಗೆ ಈ ಪಟ್ಟಣದಲ್ಲಿ ಎಲ್ಲಿಯೂ
ಆಹಾರ ದೊರಕಿಲ್ಲ. ಈಗಳೇ ನನ್ನ ಪತಿಯು ಅವರನ್ನು ಕರೆತರಲು
ಹೋಗಿದ್ದಾನೆ ಎಂದು ಹೇಳಲು ಅವಳ ತಾಯಿಯು ಅವಳನ್ನು ಧಿಕ್ಕರಿಸಿ,
ಅವಳ ಕಯ್ಯನ್ನು ಹಿಡಿದು ಅವಳು ಮಾಡಿದ ಬೋನವನ್ನು ಬಲಾತ್ಕಾರ
ದಿಂದ ಕಸಿದುಕೊಂಡು ಹೋಗಿ ಬಿಟ್ಟಳು. ಆಗ ಪದ್ಮಾವತಿಯು ಕಂದಿ
ಕುಂದಿ ಚಿಂತಿಸುತ್ತ ಕುಳಿತಳು. ಅಷ್ಟರಲ್ಲಿ ಆದಯ್ಯನು ಜಂಗಮರೊ
ಡನೆ ಮನೆಗೆ ಬರಲು, ಅವನು ನಡೆದ ಸಂಗತಿಗಳನ್ನು ಕೇಳಿಕೊಂಡು,
ಮನೆಯಲ್ಲಿ ಆಹಾರವಿಲ್ಲದ್ದರಿಂದ ಬಂದ ಆ ಜಂಗಮರಿಗೆ ತೆಂಗು, ಬಾಳೆ,
ದ್ರಾಕ್ಷ ಇವುಗಳನ್ನು ತಂದು ಅವರನ್ನು ಸಂತವಿಸಿ ಅವರನ್ನು ಕಳಿಸಿ
ಕೊಟ್ಟನು.

ಆಮೇಲೆ ಆದಯ್ಯನು ಅತ್ಯಂತ ಮನಸ್ಸು ನೊಂದವನಾಗಿ ತನ್ನ
ಮಾವನಾದ ಪಾರಿಸಶೆಟ್ಟಿಯ ಮನೆಗೆ ಬಂದು ಅವನಿಗೆ— ಜೈನರು
ಭಕ್ತರ ಅನ್ನವನ್ನು ಹೀಗೆ ತೆಗೆದುಕೊಂಡು ಹೋಗಬೇಕೇ? ಎಂದು
ಕೇಳಲು, ಅವನು— ನೀನೇತರ ಭಕ್ತ? ಅವರೆಲ್ಲಿಯ ಜಂಗಮರು?
ಪುಲಿಗೆರೆಯಲ್ಲಿ ಭಕ್ತರೆಂಬುವರು ಎಲ್ಲಿದ್ದಾರೆ? ಎಂದು ನಿಂದಿಸಿ ನುಡಿ

ಯುತ್ತ ಅವನಿಗೆ— ನೀನು ನಿನ್ನ ಸೋಮೇಶ್ವರನನ್ನು ಪುಲಿಗೆರೆಗೆ ತಂದರೆ ಮಾತ್ರ ನೀನು ಭಕ್ತನು, ಇಲ್ಲದಿದ್ದರೆ ಅಲ್ಲ, ಎಂದು ಅನ್ನಲು. ಆದಯ್ಯನು ಅತ್ಯಂತ ಖತಿಗೊಂಡು— ಪಾರಿಸನೇ, ನೀನು ಹೇಳಿದಂತೆಯೇ ನಾನು ಮಾಡಿಬಿಡುತ್ತೇನೆ. ಈ ಪುಲಿಗೆರಿಯ ಸುರಹೊನ್ನೆಯ ಬಸದಿಯಲ್ಲಿ ನನ್ನ ಇಷ್ಟದೇವತೆಯಾದ ಸೌರಾಷ್ಟ್ರ ಸೋಮೇಶನನ್ನು ತಂದು ನಿಲ್ಲಿಸಿಯೇ ಬಿಡುವೆನು ಎಂದೆನ್ನಲು ಅದಕ್ಕೆ ಪಾರಿಸಶಿಷ್ಟ್ಯಯು ನಗುತ್ತ— ಇದು ನಿನಗೆ ಅಳವಡದ ಭಾಷೆಯು. ನೀನು ಯುಕ್ತಿಗೆಟ್ಟು ನುಡಿಯುತ್ತೀ ಸೋಮೇಶ್ವರನನ್ನು ಇಲ್ಲಿ ಸ್ಥಾಪಿಸುವದು ನಿನ್ನಿಚ್ಛೆಯೋ? ಎಂದು ನುಡಿಯಲು ಆದಯ್ಯನು— ಹೌದು, ಹೌದು. ನಾನು ಒಂದು ತಿಂಗಳಿನಲ್ಲಿ ಸೌರಾಷ್ಟ್ರ ಸೋಮನಾಥನನ್ನು ಇಲ್ಲಿಗೆ ತಂದು ನಿಲ್ಲಿಸುವೆನು. ಅವನನ್ನು ತಾರದೆ ಉಣ್ಣೆನು, ಎಂದು ಪ್ರತಿಜ್ಞೆ ಮಾಡಿ ಮನೆಗೆ ಹೋದನು. ಅವನು ನಡೆದ ಸಂಗತಿಗಳನ್ನೆಲ್ಲ ಪದ್ಮಾವತಿಗೆ ತಿಳಿಸಿಹೇಳಿ ನಾನು ಈಗಳೇ ಸೌರಾಷ್ಟ್ರಕ್ಕೆ ಹೊರಡುವೆನು ಎಂದು ಅನ್ನಲು ಅದಕ್ಕೆ ಪದ್ಮಾವತಿಯು— ನಾನು ನಿಮಗೆ ಹೋಗಬೇಡವೆಂದು ಹೇಳಲಾರೆನು. ದಾರಿಯಲ್ಲಿ ಎಂಥ ಕಷ್ಟಗಳು ಬಂದರೂ ಅವುಗಳಿಗೆ ನೀವು ಅಂಜದಿರಿ. ತಲೆವಾಗದಿರಿ. ಸೋಮಯ್ಯನನ್ನು ಕರೆತರದೆ, ನೀವು ಪುಲಿಗೆರೆಗೆ ಮರಳಬೇಡಿರಿ. ಆವರೆಗೆ ನಾನು ನನ್ನ ಕೂದಲನ್ನು ಹಿಕ್ಕಿ ಬಾಚಿಕೊಳ್ಳುವದಿಲ್ಲ. ನೀವು ತಿರುಗಿ ಬರುವ ವರೆಗೂ ನಾನೂ ಉಪವಾಸವಿರುವೆನು, ಎಂದು ಪ್ರತಿಜ್ಞೆ ಮಾಡಿ ತನ್ನ ಪತಿಯನ್ನು ಬೀಳ್ಕೊಟ್ಟಳು.

ಮುಂದೆ ಆದಯ್ಯನು ಉತ್ತರಾಭಿಮುಖನಾಗಿ ಸೌರಾಷ್ಟ್ರ ದೇಶಕ್ಕೆ ಹೊರಟನು. ಅವನು ದಾರಿ ನಡಿಯುವಾಗ ಅನೇಕ ಪರ್ವತ ಪ್ರದೇಶಗಳೂ ಗಟ್ಟ ಬೆಟ್ಟಗಳೂ ಹತ್ತಿದವು. ಅವನು ಅವುಗಳನ್ನು ಲೆಕ್ಕಿಸದೆ ಕಲ್ಲು ಮುಳ್ಳುಗಳನ್ನು ತುಳಿಯುತ್ತ ಮುಂದುವರಿದನು. ದಾರಿಯಲ್ಲಿ ಹುಲಿ, ಕರಡಿಗಳು ಅಡ್ಡಗಟ್ಟಿದವು. ಆದರೆ ಅವನು ಭೀತಿಗೊಳ್ಳಲಿಲ್ಲ. ಸೋಮೇಶ್ವರನ ಧ್ಯಾನವಮಾಡುತ್ತ ಮುಂದೆ ಸಾಗಿದನು. ಮಳೆ ಬಿಸಿಲು ಗಾಳಿ, ಹಸಿವೆ ನೀರಡಿಕೆ, ಎನ್ನದೆ ಸೋಮನಾಥನನ್ನು ಎಂದು ಕಾಣುವೆನೋ ಎಂಬ ತವಕದಲ್ಲಿ ಎಲ್ಲ ಶ್ರಮವನ್ನು ಮರೆತನು. ಹೀಗೆ ಅವನು ಐದಿವಸಗಳ ವರೆಗೆ ಪಯಣ ಮಾಡಿದನು. ಮುಂದೆ ಅವನಿಗೆ ಅಡಿ ಇಡುವಷ್ಟು ಸಹ ಶಕ್ತಿಯು ಉಳಿಯಲಿಲ್ಲ. ಆದ್ದರಿಂದ ಅವನು ಕುಳಿತು

ಕೊಂಡೇ ಮುಂದೆ ಹೋಗಹತ್ತಿದನು. ನಿಶ್ಶಕ್ತನಾದ್ದರಿಂದ ಅದೂ ಕೂಡ ಸಾಧ್ಯವಾಗದೆ ಹೋಯಿತು. ಆಗ ಅವನು ಉರುಳುತ್ತ ಉರುಳುತ್ತ ಹೋಗಹತ್ತಿದನು. ಹೀಗೆ ಹೋಗುವಾಗ ಅವನ ಧ್ಯಾನವೆಲ್ಲ ಸೋಮನಾಥನ ಕಡೆಗೆಯೇ ಇತ್ತು. ಅವನನ್ನೇ ಅವನು ಯಾವಾಗಲೂ ಧ್ಯಾನಿಸುವನು. ಈ ಸ್ಥಿತಿಯಲ್ಲಿ ಅವನು ಒಂದು ಬಿಲ್ವವೃಕ್ಷದಡಿಯಲ್ಲಿ ಮಾರ್ಗಾಯಾಸದಿಂದ ಮೂರ್ಛಿತನಾಗಿ ಬಿದ್ದುಬಿಟ್ಟನು. ಆಗ ಅವನ ಭಕ್ತಿಯು ಸೌರಾಷ್ಟ್ರ ದೊಡೆಯನಾದ ಸೋಮನಾಥನಿಗೆ ತಲ್ಪಿತು. ಅವನಲ್ಲಿ ಕರುಣೆಯುಂಟಾಯಿತು. ಆದಯ್ಯನನ್ನು ರಕ್ಷಿಸಬೇಕೆಂಬ ಇಚ್ಛೆಯು ಉಂಟಾಗಲು ಅವನು ವೃದ್ಧ ಜಂಗಮವೇಷವನ್ನು ಧಾರಣಮಾಡಿ ಅವನ ಇದಿರಿಗೆ ಬಂದು ನಿಂತು ಅವನಿಗೆ— ಎಲೇ ಮಗನೇ, ನೀನೆಲ್ಲಿಗೆ ಈಗ ಹೊರಟಿರುವೆ? ನೀನು ಅತ್ಯಂತ ಆಯಾಸದಿಂದ ಬಳಲಿರುವಿ. ಸಮೀಪದಲ್ಲಿ ಒಂದು ಗ್ರಾಮವಿದೆ. ಅಲ್ಲಿಗೆ ಹೋಗು, ಎಂಬ ವಾಕ್ಯವು ಅವನ ಕಿವಿಗೆ ಬಿದ್ದ ಕೂಡಲೆ ಅವನಿಗೆ ಏನೋ ಒಂದು ಚೈತನ್ಯವು ಬಂದಂತಾಗಲು ಅವನು ಕೂಡಲೆ ಎದ್ದು ನಿಂತನು. ಆದರೆ ಅವನು ಆ ವೃದ್ಧ ಜಂಗಮನ ಕೂಡ ಮಾತನಾಡುವದರಲ್ಲಿ ವೇಳೆಗಳೆಯಲಿಲ್ಲ. ಅವನು ಸೋಮನಾಥನಲ್ಲಿಗೆ ಹೋಗುವೆನೆಂದು ಹಾಗೆಯೇ ಮುಂದುವರಿದನು. ಆ ಜಂಗಮನು ಅದನ್ನು ನೋಡಿ ಅವನ ನಿಷ್ಠೆಗೆ ಮೆಚ್ಚಿ ಅವನಿಗೆ ಅಡ್ಡಬಂದು ಅವನ ಕಯ್ಯನ್ನು ಹಿಡಿದು ನೀನೆಲ್ಲಿಗೆ ಹೊರಟಿರುವಿ ಎನ್ನಲು, ಆದಯ್ಯನು— ಸೌರಾಷ್ಟ್ರಪತಿಯನ್ನು ಪುಲಿಗೆರಿಗೆ ತರಲು ಹೊರಟಿದ್ದೇನೆ. ನನ್ನಲ್ಲಿ ಉಸಿರು ಇರುವ ವರೆಗೂ ಅವನಿದ್ದ ಸ್ಥಳಕ್ಕೆ ಹೋಗುವೆನು ಎಂದು ನುಡಿಯಲು ಅವನ ನಿಷ್ಠಲವಾದ ಭಕ್ತಿಗೆ ಆ ಜಂಗಮನು ಮೆಚ್ಚಿ— ಹೀಗಾದರೆ ಇಗೋ, ನಾನೇ ಆ ಸೋಮನಾಥನು. ನಿನ್ನ ನಿಷ್ಠೆಗೆ ಮೆಚ್ಚಿ ಬಂದಿದ್ದೇನೆ. ನಾನೇ ಪುಲಿಗೆರಿಗೆ ಬರುವವನು. ಬಳಲದಿರು ಎಂದು ನುಡಿಯಲು, ಸೋಮನಾಥನು ಅವನ ಜಂಗಮ ವೇಷವನ್ನು ಸೋಡಿ ತಂಕೆಪುತ್ತ— ಪರಮಾತ್ಮನು ಹೀಗೆ ಮನುಷ್ಯನ ಆಕೃತಿಯುಳ್ಳವನಲ್ಲ. ನನ್ನ ತಂಕೆಯನ್ನು ಪೂರವಾಡು ಎಂದೆನ್ನಲು, ಸೋಮನಾಥನು ಜಂಗಮ ವೇಷವನ್ನು ಬಿಟ್ಟು ತಲೆಯಲ್ಲಿ ಚಂದ್ರನ ಕಳೆ, ದಶಭುಜ, ತ್ರಿಜಿಡಿ, ಲಲಾಟ ಲೋಚನವುಳ್ಳವನಾಗಿ ಅವನಿಗೆ ಪ್ರತ್ಯಕ್ಷನಾದನು. ಆಗ ಆದಯ್ಯನು ಆ ರೂಪನ್ನು ನೋಡಿ ಪರಮಾತ್ಮನಿಗೆ

ನಮಸ್ಕರಿಸಿ ಅವನೆದುರಿಗೆ ಕೈಮುಗಿದುಕೊಂಡು ನಿಂತನು. ಆಗ ನೋಡ ನೋಡುತ್ತಿರುವಲ್ಲಿಯೇ ಪರಮಾತ್ಮನು ತನ್ನ ನಿಜರೂಪವನ್ನು ಬಿಟ್ಟು ಪುನಃ ಜಂಗಮರೂಪವನ್ನು ಧಾರಣ ಮಾಡಿದನು.

ಹೀಗೆ ಪರಮಾತ್ಮನು ಜಂಗಮರೂಪವನ್ನು ಧಾರಣ ಮಾಡಿದ ಬಳಿಕ ಅವನೊಡನೆ ಮಾತನಾಡಲು ಅದಯ್ಯನಿಗೆ ಶಕ್ಯವಾಯಿತು. ಆಗ ಅವನು— ನಾನು ೩೦ ದಿನಗಳಲ್ಲಿ ಸೋಮೇಶನನ್ನು ಪುಲಿಗೆರೆಗೆ ತರುವೆನೆಂದು ಪ್ರತಿಜ್ಞೆ ಮಾಡಿದ್ದೇನೆ. ಅದಕ್ಕೆ ೨ ದಿನಗಳು ಮಾತ್ರ ಉಳಿದವು. ಇಷ್ಟರಲ್ಲಿ ನೀನು ಪುಲಿಗೆರೆಗೆ ಹೇಗೆ ಬರುವಿ? ನಾನಾದರೂ ಈ ಅವಧಿಯಲ್ಲಿ ಪುಲಿಗೆರೆಗೆ ಹೇಗೆ ಹೋಗುವೆನು? ಈ ಪ್ರಸಂಗದಲ್ಲಿ ನನ್ನನ್ನು ರಕ್ಷಿಸು ಎಂದು ನುಡಿಯಲು ಆ ಜಂಗಮನು ಅವನಿಗೆ— ನೀನು ಚಿಂತೆಮಾಡಬೇಡ. ನೀನು ಈ ಬಿಲ್ವವೃಕ್ಷದಡಿಯಲ್ಲಿ ಕೆಲ ಹೊತ್ತು ವಿಶ್ರಮಿಸು. ಕೂಡಲೆ ನಿನ್ನನ್ನು ಪುಲಿಗೆರೆಯ ಬಡಗಣ ತಟಾಕದ ಏರಿಯಲ್ಲಿ ತಂದು ಬಿಡುವೆನು. ನಾಳೆ ಸೋಮವಾರ ಪೈತ್ರ ಶುದ್ಧ ಚತುರ್ದಶಿಯು. ಅದರ ಮಧ್ಯರಾತ್ರಿಯಲ್ಲಿ ನಾನು ಸುರಹೊನ್ನೆ ಬಸದಿಯಲ್ಲಿ ನೆಲಿಸುವೆನು ಎಂದು ಹೇಳಿದನು. ಅದಕ್ಕೆ ಅದಯ್ಯನು ನೀನು ಹೀಗೆ ನೆಲಿಸಿದ್ದಕ್ಕೆ ಏನು ಕುರುಹು ಎಂದು ಕೇಳಲು ಆ ಜಂಗಮನು ಅದಕ್ಕೆ— ಆ ಸುರಹೊನ್ನೆ ಬಸದಿಯಲ್ಲಿ ಇರುವ ಹೆಳವನಿಗೆ ಕಾಲುಗಳು, ಕುರುಡನಿಗೆ ಕಣ್ಣುಗಳು ಬರುವವು ಮತ್ತು ಬಸದಿಯ ಬಾಗಿಲುಗಳು ನಿನ್ನ ಹೊರ್ತು ತೆರೆಯಲಿಕ್ಕೆ ಯಾರಿಗೂ ಬರಲಾರದು. ಹೀಗಾದದ್ದು ಕಂಡಲ್ಲಿ ನಾನು ಅಲ್ಲಿ ನೆಲಿಸಿದೆನೆಂದು ತಿಳಿಯುವೇಕು ಎಂದು ನುಡಿದು ಆ ಸ್ಥಳದಲ್ಲಿಯೇ ಅಂತರ್ಧಾನನಾದನು.

ಆಗ ಅದಯ್ಯನು ಆ ಜಂಗಮನು ಹೇಳಿದಂತೆ ಆ ಸ್ಥಳದಲ್ಲಿ ವಿಶ್ರಮಿಸಲು ಅವನಿಗೆ ಕೂಡಲೆ ನಿದ್ರೆಹತ್ತಿತು. ಮುಂದೆ ಕಣ್ಣು ತೆರೆದು ನೋಡುತ್ತಾನೆಯೇ ಅವನು ಆ ಸ್ಥಳದ್ಧ ಜಂಗಮನು ಹೇಳಿದಂತೆ ಪುಲಿಗೆರೆಯ ಕೆರೆಯ ಏರಿಯ ಮೇಲೆ ಮಲಗಿದ್ದನ್ನು ಕಂಡನು. ಆಗ ಅವನು ಪರಮಾತ್ಮನನ್ನು ಧ್ಯಾನಿಸುತ್ತ ಮನೆಗೆ ಬಂದು ಪದ್ಮಾವತಿಯನ್ನು ಕಂಡು ಅದ ಎಲ್ಲ ಸಂಗತಿಗಳನ್ನು ಅವಳಿಗೆ ತಿಳಿಸಿದನು. ಅವಳು ಹರುಷಿತಳಾಗಿ ಪತಿಗೆ— ನೀವು ಹಸಿದಿರುವಿರಿ, ನಿಮಗೆ ಬೋನವನ್ನು ಮಾಡುವೆನೆಂದು ಹೇಳಲು ಅದಯ್ಯನು— ಈಗ ಬೇಡ. ನಾಳೆ ಸೋಮವಾರ ಪ್ರಾತಃ ಬಸದಿಯಲ್ಲಿ ಪ್ರಕಟವಾಗುವನು. ಆಮೇಲೆ ಬೋನವನ್ನು ಮಾಡು ಎಂದು ಹೇಳಿದನು. ಆಮೇಲೆ ಅವಳು ತನ್ನ ತಂದೆ ಪಾರಿಸ ಪಂಡಿತನ ಮನೆಗೆ ಒಳ್ಳೇ ಉತ್ಸಾಹದಿಂದ ಹೋಗಿ ತನ್ನ ಪತಿಯು ಪಟ್ಟಣಕ್ಕೆ ಮರಳಿ ಬಂದದ್ದನ್ನು ಅವನಿಗೆ ಅರುಹಿದಳು. ಅದಕ್ಕೆ ಅವನು ಪರಿಹಾಸವನ್ನು ಮಾಡುತ್ತ— ಏನು? ಅದಯ್ಯನು ತಿರುಗಿ ಬಂದನೇ? ಇಷ್ಟೇನು, ಅಭವನು ಬಸದಿಯಲ್ಲಿ ಬರತಕ್ಕವನೇ? ಎಂದು ಮಗಳಿಗೆ ಹೀಯಾಳಿಸಿ ನುಡಿಯಲು, ಅವಳು ಖಿನ್ನಮನಸ್ಕಳಾಗಿ ತಿರುಗಿ ಮನೆಗೆ ಬಂದಳು.

ಆ ಕಾಲವಲ್ಲಿ ಅಪ್ಪಮಯವಾಗಿತ್ತು. ಅದಯ್ಯನು ಸೋಮಯ್ಯನನ್ನು ಚಿಂತಿಸುತ್ತ ನಿದ್ದೆ ಹೋದನು. ಅರುಣೋದಯವಾಯಿತು. ಆಗ ಪಾರಿಸ ಪಂಡಿತನು ಸುರಹೊನ್ನೆ ಬಸ್ತಿಗೆ ಹೋಗಿ ಅದರ ಕವಾಟವನ್ನು ತೆರೆಯಲು ಯತ್ನಿಸಿದನು. ಆದರೆ ಅದು ತೆರೆಯಲಿಲ್ಲ. ಎಷ್ಟು ನೂಕಿದರೂ ಅದು ಅತ್ತಿತ್ತ ಅಲುಗಾಡಲಿಲ್ಲ. ಆಗ ಬಹು ಜನರು ಅಲ್ಲಿ ನೆರೆದು ಎಲ್ಲರೂ ಕೂಡಿಕೊಂಡು ಬಲವಾಗಿ ಬಾಗಿಲನ್ನು ತೆರೆಯಲು ಪ್ರಯತ್ನಿಸಿದರು. ಆದರೆ ಏನು ಮಾಡಿದರೂ ಕದವು ತೆರೆಯಲಿಲ್ಲ. ಅಷ್ಟರಲ್ಲಿ ಅದಯ್ಯನು ಅಲ್ಲಿಗೆ ಬಂದನು. ಅವನು ಬಂದು ನಿಲ್ಲುವಷ್ಟರಲ್ಲಿ ಬಸದಿಯ ಮುಂದೆ ಯಾವಾಗಲೂ ಕುಳ್ಳಿರುತ್ತಿದ್ದ ಹೆಳವನಿಗೆ ಕಾಲುಗಳು ಬಂದು ಅವನು ಅತ್ತಿತ್ತ ಅಡ್ಡಾಡಹತ್ತಿದ್ದನು. ಅಲ್ಲಿ ಒಬ್ಬ ಕುರುಡನು ಇದ್ದ ಅವನಿಗೆ ಕಣ್ಣುಗಳು ಬಂದಿದ್ದವು. ಅವರಿಬ್ಬರು ತಮ್ಮೊದುರಿಗೆ ಬಂದು ನಿಂತ ಅದಯ್ಯನನ್ನು ಕಂಡು ಅವನಿಗೆ ನಮಸ್ಕರಿಸಿದರು. ನೆರೆದ ಜನರು ಅವರನ್ನು ನೋಡಿ ಆತ್ಯಾಶ್ಚರ್ಯ ಬಟ್ಟರು. ಅವರು ಬಾಗಿಲುಗಳು ತೆರೆಯದೆ ಇದ್ದುದು ಅದಯ್ಯನ ಕೃತಕವಿರಬಹುದೆಂದು ನೆನೆಸಿ, ಅವುಗಳನ್ನು ತೆರೆಯಲು ಅವರು ಅವನಿಗೆ ಹೇಳಿಕೊಂಡರು. ಆಗ ಅದಯ್ಯನು ಬಾಗಿಲಿನ ಮುಂದೆ ನಿಂತುಕೊಂಡು ಸೋಮಯ್ಯನನ್ನು ಸ್ತೋತ್ರಮಾಡಿ ಬಾಗಿಲುಗಳನ್ನು ಹಸ್ತದಿಂದ ಮುಟ್ಟಿದ ಕೂಡಲೆ ಅವು ತಾವಾಗಿಯೇ ಪಟ್ಟನೆ ತೆರೆದವು. ನೆರೆದ ಜನರು ಕುತೂಹಲದಿಂದ ಒಳಗೆ ನೋಡುತ್ತಾರೆಯೇ, ಮೊದಲಿನ ಅರುಹನ ಮೂರ್ತಿಯು ಒಡೆದು ಇಬ್ಭಾಗವಾಗಿತ್ತು. ಅದರ ಸ್ಥಳದಲ್ಲಿ ವೃಷಭನ ಮೇಲೇರಿ ಕುಳಿತ ಶಿವನ ಮೂರ್ತಿಯು ನಿಂತಿತ್ತು. ಅಲ್ಲಲ್ಲಿ ನಿಂತಿದ್ದ

ಬತ್ತಲೆ ಬೊಂಬೆಗಳು ಭಗ್ನವಾಗಿದ್ದವು. ಆಗ ಆದಯ್ಯನು ದೇವಾಲಯವನ್ನು ಪ್ರವೇಶಿಸಿ ಅಲ್ಲಿ ನೆಲೆಗೊಂಡ ಈಶ್ವರನ ಇದಿರಿಗೆ ಹೋಗಿ ನಮಸ್ಕರಿಸಿದನು.

ಅಷ್ಟರಲ್ಲಿ ದೇವಾಲಯದ ಇದಿರಿಗೆ ಅಸಂಖ್ಯಾತ ಶ್ರವಣರು ನೆರೆದಿದ್ದರು. ಅವರು ಪಟ್ಟಣದಲ್ಲಿಯ ಒಂದು ಮಹತ್ವದ ಜಿನಾಲಯವು ಹೀಗೆ ಭಗ್ನವಾದದ್ದನ್ನು ನೋಡಿ ಖತಿಗೊಂಡರು. ಇದು ಆದಯ್ಯನ ಕೃತಕವೆಂದು ಅತ್ಯಂತ ರೋಷವುಳ್ಳವರಾಗಿ ಗರ್ಜಿಸಹತ್ತಿದರು. ಅವನನ್ನು ಕೊಂದುಹಾಕಬೇಕೆಂದು ಯೋಚಿಸಹತ್ತಿದರು. ಅವರು ಕೂಡಲೆ ಅವನ ಮೇಲೇರಿ ಹೋಗಹತ್ತಿದರು. ಆದರೆ ಆದಯ್ಯನು ಅದಕ್ಕೆ ಹಿಂಜರಿಯಲಿಲ್ಲ. ಎಷ್ಟಮಾತ್ರವೂ ಭೀತಿ ಹೊಂದಲಿಲ್ಲ. ಆಗ ದೇವಾಲಯದಲ್ಲಿ ಒಂದು ಅದ್ಭುತವಾಯಿತು. ಈಶ್ವರನ ಮೂರ್ತಿಯೊಳಗಿಂದ ಒಂದು ಸುರಿಗೆಯು ಹೊಂಗೆ ಬರಲು ಆದಯ್ಯನು ಅದನ್ನು ತೆಗೆದುಕೊಂಡು ತನ್ನ ಮೇಲೇರಿ ಬರುತ್ತಿದ್ದ ಜೈನರನ್ನು ಬಾಗಿಲಲ್ಲಿ ತಡೆದು ನಿಲ್ಲಿಸಿದನು. ಜೈನರು ಆಯುಧ ಪಾಡೆಗಳಾಗಿ ತಂಡತಂಡವಾಗಿ ಅವನ ಮೇಲೇರಿ ಬರಲಿಕ್ಕೆ ಹತ್ತಿದರು. ಉಭಯತರಲ್ಲಿ ಸಂಗಡಲೇ ತುಮುಲ ಯುದ್ಧವೆಸಗಿತು. ಅಷ್ಟರಲ್ಲಿ ಇಬ್ಬರು ಗಣಾಧೀಶ್ವರರು ದೇವಾಲಯದೊಳಗಿಂದ ಹೊರಟುಬಂದು ಆದಯ್ಯನ ಸಹಾಯಕ್ಕೆ ನಿಂತರು. ಹೀಗೆ ಈ ಮೂವರು ಶಸ್ತ್ರಗಳನ್ನು ಝಳಿಪಿಸುತ್ತ ಇದಿರಾಳಿಗಳನ್ನು ಸದೆಬಡಿಯಹತ್ತಿದರು. ಆಗ ಎರಡು ಸಾವಿರ ಜೈನರು ದೇವಾಲಯದ ಮುಂದೆ ಮಡಿದರು. ಅವರಿಗೆ ಈ ಪಾಡು ಆದದ್ದು ನೋಡಿ ಉಳಿದವರೆಲ್ಲರೂ ದೇವಾಲಯವನ್ನು ಬಿಟ್ಟು ಓಡಿಹೋದರು.

ಆಗ ಆದಯ್ಯಸೊಡನೆ ಕಾಳಗ ಮಾಡುತ್ತಿದ್ದ ಉಭಯ ಗಣಾಧೀಶ್ವರರು ದೇವಾಲಯದಲ್ಲಿ ಅದೃಶ್ಯವಾದರು. ಆಮೇಲೆ ಆದಯ್ಯನು ಸೋಮಧರನ ಇದಿರಿಗೆ ನಿಂತುಕೊಂಡು ತನ್ನ ಖಡ್ಗವನ್ನು ಅಲ್ಲಿ ಇಟ್ಟು ಅವನಿಗೆ ಸಾಷ್ಟಾಂಗವೆರಗಿದನು. ಆಗ ಅವನು ಈ ಖಡ್ಗವನ್ನು ನಾನೆಲ್ಲಿ ಇಡಲಿ ಎಂದು ಪರಮಾತ್ಮನಿಗೆ ಕೇಳಲು ಈ ದೇವಾಲಯದ ಬದಿಯಲ್ಲಿದ್ದ ಕೊಳದಲ್ಲಿಡಲು ಹೇಳಲು ಹಾಗೆಯೇ ಅದನ್ನು ಅದರಲ್ಲಿ ಇಟ್ಟನು. ಆಗ ಆ ತೀರ್ಥಕ್ಕೆ 'ಖಡ್ಗತೀರ್ಥ' ಎಂಬ ಹೆಸರಾಯಿತು.

ಈ ಪ್ರಕಾರ ಆದಯ್ಯನು ಸೌರಾಷ್ಟ್ರ ಸೋಮೇಶನನ್ನು ಪುಲಿಗೆಯ ಮುಖ್ಯ ಬಸದಿಯಲ್ಲಿ ಸ್ಥಾಪಿಸಿದ ಬಳಿಕ ಪಟ್ಟಣದಲ್ಲಿ ಜೈನರ ಬಲವು ಕುಗ್ಗಿತು. ಬಹುಜನ ಶಿವಶರಣರು ಪುಲಿಗೆರಿಗೆ ಬಂದು ಅಲ್ಲಿ ನೆಲೆಪಹತ್ತಿದರು.

ಮುಂದೆ ಆದಯ್ಯನು ಪುಲಿಗೆರಿಯಲ್ಲಿಯೇ ವಾಸಿಸುತ್ತ ಸೋಮೇಶ ಲಿಂಗದಲ್ಲಿಯೇ ಅಡಗಿದನು.

ಆದಯ್ಯನು ತನ್ನ ಕಯ್ಯಖಡ್ಗವನ್ನು ಇಟ್ಟ ಕೊಳವು ದೇವಾಲಯದ ಪಶ್ಚಿಮದಿಕ್ಕಿಗಿದ್ದು ಅದಕ್ಕೆ ಖಡ್ಗತೀರ್ಥ ಅಥವಾ ಧಾರಾತೀರ್ಥವೆಂಬ ಹೆಸರಾಯಿತು.[೧] ಸೋಮೇಶ್ವರನ ಪಲ್ಲಕ್ಕಿಯ ಉತ್ಸವವು ಪ್ರತಿವರ್ಷ ವೈತ್ರಶುದ್ಧ ಚತುರ್ದಶಿಯ ಮರುದಿನ ಈಗಲೂ ನಡಿಯುತ್ತಾ ಇದೆ. ಸೋಮೇಶ್ವರನ ಈ ದೇವಾಲಯವು ಅತ್ಯಂತ ಪವಿತ್ರ ಸ್ಥಾನವೆಂದು ಯಾವಾಗಲೂ ತಿಳಿಯಲ್ಪಡುತ್ತಾ ಬಂದಿರುತ್ತದೆ. ಆದಕ್ಕೆ ಬಹುಜನ ಅರಸರೂ ಮಾಂಡಲಿಕರೂ ಉಂಬಳಿಯನ್ನು ಹಾಕಿಕೊಡುತ್ತ ಬಂದಿದ್ದಾರೆ.

ಆದಯ್ಯನ ವಚನಗಳಲ್ಲಿ ಷಟ್‌ಸ್ಥಲಶಾಸ್ತ್ರದ ತತ್ವಗಳು ಬಹು ವಿಶದವಾಗಿ ವಿವರಿಸಲ್ಪಟ್ಟಿವೆ. ವಾಚಕರು ಅವನ ಮೂಲ ವಚನ ಗ್ರಂಥವನ್ನೇ ಓದತಕ್ಕದ್ದು. ಆದಯ್ಯನು ಬಸವೇಶ್ವರನಕಿಂತಲೂ ಸ್ವಲ್ಪ ಈಚಿನವನಿದ್ದಾನೆಂದು ತೋರುತ್ತದೆ. 'ಈ ಸಂಗತಿಯನ್ನು ಸಮರ್ಥಿಸುವ ಕೆಲವು ವಚನಗಳನ್ನು ವಾಚಕರು ಅವಲೋಕಿಸಬೇಕು.

ವಚನಗಳು.

(೧) ಬಸವಣ್ಣನ ಭಕ್ತಿಸ್ಥಲ, ಮಡಿವಾಳ ಮಾಚಣ್ಣನ ಮಹೇಶ್ವರಸ್ಥಲ, ಘಟ್ಟಿವಾಳಯ್ಯ ಮುಪ್ಪಣ್ಣನ ಪ್ರಸಾದಿಸ್ಥಲ, ಚನ್ನಬಸವಣ್ಣನ ಪ್ರಾಣಲಿಂಗಿಸ್ಥಲ, ಪ್ರಭುವಿನ ಶರಣಸ್ಥಲ, ಸೊಡ್ಡಳ ಬಾಚರಸರ ಐಕ್ಯಸ್ಥಲ, ಅಜಗಣ್ಣನ ಆರೂಢ, ನಿಜಗುಣನ ನಿಜೈಕ್ಯ, ಅನುಮಿಷನ ಸಿದ್ಧಿಸ್ಥಲ, ಮಹಾದೇವಿಯಕ್ಕನ ಜ್ಞಾನ, ನಿಂಬಿಯಕ್ಕನ ಜ್ಞಾನ ನಿಶ್ಚಯ, ಮುಕ್ತಾಯಕ್ಕನ ಅಕ್ಕರು, ಸತ್ಯಕ್ಕನ ಯುಕ್ತಿ, ಅಲ್ಲಾಳಿಯಕ್ಕನ ಸಮತೆ, ರೇವಣಸಿದ್ಧಯ್ಯದೇವರ ನಿಷ್ಠೆ, ಸಿದ್ಧರಾಮತಂದೆಗಳ ಮಹಿಮೆ, ಮರುಳ

೧. ಈ ಸ್ಥಾನವನ್ನು ಲಕ್ಷೇಶ್ವರವನ್ನು ಆಳುತ್ತಿದ್ದ ಈಗಿನ ಪ್ರಭುಗಳು ಕೆಲವು ವರ್ಷಗಳ ಹಿಂದೆ ಮುಟ್ಟಿಸಿಬಿಟ್ಟಿದ್ದಾರೆಂದು ತಿಳಿಯುತ್ತದೆ. —ಸಂಪಾದಕ.

ಸಿದ್ಧಯ್ಯದೇವರ ಅವೃಷ್ಟ ಪ್ರಸಾದ ನಿಷ್ಠೆ, ಏಕೋರಾಮಯ್ಯಗಳ ಆಚಾರ ನಿಷ್ಠೆ, ಪಂಡಿತಾರಾಧ್ಯರ ಸ್ವಯಂಪಾಕ, ಮುಗ್ಧಸಂಗಯ್ಯ, ಮೈದುಸ ರಾಮಣ್ಣ, ಬೇಡರ ಕನ್ನಪ್ಪ, ಕೋಳೂರು ಕೊಡಗೂಸು, ತಿರುನೀಲ ನಕ್ಕರು, ರುದ್ರಪಶುಪತಿಗಳು, ದೀಪದ ಕಲಿಯರು, ಇವರ ಮುಗ್ಧಭಕ್ತಿ ಎನ್ನೊಳಗೆಂದಿಪ್ಪುದೋ ಸೌರಾಷ್ಟ್ರ ಸೋಮೇಶ್ವರಾ?

೨. ಬಸವಣ್ಣನೆನ್ನಂಗ, ಮಡಿವಾಳನೆನ್ನಮನ, ಪ್ರಭುವು ಎನ್ನ ಪ್ರಾಣ, ಚನ್ನಬಸವಣ್ಣನೆನ್ನ ಕರಸ್ಥಲದ ಲಿಂಗ, ಘಟ್ಟಿವಾಳನೆನ್ನ ಭಾವ, ಸೊಡ್ಡಳಬಾಚರಸರೆನ್ನ ಅರಿವು, ಮಹಾದೇವಿಯಕ್ಕನೆನ್ನ ಜ್ಞಾನ, ಮುಕ್ತಾಯಕ್ಕನೆನ್ನ ಅಕ್ಕರು, ಸತ್ಯಕ್ಕನೆನ್ನ ಮುಕ್ತಿ, ನಿಂಬಿಯಕ್ಕನೆನ್ನ ನಿಶ್ಚಯ, ಅಲ್ಲಾಳಿಯಕ್ಕನೆನ್ನ ಸಮತಿ, ಅನುವಿಷಸೆನ್ನ ನಿಶ್ಚಲ, ನಿಜಗುಣನೆನ್ನ ಪ್ರಸಾದಿ, ರೇವಣಸಿದ್ಧೇಶ್ವರನೆನ್ನ ನೇತ್ರ, ಸಿದ್ಧರಾಮತಂದೆಗಳೆನ್ನ ನೇತ್ರದ ವೈಕ್ಕ್ಯ, ಮರುಳಸಿದ್ಧೇಶ್ವರದೇವರೆನ್ನ ಶ್ರೋತ್ರ, ಪಂಡಿತಾರಾಧ್ಯರೆನ್ನ ಜಿಹ್ವೆ, ಏಕೋರಾಮತಂದೆಗಳೆನ್ನ ನಾಸಿಕ, ಅಸಂಖ್ಯಾತರೆನ್ನ ಅವಯವ, ಪುರಾತರೆನ್ನ ಪುಣ್ಯದ ಪುಂಜ, ಏಳುನೂರಿಪ್ಪತ್ತು ಅಮರಗಣಂಗಳೆನ್ನ ಗತಿಮತಿ. ಸೌರಾಷ್ಟ್ರ ಸೋಮೇಶ್ವರಾ ನಿಮ್ಮ ಶರಣರ ಪಡಿದೊತ್ತಯ್ಯ.

ಈ ವಚನಗಳಲ್ಲಿ ಉಲ್ಲೇಖವಾದ ಶಿವಶರಣರ ತರುವಾಯ ಆದಯ್ಯನು ಪ್ರಸಿದ್ಧಿಗೆ ಬಂದಿದ್ದಾನೆಂದು ತೋರುತ್ತದೆ. ಆದಯ್ಯನು ಬಸವೇಶ್ವರನಲ್ಲಿಗೆ ಹೋಗಿ ಶಿವಾನುಭವ ಮಂಟಪದಲ್ಲಿದ್ದದ್ದರ ಉಲ್ಲೇಖವು ಎಲ್ಲಿಯೂ ಇಲ್ಲ. ಆದುದರಿಂದ ಬಸವೇಶ್ವರನ ತರುವಾಯ ಇವನು ಪ್ರಸಿದ್ಧಿಗೆ ಬಂದಿದ್ದಾನೆಂದು ತಿಳಿಯಬೇಕಾಗುತ್ತದೆ. ಆದರೆ ಇವನ ಚರಿತ್ರೆಯನ್ನು ಹರಿಹರ ಮತ್ತು ರಾಘವಾಂಕರು ಬರೆದಿದ್ದಾರೆ. ಈ ಕವಿಗಳು ಇದ್ದುದು ೧೩ನೇ ಶತಮಾನದ ಆರಂಭದಲ್ಲಿ. ಆದ್ದರಿಂದ ಅವರಕಿಂತಲೂ ಪೂರ್ವದಲ್ಲಿ ಆದಯ್ಯನು ಇರಬೇಕು. ಅಲ್ಲದೆ ಅವನ ಕಾಲದಲ್ಲಿ ಲಕ್ಷೆಶ್ವರವು ಇನ್ನೂ ವೀರಶೈವರಿಂದ ತುಂಬಿರದೆ ಜೈನ ಸಂಸ್ಕೃತಿಯುಳ್ಳದ್ದಾಗಿತ್ತು. ಆದ್ದರಿಂದ ಆದಯ್ಯನು ಬಸವೇಶ್ವರನಕಿಂತ ಬಹಳ ಈಚಿನವನಲ್ಲ. ಅವನು ೧೧೭೦ರ ತರುವಾಯ ೧೦-೨೦ ವರ್ಷಗಳಲ್ಲಿಯೇ ಪ್ರಸಿದ್ಧಿಗೆ ಬಂದಿರಬಹುದೆಂದು ನಾವು ಊಹಿಸಬಹುದು.

ನನ್ನಯ್ಯ.

ಒಡ್ಡದೇಶ (ಓಡಿಸಾಪ್ರಾಂತ) ದಲ್ಲಿ ಕರ್ಣೆಕಾಪುರವೆಂಬ ಗ್ರಾಮವು. ಅಲ್ಲಿ ಸುಜ್ಞಾನಿದೇವರೆಂಬ ಹೆಸರಿನ ದಾಸೋಹಿಗಳು ವಾಸಮಾಡುತ್ತಿದ್ದರು. ಅವರು ಕೇವಲ ಶಿವಾಚಾರನಿಷ್ಠರು, ಶಿವಜ್ಞಾನಿಗಳು. ಅವರು ವೀರಶೈವೋಪದೇಶವನ್ನು ಮಾಡುತ್ತ ದೀಕ್ಷಾದಿ ಕಾರ್ಯಗಳನ್ನು ನೆರವೇರಿಸುತ್ತಾ ಇದ್ದರು. ಅವರು ಕಲ್ಯಾಣಪಟ್ಟಣದಲ್ಲಿ ಬಸವಾದಿ ಪ್ರಮಥರು ಶಿವಾನುಭವಿಗಳಾಗಿರುವರೆಂಬುದನ್ನು ತಿಳಿದು ಆ ಪಟ್ಟಣಕ್ಕೆ ತಮ್ಮ ಸೇವಕರನ್ನೊಡಗೊಂಡು ಹೊರಡುವವರಾದರು. ಕಲ್ಯಾಣವು ತಮ್ಮ ಗ್ರಾಮದಿಂದ ಬಹು ದೂರವು. ಅವರು ಅನೇಕ ಅರಣ್ಯಗಳೊಳಗಿಂದ ಹಾಯ್ದು ಹೋಗಬೇಕಾಗುತ್ತಿತ್ತು. ಅವರು ಹೋಗುವಾಗ ದಾರಿಯಲ್ಲಿ ಮಾತಂಗ ಪರ್ವತವೆಂಬ ಪರ್ವತದೊಳಗಿಂದ ಹಾಯ್ದು ಹೋಗುತ್ತಿರಲು ಹಲವರು ಬೈಪೇಲೆಲ್ಲ ಗಾಯಹೊಂದಿ ನೆತ್ತರು ಮುಳುಗಿದವರಾಗಿ ಇದಿರಿಗೆ ಬರುತ್ತಾ ಇದ್ದುದನ್ನು ಕಂಡರು. ಆ ಜನರು ಸುಜ್ಞಾನಿಗಳನ್ನು ಕಂಡು ಅವರಿಗೆ-- ನೀವೆಲ್ಲಿಗೆ ಪಯಣಮಾಡುತ್ತೀರೆಂದು ಕೇಳಲು, ಅವರು ಕಲ್ಯಾಣಕ್ಕೆಂದೆನಲು ಅವರಂದದ್ದು-- ನೀವು ಈ ದಾರಿಯಿಂದ ಹೋಗಬೇಡಿರಿ, ನಾವು ಎಂಟು ಜನರು ಇದ್ದು ಈ ದಾರಿಯಿಂದ ಹೋಗುವಾಗ ಮಾತಂಗತಮ್ಮನೆಂಬ ಬೇಡನು ನಮ್ಮನ್ನು ಅಡ್ಡಗಟ್ಟಿ ನಮ್ಮಲ್ಲಿರುವ ಜನರನ್ನು ಕೊಂದುಹಾಕಿ ನಮ್ಮನ್ನು ಹೀಗೆ ಗಾಯಗೊಳಿಸಿ ಸುಲಿದುಬಿಟ್ಟಿದ್ದಾನೆ. ನಿಮಗೆಲ್ಲಿಯ ಪಯಣ? ಮುಂದೆ ಹೋಗುವದು ಉಚಿತವಲ್ಲ, ಎಂದು ಹೇಳಲು ಸುಜ್ಞಾನಿಗಳ ಸೇವಕರೆಲ್ಲರು ಅಂಜಿ-- ಈ ಮಾರ್ಗದಲ್ಲಿ ನಿಮ್ಮ ಕೂಡ ನಾವು ಬರಲಾರೆವು ಎಂದು ನುಡಿಯಲು, ಸುಜ್ಞಾನಿದೇವರು ಅವರಿಗೆ-- ನಿಮ್ಮಲ್ಲಿ ಭೀತಿಯುಂಟಾಗಿದ್ದರೆ, ನೀವು ತಿರುಗಿ ಹೋಗಬಹುದು ಎಂದು ಅಪ್ಪಣೆ ಕೊಡಲು ಅವರೆಲ್ಲರೂ ತಿರುಗಿ ತಮ್ಮ ಊರಿಗೆ ಹಿಂದಿರುಗಿ ಹೋದರು.

ಆಪರಿ ಸುಜ್ಞಾನಿದೇವರು ಮುಂದೆ ಹೋಗಲು ಅಂಜಲಿಲ್ಲ. ಅವರು ತಮ್ಮ ಯಾವತ್ತು ಪೂಜೋಪಕರಣಗಳಿದ್ದ ಹಸಿಬೆಯನ್ನು ತಾವೇ ಹೊತ್ತುಕೊಂಡು ಎರಡು ಗಾವುದ ದಾರೀ ನಡೆದು ಬರುವಷ್ಟರಲ್ಲಿ ದಾರಿಯಲ್ಲಿ ಮಾತಂಗತಮ್ಮನು ಇದಿರಿಗೆ ಅಡ್ಡ ನಿಂತದ್ದನ್ನು ಕಂಡರು. ಆಗ

ಅವರು ನಿರ್ಭೀತಿಯಿಂದ ಮುಂದಕ್ಕೆ ಸಾಗಿ ಅವನಿದಿರಿಗೆ ಬಂದು ನಿಂತುಕೊಂಡರು. ಮಾತಂಗತಮ್ಮನು— ಹೀಗೆ ಯಾರೂ ಅಂಜದೆ ನನ್ನ ಕಡೆಗೆ ಬಂದವರಿಲ್ಲ. ಈತನು ಮಾತ್ರ ಸ್ಥಿರವೃತ್ತಿಯನು ಎಂದು ಆಶ್ಚರ್ಯಪಟ್ಟನು. ಆದರೆ ಕೂಡಲೆ ಅವನು ಅವರಿಗೆ— ನಾನು ನಿಮ್ಮನ್ನು ಸುಲಿಯಲಿಕ್ಕೆ ನಿಂತಿದ್ದೇನೆ. ನೀವಾರು, ನೀವೆಲ್ಲಿಯವರು ಎಂದು ಕೇಳಲು, ಅವರು ತಮ್ಮ ಹೆಸರನ್ನೂ ವಾಸಿಸುವ ಗ್ರಾಮವನ್ನೂ ತಮ್ಮ ಮುಂದಿನ ಕಾರ್ಯವನ್ನೂ ಹೇಳಿದರು. ಅದನ್ನು ಕೇಳಿ ಆ ಬೇಡನು— ಆದರೇನಾಯಿತು? ನಿಮ್ಮ ಬೆನ್ನಮೇಲಿನ ಆ ಹಸಿಬೆಯನ್ನು ತೋರಿಸಿರಿ. ಅದರೊಳಗೆ ನನಗೆ ಬೇಕಾದದ್ದನ್ನು ತೆಗೆದುಕೊಂಡು ಉಳಿದದ್ದನ್ನು ನಿಮಗೆ ಕೊಟ್ಟೇನು ಎಂದು ಅಂದು ಅವನು ಸುಜ್ಞಾನಿದೇವರನ್ನು ಒತ್ತಟ್ಟಿಗೆ ಕರೆದುಕೊಂಡು ಹೋಗಿ ಒಂದು ಗಿಡದ ಕೆಳಗೆ ಕುಳ್ಳಿರಿಸಿ, ಅವರ ಹೆಗಲಮೇಲಿನ ಹಡಪವನ್ನು ಕೆಳಗಿಡಿಸಿ, ಇದರೊಳಗೇನಿದೆ ಎಂದು ಕೇಳಿದನು. ಅವರು ಅದನ್ನು ತೆರೆದು ತೋರಿಸಲು, ಅದರಲ್ಲಿ ಬರೀ ಲಿಂಗಗಳೇ ಇದ್ದವು. ಅವುಗಳನ್ನು ನೋಡಿ ಇವೇನೆಂದು ಕೇಳಲು, ಅವು ಲಿಂಗಗಳೆನಲು, ಇವೇನ ಕೊಡುವವು ಎನಲು, ಇವು ಹೆಣ್ಣು, ಹೊನ್ನು, ರಾಜಭೋಗಗಳನ್ನು ಕೊಡುವವು ಎಂದು ಹೇಳಿದರು.

ಆಗ ಆ ಮಾತಂಗನಿಗೆ ಆಶೆಯುಂಟಾಗಿ ಆ ಲಿಂಗಗಳಲ್ಲೊಂದನ್ನು ಕಯ್ಯಲ್ಲಿ ಹಿಡಿದುಕೊಂಡು, ಇದನ್ನು ನನಗೆ ಕೊಡು ಎಂದು ಎನ್ನಲು ಸುಜ್ಞಾನಿದೇವರು ಇದನ್ನು ಗುರುವಿನಿಂದ ತೆಗೆದುಕೊಳ್ಳಬೇಕು, ಬಲುಹಿನಿಂದ ಹೀಗೆ ಸೆಳೆದರೆ ಸುಖವಾಗದು ಎಂದೆನಲು, ಆಗ ಬೇಡನು— ಗುರುವೆನ್ನುವವನು ಯಾವನು? ಅವನೆಲ್ಲಿದ್ದಾನೆ? ಆತನನ್ನು ಕರೆತಂದರೆ ನಿನ್ನನ್ನು ಬಿಟ್ಟುಬಿಡುವೆನು ಎಂದು ಎನಲು, ನೀ ಕೇಳಿದ ಗುರುವು ದೂರವಿಲ್ಲ. ನಿನ್ನೆದುರಿಗೆಯೇ ನಿಂತಿದ್ದಾನೆ ಎಂದು ಹೇಳಿ, ಸುಜ್ಞಾನಿದೇವರು ಅವನಿಗೆ— ನಿನಗೆ ಈ ಲಿಂಗವು ಬೇಕಾಗಿದೆಯಷ್ಟೇ. ಕೊಡುವೆನು—ಆದರೆ ನಿನ್ನ ಹಿಂದೆ ಯಾರಾದರೂ ಇದ್ದಾರೆಯೇ ಎಂದು ಕೇಳಲು ಅವನು— ಹೌದು. ನನ್ನ ಹೆಂಡತಿಯೊಬ್ಬಳು ಇದ್ದಾಳೆ ಎನಲು, ಸುಜ್ಞಾನಿಯು—ಅವಳು ಇಲ್ಲಿ ಬೇಕು. ಆದ್ದರಿಂದ ಅವಳನ್ನು ಕರೆಯಲಿಕ್ಕೆ ನಿನ್ನ ಜೋಡಿಗನೊಬ್ಬನನ್ನು ಕಳಿಸು. ಅವನು ಸುತ್ತಲೂ ನೋಡಿ— ಇಲ್ಲಿ ಯಾರೂ ಇಲ್ಲವಲ್ಲಾ, ನೀನು ಒಬ್ಬನನ್ನು ಕರೆದುಕೊಂಡುಬಾ ಎಂದೆನ್ನಲು

ಆ ಬೇಡನು— ಛಪ್ಪರೇ, ನೀನು ಒಳ್ಳೇ ಬುದ್ಧಿವಂತ. ನನ್ನನ್ನು ಹೀಗೆ ಬೇರೆ ಕಡೆಗೆ ಕಳಿಸಿ, ನೀನು ನನ್ನನ್ನು ವಂಚಿಸಿ ಓಡಿಹೋಗಬೇಕೆನ್ನುತ್ತೀಯಾ? ಎಂದೆನ್ನಲು, ಸುಜ್ಞಾನಿದೇವರು— ಇಲ್ಲ, ಇಲ್ಲ. ನಾನು ವಂಚಿಸುವದಿಲ್ಲ. ನಿನಗೆ ನಂಬುಗೆ ಕೊಡುತ್ತೇನೆ ಎಂದೆನ್ನಲು, ಆ ಬೇಡನು ಅಲ್ಲಿಂದ ಹೋಗಿ ತನ್ನ ಕಾವಲರಲ್ಲೊಬ್ಬನಾದ ಕನ್ನುಗನೆಂಬುವನನ್ನು ಅಲ್ಲಿಗೆ ಕರೆದು ಕೊಂಡುಬಂದನು. ತಾನಿಲ್ಲದಾಗ ಸುಜ್ಞಾನಿದೇವರು ಓಡಿಹೋಗದೆ ಅಲ್ಲಿಯೇ ಇದ್ದದ್ದನ್ನು ಕಂಡು ಅವರ ಮಾತಿನಲ್ಲಿ ಹೆಚ್ಚಿಗೆ ವಿಶ್ವಾಸವನ್ನು ತಾಳಿ ಅವರನ್ನು ಮತ್ತಿಷ್ಟು ಆದರಿಸುವವನಾದನು.

ಆಗ ಸುಜ್ಞಾನಿದೇವರು ಅವನಿಗೆ— ಇನ್ನುಮೇಲೆ ನಿನ್ನ ಹೆಂಡತಿಯನ್ನು ಕರಿಸು, ನಿನಗೆ ಲಿಂಗವನ್ನು ಕೊಡುತ್ತೇನೆ ಎಂದು ಹೇಳಲು, ಆ ಬೇಡನು ಅವಳನ್ನು ಕರೆತರಲು ಕನ್ನುಗನನ್ನು ಊರ ಕಡೆಗೆ ಕಳಿಸಿದನು.

ದೀಕ್ಷೆಯನ್ನು ಪಡೆಯುವಂಥವನ ಮನೆಯವರೆಲ್ಲರೂ ಸದಾಚಾರಿಗಳಿರಬೇಕೆಂದು ಶಿವಾನುಭವದ ತತ್ವವಿದೆ. ವಿಶೇಷವಾಗಿ ಅವರಲ್ಲಿ ಸತಿಯು ಸುಶೀಲೆಯಾಗಿರಬೇಕು. 'ಸತಿಪತಿಗಳೊಂದಾಗದ ಭಕ್ತಿ ಅವೃತ ದೊಳು ವಿಷ ಬೆರಿಸಿದಂತೆ' ಮತ್ತು 'ಭಾಂಡ ಭಾಜನ ಶುದ್ಧಿಯಿಲ್ಲದವರ ಭಕ್ತಿ ಹೆಂಡದ ಮಡಿಕೆಯ ಹೊರಗೆ ತೊಳೆದಂತೆ' ಎಂದು ಶಿವಶರಣರ ವಾಕ್ಯಗಳುಂಟು. ಆದ್ದರಿಂದ ಜೇಡನ ಸತಿಯ ಗುಣಗಳನ್ನು ಪರೀಕ್ಷಿಸಬೇಕೆಂದು ಸುಜ್ಞಾನಿದೇವರು ಯೋಚಿಸಿ ಕನ್ನುಗನನ್ನು ಬೇರೆ ಕಡೆಗೆ ಕರೆದು— ಪರರಾಯರು ಬೇಟೆಗೆ ಬಂದಾಗ ಅವರಿಗೂ ಮಾತಂಗತಮ್ಮನಿಗೂ ಜಗಳವಾಯಿತು. ಅದರಲ್ಲಿ ಅವರು ಅವನನ್ನು ಕೊಂದುಹಾಕಿದರು ಎಂದು ಜೇಡನ ಸತಿಗೆ ಹೇಳು, ಎಂದೆನ್ನಲು, ಅವನು ಹಾಗೆಯೇ ಆಗಲೆಂದು ಅವನು ಅವಳಿದ್ದಲ್ಲಿಗೆ ಹೋಗಿ ಅದರಂತೆಯೇ ಹೇಳಿ, ಅವಳಿಗೆ— ನೀನು ನಿನ್ನ ಗಂಡನ ಹೆಣವನ್ನು ನೋಡಲಿಕ್ಕೆ ಬರಬೇಕೆಂದು ನುಡಿದನು. ಅದಕ್ಕೆ ಅವಳು— ನಾ ಬಂದೇನು ಮಾಡುವದು? ನನ್ನ ಗಂಡನ ಅನ್ಯಾಯಕ್ಕೆ ಅವನನ್ನು ಪರರಾಯರು ಕೊಂದಿರಬಹುದು. ಇಷ್ಟುದಿನ ಅವನು ತನ್ನ ಬಲುಮೆಯಿಂದ ನನ್ನನ್ನು ಆಳಿದನು. ಅವನು ಸತ್ತದ್ದು ಒಳಿತಾಯಿತು ಎಂದು ಅಂದು, ಮುತ್ತುಗ

ಅಮೇಲೆ ಸುಜ್ಞಾನಿದೇವರು--ಮಾತಂಗನೇ ಇಂಥ ಕೆಟ್ಟ ಸ್ತ್ರೀಯರ ಕಥೆಗಳನ್ನು ಬಿಡು. ಸೀತೆ, ದ್ರೌಪದಿಯರಂಥ ಸದಾಚಾರಿಗಳಾದ ಸ್ತ್ರೀಯರ ಪವಿತ್ರೆಗಳನ್ನು ಕೇಳು ಎಂದು ಆ ಬೇಡನಿಗೆ ಅವರ ಕಥೆಗಳನ್ನು ಹೇಳಿದನು. ಅವರಿಂದ ರಾವಣ ಕೀಚಕರಂಥ ದುಷ್ಟರು ಹೇಗೆ ಹತರಾದರೆಂಬುದನ್ನು ತಿಳಿಸಿಹೇಳಿ ಸ್ತ್ರೀಯರಿಂದ ಲೋಕೋದ್ಧಾರವಾಗುತ್ತದೆ, ಸ್ತ್ರೀಹತ್ಯೆ ಮಾಡಬಾರದು ಎಂದು ಬೋಧಿಸಿದನು. ಆಗ ಮಾತಂಗತಮ್ಮನು ಸುಜ್ಞಾನಿದೇವರ ಮಾತು ಸರಿಯಾವದ್ದೆಂದು ಒಡಂಬಟ್ಟು--ನನ್ನ ಆ ಕೆಟ್ಟ ಸತಿಯನ್ನು ಇಂದು ಬಿಟ್ಟುಬಿಟ್ಟೆನು, ಹಿಂಸಿಸುವದಿಲ್ಲೆಂದು ಹೇಳಿದನು.

ಆಮೇಲೆ ಸುಜ್ಞಾನಿದೇವರು ಅವನಿಗೆ--ನಿನ್ನ ಪಿತಮಾತೆಯರುಂಟೇ ಎಂದು ಕೇಳಲು, ಅವನು-ನನ್ನ ಪಿತನು ಸರ್ಪ ಕಚ್ಚಿ ಸತ್ತನು, ಮಾತೆಯು ಮಹಾರೋಗದಿಂದ ಸತ್ತಳು ಎನ್ನಲು ನಿನ್ನಂಥ ಸಮರ್ಥ ಮಗನಿದ್ದು, ನಿನ್ನ ತಾಯಿತಂದೆಗಳು ಹೀಗೆ ಸಾಯಬೇಕೇ? ಅವರ ಸಾವನ್ನು ನೀನು ಏಕೆ ನಿಲ್ಲಿಸಲಿಲ್ಲ? ಎಂದು ಕೇಳಿದನು. ಅದಕ್ಕೆ ಮಾತಂಗತಮ್ಮನು--ಅದು ನನ್ನ ಕಯ್ಯೊಳಗಿಲ್ಲ ಎಂದು ಹೇಳಿದನು. ಆಗ ಸುಜ್ಞಾನಿದೇವರು-ನೀನು ದಿನಾಲು ಕರಣ್ಯದಲ್ಲಿ ತಿರುಗಾಡುತ್ತೀ. ನಿನಗೆ ಸರ್ಪ ಕಚ್ಚಿರುವದಿಲ್ಲ. ನಿನ್ನ ತಂದೆಗೇಕೆ ಕಚ್ಚಬೇಕು? ನಿನ್ನ ತಾಯಿಗೆ ಮಹಾರೋಗ ಹಿಂಥ ಕೆಟ್ಟ ಬೇನೆಯು ಬಂದು ಅಕೆ ಏಕೆ ಬಳಲಿ ಸಾಯಬೇಕು? ಎಂದು ಕೇಳಲು--ಅದು ನನಗೆ ತಿಳಿಯದು. ನಿನಗೆ ಗೊತ್ತಿದೆಯೋ? ಎಂದು ಕೇಳಿದನು.

ಆವಕ್ಕೆ ಸುಜ್ಞಾನಿದೇವರು-- ನಿನ್ನ ತಂದೆ ತಾಯಿಗಳು ಹಿಂದಣ ಜನ್ಮದಲ್ಲಿ ಏನಾಡಿದ್ದನ್ನು ಅವರು ಅನುಭವಿಸಿದರು. ಅವರು ತಮ್ಮ ಪಾಪದ ಫಲವನ್ನು ಉಂಡರು. ಆವ್ದರಿಂದ ಅವರನ್ನು ಕಾಯಲಿಕ್ಕೆ ನಿನಗೆ ಆಗಲಿಲ್ಲ. ನೀನು ಮಾಡಿದ ಪುಣ್ಯಪಾಪಗಳ ಫಲವನ್ನು ನೀನು ಅನುಭವಿಸುತ್ತೀ. ಜಗತ್ತಿನಲ್ಲಿ ನಿನಗೆ ಸಹಾಯಕರಾರೂ ಇಲ್ಲ ಮಗನೇ. ನೀನು ಪುಣ್ಯ ಮಾಡಿದಲ್ಲಿ ನೀನು ಸುಖಿಯಾಗಿ ಬಾಳುವಿ. ಪಾಪ ಮಾಡಿದರೆ ಕಷ್ಟವನ್ನು ಅನುಭವಿಸುವಿ. ಜಗತ್ತಿನಲ್ಲಿ ಯಾರಿಗೂ ಯಾರು ಇಲ್ಲ ಎಂದು ಹೇಳಿದರು.

ನೆಂಬ ಇನ್ನೊಬ್ಬ ಬೇಡನನ್ನು ಕರೆಮುಕೊಂಡು ಮನೆಯನ್ನು ಬಿಟ್ಟು ಅವ ನೊಡನೆ ಹೊರಟುಹೋದಳು. ಆಗ ಕನ್ನಿಗನು ತಿರುಗಿ ಬಂದು ನಡೆದ ಸಂಗತಿಯನ್ನು ಮಾತಂಗತಮ್ಮನಿಗೆ ಹೇಳಲು, ಸುಜ್ಞಾನಿಗಳು ಅವನಿಗೆ-- ನೀನೇ ಊರಿಗೆ ಹೋಗಿ ನಿನ್ನ ಹೆಂಡತಿಯನ್ನು ನೋಡಿಕೊಂಡು ಬಾ ಎಂದು ಕಳುಹಲು ಅವನು ತನ್ನ ಗೃಹಕ್ಕೆ ಬಂದು ನೋಡುತ್ತಾನೆಯೇ ಅಲ್ಲಿ ಯಾರೂ ಇಲ್ಲದಿರಲು ಅವನು ಸುಜ್ಞಾನಿಗಳ ಕಡೆಗೆ ಮರಳಿ ಬಂದು ಅವರಿಗೆ ಅತ್ಯಂತ ಕ್ರೋಧಾವೇಶದಿಂದ ಅಂದದ್ದು-- ನನ್ನ ಹೆಂಡತಿಯನ್ನು ಎತ್ತಿಕೊಂಡು ಹೋಗಿದ್ದಾರೆ. ಆಕೆಯನ್ನು ತೆಗೆದುಕೊಂಡು ಹೋದ ಮುತ್ತುಗನನ್ನು ಕೊಂದುಹಾಕದೆ ಬಿಡೆನು ಎಂದು ಹೊರಡಲು ಉದ್ಯುಕ್ತನಾದನು. ಅದಕ್ಕೆ ಸುಜ್ಞಾನಿಗಳು ಅವನಿಗೆ-- ಮಾತಂಗನೇ, ನಿನ್ನ ಕಂಡವರು, ಕೇಳಿದವರು ಇಂಥ ಸಮರ್ಥನ ಹೆಂಡತಿಯು ಓಡಿ ಹೋದಳಂತೆ, ಅವಳನ್ನು ಹುಡುಕಲಿಕ್ಕೆ ಇವನು ಬಂದಾನಂತೆ, ಅಂಥ ಅವಳನ್ನು ಇವನು ಆಳುವವನಂತೆ! ಇವನೆಂಥ ಸಮರ್ಥನು!! ಎಂದು ನಿನ್ನನ್ನು ನೋಡಿ ಜನರು ನಕ್ಕಾರಲ್ಲವೇ? ಎಂದು ನುಡಿದು ಭಾವಕೀ, ಪುಷ್ಕಳೆಯರ ಕಥೆಗಳನ್ನು ಹೇಳಿದನು. ಆಗ ಬೇಡನು-- ಹೌದು ನೀವ ನ್ನುವದು ನಿಜವಾದದ್ದು. ಅವನನ್ನ ಹುಡುಕುತ್ತ ಹೋಗುವದು ನನಗೆ ಅಪಮಾನಕಾರಕವು, ಎಂದು ಅಂದು ಅವನ ಬೆನ್ನು ಹತ್ತಿ ಹೋಗುವದನ್ನು ಬಿಟ್ಟುಬಿಟ್ಟನು.

ಆದರೆ ಮಾತಂಗತಮ್ಮನು ಅಷ್ಟಕ್ಕೆ ಸಮಾಧಾನ ಹೊಂದಲಿಲ್ಲ. ಅವನು-- ಆ ಎತ್ತಿಕೊಂಡು ಹೋದವನನ್ನು ನಾನು ಬಿಡುವೆನು. ಆದರೆ ನನ್ನ ಸತಿ ಇದ್ದಲ್ಲಿಗೆ ಹೋಗಿ ಅವಳನ್ನು ಕೊಂದುಹಾಕಿಬಿಡುವೆನೆಂದು ನುಡಿಯಲು ಸುಜ್ಞಾನಿದೇವರು-- ಹಾಗೆ ಮಾತ್ರ ಮಾಡಬೇಡ. ನೋಡು, ಹಿಂದೆ ಆಗಿಹೋದ ಮಹಾಪುರುಷರು--ಮಹಾಬಲರಾಯ, ಯಶೋಧರಭೂಪ, ಧನಸೇನಸೆಟ್ಟಿ--ಇಂಥ ಶಿವಶರಣರು ತಮ್ಮ ಸ್ತ್ರೀಯರು ಜಾರತನ ಮಾಡಿದ್ದನ್ನು ನೋಡಿ ಅವರು ಅವರನ್ನು ಕೊಲ್ಲಲಿಲ್ಲ. ಅವರಿಗೆ ಸಂಸಾರದಲ್ಲಿ ಹೇಯಬುದ್ಧಿಯು ಉಂಟಾಗಿ ಅವರು ತಮ್ಮ ರಾಜ್ಯವನ್ನೂ ಮನೆಯನ್ನೂ ಬಿಟ್ಟುಕೊಟ್ಟು ತಪಕ್ಕೆ ಹೋದರು, ಎಂದು ಅವರ ಕಥೆಗಳನ್ನು ಹೇಳಲು ಬೇಡನ ಕೋಪವು ಅಡಗಿತು.

ಈ ನುಡಿಗಳು ಮಾತಂಗತಮ್ಮನ ಮನಸ್ಸನ್ನು ಬಲವಾಗಿ ತಾಗಿದವು. ಆಗ ಅವನಲ್ಲಿ ಪಾಪ ಪುಣ್ಯಗಳೆಂಬವು ಇವೆ ಎಂಬ ಕಲ್ಪನೆಯುಂಟಾಗಿ ಅವನು— ನಾನು ಮಾಡಬೇಕಾದ ಪುಣ್ಯಕಾರ್ಯಗಳಾವವು? ಎಂದು ಕೇಳಿದನು. ಆಗ ಸುಜ್ಞಾನಿದೇವರು— ನೀನು ಜೀವ ಹಿಂಸೆ ಮಾಡುತ್ತೀ. ಇದು ಪಾಪವು. ಹೀಗೆ ಮಾಡಬೇಡ. ಸರ್ವ ಜೀವಿಗಳನ್ನು ನಿನ್ನಂತೆ ಭಾವಿಸು. ಇದೇ ಪುಣ್ಯವು ಎಂದು ಹೇಳಿ, ನರಮಾಂಸವನ್ನು ಭಕ್ಷಿಸುತ್ತಿದ್ದ ಮಹಾರಾಜನು ತನ್ನ ಮಗನ ಮಾಂಸವನ್ನು ತಿಂದು ಹೇಗೆ ದುರ್ಗತಿಗಳಿದನೆಂಬ ಕಥೆಯನ್ನು ಹೇಳಿದನು. ನೀನು ತಿನ್ನುವ ಮಾಂಸವು ಹೇಯವಾದದ್ದು. ಒಂದು ದಿವಸ ಇಟ್ಟರೆ ಅದು ಕೊಳೆತು ದುರ್ಗಂಧದಿಂದ ನಾರಹತ್ತುತ್ತದೆ. ಅದನ್ನು ಸೇವಿಸ ಬೇಡ ಎಂದು ಬೋಧಿಸಿದನು. ಆಮೇಲೆ ಅವನು ಅಹಿಂಸೆಯನ್ನು ಪಾಲಿಸಿದ ಅನೇಕ ಶಿವಶರಣರ ಚರಿತ್ರೆಗಳನ್ನು ಹೇಳಿ ಅವರ ಈ ವರ್ತನೆಯೇ ಪುಣ್ಯವೆಂದು ತಿಳಿ ಎಂದು ಸತ್ಯವ್ರತನ ಕಥೆಯನ್ನು ಹೇಳಿದನು. ಕೆಲವು ವ್ಯಾಧರು ದಾರಿಕಾರರನ್ನು ಅಡವಿಯಲ್ಲಿ ಅಟ್ಟಿಕೊಂಡು ಬರುತ್ತಿರಲು ಈ ದಾರಿಕಾರರು ಕೊಂಪೆಗಳಲ್ಲಿ ಬೇರೆ ಬೇರೆ ಕಡೆಗೆ ಅಡಗಿದರು. ಅವರಿಗೆ ಸಮೀಪವಾಗಿ ಸತ್ಯವ್ರತನೆಂಬ ಮುನಿಯು ತಪಸ್ಸು ಮಾಡುತ್ತಿದ್ದನು. ಆ ವ್ಯಾಧರು ಅವನಲ್ಲಿಗೆ ಬಂದು—ಓಡಿಹೋದವರು ಎಲ್ಲಿ ಅಡಗಿದ್ದಾರೆಂದು ಅವನನ್ನು ಕೇಳಿದರು. ಸತ್ಯವ್ರತನು ಯಾವಾಗಲೂ ಸತ್ಯವನ್ನು ನುಡಿಯುವವನು. ಆದ್ದರಿಂದ ಅವರು ಅಡಗಿದ ಸ್ಥಳವನ್ನು ಅವನು ತೋರಿಸಲು ವ್ಯಾಧರು ಅಲ್ಲಿದ್ದವರನ್ನೆಲ್ಲ ಸುಲಿದು ಕೊಂದುಹಾಕಿದರು. ಆದರೆ ಸ್ವಲ್ಪ ದೂರದಲ್ಲಿ ಒಬ್ಬ ಶ್ವಪಚನಿರಲು ಅವನನ್ನೂ ಅವರು ಕೇಳಲು ಅವನಿಗೆ ಅಡಗಿದ ಸ್ಥಳವು ಗೊತ್ತಿದ್ದರೂ ಅವನು ತನಗೆ ಗೊತ್ತಿಲ್ಲವೆಂದು ಸುಳ್ಳು ಹೇಳಿದನು. ಇದರಿಂದ ಅಲ್ಲಿ ಅಡಗಿದವರು ಪಾರಾಗಿ ಹೋದರು. ಇದರಿಂದ ತಪಸ್ಸು ಮಾಡುತ್ತಿದ್ದರೂ ಸತ್ಯವ್ರತನು ನರಕಕ್ಕೆ ಮತ್ತು ಶ್ವಪಚನು ಸುಳ್ಳು ಹೇಳಿದರೂ ಸ್ವರ್ಗಕ್ಕೆ ಹೋದರೆಂದು ಹೇಳಿ ಅಹಿಂಸಾಧರ್ಮವು ಎಷ್ಟು ಶ್ರೇಷ್ಠವಾದದ್ದೆಂಬುದನ್ನು ತಿಳಿಸಿ, ಇದೇ ಪುಣ್ಯವೆಂದು ಸುಜ್ಞಾನಿದೇವರು ಹೇಳಿದರು.

ಈ ಕಥೆಗಳು ಮಾತಂಗತಮ್ಮನ ಮನದಲ್ಲಿ ಪರಿಣಾಮವಾಡಿದ್ದನ್ನು ಸುಜ್ಞಾನಿದೇವರು ತಿಳಿದು— ನೀನು ಜೀವ ಹಿಂಸೆಯನ್ನು ಮಾಡದಿರು, ದಾನಗುಣವುಳ್ಳವನಾಗಿರು, ಎಂದು ಬೋಧಿಸಿದರು. ಇದಕ್ಕೆ ಉದಾಹರಣೆಯಾಗಿ ಒಂದು ಗಿಡಗವು ಕಪೋತ ಪಕ್ಷಿಯನ್ನು ಬೆನ್ನಟ್ಟಲು ಆ ಪಕ್ಷಿಯು ಶಿಬಿಚಕ್ರವರ್ತಿಯ ಮೊರೆಹೊಗಲು ಅವನು ತನ್ನ ಮಾಂಸವನ್ನು ಕೊಟ್ಟು ಅವನ್ನು ಉಳಿಸಿದನು. ಆದ್ದರಿಂದ ಅವನಿಗೆ ಸದ್ಗತಿಯಾಯಿತು ಎಂದು ಹೇಳಿ ಅನ್ನದಾನ, ಗೋದಾನ ಮೊದಲಾದ ಷೋಡಶ ದಾನಗಳ ಕಥೆಗಳನ್ನು ಸುಜ್ಞಾನಿದೇವರು ಅವನಿಗೆ ವಿಸ್ತರಿಸಿ ಹೇಳಿದರು. ಈ ಪ್ರಕಾರ ಅವರು ಅವನಲ್ಲಿ ದಯಾಗುಣವನ್ನೂ ಧರ್ಮಬುದ್ಧಿಯನ್ನೂ ಹುಟ್ಟಿಸಿದರು.

ಸುಜ್ಞಾನಿದೇವರು ಮಾಡಿದ ಈ ಬೋಧೆಯಿಂದ ಆ ಬೇಡನ ಮನಸ್ಸು ತಿರುಗಿತು. ಅದನ್ನು ಅವರು ಕಂಡು, ಅವರು ಕೆಲವೊಬ್ಬ ಬೇಡನು ತನ್ನ ಇಬ್ಬರು ಮಕ್ಕಳಿಗೆ ಹರ, ಪ್ರಹರ ಎಂಬ ಹೆಸರನ್ನಿಟ್ಟು ತನ್ನ ಮರಣ ಕಾಲದಲ್ಲಿ ಅವರ ಹೆಸರುಗಳಿಂದ ಅವರನ್ನು ಕರೆಯಲು ಅವನು ಹರನಾಮವನ್ನು ಉಚ್ಚರಿಸಿದ್ದರಿಂದ ಅವನಿಗೆ ಹೇಗೆ ಮುಕ್ತಿಯಾಯಿತೆಂಬುದನ್ನು ಹೇಳಿ, ದೇವತಾ ನಾಮಸ್ಮರಣೆಯ ಮಹತ್ವವನ್ನು ವಿವರಿಸಿದರು. ಹೀಗೆ ನೀನು ಯಾವಾಗಲೂ ಶಿವನ ನಾಮಸ್ಮರಣೆಯನ್ನು ಮಾಡು ಎಂದು ತಿಳಿಸಿದರು. ಆ ಮೇಲೆ ಅವರು—ವ್ಯಾಧನೇ ನೀನು ಪುಣ್ಯವಾವುದೆಂಬುದನ್ನು ಕೇಳಿದಿಯಲ್ಲವೇ? ಹೀಗೆ ಆಚರಿಸುವದೇ ಪುಣ್ಯವು. ಹೀಗೆ ಆಚರಿಸಿದ್ದಾದರೆ ನಿನಗೆ ಸುಖವಾಗುವದು ಎಂದು ಹೇಳಿದರು.

ಆ ಮೇಲೆ ಸುಜ್ಞಾನಿದೇವರು ಅವನಿಗೆ ಗುರು, ಲಿಂಗ, ಜಂಗಮ, ಪಾದೋದಕ, ಪ್ರಸಾದ, ವಿಭೂತಿ, ರುದ್ರಾಕ್ಷಿ, ಮಂತ್ರ, ಇವುಗಳ ಮಹತ್ವವನ್ನು ವಿವರಿಸುವ ಅನೇಕ ಅಷ್ಟಾವರಣದ ಕಥೆಗಳನ್ನೂ ಪಂಚಾಚಾರಗಳ ರೀತಿಯನ್ನೂ ಹೇಳಿ, ಹೀಗೆ ಆಚರಿಸಿದ ಮಹಾನುಭಾವರಂತೆ ಆಚರಿಸು, ಎಂದು ಬೋಧಿಸಲಾಗಿ ಅವನು ಅವರಿಗೆ—ಇಂಥ ಆಚರಣೆಗಳ ಪ್ರಯೋಜನವೇನು? ಎಂದು ಕೇಳಲು, ಅದಕ್ಕೆ ಅವರು—ನೀನು ನನ್ನನ್ನು ಮೊದಲು ಕಂಡಾಗ ನನ್ನ ಹಸುಬೆಯಲ್ಲಿದ್ದ ಲಿಂಗವನ್ನು ಕೊಡಲು ಬೇಡಿದಿಯಲ್ಲವೇ? ನೀನು ಹೀಗೆ ಸದಾಚಾರಿಯಾಗಿ ನಡಿದರೆ, ಆ ಲಿಂಗವನ್ನು ಕೊಂಡಲಿಕ್ಕೆ ನೀನು ಅರ್ಹನಾಗುವಿ. ಆ ಲಿಂಗವನ್ನು ನೀನು ಧರಿಸಿ ಪುಣ್ಯಕಾರ್ಯಗಳನ್ನು ಮಾಡಿದಲ್ಲಿ ನೀನು ಸುಖಿಯಾಗುವಿ ಎಂದು ಹೇಳಲು,

ಅವನು ಆ ಲಿಂಗವನ್ನು ನನಗೆ ಕೊಡಿರಿ, ಹಾಗೆ ಆಚರಿಸುತ್ತೇನೆ, ಅದನ್ನು ನಾನು ಹೇಗೆ ಹೊಂದಬೇಕು? ಎಂದು ಕೇಳಲು ಸುಜ್ಞಾನಿದೇವರು— ಅದು ಗುರುವಿನಿಂದಾಗಬೇಕು. ತ್ರಿಶಂಕುವು ಗುರುವನ್ನು ಬಿಟ್ಟದ್ದರಿಂದ ಅವನು ಹೇಗೆ ದುರ್ಗತಿಗಿಳಿದನೆಂಬುದರ ಕಥೆಯನ್ನು ಹೇಳಿದರು. ಆಗ ಮಾತಂಗತಮ್ಮನು ಸಂತೋಷಬಟ್ಟು ನಾನು ಇನ್ನು ಮೇಲೆ ಲಿಂಗವನ್ನು ಪೂಜಿಸುತ್ತ, ಲಿಂಗಭಕ್ತಿಯನ್ನು ಮಾಡುತ್ತ, ಸುಖದಿಂದಿರುವ ಪದವನ್ನು ನೀವು ಕರುಣಿಸಬೇಕು ಸ್ವಾಮಿಾ, ಎಂದು ಬಿನ್ನವಿಸಿ ಅವರಿಗೆ ನಮಸ್ಕರಿಸಿದನು. ಆಗ ಸುಜ್ಞಾನಿತಂದೆಗಳು ಅವನಿಗೆ ಮಂತ್ರೋಪದೇಶವನ್ನು ಮಾಡಿ, ಕರಕ್ಕೆ ಲಿಂಗವನ್ನಿತ್ತು—ಸದ್ಧರ್ಮ ಮಾರ್ಗದಿಂದಲೂ ಭಕ್ತಿಯಿಂದಲೂ ಆಚರಿಸು, ನನ್ನಯ್ಯಾ, ಎಂದು ಪ್ರೀತಿಯಿಂದ ನುಡಿದರು. ಅವರು ಮುಂದೆ ಅವನನ್ನು ಮಾತಂಗ ತಮ್ಮನೆಂದು ಕರೆಯದೆ 'ನನ್ನಯ್ಯಾ, ನನ್ನಯ್ಯಾ' ಎಂದು ಕರೆಯಹತ್ತಿದರು. ಅದರಿಂದ ಅವನಿಗೆ ಮುಂದೆ 'ನನ್ನಯ್ಯನೆ'ಂಬ ಹೆಸರು ಪ್ರಾಪ್ತವಾಯಿತು. ಹೀಗೆ ಉಭಯತರು ಗುರುಶಿಷ್ಯರಾದರು. ಆಗ ನನ್ನಯ್ಯನು ನಿಜವಾದ ಲಿಂಗಧಾರಣೆಯನ್ನು ಹೊಂದಿದನು. ಅಂದಿನಿಂದ ಅವನ ಮನಸ್ಸು ಬದಲಾಯಿತು ಮತ್ತು ಮೊದಲಿನ ಕಾಡು ಸ್ವಭಾವವನ್ನು ಬಿಟ್ಟು ಬಿಟ್ಟನು.

ಆಗ ನನ್ನಯ್ಯನು—ನೀವೆಲ್ಲಿಗೆ ಈಗ ಹೋಗುತ್ತೀರಿ? ಎಂದು ಕೇಳಲು ಸುಜ್ಞಾನಿಗಳು— ಕಲ್ಯಾಣದಲ್ಲಿ ಬಸವಾದಿ ಪ್ರಮಥರಿದ್ದಾರೆ, ಅವರನ್ನು ಕಾಣಲಿಕ್ಕೆಂದು ಹೇಳಿದರು. ಅದಕ್ಕೆ ನನ್ನಯ್ಯನು—ಬಸವೇಶ್ವರನಾರ? ಎಂದು ಕೇಳಲು ಅವನು ಅಷ್ಟಾವರಣ, ಪಂಚಾಚಾರಗಳನ್ನು ಬೋಧಿಸುವ ಮಹಾತ್ಮನು, ಎಂದು ಹೇಳಲು, ಅದಕ್ಕೆ ಅವನು— ನಾನು ನಿಮ್ಮ ಸೇವೆ ಮಾಡುತ್ತ ನಿಮ್ಮೊಡನೆ ಬರುವೆನು, ಅವನನ್ನು ಕಾಣಲು ಅಪ್ಪಣೆಯನ್ನು ಕೊಡಿರಿ, ಎಂದು ಕೇಳಲು ಸುಜ್ಞಾನಿದೇವರು ಅವಶ್ಯವಾಗಿ ಬರಬೇಕು ಎಂದು ಅವನನ್ನೊಡಗೊಂಡು ಅವರು ಕಲ್ಯಾಣದ ಮಾರ್ಗವನ್ನು ಹಿಡಿದರು.

ದಾರಿಯಲ್ಲಿ ನನ್ನಯ್ಯನೂ ಸುಜ್ಞಾನಿದೇವರೂ ಕೇವಲ ಗುರುಶಿಷ್ಯರಂತೆ ವರ್ತಿಸುತ್ತ ಬಂದರು. ನನ್ನಯ್ಯನು ಆಗ ತನ್ನ ಮೊದಲಿನ ಕ್ರೂರ ಸ್ವಭಾವವನ್ನು ಬಿಟ್ಟುಕೊಟ್ಟು ಹೊಸದಾದ ವೃತ್ತಿಯುವನಾದನು. ಅವನು

ಗುರುವಿನ ಸೇವೆಯಲ್ಲಿ ಯಾವಾಗಲೂ ತತ್ಪರನಾಗಿರುವನು. ಹೀಗೆ ಉಭಯತರು ದೇಹ ಬೇರಿದ್ದರೂ ಪ್ರಾಣ ಒಂದೇ ಎಂಬಂತೆ ಆಚರಿಸುತ್ತ ಬಂದರು. ನನ್ನಯ್ಯನು ಕ್ರಮೇಣ ಸುಜ್ಞಾನಿದೇವರಿಂದ ಲಿಂಗದ ನಿರೀಕ್ಷಲೆಗಳನ್ನು ತಿಳಿದುಕೊಂಡು ಲಿಂಗಾನುಭವವನ್ನು ಹೊಂದುವವನಾದನು. ಹೀಗೆ ಉಭಯತರು ಕಲ್ಯಾಣದ ಹಾದಿಯನ್ನು ಹಿಡಿದು ಹೋಗಹತ್ತಿದರು.

ಹೀಗೆ ಹೋಗುವಾಗ ಅವರು ಒಂದು ಅರಣ್ಯವನ್ನು ಪ್ರವೇಸಿದರು. ಆಗ ಮಧ್ಯಾನ ಸಮಯವಾಗಿತ್ತು. ನನ್ನಯ್ಯನು ತನ್ನ ಗುರುವನ್ನು ಒಂದು ಗಿಡದ ತಣ್ಣನ್ನ ನೆರಳಿನಲ್ಲಿ ಕುಳ್ಳಿರಿಸಿ ತಾನು ಕಂದ ಮೂಲ ಫಲಾದಿಗಳನ್ನೂ ಲಿಂಗಾರ್ಚನೆಗೆ ಪುಷ್ಪಗಳನ್ನೂ ತರಲು ಹೋದನು. ಇತ್ತ ಸುಜ್ಞಾನಿ ದೇವರು ಆ ವೃಕ್ಷದಡಿಯಲ್ಲಿ ಕುಳಿತವರಾದರು. ಆಗ ಅವರಿಗೆ ಮಾರ್ಗಾಯಾಸದಿಂದ ನಿದ್ರೆಯು ಬಂದು, ಅಲ್ಲಿಯೇ ಅವರು ಮಲಗಿಕೊಂಡರು.

ಅವರಿದ್ದ ಈ ಪ್ರಾಂತವನ್ನು ಅಮರಪುರದ ಅರಸನಾದ ಕೌಶಿಕರಾಯನೆಂಬುವನು ಆಳುತ್ತಿದ್ದನು. ಒಂದು ದಿವಸ ಕಳ್ಳರು ಅವನ ಅರಮನೆಗೆ ಕನ್ನವಸಿಕ್ಕಿ ರತ್ನಾಭರಣಗಳನ್ನು ತೆಗೆದುಕೊಂಡು ಓಡಿ ಹೋಗುತ್ತಿರಲು ತಳವಾರರು ಅವರ ಹೆಜ್ಜೆವಿಡಿದು ಬೆನ್ನಟ್ಟಿ ಬಂದರು. ಆಗ ಆ ಕಳ್ಳರು ಪೂರಾಗಿ ಹೋಗಲು ಸಾಧ್ಯವಾಗದ್ದರಿಂದ ಅವರು ಓಡಿ ಹೋಗುತ್ತಿರುವಾಗ ದಾರಿಯಲ್ಲಿ ನಿದ್ರೆ ಹೋಗಿದ್ದ ಆ ಸುಜ್ಞಾನಿ ದೇವರನ್ನು ಕಂಡು, ಅವರ ಮುಂದೆ ಆ ಆಭರಣದ ಪೆಟ್ಟಿಗೆಯನ್ನು ಇಟ್ಟು ತಾವು ಆಡ್ಡ ದಾರಿ ಓಡಿದು ಹೋದರು. ಅವರನ್ನು ಬೆನ್ನಟ್ಟಿ ಬರುತ್ತಿದ್ದ ಆ ತಳವಾರರು ಹುಡುಕುತ್ತ ಹುಡುಕುತ್ತ ಬರುತ್ತಿರಲು ಅವರು ಕಳವಾಗಿ ಹೋಗಿದ್ದ ಪೆಟ್ಟಿಗೆಯು ಸುಜ್ಞಾನಿ ದೇವರೆದುರಿಗೆ ಇರುವದನ್ನು ಕಂಡರು. ಆಗ ಈತನೇ ಕಳ್ಳನೆಂದು ಭಾವಿಸಿ, ಅರಸನು ಕಳ್ಳರು ಸಿಕ್ಕ ಕೂಡಲೆ ಅವರನ್ನು ಕಡಿದು ಹಾಕಬೇಕೆಂದು ಅಪ್ಪಣೆಯನ್ನಿತ್ತಿದ್ದರಿಂದ, ಅವರು ಮಲಗಿದ್ದ ಸುಜ್ಞಾನಿದೇವರ ತಲೆಯನ್ನು ಕತ್ತರಿಸಿ ಅದನ್ನು ತಮ್ಮ ಅರಸಿಗೆ ತಂದು ಒಪ್ಪಿಸಿದರು ಮತ್ತು ಆಭರಣಗಳ ಪೆಟ್ಟಿಗೆಯನ್ನೂ ಅವನ ಮುಂದಿಟ್ಟರು. ಅರಸನು ಆ ತಲೆಯನ್ನು ನೋಡಿ, ಅದರ ನೊಸಲಲ್ಲಿ ಭಸಿತ, ಕಂಠ ಕರ್ಣಗಳಲ್ಲಿ ರುದ್ರಾಕ್ಷಿಗಳು ಇರುವದನ್ನು ಕಂಡು

ಇದು ಕಲ್ಪನ ತಲೆಯ ಹಾಗಿಲ್ಲವೆಂದೆನಲು, ಆ ತಳವಾರರು—ಅಹುದು, ಕಲ್ಪರಾದವರು ಹೀಗೆ ವೇಷ ಬದಲುಮಾಡಿಕೊಂಡು ಬರುತ್ತಾರೆ ಎನಲು ಅರಸನು ಅವರನ್ನು ನಂಬಿ, ಈ ತಲೆಯನ್ನು ದಾರಿಯಲ್ಲಿರುವ ಆಲದ ಮರದ ಟೊಂಗೆಗೆ ಕಟ್ಟಿರಿ ಎನಲು ಅವರು ಹಾಗೆಯೇ ಅದನ್ನು ಕಟ್ಟಿ ಬಿಟ್ಟರು.

ಹೀಗಾಗಲು ಇತ್ತ ನನ್ನಯ್ಯನು ಪುಷ್ಪ, ಪತ್ರೆ, ಕಂದ ಮೂಲಾದಿ ಗಳನ್ನು ಹುಡಿಕಿಕೊಂಡು ಗುರುವಿದ್ದೆಡೆಗೆ ಬಂದು ನೋಡುತ್ತಾನೆಯೇ ಅಲ್ಲಿ ಅವನ ಬದೇ ಥಡವಿದೆ. ಇದನ್ನು ಕಂಡು—ನನ್ನ ಗುರುವಿಗೆ ಹೀಗೆ ಮರಣವಾಯಿತೇ ಎಂದು ಕಡು ದುಃಖಬಟ್ಟು, ಇನ್ನು ಮೇಲೆ ನಾನು ಜೀವದಿಂದಿರಬಾರದು ಎಂದು ತನ್ನ ಶಿರವನ್ನು ಕತ್ತರಿಸಲು ಉದ್ಯುಕ್ತನಾದನು. ಆಗ ಆಕಾಶದಲ್ಲಿ— ನನ್ನಯ್ಯನೇ, ಹೀಗೆ ನೀನು ಪ್ರಾಣ ಕೊಡಬೇಡ. ಒಂದು ಮಣ್ಣಿನ ತಲೆಯನ್ನು ಮಾಡಿ ಅದನ್ನು ಆ ಥಡಕ್ಕೆ ಹತ್ತಿಸು, ಅದಕ್ಕೆ ಪ್ರಾಣ ಬರುವದು ಎಂದು ಶಬ್ದವಾಯಿತು. ಅವನ್ನು ನನ್ನಯ್ಯನು ಕೇಳಿ ಅವರಂತೆ ವೃತ್ತಿಕೆಯ ಶಿರವನ್ನು ಮಾಡಿ ಥಡಕ್ಕೆ ಹತ್ತಿಸಿ ಅಂದದ್ದು—ಶಿವನೇ ನಿನ್ನ ವಾಕ್ಯದಂತೆ ನಾನು ತಲೆಯನ್ನು ಹತ್ತಿಸಿದ್ದೇನೆ. ಗುರುವಿಗೆ ಪ್ರಾಣವನ್ನು ಕೊಡು, ಇಲ್ಲದಿದ್ದರೆ ನಾನು ಪ್ರಾಣಕೊಡುವೆನೆನಲು, ಆಗ ದೇಹಕ್ಕೆ ಪ್ರಾಣವು ಬಂದಿತು, ಆ ಮೇಲೆ ಉಭಯತರು ಅಲ್ಲಿ ಲಿಂಗಾರ್ಚನೆಯನ್ನು ತೀರಿಸಿಕೊಂಡು ಮುಂದೆ ಸಾಗುವವರಾದರು.

ಉಭಯತರು ದಾರಿಯನ್ನು ನಡಿಯುತ್ತ ಅಮರಪುರಕ್ಕೆಯೇ ಬಂದರು. ಅಲ್ಲಿ ನನ್ನಯ್ಯನು ತನ್ನ ಗುರುವನ್ನು ಒಬ್ಬ ಭಕ್ತರ ಮನೆಯಲ್ಲಿಳಿಸಿ ತಾನು ಪುಷ್ಪ ಪತ್ರೆಗಳನ್ನು ತರಲು ಹೋದನು. ಅವನು ಹೋಗುತ್ತಿರುವಾಗ ದಾರಿಯಲ್ಲಿ ಆಲದಮರಕ್ಕೆ ಕಟ್ಟಿದ ತನ್ನ ಗುರುವಿನ ನಿಜವಾದ ತಲೆಯನ್ನು ನೋಡಿದನು. ಅವನು ಅದನ್ನು ಗುರುತಿಸಿ— ಅಯ್ಯೋ, ನನ್ನಿಂದ ದೊಡ್ಡ ಪ್ರಮಾದವಾಯಿತು. ಇದು ನನ್ನ ಗುರುವಿನ ನಿಜವಾದ ತಲೆಯು. ಸುಳ್ಳು ತಲೆಯನ್ನು ನಾನು ಹಚ್ಚಿದೆನಲ್ಲಾ! ಮುಂದೇನು ಮಾಡಬೇಕು? ನಾನು ಮಹಾ ಪಾಪಿಯು. ನಾನು ಜಗತ್ತಿನಲ್ಲಿ ಇರಬಾರದು ಎಂದು ಆ ಸ್ಥಳವನ್ನು ಬಟ್ಟು ಅರಣ್ಯ ಮಧ್ಯಕ್ಕೆ ಹೋಗಿ, ತನ್ನ ಇಷ್ಟಲಿಂಗವನ್ನು ಕರಸ್ಥಲದಲ್ಲಿ ಇರಿಸಿಕೊಂಡು ತನ್ನ

ಶಿರವನ್ನು ತಂದು ಕೊಳ್ಳುವಾಗ ಆಗ ಲಿಂಗದಲ್ಲಿ ಶಿವನು ಪ್ರತ್ಯಕ್ಷನಾಗಿ — ಸನ್ನಯ್ಯನೇ ನೀನು ಹೀಗೆ ಮಾಡಬೇಡ, ನೀನು ಒಂದು ಮಣ್ಣಿನ ಪೀಪವನ್ನು ಮಾಡಿ ಅದಕ್ಕೆ ಗುರುವಿನ ಆ ಶಿರಸ್ಸನ್ನು ಹತ್ತಿಸು, ಎಂದಿ ನಲು ಅವನು ಹಾಗೆಯೇ ಮಾಡಲು ಅದಕ್ಕೂ ಪ್ರಾಣವು ಬಂದಿತು.

ಅಲ್ಲಿಂದ ಅವರಬ್ಬರು ಮೊದಲಿನ ಸುಜ್ಞಾನಿ ದೇವರಿದ್ದೆಡೆಗೆ ಬಂದರು. ಹೀಗೆ ಅವರು ಮೂವರಾದರು. ಅವರೆಲ್ಲರೂ ಕೂಡಿಕೊಂಡು ಕಲ್ಯಾಣಕ್ಕೆ ಹೊರಟರು. ಭೇರುಂಡ ಪಕ್ಷಿಗೆ ಒಂದು ಶರೀರ ಎರಡು ಮುಖಗಳಿರುವವಷ್ಟೇ. ಹಾಗೆಯೇ ನನ್ನಯ್ಯನ ಮೂಲಕ ಇಬ್ಬರು ಸುಜ್ಞಾನಿದೇವರಾದರು. ನನ್ನಯ್ಯನು ಎಂಥ ಮಹಾತ್ಮನು, ಎಂದು ಜನರು ಅವನನ್ನು ಸ್ತುತಿಸಹತ್ತಿದರು. ಮೂವರು ಮುಂದೆ ಕಲ್ಯಾಣಕ್ಕೆ ಬಂದು ಬಸವೇಶ್ವರನ ದರ್ಶನವನ್ನು ಹೊಂದಿದರು. ಆಗ ಬಸವೇಶ್ವರನು. ನನ್ನಯ್ಯನಿಗೆ— ನೀನು ಎಂಥ ಪೊವಾಡ ಪುರುಷನು! ನಿನ್ನ ಗುರುಭಕ್ತಿಯು ಮಿಗಿಲಾದದ್ದು. ನಿನ್ನ ಮೂಲಕ ಗುರುವಿನ ಅಂಗಗಳೆಲ್ಲವೂ ಗುರುವಿನ ರೂಪಗಳೇ ಆದವು. ಇದು ಜಗತ್ತಿನಲ್ಲಿ ಹೊಸತಾದದ್ದು ಎಂದು ಕೊಂಡಾಡಿದನು. ಅಲ್ಲಿದ್ದ ಪ್ರಮಥರೆಲ್ಲರೂ ಹಾಗೆಯೇ ನನ್ನಯ್ಯನನ್ನು ಕೀರ್ತಿಸಿದರು. ಈ ಮೂವರು ಅನೇಕ ವರುಷ ಶಿವಾನುಭವ ಮಂಟಪದಲ್ಲಿದ್ದು ಶಿವಾನುಭವ ಗೋಷ್ಠಿಯನ್ನು ಕೇಳುತ್ತ, ಪರಮಾನಂದ ಸುಖದಲ್ಲಿದ್ದರು. ಅವರೆಲ್ಲರೂ ಮುಂದೆ ಕಲ್ಯಾಣದಲ್ಲಿಯೇ ಲಿಂಗಾಂಗ ಸಾಮರಸ್ಯವನ್ನು ಹೊಂದಿದರು.

ನನ್ನಯ್ಯನ ಚರಿತ್ರೆಯ ವಿಮರ್ಶೆ.

ಶಿವಶರಣರ ಚರಿತ್ರೆಗಳಿಂದ ಅವರು ಪುರಾತನ ಕಾಲದಲ್ಲಿ ಹೇಗೆ ಧರ್ಮ ಪ್ರಸಾರ ಕಾರ್ಯ ಮಾಡಿದರೆಂಬುದನ್ನು ನಾವು ತಿಳಿಯಬಹುದಾಗಿದೆ. ಅವರು ತಮ್ಮ ಪ್ರಸಾರ ಕಾರ್ಯದಲ್ಲಿ ಕೆಡುಕರನ್ನೂ ದುರ್ಮಾರ್ಗಗಳನ್ನೂ ಅಜ್ಞಾನಿಗಳನ್ನೂ ತಿದ್ದುವದೇ ಅವರ ಮುಖ್ಯ ಧ್ಯೇಯವಾಗಿತ್ತು. ಇದಕ್ಕೆ ನನ್ನಯ್ಯನ ಚರಿತ್ರೆಯು ಉತ್ತಮ ನಿದರ್ಶನವಾಗಿದೆ.

ಬಸವೇಶ್ವರನ ಕಾಲದಲ್ಲಿ ಶಿವಶರಣರು ಅಜ್ಞಾನಿಗಳನ್ನು ಮೋಸಗೊಳಿಸಿ, ಅಥವಾ ಅವರ ದುರಾಚಾರಕ್ಕೆ ಇಂಬುಗೊಟ್ಟು, ಇಲ್ಲವೆ ಅವರ

ಮೇಲೆ ಬಲಾತ್ಕಾರ ಮಾಡಿ ಧರ್ಮಪ್ರಸಾರ ಮಾಡಿದರೆಂದು ಕೆಲವರು ಪ್ರತಿಪಾದಿಸಿದ್ದಾರೆ. ಇದು ತಪ್ಪೆಂದು ನನ್ನಯ್ಯನ ಚರಿತ್ರೆಯಿಂದ ತಿಳಿದು ಬರುತ್ತದೆ.

ನನ್ನಯ್ಯನು ಬೇಡನು, ಹಿಂಸಾವೃತ್ತಿಯಿಂದ ಜೀವಿಸುವವನು, ದರೋಡೇಖೋರನು, ಜನರನ್ನು ಕೊಂದು ಹಾಕಲು ಹೇಸದವನು, ಅತ್ಯಂತ ಕ್ರೂರನು, ಮತ್ತು ಧರ್ಮಾಧರ್ಮವನ್ನರಿಯದವನು. ಇಂಥವನಲ್ಲಿ ಶಿವಶರಣನಾದ ಸುಜ್ಞಾನಿದೇವನು ಹೇಗೆ ನೀತಿ, ದಯೆ, ಧರ್ಮ ಇವುಗಳನ್ನು ನೆಲೆಗೊಳಿಸಿ, ಅವನಿಗೆ ಲಿಂಗಧಾರಣೆಯನ್ನು ಮಾಡಿ ಸನ್ಮಾರ್ಗಕ್ಕೆ ಹಚ್ಚಿದನೆಂಬುದರ ವೃತ್ತಾಂತವು ಈ ಚರಿತ್ರೆಯಲ್ಲಿ ಬಂದಿದೆ. ಈತನ ಚರಿತ್ರೆಯಿಂದ ಗುರುವು ಹೇಗಿರಬೇಕು, ಅವನು ಹೇಗೆ ಬೋಧ ಮಾಡಬೇಕು, ಕೆಡುಕರ ಮನಸ್ಸನ್ನು ಹೇಗೆ ಆಕರ್ಷಿಸಬೇಕು, ಎಂಬುದನ್ನು ನಾವು ಬಹು ಚನ್ನಾಗಿ ತಿಳಿಯಬಹುದಾಗಿದೆ.

ಸುಜ್ಞಾನಿದೇವನು ಓಡಿಸಾ ಪ್ರಾಂತದವನು. ಅವನು ಬಸವೇಶ್ವರನ ವಾರ್ತೆಯನ್ನು ಕೇಳಿ ಅವನಿಂದ ಶಿವಾನುಭವವನ್ನು ಅರಿಯಬೇಕೆಂದು ಕಲ್ಯಾಣಕ್ಕೆ ಹೊರಟನು. ದಾರಿಯಲ್ಲಿ ಇಬ್ಬರು ಸುಲಿಸಿಕೊಂಡು ಘಾಯಹೊಂದಿದವರು ಅವನಿಗೆ ಭೆಟ್ಟಿಯಾದರು. ಅವರು ಮಾತಂಗತಮ್ಮನೆಂಬ ದರೋಡೆಖೋರನು ದಾರಿಯಲ್ಲಿ ನಿಂತಿದ್ದರ ವೃತ್ತಾಂತವನ್ನು ಹೇಳಿದರು. ಅದನ್ನು ಕೇಳಿ ಅವನ ಸೇವಕರೆಲ್ಲರೂ ಅಂಜಿ ಅವನನ್ನು ಬಿಟ್ಟು ಓಡಿಹೋದರು. ಆದರೆ ಸುಜ್ಞಾನಿ ತಂದೆಯು ಅವರಂತೆ ಧೈರ್ಯಗೆಡಲಿಲ್ಲ. ಅವನ ಮನಸ್ಸಿನಲ್ಲಿ ಈ ಬೇಡನನ್ನು ಸುಧಾರಿಸಬೇಕೆಂಬ ಇಚ್ಛೆಯುಂಟಾಗಿರಬಹುದು. ಆದ್ದರಿಂದ ಅವನು ಅಂಜದೆ ಸರಳವಾಗಿ ಮುಂದೆ ಹೋಗಿ ಆ ದರೋಡೆಖೋರನ ಇದಿರಿಗೆಯೇ ಹೋಗಿ ನಿಂತುಬಿಟ್ಟನು. ಅವನ ಈ ನಿರ್ಭಯ ವೃತ್ತಿಯು ಮಾತಂಗತಮ್ಮನ ಮೇಲೆ ಕೂಡಲೆ ಪರಿಣಾಮವುಮಾಡಿತು. ಅವನನ್ನು ಅವನು ನೋಡಿ ಆಶ್ಚರ್ಯಬಟ್ಟನು. ಜನರನ್ನು ಸುಧಾರಿಸಬೇಕೆಂಬುವವನು ಹೀಗೆಯೇ ಧೈರ್ಯವುಳ್ಳವನಾಗಿರಬೇಕಾಗುತ್ತದೆ. ಇದು ನೈತಿಕ ಧೈರ್ಯವು. ನೈತಿಕ ಧೈರ್ಯವು ಶಾರೀರಿಕ ಧೈರ್ಯಕ್ಕಿಂತಲೂ ಬಹಳ ಮಿಗಿಲಾದದ್ದು.

ಆಮೇಲೆ ಮಾತಂಗತಮ್ಮನು ಸುಜ್ಞಾನಿಯನ್ನು ಸುಲಿಯಲಿಕ್ಕೆ ನಿಂತನು. ಅವನನ್ನು ಮೊದಲು ಒಂದು ಗಿಡದ ಕೆಳಗೆ ಕುಳ್ಳಿರಿಸಿ ಅವನು

ಅವನ ಹಣವೆಯನ್ನು ಬಿಚ್ಚಿಸಿದನು. ಸುಜ್ಞಾನಿತಂದೆಯು ಜನರಿಗೆ ಮೋಸ ಮಾಡಿ ಅವರನ್ನು ಇಷ್ಟಲಿಂಗಧಾರಿಗಳನ್ನಾಗಿ ಮಾಡುವದೇ ಅವನ ವೃತ್ತಿಯಾಗಿತ್ತು. ಆದ್ದರಿಂದ ಅವನ ಹಣವೆಯಲ್ಲಿ ಬರೀ ಲಿಂಗಗಳೇ ಇದ್ದವು. ಮಾತಂಗತಮ್ಮನು ಇಂಥ ಲಿಂಗಗಳನ್ನು ಎಂದೂ ಕಂಡವನಲ್ಲ. ಆದ್ದರಿಂದ ಅವನು ಅವೇನೆಂದು ಕೇಳಲು ಸುಜ್ಞಾನಿತಂದೆಯು ಇವು ಲಿಂಗಗಳೆಂದು ಉತ್ತರಕೊಟ್ಟನು. ಈ ಲಿಂಗಗಳು ಏನು ಕೊಡುವವೆಂದು ಬೇಡನು ಕೇಳಲು, ಸುಜ್ಞಾನಿತಂದೆಯು ಅವನಿಗೆ ಲಿಂಗದಿಂದ ಮೋಕ್ಷವನ್ನು ಹೇಗೆ ಪಡೆಯಬೇಕೆಂಬ ತಾತ್ವಿಕ ವಿಚಾರಗಳನ್ನು ಹೇಳಲಿಕ್ಕೆ ಹೋಗಲಿಲ್ಲ. ಹಾಗೆ ಹೇಳಿದ್ದರೆ ಮೋಕ್ಷದ ಕಲ್ಪನೆಯೇ ಇಲ್ಲದ ಆ ಬೇಡನಿಗೆ ಅದು ಹೇಗೆ ತಿಳಿಯಬೇಕು? ಆದ್ದರಿಂದ ಅವನಿಗೆ ತಿಳಿಯುವಂತೆ ಈ ಲಿಂಗಗಳು ಹೆಣ್ಣು, ಹೊನ್ನು, ರಾಜಭೋಗಗಳನ್ನು ಕೊಡುವವೆಂದು ಹೇಳಿದನು. ಆಗ ಆವುಗಳನ್ನು ಪಡೆಯಬೇಕೆಂಬ ಆಶೆಯು ಅವನಲ್ಲಿ ಹುಟ್ಟಿತು. ಆದ್ದರಿಂದ ಆ ಲಿಂಗಗಳಲ್ಲಿ ಒಂದನ್ನು ಅವನು ಕಯ್ಯಲ್ಲಿ ತೆಗೆದುಕೊಂಡು — ಇದನ್ನು ನನಗೆ ಕೊಡು ಎಂದು ಕೇಳಿದನು. ಹೇಗೆ ಶಾಯತವುತ್ತು ದೇವರ ಚೀಟಿಗಳನ್ನು ಅಜ್ಞಾನಿಗಳು ಕಟ್ಟಿಕೊಳ್ಳುತ್ತಾರೋ ಹಾಗೆ ಅವನ್ನು ಧರಿಸಿಕೊಳ್ಳಬೇಕೆಂದು ಅವನು ಬಹುಶಃ ಬಯಸಿರಬಹುದು. ಆದರೆ ಸುಜ್ಞಾನಿದೇವರ ಮನಸ್ಸಿನಲ್ಲಿ ಅವನಿಗೆ ಲಿಂಗದ ನಿಜವಾದ ಕಲ್ಪನೆಯನ್ನು ಮಾಡಿಕೊಡುವದಿತ್ತು. ಆದ್ದರಿಂದ ಅವನು ಅದನ್ನು ಹಾಗೆಯೇ ಅವನಿಗೆ ಕೊಡದೆ ಗುರುವಿನಿಂದ ಅದನ್ನು ಸ್ವೀಕರಿಸಬೇಕೆಂದು ಹೇಳಿ, ಗುರುವಿನ ವಿಚಾರವನ್ನು ಮೊದಲು ಅವನಿಗೆ ತಿಳಿಸಿ ಇಟ್ಟನು.

ಆ ಮೇಲೆ ಮಾತಂಗತಮ್ಮನು — ಗುರುವೆಲ್ಲಿದ್ದಾನೆ ಎಂದು ಕೇಳಲು ಸುಜ್ಞಾನಿದೇವನು — ಆ ಗುರುವು ನಾನೇ ಎಂದು ಹೇಳಿದನು. ಅಷ್ಟರಲ್ಲಿ ಅವನು ತನ್ನ ವರ್ತನೆಯ ಪ್ರಭಾವದಿಂದ ಮಾತಂಗತಮ್ಮನ ವಿಶ್ವಾಸವನ್ನು ತನ್ನಲ್ಲಿ ಉಂಟು ಮಾಡಿಕೊಂಡಿದ್ದನೆಂದು ತೋರುತ್ತದೆ. ಮಾತಂಗತಮ್ಮನೂ ಅದಕ್ಕೆಯಾವ ಇದಿರುತ್ತರವನ್ನು ಕೊಡದೆ ಅವನಿಂದ ಲಿಂಗವನ್ನು ಹೊಂದಲು ಸಿದ್ಧನಾದನು. ಸುಜ್ಞಾನಿದೇವನು ಇದನ್ನು ಕಂಡು ಅವನಿಗೆ ಏನೋ ಒಂದು ಸಮಾಧಾನದ ನುಡಿಯನ್ನು ಹೇಳಿ ಲಿಂಗವನ್ನು ಅವನಿಗೆ ಹೇಗಾದರೂ ಕೊಟ್ಟ ಅವನ ಕಯ್ಯಿಂದ ಪಾರಾಗಿ

ಹೋಗಬಹುದಾಗಿತ್ತು. ಆದರೆ ಅವನು ಗುರುವಿನ ಕಾರ್ಯವು ಹೀಗೆ ನೋಸಗೊಳಿಸುವದಿರದೆ ಲಿಂಗದ ಜ್ಞಾನ ಮಾಡಿಕೊಡುವದು ಇರುತ್ತ ದೆಂದು ತಿಳಿದು ಅವನಿಗೆ ಸದುಪದೇಶವನ್ನು ಮಾಡಿ ಆ ಮೇಲೆ ಅವನಿಗೆ ಇಷ್ಟಲಿಂಗವನ್ನು ಕೊಡುವ ಕಾರ್ಯದಲ್ಲಿ ತೊಡಗಿದನು.

ಸದುಪದೇಶವನ್ನು ಮಾಡಿದ ಬಳಿಕ ಅದರಂತೆ ಲಿಂಗಧಾರಿಯು ನಡೆಯುವದು ಅತ್ಯಂತ ಮಹತ್ವದ್ದಿದೆ. ಆದರೆ ಮನೆತನದಲ್ಲಿ ಆಸು ಕೂಲತೆಗಳಿದ್ದರೆ ಮಾತ್ರ ಮನುಷ್ಯನು ಹೀಗೆ ಆಚರಿಸುವದು ಸಾಧ್ಯವು. ಇಲ್ಲದಿದ್ದರೆ ಅದು ಬಿಕ್ಕಟ್ಟಿನದಾಗುತ್ತದೆ. ಆದರೆ ಮನೆತನದಲ್ಲಿ ಮುಖ್ಯ ಳಾದವಳು ತನ್ನ ಸ್ತ್ರೀಯಳು. ಆದ್ದರಿಂದ, ಅವಳಿಗೂ ಸದುಪದೇಶವನ್ನು ಮಾಡಿ ಅವಳನ್ನೂ ಸಹ ಲಿಂಗಧಾರಿಯನ್ನಾಗಿ ಮಾಡುವದು ಶಿವಾನುಭ ವದ ಮಹತ್ವದ ತತ್ವವಾಗಿದೆ. ಆದರೆ ಅವಳಿಗೆ ಲಿಂಗ ಕೊಡಬೇಕಾದರೆ ಅವಳ ಸ್ವಭಾವವು ಹೇಗಿದೆಂಬದನ್ನು ಪರೀಕ್ಷಿಸುವದು ಅವಶ್ಯವು. ಇಂಥ ಪರೀಕ್ಷೆಯಲ್ಲಿ ಸುಜ್ಞಾನಿದೇವನು ತೊಡಗಿ, ಅದಕ್ಕೆ ಅವನು ಒಂದು ಯುಕ್ತಿಯನ್ನು ತೆಗೆದನು. ಇದು ಈ ಚರಿತ್ರೆಯಲ್ಲಿ ಕಾಣಿಸಿದೆ. ಇದ ರಿಂದ ಮಾತಂಗತಮ್ಮನೂ ಅವನ ಹೆಂಡತಿಯೂ ಪರಸ್ಪರ ಪ್ರೇಮ ವುಳ್ಳವರಿದ್ದಿಲ್ಲೆಂಬುದು ಅವನಿಗೆ ಕಂಡುಬಂದಿತು. ಮಾತಂಗತಮ್ಮನು ಅತ್ಯಂತ ಕ್ರೂರನೂ ಬಲಾತ್ಕಾರ ವರ್ತನೆಯುವನೂ ಇದ್ದದರಿಂದ ಅವನ ಹೆಂಡತಿಯು ಅವನನ್ನು ಪ್ರೀತಿಸುತ್ತಿರಲಿಲ್ಲ. ಆದ್ದರಿಂದ ಅವನು ಸತ ನೆಂಬ ಸದ್ದಿಯನ್ನು ಕೇಳಿದ ಕೂಡಲೆ ಅವಳು ಇನ್ನೊಬ್ಬನ ಕೂಡ ಹೋಗಿಬಿಟ್ಟಳು. ಇದನ್ನು ಮಾತಂಗತಮ್ಮನು ಕೇಳಿ ಅವಳನ್ನೂ ಅವ ಳೊಡನೆ ಹೋದವನನ್ನೂ ಕೊಂದುಹಾಕಲಿಕ್ಕೆ ಬಗೆದನು. ಆದರೆ ಇದು ಸರಿಯಾದ ವರ್ತನೆಯಲ್ಲವೆಂಬುದನ್ನು ಸುಜ್ಞಾನಿತಂದೆಯು ಅನೇಕ ಕಥೆಗಳ ಮೂಲಕ ಅವನಿಗೆ ತಿಳಿಸಿಹೇಳಲು ಅವನು ಅವರನ್ನು ಕೊಲ್ಲು ವದನ್ನು ಬಿಟ್ಟುಕೊಟ್ಟನು. ಆದರೆ ಸುಜ್ಞಾನಿದೇವನು ಇಷ್ಟಕ್ಕೆ ಬಿಡದೆ ಸ್ತ್ರೀಯರ ಸ್ಥಾನವು ಸಮಾಜದಲ್ಲಿ ಎಂಥ ಶ್ರೇಷ್ಠತರದ್ದಿರುತ್ತದೆಂಬುದನ್ನು ಸಹ ಅನೇಕ ಕಥೆಗಳ ಮೂಲಕ ವಿವರಿಸಿ ಸ್ತ್ರೀಹತ್ಯವು ಪಾಪಕರ್ಮವೆ ಎಂಬುವನ್ನು ಅಂತ್ಯದಲ್ಲಿ ಅವನಿಗೆ ತಿಳಿಯಪಡಿಸಿದನು. ಈಪ್ರಕಾರ ಸುಜ್ಞಾನಿ ತಂದೆಗಳು ಲಿಂಗಧಾರಿಯು ಸ್ತ್ರೀಯರೊಡನೆ ಹೇಗಿರಬೇಕೆಂಬು ದನ್ನು ಆ ಬೇಡನಿಗೆ ತಿಳಿಸಿಕೊಟ್ಟನು.

ಶಿವಾನುಭವ

ವರ್ಷ ೦೯	ಮಾರ್ಚ-ಏಪ್ರೇಲ ೧೯೪೫.	ಸಂಚಿಕೆ ೬-೭

ವೀರಶೈವರಲ್ಲಿ ಸಂಘಟನೆ.

(ಶಿವಾನುಭವ ಪತ್ರಿಕೆಯ ೧೯ಳಳನೇ ಇಸ್ವಿಯ ಅಕ್ಟೋಬರ ತಿಂಗಳಿನ ಸಂಚಿಕೆಯಲ್ಲಿ ಶ್ರೀಗುರು ಸಂಗನಬಸವಸ್ವಾಮಿಗಳು ಮು. ಬಂಥನಾಳ ತಾ. ಇಂಡಿ ಇವರು "ವೀರಶೈವ ಸಮಾಜೋನ್ನತಿಯ ಪ್ರಥ ಮೋಪಾಯ" ಎಂಬ ಶಿರೋಲೇಖದಲ್ಲಿ ಒಂದು ಲೇಖವನ್ನು ಬರೆದಿದ್ದು ಅದರಲ್ಲಿ ಅವರು ವೀರಶೈವರ ಸಂಘಟನೆಯನ್ನು ಕುರಿತು ತಮ್ಮ ಅಭಿಪ್ರಾ ಯಗಳನ್ನು ವ್ಯಕ್ತಮಾಡಿದ್ದಾರೆ. ಅವರು ಅದರಲ್ಲಿ ಸುಧಾರಣೆಯ ಕಾರ್ಯ ದಲ್ಲಿ ಸಂಸ್ಕೃತಿಯ ಮಹತ್ವವನ್ನು ಹೇಳಿ ರಾಜಕೀಯ ಅಭ್ಯುದಯದ ಆವಶ್ಯಕತೆಯನ್ನು ತಿಳಿಸುತ್ತ ವೀರಶೈವರು ಮುಂದುವರೆಯುವಲ್ಲಿ ಅವರು ಜಾತಿಭೇದವನ್ನು ಬಿಟ್ಟುಕೊಟ್ಟಲ್ಲಿಯೇ ಅವರ ಸಂಘಟನೆಯು ವ್ಯಾಪ್ತ ವಾಗುತ್ತಿದೆ ಎಂದು ಹೇಳಿದ್ದಾರೆ. ಈ ಲೇಖವನ್ನು ನೋಡಿದ ಕೆಲ ಮಹನೀಯರು ಈ ವಿಷಯವಾಗಿ ಅವರಿಗೂ ನಮಗೂ ಪ್ರಕಟನೆಗಾಗಿ ಪತ್ರಗಳನ್ನು ಕಳಿಸಿದ್ದಾರೆ. ಅವುಗಳನ್ನು ನಾವು ಇಲ್ಲಿ ಕೊಡುತ್ತಿದ್ದೇವೆ.)

—ಸಂಪಾದಕ.

೧

ಶಿವಾನುಭವದ ಅಕ್ಟೋಬರ ತಿಂಗಳ ಸಂಚಿಕೆಯಲ್ಲಿದ್ದ ತಮ್ಮ ಲೇಖನವನ್ನೋದಿ ಹೃದಯಕ್ಕೆ ಹಾಲೆರೆದಂತಾಯಿತು. ನಚ್ಚುಮೆಚ್ಚಿನ ಕಚ್ಚೆದೆಯ ತರುಣರನ್ನು ಬಡಿದೆಬ್ಬಿಸುವ ತಮ್ಮ ಕ್ರಾಂತಿಕಾರಕ ವಿಚಾ ರಗಳು ನಮ್ಮಂಥ ಕ್ರಾಂತಿಕಾರಿ ತರುಣರಿಗೆ ಹಿನ್ನೆಲೆಯಾಗಿ ತಮ್ಮ ಅಮೃತಸದೃಶವಾದ ಆಶೀರ್ವಾದವನ್ನು ದಯಪಾಲಿಸುತ್ತಿವೆಯೋ ಏನೋ

ಎಂದು ನಮಗೆ ಭಾಸವಾಗಹತ್ತಿದೆ. ಆದ್ದರಿಂದಲೇ ಕೊಂಚ ಧೈರ್ಯ ಮಾಡಿ ತಮ್ಮ ಸನ್ನಿಧಾನದಲ್ಲಿ ಕೆಲವು ಅಂಕೆ ಮಾಡಬೇಕೆಂದು ಇಚ್ಛಿಸುತ್ತೇವೆ.

ಕಾಯಕವೇ ಕೈಲಾಸವೆಂಬುದನ್ನು ಮರೆತು ನಿರುದ್ಯೋಗವೇ ನಿರ್ವಾಣವೆಂದು ತಿಳಿದು ಅವನತಿಯ ಪಥದಲ್ಲಿ ಮುಂದಡಿಯಿಡುತ್ತಿರುವ ನಮ್ಮ ಸಮಾಜವನ್ನು ಸುಧಾರಿಸಲು ತಮ್ಮಂಥ ಯೋಗ್ಯ ಮೂರ್ತಿಗಳೇ ಸಮರ್ಥರು. ಕನ್ನಡ ಸಾಹಿತ್ಯ ಗಗನದಲ್ಲಿ ಚಿಕ್ಕೆಯಂತೆ ಚಕ್ಕನೆ ಹೊಳೆದು ಹೋದ ಅಕ್ಕನ ಸಕ್ಕರೆಯಂತಿದ್ದ ಬಾಳನ್ನು ತಿಳಿಯದೆ ಇಂದು ನಮ್ಮ ಭಗಿನಿಯರು ಸಾಧ್ಯವನ್ನು ಸಾಧಿಸದೆ, ಭೇದವನ್ನು ಅರಿಯದಲೆ ಭವಿಗಳಾಗಿ ನಶಿಸಿ ಹೋಗಹತ್ತಿದ್ದಾರೆ. ಇಷ್ಟೇಅಲ್ಲದೆ ಹಳ್ಳಿಗರ ಜೀವನವನ್ನು ಆಳವಾಗಿ ಅಭ್ಯಾಸ ಮಾಡಿದ್ದಾದರೆ ಅವರು ಹೆಣ್ಣುಮಕ್ಕಳನ್ನು ಎಷ್ಟು ಹೀನರೀತಿಯಿಂದ ನಡೆಸಿಕೊಳ್ಳುತ್ತಾರೆಂಬುದು ತಿಳಿಯದೆ ಇರಲಾರದು. ಹಳ್ಳಿಗಳ ಸುಧಾರಣೆಯ ಭಾರವಾದ ಹೊರೆಯನ್ನು ಹೊತ್ತ ಜಂಗಮರು ಇಂದು ರಕ್ಷಣೆಯನ್ನು ಬಿಟ್ಟು ಭಕ್ಷಣೆ ಮಾಡತೊಡಗಿದ್ದಾರೆ. ಹಳ್ಳಿಗಳಲ್ಲಿ ಬಡಿದಾಟ ಮತ್ತು ಜಾತಿಭೇದಗಳಾಗಲು ಇವರೇ ಮುಖ್ಯ ಕಾರಣರಾಗಹತ್ತಿದ್ದಾರೆ. ಇಂಥ ಪರಿಸ್ಥಿತಿಯಲ್ಲಿ ತಾವು ಸೂಚಿಸಿದಂತೆ ಒಳಪಂಗಡಗಳಲ್ಲಿ ಲಗ್ನ ಸಮಾರಂಭಗಳಾಗುವದೇ ಪ್ರಥಮೋಪಾಯವು.

ಈ ವಿಚಾರವನ್ನು ನಾವೂ ಮಾಡಹತ್ತಿ ಕೆಲವು ವರ್ಷಗಳಾದವು. ಆದರೆ ಇದಕ್ಕೆ ನಮಗೆ ಅನುಭವ ಬಂದ ಪ್ರಕಾರ, ಬಹು ಜನರು ವಿರೋಧಿಯಾಗುತ್ತಾರೆ. ಹನ್ನೆರಡನೆಯ ಶತಮಾನದಲ್ಲಿ ಬ್ರಾಹ್ಮಣ ಮತ್ತು ಹರಿಜನರಿಗೆ ಶರೀರ ಸಂಬಂಧ ಮಾಡಿಸಿ ವಿಶ್ವಮೈತ್ರಿಯ ಒಂದು ದಿವ್ಯ ಬೀಜವನ್ನು ಬಿತ್ತಿದ ಕ್ರಾಂತಿಕಾರಿ ಬಸವಣ್ಣನವರ ಉದಾಹರಣೆಯನ್ನು ಈಗಿನ ಜನರು ಮರೆತೇ ಬಿಡುವಹಾಗೆ ತೋರುತ್ತದೆ. ಈಗ ನಮ್ಮ ಒಳಪಂಗಡಗಳಲ್ಲಿಯೇ ಶರೀರ ಸಂಬಂಧವಾಗಲು ವಿರೋಧಿಸುವ ಜನರು ಇದ್ದಾರೆಂದ ಮೇಲೆ ನಮ್ಮ ಸಮಾಜದ ಅಧೋಗತಿಯ ಆಳವನ್ನು ಯಾವ ಮಾತಿನಿಂದ ನಾವು ಅಳೆಯಬೇಕು? ನಮ್ಮ ಅನುಭವಕ್ಕೆ ಬಂದ ಪ್ರಕಾರ, ಅಲ್ಲಲ್ಲಿ ಕೆಲವು ಹೀಗೆ ಶರೀರ ಸಂಬಂಧ ಮಾಡಿದ ಉದಾಹರಣೆಗಳು ಕಂಡುಬಂದಿವೆ. ಆದರೆ ಕಾನನದೊಳಗಿನ ಪುಷ್ಪಗಳಂತೆ ಅವರು ತಮ್ಮ ಸುಗಂಧವನ್ನೂ ತಮ್ಮ ದಿವ್ಯ ಜೀವನದ ಹಾದಿಯನ್ನೂ ಉಳಿದವರಿಗೆ ತಿಳಿಯಗೊಡದೆ ಹಾಳಾಗಿ ಹೋಗಹತ್ತಿದ್ದಾರೆ. ಯಾಕಂದರೆ ಅವರಿಗೆ ಸಮಾಜದ ಬಹಿಷ್ಕಾರವನ್ನು ಮತ್ತು ತಿರಸ್ಕಾರವನ್ನು ಸಹಿಸಬೇಕಾಯಿತು. ಹೀಗೆ ನಾವು ವೈಯಕ್ತಿಕವಾಗಿ ಇಂಥ ಕ್ರಾಂತಿಕಾರಕ ಕಾರ್ಯಗಳನ್ನು ಮಾಡಹೋದರೆ ಅದರ ಪರಿಣಾಮವು ಹೀಗಾಗುತ್ತದೆ. ಆದ್ದರಿಂದ ಒಂದು ಸಂಘವನ್ನು ಸ್ಥಾಪಿಸಿ ಅದರ ಮುಖಾಂತರ ಇಂಥ ಒಳಪಂಗಡಗಳಲ್ಲಿಯ ವಿವಾಹಗಳನ್ನು ಏರ್ಪಡಿಸಿದ್ದಾದರೆ ಅದರಿಂದ ಸ್ವಲ್ಪ ಪ್ರೋತ್ಸಾಹನ ದೊರೆಯುವದು. ಮತ್ತು ಅದಕ್ಕೆ ತಮ್ಮಂಥ ಅಧಿಕಾರಿಗಳೇ ಮುಂದೆ ಬರಬೇಕು. ಅಂದರೆ ಆ ಕಾರ್ಯಕ್ಕೆ ಒಂದು ಮೂರ್ತಸ್ವರೂಪ ಬಂದು ಕೆಲವೇ ದಿನಗಳಲ್ಲಿ ನಮ್ಮ ಸಮಾಜದ ಸುಂದರಮಂದಿರವು ನಿರ್ಮಿತವಾಗುವದರಲ್ಲಿ ಸಂದೇಹವೇನೂ ಇಲ್ಲ. ನಮ್ಮಲ್ಲಿ ಈಗ ಅನೇಕ ಸಂಸ್ಥೆಗಳಿವೆ. ಎಷ್ಟೋ ಉದ್ದಾಮ ಸಾಹಿತಿಗಳೂ ಭಾಷಣಕಾರರೂ ಇದ್ದಾರೆ. ಆದರೆ ಕೇವಲ ಭಾಷಣ ಕೊಡುವದರಿಂದ ಈ ಕಾರ್ಯವಾಗುವದಿಲ್ಲ. ವಿಧಾಯಕ ಕಾರ್ಯಕ್ರಮವು ಈಗ ಅತ್ಯವಶ್ಯವಾಗಿದೇಕಾಗಿದೆ. ಆದ್ದರಿಂದ ಹೀಗೆ ಒಂದು ಸಮಿತಿಯನ್ನು ಸ್ಥಾಪಿಸಿ ಹೀಗೆ ಮಾಡಿದ್ದಾದರೆ ಒಳಿತಾಗುವದೆಂದು ಈ ಕಿರಿಯರ ಕಿರಿಯ ಕೋರಿಕೆ.

ಹೀಗೆ ಮಾಡಿದರೆ ನಮ್ಮ ಗೆಳೆಯರ ಗುಂಪಿನವರೆಲ್ಲ ಹಾರ್ದಿಕ ಭಾವನೆಯಿಂದ ತಮ್ಮೊಡನೆ ಸಹಕರಿಸುತ್ತೇವೆ. ಈ ಬಗ್ಗೆ ತಾವು ಪತ್ರ ಮುಖಾಂತರ ತೀವ್ರವಾಗಿ ತಮ್ಮ ಅಭಿಪ್ರಾಯವನ್ನು ತಿಳಿಸಬೇಕೆಂದು ನಮ್ಮ ವಿನ್ನಹ. ತೀವ್ರ ಉತ್ತರ ಬರೆಯಿರಿ.. ನಮಸ್ಕಾರಗಳು.

ತಮ್ಮ ಪ್ರೀತಿಯ

ಆರ್. ಬಿ. ಭೂಸನೂರ ಮಠ.	ಬಿ. ಟಿ ಹೇಮಾಡ್ರಿ.
ಎಮ್. ಏ. ಉಪ್ಪಿನ	ವೀರಭದ್ರಯ್ಯ ಶಿರಹಟ್ಟಿಮಠ
ಜಿ. ಕೆ. ಬಡಿಗಣ್ಣನವರ	ಎಸ್. ಬಿ. ಚನ್ನಪ್ಪಗೌಡರ
ಆರ್. ಎಲ್ ಅಂಗಡಿ	ಬಿ. ಎಸ್. ಗೌಡರ

೨

ಅಕ್ಟೋಬರ ಸಂಚಿಕೆಯ ಶಿವಾನುಭವ ಪತ್ರಿಕೆಯಲ್ಲಿ ತಾವು ಅಪ್ಪಣೆ ಕೊಡಿಸಿದ 'ವೀರಶೈವ ಸಮಾಜೋನ್ನತಿಯ ಪ್ರಥಮೋಪಾಯ' ವೆಂಬ ಲೇಖವನ್ನು ಓದಿ ಪರಮಾನಂದ ಪಟ್ಟೆನು. ವೀರಶೈವ ಸಮಾಜದಲ್ಲಿ ಈಗ ಪ್ರಚಲಿತವಿದ್ದ ಸಾಂಪ್ರದಾಯ ಪದ್ಧತಿಯ ಒಳಪಂಗಡಗಳ ಭೇದಾತ್ಮಕ ಉದಾಸೀನತೆಯನ್ನೂ ಪ್ರಮಥರು ಪ್ರಸಾದ ವಾಣಿಯಿಂದ ನುಡಿದ ವಚನ ಸಾಹಿತ್ಯದಲ್ಲಿ ಪ್ರತಿಪಾದಿಸಲ್ಪಟ್ಟ ಸಮತಾಭಾವವನ್ನೂ ಕಂಡು ಅವುಗಳಲ್ಲಿರುವ ವ್ಯತ್ಯಾಸದ ಮೂಲಕ ಮನಸ್ಸು ವಿಶೇಷವಾಗಿ ನೊಂದು ಕೊಂಡಿತು. ಅಲ್ಲಲ್ಲಿ ಸುಶಿಕ್ಷಿತರೂ ಸದಾಚಾರಿಗಳೂ ಧರ್ಮಗ್ರಂಥಗಳನ್ನು ಪರಿಶೀಲಿಸಿದವರೂ ಆದ ಈಗಿನ ಹಲಕೆಲವು ಶರಣರು ಸಮಾಜ ಸುಧಾರಣೆಯ ಬಗ್ಗೆ ಕಳಕಳಿಯಿಂದ ಬರೆದ ಲೇಖಗಳನ್ನೂ ಕೊಟ್ಟ ಉಪನ್ಯಾಸಗಳನ್ನೂ ಓದಿ ಸಮಾಧಾನಪಟ್ಟಾಗ್ಯೂ ಸಮಾಜದಲ್ಲಿರುವ ನಿಜವಾದ ಧರ್ಮಾಚರಣೆಯ ಅಜ್ಞಾನದ ಮೂಲಕ ಕೆಲವು ಪಂಗಡದವರು ಇಂಥ ಸುಧಾರಣೆಯ ವಿಚಾರಗಳ ಬಗ್ಗೆ ವಿರೋಧವನ್ನು ತಾಳುತ್ತಿರುವದನ್ನು ಕಂಡು ಸಂತಾಪವೆನಿಸಿತು. ಕೆಲವರು ಅಧಿಕಾರ ವಾಣಿಯಿಂದ ಇಂಥ ವಿಚಾರಗಳ ಬಗ್ಗೆ ಅಥವಾ ನಿಜವಾದ ಧರ್ಮಾಚರಣೆಯ ವಿಚಾರಗಳನ್ನು ಪ್ರತಿಪಾದಿಸಿದವರ ಬಗ್ಗೆ "ಸಾಕ್ಷರಾಃ ರಾಕ್ಷಸಾಃ" ಎನ್ನುವಷ್ಟು ಸಂತಾಪಗೊಂಡು ಮಾತಾಡಿದರೆ ಪ್ರಮಥರ ಆಚರಣೆಯು ಪುನಃ ರೂಢವಾಗುವದು ಕಷ್ಟವೆನಿಸುತ್ತದೆ. ಇಂಥ ವೇಳೆಯಲ್ಲಿ ತಮ್ಮಂಥ ನಿಃಸ್ವಾರ್ಥಿಗಳು ಸಮಾಜೋದ್ಧಾರದ ಕಳಕಳಿಯಿಂದ ಧೈರ್ಯತಾಳಿ ಅಧಿಕಾರ ವಾಣಿಯಿಂದ 'ಸಮಾಜೋನ್ನತಿಯ ಪ್ರಥಮೋಪಾಯ'ದಂಥ ಲೇಖವನ್ನು ಬರೆದು ಪ್ರಕಟಿಸುವ ಸಮಾಜ ಪ್ರೇಮದ ಬಗ್ಗೆ ತಮಗೆ ಎಷ್ಟು ಧನ್ಯವಾದಗಳನ್ನು ಅರ್ಪಿಸಿದರೂ ಕಡಿಮೆಯೇ ಸರಿ. ಲಿಂಗಾಯತ ಧರ್ಮದಲ್ಲಿ ಯಾತಕ್ಕಾದರೂ ಮಹತ್ವವಿದ್ದರೆ ಅದು "ನಡೆನುಡಿ ಒಂದಾಗಿರಬೇಕೆಂಬ ತತ್ವದ ಬಗ್ಗೆ." ಅಲ್ಲಮಪ್ರಭು ಬಸವಾದಿ ಪ್ರಮಥರು ನಡೆದಂತೆ ನುಡಿದು ವಚನಸಾಹಿತ್ಯವನ್ನು ವೇದಾಗಮಗಳಲ್ಲಿರುವ ವೀರಶೈವ ಧರ್ಮಕ್ಕನುಗುಣವಾದ ತತ್ವಗಳನ್ನು ಪಾಮರರಿಗೂ ತಿಳಿಯಲೆಂದು ಅನುಗ್ರಹಿಸಿದ್ದಾರೆ. ಈ ಸಾಹಿತ್ಯವಾಗಲೀ ಆಗಮಗಳಾಗಲೀ ಎಲ್ಲರಿಗೂ ಎಲ್ಲ ಕಾಯಕದವರಿಗೂ ಪಂಗಡದವರಿಗೂ ಸಾಮಾನ್ಯ

ವಿರುವ ಅಷ್ಟಾವರಣ ಷಟ್ಸ್ಥಲ ಮತ್ತು ಪಂಚಾಚಾರ ಮುಂತಾದ ಸಮತಾವಾದದ ಬಗ್ಗೆ ಡಂಗುರ ಸಾರುತ್ತವಲ್ಲದೆ ಪಂಗಡಗಳು ವರ್ಣಗಳು, ವರ್ಗಗಳು ಮುಂತಾದ ಮೇಲುಕೀಳುಗಳನ್ನು ಪುಷ್ಟೀಕರಿಸುವದಿಲ್ಲವಿಷ್ಟೇ ಅಲ್ಲ, ಆದರೆ ಅವುಗಳನ್ನು ಸಾಕಷ್ಟು ಮನವಾರೆ ಹಳಿದು ಹಳದಂತೆ ಆಚರಿಸಿ ಪ್ರೇಮಾದರವುಳ್ಳ ಸಮಾಜ ಸಂಘಟನೆಯನ್ನು ಮಾಡಿತೋರಿಸಿದ್ದಾರೆ. ವೀರಶೈವ ಧರ್ಮವು ಪರಕೀಯ ಜನಾಂಗದವರಿಂದಲೂ ಪರಕೀಯ ಧರ್ಮದವರಿಂದಲೂ ಅನುಕರಣೀಯವೆಂದು ಹೊಗಳಲ್ಪಟ್ಟದ್ದು ಅದರಲ್ಲಿರುವ ಸಮಾಜಸಂಘಟನೆಯನ್ನುಂಟು ಮಾಡುವ ಅಭ್ಯುದಯ ನಿಃಶ್ರೇಯಸಗಳನ್ನು ಸಾಧಿಸಲು ಅನುಕೂಲವಾಗುವ ಸಮತಾಭಾವ ಕ್ರಿಯಾದ್ವೈತದ ನಡೆನುಡಿಗಳ ದೆಶೆಯಿಂದ. ನಿಜವಾದ ಸಂಗತಿಯು ಹೀಗಿದ್ದು ವೀರಶೈವರಲ್ಲಿ ಜಾತಿಗಳುಂಟು ವರ್ಗಗಳುಂಟು, ಎಷ್ಟು ಕಾಯಕಗಳೋ ಅಷ್ಟು ಜಾತಿಗಳು, ಆ ಆ ಪಂಗಡದವರು ತಮ್ಮ ತಮ್ಮ ಅಡಿಗೇ ಮನೆಯನ್ನು ಮುಚ್ಚುವ ವರೆಗೆ ಪ್ರತ್ಯೇಕವಿಟ್ಟುಕೊಳ್ಳತಕ್ಕದ್ದೆಂದೂ ಸಮಾಜವನ್ನು ಮತ್ತು ಧರ್ಮವನ್ನು ಅಧೋಗತಿಗೊಯ್ದಾದರೂ ತಮ್ಮ ವರ್ಗ ವರ್ಣವನ್ನು ಸ್ಥಿರವಾಗಿ ಉಳಿಸಬೇಕೆಂದು ಸಾಧಿಸಲು ವಿಶ್ವಪ್ರಯತ್ನ ಮಾಡುವವರಿಗೆ ತಮ್ಮಂಥ ನಿಃಸ್ವಾರ್ಥಿಗಳೂ ಅಧಿಕಾರವಾಣಿಯುಳ್ಳವರೂ ಸಮಾಜೋದ್ಧಾರ ಪ್ರೇಮಿಗಳೂ ಸಮರ್ಥರು. ಬಸವಾದಿಪ್ರಮಥರು ತಮ್ಮಂಥ ಉದಾರ ಸ್ವಾಮಿಗಳಿಗೆ ಸಮಾಜೋದ್ಧಾರದ ಬಗ್ಗೆ ಹೆಣಗಲು ಸದ್ಬುದ್ಧಿಯನ್ನೂ ಪ್ರೇರಣೆಯನ್ನೂ ಕರುಣಿಸಲೆಂದು ತಮ್ಮ ಪವಿತ್ರ ಚರಣಗಳಲ್ಲಿ ದಿರ್ಘದಂಡ ಅಂಕೆ. ಸಮಾಜ ಹಿತದ ದೃಷ್ಟಿಯಿಂದ ಈ ಪತ್ರವನ್ನು ಪ್ರಕಟಿಸುವದು ಉಚಿತವೆನಿಸಿದ ಪಕ್ಷದಲ್ಲಿ ಇದನ್ನು ರಾ. ಬ. ಹಳಕಟ್ಟಿಯವರ ಕಡೆ ಕಳಿಸಿ ಕೊಡಬಹುದು ಅಥವಾ ಬಿಡಬಹುದೆಂದು ನಮ್ರ ವಿನ್ನಹ. ಇದರಲ್ಲಿ ಸಾಹಿತ್ಯಸಮ್ಮತವಲ್ಲದ ಧರ್ಮದ ವಿರುದ್ಧ ವಿಚಾರಗಳಿದ್ದ ಪಕ್ಷದಲ್ಲಿ ಹಾಗೆ ತಿಳಿಸುವ ಕೃಪೆ ಮಾಡಿದರೆ ಅದರ ಪೂರ್ವಕ ತಿದ್ದಿಕೊಳ್ಳುವೆನು.

—ವಿರೂಪಾಕ್ಷಪ್ಪ ಚನ್ನಪ್ಪ ಬ್ಯಾಹಟ್ಟಿ, ಬಿ. ಎ. ಬಿ. ಟಿ.
ಬಾಗಲಕೋಟ.

೩

ಪರಶಿವತತ್ವವೇ ಅತ್ಯಂತ ಪಾರಮಾರ್ಥಿಕ ಅನಾದ್ಯನಂತ ಎಲ್ಲೆಡೆಯಲ್ಲಿಯೂ ವ್ಯಾಪಿಸಿದ ಸದ್ವಸ್ತುವು. ಈ ವ್ಯೋಮಾತೀತ ಚೈತನ್ಯ ವಸ್ತುವೇ ಭಕ್ತಿ ದೃಷ್ಟಿಯಿಂದ ಪರಶಿವನೆಂತಲೂ ಪರಮೇಶ್ವರನೆಂತಲೂ ಮಹಾದೇವನೆಂತಲೂ ಸಂಬೋಧಿಸಲ್ಪಡುತ್ತದೆ. ತಾತ್ವಿಕ ದೃಷ್ಟಿಯಿಂದ ಈ ಪರಶಿವನ ಚಿತ್‌ಶಕ್ತಿಯಿಂದ ಪಂಚಮಹಾಭೂತಾತ್ಮಕ ಸ್ಥೂಲ ಸೃಷ್ಟಿಯು ಆವಿರ್ಭವಿಸಿತು. ಆ ಪರಶಿವನ ಆಧಾರದಿಂದಲೇ ಪಂಚ ಮಹಾಭೂತಗಳುದ್ಭವಿಸಿದ್ದರಿಂದ ಈ ಭೂತಗಳಿಗೆ ಆ ಶಿವನ ಪಂಚ ಮುಖಗಳೆಂದು ಅನ್ನುತ್ತಾರೆ. ಅಗೋಚರವಿದ್ದ ಸದ್ವಸ್ತುವು ಪಂಚ ಮಹಾಭೂತಗಳನ್ನೊಳಗೊಂಡು ಭಕ್ತರಿಗೆ ಪಂಚಮುಖಗಳುಳ್ಳ ಶಿವ ಮೂರ್ತಿಯಾಗಿ ಗೋಚರಿಸಿತು. ಇಂಥ ಪಂಚಮುಖಗಳುಳ್ಳ ಮೂರ್ತಿಯ ನಾಮವೇ ಪಂಚಾಕ್ಷರಿ ಮಂತ್ರವಾಯಿತು. ಈ ಪಂಚಮಹಾಭೂತಾತ್ಮಕ ಪಂಚಮುಖಗಳೇ ಪಂಚಾಚಾರ್ಯರೆಂದು ಅಥವಾ ಪಂಚಮಹಾಭೂತಗಳ ಅಧಿದೇವತೆಗಳೇ ಪಂಚಾಚಾರ್ಯರೆಂದು ಸ್ವಾಭಾವಿಕ್ಯವಾಗಿ ಭಕ್ತಿಮಾರ್ಗಕ್ಕನುಸರಿಸಿ ಭಕ್ತರು ಭಾವಿಸಿರುತ್ತಾರೆ. ಅಂದಮೇಲೆ ಪಂಚ ಮಹಾಭೂತಗಳೇ ಪಂಚಸಿಂಹಾಸನಗಳು ಮತ್ತು ಶುಭಕಾರ್ಯದಲ್ಲಿ ಉಪಯೋಗಿಸಲ್ಪಡುವ ಪಂಚಕಲಶಗಳು ಪಂಚಪ್ರಣವಗಳು. ಹಾಗೆಯೇ ಪಂಚಸೂತ್ರಗಳು ಪಂಚಗೋತ್ರಗಳು. ಪರಶಿವನೇ ಶೂನ್ಯಸಿಂಹಾಸನಾಧಿಪತಿಯು. ಆತನ ಪ್ರತಿನಿಧಿಯೇ ಪ್ರಭುದೇವರೆಂದು ಶರಣರು ಭಾವಿಸಿರುತ್ತಾರೆ. ಈ ರೀತಿಯಿಂದ ಪಂಚಾಚಾರ್ಯರು ಪಂಚಲಿಂಗೋದ್ಭವರೆಂಬುವದೂ ಅಯೋನಿಜರೆಂಬುವದೂ, ಯುಗಯುಗಾಂತರದಲ್ಲಿದ್ದರೆಂಬುವದೂ, ಸೃಷ್ಟಿಯ ಆದಿಯಲ್ಲಿದ್ದರೆಂಬುವದೂ, ಅವರ ವೀರಶೈವ ಮತವನ್ನೇ ಏಕೆ ಸೃಷ್ಟಿಯನ್ನೇ ನಿರ್ಮಿಸಿದರೆಂಬುವದೂ ಪೂರ್ಣ ಅರ್ಥಗರ್ಭಿತ ವಿಧಾನಗಳಾಗುವವು.

ಐತಿಹಾಸಿಕ ದೃಷ್ಟಿಯಿಂದ ಪರಿಶೀಲಿಸಿದರೆ ಲಿಂಗರಾಜ ಕಾಲೇಜದ ಪ್ರೋಫೆಸರರಾದ ಶ್ರೀಮಾನ್ ಎಮ್. ಆರ್. ಸಾಖರೆ ಎಮ್. ಏ.; ಟಿ. ಡಿ. (ಲಂಡನ್) ಇವರು ತಮ್ಮ ಲಿಂಗಧಾರಣ ಚಂದ್ರಿಕೆಯ ಪ್ರಸ್ತಾವನೆಯಲ್ಲಿ ಸಾಕಷ್ಟು ಆಧಾರಗಳನ್ನು ಕೊಟ್ಟು ನಿರ್ವಿವಾದವಾಗಿ ಸಿದ್ಧಮಾಡಿರುವಂತೆ ಪಂಚಪೀಠ ಮಠಗಳ ಪಂಚಾಚಾರ್ಯರು ಹನ್ನೆ

ಪಡನೆಯ ಶತಮಾನದ ಮಧ್ಯಭಾಗದಲ್ಲಿದ್ದ ಬಸವಣ್ಣನವರಿಗಿಂತ ಇತ್ತೀಚೆಗಿನವರೆಂತಲೂ ಹದಿಮೂರರಿಂದ ಹದಿನೈದನೆಯ ಶತಮಾನದ ಬೇರೆ ಬೇರೆ ಭಾಗದ ಕಾಲದಲ್ಲಿದ್ದು ಲಿಂಗಾಯತಮತ ಪ್ರಸಾರಕ್ಕೆ ಪ್ರಯತ್ನಿಸಿದರೆಂತಲೂ ಕಂಡುಬರುತ್ತದೆ. ಇದುಅಲ್ಲದೆ ಪಂಚಾಚಾರ್ಯರಲ್ಲಿ ಬಹುಪಾಲಾದ ಪಂಡಿತಾರಾಧ್ಯರು ತಮ್ಮ ಗುರು ಚರಿತ್ರೆಯಲ್ಲಿ ಬಸವಾದಿ ಪ್ರಮಥಪುಂಗವರನ್ನು ಮನದಣಿಯುವಂತೆ ಭಕ್ತಿಭಾವನೆಯಿಂದ ಕೊಂಡಾಡಿದ್ದಾರೆ. ಹೀಗೆ ಬಸವಾದಿ ಪ್ರಮಥರ ನಂತರದಲ್ಲಿ ಆಗಿಹೋದಾಗ್ಯೂ ವೀರಶೈವಮತ ಪ್ರಸಾರ ಕಾರ್ಯದಲ್ಲಿ ಪಂಚಾಚಾರ್ಯರ ಕರ್ತೃತ್ವ ಶಕ್ತಿಗೆ ಸಾಕಷ್ಟು ಮನ್ನಣೆಯುಂಟು. ಈ ಪ್ರಸಾರ ಕಾರ್ಯದ ಬಗ್ಗೆನ್ನ ಲಿಂಗಾಯತ ಸಮಾಜವು ಪಂಚಾಚಾರ್ಯರಿಗೆ ಭಕ್ತಿಪೂರ್ವಕ ಋಣಿಯಾಗಿದೆ. ಐತಿಹಾಸಿಕ ಸಂಗತಿಗಳು ನಿಜವಾಗಿ ಹೀಗಿದ್ದರೂ ಸಹ ಬಸವಾದಿಪ್ರಮಥರಿಗೆ ಸಂಸ್ಕೃತ ಬರುತ್ತಿತ್ತೇ? ಅವರು ತಮ್ಮ ವಚನಗಳಲ್ಲಿ ಪಂಚಾಚಾರ್ಯರ ಹೆಸರುಗಳನ್ನು ಎತ್ತಿರುವರೇ? ಎಂದು ಕೆಲವರು ಬರೆಯುವದರಲ್ಲಿ ಅಭಿಮಾನಪಡೆಯುವದು ಎಷ್ಟು ವಿಷಾದಕರವು! ಬಸವಾದಿ ಶರಣರು ತಮ್ಮ ನಂತರದಲ್ಲಿ ಬರುವಂಥ ಪಂಚಾಚಾರ್ಯರ ಬಗ್ಗೆ ಭಕ್ತಿಯಿಂದ ತಮ್ಮ ವಚನಗಳಲ್ಲಿ ಕೊಂಡಾಡಿ ಬರೆಯುವದೆಂತು? ಹಾಗೆ ಸ್ವಾಭಾವಿಕವಾಗಿ ಕೊಂಡಾಡದ್ದಕ್ಕಾಗಿ ಶಿವಶರಣರಿಗೆ ದೋಷ ಕೊಡುವದು ಎಷ್ಟು ಅನ್ಯಾಯವಾದದ್ದು! ಇದರಿಂದ ಪಂಚಾಚಾರ್ಯರು ಇದ್ದ ಕಾಲದ ಅಂಕೆ ಸಮಾಜದವರಿಗೆ ಚನ್ನಾಗಿ ಗೊತ್ತಿಲ್ಲವೆಂದೇ ಈ ಬಗೆಯ ದೋಷ ಅಥವಾ ಅನ್ಯಾಯವಾಗುತ್ತದೆಂದು ಅನ್ನಬೇಕಾಗುತ್ತದೆ. ಆ ಪರಶಿವಮೂರ್ತಿಯು ತನ್ನ ಪಂಚಸೂತ್ರಗಳ ಸಂಬಂಧಿಕರು ಹನ್ನೆರಡನೆಯ ಶತಮಾನದಲ್ಲಿದ್ದ ಬಸವಾದಿಪ್ರಮಥರು ಹದಿಮೂರರಿಂದ ಹದಿನೈದನೆಯ ಶತಮಾನಗಳಲ್ಲಿ ಆಗಿಹೋದ ಪಂಚಾಚಾರ್ಯರನ್ನು ಕೊಂಡಾಡಲಿಲ್ಲವೆಂದು ತಿರಸ್ಕರಿಸಿ ಬರೆಯುದಂತೆ ಅನುಗ್ರಹಿಸಲೆಂದು ಪ್ರಾರ್ಥಿಸಬಯಸುತ್ತೇನೆ. ಈ ಸಂಗತಿಗಳು ವಿಚಾರಗಳು ನಿಜವಾದವುಗಳಲ್ಲವೆಂದು ಸಿದ್ಧಾಂತಗೊಳಿಸಿದಲ್ಲಿ ಶೋಧಮಾಡಿ ಸಿದ್ಧಾಂತಗೊಳಿಸಿದ ಸಂಗತಿಗಳನ್ನೂ ವಿಚಾರಗಳನ್ನೂ ಐತಿಹಾಸಿಕ ದೃಷ್ಟಿಯಿಂದಲೇ ಆಗಲಿ ಜಿಜ್ಞಾಸುಗಳು ಪ್ರಾಂಜಲ ಬುದ್ಧಿಯಿಂದ ಒಪ್ಪಿಕೊಳ್ಳಲು ಸದಾ ಸಿದ್ಧರಿರುತ್ತಾರೆಂದು ಚನ್ನಾಗಿ ತಿಳಿಯತಕ್ಕದ್ದು. ಇಲ್ಲಿ ಸ್ವಾರ್ಥಕ್ಕಾ

ಗಲಿ, ಹಠಕ್ಕಾಗಲಿ ಅಸ್ಪದವಿರಕೂಡದು. ಧರ್ಮತತ್ವ ಶೋಧದಲ್ಲಿ ಯಾರೂ ವಿಕಾರಗೊಳ್ಳಕೂಡದು. ಶೋಧದಿಂದ ಧರ್ಮತತ್ವಗಳ ಮೇಲೆ ಹೆಚ್ಚೆಚ್ಚು ಬೆಳಕು ಬಿದ್ದಂತೆ ಧರ್ಮದ ಅನುಯಾಯಿಗಳು ಉದ್ರೇಕಗೊಳ್ಳದೆ ಕೃತಜ್ಞತಾಭಾವದಿಂದ ಸಂತೋಷಭರಿತರಾಗತಕ್ಕದ್ದು.

ಇನ್ನು ಲಿಂಗಾಯತ ಧರ್ಮದ ವೈಶಿಷ್ಟ್ಯವೇನು? ಈ ಧರ್ಮವು ಎಲ್ಲರಿಂದಲೂ ಅನುಕರಣೀಯವೂ ಆದರಣೀಯವೂ ಅನ್ನುವಷ್ಟು ಮಹತ್ವವುಳ್ಳ ಶ್ರೇಷ್ಠತೆ ಯಾವ ಆಚಾರವಿಚಾರಗಳಲ್ಲಿ ಉಂಟು? ಬಸವಾದಿ ಪ್ರಮಥರನ್ನು ಎಲ್ಲ ಧರ್ಮೀಯರೂ ಇಷ್ಟು ಹೊಗಳುವದೇಕೆ? ಶಿವಶರಣರ ವಚನಾಮೃತಕ್ಕೆ ಕನ್ನಡ ಸಾಹಿತ್ಯದಲ್ಲಿ ಅಗ್ರಸ್ಥಾನ ಕೊಟ್ಟಿದ್ದೇಕೆ? ಇಂದು ಇಪ್ಪತ್ತನೆಯ ಶತಮಾನದಲ್ಲಿ ತೀವ್ರ ಪ್ರಸಾರಹೊಂದುತ್ತಿರುವ ಸಮತಾವಾದವು ಹನ್ನೆರಡನೆಯ ಶತಮಾನದಲ್ಲಿ ಬಸವಾದಿಪ್ರಮಥರಿಂದ ಗ್ರಹಿಸಲ್ಪಟ್ಟು ಆ ಸಮತಾಭಾವದ ತತ್ವಕ್ಕನುಸರಿಸಿ ಲಿಂಗಾಯತ ಸಮಾಜವು ರಚಿಸಲ್ಪಟ್ಟಿದ್ದು ಅಂದಿನ ಮಹಾನುಭಾವರಾದ ಶಿವಶರಣರ ವಿಶಾಲಹೃದಯ ಮತ್ತು ದಿವ್ಯದೃಷ್ಟಿಯ ಹೆಗ್ಗುರುತಾಗಿದೆಯಲ್ಲವೇ? ಬಸವಣ್ಣನವರು ಹನ್ನೆರಡನೆಯ ಶತಮಾನದ ಗಾಂಧೀಜಿಯವರೆಂದು ಹೇಳಲು ಬರುವಂತಿಲ್ಲವೇ? ಆಗಿನ ಶಿವಶರಣರು ಶಿವಾನುಭವಿಗಳು, ಶಿವಸಾಕ್ಷಾತ್ಕಾರಿಗಳು, ಲಿಂಗಾಯತ ಧರ್ಮದೃಷ್ಟಾರರು ಇದ್ದು ತಮ್ಮ ದಿವ್ಯ ಅನುಭವದಂತೆ ನಡೆದು, ವಚನ ಸಿದ್ಧಾಂತರೂಪದಲ್ಲಿ ನುಡಿದು, ಲಿಂಗಾಯತ ಸಮಾಜಕ್ಕೆ ಏಕೆ, ಕನ್ನಡ ಜನಾಂಗಕ್ಕೆ ಆದರ್ಶಪುರುಷರಾಗಿ ವರ್ತಿಸಲಿಲ್ಲವೇ? ಆದ್ದರಿಂದ ಲಿಂಗಧಾರಿಗಳಾದ ಎಲ್ಲ ವ್ಯಕ್ತಿಗಳಿಗೂ ಪಂಚ ಆಚಾರಗಳು ಅಷ್ಟಾವರಣಗಳು ಷಟ್‌ಸ್ಥಲಗಳು ಸಾಮಾನ್ಯವಿದ್ದು ಅವುಗಳನ್ನು ಅನುಸರಿಸಿ ಆಚರಿಸಲಿಕ್ಕೆ ಸ್ವಾತಂತ್ರ್ಯವುಳ್ಳ ಆಚಾರವಿಚಾರಗಳೂ ಭೇದಭಾವನೆಗಳಿಲ್ಲದ ಸಮಾನತೆಯ ಆಧಾರದ ಮೇಲೆ ಕಟ್ಟಲ್ಪಟ್ಟ ಸಮಾಜ ರಚನೆಯು ವೀರಶೈವ ಧರ್ಮದ ಶ್ರೇಷ್ಠತೆಯ ದ್ಯೋತಕಗಳಲ್ಲವೇ? ಇಂಥ ಉದಾತ್ತತೆಯ ಲಕ್ಷಣಗಳನ್ನು ಬಿಟ್ಟು, ಲಿಂಗಾಯತರು ಶಿವಾನುಭವಕ್ಕೆಂದು ಎಷ್ಟು ಕಾಯಕಗಳನ್ನು ಕೈಕೊಂಡಿರುವರೋ ಅಷ್ಟು ಜಾತಿಯವರೆಂತಲೂ ಪರಸ್ಪರ ಅನ್ನೋದಕ ಶರೀರಸಂಬಂಧದ ವ್ಯವಹಾರ ಮಾಡದಷ್ಟು ಭೇದಭಾವಗಳುಂಟೆಂದು ಪ್ರತಿಪಾದಿಸುವದು ವೀರಶೈವತ್ವವನ್ನು ವಿಶಾಲವಾದ ಧರ್ಮವೆಂದು

ಕರಿಸುವದಷ್ಟು ಹೀನಸ್ಥಿತಿಗೆ ಎಳೆಯುವದಿಲ್ಲವೇ? ಆದ್ದರಿಂದ ಗುಣಗಳಿಗೆ ಪ್ರಾಧಾನ್ಯತೆಯಿಲ್ಲದೆ ಜನನಕ್ಕೆ ಮಹತ್ವ ಕೊಡುವದಾದರೆ ವಕೀಲನ ಮಗನು ವಕೀಲನು, ಕಲೆಕ್ಟರನ ಮಗನು ಕಲೆಕ್ಟರನು, ವ್ಯಾಪಾರಿಯ ಮಗನು ವ್ಯಾಪಾರಿಯು, ಒಕ್ಕಲಿಗನ ಮಗನು ಒಕ್ಕಲಿಗನು ಆಗಿಯೇ ತೀರಬೇಕೆಂದು ಭಾವಿಸುವದು ಎಷ್ಟು ಅವ್ಯವಹಾರಿಕವೂ ಅಸಾಧ್ಯವೂ ಅನಿಷ್ಟವೂ ಆಗುತ್ತದೆಂಬುವದನ್ನು ಹೇಳುವದವಶ್ಯವಿಲ್ಲ.

ಕೇವಲ ಶಿವಾನುಭವಕ್ಕೆಂದು ಶಿವಸಾಕ್ಷಾತ್ಕಾರಕ್ಕೆಂದು ಕೇವಲ ಒಂದೇ ಜನ್ಮದಲ್ಲಿ ಮುಕ್ತಿಪಡೆಯಬೇಕೆಂದು ಉದಾತ್ತವಾದ ಸಮಾನ ಅಧಿಕಾರವುಳ್ಳ ಸಮಾಜ ರಚನೆಯನ್ನು ಬಸವಾದಿಪ್ರಮಥರು ಪರಿಶ್ರಮವಹಿಸಿ ಏರ್ಪಡಿಸಿಟ್ಟಿರುವದನ್ನು ಸ್ವಾರ್ಥಕ್ಕಾಗಿ ತಿರಸ್ಕರಿಸುವದು ಭೇದಭಾವಗಳನ್ನು ಬಾಧ್ಯಪೂರ್ವಕ ಆಚರಿಸುವದು ಎಷ್ಟು ಅನರ್ಥಕರವು! ಸಮಾಜ ಸಂಘಟನೆಯು ವಿಧ್ವಂಸಕವು! ದೇಹವೇ ದೇಗುಲವೆಂಬ ಸಿದ್ಧಾಂತಕ್ಕೆ ವಿರುದ್ಧವಾದದ್ದು! ಎಂದು ಇಲ್ಲಿ ಹೇಳಲಿಕ್ಕೆ ಬೇಡ. ಭಕ್ತನೊಬ್ಬನೆ ಅರಿವಿನಿಂದ ಗುರುವಾದ, ಬಯಲಿನಿಂದ ಲಿಂಗವಾದ, ತಿಳಿವಿನಿಂದ ಜಂಗಮವಾದನೆಂಬ ಕಟ್ಟಿಯ ಬಸವೇಶ್ವರನ ಸಿದ್ಧಾಂತ ವಾಕ್ಯ ರಚನದಂತೆ ಪ್ರತಿ ಒಬ್ಬ ಲಿಂಗಧಾರಿಗೆ ತನ್ನ ಗುಣಗಳಿಂದ ಶಿವಯೋಗದಿಂದ ಶಿವಾನುಭವದಿಂದ ಆಚಾರವಿಚಾರಗಳಿಂದ ತನ್ನಲ್ಲಿಯೇ ಗುರುಲಿಂಗಜಂಗಮತತ್ವವನ್ನು ಪಡೆಯಲು ಅಧಿಕಾರ ಸ್ವಾತಂತ್ರ್ಯಗಳುಂಟು, ಅಂದಾಕ್ಷಣಕ್ಕೆ ಎಲ್ಲರೂ ಗುರುಲಿಂಗಜಂಗಮವಾಗುವ ಯೋಗ್ಯ ಗುಣವುಳ್ಳವರಾಗುವರೆಂದೂ ಹಾಗೆ ಆಗುವದು ಸಾಧ್ಯವೆಂದೂ ಯಾರೂ ತಿಳಿಯುವದೂ ಇಲ್ಲ, ನಂಬುವದೂ ಇಲ್ಲ. ತಾತ್ವಿಕ ದೃಷ್ಟಿಯಿಂದ ಅಧಿಕಾರವುಂಟೆಂಬುವದರಲ್ಲಿಯೇ ಲಿಂಗಾಯತ ಧರ್ಮದ ಉದಾತ್ತತೆಯುಳ್ಳ ಶ್ರೇಷ್ಠತೆ ಇರುತ್ತದೆ. ಇದಕ್ಕೆ ನಿದರ್ಶಕವಾಗಿ ಲಿಂಗಾಯತ ಸಮಾಜದಲ್ಲಿ ಎಷ್ಟೊ ಲಿಂಗಧಾರಿಗಳು ವೇಷ ಧರಿಸದಿದ್ದರೂ ತಮ್ಮ ಗುಣ ಕ್ರಿಯೆಗಳಿಂದ ಗುರುಲಿಂಗಜಂಗಮವಾದ ಕಾರ್ಯವಾಡುತ್ತಿದ್ದಾರೆ. ಶಿವಾನುಭವ ಪಡೆದ ಶುದ್ಧ ಶಿವಶರಣರಾಗಿದ್ದಾರೆ. ಈ ಮೇರೆಗೆ ಸಮತಾಭಾವವು ಸಮಾಜ ರಚನೆಯ ಮುಖ್ಯಾಂಗವಾಗಿದೆ. ಇದಕ್ಕೆ ವ್ಯತಿರಿಕ್ತವಾಗಿ ಗುಣಗಳನ್ನು ಲಕ್ಷಿಸದೆ ಕೇವಲ ವಿಶಿಷ್ಟ ಜನನಕ್ಕೆ ಮಹತ್ವ ಕೊಟ್ಟಿದ್ದಾದರೆ ಸಮಾಜದಲ್ಲಿ ೧೦೦ಕ್ಕೆ ೯೯ ಜನರು ಕೇವಲ ಶ್ರದ್ಧಾಭಕ್ತಿಯುಳ್ಳ

ಕುರುಡ ನಂಬಿಕೆಯು ಅಂಧಕ್ರಿಯಾಚಾರವುಳ್ಳ ಸಾಂಪ್ರದಾಯಿಕ ಶರಣರಾಗಿ ಉಳಿಯುವರು. ಹೀಗಾಗುವದು ಸಮಾಜದ ಅಧೋಗತಿಗೆ ಕಾರಣವಾಗುವದು. ಆದ್ದರಿಂದ ಸಮಾಜಾಭಿಮಾನಿಗಳು ಶಿವಾನುಭವಕ್ಕೆ ಮಹತ್ವ ಕೊಟ್ಟು ತಮ್ಮ ದೇಹವೆಂಬ ದೇಗುಲದಲ್ಲಿಯು "ತನುತ್ರಯ ಶುದ್ಧಿ ದ್ವಾರಾ ಗುರುಲಿಂಗಜಂಗಮ ಪ್ರಸಾದ ಸಿದ್ಧ್ಯರ್ಥಂ" ಎಂಬ ವಾಕ್ಯದಂತೆ ಗುರುಲಿಂಗಜಂಗಮತ್ವವನ್ನು ಸಾಧಿಸುವ ಜ್ಞಾನಯುಕ್ತ ಕ್ರಿಯೆಯನ್ನು ಆಚರಿಸುವದು ಸಮಾಜದ ಅಭಿವೃದ್ಧಿಗೆ ಕಾರಣವಾಗುವದು. ಯಥಾಮತಿ ಬರೆದಿರುವೆನು. ಬಲ್ಲವರ ತಿದ್ದುಪಡಿಗೆ ಅವಕಾಶವುಂಟು. ಇದೇ ಸಮಾತಾಭಾವವನ್ನೇ ಸುಕ್ಷೇತ್ರ ಬಂಥನಾಳ ಶ್ರೀಗಳವರು ಶಿವಾನುಭವ ಸಂಚಿಕೆಯಲ್ಲಿ . ಅಧಿಕಾರವಾಣಿಯಿಂದ ಸಿದ್ಧಗೊಳಿಸಿದ್ದಾರೆ.

—ಧರ್ಮಾಭಿಜ್ಞಾಸು.

ಕ ನ ಸು.

(ಶ್ರೀಯುತ ಆರ್. ಎಸ್. ಭೂಸನೂರು ಮಠ, ರಾ. ಭಾ. ವಿಶಾರದ ಸಾಹಿತ್ಯರತ್ನ ಮುಂ. ಗದಗ.)

ತೆಂಬೆಲರಂತೆ ತುಂಬುಹರಿಯಿಂ ಹೊರಚಿಮ್ಮುವ ।
ಚಂದ್ರಿಕೆಯಂತೆ ಧವಲಯಶೋಯುತಂ ॥
ಕಬ್ಬಿಗರ ಕಾವ ಶಶಿಯೊಗದೆಸೆವ ಬಸವೇಶ ।
ಕನಸಿನೊಳ್ ಕಂಗೊಳಿಸಿದಂ ಚನ್ನಂ ॥೧॥

ಸುಂದರಾಂಗನ ಕಡುಚಲ್ವ ಮುದ್ದುಮೊಗವೆಂಬ ।
ಶಶಿಯು ಜೊನ್ನವುಂ ತೊರೆದಿದಃದೇಕೆ? ॥
ಚಂದವಾದಕ್ಷಿ ಕೈರವಂ ಕೊರಗಿದುದೇಕೆ? ।
ಕರಕಮಲ ಮುಖಶಶಿಯುಪ್ಪಿದ್ದೇಕೆ? ॥೨॥

ಕಳವಳದಿ ಬೆಂದು ಬೆಂಡಾಗಿರ್ದ ಬಸವೇಶ ।
ಹಸ್ತಯುಗಲದೊಳ್ ಮುಸ್ತಕವನಿಟ್ಟು ॥

ಇಳಿವ ಕಣ್ಣೀರೊಡನೆ ಪೇದದಿಂ ಪೇಳಿದನು ।
"ಬಾಲಕುವರನ!" ಎಂದು ನಿದುಸಿರಿಟ್ಟು ॥೩॥

ಎಂತು ಪೇಳಲಿಯಣುಗ ನಮ್ಮೀ ದುರ್ದೆಶೆಯಂ ।
ಏಕೆ ಬಂತೀ ಹೀನ ದೈನ್ಯವಿಂದು ॥
ಸಂತಸದಿಂ ಪೆರೆದಿರ್ಪ ಸಮಾಜ ವೃಕ್ಷದ ।
ಸಿರಿಸೊಗಸುವಿಭವಗಳು ಕಳೆದುವೆಂದು ॥೪॥

ಅಧರಕ್ಕೆ ಕಠಿಣವಾಗಿ ಉದರಕ್ಕೆ ಸಿಹಿಯಾಗಿ ।
ಭುವನದೊಳೆಸೆವ ಪಚ್ಚಪಸುದಾವ ॥
ಸದಮಲ ಜೀವಿನಂತೆ ಆದ್ಯರ ವಚನವಿರಲು ।
ಮಹಾ ಮೌಢ್ಯ ಜೇಡೆಗೆ ಜೆರೆವುದು ॥೫॥

ಸತ್ತವರ ಕಥೆಯಲ್ಲವಿದು ಬತ್ತಿಹೋಸೆಯುತ್ತ ।
ಕೇಳ್ವವರ ಜೊಳ್ಳುಗೋಷ್ಠಿಯಲ್ಲಿದು ॥
ಸಂತಸದಿ ಭವಬಂಧನವುಂ ಸಲೆ ಒದಿಗೊತ್ತಿ ।
ಪರಮ ನಿರ್ವಾಣವುಂ ಕರುಣಿಪುದು ॥೬॥

ಕಾಣಬಹುದೇ ಮೇರುಗಿರಿ ಹುಟ್ಟುಗುರುಡಂಗೆ? ।
ತೋರುವದೆ ಸಿಧಾನ ವರ್ಣಾಂಗೆ? ॥
ಸನಾತನ ವೀರಶೈವರ ವೀರ ವಿಖ್ಯಾತಿ ।
ತೋರಬಲ್ಲುದೆ ಧವಿನಾಸ್ತಿಕರಿಗೆ? ॥೭॥

ರಕ್ಷಕರು ಭಕ್ಷಕರಾಗಿರ್ಪುದಂ ಲಕ್ಷಿಸಿ ।
ಹೃದಯ ತಲ್ಲಣಿಪುದೆಲೆ ತನಯ ॥
ಸಕ್ಕರೆಯ ಕೊಡನಂ ತುಂಬಿ ಜೊರಗೆ ಸವಿದಂತೆ ।
ನಿರರ್ಥಕ ವಿವರ ಬಾಳಿಲೆ ತನಯ ॥೮॥

ಕಾಂಡಸಸಿಂಬ ನಾಯನೆ ಮೆಚ್ಚಿ ಸಂಚರಿಸುವ ।
ಕುಲಕಲಂಕ ಸಮಾಜ ಶತ್ರು ಸಲೆ ॥

ಲಾಂಛನಧಾರಿಗಳಾದ ದುರುಳೋಪದೇಶಕರ್ ।
ಎಂತಕ್ಕೆ ನಶಿಸುವರೋ ಬಿಡದಲೆ ॥೯॥

ಏರಿ ನೀರನುಂಬೊಡೆ ಬೇಲಿ ಕೆಯಿ ಮೇವೊಡೆ ।
ತಾಯಿ ನೊಲೆವಾಲು ವಿಷವಾಗುವೊಡೆ ॥
ವೀರಬಾಲನೆ! ಬಾಳುವದು ಬವಣೆಯಿರ್ಪಂತೆ ।
ಸುಸಮಾಜ ಸಸಿಯು ಕಮರಿಪುದು ಕಡು ॥೧೦॥

ಕೆರೆಹಾಪ ಬತ್ತಿದೊಡೆ ಗೊರಜೆ, ಮಲ: ಅಂಬುಧಿ ।
ಬತ್ತಿದೊಡೆ ಪಡೆವಂತೆ ರತ್ನಗಳಂ ॥
ಉರ್ವಿಗೆ ತಾವ್ ಮರುಳ್ ತಮಗೆ ಭುವನ ಮರುಳಾದ ।
ಮಹಾತ್ಮರ ಮನದೊಳ್ ಲಿಂಗನಿರ್ಪಂ ॥೧೧॥

ಇಂತಪ್ಪ ಮಹಾತ್ಮರಂ ಸೇವಿಸಿ ಲಿಂಗಾಂಗ ।
ಸಾಮರಸ್ಯವನರಿಯದೆ ಜರಿವರು ॥
ಮತ್ತ ಹಾವಿನ ಹೆಡೆಗಳ ಕೊಂಡು ಕೆನ್ನೆಯಂ ।
ತುರುಸಿಕೊಂಬಂತೆ ತಡಪಡಿಸುವರು ॥೧೨॥

ನೇಹವಿಲ್ಲದ ಮಾಟ, ಒಲವಿಲ್ಲದ ಪೂಜೆಯು ।
ಚಿತ್ರದ ರೂಹು ರಚ್ಚಿನಂತೆ ಸಲೆ ॥
ಬಾಹ್ಯಾಡಂಬರಕ್ಕೆ ಬಲಿಯಾಗಿ ಭಜಿಸುವರ್ ।
ಭವಿಗಳಾಗಿ ನಶಿಸುವರ್ ಕೂಡಲೇ ॥೧೩॥

ಪೊಂಪೊಡಿಗೆಯ ಧರಿಸಿ ಅರಿಸಿನವನೆ ಪೂಸಿಯುಂ ।
ಪುರುಷನೊಲವಿಲ್ಲದ ಲಲನೆಯಂತೆ ॥
ಸಾಧ್ಯಮಂ ಸಾಧಿಸದೆ ಛೇದಮಂ ಅರಿಯುದಲೆ ।
ಇರ್ವರ್ ಶ್ವಾನಸೂಕರಗಳಂತೆ ॥೧೪॥

ಮುದ್ದುಗುವರ! ಸಮಾಜಸಾಗರಕೆ ಇಳಿವಣ್ಣ- ।
ನೀವ ಶಿಶಯಾಗಿ ಉದಯಿಸುವೆಯಾ? ॥
ಸದಮಲ ಕಲಿ ಕ್ರಾಂತಿದೀಪನು ಕಾಣದಾದನು ।
ನಿರೂಪಿಸಿ ಮುದದಿಂದಿಂತು ಆರ್ಯಾ ॥೧೫॥

ಸುಡುಗಾಡಸಿದ್ಧರ ವಚನ.

(ಶ್ರೀಯುತ ಉಳವಯ್ಯ ಚನಬಸಯ್ಯ ಹಾಳಕೇರಿ ಇವರು ಕಳಿಸಿದ್ದು.)

ಫಾಳಿಪೂಜಿ ಅತ್ತತ್ತತ್ತತ್ತತ್ತ ಮಹೀಂದ್ರಜಾಲ ಜಜಜಜಜ ಮಲ ನಾಡಚೌಡಿ ಚಿಂ ಕುರುಬರ ಪಿಡ್ಡಿ ಚಿಂ ಹಲ್ಲಗಿಸಗಿ ನಾಗಿ ಗುಲು ಗುಲು ಗುಲು ಗುಲು ಮತ್ತೆ ಬಾ ಮತ್ತೆಬಾ. ಹಾ ಹಾಃ ಉಃಫ್ ಮಂತ್ರ ಫಾಳಿ ಚೀಲದಾಗಿಂದ ಬಾ. ಕಿವಿಯೊಳಗೆ ಹೋಗು. ಬಾಯಾಗಿಂದ ಬಾ ಮೂಗಿನೊಳಗೆ ಹೋಗು. ಕಣ್ಣಾಗಿಂದ ಬಾ. ವೈಯೊಳಗೆ ಹೋಗು ಚೀಲದಾಗಿಂದ ಬಾ. ತಲೆಯೊಳಗೆ ಹೋಗು. ಅಂಗಾಲಾಂದ ಬಾ. ಅಂಗೈಯೊಳಗೆ ಅಡಗು. ಉಃಫ್ ಮಂತ್ರ ಫಾಳಿಗೆ ಫಾಳಿ ಧೂಳಿಗೆ ಧೂಳಿ ಬಯಲಿಗೆ ಬಯಲು ನಿರ್ಬಯಲು. ಫಾಳಿಪೂಜಿ ಸುಡುಗಾಡಿಂದ ಬಂದೆವಯ್ಯಾ ಶಂಕರಪ್ರಿಯ ಚನ್ನಕದಂಬಲಿಂಗವೇ.

ಟೀಕು:— ಬ್ರಹ್ಮ ವಿಷ್ಣು ರುದ್ರ ಈಶ್ವರ ಸದಾಶಿವ ಮಹಾದೇವರು ಸಂದಣಿಯಿಲ್ಲದಂದು ಆ ಪರಶಿವನು ಆದಿ ಉದಯಿಸುವುದಕ್ಕೆ ಜಗತ್ತು ಸೃಷ್ಟಿಸಿದನೆಂಬುದೀಗ ಅತ್ತತ್ತತ್ತತ್ತತ್ತ ಮಹೀಂದ್ರಜಾಲ ಎಂಬುವ ಶಬ್ದ ಕ್ಕರ್ಥ. ಆ ಪರಶಿವನಯ್ಯನು ಮಹಾಮಂತ್ರದಲ್ಲಿ ಚಿತ್ತು ಉದಯಿಸಿ ಆ ಚಿತ್ತದಿಂದ ಚಿನ್ನಾದ ಚಿದ್ಬಿಂದು ಚಿತ್ಕಳೆಯು ಆ ಮೂಲ ಚಿತ್ತವೇ ಗಟ್ಟಿಗೊಂಡು ಮಹಾಲಿಂಗವಾಯಿತ್ತು. ಆ ಮಹಾಲಿಂಗದಿಂದ ಪಂಚ ನಾದಾಖ್ಯಯುಕ್ತವಾಗಿ ಸಚರಾಚರ ಆತ್ಮರು ಉದಯವಾದರು ಎಂಬುದೀಗ ಜಜಜಜಜ ಎಂಬ ಶಬ್ದಕ್ಕರ್ಥ. ಅವರೊಳಗೆ ಶಿವಾಂಶಿಕರಾದವರಿಗೆ ಅಂತರಂಗದಲ್ಲಿ ಅವಿದ್ಯಾಮಾಯೆ ವಸ್ತುಕ್ರಿಯಕ್ಕೆ ಕರ್ತಳಾಗಿದ್ದಳೆಂಬುದೀಗ ಮಲಿನವಾಡ ಚೌಡಿ ಎಂಬ ಶಬ್ದಕ್ಕರ್ಥ. ಆ ಮಾಯೆ ಆತ್ಮಚಿತ್ತಕ್ಕೆ ಕರಣೇಂದ್ರಿಯ ವಿಷಯ ಕುರುಹುಟ್ಟು ಬರಿಸಿದಳೆಂಬುದೀಗ ಚಿಂ ಕುರುಬರ ಪಿಡ್ಡಿ ಎಂಬ ಶಬ್ದಕ್ಕರ್ಥ. ಆ ಮಾಯೆ ಆತ್ಮಚಿತ್ತಕ್ಕೆ ವೇಧಿಸಿ ಪೊಡರ ಪಂತಂಗಳೆಂಬುವ ಅಂತರಂಗದ ಅಷ್ಟಮದ ಬಹಿರಂಗದ ಅಷ್ಟಮದ ಪ್ರಜ್ವಲಿಸಿದಳೆಂಬುದೀಗ ಚಿಂ ಹಲಗಿಸಗಿ ನಾಗಿ ಎಂಬ ಶಬ್ದ ಕ್ಕರ್ಥ. ಆ ಮಾಯೆ ಆತ್ಮವಶಗತವ ಮಾಡಿಕೊಂಡು ಪಂಚೇಂದ್ರಿಯಂಗಳೊಡನಾಡಿದಳೆಂಬುದೀಗ ಗುಲುಗುಲು ಗುಲುಗುಲು ಎಂಬ ಶಬ್ದ

ಕ್ಕರ್ಥ. ಈಂತಪ್ಪ ಮಹಾಮಹಶಬ್ದಲ್ಲಿಯಾದ ಆತ್ಮಲಿಂಗದಲ್ಲಿ ಶಿವಕೃಪೆಯಾಗಲೊಡನೆ ಸಮ್ಯಕ್‌ಜ್ಞಾನ ಉದಯವಾಗಿ ಪೂರ್ವದ ಸೀಗಿ ಗುರುವಿನ ಅರಿ ಆರಿಸಿಕೊಂಡು ಗುರೂಪದೇಶ ಮಾಡಿದನೆಂಬುದೀಗ ವಃತ್ತಿತಾ ಮತ್ತೆ ಬಾ ಎಂಬ ಶಬ್ದಕ್ಕರ್ಥ. ಆವೇಲೆ ಆ ಗುರು ಶಿಷ್ಯನಿತ್ತಿ ನೋಡಿ ಎನ್ನ ಚಿದಂಶಿಕನೆಂದು ತ್ರಿವಿಧ ಅನುಗ್ರಹವನ್ನ ಮಾಡಲೋಸ್ಕರ ನಿರ್ಮಲವ ಮಾಡಿ ಹಸ್ತ ಮಸ್ತಕವ ಮೇಲಿಟ್ಟು ಅಂತರಂಗದ ಅರಿವಿನೊಳಗೆ ಅಡಗಿರ್ದ ಏಕಳೆಯು ಹರಸೆನಿಸಿದಲ್ಲಿ ಘಾಳಿ ಚೀಲದಾಗಿಂದ ಬಾ ಎಂಬ ಶಬ್ದಕ್ಕರ್ಥ. ಏಕಳೆಯು ಕರ್ಣದ್ವಾರದೊಳಗೆ ಪ್ರಣವ ಸ್ವರೂಪವಾಗಿ ಹೊಳಿಸಿದಲ್ಲಿ ಕಿವಿಯೊಳಗೆ ಹೋಗು ಎಂಬ ಶಬ್ದಕ್ಕರ್ಥ. ಆ ಪ್ರಣಮಕ್ಕೆ ವೇಧಿಸಿದಲ್ಲಿ ಮುಖದಲ್ಲಿ ಉಚ್ಚರಿಸಲೆಂದು ಹೇಳದಲ್ಲಿ ಬಾಯಾಗಿಂದ ಬಾ ಎಂಬ ಶಬ್ದಕ್ಕರ್ಥ. ಆ ಪ್ರಣವು ಬೀಜಕದಲ್ಲಿ ತುಂಬಿ ಪೂರಕದಲ್ಲಿ ಬಿಡುವ ಸಮಯದಲ್ಲಿ ಲೋಮ ವಿಲೋಮ ಮಾಡಿದಲ್ಲಿ ಮೂಗಿನೊಳಗೆ ಹೋಗು ಎಂಬ ಶಬ್ದಕ್ಕರ್ಥ. ಈಂತಪ್ಪ ಪ್ರಣಮರೂಪವಾದ ಇಷ್ಟಲಿಂಗದಲ್ಲಿ ದೃಷ್ಟಿ ನಟ್ಟಿದ್ದೇ ಕಣ್ಣಾಗಿಂದ ಬಾ ಎಂಬ ಶಬ್ದಕ್ಕರ್ಥ. ಹೋಮ ವಿಲೋಮ ಜರಿಸುತ್ತ ವಾಯುಪ್ರಾಣಕ್ಕೆ ವೇಧಿಸಿದಲ್ಲಿ ಪೈಯೊಳಗೆ ಹೋಗು ಎಂಬ ಶಬ್ದಕ್ಕರ್ಥ. ಆ ಪ್ರಾಣ ವಾಯು ಕಟ್ಟಿಮ ಮುಖದಿಂದ ಒಂದಲ್ಲಿ ಚೀಲದಾಗಿಂದ ಬಾ ಎಂಬ ಶಬ್ದಕ್ಕರ್ಥ. ಈಂತಪ್ಪ ಪ್ರಣವು ಮಹಾಜ್ಞಾನದಿಂದ ಅತ್ತ ವೇಧಿಸಿದಲ್ಲಿ ತಲೆಯೊಳಗೆ ಹೋಗು ಎಂಬ ಶಬ್ದಕ್ಕರ್ಥ. ಈಂತಪ್ಪ ಮಹಾಜ್ಞಾನ ಒಹಿಸ್ಕರಿಸಿದ ಪದಾರ್ಥವಾಗಿ ನೆಲೆಗೊಂಡಲ್ಲಿ ಅಂಗಾಲಾಗಿಂದ ಬಾ ಎಂಬ ಶಬ್ದಕ್ಕರ್ಥ. ಈಂತಪ್ಪ ಸಕ್ರಿಯವಾದ ಇಷ್ಟಲಿಂಗವು ಪದ್ಮಪವೆಂಬ ಹಸ್ತದಲ್ಲಿ ಲಯವಾದಲ್ಲಿ ಅಂಗಜ್ಯೋತಿಗೆ ಅಡಗು ಎಂಬ ಶಬ್ದಕ್ಕರ್ಥ. ಪ್ರಾಣಕ್ಕೆ ಪ್ರಣವು ಮನಕ್ಕೆ ಭಾವ ಅರುವಿಗೆ ಮಹಾಜ್ಞಾನ ಈಂತಪ್ಪ ಪರವಸ್ತುವಿನಲ್ಲಿ ಲಯವಾದ ಕಾರಣ ಊಃ ಮಂತ್ರ ಘಾಳಿಗೆ ಘಾಳಿ ಧೂಳಿಗೆ ಧೂಳಿ ಬಯಲಿಗೆ ಬಯಲು ನಿರ್ಣಯಲು ಎಂಬ ಶಬ್ದಕ್ಕರ್ಥ. ಶಿವನಿಂದ ಬಂದು ಶಿವನಲ್ಲಿ ಲಯವಾದ ಕುರುಹು ಅವುದು ಎಂದರೆ ಸುನಾದವಯ ಸೂತ್ರ ಬ್ರಹ್ಮರಂಧ್ರವೆಂಬ ಚಿದ್ಭಸಿತ ಸ್ಥಾನವುದಲಿದಿಂದ ಬಂದೆವೆಂಬುದಿಗ ಘಾಳಿಪೂಜಿ ಸುಡುಗಾಡಿಂದ ಬಂದೆವಯ್ಯಾ ಎಂಬ ಶಬ್ದಕ್ಕರ್ಥ.

ಸ್ವಾನುಭವದಲೆ.

(ಶ್ರೀ ಸದಾಶಿವಾಚಾರ್ಯ ಸ್ವಾಮಿಗಳು ಗಿರಿಯಡಪುರದ ಸಭಾರಾಯಪಟ್ಟಣ.)

ನಾ ಕಂಡೆ ನಾ ಕಂಡೆ ಬೆಳಗಿನೊಬ್ಬಳಿಯ ।
ಕೈಕೊಂಡ ಕರದಿಷ್ಟಲಿಂಗದಚ್ಚರಿಯ ॥ಪ॥

ಅದು ಮೂಗ ಸವಿವ ಸಕ್ಕರೆಯ ರುಚಿಯಂತೆ ।
ಅದು ಸತಿಪತಿಯ ರತಿ ಸುಖದ ಸವಿಯಂತೆ ॥೧॥

ಹೇಳಬಾರದು ಕೇಳಬಾರದತಿಗೂಢ ।
ಕೇಳಿ ಶ್ರುತಿ ಗುರುಸಖಿಯಂವ ನಾ ನೋಡಿ ॥೨॥

ಹಾಳುಮಠದ ವ್ಯಾಸದಿಂದ ನಾ ಕೆಟ್ಟಿ ।
ಹಾಳಾಯ್ತು ತಿಳಿವಿನ ಬಾಳೆನ್ನ ಗುರುವೇ ॥೩॥

ಮರೆದರಿದಾದರೂ ಹೀನರೊಡನಾಟ ।
ಸರಿಯಾದುದಲ್ಲದು ಹಾನಿಗೆ ಮೂಲ ॥೪॥

ಭಾಳಲೋಚನನೊಲುಮೆ ಹಗಲಿರುಳು ಬಯಸುವೆನು ।
ಕಾಳು ಸಂಸಾರವ ತೊಲಗಿ ಸುಖಿಸುವೆನು ॥೫॥

ಗುರುವೆ ಸಚ್ಚಿದ್ಗುರುವೆ ಬೇಡುವೆ ಬೇಗ ।
ಪರಿಹರಿಸೀ ಶೃಂಖಲೆಯ ಪೊರೆ ಪೊರ್ದಿದವನ ॥೬॥

ದು ಡಿ ತ.

—*—

ಮನುಷ್ಯನಿಗೆ ಜ್ಞಾನವು ಬೇಕಾದರೆ, ಅವನು ಅದರ ಸಲುವಾಗಿ ದುಡಿಯಬೇಕು. ಆಹಾರ ಬೇಕಾದರೆ, ಅದರ ಸಲುವಾಗಿಯೂ ಅವನು ದುಡಿಯಬೇಕು. ಸೌಖ್ಯಬೇಕಾದರೆ, ಅದಕ್ಕೂ ದುಡಿಯಬೇಕು. ದುಡಿತವು ಜಗತ್ತಿನ ನಿಯಮವಾಗಿದೆ.

ಯಾವದು ಉತ್ತಮವೋ ಅದನ್ನು ದುಡಿತದಿಂದಲೇ ಸಂಪಾದಿಸಬೇಕು. ಯಾವನಾದರೊಬ್ಬನು 'ನಾನು ಹುಟ್ಟಾ ಪ್ರತಿಭಾ ಶಾಲಿಯು, ಕರ್ತೃತ್ವ ಶಕ್ತಿಯುಳ್ಳವನು, ನಾನು ಬಯಸಿದ ಕೂಡಲೇ ಬಯಸಿದ್ದೆಲ್ಲ ತಾನಾಗಿಯೇ ನನ್ನ ಕಡೆಗೆ ಬರುತ್ತದೆ' ಎಂದು ತಿಳಿದಿದ್ದರೆ ಅವನು ದುರ್ದೈವಿಯು. ಇದು ಅವನ ತಪ್ಪುಗ್ರಹಿಕೆಯು. ಯಾಕಂದರೆ ಸೌಖ್ಯವು ದುಡಿತದ ಹೊರತು ಬರಲಾರದು. ಜಗತ್ತಿನಲ್ಲಿ ಆದ ಮಹಾಪುರುಷರೆಲ್ಲ ದುಡಿದು ತಮ್ಮ ಕೀರ್ತಿಯನ್ನು ಸಂಪಾದಿಸಿರುವರು. ಇದಕ್ಕೆ ಅನೇಕ ಉದಾಹರಣೆಗಳಿವೆ.

ರಶಿಯದಲ್ಲಿ ಅತ್ಯಂತ ಘನತೆಯನ್ನು ಹೊಂದಿದ ಪೀಟರ ಬಾದಶಹನು ರಶಿಯದ ಉನ್ನತಿಗೆ ಮೊದಲು ಕಾರಣನಾದವನು. ಅವನು ರಾಜನಾದ ಬಳಿಕ ಒಬ್ಬ ಸಾಮಾನ್ಯ ಕೂಲಿಕಾರನಂತೆ ದುಡಿದನು. ಕಲಾಕೌಶಲ್ಯಗಳಿಲ್ಲದೆ ತನ್ನ ದೇಶವು ಮುಂದೆ ಬರಲಾರದೆಂದು ಅವನಿಗೆ ತೋರಿತು. ಆಗ ಅವನು ತನ್ನ ರಾಜವೈಭವವನ್ನು ಬಿಟ್ಟುಕೊಟ್ಟನು. ಅವನು ಒಬ್ಬ ಸಾಮಾನ್ಯ ಕೂಲಿಕಾರನಾದನು. ಅವನು ಉದ್ಯೋಗವರ್ಗವನ್ನು ಕಲಿಯಬೇಕೆಂದು ಹಾಲಂಡಕ್ಕೆ ಹೊರಟನು. ಆಗ ಅವನಿಗೆ ೨೬ ವರ್ಷ ವಯಸ್ಸು ಮಾತ್ರ. ಅಂದರೆ ರಾಜರಾದವರು ಸುಖಾನುಭವದಲ್ಲಿ ಲೋಲಾಡುವ ವಯಸ್ಸು ಇದು. ಆದರೆ ಅವನು ಹಾಲಂಡದಲ್ಲಿ ಹಡಗಕಟ್ಟುವದು ನಡೆದಿದ್ದ ಒಂದು ಕಾರಖಾನೆಯಲ್ಲಿ ಉಮೇದುವಾರನಾಗಿ ನಿಂತನು! ಆಮೇಲೆ ಅವನು ಇಂಗ್ಲಂಡಕ್ಕೆ ಹೋಗಿ ಕಾಗದ ಮಾಡುವ ಕಾರಖಾನೆಯಲ್ಲಿ, ಆಮೇಲೆ ಕಟ್ಟಿಗೆ ಕೊರೆಯುವಲ್ಲಿ, ಹಗ್ಗಗಳನ್ನು ಮಾಡುವಲ್ಲಿ, ಗಡಿಯಾರ ಮಾಡುವಲ್ಲಿ, ಕೂಲಿಕಾರನಾಗಿ ನಿಂತನು. ಅಲ್ಲಿ ನಡೆಯು

ತ್ತಿದ್ದ ಕೆಲಸಗಳನ್ನು ಸೂಕ್ಷ್ಮವಾಗಿ ನಿರೀಕ್ಷಿಸುತ್ತಲೂ ಅವುಗಳನ್ನು ತಾನು ಪ್ರತಿ ಮಾಡುತ್ತಲೂ ವೇಳೆಗಳೆಯುತ್ತಿದ್ದನು. ಅವನು ಅಲ್ಲಿಯ ಕೂಲಿ ಕಾರರಂತೆಯೇ ಉಡುಪನ್ನು ಧರಿಸಿಕೊಂಡು ಕೂಲಿಯನ್ನು ದೊರಕಿಸಿದನು. ಹೀಗೆ ಅವನು ಈ ದೇಶಗಳಲ್ಲಿ ಅನೇಕ ಕಲೆಗಳನ್ನು ಕಲಿತನು. ಆಮೇಲೆ ಅವನು ತನ್ನ ರಾಜಧಾನಿಗೆ ಬಂದು ತಾನು ಕಲಿತ ಉದ್ಯೋಗಗಳನ್ನು ರಾಜ್ಯದಲ್ಲಿ ಪ್ರಾರಂಭಿಸತೊಡಗಿದನು. ಅಂದಿನಿಂದಲೇ ರಶಿಯದ ಅಭ್ಯುದಯವು ಪ್ರಾರಂಭವಾಯಿತು. ನಮ್ಮಲ್ಲಿಯ ಸಿರಿವಂತರು ಪೀಟರನಿಂದ ಅವಶ್ಯವಾಗಿ ಕಲಿಯತಕ್ಕ ಪಾಠವು ಇದಾಗಿದೆ.

ಮಾರ್ಟಿನ ಲೂಥರನು ಯುರೋಪಖಂಡದಲ್ಲಿ ಧಾರ್ಮಿಕ ಕ್ರಾಂತಿಯನ್ನು ಮಾಡಿದವನಿದ್ದಾನೆ. ಅವನು ಹಿಬ್ರೂ ಭಾಷೆಯಲ್ಲಿದ್ದ ಬಾಯಿಬಲವನ್ನು ಮೊದಲು ಜರ್ಮನ ಭಾಷೆಯಲ್ಲಿ ಭಾಷಾಂತರಿಸಿದನು. ಇದರಲ್ಲಿ ಅವನು ಬಹಳ ದುಡಿದನು. ಬಾಯಿಬಲು ಜನಸಾಮಾನ್ಯರ ತಿಳಿವಳಿಕೆಗೆ ಬರಬೇಕೆಂದು ಅತ್ಯಂತ ಶ್ರಮಬಟ್ಟನು. ಇದರಲ್ಲಿ ಅವನಿಗೆ ಧರ್ಮ ಗುರುಗಳು ಬಹಳ ಹಿಂಸಿಸಿದರು. ಆದರೆ ಕೈಕೊಂಡ ಕಾರ್ಯವನ್ನು ಪೂರ್ಣ ಸೈಯ್ಯದ ಹೊರ್ತು ದಿನಗಳೆಯಲಾರೆನೆಂಬ ಪಂಥವು ಅವನದಾಗಿತ್ತು. ಆದ್ದರಿಂದ ಜನರ ನಿಂದೆಯನ್ನೂ, ಬಲುಮೆಯನ್ನೂ, ಸಹಿಸುತ್ತ ಅತ್ಯಂತ ಶ್ರಮವಹಿಸಿದ್ದರಿಂದ ಅವನಿಂದ ಕ್ರೈಸ್ತೀ ಸಮಾಜದಲ್ಲಿ ಒಂದು ಮಹತ್ವದ ಕ್ರಾಂತಿಯುಂಟಾಯಿತು.

ಕೆಲವೊಂದು ಕಾರ್ಯದಲ್ಲಿ ಉತ್ಕೃಷ್ಟತೆಯು ಉಂಟಾಗಬೇಕೆಂದು ಬಯಸುವವರು ಅದಕ್ಕೋಸ್ಕರ ಯಾವಾಗಲೂ ದುಡಿಯುತ್ತಿರಬೇಕು. ತಮ್ಮಲ್ಲಿ ಆಗ ಮನಸ್ಸಿರಲಿ ಇಲ್ಲವೇ ಮನಸ್ಸಿಲ್ಲದಿರಲಿ, ದಿನಾಲು ಬೆಳಗು ಮಧ್ಯಾನ್ಹ ಸಂಧ್ಯಾಕಾಲಗಳಲ್ಲಿ ಯಾವಾಗಲೂ ದುಡಿಯುತ್ತಿರಬೇಕು ಕೆಲಸ ಮಾಡುವದು ವಿನೋದಕ್ಕಲ್ಲ. ಕೆಲವೊಂದು ಕಾರ್ಯವನ್ನು ಪೂರ್ಣಮಾಡಬೇಕಾದರೆ ಅದಕ್ಕೆ ಕಠಿಣವಾದ ದುಡಿತವು ಬೇಕು. ಕಾರ್ಯ ಮಾಡುವವರಲ್ಲಿ ಉಚ್ಚ ಭಾವನೆಯು ಇದ್ದದ್ದಾದರೆ ಆ ದುಡಿತವು ಅವರಿಗೆ ಶ್ರಮವೆನಿಸುವದಿಲ್ಲ. ಅದು ಅವರಿಗೆ ಆನಂದದಾಯಕವಾಗುತ್ತದೆ. ಹೀಗೆ ಮಾಡಿದ ಶ್ರಮದ ಪರಿಣಾಮವು ಉಚ್ಚತರದ್ದಾಗುತ್ತದೆ. ಇಂಥವರೇ ಮಹಾಪುರುಷರು. ಅವರಿಂದಲೇ ಸಮಾಜವು ಉದ್ಧಾರವಾಗುವದು.

ಗೋಲ್ಡ್‌ಸ್ಮಿಥನು ಇಂಗ್ಲಂಡದಲ್ಲಿ ಆಗಿಹೋದ ಪ್ರಖ್ಯಾತ ಕವಿಯು. ಅವನು ದಿನಾಲು ನಾಲ್ಕು ಓಳಿಗಳನ್ನು ಮಾತ್ರ ಬರೆಯುವನು. ಅಷ್ಟು ಬರೆದರೆ ಅದು ತನ್ನ ದಿನದ ಕೆಲಸವಾಯಿತೆಂದು ತಿಳಿಯುತ್ತಿದ್ದನು. ಇಷ್ಟೇ ಓಳಿಗಳನ್ನು ಬರೆಯಲು ಅವನು ಬಹಳ ಶ್ರಮಪಡುತ್ತಿದ್ದನು. ಅವನ ಪ್ರಸಿದ್ಧ ಕಾವ್ಯವಾದ 'ಡೆಜರ್ಟೆಡ್ ವಿಲೇಜ' ಎಂಬುದನ್ನು ರಚಿಸಲಿಕ್ಕೆ ಅವನಿಗೆ ಏಳು ವರ್ಷಗಳು ಹಿಡಿದವು. ಇಂಥ ದುಡಿತದಿಂದಲೇ ಅವನು ಅತ್ಯುತ್ತಮ ಕವಿಯಾದನು.

ದಿನಾಲು ಬರಹದ ರೂಢಿಯನ್ನು ಇಟ್ಟುಕೊಳ್ಳಬೇಕು. ಇದರಿಂದ ವಿಚಾರ ಶಕ್ತಿಯು ಬೆಳೆಯುತ್ತಿದೆ. ಭಾಷಾ ಶೈಲಿಯಲ್ಲಿ ಪ್ರತಿಭೆಯು ಉಂಟಾಗುತ್ತದೆ. ಲೇಖಕರು ಸ್ವಾಭಾವಿಕವಾಗಿ ಕುಶಾಗ್ರ ಬುದ್ಧಿಯುಳ್ಳವರಿರಬಹುದು. ಆದರೆ ಅವರು ದುಡಿಯದೆ ಹೋದರೆ ಅವರು ಯೋಗ್ಯತೆಯನ್ನು ಎಂದೂ ಸಂಪಾದಿಸಲಾರರು.

ಇಂಗ್ಲಂಡದ ಮುಖ್ಯ ಪ್ರಧಾನಿಯಾದ ಗ್ಲಾಡಸ್ಟನನು ೯೦ ವರ್ಷದವನಾದಾಗ್ಗೆ ಒಂದು ಸಮಯದಲ್ಲಿ ಅವನು ಹೇಳಿದ್ದೇನೆಂದರೆ— "ಸುಖವೆಂದರೆ ದುಡಿಕೆಯು. ದುಡಿಕೆಯಲ್ಲಿಯೇ ಸುಖವು. ನನ್ನ ಚಿಕ್ಕಂದಿನಲ್ಲಿಯೇ ನನಗೆ ಈ ರೂಢಿಯು ಬಿದ್ದಿತು. "ಇದರಲ್ಲಿ ಅಪೇಕ್ಷಿಸಿದ ಫಲವು ಈ ದುಡಿಕೆಯೇ ಇರಬೇಕು. ಅದನ್ನು ಬಿಟ್ಟಲ್ಲದೆ ಬೇರೆ ಫಲವನ್ನೇನೂ ಯಾರೂ ಆಶೆ ಮಾಡಬಾರದು. ಕೆಲಸವಿಲ್ಲದಿರುವದೇ ವಿಶ್ರಾಂತಿ ಎಂದು ಅನೇಕರು ಭಾವಿಸಿರುತ್ತಾರೆ. ಆದರೆ ನನಗೆ ಕೆಲಸದ ಬದಲಾವಣೆಯು ವಿಶ್ರಾಂತಿಯು. ಒಂದುವೇಳೆ ಕೆಲಸ ಮಾಡಿ ಮಾಡಿ ಮಿದುಳು ದಣಿದರೆ ಹೊರಗೆ ಹೋಗಿ ಶುದ್ಧ ಹವೆಯಲ್ಲಿ ತಿರುಗಾಡಿ ಬರುತ್ತೇನೆ. ಇಲ್ಲವೆ ಸೂರ್ಯ ಪ್ರಕಾಶದಲ್ಲಿ ವ್ಯಾಯಾಮ ಮಾಡುತ್ತೇನೆ. ಅಂದರೆ ಮಿದುಳಿಗೆ ವಿಶ್ರಾಂತಿ ದೊರಕುತ್ತದೆ. ಆಗ ಅದು ಶಾಂತವಾಗುತ್ತದೆ. ವಿಶ್ವದಲ್ಲಿ ಎತ್ತ ನೋಡಿದರೂ ಚಲನೆಗಳು ಕಂಡುಬರುತ್ತವೆ. ಸ್ತಬ್ಧತೆಯು ಅದರಲ್ಲಿ ಎಲ್ಲಿಯೂ ಇರುವದಿಲ್ಲ. ಹೃದಯದ ಸ್ಫುರಣವು ಯಾವಾಗಲೂ ನಡಿದಿರುತ್ತದೆ. ನಿಸರ್ಗದಲ್ಲಿ ಮಹಾಶಕ್ತಿಗಳು ಹುದುಗಿರುತ್ತವೆ. ಈ ಶಕ್ತಿಯು ನಮ್ಮ ಕಣ್ಣಿಗೆ ಬೀಳದಂತೆ ಯಾವಾಗಲೂ ಚಲಿಸುತ್ತಿರುತ್ತದೆ. ಅದರ ಚಲನೆಯಿಂದಲೇ ವಿಶ್ವವು ನಡಿದದೆ. ಈ ಚಲನೆಯು ನಿಂತಕೊಂಡ ಕೂಡಲೆ ವಿಶ್ವವು

ಲಯಹೊಂದುವದು. ನಾನು ಈ ತತ್ವಕ್ಕನುಸರಿಸಿ ಕಾರ್ಯ ಮಾಡುತ್ತಿದ್ದೇನೆ. ದುಡಿತದಿಂದ ನನಗೆ ನಿದ್ರೆಯು ಚನ್ನಾಗಿ ಬರುತ್ತದೆ. ಚನ್ನಾಗಿ ಕೊಟ್ಟಿ ಹಸಿವೆಯಾಗುತ್ತದೆ. ಮತ್ತು ನಾನು ಇಷ್ಟು ಮುದುಕನಾದರೂ ನನ್ನ ಶಕ್ತಿಯು ಈಗಲೂ ಜಾಗ್ರತವಾಗಿರುತ್ತದೆ. ಇದು ನನ್ನ ನಿತ್ಯ ದುಡಿಕೆಯ ಪರಿಣಾಮವು." ಎಂದು ಹೇಳಿದನು.

ಎಡಿಸನ್ನನು ಪೃಥ್ವಿಯಲ್ಲಿ ಈ ವರೆಗೆ ಆಗಿಹೋದ ಸಂಶೋಧಕರಲ್ಲಿ ವಿಖ್ಯಾತನು. ಅವನ ಒಬ್ಬ ಮಿತ್ರನು ಹೇಳಿರುವದೇನಂದರೆ— ಎಡಿಸನ್ನನು ೧೪ ವರ್ಷದವನಿರುವಾಗಲೇ ಅವನಲ್ಲಿ ದುಡಿತದ ಪ್ರಭಾವವು ಉಂಟಾಯಿತು. ಅವನು ತನ್ನ ಜೀವಿತದಲ್ಲಿ ಒಂದು ದಿನವನ್ನಾದರೂ ಸೋಮಾರಿಯಾಗಿ ಕಳೆಯಲಿಲ್ಲ. ಸಾಮಾನ್ಯವಾಗಿ ರಾತ್ರಿ ಎಂದರೆ ಗಾಢನಿದ್ರೆಯಲ್ಲಿರತಕ್ಕ ಸಮಯವು. ಆದರೆ ಅವನು ಅರ್ಧ ರಾತ್ರಿಯ ವರೆಗೆ ಓದುತ್ತ ಕುಳಿರುವನು. ಇದನ್ನು ನಾನು ಯಾವಾಗಲೂ ನೋಡಿದ್ದೇನೆ. ಎಡಿಸನ್ನನು ಕೇವಲ ಕಟ್ಟು ಕಥೆಗಳನ್ನೂ ಅಥವಾ ಕಾಲ್ಪನಿಕ ಸಾಹಸದ ವಿಧವಿಧ ಕಥೆಗಳನ್ನೂ ಎಂದೂ ಓದುತ್ತಿರಲಿಲ್ಲ. ಅವುಗಳನ್ನು ಅವನು ಎಂದೂ ಪ್ರೀತಿಸುತ್ತಿರಲಿಲ್ಲ. ಆದರೆ ಅವನು ಯಂತ್ರರಚನಾಶಾಸ್ತ್ರ, ರಸಾಯನಶಾಸ್ತ್ರ, ವಿದ್ಯುಚ್ಛಾಸ್ತ್ರ ಇಂಥ ವಿಷಯಗಳನ್ನೇ ಯಾವಾಗಲೂ ಓದುವನು. ಅವನು ಅವುಗಳಲ್ಲಿಯ ಪುಟಗಳನ್ನು ತಿರುವಿಹಾಕುತ್ತ ಕುಳ್ಳಿರದೆ ಅವನು ಮನಮುಟ್ಟಿ ಅವುಗಳನ್ನು ಅಭ್ಯಾಸ ಮಾಡುವನು. ಅವನಿಗೆ ವಿಶ್ರಾಂತಿಯ ವೇಳೆಯು ದೊರತಾಗ ಅವನು ತನ್ನ ನಿರೀಕ್ಷಣಾ ಶಕ್ತಿಯನ್ನು ಹೆಚ್ಚಿಸುವಲ್ಲಿ ಅದನ್ನು ಕಳೆಯುವನು. ಇದರಿಂದ ಅವನ ಸಂಶೋಧಕ ಬುದ್ಧಿಯು ಅಪಾರವಾಗಿ ಬೆಳೆಯಿತು. ಅವನು ನಿದ್ರೆ ಮಾಡುವ ಕಾಲವನ್ನು ಬಿಟ್ಟು, ಉಳಿದ ವೇಳೆಯನ್ನೆಲ್ಲ ಅವನು ಕಲಿಯುವದರಲ್ಲಿಯೇ ಕಳೆಯುತ್ತಿದ್ದನೆಂದು ಹೇಳಬಹುದು.

ಎಡಿಸನ್ನನು ತನ್ನ ಒಂದು ಲೇಖದಲ್ಲಿ ಹೇಳಿರುವದೇನೆಂದರೆ— ನಾನು ಒಂದು ಸಂಶೋಧನವನ್ನು ಮುಗಿಸಿದ ಬಳಿಕ ಅದು ನನ್ನ ಲಕ್ಷದಲ್ಲಿ ಉಳಿಯುವದಿಲ್ಲ. ನಾನು ಹೊಸದೊಂದಕ್ಕೆ ತೊಡಗುವೆನು. ಇದರಲ್ಲಿಯೇ ನನಗೆ ಆನಂದವು. ಸಂಶೋಧನೆಯಿಂದ ದ್ರವ್ಯ ಲಾಭ ಮಾಡಿಕೊಳ್ಳಬೇಕೆಂದು ಅನೇಕರ ಅಭಿಪ್ರಾಯವಿರಬಹುದು. ಆದರೆ

ಈ ಉದ್ವೇಶವು ಮಾತ್ರ ನನ್ನದು ಯಾವಾಗಲೂ ಇರಲಿಲ್ಲ. ನಾನು ಚಿಕ್ಕಂದಿನಲ್ಲಿ ಬಹಳ ಬಡವನು. ಆಗ ನಾನು ತಾರಾಯಂತ್ರದಲ್ಲಿ ಸುಧಾರಣೆ ಮಾಡಬೇಕೆಂದು ಅಪೇಕ್ಷಿಸಿದೆನು. ಆಗ ನನ್ನ ಹತ್ತಿರ ಉತ್ತಮತರದ ಉಪಕರಣಗಳಿರಲಿಲ್ಲ. ಆದರೆ ನನಗೆ ದೊರೆತ ಸಾಧನಗಳಿಂದಲೇ ನಾನು ಅನೇಕ ಸುಧಾರಣೆಗಳನ್ನು ಮಾಡಿದೆನು. ಆಗ ನನಗೆ ಆಗುತ್ತಿದ್ದ ಆನಂದಕ್ಕೆ ಸರಿ ಯಾವುದೂ ಇಲ್ಲ. ಈಗಿನ ಸ್ಥಿತಿಯಲ್ಲಿ ನನಗೆ ಬೇಕಾಗುವ ಸಾಧನಗಳನ್ನು ದೊರಕಿಸಲು ನನಗೆ ಅನುಕೂಲತೆಗಳಿವೆ. ಪರಾವಲಂಬಿಯೂ ನಾನಿಲ್ಲ. ಆದರೆ ಸಂಶೋಧನ ಮಾಡುವಲ್ಲಿ ಅದಕ್ಕೆ ಮೊದಲು ಅತ್ಯಂತ ಶ್ರಮ ವಹಿಸಬೇಕಾಗುತ್ತದೆ. ಈ ಶ್ರಮ ಪಡುವಾಗ್ಗೆ ನನಗೆ ಉಂಟಾಗುವಷ್ಟು ಆನಂದವು ಬೇರೆ ಯಾತರಿಂದಲೂ ಆಗುವದಿಲ್ಲ ಎಂದು ಬರೆದಿದ್ದಾನೆ.

ಒಬ್ಬ ಶ್ರೀಮಂತನು ಚಿಕ್ಕಂದಿನಲ್ಲಿ ತನ್ನ ಶಿಕ್ಷಣವನ್ನು ಮತ್ತು ಸಂಸ್ಕೃತಿಯನ್ನು ಬಿಟ್ಟುಕೊಟ್ಟು ಕೇವಲ ವ್ಯವಹಾರದಲ್ಲಿ ತೊಡಗಿದವನಾಗಿದ್ದನು. ಅದರಲ್ಲಿ ಅವನು ನಿಷ್ಣಾತನಾಗಿ ಬಹಳ ಹಣಗಳಿಸಿದನು. ಹಣಗಳಿಸುವಲ್ಲಿ ತನ್ನ ಸ್ವಂತದ ಜೀವನದ ಸೌಕರ್ಯಗಳನ್ನೂ ಸುಖ ಸಾಧನೆಗಳನ್ನೂ ಉಪಯೋಗಿಸುವದನ್ನು ಸಹ ನಿರಾಕರಿಸಿದ್ದನು. ಹೀಗೆ ದುಡಿಯುವಲ್ಲಿ ಅವನ ಧ್ಯೇಯವು ತನ್ನ ಮಕ್ಕಳು ಸುಖವಾಗಿ ಬಾಳಲೆಂಬುದೇ ಆಗಿತ್ತು. ಆದರೆ ಮುಂದೆ ಅವನಿಗೆ ಕೆಳಗೆ ಹೇಳುವಂಥ ಸ್ಥಿತಿಯು ಉಂಟಾಯಿತು. ಅದು ಏನೆಂದರೆ— "ನಾನು ನನ್ನ ಮಕ್ಕಳ ಶಿಕ್ಷಣದ ಸಲುವಾಗಿ ಬಹಳ ಹಣ ವೆಚ್ಚ ಮಾಡಿದೆನು. ಅವರಿಗೆ ಹಣದ ಕೊರತೆ ಎಂಬುದೇನೂ ಇರಲಿಲ್ಲ. ಆದರೆ ಅವರು ಈಗ ಬಯಸಿದ್ದರಿ ಘನತೆಗೇರಿ ಎಲ್ಲರಿಂದಲೂ ಸನ್ಮಾನವನ್ನು ಹೊಂದಬಹುದಾಗಿತ್ತು. ಆದರೆ ಅವರಿಗೇನಾಯಿತೆಂಬುದನ್ನು ಕೇಳಿರಿ. ಅವರಲ್ಲೊಬ್ಬನು ಈಗ ಡಾಕ್ಟರನಾಗಿದ್ದಾನೆ. ಆದರೆ ಅವನ ಕಡೆಗೆ ಯಾವ ರೋಗಿಗಳೂ ಬರುವದಿಲ್ಲ. ಇನ್ನೊಬ್ಬನು ವ್ಯಾಪಾರಸ್ತನಾಗಿದ್ದಾನೆ. ಆದರೆ ತನ್ನ ಅಂಗಡಿಗೆ ಹೋಗಲು ಅವನಿಗೆ ಮಾನಸಾಲುವದಿಲ್ಲ. ನಾನು ಅವರಿಗೆ ನೀವು ಶ್ರಮಪಡಬೇಕೆಂದು ಆಗಿಂದಾಗ್ಗೆ ಹೇಳುತ್ತೇನೆ. ಆದರೆ ಸ್ವಲ್ಪವಾದರೂ ಶ್ರಮವಹಿಸುವದು ಅವರಿಗೆ ಬೇಡಾಗಿದೆ. ನೀವು ಮಿತವ್ಯಯಿಗಳೂ ಚಟುವಟಿಕೆಯುಳ್ಳವರೂ ಆಗಬೇಕೆಂದು ಅವರಿಗೆ ಹೇಳುತ್ತೇನೆ. ಆದರೆ ಅವರು ನನಗೆ— ತಂದೆಯೇ ನಮಗೇನು ಕಡಿಮೆಯಾಗಿದೆ? ನಮ್ಮೆಲ್ಲರಿಗೆ ಸಾಲುವಷ್ಟು ನೀನು ಗಳಿಸಿಟ್ಟಿದ್ದೀ, ಎಂದು ಉತ್ತರ ಕೊಡುತ್ತಾರೆ." ಎಂದು ನುಡಿದನು. ಶಿಕ್ಷಣದಿಂದ ಶ್ರಮಪಡುವ ಮನಸ್ಸಾಗದಿದ್ದರೆ ಅಂಥದನ್ನು ಪಡೆದು ಪ್ರಯೋಜನವೇನು?

ದುಡಿಕೆಯು ಅಗೌರವವಾದುದೆಂದು ಯಾವನು ಭಾವಿಸುತ್ತಾನೋ ಅವನಷ್ಟು ಅಲ್ಪನು ಜಗತ್ತಿನಲ್ಲಿ ಯಾರೂ ಇರಲಿಕ್ಕಿಲ್ಲ. ಒಯ್ಯಾರದ ಉಡುಪನ್ನು ತೊಟ್ಟುಕೊಂಡು ಸಭ್ಯಗೃಹಸ್ಥರಂತೆ ನಟಿಸುವವರು ಈ ಕಾಲದಲ್ಲಿ ಬಹು ಜನರು ಇದ್ದಾರೆ. ಅಂಥವರು ತಮ್ಮ ಗಂಟನ್ನು ತಮ್ಮ ಕೆಯ್ಯಲ್ಲಿ ಹಿಡಿದುಕೊಂಡು ದಾರಿಯಿಂದ ಹೋಗಲು ನಾಚಿಕೆ ಪಡುತ್ತಾರೆ. ಇಂಥವರ ವಿಷಯವಾಗಿ ಎಲ್ಲರೂ ತಿರಸ್ಕಾರ ಭಾವವನ್ನು ತಾಳಬೇಕು. ಇವರು ದುಡಿಕೆಗೆ ಎಷ್ಟು ಗೌರವವಿದೆಂಬದನ್ನು ತಿಳಿಯರು. ಇವರು ನಪೋಲಿಯನ್ನನ ಚರಿತ್ರೆಯನ್ನು ಲಕ್ಷಿಸಬೇಕು. ವಾಟರ್ಲೂ ಯುದ್ಧವು ಪ್ರಾರಂಭವಾಗುವ ಪೂರ್ವದಲ್ಲಿ ಅವನು ೧೮ ತಾಸುಗಳ ವರೆಗೆ ಎಷ್ಟು ಮಾತ್ರವೂ ಆಹಾರವನ್ನು ತೆಗೆದುಕೊಂಡಿರಲಿಲ್ಲ ಅಥವಾ ನಿದ್ರೆ ಮಾಡಿದ್ದಿಲ್ಲ. ಆಗ ಅವನ ಉಡುಪು ಕೆಸರಿನಿಂದ ತೊಡೆದುಹೋಗಿತ್ತು. ಅವನ ಅರಿವೆಗಳು ಹುಯ್ಯುವ ಮಳೆಯಿಂದ ಒದ್ದೆಯಾಗಿ ಹೋಗಿದ್ದವು. ಆದರೂ ತನಗಾದ ಶ್ರಮವನ್ನು ಅಥವಾ ಶೀತಬಾಧೆಯನ್ನು ಅವನು ಎಷ್ಟುಮಾತ್ರವೂ ಲಕ್ಷಿಸಲಿಲ್ಲ. ಅಥವಾ ಅವನು ಬೆಂಕಿಯ ಬಡಿಯಲ್ಲಿ ಕುಳಿತು ಕಾಸಿಕೊಳ್ಳಬೇಕೆಂದು ಬಯಸಲಿಲ್ಲ. ಅವನ ಇದಿರಾಳಿಯಾದ ಡ್ಯೂಕ ಆಫ ವೆಲಿಂಗ್ಟನ್ನನಾದರೂ ಕೂಡ ಹೀಗೆಯೇ ಯಾವಾಗಲೂ ದುಡಿಯುವ ಸ್ವಭಾವವುಳ್ಳವನಾಗಿದ್ದನು. ನಿತ್ಯ ಕೆಲಸದಲ್ಲಿರುವದೇ ಈ ಉಭಯತರ ಸ್ವಭಾವವಾಗಿತ್ತು. ಅವರು ಎಂದೂ ವ್ಯರ್ಥವಾಗಿ ಕಾಲಹರಣ ಮಾಡುತ್ತಿದ್ದಿಲ್ಲ. ಅವರು ತಾವು ಮಾಡತಕ್ಕ ಕಾರ್ಯಗಳನ್ನು ತತ್‌ಕ್ಷಣವೇ ಮಾಡಿಬಿಡುವರು. ಪೃಥ್ವಿಯಲ್ಲಿ ಆಗಿಹೋದ ಮಹಾಪುರುಷರು ಹೀಗೆಯೇ ಯಾವಾಗಲೂ ಆಚರಿಸುತ್ತಾರೆ.

ಪ್ರೆಸಿಡೆಂಟ ಟಾಯಲರನು ಅಮೇರಿಕದ ಪ್ರೆಸಿಡೆಂಟನು. ಅವನ ಆಡಳಿತೆಯು ಮುಗಿದ ಬಳಿಕ ಅವನ ವಿರೋಧಿಗಳು ಅವನು ವಾಸ ಮಾಡಿಕೊಂಡಿದ್ದ ವರ್ಜೀನಿಯಾ ಪ್ರಾಂತದಲ್ಲಿಯ ಒಂದು ಸಣ್ಣ ಹಳ್ಳಿ

ಯಲ್ಲಿ ಮಾರ್ಗಗಳ ಮೇಲ್ವಿಚಾರಣೆಯ ಕಾರ್ಯಕ್ಕೆ ಅವನನ್ನು ನೇಮಿಸಿದರು. ಅವನು ಜನರಲ್ಲಿ ಅಪಹಾಸ್ಯಕ್ಕೆ ಗುರಿಯಾಗಬೇಕೆಂದು ಬುದ್ಧಿಪೂರ್ವಕವಾಗಿ ಅವರು ಅವನಿಗೆ ಈ ಸ್ಥಳವನ್ನು ಕೊಟ್ಟರು. ಆದರೆ ಪಾಯಲರನು ಆಸ್ಥಾನವು ತನಗೆ ಬೇಡೆಂದು ಹೇಳಲಿಲ್ಲ. ಅವನು ಅದನ್ನು ಸ್ವೀಕರಿಸಿ ತಾನು ಮಾಡತಕ್ಕ ಕಾರ್ಯವನ್ನು ಅತ್ಯಂತ ಶ್ರದ್ಧೆಯಿಂದಲೂ ಚಟುವಟಿಕೆಯಿಂದಲೂ ಮಾಡಹತ್ತಿದನು. ಅವನ ವಿರೋಧಿಗಳು ಅವನ ಈ ವರ್ತನೆಯನ್ನು ನೋಡಿ ಅವರಿಗೆಯೇ ನಾಚಿಕೆ ಬಂದಿತು. ದುಡಿಕೆ ಎಂದರೆ ಅವರು ತಿರಸ್ಕರಿಸುವವರಾಗಿದ್ದರು. ಆದ್ದರಿಂದ ಅವರಿಗೆ ಹೀಗೆನಿಸಿತು. ಅವರು ಟಾಯಲರನಿಗೆ— ನಿನ್ನ ಸ್ಥಾನವನ್ನು ಬಿಟ್ಟುಕೊಡಬೇಕು ಮತ್ತು ಇಂಥ ಕಾರ್ಯ ಕೊಟ್ಟದ್ದಕ್ಕೆ ನಮ್ಮನ್ನು ಪ್ರಸನ್ನಗೊಳಿಸಬೇಕೆಂದು ಹೇಳಿಕಳಿಸಿದರು. ಆದರೆ ಟಾಯಲರನು ಅವರಿಗೆ— ಸಭ್ಯಗೃಹಸ್ಥರೇ, ಶ್ರಮವಾಡುವದು ಕಡಿಮೆಯುದಲ್ಲ. ನಾನು ಒಮ್ಮೆ ಸ್ಥಾನವನ್ನು ಸ್ವೀಕರಿಸಿದ ಬಳಿಕ ಅದನ್ನು ಮಧ್ಯದಲ್ಲಿ ಬಿಟ್ಟು ಕೊಡುವವನಲ್ಲ ಎಂದು ತಿರುಗಿ ತಿಳಿಸಿದನು.

ಶಿವಶರಣರು ದುಡಿಕೆಗೆ ಮಹತ್ವ ಕೊಟ್ಟಿದ್ದಾರೆ. ಅವರು ಅದಕ್ಕೆ ಕಡಿಮೆ ಸ್ಥಾನವನ್ನು ಕೊಟ್ಟಿಲ್ಲ. ಅವರೆಲ್ಲರೂ ಕೆಲವೊಂದು ದುಡಿಕೆಯ ಕೆಲಸವನ್ನು ಕೈಕೊಳ್ಳಲೇ ಬೇಕೆಂದು ಹೇಳಿದ್ದಾರೆ. 'ಕಾಯಕವಾವ ದೆಂದು ದೆಸಗೊಂಡರೆ ತಲೆದಂಡ ತಲೆದಂಡ' ಎಂದು ಬಸವೇಶ್ವರನು ತನ್ನ ಒಂದು ವಚನದಲ್ಲಿ ನುಡಿದಿದ್ದಾನೆ. ಅಂದರೆ ಅದರಲ್ಲಿ ಉಚ್ಚ ನೀಚ ಭಾವವೆಂಬುದಿಲ್ಲ. ಕಾಯಕಗಳೆಲ್ಲವೂ ಶ್ರೇಷ್ಠತರದವು ಎಂಬುದು ಅವನ ಅಭಿಪ್ರಾಯವು. ಕಾಯಕವನ್ನು ಅಥವಾ ದುಡಿಕೆಯನ್ನು ಉಚ್ಚ ಭಾವದಿಂದ ದೃಢನಿಶ್ಚಯದಿಂದ ಉದಾತ್ತ ಧ್ಯೇಯದಿಂದ ಮಾಡಿದಲ್ಲಿ ಪರಮಾತ್ಮನೊಡನೆ ಸಮರಸ ಸ್ಥಿತಿಯು ಪ್ರಾಪ್ತವಾಗುತ್ತದೆಂದು ಅವರ ಹೇಳಿಕೆ ಇರುತ್ತದೆ.

ಬಸವನಾಮದ ಹೆಚ್ಚಳ.

(ಶ್ರೀ ಸದಾಶಿವಾಚಾರ್ಯ ಸ್ವಾಮಿಗಳು ಗಿರಿಯಾಪುರ ಸಬುರಾಯಪಟ್ಟಣ.)

ಸಾಕ್ಷಾತ್ ವೀರಶೈವ ಮತಸ್ಥಾಪನಾ ಕರ್ತೃಗಳಾದ ಶ್ರೀರೇಣುಕಾದಿ ಮೂಲಾಚಾರ್ಯರ ಹಾಗೂ ಶ್ರೀಪ್ರಭುಜಂಗವಾದಿಗಳ ಹೆಸರು ಕೂತರೂ ನಿಂತರೂ ಎದ್ದರೂ ಬಿದ್ದರೂ ಯಾರೊಬ್ಬ ಪಂಡಿತ ಪಾಮರರ ಬಾಯಲ್ಲಿ ಬಾರದೆ "ಬಸವ ಬಸವ" ಎಂಬುದು ಮಾತ್ರ ಸುಖ ಮುಖಗಳಿಡೆಯಲ್ಲಿಯೂ ಕೂಡ ಯಾರೊಬ್ಬ ಪಂಡಿತ ಪಾಮರರು ಮೊದಲಾಗಿ ಸಾಮಾನ್ಯ ಎಲ್ಲಾ ಸ್ತ್ರೀಪುರುಷರ ಬಾಯಲ್ಲಿ ಒಡನೆ ಬರುವ ರೂಢಿಯನ್ನು ವಿಚಾರಕ್ಕೆ ತಂದುಕೊಂಡರೆ "ಶಿವನೇ ಬಸವ– ಬಸವನೇ ಶಿವ"ನೆಂಬ ಅಭೇದ ಭಾವದಿಂದ ಶಾಸ್ತ್ರಾಧಾರ ಸಮ್ಮತವಾಗಿ 'ಬಸವ' ನಾಮವು ಪ್ರಚಾರದಲ್ಲಿ ಬಂದಿರಬಹುದೆಂದೂ, ಚಿನ್ಮಾದ– ಬ್ದಿಂದು-ಚಿಕ್ಕಲಾ ಪೆಸರಿನಿಂದ ಮಂತ್ರದಲ್ಲಿ ಮಹಾಬೀಜಾಕ್ಷರಗಳಾಗಿ ಸಂಗಣಿಸಿ ಷಟ್‌ಸ್ಥಲ ಬ್ರಹ್ಮಿಗಳಾದ ಮಹಾಮಹಾ ಶ್ರೀಗುರು ಜಂಗಮರು ಮೊದಲ್ಗೊಂಡು ಭಕ್ತಮಾಹೇಶ್ವರರೆಲ್ಲರೂ, ದಿನದಿನದುಚಿತ ಕಾಲದಲ್ಲಿ ಬಸವಾಕ್ಷರತ್ರಯವನ್ನು ಜಪಿಸುವ ಸಾಂಪ್ರದಾಯವು ಇರುವುದೆಂದೂ, ಅದು ಶಾಸ್ತ್ರ ಶಿಷ್ಟಾಚಾರಾನುಭವಕ್ಕೆ ವಿರೋಧವಾದುದಲ್ಲೆಂದೂ ತೋರುಬರುವುದು.

ಶ್ರೀಮರಿ ತೋಂಟದಾರ್ಯರು ಮನೋವಿಜಯ ಗ್ರಂಥದ ವ್ಯಾಖ್ಯಾನದಲ್ಲಿ ಬಸವಲಿಂಗ ಪದಕ್ಕೆ "ಎಲೈ ಪಶವ" ಎಂದು ಸಂಬೋಧಿಸಿ ಬಸವ ಶಬ್ದಂ ಪಶುಪ ಶಬ್ದಕ್ಕೆ ತದ್ಭವವಾಗಿ ಬ್ರಹ್ಮಾದಿ ಸ್ಥಾವರಾಂತವಾದ ಸಕಲ ಪಶುಗಳ್ಗೀಶ್ವರತ್ವವಂ ಸೂಚಿಸಲ್ಪಡುವುದು ಎಂದು ಮೊದಲಾಗಿ ಅನೇಕ ವ್ಯಾಕರಣ ಸೂತ್ರಗಳಿಂದ ಮಂಡಿಸಿ ಬಸವ ಶಬ್ದ ವಾಚ್ಯನು ಪರಮಾತ್ಮನೆಂದು ಸ್ಪಷ್ಟವಾಗಿ ಹೇಳಿದ್ದಾರೆ. (ಮನೋವಿಜಯ ಪ್ರ. ಪು. ೧.) "ಬ"ಕಾರೋ ಗುರುರೂಪಂ ಚ "ಸ"ಕಾರೋ ಲಿಂಗಮೇವ ಚ— "ವ"ಕಾರಶ್ಚರ ರೂಪಂಚ ತ್ರಿವಿಧಂ ಬಸವಾಹ್ವಯಂ ತಂ ಒಂದೇ ಬಸವೇಶ್ವರಂ ಪರಶಿವಾಕಾರಂ ಪರಂ ದೈವತಂ. "ಬ"ಕಾರೋ ನಾದ

ರೂಪಂಚ "ಸ"ಕಾರೊ ಬಿಂದು ರೂಪಕಃ-ಕಲಾರೂಪಂ ವಕಾರಃ ಸ್ಯಾತ್ ತ್ರಿವರ್ಣಂ ಬಸವಾಕ್ಷರಂ ॥ (ಅನಾದಿ ವೀರಶೈವಸಾರ ಸಂಗ್ರಹ).

"ಅವತೀರ್ಯ ದಯಾವರ್ಯೋ ಭಗವಾನ್ ಬಸವೇಶ್ವರಃ । ವೀರಶೈವ ಮತಂ ಸ್ಥಾಪ್ಯ ಪ್ರಕಾಶನಮಕಾರಯತ್ ॥" (ಶಿವತತ್ವ ರತ್ನಾಕರ.)

"ಬಕಾರಾಯ ಬಕಾರಾಖ್ಯ ಮಹಾಬೀಜೈಕ ಜಾಪಿನಾಂ । ಬಂಧ ನಾಗಾರನಾಶೈಕ ಹೇತವೆ ವೇಧಸೇ ನಮಃ ॥ ಸಕಾರಾಯ ಸ ಶಬ್ದಾರ್ಥ ಸ್ವರೂಪಾಯ ಸದಾತ್ಮನೇ । ಸಾಕ್ಷಿಣೇಽಸಾಕ್ಷಿರೂಪಾಣಾಂ ನಮಃ ಸಾಧೂಪ ಕಾರಿಣೇ ॥ ವಕಾರಾಯ ವರಿಷ್ಠಾಯ ವಾಸುದೇವಾದಿ ಹೇತವೆ । ಪಾಂಥಾ ವಾ ಗುರ ವಿಚ್ಛಿತ್ತಿ ಹೇತು ಭೂತಾಯ ವೈ ನಮಃ ॥" (ಸೂತಸಂಹಿತೆ.)

"ಬಕಾರಸ್ತು ತ್ರಿಮೂರ್ತಿಃ ಸ್ಯಾತ್ಪ್ರೀತಂ ಸರ್ವಾರ್ಥ ಸಿದ್ಧಿದಂ । ಸಕಾರಂ ಶಕ್ತಿರೂಪಂ ಸ್ಯಾದ್ರಕ್ತಂ ಸ್ಥಿತಿ ಕರಂ ಭವೇತ್ । ವಾರುಣ್ಯಂ ಸ್ಯಾದ್ವಕಾರಾಂತು ಶುಕ್ಲಾಭಂ ರೋಗ ನಾಶನಂ ॥" (ವಾತುಲಾಗಮ)

"ಶಿವೋ ಬಸವೋ ಬಸವಃ ಶಿವಸ್ತಯೋರ್ಭೇದೋ ನ ವಿದ್ಯತೆ । ಅತ ಸ್ತಜ್ಞಾ ಜಪರತಿಸ್ಮ ಬಸವೇತ್ಯಕ್ಷರತ್ರಯಂ ॥" (ಸ್ಫೋಕ್ತಿ.)

ಗುರು-ಲಿಂಗ-ಜಂಗಮ, ಚಿನ್ನಾದ-ಚಿದ್ಬಿಂದು-ಚಿತ್ಕಲಾದಿ ಸ್ವರೂಪವೂ ಜಪಾರ್ಹವೂ ಆದ "ಬಸವಾಕ್ಷರ"ತ್ರಯವು ಬಸವ ನಾಮದಿಂದ ವತರಿಸಿ ವೀರಶೈವ ಮತೋದ್ಧಾರಂ ಗೈದ ಬಸವೇಶ್ವರನ ಪೆಸರೆಂದು ಗ್ರಹಿಸದೆ ಬ್ರಹ್ಮಾದಿ ಸ್ತಂಭಪರ್ಯಂತವಾದ ಜಗನ್ನಿಯಂತಾ ಪಶುಪತಿ ಪರಶಿವನಾಮವೆಂದು ಗ್ರಹಿಸುವುದೇ ಯುಕ್ತಿ ಯುಕ್ತ ಉಕ್ತಿಗಳ ಅನುಭವಾರ್ಥವೆಂದು ಸ್ವಾಭಿಮತವು.

ಆದರೆ ಇತ್ತೀಚೆಗೆ ಕೆಲ ಪಂಡಿತ ವರ್ಗ, ಗುರುವರ್ಗದವರು ಬಸವನಾಮದ ವಿಷಯದಲ್ಲಿ ಇಲ್ಲದ ಸಲ್ಲದ ಕುಹಕ ಪ್ರಲಾಪಗಳನ್ನು ಮಾಡ ತಿಳಿಸುವದಲ್ಲದೆ ಅದನ್ನು ಮಂತ್ರಾಂತರ್ಭೂತವನ್ನಾಗಿ ಮಾಡಿ ಜಪಿಸಕೂಡದೆಂದು ಹೇಳುತ್ತಾರೆ. ಅವರು ಈ ರೀತಿ ಹೇಳುವುದು ಉಚಿತವಾಗಲಾರದು.

ಆಮೇಲೆ ಸುಜ್ಞಾನಿದೇವನು ಪ್ರಪಂಚದಲ್ಲಿ ಸುಖದುಃಖಗಳು ಬೇಗಾಗುತ್ತವೆಂಬುದನ್ನು ಬೇಡನ ತಾಯಿ ತಂದೆಗಳು ಹೇಗೆ ಮರಣ ಹೊಂದಿದರೆಂಬುದರ ಮೇಲಿಂದ ತಿಳಿಸಿ ಹೇಳುತ್ತ, ಪುಣ್ಯಕಾರ್ಯಗಳನ್ನು ಮಾಡಿದರೆ ಮನುಷ್ಯನಿಗೆ ಸುಖವಾಗುತ್ತದೆ, ಪಾಪಕಾರ್ಯಗಳನ್ನು ಮಾಡಿದರೆ ಅವನಿಗೆ ದುಃಖವಾಗುತ್ತದೆ, ಸತ್ಕರ್ಮದ ಫಲವು ಮಾತ್ರ ತನ್ನೊಡನೆ ಯಾವಾಗಲೂ ಇರುತ್ತದೆ, ಯಾರಿಗೆ ಯಾರೂ ಸಹಾಯಕರಿಲ್ಲ, ಎಂಬ ಮಹತ್ವದ ತತ್ವಗಳನ್ನು ಬಹು ಸುಲಭರೀತಿಯಿಂದ ತಿಳಿಸಿಹೇಳಿದನು. ಆಮೇಲೆ ಆ ಬೇಡನು ಪುಣ್ಯಕರ್ಮಗಳಾವವು ಪಾಪಕರ್ಮಗಳಾವವು ಎಂಬುದನ್ನು ಕೇಳಲಾಗಿ, ಸುಜ್ಞಾನಿದೇವನಿಗೆ ಬೇಡನ ಹಿಂಸಾಚರಣೆಯನ್ನು ನಿಲ್ಲಿಸಬೇಕಾಗಿದ್ದರಿಂದ ಹಿಂಸೆಯನ್ನು ಮಾಡುವದೇ ಪಾಪವು, ದಯೆಯಿಂದಿರುವದೇ ಪುಣ್ಯವು, ಎಂಬ ತತ್ವವನ್ನು ಶಿವಶರಣರ ಅನೇಕ ಕಥೆಗಳನ್ನು ಹೇಳಿ ತಿಳಿಯಪಡಿಸಿದನು. ಮಾತಂಗ ತಮ್ಮನಂಥ ಅಪಕ್ವ ಮತ್ತು ಅಜ್ಞಾನಿ ಜನರ ಮೇಲೆ ಇಂಥ ಮನೋವೇಧಕ ಕಥೆಗಳು ಬಹಳ ಪರಿಣಾಮ ಮಾಡುತ್ತವೆ. ಕೇವಲ ತಾತ್ವಿಕ ವಿಚಾರಗಳು ಅವರ ತಿಳಿವಳಿಕೆಗೆ ಬರುವದಿಲ್ಲ. ಆದ್ದರಿಂದ ಮಾತಂಗ ತಮ್ಮನಿಗೆ ಉಪದೇಶ ಮಾಡುವಲ್ಲಿ, ಸುಜ್ಞಾನಿತಂದೆಯು ಇದೇ ರೀತಿಯನ್ನು ಅನುಸರಿಸಿದ್ದಾನೆ. ಅವನು ಹೀಗೆ ಅನೇಕ ಕಥೆಗಳನ್ನು ಹೇಳುತ್ತ ಹಿಂಸೆಯನ್ನು ಬಿಟ್ಟುಕೊಟ್ಟು ದಯಾಬುದ್ಧಿಯುಳ್ಳವನಾಗಿರು, ದಾನ ಧರ್ಮ ಮಾಡು ಎಂದು ಬೋಧಿಸಿದನು.

ಈ ಮೇರೆಗೆ ಸುಜ್ಞಾನಿದೇವನು ಪುಣ್ಯಪಾಪಗಳಿಂದರೇನು, ಸದಾಚಾರ ಅನಾಚಾರಗಳಾವವು, ಸತ್ಕರ್ಮ ದುಷ್ಕರ್ಮಗಳಾವವು, ಇವೇ ಮೊದಲಾದ ವಿಷಯಗಳನ್ನು ಬೋಧೆ ಮಾಡಿದಬಳಿಕ ಮಾತಂಗ ತಮ್ಮನ ಮನಸ್ಸಿನ ಮೇಲೆ ಇವು ಬಹಳ ಪರಿಣಾಮ ಮಾಡಿದ್ದನ್ನು ಕಂಡು ಆಮೇಲೆ ಅವನು ಅವನಿಗೆ ವೀರಶೈವ ಧರ್ಮದ ತತ್ವಗಳನ್ನು ತಿಳಿಸಿ ಹೇಳತೊಡಗಿದನು. ಅವನಿಗೆ ಅಷ್ಟಾವರಣಗಳಾದ ಗುರುಲಿಂಗ ಜಂಗಮಾದಿಗಳ ವಿಚಾರಗಳನ್ನು ಅನೇಕ ಕಥೆಗಳ ಮೂಲಕ ತಿಳಿಸಿ ಹೇಳಿದನು. ಶಿವಶರಣರ ಚರಿತ್ರೆಗಳಲ್ಲಿ ಇಂಥ ಕಥೆಗಳು ಅನೇಕವಿರುತ್ತವೆ. ಹೀಗೆ ಬೋಧಿಸಿದಬಳಿಕ ಮಾತಂಗತಮ್ಮನಲ್ಲಿ ತಾನು ಲಿಂಗಧಾರಣೆ ಹೊಂದಬೇಕೆಂಬ ಅಪೇಕ್ಷೆಯು ಉಂಟಾಗಲು, ಅವನು ಸುಜ್ಞಾನಿತಂದೆಗೆ ಸಾಷ್ಟಾಂಗವೆರಗಿ ತನಗೆ ಉಪದೇಶಮಾಡಬೇಕೆಂದು ಕೇಳಿ

ಕೊಂಡನು. ಆದರೆ ಲಿಂಗಧಾರಣೆ ಎಂದರೆ ಬರೀ ತಾಯಿತವನ್ನು ಕಟ್ಟಿಕೊಂಡಂತಲ್ಲ, ಅದು ಮನುಷ್ಯನು ಸರಿಯಾಗಿ ಆಚರಿಸುತ್ತಾನೆಂಬು ದಕ್ಕೆ ಕುರುಹು ಎಂಬ ತಿಳಿವಳಿಕೆಯು ಬೇಡನಲ್ಲಿ ಆದದ್ದನ್ನು ಕಂಡು ಅವನಿಗೆ ಸುಜ್ಞಾನಿದೇವನು ಸರಿಯಾದ ರೀತಿಯಿಂದ ಲಿಂಗಧಾರಣೆಯನ್ನು ಮಾಡಿ ಅವನನ್ನು ಪ್ರೀತಿಯಿಂದ 'ನನ್ನಯ್ಯ, ನನ್ನಯ್ಯ' ಎಂಬ ಹೆಸರಿನಿಂದ ಕರೆಯಹತ್ತಿದನು. ಈ ಪ್ರಕಾರ ಲಿಂಗಧಾರಣೆಯ ಮರ್ಮಗಳು ಈ ಕಥೆಯಲ್ಲಿ ಬಹು ವಿಶದವಾಗಿ ಹೇಳಲ್ಪಟ್ಟಿರುತ್ತವೆ. ಲಿಂಗಧಾರಣವಾದ ಬಳಿಕ ಮನುಷ್ಯನ ಮುಂಚಿನ ದೋಷಗಳು ಹೊರಟು ಹೋಗಿ ಅವನು ಲಿಂಗ ಶರೀರಿಯಾಗುತ್ತಾನೆ, ಅದರ ಪರಿಣಾಮವಾಗಿ ಲಿಂಗಧಾರಿಯು ಪ್ರತಿಕ್ಷಣ ಪುಣ್ಯಕಾರ್ಯಗಳನ್ನು ಮಾಡಹತ್ತುತ್ತಾನೆ, ಮನುಷ್ಯನಲ್ಲಿ ಈ ಸ್ಥಿತಿಯನ್ನು ಉಂಟುಮಾಡುವದೇ ಗುರುವಿನ ನಿಜವಾದ ಕಾರ್ಯವಾಗಿರಬೇಕು. ಈ ಮೊದಲಾದ ತತ್ವಗಳು ನನ್ನಯ್ಯನ ಚರಿತ್ರೆಯಲ್ಲಿ ಬಹು ಸರಸಾಗಿ ವ್ಯಕ್ತವಾಗುತ್ತವೆ. ಒಬ್ಬ ದುಷ್ಟ ಮನುಷ್ಯನನ್ನು ಹೇಗೆ ಸುಧಾರಿಸಬೇಕೆಂಬುದನ್ನು ತಿಳಿಸಿಹೇಳಿದ ಸುಜ್ಞಾನಿದೇವನು ಆದರ್ಶ ಗುರುವಾಗಿದ್ದಾನೆ. ಈ ಕಾರ್ಯದಲ್ಲಿ ಅವನು ಆ ದುಷ್ಟನ ಕಯ್ಯಿಂದ ಕೊಲೆಹೊಂದುವ ಪ್ರಸಂಗಗಳೂ ಉಂಟಾಗಿದ್ದವು. ಆದರೆ ಅವನು ಅದಕ್ಕೆ ಅಂಜಲಿಲ್ಲ. ಗುರುವಿನ ಕರ್ತವ್ಯವನ್ನು ಅವನು ಅತ್ಯಂತ ದೃಢಮನಸ್ಸಿನಿಂದ ಧೀರತನದಿಂದ ಮಾಡಿದ್ದಾನೆ. ಸಮಾಜ ಸುಧಾರಕರು ಹೀಗೆಯೇ ಆಚರಿಸಿ ಜನಸುಧಾರಣೆಯನ್ನುಮಾಡುತ್ತ ಬಂದಿದ್ದಾರೆ.

ಆಮೇಲೆ ಸುಜ್ಞಾನಿತಂದೆಯು ಕಲ್ಯಾಣಕ್ಕೆ ಹೊರಡಲು ಮಾತಂಗ ತಮ್ಮನೂ ಅವನೊಡನೆ ಹೊರಟನು. ಅವನು ಅವನೊಡನೆ ಗುರು ಭಕ್ತಿಯಿಂದ ಆಚರಿಸಹತ್ತಿದನು. ಇದರಿಂದ ಅವನಲ್ಲಿ ಒಂದು ಅಗಾಧವಾದ ಶಕ್ತಿಯು ಉಂಟಾಯಿತು. ಭಕ್ತಿಯುಳ್ಳವನಾದ ಶಿಷ್ಯನ ಯೋಗ್ಯತೆಯು ವಿಗಿಲಾದದ್ದೆಂಬುದು ಅದರಲ್ಲಿ ವಿಶದವಾಗಿರುತ್ತದೆ. ಹೀಗೆ ಉಭಯತರು ಅನೇಕ ಪವಾಡಗಳನ್ನು ಮಾಡುತ್ತ ಕಲ್ಯಾಣಕ್ಕೆ ಬಂದು ಬಸವೇಶ್ವರನನ್ನು ಕಂಡರು. ಅಲ್ಲಿ ಇದ್ದಂಥ ಶಿವಶರಣರು ಅವರನ್ನು ಅತ್ಯಂತ ಆದರಿಸುವವರಾದರು. ಸುಜ್ಞಾನಿದೇವ ನನ್ನಯ್ಯ ಉಭಯತರು ಕಲ್ಯಾಣದಲ್ಲಿ ಇದ್ದು ಅಲ್ಲಿಯೇ ಲಿಂಗೈಕ್ಯರಾದರು.

ಕಲಕೇತಬೊಮ್ಮಯ್ಯ.

ಬಸವೇಶ್ವರನ ಕಾಲದಲ್ಲಿ ಶಿವಾನುಭವದ ತತ್ವಗಳು ಎಲ್ಲ ಸಮಾಜಗಳಲ್ಲಿ ಉಚ್ಚ ಧಾರ್ಮಿಕ ಕ್ರಾಂತಿಯನ್ನುಂಟು ಮಾಡಿದ್ದು ಕಂಡುಬರುತ್ತದೆ. ಈ ತತ್ವಗಳಲ್ಲಿ ಅವರ ಕಾಯಕದ ವಿಚಾರಗಳು ಎಲ್ಲ ತರಗತಿಯ ಉದ್ಯೋಗಸ್ತರನ್ನು ಶಿವಾನುಭವಕ್ಕೆಳೆದವು. ಶಿವಾನುಭವವು ಉದ್ಯೋಗಗಳಲ್ಲಿ ಉಚ್ಚನೀಚ ಭಾವವನ್ನು ಎಣಿಸುವದಿಲ್ಲ. ದಾಸೋಹ ಭಾವದಿಂದ ಮಾಡಿದ ಎಲ್ಲ ಕಾಯಕಗಳೂ ಉಚ್ಚತರವಾದವುಗಳು. ವಾಡಿಕೆಯಾಗಿ ಕಿಳ್ಳಿಕೆತ್ತರೂ, ಬಹು ರೂಪಿಗಳೂ, ಸುಡುಗಾಡಸಿದ್ಧರೂ ಸಮಾಜದಲ್ಲಿ ಕೆಳಗಿನ ವರ್ಗದವರೆಂದು ಜನರು ತಿಳಿದುಕೊಳ್ಳುತ್ತಾರೆ. ಆದರೆ ಅವರಲ್ಲಿಯೂ ಕೂಡ ಬಸವೇಶ್ವರನ ಕಾಲದಲ್ಲಿ ಅನೇಕ ಶಿವಶರಣರಾಗಿದ್ದಾರೆ. ಕಲಕೇತಬೊಮ್ಮಯ್ಯನು ಇಂಥ ಸಮಾಜಗಳಲ್ಲಿ ಒಂದಕ್ಕೆ ಹೊಂದಿದವನಾಗಿದ್ದು ಅವನ ಕಾಯಕವು ಅನೇಕತರದ ಬಣ್ಣಗಳುಳ್ಳ ಉಡುಪುಗಳನ್ನು ಧರಿಸಿಕೊಂಡು ಭೃಂಗಿಯಾಟವನಾಡುತ್ತ ಜನರ ಮುಂದೆ ಹಾಸ್ಯವಾಡುವದು ಇರುತ್ತದೆ. ಅವನು ಬಸವೇಶ್ವರನ ಸಮಕಾಲೀನನಾಗಿ ಶಿವಾನುಭವ ಮಂಟಪದಲ್ಲಿದ್ದುಕೊಂಡು ವಚನಕಾರನಾಗಿದ್ದಾನೆ. ಅವನ ವಚನಗಳಲ್ಲಿ ನಮಗೆ ೧೧ ಮಾತ್ರ ಉಪಲಬ್ಧವಿದ್ದು ಅವುಗಳಲ್ಲಿ ಅವನು ತನ್ನ ಕಾಯಕದ ವಿವರಣೆಯನ್ನು ಮಾಡಿದ್ದಾನೆ. ಈ ವಿವರಣೆಯಲ್ಲಿ ಅವನು ಷಟ್‌ಸ್ಥಲದ ಸೂಕ್ಷ್ಮ ವಿಚಾರಗಳನ್ನು ಹೊರಗೆಡವಿದ್ದಾನೆ.

ಕಲಕೇತನ ಉಡುಪಿನ ವರ್ಣನೆಯು ಅವನ ವಚನಗಳಲ್ಲಿ ಬಹುಕಡೆಗೆ ಬಂದಿದೆ. ಅವುಗಳಿಂದ ಕಂಡುಬರುವದೇನೆಂದರೆ— ಅವನ ಮುಂಡರಿಯಲ್ಲಿ ಕೂದಲಿನ ಮುಡಿಯು ಇದ್ದು ಅದು ಯಾವಾಗಲೂ ಅಲುಗಾಡುತ್ತಲೇ ಇರುವಂತಹದು, ನೊಸಲಲ್ಲಿ ವಿಭೂತಿಯು, ಕಿವಿಯಲ್ಲಿ ಕೆಂದಳಿರು, ದೇಹದ ಮೇಲೆ ಕಾವಿಯ ಬಟ್ಟೆ, ಎಡದ ಪಾದದಲ್ಲಿ ಅಂದುಗೆಯು, ಬಲಪಾದದಲ್ಲಿ ಗೆಜ್ಜೆ, ಅವನ ಎಡದ ಕಯ್ಯಲ್ಲಿ ಬಗರಿನ ದೊಡ್ಡ ಕೊಂಬು ಬಲದ ಕಯ್ಯಲ್ಲಿ ಬೆತ್ತ ಹೀಗೆ ವೇಷವನ್ನು ಧಾರಣಮಾಡಿಕೊಂಡು ಕುಣಿಯುತ್ತ ನಡೆಯುವನು. ಆಗ ಘುಲ್ಲು ಘುಲು ಗೆಜ್ಜೆಯು ಸಪ್ಪಳವಾಗುವದು. ಕಯ್ಯಲ್ಲಿಯ ಬೆತ್ತವನ್ನು ತಿರು

ಹುತ್ತ ಮೋರೆಯನ್ನು ಮುರುಕಿಸುತ್ತ ನಡೆಯುವನು. ನಡೆಯುವಾಗ ಶಿವಭಕ್ತರ ಮಹತ್ವವನ್ನು ಹೊಗಳುತ್ತ, ಪರವಾದಿಗಳ ತತ್ವಗಳನ್ನು ಖಂಡಿಸುತ್ತ ಕೋಡಗದಾಟವನಾಡುತ್ತ ಭೃಂಗಿಯ ನಾಂಟ್ಯದಂತೆ ಕುಣಿದಾಡುತ್ತ ಮುಂದು ಸಾಗುವನು. ಹೀಗೆ ಶರಣರ ಕೀರ್ತಿಯನ್ನು ಉಳ್ಳಡಿಸುವದೇ ಅವನ ಕಾಯಕವಾಗಿತ್ತು. ಅದನ್ನು ಕೇಳಿದ ಭಕ್ತರು ಅವನಿಗೆ ಹಣವನ್ನು ಕೊಡಲಾಗಿ ಅವನು ಅದನ್ನು ತೆಗೆದುಕೊಂಡರೂ, ಅವನು ಅದನ್ನು ಇಟ್ಟುಕೊಳ್ಳದೆ ಕಂಡ ಬಡಭಕ್ತರಿಗೆ ಕೊಟ್ಟು ಬಿಡುವನು. ಈ ರೀತಿ ಅವನು ಕಲ್ಯಾಣದಲ್ಲಿ ತನ್ನ ಕಾಯಕವನ್ನು ನಡಿಸುತ್ತಾ ಇದ್ದನು.

ಹೀಗಿರಲು ಒಂದುದಿನ ಒಬ್ಬ ಬಡಭಕ್ತನು ದಾರಿದ್ರ್ಯದಿಂದ ಬಳಲಿ ಕಿನ್ನರೀಬ್ರಹ್ಮಯ್ಯನೆಂಬ ಶಿವಶರಣನು ಪಡಿಯನ್ನು ಕೊಡುತ್ತಾನೆಂದು ಜನರಿಂದ ಕೇಳಿ ಅವನನ್ನು ಕಾಣಲು ಬಯಸಿ ಅವನ ಮನೆಯನ್ನು ಹುಡುಕುತ್ತ ಹೋಗುತ್ತಿರುವಾಗ ಅವನನ್ನು ದಾರಿಯಲ್ಲಿ ಕಲಕೇತಯ್ಯನು ಕಂಡು ಅವನ ಅಭಿಲಾಷೆಯನ್ನು ತಿಳಿದುಕೊಂಡು ಅವನನ್ನು ತನ್ನಲ್ಲಿ ಬರಮಾಡಿಕೊಂಡು, ಕಿನ್ನರಯ್ಯನನ್ನು ಕಾಣಲು ಅಷ್ಟು ದೂರ ಏಕೆ ಹೋಗುತ್ತೀ, ನಿನಗೆ ಬೇಕಾದದ್ದನ್ನು ನಾನು ಕೊಡುತ್ತೇನೆಂದು, ತನ್ನ ಅಡಿಯಿಂದ ಕಲ್ಲುಗಳನ್ನು ತಾಕಿಸುತ್ತ ಮುಂದೆ ನಡೆಯಲು ಅವೆಲ್ಲವೂ ಹೊನ್ನಾದವು. ಅವುಗಳನ್ನು ಆ ಬಡಭಕ್ತನು ಗುಡಿಸಿ ರಾಶಿ ಮಾಡಿ ಅವುಗಳನ್ನು ಹೊತ್ತುಕೊಂಡು ಬಸವ ದಂಡನಾಯಕನ ಆರಮನೆಗೆ ಹೋಗಿ ನಡೆದ ಸಂಗತಿಯನ್ನು ಅವನಿಗೆ ತಿಳಿಸಲು, ಬಸವೇಶ್ವರನು ಕಲಕೇತನು ಮಹಾನುಭಾವನು ಎಂದು ಅವನ ಮಹತ್ವವನ್ನು ಅಲ್ಲಿದ್ದವರಿಗೆ ತಿಳಿಸಿಕೊಟ್ಟು ತನ್ನ ಒಬ್ಬ ಸೇವಕನನ್ನು ಆ ಬಡಭಕ್ತನೊಡನೆ ಕಳಿಸಿ ಆ ಹೊನ್ನನ್ನೆಲ್ಲ ಅವನ ಮನೆಗೆ ಮುಟ್ಟಿಸಿದನು. ಈಪ್ರಕಾರ ಕಲಕೇತಯ್ಯನ ಚಿಕ್ಕ ಕಥೆ ಇದೆ.

ಕಲಕೇತನು ವಚನಕಾರನಿದ್ದು ಅವನ ಮುದ್ರಿಕೆಯು 'ಮೇಖಲೇಶ್ವರ ಲಿಂಗ' ಎಂದಿದೆ. ಅವನು ತನ್ನ ಅನೇಕ ವಚನಗಳಲ್ಲಿ ತನ್ನನ್ನು ಉಲ್ಲೇಖಿಸಿಕೊಂಡಿದ್ದಾನೆ. ಅವುಗಳಲ್ಲಿ ಕೆಲವನ್ನು ಮಾತ್ರ ನಾವು ಇಲ್ಲಿ ಮಾದರಿಗಾಗಿ ಕೊಟ್ಟಿದ್ದೇವೆ. ಅವುಗಳಲ್ಲಿ ಪಟ್‌ಸ್ಥಲಗಳ ಗೂಢತ್ವಗಳನ್ನು ವಿವೇಚಿಸಿದ್ದಾನೆ.

ವಚನಗಳು.

(೧) ಜಗಕ್ಕಹುದಾದುದನಿತ್ತು, ಜಗಕ್ಕಲ್ಲವಾದುದ ತೊಟ್ಟು, ಜಗ ಹಿಡಿದುದ ಬಿಟ್ಟು, ಜಗ ಒಲ್ಲದುದ ತೊಟ್ಟು, ತಾನರಿದುದ ಮರೆದು, ಆ ಮರವೆಗೊಡಲಾದುದ ಮರೆದು, ಉಭಯದ ಕೋಡ ಕಿತ್ತು ನಲಿದೊಲವಿನ ಕೊಂಬಿನ ನಿರಿಗೆಯಲ್ಲಿ ಒಲಿದಾಡುವೆ. ಜಗ ಭಂಡರಂಗಣದಲ್ಲಿ ತುಳಿದಾಡುತ್ತಲಿರಬೇಕು, ಮೇಖಲೇಶ್ವರ ಲಿಂಗವ ನೊಡಗೂಡುತ್ತಲಿರಬೇಕು.

ಭಾವಃ— ಇದು ಭಾವ ಪೂರ್ಣವಾದ ವಚನವಿದೆ. ಅವನ ಭಾವವೇನೆಂದರೆ— ನಾನು ನಾನಾಬಣ್ಣದ ಹರಕು ಬಟ್ಟೆಗಳನ್ನು ಹೊರುವದರ ಉದ್ದೇಶವು ಜನರಿಗೆ ಬೇಡಾದದ್ದನ್ನು ನಾನು ತೆಗೆದುಕೊಳ್ಳುವದು, ಮತ್ತು ನನಗೆ ದೊರೆತದ್ದನ್ನು ಅವರಿಗೆ ದಾಸೋಹಭಾವದಿಂದ ಕೊಟ್ಟು ಅವರ ಇಚ್ಛೆಯನ್ನು ಸಲಿಸುವದು ಇದ್ದು ಈ ತರದ ಔದಾರ್ಯದಿಂದ ಆಚರಿಸುವದೇ ನನ್ನ ಉದ್ದೇಶವೆಂದು ಇಲ್ಲಿ ಹೇಳುತ್ತಾನೆ. ಜಗ ಹಿಡಿದದ್ದನ್ನು ನಾನು ಬಿಟ್ಟುಬಿಡುತ್ತೇನೆ, ಜಗ ಬಿಟ್ಟದ್ದನ್ನು ನಾನು ತೊಡುತ್ತೇನೆ ಎಂಬ ವಿಚಾರವನ್ನು ಪುನಃ ಮುಂದೆ ಹೇಳುತ್ತಾನೆ. ಮುಂದೆ ಅವನು ಅನ್ನುವದೇನೆಂದರೆ, ನನಗೊದಗಿದ ಜ್ಞಾನದಿಂದ ನಾನು ಅಹಂಕಾರಿಯಾಗಿ ಆಚರಿಸುವದಿಲ್ಲ ಮತ್ತು ನನ್ನ ಅಜ್ಞಾನಕ್ಕೆ ಕಾರಣವಾದಂಥಾದ್ದನ್ನು ಬಿಟ್ಟುಕೊಡುತ್ತೇನೆ. ಇದರಿಂದ ನನಗುಂಟಾದ ಆನಂದದಿಂದ ನನ್ನ ಕೊಂಬಿನಲ್ಲಿ ಸ್ವರವಾಡುತ್ತ ಕುಣಿಯುತ್ತಿದ್ದೇನೆ. ನಾನು ಜಗಭಂಡರಿಗೆ ಅಂಜಿ ಅವರಿಂದ ದೂರ ಇದ್ದುಕೊಂಡು ಕುಣಿಯುವದಿಲ್ಲ. ಆದರೆ ಅವರ ಅಂಗಣದಲ್ಲಿಯೇ ಇದ್ದು ಕುಣಿದು ಅವರ ಇದಿರಿಗೆ ಶಿವಶರಣರ ಘೋಷಣೆಯನ್ನು ಮಾಡುತ್ತೇನೆ. ಈ ತರದ ನಡೆಯು ನನಗೆ ಲಿಂಗದಲ್ಲಿ ಸಾಮರಸ್ಯವನ್ನು ಕೊಡುತ್ತಿದೆ ಎಂದು ತನ್ನ ಕಾಯಕದ ರೀತಿಯನ್ನು ಹೇಳುತ್ತಾನೆ.

(೨) ಬೇಡಲೇತಕ್ಕೆ ಕಾಯಕವ ಮಾಡಿಹೆನೆಂದು? ಕೊಡದೊಡೆ ಒಡಗೂಡಿ ಬಯ್ಯಲೇತಕ್ಕೆ? ಭಕ್ತರು ಮಾಡಿಹರೆಂದು ಗಡಿತಡಿಗಳಲಿ ಕವಾಟಮಂದಿರ ಮುಂದೆ ಸಂದಿಗೊಂದಿಗಳಲ್ಲಿ ನಿಂದು ಕಾಯಲೇತಕ್ಕೆ? ಈ ಗುಣ ಕಾಯಕದಂದವೇ? ಈ ಗುಣ ಹೊಟ್ಟೆಗೆ ಕಾಣದ ಸಂಸಾ

ರದ ಫಟ್ಟುವನಿರವು. ಉಭಯ ಭ್ರಷ್ಟಂಗೆ ಕೊಟ್ಟ ದ್ರವ್ಯ ಮೇಖಲೇಶ್ವರ ಲಿಂಗಕ್ಕೆ ಮುಟ್ಟದೆ ಹೋಯಿತ್ತು.

(೩) ಎನ್ನ ತಗರು ಆರುಸನ್ನಿಗೆ ದೋರದೆ, ಮೂರು ಸನ್ನಿಗೆ ಒಡೆದು ಲೆಕ್ಕವಿಲ್ಲದ ಸನ್ನಿಗೆ ಧಿಕ್ಕರಿಸಿ ನಿಲ್ಲುವದು. ಕುಟಿಲ ಕವಡವ ನೊಲ್ಲದು. ಮದ್ದು ಮೊರಡಿ ಬೆಳುವೆನು. ಗುಣ ಗಾಳಿಯ ಲಿಕ್ಕಿಸದು. ಇಂತೀ ಅರಿ ಗುರಿಯ ಕೋಡ ಕೆತ್ತು ಒಂದ ಹಿಂದಕ್ಕಿರಿಸಿ, ಒಂದ ಹಿಡಿದಾಡ ಬಂದೆ. ಆ ಕೋಡಿನಲ್ಲಿ ನಾನಾ ವರ್ಣದ ಶಬ್ದ ಉಲುಹು ಇಂತಿವೆಲ್ಲವು ಒಂದುಂಗುರದಲ್ಲಿ ಸೇರಿಸಿ ಅಂಗುಲಿಗಳಲ್ಲಿ ಮುಟ್ಟಿ ಆಡುತ್ತ ಬಂದೆ, ಮೇಖಲೇಶ್ವರಲಿಂಗದಲ್ಲಿ ಲೀಯ್ಯವಾದ ಶರಣರ ನೋಡಿಹೆನೆಂದು.

ಭಾವಃ— ಇದು ಒಡಪಿನ ವಚನ. ಕಲಕೇತನು ಕೊಂಬನ್ನು ಊದುತ್ತ ನಾನಾಬಗೆಯ ನಾಟ್ಯವನಾಡುವ ತನ್ನ ಉದ್ದೇಶವನ್ನು ಇಲ್ಲಿ ತಿಳಿಸಿದ್ದಾನೆ. ಪರಮಾತ್ಮನಲ್ಲಿ ಲೀನರಾದ ಶರಣರನ್ನು ನೋಡುವ ಉದ್ದಿಶ್ಯವಾಗಿ ನಾನು ಅವರಲ್ಲಿ ಹೋಗುತ್ತೇನೆಂದು ಹೇಳುತ್ತಾನೆ. ಅವರನ್ನು ಬೇಡಿ ಹಣ ತೆಗೆದುಕೊಳ್ಳುವ ಉದ್ದೇಶ ತನ್ನದಲ್ಲೆಂದು ಹೇಳುವದೇ ಅವನ ಮುಖ್ಯ ಭಾವವಿದೆ. ಮಾದರಿಗಾಗಿ ಅವನ ಈ ವಚನವನ್ನು ನಾವು ಇಲ್ಲಿ ಕೊಟ್ಟಿದ್ದೇವೆ.

ಕಲಕೇತನು ಭಿಕ್ಷುಕನಂತೆ ಆಚರಿಸಿದರೂ, ಅವನು ಭಿಕ್ಷುಕನಲ್ಲ. ಅವನು ಭಿಕ್ಷವನ್ನು ಹೇಗೆ ಮತ್ತು ಏಕೆ ಮಾಡಬೇಕೆಂಬುದನ್ನು ಬಹು ಸರಸಾಗಿ ತನ್ನ ವಚನಗಳಲ್ಲಿ ನುಡಿದಿದ್ದಾನೆ. ಗ್ರಂಥ ವಿಸ್ತಾರಭಯ ಕ್ಕೋಸ್ಕರ ನಮ್ಮಲ್ಲಿದ್ದ ಅವನ ಬೇರೆ ೮ ವಚನಗಳನ್ನು ಕೊಟ್ಟಿಲ್ಲ. ಅವೆಲ್ಲವೂ ಒಡಪಿನ ವಚನಗಳಿದ್ದು ಅವುಗಳಿಗೆ ಪುರಾತನ ಟೀಕೆಗಳಿದ್ದು ಅವುಗಳಲ್ಲಿ ಅವನು ಷಟ್‌ಸ್ಥಲ ವಿಷಯುಗಳನ್ನು ಬೋಧಿಸಿದ್ದಾನೆ.

ಭದ್ರಗಾಯಕ.

ಕೇರಳ ದೇಶದಲ್ಲಿ ಕೊಳುಕೊಟ್ಟೆ ಎಂಬ ಗ್ರಾಮವಿದ್ದು ಅಲ್ಲಿ ಭದ್ರಗಾಯಕನೆಂಬ ಭಕ್ತನು ವಾಸವಾಡುತ್ತಿದ್ದನು. ಅವನು ಆಚಾರ ಸಂಪನ್ನನಾಗಿ ಗಾಯನ ಕಲೆಯನ್ನು ಕಲಿತು ಅದನ್ನೇ ತನ್ನ ಕಾಯಕವನ್ನಾಗಿ ಇಟ್ಟುಕೊಂಡಿದ್ದನು. ಅವನು ದಿನಾಲು ಶಿವಾಲಯಕ್ಕೆ ಹೋಗಿ ಪರಮಾತ್ಮನನ್ನು ಭಜಿಸಿ ಬರುವನು. ಅವನು ತನ್ನ ಪದಗಳಲ್ಲಿ ಶಿವಶರಣರ ಮಹಿಮೆಗಳನ್ನೂ ಲಿಂಗಭಕ್ತಿಯ ಮಹತ್ವವನ್ನೂ ಹಾಡುತ್ತಿದ್ದನೇ ಹೊರ್ತು, ಕೇವಲ ಮನರಂಜನೆಗಾಗಿ ಅವನು ಹಾಡುಗಳನ್ನು ಎಂದೂ ಹಾಡುತ್ತಿರಲಿಲ್ಲ. ಆದರೆ ಅವನು ಅತ್ಯಂತ ಬಡವನು. ಅವನಿಗೆ ಸತಿಯೊಬ್ಬಳಿದ್ದು ಅವಳು ನಿತ್ಯದ ಊಟಕ್ಕೆ ಸಾಕಾಗುವಷ್ಟು ನೀನು ದೊರಕಿಸಿಕೊಂಡು ಬರುವದಿಲ್ಲೆಂದು ಗಂಡನನ್ನು ಯಾವಾಗಲೂ ಪೀಡಿಸುತ್ತಿದ್ದಳು. ಆದರೆ ಅವನು ಅದಕ್ಕೋಸ್ಕರ ಎಷ್ಟು ಮಾತ್ರವೂ ಖೇದಗೊಳ್ಳದೆ ತನ್ನ ಅಚಲವಾದ ಲಿಂಗಭಕ್ತಿಯಲ್ಲಿಯೇ ಮಗ್ನನಾಗಿರುತ್ತಿದ್ದನು. ಅವನು ದಿನಾಲು ಭಕ್ತರ ಮನೆಗೆ ಹೋಗಿ ಅವರಲ್ಲಿ ತನ್ನ ಭಕ್ತಿಪೂರಿತವಾದ ಹಾಡುಗಳನ್ನು ಹಾಡಿ ಅವರು ಕೊಟ್ಟದ್ದನ್ನು ತೆಗೆದುಕೊಂಡು ಅದರಲ್ಲಿಯೇ ತೃಪ್ತನಾಗಿ ಉಳಿದದ್ದನ್ನು ದಾಸೋಹಕ್ಕೆ ಉಪಯೋಗಿಸುವನು. ಹೀಗೆ ಅವನು ತನ್ನ ಗ್ರಾಮದಲ್ಲಿ ಎಲ್ಲರಿಗೂ ಪ್ರಿಯನಾಗಿ ವಾಸವಾಡಿಕೊಂಡಿದ್ದನು.

ಹೀಗಿರಲು ಅವನಿದ್ದ ಗ್ರಾಮದಲ್ಲಿ ಬಡ ವಿಧವೆಯೊಬ್ಬಳು ಇರುತ್ತಿದ್ದಳು. ಅವಳಿಗೊಬ್ಬ ಮಗನಿದ್ದು ಅವನು ತಾಯ ಮಾತನ್ನು ಕೇಳದೆ ವ್ಯರ್ಥ ಕಾಲ ಕಳೆಯುವನು. ಅವನು ದುಡಿದು ಎಷ್ಟುಮಾತ್ರವೂ ಅವಳಿಗೆ ಸಹಾಯವಾಗುತ್ತಿದ್ದಿಲ್ಲ. ಆದ್ದರಿಂದ ಅವಳು ತನ್ನ ಬಡತನದಲ್ಲಿ ಅತ್ಯಂತ ಕಷ್ಟದಿಂದ ತನ್ನ ಸಂಸಾರವನ್ನು ಸಾಗಿಸುತ್ತಾ ಇದ್ದಳು. ಹೀಗಿರಲು ಅವಳು ಒಂದುದಿನ ಮಗನಿಗೆ—ನೀನು ಏನೂ ದುಡಿಯುವದಿಲ್ಲೆಂದು ಕೋಪ ಮಾಡಿದ್ದರಿಂದ ಅವನು ಮುನಿಸು ತಾಳಿ, ಮನೆಯನ್ನು ಬಿಟ್ಟುಹೋಗಿ ಭದ್ರಗಾಯಕನ ಮನೆಯ ಹಿಂದೆ ಅಡಿಗಿಕೊಂಡು ಕುಳಿತನು. ಅವನು ಅಲ್ಲಿಯೇ ಇಡೀ ರಾತ್ರಿ ಕಳೆದನು. ಹೀಗಿರಲು ಶಿವಭಕ್ತನಾದ ಭದ್ರಗಾಯಕನು ಬೆಳಗಿಗೆ ಕೆಲಪು ತಾಸು

ಗಳಿರುವಾಗಲೇ ಎದ್ದು ಸಮಸ್ತರಾಗಗಳನ್ನು ಹಾಡುತ್ತ ಪರಮಾತ್ಮನ ಭಜನೆಯಲ್ಲಿ ತೊಡಗಿದನು. ಆ ವಿಧವೆಯ ಮಗನು ಅವುಗಳನ್ನು ಕೇಳುತ್ತ ಕೆಲವು ಹೊತ್ತು ಕುಳ್ಳಿರಲು ಆ ಹಾಡುಗಳು ಅವನ ಮನಸ್ಸಿನ ಮೇಲೆ ಪರಿಣಾಮ ಮಾಡಿದವು. ಅವನಲ್ಲಿ ಆಕ್ಷಣವೇ ಭಕ್ತಿಭಾವವು ಮೂಡಿತು. ಅವನು ಹಾಗೆಯೇ ಮನೆಗೆ ಬಂದು ತಾನು ಕೇಳಿದ ರಾಗಗಳಲ್ಲಿ ಶ್ರೀರಾಗವೆಂಬುದನ್ನು ಅನ್ನುತ್ತ ಪರಮಾತ್ಮನ ಸ್ತೋತ್ರ ಮಾಡಹತ್ತಿದನು. ಮುಂದೆ ಭದ್ರಗಾಯಕನು ಮೊದಲು ಕಿಳ್ಳಕತನದಿಂದ ಕಾಲಕಳೆಯುತ್ತಿದ್ದ ಆ ಹುಡುಗನು ಶಿವಭಕ್ತಿಯುಳ್ಳವನಾಗಿ ಅತ್ಯುತ್ತಮ ರೀತಿಯಿಂದ ತನ್ನ ಹಾಡುಗಳನ್ನೇ ಹಾಡುತ್ತಾನೆಂಬ ವಾರ್ತೆಯನ್ನು ಕೇಳಿ ಅವನನ್ನು ತನ್ನಲ್ಲಿ ಬರಮಾಡಿಕೊಂಡು ಅವನನ್ನು ಕೇಳಲು, ಅವನು— ರಾತ್ರಿಯಲ್ಲಿ ನಿನ್ನ ಮನೆಯ ಹಿಂದೆ ಇದ್ದುಕೊಂಡು ನಾನು ನಿನ್ನ ಹಾಡುಗಳನ್ನು ಕಲಿತೆನೆಂದು ತಿಳಿಸಿದನು. ಅದಕ್ಕೆ ಭದ್ರಗಾಯಕನು ಬಹಳ ಪ್ರೀತನಾಗಿ ಆ ವಿಧವೆಯ ಮಗನಿಗೆ ತನ್ನ ಎಲ್ಲ ರಾಗಗಳನ್ನು ಕಲಿಸಲು, ಅವನು ಗ್ರಾಮದಲ್ಲಿ ಗಾನವಿದ್ಯೆಯಲ್ಲಿ ಅತ್ಯಂತ ಪ್ರವೀಣನೆಂದು ಹೆಸರಾದನು.

ಹೀಗಿರಲು ಅದೇ ಊರಲ್ಲಿ ಗಂಧರ್ವಭಾರತಿ ಎಂಬ ಹೆಸರಿನ ಒಬ್ಬ ವೈಷ್ಣವನಿದ್ದನು. ಅವನು ಗಾಯನಕಲೆಯಲ್ಲಿ ಕುಶಲನಾಗಿರಲು, ಅವನು ತನ್ನ ಮಗನಿಗೆ ಗಾನಕಲೆಯನ್ನು ಕಲಿಸಲು ಎಷ್ಟು ಪ್ರಯತ್ನ ಮಾಡಿದರೂ ಅವನಿಗೆ ಗಾನವು ಬರದಿರಲು, ಆ ವೈಷ್ಣವನು ಭದ್ರಗಾಯಕನಿದ್ದೆಡೆಗೆ ಬಂದು— ನನ್ನ ಮಗನಿಗೆ ನೀವು ಗಾನವಿದ್ಯೆಯನ್ನು ಕಲಿಸಬೇಕು. ಅಂದರೆ ನಿಮಗೆ ದಿನಕೊಂದು ಹೊನ್ನನೀಯುವೆನೆಂದು ಹೇಳಲು ಭದ್ರಗಾಯಕನು— ಶಿವಭಕ್ತಿ ಇದ್ದವರಿಗೆ ಮಾತ್ರ ನಾನು ನನ್ನ ಹಾಡುಗಳನ್ನು ಹೇಳುವೆನೇ ಹೊರ್ತು ಇತರರಿಗೆ ಹೇಳೆನು. ಹೀಗೆ ಮಾಡುವದೇ ನನ್ನ ಕಾಯಕದ ರೀತಿಯಾಗಿದೆ ಎಂದೆನ್ನಲು ಅದಕ್ಕೆ ಗಂಧರ್ವಭಾರತಿಯು— ಆ ಮುಂಡೆಯ ಮಗನಿಗೆ ರಾಗವನ್ನು ಕಲಿಸಿದೆ. ನಾನೀಯುವ ಹೊನ್ನನ್ನು ತೆಗೆದುಕೊಂಡು ಕಲಿಸೆಂದರೆ ನೀನು ಕಲಿಸುವದಿಲ್ಲೆಂದೆನ್ನುತ್ತೀ. ನಿನಗೆ ಮಹಾಲಕ್ಷ್ಮಿಯ ಕರುಣವಿಲ್ಲ. ಇದೆಂಥ ನಿನ್ನ ಕಾಯಕವು? ಎಂದು ಕೋಪಿಸಿ ಹೊರಟುಹೋದನು.

ಸೊರವಿಂಡದೇವನ ವಚನಗಳು.

ನೀತಿಯಿಂದಿರುವುದು

೧. ಶರೀರ ಬೆಳೆದು ಪ್ರಳಯಕ್ಕೊಳಗು. ಬುದ್ಧಿ ಬೆಳೆದು ಸುಖಕ್ಕೊಳಗು. ಸುಖ ಬೆಳೆದು ವಿಕಾರಕ್ಕೊಳಗು. ವಿಕಾರ ಸಕಲ ಮರಣಕ್ಕೆ ಒಳಗಾಯಿತ್ತು. ಇಂತಿವಕ್ಕೆ ಹೊರಗಾಗು ಐಘಟದೂರ ರಾಮೇಶ್ವರಲಿಂಗವನರಿವುದಕ್ಕೆ.

೨. ಕಾಮದಲ್ಲಿ ಅಳಿದು, ಕ್ರೋಧದ ದಳ್ಳುರಿಯಲ್ಲಿ ಬೆಂದು, ಮೋಹದ ಸಮುದ್ರದಲ್ಲಿ ಮುಳುಗಿ, ನಾನಾ ಭವರಸಂಗಳನುಂಡು ಪೊರಸಾಗಬೇಡ. ಅರಿ ಐಘಟದೂರ ರಾಮೇಶ್ವರಲಿಂಗವ.

೩. ಕಾಮವ ಬ್ರಹ್ಮಂಗಿಕ್ಕಿ, ಮೋಹವ ವಿಷ್ಣುವಿಂಗಿಕ್ಕಿ, ಲೋಭವ ರುದ್ರಂಗಿಕ್ಕಿ ಮದವ ಮದನಂಗೆ ಕೊಟ್ಟು, ಕಳೆದುಳಿಯಬೇಕು ಐಘಟದೂರ ರಾಮೇಶ್ವರ ಲಿಂಗವನರಿವುದಕ್ಕೆ.

೪. ಧನವ ಗಳಿಸಿದವ ಹೆಣನಾದ. ಧನೆಯ ಗಳಿಸಿದವ ಅರಿಗಳಿಗೆ ಒಡಲಾದ. ಕನ್ನೆಯ ಗಳಿಸಿದವ ಕುಕ್ಕುರಯೋನಿಯಲ್ಲಿ ಸಿಕ್ಕಿದಂತಾದ. ಅಟ್ಟುಣಿಸಿಯಲ್ಲಿ ಕುಕ್ಕಳಿಗುದಿಯಬೇಡ. ಸತ್ಯಕ್ಕೆ ಒಳಗಾಗು. ಅಸತ್ಯಕ್ಕೆ ಹೊರಗಾಗು ಐಘಟದೂರ ರಾಮೇಶ್ವರಲಿಂಗವನರಿವುದಕ್ಕೆ.

೫. ಅಸಿಯಾಗಲಿ ಕೃಷಿಯಾಗಲಿ ಯಾಚಕ ವಾಣಿಜ ಮಸಿಯಾಗಲಿ ಮಾಡುವಲ್ಲಿ ಹುಸಿಯಿಲ್ಲದಿರಬೇಕು. ಅದು ಅಸವಾಕ್ಷನ ಬರವು, ಪಶುಪತಿಯ ಇರವು. ಐಘಟದೂರ ರಾಮೇಶ್ವರಲಿಂಗವು ತಾನೆ.

೬. ಅತೀಂದ್ರಿಯರೆಲ್ಲರು ಮದನನ ಮನೆಯ ಬೆಸಕುಡುಕೆಯ ನೀರ ಎರೆವುದಕ್ಕೊಳಗಾವರು. ವ್ರತಿಗಳೆಲ್ಲರು ಹೊರಗೆ ಆಚಾರವನಿರಿಸಿ ಒಳಗೆ ಭವಿಸಂಗದಲ್ಲಿ ಬಳಲುತ್ತಿದ್ದಾರೆ. ನಿರಾಸೆವಂತರು ಕೊಡುವರ ಬಾಗಿಲಲ್ಲಿ ಇಕ್ಕುವರ ಮುಂದಿರದಲ್ಲಿ ಸಿಕ್ಕಿ ಐದಾರೆ. ಇವಕ್ಕೆ ಹೊರಗಾಗು. ಐಘಟ ದೂರ ರಾಮೇಶ್ವರಲಿಂಗಕ್ಕೆ ಒಳಗಾಗು.

೬. ತನ್ನವರನ್ಯರಹರು ಹೆಣ್ಣು ಹೊನ್ನು ಮಣ್ಣು ಹಿಡಿದು. ಹೊರತಾಗಿ ಆ ಮೂರ ಬಿಟ್ಟವರೆ ಅನ್ಯರು ತನ್ನವರಹರು. ಅರಿದವಂಗೂ ಸರಿ. ಜರಿದ ಒಡಲಾದವಂಗೂ ಸರಿ. ಆಸೆ ಒಂದೇ ಭೇದ. ಉಭಯಕ್ಕೆ ಹೊರಗಾಗು, ಐಘಟ ದೂರ ರಾಮೇಶ್ವರ ಲಿಂಗವನರಿವುದಕ್ಕೆ.

೭. ಆಸೆ ತ್ರಿವಿಧದ ಗೊತ್ತು. ನಿರಾಸೆ ಏಕ ಮಯನ ಗೊತ್ತು. ಅಲ್ಲ ಕಹುದೆಂಬುದು ಬಲ್ಲವನ ಮತವಲ್ಲ. ಎಲ್ಲಿಯೂ ಸದ್ಭಿಣ ಎಲ್ಲರಲ್ಲಿ ನಿಜಭಾವ ಪರಿಪೂರ್ಣ ತಾನಾಗಿರಬೇಕು ಐಘಟ ದೂರ ರಾಮೇಶ್ವರ ಲಿಂಗವನರಿವುದಕ್ಕೆ.

೮. ಕರ್ತೃಭೃತ್ಯ ಭಾವವಾದಲ್ಲಿ ಸರಸ ಸುರತಸಂಗ ಪರಿಹಾಸಕಂಗಳಿಂದ ಮಾಡುವುದು ಮಾಡಿಸಿಕೊಂಬುದು ಉಭಯದ ಕೇಡು. ಅದು ನಿರಸವಾಗಿರಬೇಕು ಐಘಟ ದೂರ ರಾಮೇಶ್ವರ ಲಿಂಗವನರಿವುದಕ್ಕೆ.

೧೦. ಅಂಗವ ಕಳೆದು ನಿಂದ ವಿಹಂಗ ವೈರಿಯಂತೆ, ಅಂಗಕ್ಕೆ ಅಸು ಹೊರತೆಯಾಗಿ ನಿಂದುದು ಅದರಂಗ ಶುದ್ಧ. ಅದರಂದವಿರಬೇಕು. ತ್ರಿವಿಧವ ಹಿಡಿದ ಚಂದ ಐಘಟ ದೂರ ರಾಮೇಶ್ವರ ಲಿಂಗವನರಿವುದಕ್ಕೆ.

೧೧. ಭಾಷೆ ತಪ್ಪಿದ ಬಂಟ, ನಿಹತವಿಲ್ಲದವನ ಅರಿವು, ಭಾತನರಿಯದವನ ದೊರೆತನ ತೂತು ಕುಂಭದ ಏತದ ಘಾತದಂತೆ ಐಘಟ ದೂರ ರಾಮೇಶ್ವರಲಿಂಗ.

೧೨. ಶಕ್ಕರಂಗೆ ವಾಚಕ, ಭೂಪತಿಗೆ ದೇಸಿ, ಅಜಾತಂಗೆ ನಿಷ್ಟೆಯು, ನೇಮಂಗೆ ಖಂಡಿತ ಭಾವ ನಿರ್ಧರವಾಗಬೇಕು ಐಘಟ ದೂರ ರಾಮೇಶ್ವರಲಿಂಗದನರಿವುದಕ್ಕೆ.

೧೩. ಎಂಬತ್ತು ನಾಲ್ಕು ಲಕ್ಷ ಜೀವವ್ರತ, ಐವತ್ತಾರು ನೇಮವ್ರತ, ಅರುವತ್ತು ನಾಲ್ಕು ಶೀಲವ್ರತ, ಮೂವತ್ತಾರು ಆಚಾರವ್ರತ, ತ್ರಿವಿಧ ಕ್ರಿಭಾವ ನೇಮವ್ರತ ಇಂತಿವರಲ್ಲಿ ಶುದ್ಧಾತ್ಮನಾಗಿ ಅರಿದುದೇ ಜೀವನ್ಮುಕ್ತವ್ರತ ಐಘಟ ದೂರ ರಾಮೇಶ್ವರ ಲಿಂಗದಲ್ಲಿ ಸರ್ವ ಅನುಧಾನಿಯು ಕ್ರಿಶುದ್ಧತೆ.

೧೪. ಐಶ್ವರ್ಯವುಳ್ಳವಂಗೆ ನಿಜಭಕ್ತಿಯಿಲ್ಲ. ಡಂಭಕದ ವೇಷಧಾರಿಂಗೆ ನಿಜತತ್ವದ ಜ್ಞಾನವಿಲ್ಲ. ಕುಟಿಲರ ನೆಮ್ಮುಗೆಗೆ ಘನಲಿಂಗದ ನೆಮ್ಮುಗೆಯಿಲ್ಲ ಐಘಟ ದೂರ ರಾಮೇಶ್ವರಲಿಂಗ.

೧೫. ಶಬ್ದ ಶಾಸ್ತ್ರಂಗಳಲ್ಲಿ ತಿಳಿದು. ನ್ಯೂನಾದಿಗಳಿಲ್ಲದೆ ನುಡಿದು, ವಿಧದೊಳಗೆ ಹುದುಗಿ, ಭವಪಾಶದ ಪಾಕುಳದಲ್ಲಿ ಬಿದ್ದು, 'ನಿಷ್ಟಭಕ್ತನೆಂದರೆ ಒಪ್ಪುವನೇ ಐಘಟ ದೂರ ರಾಮೇಶ್ವರಲಿಂಗವು?

೧೬. ಭಕ್ತಿ ಹೋಯಿತ್ತು ಗುರುವಿನಲ್ಲಿ ಇದಿರಾಂತಲ್ಲಿ. ಭಕ್ತಿ ಹೋಯಿತ್ತು ಜಂಗಮದಲ್ಲಿ ಸಂದೇಹವ ಮಾಡಲಿಕ್ಕೆ. ಭಕ್ತಿಹೋಯಿತ್ತು ಲಿಂಗದ ಲಿಂಗದ ಸಂಗವನರಿಯದೆ. ಅರ್ಥಿಗಾರಿಕೆಯಲ್ಲಿ ಮಾಡುವ ವ್ಯರ್ಥರ, ಭಕ್ತಿ ಇತ್ತಲೆ ಉಳಿಯಿತ್ತು ಐಘಟ ದೂರ ರಾಮೇಶ್ವರ ಲಿಂಗವನರಿಯದೆ.

ಕ್ರಿಯಾಜ್ಞಾನಗಳ ರೀತಿ ಮತ್ತು ಅವುಗಳ ಶುದ್ಧತೆ.

೧೭. ಕುಂಭ ಘಟದಂತೆ ಕುರಹಾಗಿ ತುಂಬಿದ ಜಲದಂತೆ ಮನವಾಗಿ ತಂಡುಲದಂತೆ ಚಿತ್ತ ಶುದ್ಧವಾಗಿ ಮಾಡುವ ಕ್ರಿ ಅಗ್ನಿಯಂತಾಗಿ ಇಂತಿವು ಕೂಡಿ ಘಟಿಸಿ ಕ್ರಿ ಜ್ಞಾನ ಶುದ್ಧವಾಗಿ ಅರಿಯಬೇಕು ಐಘಟ ದೂರ ರಾಮೇಶ್ವರಲಿಂಗವನರಿವುದಕ್ಕೆ.

೧೮. ಕೈಕಾಲಿನಲ್ಲಿ ಕೊಂಡಡೇನು ಬಾಯಿಗೆ ಬಂದಲ್ಲದೆ ಒಡಲೆಡೆಯಿಲ್ಲ. ಮಾತಿನಲ್ಲಿ ಅಡಿವಡೇನು, ಮನದಲ್ಲಿ ಅರಿದಡೇನು? ಆ ಇರವು ಕತನ ಮುಟ್ಟಬೇಕು ಐಘಟ ದೂರ ರಾಮೇಶ್ವರಲಿಂಗವನರಿವುದಕ್ಕೆ.

೧೯. ಅಡುವಾತ ಗಣಪಿಣೆಯಲ್ಲಿ ಕುಣಿದಡಿ ಕೆಳಗೆ ನೋಡುವಾತನಿಗೆ ಆಶ್ಚರ್ಯವಾದಂತೆ, ವಸ್ತುವಿನ ಕೂಟದ ಆಟ ಮರ್ತ್ಯರ ಬೇಟ ನಿಶ್ಚಯವಾಗಿರಬೇಕು ಐಘಟ ದೂರ ರಾಮೇಶ್ವರಲಿಂಗಕ್ಕೆ.

೨೦. ನಾನಾ ಫಲವ ಸಲಹುವಲ್ಲಿ ಮೂಲದ ವೇಳೆಯನರಿತು ಸೇವೆಯಬೇಕು. ವ್ರತ ನೇಮ ನೃತ್ಯ ನಿತ್ಯವ ಮಾಡುವಲ್ಲಿ ಅತಿಶಯವಾಗಿರಬೇಕು. ಪಟುಭಟನಾದಲ್ಲಿ ಉಭಯದಳ ಪಿತಾಮಹನಾಗಿರಬೇಕು. ಗತಿಬಟ್ಟೆಯ ತೋರುವ ಚರ ಗುರುವ್ಯಯ ಗತಿ ಮಹನಾಗಿರಬೇಕು ಐಘಟ ದೂರ ರಾಮೇಶ್ವರಲಿಂಗವನರಿವುದಕ್ಕೆ.

೨೧. ಅಪ್ಪುವಾಸವ ತುಂಬುವ ತಿಪ್ಪಣದಂತೆ, ತುಂಬುವಲ್ಲಿ ಕಟ್ಟಿಲ್ಲ. ಸೂಸುವಲ್ಲಿ ಪ್ರವಾಳದಂತೆ ಅರಿವಿನಭೇದ. ಇಷ್ಟದ ಮುಟ್ಟು ಕಟ್ಟಳೆಯ ಗೊತ್ತನರಿಯಬೇಕು ಐಘಟ ದೂರ ರಾಮೇಶ್ವರಲಿಂಗವ ನರಿವುದಕ್ಕೆ.

೨೨. ಲಕ್ಷಿಸಿ ಕಂಡೆಹೆನೆಂದಡೆ ಅಲಕ್ಷ ಅನಾವುಯ. ಅದನುಳಿದು ಕಂಡಿಹೆನೆಂದಡೆ ವಿಕ್ಷಾವವು ವೃತಕಾಯ. ಉಭಯವನರಿದು ವಿಚಾರಿಸಬೇಕು ಐಘಟ ದೂರ ರಾಮೇಶ್ವರಲಿಂಗವ.

೨೩. ಮನೆಯ ಹೊರಗಿದ್ದವನ ಮನೆಯ ಒಳಗಿದ್ದವ ಕರೆದಡೆ ವಿರೋಧವುಂಟೇ ಅಯ್ಯ? ಕ್ರಿ ಹೊರಗಾಗಿ ಆತ್ಮನೊಳಗಾದಲ್ಲಿ ನಾನೀನೆಂಬನ್ನಕ್ಕ ಕ್ರಿ ಶೂನ್ಯವಿಲ್ಲದಿರಬೇಕು ಐಘಟ ದೂರ ರಾಮೇಶ್ವರ ಲಿಂಗವ ನರಿವುದಕ್ಕೆ.

೨೪. ಪಾಕವನರಿತು ಮಾಡುವ ಗರತಿಯಂತೆ, ಲಾಗನರಿತು ಲಂಘಿಸುವ ವನಚರನಂತೆ, ಮೇಘವನರಿತು ಕರೆವ ಭೇಕನಂತೆ, ಉಚಿತ ಕಾಲಿಂಗಳಲ್ಲಿ ಮಾಡುವ ಸಕ್ರಿ ಲಿಂಗಕ್ಕೆ ಅರಿದು ಕೂಡುವುದು ಘನ ವಸ್ತುವಿನಲ್ಲಿ. ಉಭಯ ಭಾವದಲ್ಲಿ ನಿಂದು ಮುತ್ತಿರಡಳಿಯಬೇಕು ಆ ಕುರುಹಿನಲ್ಲಿ ಐಘಟದ ದೂರ ರಾಮೇಶ್ವರಲಿಂಗವನರಿವುದಕ್ಕೆ.

೨೫. ಇಚ್ಛಾಶಕ್ತಿರೂಪಾಗಿ ಬ್ರಹ್ಮಪದವಾಯಿತ್ತು. ಕ್ರಿಯಾಶಕ್ತಿ ರೂಪಾಗಿ ವಿಷ್ಣುಪದವಾಯಿತ್ತು. ಜ್ಞಾನ ಶಕ್ತಿ ರೂಪಾಗಿ ರುದ್ರಪದವಾಯಿತ್ತು. ತ್ರಿವಿಧ ಪದ ಕೂಡಿ ಕಾಮನಾಸ್ತಿಯಾಯಿತ್ತು. ಐಘಟ ದೂರ ರಾಮೇಶ್ವರಲಿಂಗವನರಿಯದೆ.

೨೬. ಅಂಬುಜಾತ ದ್ವಾರವಳಿವೊಳವಾದಡೆ ನಾದಕ್ಕೆ ಸಿಕ್ಕುಂಟೇ ಅಯ್ಯ? ಶರೀರ ಸಂಪದದಲ್ಲಿದ್ದಡೆ ಅರಿವು ಮಹದಲ್ಲಿ ನಿಂದು ನೆರೆ ವಸ್ತು ತಾನಾದಲ್ಲಿ ಬೇರೊಂದಿಡೆಯುಂಟೇ? ಕರಣಂಗಳ ಹಿಂಡೆಗೆ ಉರಿಯಿದ್ದು, ನೆಲೆ ನಷ್ಟವಾಗಿಯಲ್ಲದೆ ಬೇರೊಂದ ಹಿಡಿಯಲಿಲ್ಲ. ಅದು ಐಘಟ ದೂರ ರಾಮೇಶ್ವರಲಿಂಗವು ತಾನೆ.

೨೭. ವಿಷದೇಹಿಗೆ ಆಹಾರ ಒದಗದೆ, ನಸು ಸುಳುಹ ಭುಂಜಿಸುವಂತಿ ಕ್ರಿ ಶುದ್ಧತೆಯಲ್ಲಿ ಒದಗಲರಿಯದಿರೆ ಮಾಡುವ ಆಚರಣೆ

ಮಾರ್ಗವಾಗಬೇಕು. ಎಯ್ದದಿರೆ ಮಾನ್ಯರ ಕಂಡು ಮನ್ನಣೆಯಾಗಿರಬೇಕು. ಈ ಭಾವ ಏನೂ ಇಲ್ಲದಿರೆ ಐಘಟ ದೂರ ರಾಮೇಶ್ವರ ಲಿಂಗಕ್ಕೆ ದೂರ.

೨೮. ಸ್ವಪ್ನದ ಭಾಷೆ ಮರ್ತ್ಯರ ಮುಟ್ಟದ ಭಕ್ತಿ ಚಿತ್ತವನರಿಯದೆ ಕಾಡುವನ ಯುಕ್ತಿ ವೃತ್ತಿಕೆಯ ಜೊಂಬೆಯು ಅಪ್ಪುವಿನ ಮುಂದಿರಕ್ಕೆ ಹೋದಂತಾಯಿತ್ತು. ಐಘಟ ದೂರ ರಾಮೇಶ್ವರಲಿಂಗವನರಿ.

೨೯. ದ್ವೈತವಳಿದು ಅದ್ವೈತವಾಗಬೇಕು. ಜ್ಞಾನವಳಿದು ಕ್ರಿಯುಲ್ಲಿಸಂದು ದಿವ್ಯಜ್ಞಾನವಾಗಬೇಕು. ಹಾಲುವೊಗುವಲ್ಲಿ ನೀರ ಬೆರಿಸಿದಂತೆ, ಅದು ಹೊತ್ತುದಕ್ಕೆ ವಾರಿ ನಿಂದಂತಾಗಬೇಕು, ಐಘಟ ದೂರ ರಾಮೇಶ್ವರಲಿಂಗವನರಿವುದಕ್ಕೆ.

೩೦. ಅರಿವೆಂಬುದೇ ಕ್ರಿ, ಕ್ರಿಯೆಂಬುದೇ ನಿರವಯ. ಅದೆಂತೆಂದೊಡೆ, ಧರೆಯ ವಾರಿಯ ವಾಯು ಆಕಾಶಕ್ಕೆ ತಂದು ಸುರಿವಂತೆ, ಬಾವಿಯ ನೀರ ಭಾಜನ ತಂದು ಕೊಡುವಂತೆ, ಇಷ್ಟಲಿಂಗದ ನಿಷ್ಠೆ ದೃಷ್ಟವಾದಲ್ಲಿ, ವಸ್ತುವ ಕಟ್ಟಿ ತಂದು ಕೊಡುವುದು. ಕೊಡುವುದಕ್ಕೆ ಸಂದೇಹವಿಲ್ಲ. ಅದಕ್ಕೆ ದೃಷ್ಟವ ಕೇಳುವುದಕ್ಕೆ ಅನ್ಯ ಭಿನ್ನಕ್ಕೆ ತೆರಪಿಲ್ಲ. ಐಘಟ ದೂರ ರಾಮೇಶ್ವರಲಿಂಗಕ್ಕೆ ಸಾವಯ ನಿರವಯವೆಂಬುದಿಲ್ಲ.

೩೧. ಸಕ್ರಿಯೆಂಬುದೇ ಜ್ಞಾನ. ಜ್ಞಾನದೊಡಲೇ ಕ್ರಿ. ಸುಗಂಧವ ಸರಿಸಿಕೊಂಡಿಪ್ಪ ಕರಂಡದಂತೆ, ಆ ಒಡಲಿಲ್ಲದೆ ಗಂಧವಿರಬಲ್ಲುದೇ? ಐಘಟ ದೂರ ರಾಮೇಶ್ವರಲಿಂಗವು ಕುರುಹಾಗಿ ಅರಿವ ಇರಿಸಿಕೊಂಡಿದ್ದಿತ್ತು.

ಅರ್ಪಣದ ರೀತಿ.

೩೨. ಪ್ರಸಾದವ ಕೊಂಡಲ್ಲಿ ಪ್ರಾಣದಾಸೆ ಇಲ್ಲದಿರಬೇಕು. ಭಕ್ತಿಯ ಪೆಚ್ಚಲ್ಲಿ ಸಿಜ ನಿಶ್ಚಯವಿರಬೇಕು. ಅದು ಸಚಿತದ ನಿಶ್ಚಟದಿರವು ಐಘಟ ದೂರ ರಾಮೇಶ್ವರಲಿಂಗವನರಿವುದಕ್ಕೆ.

೩೩. ಮನ ಮುಟ್ಟದ ಪೂಜೆ ಮಣ್ಣಿಗೋಡೆಯ ತೊಳೆದು ನಿರ್ಮಲವನರಸುವನಂತೆ. ವಸ್ತುವ ಮುಟ್ಟದ ಅರ್ಪಿತ ಕುಕ್ಕುರ ಅಸ್ತಿಯ ಕಡಿದು

ತನ್ನಯ ಕೋಡೆತಕ್ಕೆ ಚಪ್ಪಿರಿವಂತೆ. ಇದು ನಿಶ್ಚಯದ ಮುಟ್ಟಲ್ಲ, ಆ ಐಘಟ ದೂರ ರಾಮೇಶ್ವರಲಿಂಗವನರಿವುದಕ್ಕೆ.

೩೪. ತಾ ವಿೂವನ್ನಕ್ಕ ಲಿಂಗಕ್ಕೆ ಮಜ್ಜನ. ತಾನುಂಬನ್ನಕ್ಕ ಲಿಂಗಕ್ಕೆ ನೈವೇದ್ಯ. ತನ್ನ ತನು ಭೋಗವ ಮಾಡುವನ್ನಕ್ಕ ಲಿಂಗಾರ್ಪಿತ ಮುಖ ವಾಗಬೇಕು. ಇದು ಸಭಕ್ತ ಮಾರ್ಗದಿರವು ಐಘಟ ದೂರ ರಾಮೇಶ್ವರಲಿಂಗವನರಿವುದಕ್ಕೆ.

೩೫. ಪಾದ ತೀರ್ಥವ ಕೊಂಡಲ್ಲಿ ತೃಪೆಯರತು, ಪ್ರಸಾದವ ಕೊಂಡಲ್ಲಿ ಹಸಿವರತು, ಭೃತ್ಯಭಾವವಾದಲ್ಲಿ ನಾನೀನೆಂಬುದಿಲ್ಲದೆ, ಅಹಂ ಕಾರ ವಿಸರ್ಜನವಾಗಿರಬೇಕು ಐಘಟ ದೂರ ರಾಮೇಶ್ವರಲಿಂಗವನರಿ ವುದಕ್ಕೆ.

ಇಷ್ಟಪ್ರಾಣಭಾವ ಲಿಂಗಗಳು.

ವಾಯುಪಟವಾಡುವಲ್ಲಿ ಹಿಡಿದವನ ಕೆಯ್ಯಲ್ಲಿ ನೂಲು ಸಿಕ್ಕಿ ಅಡು ವಂತೆ ತನ್ನಯ ಅರಿವು ಕುರುಹಿನಲ್ಲಿ ಸಿಕ್ಕಿ ಎಡೆಬಿಡುವಿಲ್ಲದಾಡಬೇಕು ಐಘಟ ದೂರ ರಾಮೇಶ್ವರಲಿಂಗವನರಿವುದಕ್ಕೆ.

೩೭. ಮೊನೆಯಿರಿವಡೆ ಕರವಿಡಿಯಲ್ಲಿ ಇರಿದಲ್ಲದಾಗದು. ಮನ ಅರಿವಡೆ ಕುರುಹಿನ ನಿರಿಗೆಯಲ್ಲಿ ಸಲೆ ನಿಂದು ನಿಂದಲ್ಲದಾಗದು. ಕ್ರಿಭಾವ ಕುದ್ಧವಾಗು ಐಘಟ ದೂರ ರಾಮೇಶ್ವರಲಿಂಗವನರಿವುದಕ್ಕೆ.

೩೮. ಪಶು ವಾಹನವ ಕಟ್ಟುದಕ್ಕೆ ನೆಟ್ಟಗೋಲಿಲ್ಲದೆ ಕಟ್ಟಲಿಲ್ಲ. ಅಸು ಆತ್ಮನ ಕಟ್ಟುವ ಗೊತ್ತು ಇಷ್ಟದ ನಿಷ್ಠೆಯಿಂದ ಸ್ಥಾಣು ಕಟ್ಟು ವಡೆಯಬೇಕು. ಇದು ನಿಶ್ಚಯವೆಂದರಿ ಐಘಟ ದೂರ ರಾಮೇಶ್ವರಲಿಂಗ ವನರಿವುದಕ್ಕೆ.

೩೯. ಗರ್ಭದಲ್ಲಿ ಶಿಶು ಬಲಿದು ಹಸಿದೆನೆಂದು ಅತ್ತುದುಂಟೇ ಅಯ್ಯ? ಬೆಸಸಾಗಿ ಪ್ರತಿರೂಪಿಂಗೆ ಕುಚಕ್ಷೀರವಲ್ಲದೆ ಘಟದಿಂದಡಗಿದಲ್ಲಿ ಸುಖ ತಾಯ ಇರವಿನಲ್ಲಿ ನಿಂದಂತೆ ಉಭಯದ ಭೇದ ಇಷ್ಟಲಿಂಗ ಸಂಬಂಧ ಯೋಗ ಐಘಟ ದೂರ ರಾಮೇಶ್ವರಲಿಂಗವನರಿವುದಕ್ಕೆ ಇದಿ ರಿಟ್ಟ ಭೇದ.

೪೦. ವಾಯುವೆದ್ದು ಪರ್ಣ ತೃಣ ಘಟವನೆತ್ತುವಂತೆ ಮನಸಿದು ಘಟವ ಕೊಂಡುಹೋದಂತೆ, ಚಿತ್ತ ನೆನೆದು ಇಷ್ಟದಲ್ಲಿನಿಂದು ಇಷ್ಟವ ಕೊಂಡು ಐದಬೇಕು. ಇದು ನಿಶ್ಚಯದ ಗೊತ್ತು ಐಘಟ ದೂರ ರಾಮೇಶ್ವರಲಿಂಗವನರಿವುದಕ್ಕೆ.

೪೧. ಕಂಡುಹಿಡಿವುದಿದು ಘಟದ ಭೇದ. ಕಾಣದರಸೂದು ಆತ್ಮನ ಭೇದ. ಕಂಡುದ ಕಾಣದುದ ಹಿಂಗಿ ಕೂಡುದು ಅರಿವಿನ ಭೇದ. ತ್ರಿವಿಧ ನಿಂದಲ್ಲಿ ಐಘಟ ದೂರ ರಾಮೇಶ್ವರಲಿಂಗನ ನಿಲವು ಅಸಾಧ್ಯ.

೪೨. ಮರದ ಘಟಕ್ಕೆ ತೊಗಲ ಬಿಗಿದು ಹೊಡೆಯೆ, ಅದು ಒಡ ಗೂಡಿ ನಾದವಾಯಿತ್ತು. ಈ ತೊಡಕಿನ ಭೇದ ಒಡಗೂಡುವ ಲಿಂಗದ ಭಾವ ಕುರುಹಿನ ನೆಮ್ಮುಗೆಯನರಿ ಐಘಟ ದೂರ ರಾಮೇಶ್ವರಲಿಂಗ ವನರಿವುದಕ್ಕೆ.

೪೩. ಫಲ ರಸವನರಿಸಿಕೊಂಡಿದ್ದಂತೆ ನೆಲ ನಿಧಾನವನರಿಸಿಕೊಂಡಿ ದ್ದಂತೆ ತಾಯ ಗರ್ಭದಲ್ಲಿ ಶಿಶುವ ಆರೈಕೆಯಲ್ಲಿ ತಾಳಿಕೊಂಡಿಪ್ಪಂತೆ ಇದ್ದೆಯಲ್ಲಾಗಿ ಕುರುಹಾಗಿ ಅರಿವ ಆತ್ಮನ ಮರೆಯ ಮಾಡಿಕೊಂಡಿ ದ್ದೆಯಲ್ಲಾ. ಅರಿವನರಿವುದಕ್ಕೆ ಕುರುಹಿನ ಮೂರ್ತಿಯಲ್ಲಿ ಅಂಗವ ಮರೆದು ವಸ್ತುವ ಹಿಂಗದಿರು ಐಘಟ ದೂರ ರಾಮೇಶ್ವಂಲಿಂಗವನರಿವುದಕ್ಕೆ.

೪೪. ಕುಸುಮ ಒಣಗಿದಾಗ ಸೌರಭ ಅಡಗಿತ್ತು. ಸಾರವರ ತಾಗ ಸಸಿ ಹೊಂದಿತ್ತು. ಕುರುಹ ಮರೆದಾಗ ಅರಿವು ನಿಂದತ್ತು. ಐಘಟ ದೂರ ರಾಮೇಶ್ವರಲಿಂಗವು ಭಜನೆಗೊಳಗಾಗಬೇಕು.

೪೫. ಇಷ್ಟಲಿಂಗ ವಸ್ತುವನರಸುವುದಕ್ಕೆ ದೃಷ್ಟವಿಲ್ಲ. ವಸ್ತು ತಾನೇ ಕುರುಹಿನಲ್ಲಿ ನಿಂದರಿಹಿಸಿಕೊಳ್ಳಬೇಕು. ಅದೆಂತೆಂದೊಡೆ ಮಣಿದಾರವ ನೊಳಕೊಂಡು ತಾ ಕುರುಹಿಗೆ ಬಂದು ನಿಲ್ಲುವಂತೆ ವಸ್ತುವನೊಳ ಕೋಂಡ ಕುರುಹಿನ ರೂಪು ಮಣಿದಾರದಂತೆ. ಇಂತೀ ಉಭಯದ ಭೇದ ಎಡೆತೆರಪಿಲ್ಲ ಐಘಟ ದೂರ ರಾಮೇಶ್ವರಲಿಂಗವು ತಾನೇ.

೪೬. ತನ್ನ ಕಾಯ್ವ ಸೆದೆಯ ಕಾವ ಕಾಯ್ವು ಅಂಗವುಂಟೇ ಅಯ್ಯ? ವಸ್ತು ಮುಖದಿಂದ ಎಲ್ಲವನರಿಯಬೇಕಲ್ಲದೆ ವಸ್ತು ತನ್ನ ಕಟ್ಟಿಗೆ ನಿಶ್ಚಯವೇ? ಅದು ತನ್ನ ಉಭಯದ ಕೇಡು ಐಘಟ ದೂರ ರಾಮೇಶ್ವರಲಿಂಗಕ್ಕೆ.

೪೭. ನೀರೊಳಗಣ ಕಿಚ್ಚು ತಾಯಲ್ಲಿ ಅಡಗಿತ್ತು. ಶಿಲೆಯೊಳಗಣ ಕಿಚ್ಚು ತಾಯನುಳುಹಿ ಇದಿರ ಸುಟ್ಟಿತ್ತು. ಮರದೊಳಗಣ ಕಿಚ್ಚು ಮರನನು ಸುಟ್ಟು ಇದಿರನು ಸುಟ್ಟು ಪರಿಸ್ಪಂದಕ್ಕೆ ಹರಿಯಿತ್ತು. ಇಂತೀ ತ್ರಿವಿಧದ ಜ್ಞಾನದ ಭೇದವನರಿ ಐಘಟ ದೂರ ರಾಮೇಶ್ವರಲಿಂಗವನರಿವುದಕ್ಕೆ.

೪೮. ಮನೆಯಲ್ಲಿ ಮನುಜರು ಅಡಗುವರಲ್ಲದೆ ಮನುಜರಲ್ಲಿ ಮನೆ ಅಡಗಿದುದುಂಟೇ? ಮಾಡುವುದಕ್ಕೆ ಕರ್ತನಲ್ಲದೆ ಆ ಘಟವ ಘಟಿಸುವುದಕ್ಕೆ ಅಗೋಚರ ಐಘಟ ದೂರ ರಾಮೇಶ್ವರಲಿಂಗವು.

೪೯. ಕಂಡೆನೆಂದಡೆ ಮುಂದಕ್ಕೊಂದನರಿವುತ್ತಿದ್ದಿಹಿತ್ತು. ಕಾಣೆನೆಂದಡೆ ಅಂಗದಲ್ಲಿದ್ದ ಕುರುಹಿದ್ದಿಹಿತ್ತು. ಈ ಉಭಯವ ಹಿಂಗಿ ಕಂಡೆಹೆನೆಂದಡೆ ಐಘಟ ದೂರ ರಾಮೇಶ್ವರಲಿಂಗವು ಸಾಧ್ಯವು.

೫೦. ಮೇಘ ಒಸರಿ ಧರೆಯಲ್ಲಿ ನಿಂದು ಆ ಧರೆಯ ತೋಡಿ ತೆಗೆಯೆ ಅವ ಸಲಹಿ ಮುನ್ನಿನ ಹಾಗೆ ಧರೆಗಿಳಿಯೆ ಹಾಗಿರಬೇಕು, ಇಷ್ಟ ಪ್ರಾಣಯೋಗ ಸಂಬಂಧ ಐಘಟ ದೂರ ರಾಮೇಶ್ವರಲಿಂಗವನಂವುದಕ್ಕೆ.

೫೧. ಇಷ್ಟದ ಪೂಜೆಯನರಿವುದಕ್ಕೆ ಕೋಲ ಸುತ್ತಿದ ನೂಲಿನಂತಿರಬೇಕು. ಭಾವದ ಭ್ರಮೆ ಹಿಂಗುದಕ್ಕೆ ಸಾವಧಾನದಲ್ಲಿ ಸಾವಯವಾದ ಸಾವಿನಂತೆ ಭಾವಯೈದಬೇಕು. ಇಷ್ಟಪ್ರಾಣದಲ್ಲಿ ಉರಿ ಆರಿನ ಯೋಗದಂತೆ ಕ್ರಿಯಲ್ಲಿ ಕರಗಬೇಕು. ಇದೇ ದೃಷ್ಟ ಐಘಟ ದೂರ ರಾಮೇಶ್ವರಲಿಂಗವನರಿವುದಕ್ಕೆ.

೫೨. ಇಷ್ಟಪ್ರಾಣಯೋಗ ಸಂಬಂಧ ಯೋಗ ಭೇದದ ಪರಿಯಾವುದೆಂದಡೆ, ಅಕ್ಷಿಯ ಮುಚ್ಚಿದಲ್ಲಿ ನಿರೂಪವಾಯಿತ್ತು. ತೆರೆದಲ್ಲಿ ರೂಪಾಯಿತ್ತು. ತನ್ನಯ ಅರಿವು ಮರವೆಯಿಂದ ಕ್ರಿ ನಿಃಕ್ರಿ ಎಂಬ ಸಂದೇಹವಾಯಿತ್ತು. ನಿಂದ ನೀರ ನೆಳಲು ಜರಿಸಿದಲ್ಲಿ ಅಡಗಿತ್ತು. ಆತೆರದ ದೃಷ್ಟವನರಿ ಐಘಟ ದೂರ ರಾಮೇಶ್ವರಲಿಂಗವು ಏಕ ಸ್ವರೂಪ.

೫೩. ಪಂಚೇಂದ್ರಿಯಂಗಳಲ್ಲ ಲಿಂಗಮುಖವಾಗಿ ಕೊಳ್ಳಬೇಕೆಂಬರು. ಆ ಇಂದ್ರಿಯಂಗಳು ಲಿಂಗಕ್ಕೆ ಹೊರತೆಯೇ? ಲಿಂಗದ ಮುಖದಲ್ಲಿ ಇಂದ್ರಿಯಂಗಳು ಬಂದು ನಿಂದು ತಮ್ಮ ಸಂದೇಹವ ಬಿಡಿಸಿಕೊಂಬುವಲ್ಲದೆ ಇಂದ್ರಿಯಂಗಳ ಮುಖಕ್ಕೆ ಲಿಂಗವಿಲ್ಲ. ಲಿಂಗಮುಖದಲ್ಲಿ ಇಂದ್ರಿಯಂಗಳ ನಿವೃತ್ತಿ ಐಘಟ ದೂರ ರಾಮೇಶ್ವರಲಿಂಗದಲ್ಲಿ

ಶಿವಾನುಭವ

ಪರ್ಯ ೦೯	ಮೇ ೧೯೪೫.	ಸಂಚಿಕೆ ೮

ನಿಜಭಕ್ತಿ.

ಲೇಖಕರು:— ಶ್ರೀಯುತ ಬಸವಪ್ಪ ಚನ್ನಪ್ಪ ಪಟ್ಟೇದ (ವಂಟಮುರಿ)

(೧) " ನೆರೆನಂಬೋ ನೆರೆನಂಬೋ ದಾಸ ದುಗ್ಗಳೆಯರಂತೆ ।
ನೆರೆನಂಬೋ ನೆರೆನಂಬೋ ಸಿರಿಯಾಳ ಚಂಗಳೆಯರಂತೆ ।
ನೆರೆನಂಬೋ ನೆರೆನಂಬೋ ಸಿಂಧು ಬಲ್ಲಾಳನಂತೆ ।
ನಂಬಿದೆಯಾಡೊಡೆ ತನ್ನನೀವ ಕೂಡಲಸಂಗಮದೇವಾ " ॥

(೨) " ದಾಸನ ವಸ್ತ್ರವ ಬೇಡದ ಮುನ್ನ ತವನಿಧಿಯು ನಿತ್ತರೆ ।
ಸಿರಿಯಾಳನ ಮಗನ ಬೇಡದ ಮುನ್ನ ಕಾಂಚೀಪುರವ
ಕೈಲಾಸಕೊಯ್ದೊಡೆ ।
ಬಲ್ಲಾಳನ ವಧುವ ಬೇಡದ ಮುನ್ನ ಸ್ವಯಲಿಂಗ ಮಾಡಿದಡೆ ।
ನಿಮ್ಮ ದೇವರೆಂಬೆ ಕೂಡಲ ಸಂಗಮದೇವಾ "॥

ಶ್ರೀ ಬಸವಣ್ಣನವರ ಮೇಲಿನ ಎರಡು ವಚನಗಳನ್ನು ನೋಡಿದರೆ, ದೇವರು ಬೇಡಿದುದನೆಲ್ಲ ನೆರೆನಂಬುಗೆಯಿಂದ ಸಲ್ಲಿಸಿದವರೇ ಭಕ್ತರಾಗುವರು, ಜಿತ್ಕೋದ್ಧಾರ ಹೊಂದುವರು, ದೇವರ ಕೃಪೆಗೆ ಪಾತ್ರರಾಗುವರು ಎಂಬ ವಿಷಯವು ಅವಗತವಾಗುವದು. ಮನುಷ್ಯನು ಸ್ವಾಭಾವಿಕವಾಗಿ ಬಹಿರ್ಮುಖದಿಂದ ವರ್ತಿಸುವ ಪ್ರಾಣಿ. ಅವನಿಗೆ ಸಂಸಾರದಲ್ಲಿ ಮೊದಲು ಹೆಂಡತಿ, ಬಳಿಕ ಸಂತತಿ (ಮಕ್ಕಳು), ತರುವಾಯ ತಮ್ಮ ಈ ರಕ್ಷಣೆಗೋಸುಗ ಧನ-(ಸಿರಿ-ಸಂಪತ್ತು) ಬೇಕೆನಿಸುವವು;. ಈ ದಾರಾ

ಪುತ್ರ ಧನಗಳಿಗೆ ಈಷಣತ್ರಯ ಅಂದರೆ ಇಚ್ಛೆಯ ಮೂರು ವಿಷಯಗಳು ಎಂದೆನ್ನುವರು. ಇವುಗಳ ಮೇಲೆ ಆತನ ಹಂಬಲವು ಹೆಚ್ಚಾಗಿರುವದು. ಇವುಗಳನ್ನು ಅತಿಶಯವಾಗಿ ಮೋಹಿಸಿರುವನು. ಇವನ್ನು ಯಾರೇ ಬೇಡಿದರೂ ಆತನಿಗೆ ಕೊಡುವ ಮನಸ್ಸು ಹುಟ್ಟುವದೇ ಕಷ್ಟ! ದೇವರನ್ನು ಆರಾಧಿಸಿ ಭಕ್ತಿಯಿಂದ ಈ ವಸ್ತುಗಳನ್ನೇ ಹಾರಯಿಸುವನು. ದೇವರು ಪ್ರಸನ್ನನಾಗಿ ಇಚ್ಛಿತ ವರವನ್ನು ಅವನು ಗ್ರಹಿಸಬೇಕಾದರೆ ಅವನು ಸಂತುಷ್ಟನಾಗುವಂತೆ ಮೇಲಾದ ಪದಾರ್ಥಗಳನ್ನೇ ಸಲ್ಲಿಸುವದಾದರೂ ಅತ್ಯವಶ್ಯದ ಮಾತಾಗಿರುವದು. ಮನುಜನು ತನಗೆ ಅತ್ಯಂತ ಪ್ರಿಯವಾದ ವಸ್ತುಗಳನ್ನೇ ಈಷಣತ್ರಯವನ್ನೆ ದೇವರಿಗೆ ಅನನ್ಯ ಭಾವದಿಂದ ಒಪ್ಪಿಸುವದೇ ಇಷ್ಟ. ಈತನ ಭಕ್ತಿಯ ಪರೀಕ್ಷಾರ್ಥವಾಗಿ ಶಿವನಾದರೂ ಅವೇ ಒಡವೆಗಳನ್ನು ಕೇಳುವದಾದರೂ ಸಹಜಿಕ. ಇಲ್ಲಿ ಶುದ್ಧ ಪಾರಮಾರ್ಥಿಕ ವಿಚಾರವಾಯಿತು.

ಇನ್ನೊಂದು ಮಾತಿನಿಂದ ಲೌಕಿಕ ದೃಷ್ಟಿಯಿಂದ ವಿಚಾರಿಸಿದರೆ ಏನು ನಿಷ್ಪನ್ನವಾಗುವದೆಂಬದನ್ನು ನೋಡಿರಿ. ಪರಧನ; ಪರಸ್ತ್ರೀ, ಪರ ಹಿಂಸೆಗಳು ಅತ್ಯಂತ ನಿಂದ್ಯವೆಂದೂ, ತ್ಯಾಜ್ಯವೆಂದೂ ನೀತಿ ಶಾಸ್ತ್ರವು ಹೇಳುತ್ತದೆ. ಸದಾಚಾರಿಯಾಗಿ ವರ್ತಿಸುವದೇ ಮಾನವನ ಮುಖ್ಯ ಕರ್ತವ್ಯ. 'ಆಚಾರಃ ಪ್ರಥಮೋ ಧರ್ಮಃ' ಎಂದು ಎಲ್ಲ ಧರ್ಮೋಪದೇಶಕರೂ ಸಾರಿದ್ದಾರೆ. 'ಮಹಾಜನೋ ಏನ ಗತಃ ಸ ಪಂಥಾಃ' ಎಂಬುದೇ ಸಾಮಾನ್ಯ ಜನರ ವರ್ತನೆಯ ಗುರಿಯು. ಈ ರೀತಿ ಇದ್ದುದರಿಂದ ಇವನ್ನು ಅತಿಕ್ರಮಿಸುವವನು ಅದಾವನೋ ಇರಲಿ, ಅವನು ಅವಹೇಳನೆಗೆ ಪಾತ್ರನಾಗುವನು. ಹೀಗಿದ್ದು ಮೇಲಿನ ವಚನಗಳಲಿ ತಪ್ಪದೇ ಶಿವನು ಭಕ್ತರಿಂದ ಈಷಣತ್ರಯವನ್ನೇ ಬೇಡಿರುವನು. ಆಗ ಅವನು ನರರೂಪದಿಂದಲೇ ಜಂಗಮರೂಪದಿಂದಲೇ ಬಂದು ಕೇಳುವನು. ಸಾಮಾನ್ಯ ಜನರಾದರೆ ಅವನ ಬೇಡಿಕೆಯನ್ನು ಕೂಡಲೆ ಜರಿದು ತಳ್ಳಿಬಿಡುತ್ತಿದ್ದರು. ಆದರೆ ಭಕ್ತರು ಪ್ರಪಂಚದಲ್ಲಿ ಅಲಿಪ್ತರೀತಿಯಿಂದಿದ್ದು ಪ್ರಪಂಚವೆಲ್ಲ ಶಿವ ಪ್ರಪಂಚವೇ ಎಂದು ಮನದಲ್ಲಿ ಒಳಿತಾಗಿ ಬಗೆದು ವರ್ತಿಸುವವರು. ಜಗತ್ತು ಲಿಂಗ ಶಿವ ರೂಪವಾದುದೆಂಬುದನ್ನು ಮನಗಂಡವರು. ಅವರು ಮೇಲಿನಂತೆ ಈಷಣತ್ರಯವನ್ನೇ ಹಟದಿಂದ ಬೇಡುವವನು ಸಾಮಾನ್ಯನಲ್ಲ ಶಿವನೇ ಇರುವನು ಎಂದು ಸದ್ಭಕ್ತಿಯಿಂ

ದಂತು ಅವುಗಳನ್ನು ಸಂತೋಷದಿಂದ ಅರ್ಪಿಸಲಿಕ್ಕೆ ಒಪ್ಪಿರುವರು. ಅದೇ ಮೇರೆಗೆ ಶಿವನಾದರೂ ಅವರ ಇಷ್ಟ ಪರಿಪೂರ್ಣಗೈದಿರುವನು. ಸಾಮಾನ್ಯರ ದೃಷ್ಟಿಗೂ ಶರಣರ ದೃಷ್ಟಿಗೂ ಮಹದಂತರ! ಶಿವನ ಬೇಡಿಕೆಯು ಸದೋಷವಾದದ್ದೆಂದು ಅದಕ್ಕೆ ಹೆಸರಿಡಲಿಕ್ಕೆ ಲೌಕಿಕರು ಎಂದೂ ತಪ್ಪರು. ಈ ಮಾತು ಲಕ್ಷ್ಯದಲ್ಲಿ ತಂದೇ ಶ್ರೀ ಬಸವಣ್ಣನವರು ಮತ್ತೊಂದು ವಚನದಲ್ಲಿ ಏನು ನುಡಿದಿರುವರು ನೋಡಿರಿ.

" ವೇಷ ಆಚಾರದಲ್ಲಿ ನಡೆಯಿತ್ತೆಂದು ಆಸುರದಲ್ಲಿ ಬೊಗಳುವ
ಕುನ್ನಿ ನೀಕೇಳಾ ।
ಹರಿಯನೇ ದಾಸನ ವಸ್ತ್ರವ? ಉಣ್ಣನೇ ಚನ್ನಯ್ಯನ ಸಂಗಾತ ।
ಪರವಧುವ ಬೇಡನೇ ಸಿಂಧು ಬಲ್ಲಾಳನ ಬೇಡನೇ? ಸಿರಿಯಾಳನ
ಮಗನ ॥
ನಡೆವುದು ನುಡಿವುದು ಅವಿಚಾರವೆಂದು ಭಾವ ವಿಭಾವವೆಂದು,
ಕಂಡೆನಾದಡೆ- ತಪ್ಪೆನ್ನದು ।
ಮೂಗು ಕೊಯ್ಯೆ ಕೂಡಲ ಸಂಗಮ ದೇವಾ "

ಮೇಲಿ ಹೇಳಿದ- ನಾಲ್ಕು ಆರೋಪಗಳನ್ನು ಜನರು ಹೊರಿಸುವುದೇ ದೋಷ. ಯಾಕಂದರೆ ಅವನೇನು ಅಜ್ಞಾನಿಯೇ? ತಿಳಿದೂ ತಿಳಿದೂ ಈ ಈಷಣತ್ರಯವನ್ನೇ ಅರಿಸಿ ಬೇಡುತ್ತಾನೆ. ಅವುಗಳಿಗಿಂತಲೂ ತನ್ನಲ್ಲಿ ಅವರ ಭಕ್ತಿಯು ಮಿಗಿಲಾಗಿರುತ್ತದೆಂದು ತೋರಿಸಿದರೇನು? ಶಿವನು ಪ್ರೀತಿಯ ಭಕ್ತನಿಗೆ ಒಲಿದು ಅವರ ಇಷ್ಟಾರ್ಥ ಸಲ್ಲಿಸುವುದು ಸ್ವಾಭಾವಿಕವಲ್ಲವೆ? ಆ ಪ್ರಕಾರ ಶಿವನ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದವರಿಗೆ ಮಾತ್ರ ಅವನು ನರ್ಜನವಿತ್ತು ಉದ್ಧರಿಸುವನು. ಅಜ್ಞಾನವಶರಾಗಿ ಕೇವಲ ಹೊಸ ದೃಷ್ಟಿಯಿಂದ ತಮೋಗುಣದಿಂದ ನೋಡುವವರಿಗೆ ಮಾತ್ರ ಈ ಬೇಡಿಕೆಗಳು ಅಸಹ್ಯವಾಗಿಯೂ ಅನವಶ್ಯವಾಗಿಯೂ ತೋರುತ್ತವೆ. ಆದರೆ ಇವುಗಳ ಒಳಗುಟ್ಟು--ಪಾರಮಾರ್ಥಿಕ ವಿಚಾರವು--ಬೇರೆ ವಿಧವಾಗಿರುವದು, ನಿರ್ಮಲವಾಗಿ ಥಳಥಳಿಸುತ್ತಿರುವದು. ಅದೆಂತೆನೆ--

ದಾಸ ದುಗ್ಗಳೆಯರು.

ದಾಸ ದುಗ್ಗಳೆ ಎಂಬ ಹೆಸರುಗಳು ಅಂಕಿತನಾಮಗಳು ಅಹುದು. ಇದರಲ್ಲಿ ಅವಕ್ಕೆ ಶಬ್ದಾರ್ಥ ಅವಯವಾರ್ಥಗಳೂ ಉಂಟು. ಆ ರೀತಿ ನೋಡಿದರೆ ದಾಸ= ದೇವಭಕ್ತ. ದುಗ್ಗಳೆ ಎಂಬುದರ ಸಂಧಿ ಬಿಡಿಸಿದರೆ

ದುರ್+ಕಳೆ ಎಂದಾಗುವದು. ಅದರ ಅರ್ಥವು ಅನಿಷ್ಟವಾದುದನ್ನು ಕಳೆದವಳು ಎಂದಾಗುವದು. ಈ ರೀತಿ ಇಬ್ಬರೂ ಇಷ್ಟಲಿಂಗ ಪೂಜಕರಾದ ಮಹಾಗಣಂಗಳು.

ಇವರು ನೆಯ್ಗೆಯ ಕಾಯಕದವರು. ಇವರಿಗೆ ಕೆಲವು ಕಡೆಗೆ ದೇವಾಂಗ ಸಂಭೂತರೆಂದೂ ಕರೆಯುವದು ವಾಡಿಕೆಯಾಗಿದೆ. ದೇವಾಂಗ ಅಂದರೆ ವಸ್ತ್ರವನ್ನು ನೇಯುವವರೆಂದರ್ಥ. ದೇವಾಂಗ ಅಂದರೆ ವಸ್ತ್ರ (ಬಟ್ಟೆ). ಸತಿ ಪತಿಗಳೀರ್ವರೂ ಅತ್ಯಂತ ಕುಶಲತನದಿಂದ ಬಹು ಮೂಲ್ಯವಾದ ವಸ್ತ್ರ ಒಂದನ್ನು ಸಿದ್ಧಗೊಳಿಸಿದರು. ಅದಕ್ಕಾಗಿ ಬಹು ದಿನಗಳನ್ನು ವೆಚ್ಚ ಮಾಡಿ ಒಂದು ಅಸಾಮಾನ್ಯ ಒಡವೆಯನ್ನೆ ಸಿದ್ಧಗೊಳಿಸಿದ್ದರು. ಅದರಲ್ಲಿ ಅವರ ಮನಸ್ಸು ಬಹು ತಲ್ಲೀನವಾಗಿತ್ತು. ಇದೊಂದು ಅವರ ಮೇಲಾದ ಧನ. ಇದನ್ನು ತಿಳಿದೇ ಶಿವನು ಜಂಗಮರೂಪದಿಂದ ಅವತರಿಸಿ, ಅವರ ಆ ಅಮೌಲ್ಯ ವಸ್ತ್ರವನ್ನೇ ತನಗೆ ಬೇಡಿದನು. ಕೂಡಲೆ ಅದರ ಗುಟ್ಟು ತಿಳಿದ ಪರಮ ಭಕ್ತರು ಅದನ್ನು ಶಿವನಿಗೆ ಅರ್ಪಿಸಿದರು. ತವನಿಧಿ = ನಿನ್ನ ಸಾನ್ನಿಧ್ಯ, ಎಂದು ಉಸುರಿದರಲ್ಲಿ. ಆಗ ಶಿವನು ಅದನ್ನು ಹರಿದೊಗೆದು ಅವರ ಮನದಲ್ಲಿ-ಭಕ್ತಿ-ವಿಕೃತಿ ಮೂಡುವುದೇನೋ ಎಂದು ಪರೀಕ್ಷಿಸಿದನು. ಆದರೂ ಅವರಲ್ಲಿ ಅದೇನೂ ತೋರಲಿಲ್ಲ. ಆದುದರಿಂದ ಶಿವನು ನಿಜರೂಪ ತೋರಿ ಅವರನ್ನು ಕೈಲಾಸಕ್ಕೊಯ್ದನು.

ಇನ್ನು ದೇವಾಂಗ ಶಬ್ದಕ್ಕೆ ಮತ್ತು ಅದರರ್ಥವು ಅದರ ಅನುಭವಾರ್ಹ ನೋಡಿದರೆ ಹೊರಡುವುದು. ದೇವಾಂಗ ಇದರ ವಿಗ್ರಹವು ದೇವರ+ಲಿಂಗ = ಶಿವನ ದೇಹ. ಶಿವನಿಗೆ ಬೇರೆ ದೇಹವಿಲ್ಲ. ಭಕ್ತ ಶರೀರವೇ ಅತನ ದೇಹ ಎಂಬುದು ಭಕ್ತ ಕಾಯೋ ಮುಮುಕಾಯಃ ಎಂಬ ಆಗಮ ವಚನದಿಂದ ಸಿದ್ಧವಾದುದು. ಹೀಗಿರುವಾಗ ದೇವರು ಒಂದು ದೇವಾಂಗವನ್ನು ಅಂದರೆ ಭಕ್ತರ ಅಂಗವನ್ನು ಕೇಳಿದರೆ ಅವರು ಅವನಿಗೆ ಒಪ್ಪಿಸಿ ನಿರ್ಮುಕ್ತರಾಗುವದು ಸ್ವಾಭಾವಿಕವಲ್ಲವೇ? ಕಾಯಾರ್ಪಣವು ಭಕ್ತನ ಗುರಿಯಲ್ಲವೇ? ಕಾಯಾರ್ಪಣ ಕರಣ ಇಂದ್ರಿಯಗಳನ್ನೆಲ್ಲ ಅರ್ಪಣಮಾಡುವದೇ ಅವನ ಗುರಿಯು. ಆ ಪ್ರಕಾರ ಅವರು ಶಿವನಿಗೆ ತಮ್ಮನ್ನೆಲ್ಲ ಅರ್ಪಿಸಿ ನಿರಹಂಕಾರಿಗಳಾಗಿ ಶಿವರೂಪವನ್ನೇ ಧರಿಸಿದರೆಂಬುದೇನು ಆಶ್ಚರ್ಯ! ಕೂಡಲೆ ಶಿವನು ಅವರ ದೇವಾಂಗ ಹರಿದು

ಅಂದರೆ ಭವಚಕ್ರವನ್ನು ಹರಿದು ಮುರಿದುಹಾಕಿ ಅವರಿಗೆ ತನ್ನಲ್ಲಿ ಎಡೆಗೊಟ್ಟು ಸಾಮರಸ್ಯವೈದಿದನೆಂಬುದೇ ತಾತ್ಪರ್ಯವು.

ಸಿರಿಯಾಳ ಚಂಗಳೆಯರು

ಇವು ಅಂಕಿತನಾಮಗಳೂ ಉಂಟು. ಶ್ಲೇಷಾರ್ಥ ವಿಶೇಷ ಉಳ್ಳವೂ ಉಂಟು. ಸಿರಿಯು ಆಳುವವನು = ಸಿರಿಯಾಳ, ಅಂದರೆ ಸಿರಿವಂತ, ಇದ್ದುವೈಶ್ಯ. ಈತನು ಸೆಟ್ಟಿ (ವೈಶ್ಯ). ಸಂಪದುತ್ಪಾದನವೇ ಈತನ ಕರ್ತವ್ಯ. ಕೋಟ್ಯಾಧೀಶನಾಗಿ ಶೋಭಿಸುವವನು. ಈತನು ಪತಿಯು, ಶಿವಭಕ್ತೋತ್ತಮನು. ಚಂಗಳೆ, ಈಕೆಯ ನಿಜವಾದ ಹೆಸರು ಚೆಂಗುಣೆ. ಇದು ಏಕಾರವಾಗಿ ಚಂಗಳೆ ಎಂದಾಗಿರುವದು. ಚೆಂಗುಣೆಯು ಸತ್ಪಶರಣೆಯು. ಈಕೆಯು ಶಿರಿಯಾಳನ ಸತಿಯು. ಸತಿಪತಿಗಳೀರ್ವರೂ ಭಕ್ತಿಯಲ್ಲಿ ಬಹು ಬಲ್ಲಿದರು. ಇವರ ಭಕ್ತಿಯ ಪರೀಕ್ಷಾರ್ಥವಾಗಿ ಜಂಗಮರೂಪೀ ಶಿವನು ಇವರ ಅತ್ಯಂತ ಪ್ರೀತಿಯ ಏಕ ಪುತ್ರ ವಿಷಯವಾದ ಮಗನನ್ನೇ ತನಗೆ ಇಷ್ಟಾ ಭೋಜನವಾಗಿ ಕೋರಿದನು. ಶ್ರೀಮಂತರಿಗೆ ಮೊದಲೇ ಸಂತತಿ ಅಪರೂಪ. ತಮ್ಮ ಅತುಲ ಸಂಪತ್ತಿಗೆಲ್ಲ ಬಾಧ್ಯಸ್ಥರಾದ ಹೊಟ್ಟೆಯ ಮಕ್ಕಳಿರಬೇಕೆಂದು ಅವರು ಮನಸ್ಸಿನಿಂದ ಇಚ್ಛಿಸುವರು. ಇಂತಹ ಸ್ಥಿತಿಯನ್ನು ತಿಳಿದ ಪರಮೇಶ್ವರನು ಬುದ್ಧಾಭ್ಯ ನೇಮಿಸಿಕೊಂಡ ಮಗನನ್ನೇ ಬೇಡಿದ್ದರ ಮರ್ಮವನ್ನರಿತು ಅವರು ಸಂತೋಷದಿಂದ ತಮ್ಮ ಪಂಚ ಪ್ರಾಣದಂತಿರುವ ಮಗನನ್ನು ಸಮರ್ಪಿಸಿದರು. ಮಕ್ಕಳೆಂದರೆ ಸಂಸಾರಿಗಳಿಗೆ ಅದರಲ್ಲಿಯೂ ಸಿರಿವಂತರಿಗೆ ತಮಗಿಂತಲೂ ಹೆಚ್ಚಿನ ವಸ್ತುವು. ಅವರ ರಕ್ಷಣೆಗಾಗಿ ಅವರು ತಮ್ಮನ್ನು ಸಹ ಬಲಿಕೊಡಲಿಸ್ಥೆ ಹಿಂಜರಿಯರು. ತನ್ನ ಮಗನಾದ ಹುಮಾಯೂನನ ಜಾಡ್ಯಪರಿಹಾರಕ್ಕಾಗಿ ಬಾಬರನು ತನ್ನ ಪ್ರಾಣವನ್ನೇ ದೇವರಿಗೆ ಮಾಡುವವನಾಗಿ ಅರ್ಪಿಸಿ ಹೋದ ವಿಷಯವು ಇತಿಹಾಸ ಪ್ರಸಿದ್ಧವಾಗಿದೆ. ಮಗುವೆಂದರೆ ತಾಯಿ ತಂದೆಗಳ ಪ್ರತ್ಯಕ್ಷ ಕರುಳು, ಪ್ರಾಣವು, ಅವರ ಪ್ರತಿರೂಪ. ಆದುದರಿಂದ ಅವರು ಇಲ್ಲಿ ಮಗು ಸಹಿತವಾಗಿ ತಮ್ಮನ್ನೇ ಶಿವನಿಗೆ ನೀಡಿದರೆಂಬುದು ಸಿದ್ಧವಾಗುವದು. ಹೀಗೆ ನಿಃಸಂಗವಾಗಿ ದೇವನನ್ನು ಸೇರುವುದೇ ಅತನೊಳಡಗುವುದರ ಗುಟ್ಟು. ಆ ಪ್ರಕಾರ ಸಿರಿಯಾಳ ಚಂಗಳೆಯರು ವರ್ತಿಸಿದುದರಿಂದ ಅವರೂ ನಿರಹಂಕಾರಿಗಳಾಗಿ ಕೈಲಾಸಕ್ಕೆ ಅಂದರೆ ಶಿವನ ಸಾನ್ನಿಧ್ಯಕ್ಕೆ ಪಾತ್ರರಾದರು.

ಸಿಂಧು ಬಲ್ಲಾಳ.

ಇದು ಸಹ. ವ್ಯಕ್ತಿಯ ಹೆಸರು ಇರುವದಲ್ಲದೆ ಅಂತರ್ಗತ ಪದಗಳಿಗನುಸರಿಸಿ ವಿಶೇಷಾರ್ಥದಿಂದಲೂ ಯುಕ್ತವಾಗಿರುವದು. ಸಿಂಧು = ಪ್ರಪಂಚಸಾಗರದ ನಿಜಸ್ಥಿತಿಕೆಯನ್ನು, ಅದರ ಆಗು ಹೋಗುಗಳ ಕ್ಷಣಿಕತ್ವವನ್ನು, ಬಲ್ಲ = ಸರಿಯಾಗಿ ಮನಗಂಡಂತಹ, ಆಳು = ಪುರುಷ. ಎಲ್ಲ ಕೂಡಿದರೆ ಸಂಸಾರದ ನಶ್ವರತೆಯನ್ನು ಅದರ ಸುಖಾಭಾಸವನ್ನು ಸರಿಯಾಗಿ ಅರಿತು ಅನುಭಾವಿಯಾದ ಸುಜ್ಞ ಮನುಜ. ಈತನನ್ನು ರಾಜನೆಂದೂ ಹೇಳಿದ್ದಾರೆ. ಆದ ಕಾರಣ ಇವನೊಬ್ಬ ರಾಜರ್ಷಿಯೆನ್ನಬಹುದು. ಪರಮ ವೈರಾಗ್ಯಶಾಲಿಯಾದ ಶಿವಭಕ್ತ. ಸಾಧಾರಣ ಜನರು ದೇಹಾಭಿಮಾನಿಗಳಾಗಿರುವದು ವಾಡಿಕೆಯಾಗಿದೆ. ಅದರಲ್ಲಿಯೂ ಹೆಂಡತಿಬಗೆಗಂತೂ ಹೆಚ್ಚು ಅಭಿಮಾನ ತೋರುವುದು. ರಾಜನಿದ್ದರೆ ಆತನು ತನ್ನ ರಾಣಿಯ ವಿಷಯದಲ್ಲಿ ತಾಳಿದ ಅಭಿಮಾನವನ್ನು ಹೇಳಲಾಗುವದಿಲ್ಲ. ಇಂತಹ ರಾಜನ ಭಕ್ತಿಯನ್ನು ಪರೀಕ್ಷಿಸಬೇಕಾದರೆ ಆತನ ಅಭಿಮಾನದ ಪರಮಾವಧಿ ಸೊತ್ತೆನಿಸುವ ಸ್ತ್ರೀಯನ್ನೇ ಬೇಡುವುದು ಸಹಜ. ಆ ಪ್ರಕಾರ ಈಷಣತ್ರಯದೊಳಗಿನ ಮೊದಲನೆಯದಾದ ಹೆಂಡತಿ ಎಂಬ ವಿಷಯವನ್ನೇ ಇಲ್ಲಿ ಜಂಗಮ ರೂಪಿ ಶಿವನು ಬೇಡಿಬಿಟ್ಟನು. ಲೌಕಿಕ ಗ್ರಹಸ್ಥನಾಗಿದ್ದರೆ ರಾಜನು ಕ್ರೋಧಾಕ್ರಾಂತನಾಗಿ ಮನಬಂದಂತೆ ವರ್ತಿಸುತ್ತಿದ್ದನು. ಆದರೆ ಸಿಂಧು ಬಲ್ಲಾಳನು ನುರಿತ ಜ್ಞಾನಿಯು, ಬೇಡಿದರಿಂಗೆ ಬೇಡಿದ್ದು ಕೊಡುವ ಮಹಾದಾನಿ. ಈ ಜಂಗಮನ ಅಪೂರ್ವವಾದ ಯೋಜನೆಯನ್ನೇ ಕೇಳಿ ಈತನು ಶಿವನೇ ಎಂದು ಭಾವಿಸಿ ಪರಮಾನಂದಭರಿತನಾಗಿ ತನ್ನ ಹೆಂಡತಿಯನ್ನು ಅವನ ಸ್ವಾಧೀನಪಡಿಸಿದನು. ಆ ಸತಿಯಾದರೂ ಪತಿಪರಾಯಣಳೂ ಶರಣೆಯೂ ಆದುದರಿಂದ ಆಯಾಜ್ಞೆಯನ್ನು ಬಲು ಹರುಷದಿಂದಲೇ ಅನುಸರಿಸಿದಳು. ಹೀಗೆ ಸತಿಪತಿಗಳೀರ್ವರೂ ನಾನು ನನ್ನದು ಎಂಬ ಅಹಂಕಾರ ಮಮಕಾರಗಳನ್ನು ತೊರೆದು ನಿರ್ವಿಕಾರ ನಿರ್ಮೂಲತ್ವದವರಾಗಿ ಏನೂ ಸಂದೇಹ ಸಂಕೋಚಗಳನ್ನು ಹೊಂದದೆ ಅಲಿಪ್ತರಾಗಿ ವರ್ತಿಸಿದರು. ಇದೊಂದು ಲೋಕೋತ್ತರ ಕೌತುಕವೇ ಆಯಿತು. ಇಂತಹ ಸಚ್ಛಕ್ತಿಗೆ ದೇವನೊಲಿಯುವದರಲ್ಲೇನು ಅಚ್ಚರಿ!

ಇದಾಯಿತು ಲೌಕಿಕ ದೃಷ್ಟಿ. ಪಾರಮಾರ್ಥಿಕದಲ್ಲಿ ನೋಡುವಾ. ಪುರುಷನಿಗೆ ಆತನ ಸಾಕಾರ ಸ್ವರೂಪವು (ದೇಹವು) ಶಕ್ತಿಯು. ಅಂತರ್ಗತವಾದ ಪ್ರಾಣವು ಶಿವನು. "ಶರಣಸತಿ ಲಿಂಗಪತಿ" ಎಂಬ ನ್ಯಾಯದಿಂದ ನೋಡಿದರೆ ಪ್ರತಿಯೊಬ್ಬ ಭಕ್ತನ ಅಂಗವು ಸತಿಯಾಗಿರುವದು. ಅದನ್ನೆಲ್ಲ ಶಿವನಿಗೆ ಅರ್ಪಿಸಿ ತಾನು ಇಲ್ಲವಾಗಿ ವರ್ತಿಸುವುದೇ ಲಿಂಗಾಂಗ ಪರಾಯಣದ ರೀತಿ. ಈ ವಿಧವಾಗಿ ಸಿಂಧು ಬಲ್ಲಾಳನು ತನ್ನನ್ನು ಜಂಗಮನಿಗೆ, ಮಹಾರೂಪಿ ಶಿವನಿಗೆ, ಸಲ್ಲಿಸಿ ತಾನು ಆ ಲಿಂಗದಲ್ಲಿ ಐಕ್ಯವಡೆದನು. ಅಂದರೆ ಸ್ವಯ ಲಿಂಗವಾದನೆಂಬುದೇ ಸ್ಪಷ್ಟವೇ ಆಗಿರುವದು. ಮೋಕ್ಷವನ್ನೂ ಲಿಂಗ ರೂಪವನ್ನೂ ಶಿವಸಾನ್ನಿಧ್ಯವನ್ನೂ ಯಾರೂ ಯಾರಿಗೂ ಕೊಡರು. ತಾವೇ ಆ ರೀತಿ ಸ್ವಾನುಭಾವಿಗಳಾಗಿ ಆಗುವದನ್ನು ಅನುಭವಿಸತಕ್ಕುದಿರುವದು. ಹಾಗಿಯೇ ಈ ರಾಜನು ವರ್ತಿಸಿ ತಾನೇ ಲಿಂಗವಾಗಿ ಮೆರೆದನು.

ಮರವೆಗೊಳಗಾಗಿ ಜಗತ್ತಿನ ಮಾಯೆಗೆ ಮರುಳಾಗಿ ಭ್ರಮೆಗೊಂಡು ಮನುಷ್ಯನು ಅಜ್ಞಾನದಿಂದ ತಾನು ಬೇರೆ, ಜಗತ್ತು ಬೇರೆ, ಅಷ್ಟೇ ಅಲ್ಲದೆ ಜಗತ್ತಿನೊಳಗಿನ ಬಹು ವಿಧವಾದ ವಸ್ತುಗಳು ಬೇರೆ ಬೇರೆ, ಹಾಗೂ ಇವನ್ನೆಲ್ಲ ನಿರ್ಮಿಸಿದ ದೇವನೂ ಸಹ ಬೇರೆ, ಹೀಗೆ ತೀರ ಭಿನ್ನತ್ವದ ತವರುಮನೆಯಾಗಿರುವನು. ಆದರೆ ವಸ್ತುಸ್ಥಿತಿ ಹೀಗಲ್ಲ. "ಲಿಂಗರೂಪಂ ಜಗತ್ ಸರ್ವಂ" ಆಗಿರುವದು. ಹೀಗಿದ್ದು ನಾನು ನನ್ನದು ಎಂದು ಇಲ್ಲಿ ಗೋಳು ಹಾಕಿಕೊಂಡು ಕೊಳಪಾಟಕ್ಕೆ ಸಿಲುಕಿ ತಿಳಿಗೇಡಿತನದಿಂದ ಮನುಷ್ಯನು ದುಃಖಕ್ಕೆ ಗುರಿಯಾಗುತ್ತಾನೆ. ಈ ಭ್ರಾಂತಿಯನ್ನು ಜ್ಞಾನದ ಯೋಗದಿಂದ ಕಳೆದುಕೊಂಡು ಎಲ್ಲವನ್ನು ಶಿವನೆಂದೇ ಬಗೆದು ತ್ರಿಪುಟಿಯೊಂದಾಗಿ ವರ್ತಿಸುವುದೇ ನಿಜವಾದ ರೀತಿ. "ಶಿವ ಶಿವ ವೆಂಬುದು ಸಹಜಂ। ಶಿವನೊಳೆ ಮೂಡಿಹುದು ತೋರ್ಪುದೆಲ್ಲಂ ನಿಜದಿಂ । ಶಿವನಲ್ಲದಿಲ್ಲವೇನುಂ । ಶಿವರೂಪಂ ನೀನುಮಖಿಲ ಜಗಮುಂ ತಿಳಿಯೈ" । ಎಂಬುದೇ ನೈಸರ್ಗಿಕವಾದುದು. ಹೀಗೆ ಮನುಷ್ಯನು ನೈಜಸ್ಥಿತಿಗೆ ಏಕತ್ವಕ್ಕೆ ಬಾರದೆ ಅವರಿಗೆ ಬಿಡುಗಡೆಯೇ (ಮೋಕ್ಷವೇ) ಇಲ್ಲ. ಆದಕಾರಣ ಮೇಲಿನ ವಚನಗಳಲ್ಲಿ ಹೇಳಿದ ಮೂರು ದಂಪತಿಗಳು ನಡೆ ನುಡಿಗಳು ಒಂದಾಗಿ ವರ್ತಿಸಿ ಲಿಂಗದಲ್ಲಿ ಲಯವಾದರೆಂಬುದೇ ಮುಖ್ಯವಾಗಿ ಸರ್ವರೂ ಅರಿಯತಕ್ಕ ವಿಷಯವು.

ಏನು ಮಾಡಿದರೇನು ?

ಆಗಸದಿ ಹಾರಾಡಿ
ಕೈಲಾಸ ಕೇಡಾಡಿ
ಶಂಕರನ ಸಾನ್ನಿಧ್ಯ
ಸುದ್ದಿಯಂ ತಂದೊಡೇಂ? ॥೧॥

ಭೂತ ವೇತಾಳನೊಲಿಸಿ
ಪಾತಾಳದೊಳಸೇರಿ
ಶೇಷನಂ ಸೆರೆ ಹಿಡಿದು
ಭೂತಳದಿ ಕುಣಿದಾಡಿ
ಅಟ್ಟಹಾಸದಿ ಮೆರೆದೊಡೇಂ ॥೨॥

ಸ್ವಾರ್ಥಾಭಿಲಾಷೆಯಿಂ
ಇಲ್ಲದಾ ದಳ್ಳುರಿಯ
ವಿಶ್ವದೊಳು ಹಬ್ಬಿಸುತೆ
ವೈಭವದಿ ಮೆರೆದೊಡೇಂ ?

ಗಗನದೊಳು ನೆಗೆದೊಡೇಂ ? ॥೩॥

ಭೂಗಗನ ಪಾತಾಳ
ಲೋಕಗಳ ಪ್ರಭುವಾಗಿ
ತನ್ನಂತೆ ಅನ್ಯರನು
ಭಾವಿಸದ ಮಾನವನು
ಇದ್ದರೇಂ ! ಸತ್ತರೇಂ ? ॥೪॥

ನಡೆಯೇ ನುಡಿಯಾಗಿ
ನುಡಿಯೇ ನಡೆಯಾಗಿ
ನಡೆಯದಾ ಮಾನವನು
ತ್ಯಾಗಿಯಾದರೇಂ ? ಭೋಗಿಯಾದರೇಂ ? ॥೫॥

" ನನ್ನಿಯೇ ದೇವರು
ದೇವರೇ ನನ್ನಿಯು "
ಎಂಬ ನಿಜವನರಿಯದೆ
ಏನು ಮಾಡಿದರೇನು ? ॥೬॥

—ಆನಂದಕವಿ.

ಗ್ರಂಥವಿಮರ್ಶೆ-

(೧) **ವೀರಶೈವ ದರ್ಶನ** (ಪ್ರಕಾಶಕರು—ಶ್ರೀ. ವೀ. ರಾ. ಕೊಪ್ಪಳ ಎಮ್. ಎ. ಬಿ. ಟಿ. ಧಾರವಾಡ—ಬೆಲೆ ೨-೮-೦) ಈ ಗ್ರಂಥವು ಶ್ರೀ. ಕುಮಾರ ಸ್ವಾಮಿಗಳು ಬೇರೆ ಬೇರೆ ಕಾಲಗಳಲ್ಲಿ ಕೊಟ್ಟ ಉಪನ್ಯಾಸಗಳ ಸಂಗ್ರಹವಾಗಿದೆ. ಇದರಲ್ಲಿ ೧೬ ವಿಷಯಗಳು ಪ್ರತಿಪಾದಿತವಾಗಿವೆ. ಈಜೆಗೆ ಬಹುಜನ ವಿದ್ವಾಂಸರು, ಅವರಲ್ಲಿ ಶ್ರೀ. ದಿವಾಕರ ರಂಗರಾಯರು ಶ್ರೀ. ಅ. ನ. ಕೃಷ್ಣರಾಯರು ಶ್ರೀ. ಶ್ರೀನಿವಾಸ ಮೂರ್ತಿಗಳು ಅನೇಕ ದೃಷ್ಟಿಯಿಂದ ಶಿವಶರಣರ ವಾಙ್ಮಯವನ್ನು ಅಭ್ಯಾಸಮಾಡಿ ಅವುಗಳಲ್ಲಿರುವ ತತ್ವಗಳನ್ನು ಅನೇಕ ವಿಧವಾಗಿ ಚರ್ಚಿಸಿದ್ದಾರೆ. ಇದರಿಂದ ಈ ವಾಙ್ಮಯದಲ್ಲಿಯ ವೈಶಾಲ್ಯವು ಚನ್ನಾಗಿ ವಿದಿತವಾಗದೆ ಇರದು. ಶ್ರೀ. ಕುಮಾರ ಸ್ವಾಮಿಗಳವರು ಪಾಶ್ಚಿಮಾತ್ಯ ತತ್ವಜ್ಞಾನವನ್ನು ಅಭ್ಯಾಸಿಸಿ ಅದರ ಪ್ರಕಾಶದಲ್ಲಿ ವಚನ ವಾಙ್ಮಯವು ಯಾವ ವಿಧವಾಗಿ ಕಾಣುತ್ತದೆಂಬದನ್ನು ಅವರು ತಮ್ಮ ಉಪನ್ಯಾಸಗಳಲ್ಲಿ ವಿವೇಚಿಸಲು ಯಾವಾಗಲೂ ಪ್ರಯತ್ನಿಸುತ್ತಾ ಬಂದಿದ್ದಾರೆ. ಇದನ್ನು ನಾವು ಈ ಗ್ರಂಥದಲ್ಲಿಯೂ ಕಾಣುತ್ತೇವೆ. ಇದು ಬಹು ಮಹತ್ವದ ಪ್ರಯತ್ನವಾಗಿರುತ್ತದೆ.

'ವೀರಶೈವ ದರ್ಶನ'ವೆಂಬುದು ಈ ಗ್ರಂಥದಲ್ಲಿ ಮೊದಲನೆಯ ಪ್ರಕರಣವಾಗಿದೆ. ಇದರಲ್ಲಿ ಉಪನ್ಯಾಸಕರು ಹಿಂದೂ ಧರ್ಮಗಳನ್ನು ಸಾಮಾನ್ಯವಾಗಿ ಚರ್ಚಿಸಿ, ವೀರಶೈವ ಧರ್ಮದ ಮುಖ್ಯ ತತ್ವಗಳನ್ನು ಸಂಕ್ಷಿಪ್ತವಾಗಿ ವಿವರಿಸಿದ್ದಾರೆ. ವೇದಾಂತಿಗಳು ಕೇವಲ ಜ್ಞಾನಕ್ಕೆ ಮಹತ್ವ ಕೊಟ್ಟಿದ್ದಾರೆ. ಅವರದು ಮಿಥ್ಯಾವಾದವು. ಆದ್ದರಿಂದ ಅದರಲ್ಲಿ ಭಕ್ತಿ ಕರ್ಮಗಳಿಗೆ ಅವಕಾಶವಿಲ್ಲ. ಆದ್ದರಿಂದ ಅದು ಸಾಮಾನ್ಯಜನರ ಧರ್ಮವಾಗಲಿಲ್ಲೆಂದು ಈ ಪ್ರಕರಣದಲ್ಲಿ ಅವರು ಹೇಳಿದ್ದು ನಿಜವು. ಇದರಿಂದ ಈ ಮಾರ್ಗವು ಜನತೆಯ ಸುಧಾರಣೆಗೆ ಕಾರಣವಾಗಲಿಲ್ಲ. ಇನ್ನೇ ಅಲ್ಲ, ದುರ್ಮಾರ್ಗಿಗಳು 'ಅಹಂಬ್ರಹ್ಮಾಸ್ಮಿ' ಎಂಬ ತತ್ವದ ವಿಪರ್ಯಾಸಮಾಡಿ ಅನೀತಿಯನ್ನು ಸಹ ಸಮಾಜದಲ್ಲಿ ಉಂಟು ಮಾಡಿದ್ದು ಕಂಡು ಬರುತ್ತದೆ.

ಆದರೆ ಮಹಾರಾಷ್ಟ್ರದಲ್ಲಿ ಉಗಮಿಸಿದ ಭಕ್ತಿಪಂಥಿಗಳು ಅದ್ವೈತ ಮತದಲ್ಲಿರುವ ಈ ದೋಷವನ್ನು ಕಳೆಯಲು ಪ್ರಯತ್ನಿಸಿ ಮುತ್ತೆ

ಭಕ್ತಿಯ ಘನತೆಯನ್ನು ಅವರು ಸಾರಿ ಅಸಂಖ್ಯ 'ಓವಿ'ಗಳನ್ನು ರಚಿಸಿದರು. ಆದರೆ ಇದರಿಂದ ಸಮಾಜದಲ್ಲಿ ನಿಷ್ಕ್ರಿಯ ಸ್ಥಿತಿಯು ಉಂಟಾಯಿತು. ಸುಧಾರಣೆ ಎಂಬುದು ನಿಷ್ಕ್ರಿಯವಾದುದಲ್ಲ. ಅದು ಕ್ರಿಯಾಪೂರ್ಣವಾದುದು. ಆದರೆ ಕ್ರಿಯೆಗೆ ಸರಿಯಾದ ಗುರಿ ಇರಬೇಕು. ಹೀಗಿದ್ದಾಗಲೇ ಸಮಾಜ ಸುಧಾರಣೆಯು ಶಕ್ಯವು. ಇದರಿಂದ ಭಕ್ತಿಪಂಥಿಗಳೂ ನಮ್ಮ ದೇಶದಲ್ಲಿ ಸುಧಾರಣೆಗೆ ಕಾರಣರಾಗಲಿಲ್ಲ. ಆದರೆ ಕರ್ನಾಟಕದ 'ವೀರ ಶಿವಶರಣರು ಕರ್ತವ್ಯ ಶಕ್ತಿಯ ಅನುಭವಗಂಡವರು' ಎಂದು ಶ್ರೀ. ಕುಮಾರ ಸ್ವಾಮಿಗಳು ವರ್ಣಿಸಿದ್ದಾರೆ. ಈ ವರ್ಣನೆಯನ್ನು ನಾವು ಪುರಸ್ಕರಿಸುತ್ತೇವೆ. ಇದು ವೀರಶೈವ ಮತದ ನಿಜವಾದ ತಿರುಳು. ಇದೇ ಅದರ ಮುಖ್ಯ ಗುರಿಯು. ಆದುದರಿಂದ ಶಿವಶರಣರಿಂದ ಲೋಕೋದ್ಧಾರವಾಯಿತು. ವಚನಕಾರರು 'ವಿಕಾಸಗೊಳ್ಳುವ ಮತ್ತು ಪರಿಸ್ಫುಟಗೊಳ್ಳುವ ಕ್ರಿಯಾ ಶಕ್ತಿಯ' ರೀತಿಯನ್ನು ವಿವರಿಸುತ್ತ ಅದನ್ನು ನಾನಾ ಮುಖವಾಗಿ ಜನತೆಯಲ್ಲಿ ಹರಿಯಿಸುತ್ತ ಪಂಡಿತ ಪಾಮರರೆಲ್ಲರಿಗೂ ಮಾರ್ಗದರ್ಶಿಗಳಾಗಿದ್ದಾರೆ.

ಈ ತತ್ವದ ಮೂಲಕ ಶಿವಶರಣರು ಆತ್ಮಶಕ್ತಿ ಪ್ರಕಟನೆಗೆ ಈ ಸೃಷ್ಟಿಯೇ ಸ್ಥಾನವೆಂದು ಬಗೆದು ಅದಕ್ಕನುಸಾರವಾಗಿ ತಮ್ಮ ದರ್ಶನವನ್ನು ಜನತೆಯಲ್ಲಿ ಪಸರಿಸಿದರೆಂದು ಶ್ರೀ ಕುಮಾರ ಸ್ವಾಮಿಗಳು ಈ ಪ್ರಕರಣದಲ್ಲಿ ಹೇಳಿದ್ದರಲ್ಲಿ ಯಥಾರ್ಥತೆ ಇದೆ. ಇಹ ಪರ, ಮರ್ತ್ಯ ಲೋಕ ದೇವಲೋಕ, ಎಂಬ ಇಬ್ಬಗೆಯ ವಿಚಾರಗಳು ಅವರಲ್ಲಿಲ್ಲ. ಇದರಿಂದ ವೀರಶೈವ ವಾಙ್ಮಯದಲ್ಲಿ ಸ್ವರ್ಗದ ಸುಖದ ಭೋಗಗಳ ಅಥವಾ ನರಕದ ಯಾತನೆಯ ವರ್ಣನೆಗಳು ಕಂಡು ಬರುವದಿಲ್ಲ. ವಚನಕಾರರು ಈ ಲೋಕದಲ್ಲಿಯೇ ಅನಂತ ಲೋಕಗಳಿವೆ. ಆಚಾರವೇ ಸ್ವರ್ಗ, ಅನಾಚಾರವೇ ನರಕ ಎಂದು ಪ್ರತಿಪಾದಿಸಿದ್ದಾರೆ. ಕೈಲಾಸವೆಂದರೆ ಒಂದು ಹಾಳು ಮೊರಡಿ ಎಂದು ಸಹ ಅದನ್ನು ವರ್ಣಿಸಿದ್ದಾರೆ. ಇಷ್ಟು ಸ್ಪಷ್ಟ ರೀತಿಯ ನುಡಿಗಳು ಬೇರೆ ವಾಙ್ಮಯದಲ್ಲಿ ದೊರೆಯುವದು ಬಹು ವಿರಳ.

ಲಿಂಗ ಪೂಜೆ ಎಂದರೆ 'ಸರ್ವತ್ರ ವ್ಯಾಪಿಸಿದ ಅನಿಷ್ಟ ನಿವಾರಣೆ' ಎಂದು ಶ್ರೀ ಸ್ವಾಮಿಗಳು ಈ ಪ್ರಕರಣಲ್ಲಿ ವಿವರಿಸಿದ್ದು ಅಕ್ಷರಶಃ ನಿಜವಿದೆ. ಇದೇ ಪ್ರಮಥರ ನಿಜವಾದ ತತ್ವವು. ಆದ್ದರಿಂದ ಈ ಅನಿಷ್ಟ

ನಿವಾರಣೆಗಾಗಿ ವೀರಶೈವನಾದವನು ತನ್ನನ್ನು ಸಂಪೂರ್ಣವಾಗಿ ಮರೆತು ಹೋರಾಡಬೇಕು. ಈ ಹೋರಾಟಕ್ಕೆ ತಕ್ಕ ವೀರ ಪ್ರವೃತ್ತಿಯೂ ಧೀರೋದಾತ್ತಗುಣಗಳೂ ಬೇಕೆಂದು ಶ್ರೀ ಸ್ವಾಮಿಗಳು ಹೇಳಿದ್ದು ನಿಜವಿದೆ. ಶಿವಶರಣರ ಚರಿತ್ರೆಗಳು ಭಾಗ ೧ ಇದರಲ್ಲಿಯ ಚರಿತ್ರೆಗಳನ್ನು ವಾಚಕರು ಸೂಕ್ಷ್ಮವಾಗಿ ಅವಲೋಕಿಸಿದಲ್ಲಿ ಅವುಗಳಲ್ಲಿ ಈ ಸಂಗತಿಯೇ ಪ್ರಕಟವಾಗುತ್ತದೆ. ಶಿವಶರಣರು ಸಮಾಜ ಸೇವಾ ಧುರಂಧರರೆಂದು ನಾವು ಈಗಿನ ಭಾಷೆಯಲ್ಲಿ ಹೇಳಬಹುದಾಗಿದೆ.

ವೇದಾಂತಿಗಳು, ಭಕ್ತಿ ಪಂಥಿಗಳು ಮತ್ತು ವೀರಶೈವರು ಇವರಲ್ಲಿರುವ ಮತವ್ಯತ್ಯಾಸಗಳನ್ನು ಶ್ರೀ ಸ್ವಾಮಿಗಳವರು ಇದರಲ್ಲಿ ನಿಚ್ಚಳವಾಗಿ ವಿವರಿಸಿದ್ದಾರೆ. ಅವರು ಹೇಳುವದೇನಂದರೆ ವೇದಾಂತಿಗಳಿಗೆ ಇಷ್ಟಾನಿಷ್ಟವೆಂಬ ಕಲ್ಪನೆ ಇಲ್ಲ. ಅವರ ದೃಷ್ಟಿಯಲ್ಲಿ ಜಗತ್ತಿನಲ್ಲಿ ಕಾಣುವ ಹೋರಾಟವೆಲ್ಲ ಹುಸಿ. ಇದರಿಂದ ಕಲ್ಪಕವೃತ್ತಿ ಕರ್ತೃತ್ವಶಕ್ತಿ ಇವುಗಳ ಲೋಪವು ಅವರಲ್ಲುಂಟಾಗಿದೆ. ಅದರಂತೆಯೇ ಭಕ್ತಿಪಂಥಿಗಳಲ್ಲಿಯೂ ದೋಷಗಳಿವೆ. ಇವರು ಎಲ್ಲರೂ ದೈವಾಧೀನವಾಗಿದೆಂದು ಬಗೆಯುತ್ತಾರೆ. ಇದರಿಂದ ಪುರುಷ ಪ್ರಯತ್ನಕ್ಕೆ ಅವರಲ್ಲಿ ಸ್ಥಾನವೇ ಇಲ್ಲ. ಅತ್ಯಂತ ದುರ್ಬಲತೆಯಿಂದ ದೇವರ ಅನುಗ್ರಹಕ್ಕೆ ಕೈಯ್ಯೊಡ್ಡಿ ಅವರು ನಿಲ್ಲುತ್ತಾರೆ. ಆದರೆ ಶಿವಶರಣರು ಹೀಗೆ ಕೈಯ್ಯೊಡ್ಡಿ ನಿಲ್ಲುವದಿಲ್ಲ. ಅವರು ಪರಮಾತ್ಮನಿಗೂ ಅಂಜುವದಿಲ್ಲ. ಪರಮಾತ್ಮನನ್ನು ಸಹ ಆಳು ಮಾಡಿ ಅವರು ದುಡಿಸಿದ್ದಾರೆ (ಮೊರನ ಮೇಮುಯ್ಯನ ಚರಿತ್ರೆಯನ್ನು ನೋಡಿರಿ.) ಇದು ವೀರಶೈವರ ಸತ್ಯಶುದ್ಧ ಕಾಯಕದ ಪರಿಣಾಮವಾಗಿದೆ.

ಈ ಎಲ್ಲ ವಿಚಾರಗಳನ್ನು ಶ್ರೀ. ಕುಮಾರ ಸ್ವಾಮಿಗಳು ಈ ಮೊದಲಿನ ಪ್ರಕರಣದಲ್ಲಿ ಪ್ರತಿಪಾದಿಸಿದ್ದಾರೆ. ಅವರು ಅದರಲ್ಲಿ ಶಕ್ತಿಯ ಮೂಲಕ ಆಗುವ ಪ್ರಗತಿಯನ್ನು ವಿವೇಚಿಸಿದ್ದಾರೆ. ಶಕ್ತಿಯಲ್ಲಿಯೇ ಲಿಂಗವು ಹುದುಗಿರುತ್ತದೆ. ಶ್ರೀ. ಕುಮಾರ ಸ್ವಾಮಿಗಳು ವಚನಕಾರರು ಹೇಗೆ ಲಿಂಗ ಶಬ್ದವನ್ನು ಉಪಯೋಗಿಸುತ್ತ ಶಕ್ತಿಯ ವಿಕಾಸವನ್ನು ಹೇಳುತ್ತಾರೋ ಹಾಗೆ ಲಿಂಗ ಶಬ್ದದಲ್ಲಿವರ ವಿವರಣೆಗಳನ್ನೂ ಅದರ ಅಂಗೋಪಾಂಗಗಳನ್ನೂ ಈ ಪ್ರಕರಣದಲ್ಲಿ ಹೇಳಿದ್ದರೆ, ಅದಕ್ಕೆ ಪೂರ್ಣತೆಯು ಬರುತ್ತಿತ್ತು. ಅದನ್ನು ಅವರು ಬೇರೊಂದು ಪ್ರಕರಣದಲ್ಲಿ

ವಿವೇಚಿಸಬಹುದಾಗಿದೆ. ಅವರು ತಮ್ಮ ಬರಹನ್ನು ಈಗಿನಕಿಂತಲೂ ಹೆಚ್ಚಿಗೆ ಹಗುರಾಗಿ ಮಾಡಿ, ಪಾಮರರಿಂಗೂ ತಿಳಿಯುವಂತೆ ಮಾಡುವ ಧ್ಯೇಯವನ್ನು ಇಟ್ಟುಕೊಳ್ಳಬೇಕೆಂದು ಅವರಿಗೆ ನಮ್ಮ ಸೂಚನೆ ಇದೆ. ಇದರಿಂದ ಅವರ ಲೇಖಗಳು ಹೆಚ್ಚಿಗೆ ಜನಪ್ರಿಯವಾಗುವವು. ಮುಂದಿನ ಪ್ರಕರಣಗಳನ್ನು ಯಥಾವಕಾಶವಾಗಿ ವಿಮರ್ಶಿಸುತ್ತ ಹೋಗುವೆವು.

ಕೈ. ವಾ. ಬಸಲಿಂಗಪ್ಪ ಘಟನಟ್ಟಿ ಮು. ಮಹಾಲಿಂಗಪುರ ಇವರ ನಿಧನವು.

ಮುಧೋಳ ಸಂಸ್ಥಾನ ಮಹಾಲಿಂಗಪುರದಲ್ಲಿಯ ಕೈ. ವಾ. ಬಸಲಿಂಗಪ್ಪ ಅಣ್ಣಾ ಘಟನಟ್ಟಿ ಇವರು ಲಿಂಗೈಕ್ಯರಾದದ್ದು ಅತ್ಯಂತ ಖೇದಕರವಾಗಿರುತ್ತದೆ. ಅವರು ಸಾರ್ವಜನಿಕ ಕಾರ್ಯಗಳಲ್ಲಿ ತತ್ಪರರೂ ಉದಾರ ಹೃದಯರೂ ಆಗಿದ್ದರು. ಇವರು ವ್ಯಾಪಾರೋದ್ಯೋಗಗಳಲ್ಲಿ ಮುಂದುವರಿದು ಮುಂಬಯಿಯಲ್ಲಿ ಒಂದು ಆಂಗಡಿಯನ್ನು ಸ್ಥಾಪಿಸಿದ್ದರು. ಆಗ ಅವರು ಅಲ್ಲಿಯ ಎಲ್ಲ ಸಾರ್ವಜನಿಕ ಕಾರ್ಯಗಳಲ್ಲಿ ಅತ್ಯಂತ ನಿಷ್ಠೆಯಿಂದ ಕಾರ್ಯ ಮಾಡಿದರು. ಅವರು ವೀರಶೈವ ಸಂಸ್ಕೃತಿಯ ಮಹತ್ವವನ್ನು ಚನ್ನಾಗಿ ಬಲ್ಲವರಾಗಿದ್ದರು. ಅವರು ಶಿವಾನುಭವ ಪತ್ರಿಕೆಗೆ ಅತ್ಯಂತ ಪ್ರೇಮವನ್ನು ವಹಿಸಿ ಅದರ ಆರಂಭ ಕಾಲದಲ್ಲಿಯೂ ಶಿವಾನುಭವ ಗ್ರಂಥ ಪ್ರಕಟನಾ ಕಾರ್ಯದಲ್ಲಿಯೂ ನೂರು, ನೂರು ರೂಪಾಯಿಗಳನ್ನು ನಮಗೆ ಕೊಟ್ಟು ಪ್ರೋತ್ಸಾಹಿಸಿದ್ದಾರೆ. ಇವರು ಪತ್ರಿಕೆಯ ಎಲ್ಲ ಕಾರ್ಯಗಳಲ್ಲಿ ನಮಗೆ ಯಾವಾಗಲೂ ಸಹಾಯಕರಾಗಿ ವರ್ತಿಸುತ್ತ ಬಂದಿದ್ದಾರೆ. ಪರಮಾತ್ಮನು ಇವರ ಆತ್ಮಕ್ಕೆ ಶಾಂತಿಯನ್ನೀಯಲೆಂದು ನಾವು ಅವನನ್ನು ಸ್ಮರಿಸುತ್ತೇವೆ.

ಶಿವಾನುಭವ ಪತ್ರಿಕೆಗೆ ಸಹಾಯ.

ಶ್ರೀ. ಮಠದ ಬಸಯ್ಯನವರು ಮು. ಪುಣಬಗಟ್ಟಿ ಜಿ॥ ಬಳ್ಳಾರಿ ಇವರು ಶಿವಾನುಭವ ಪತ್ರಿಕೆಗೆ ನಾಲ್ಕು ರೂಪಾಯಿಗಳನ್ನು ಕಾಣಿಕೆಯಾಗಿ ಕಳಿಸಿದ್ದಾರೆ. ಇವರು ಹೀಗೆಯೇ ಹಿಂದೆ ಎರಡುಸಲ ಶಿವಾನುಭವಕ್ಕೆ ಸಹಾಯವಮಾಡಿದ್ದಾರೆ. ಇದಕ್ಕೋಸ್ಕರ ನಾವು ಅವರಿಗೆ ಬಹಳ ಆಭಾರಿಯಾಗಿದ್ದೇವೆ.

ಸಂಪಾದಕ—ಶಿವಾನುಭವ.

ಇತ್ತ ಭದ್ರಗಾಯಕನು ದಿನಾಲು ಭಕ್ತರ ಮನೆಗೆ ಹೋಗಿ ಹಾಡಿ ಬರುತ್ತಿರಲು ಅವರು ಕೊಡುವ ಧನ ಧಾನ್ಯವು ಅವನಿಗೆ ಸಾಲದೆ ಹೋಯಿತು. ಆಗ ಅವನ ಹೆಂಡತಿಯು ಅವನಿಗೆ—ಒರಿವಂತರು ನಿನಗೆ ಹೊಟ್ಟೆರೆ ನೀನು ಒಲ್ಲೆನ್ನುತ್ತೀ. ನಿನ್ನ ಶಿವನು ನಿನಗೇನು ಕೊಡುವನು? ಎಂದೆನ್ನಲು ಅವನು ಶಿವನು ಕೊಟ್ಟಿದ್ದರಲ್ಲಿಯೇ ನಾನು ತೃಪ್ತನು ಎಂದು ಹೇಳಿದನು. ಹೀಗೆ ಭದ್ರಗಾಯಕನು ಆಚರಿಸುತ್ತ ದಿನಾಲು ಮುಂಜಾವಿನಲ್ಲೆದ್ದು ಶಿವಾಲಯಕ್ಕೆ ಹೋಗಿ ರಾಗವನ್ನು ಮಾಡಿ ಶಿವನನ್ನು ಪ್ರಾರ್ಥಿಸುವದನ್ನು ಎಷ್ಟು ಮಾತ್ರವೂ ಬಿಡುತ್ತಿದ್ದಿಲ್ಲ. ಆದರೆ ಇದರಿಂದ ಅವನ ಹೊಟ್ಟೆಗೆ ಸಾಲುವಷ್ಟು ಬರುತ್ತಿದ್ದಿಲ್ಲ. ಒಮ್ಮೊಮ್ಮೆ ಉಪವಾಸವಿರುವನು. ಆದ್ದರಿಂದ ಅವನ ಹೆಂಡತಿಯು ಒಂದು ದಿವಸ ಬಹಳ ಕೋಪಾವಿಷ್ಟಳಾಗಿ ತನ್ನ ಗಂಡನಿಗೆ—ನೀನು ದಿನಾಲು ಲಿಂಗದ ಗುಡಿಗೆ ಹೋಗಿ ರಾಗವನ್ನು ಮಾಡಿ ಬರುತ್ತೀ. ಆದರೆ ನೀನು ನುಂಗುವ ತುತ್ತಿಗೆ ಏನು ಗತಿ? ಎಂದು ಬಹು ಕಠೋರವಾಗಿ ನುಡಿದಳು. ಅದಕ್ಕೆ ಭದ್ರಗಾಯಕನು ಅತ್ಯಂತ ನೊಂದವನಾಗಿ ಶಿವಾಲಯಕ್ಕೆ ಬಂದು ಲಿಂಗದ ಮುಂದೆ ನಿಂತು ಗಾನವನ್ನು ಮಾಡಿ—ಪರಮಾತ್ಮನೇ, ಸತಿಯ ಬಾಧೆಯು ನನಗೆ ಬಹಳವಾಗಿದೆ. ನನಗೆ ಮುಂದೇನು ಗತಿ? ಎಂದು ಬಿನ್ನವಿಸಿಕೊಳ್ಳಲಾಗಿ, ಆ ಲಿಂಗದೊಳಗಿಂದ—ಎಲೋ ಭದ್ರಗಾಯಕನೇ, ನೀನು ಕೇರಳರಾಜನಾದ ಚಾರಮರಾಯನಲ್ಲಿಗೆ ಹೋಗು, ಅವನಿಂದ ನಿನಗೆ ಬೇಕಾದಷ್ಟು ದ್ರವ್ಯವನ್ನು ತೆಗೆದುಕೊಂಡು ಬಾ, ಎಂಬ ಶಬ್ದವಾಯಿತು. ಅಷ್ಟರಲ್ಲಿಯೇ ಅಲ್ಲಿಯೇ ಒಂದು ಓಲೆಯೂ ಮೇಲಿಂದ ಅವನ ಇದಿರಿಗೆ ಬಿದ್ದಿತು. ಭದ್ರಗಾಯಕನು ಅದನ್ನು ಎತ್ತಿ ಓದಿ ನೋಡಲಾಗಿ ಅದರಲ್ಲಿ ತನಗೆ ಹಣವನ್ನು ಕೊಡಬೇಕೆಂದು ಕೇರಳೇಶ್ವನಿಗೆ ಬರೆದುದನ್ನು ಕಂಡು ಅವನು ಅದನ್ನು ತೆಗೆದುಕೊಂಡು ಅರಸನ ರಾಜಧಾನಿಗೆ ಬಂದನು.

ಭದ್ರಗಾಯಕನು ರಾಜನನ್ನು ಕಂಡು, ಅವನಿಗೆ ಆ ಓಲೆಯನ್ನು ಸೇರಿಸಲಾಗಿ, ಅವನು ಅದನ್ನು ಓದಿ ನೋಡಿ—ನಾನು ನಿನಗೆ ನನ್ನ ಭಾಂಡಾರವನ್ನೆಲ್ಲ ತೆರೆದು ತೋರಿಸುವೆನು. ಅಲ್ಲಿಂದ ನಿನಗೆ ಬೇಕಾದಷ್ಟು ದ್ರವ್ಯವನ್ನು ತೆಗೆದುಕೊಂಡು ಹೋಗು ಎಂದು ಹೇಳಿ ತನ್ನ

ಚಾರನೊಡನೆ ಅವನನ್ನು ತನ್ನ ಭಾಂಡಾರದ ಗೃಹಕ್ಕೆ ಕಳಿಸಿದನು. ಭದ್ರಗಾಯಕನು ಅದನ್ನು ಪ್ರವೇಶಿಸಿ ಒಳಗೆ ನೋಡುತ್ತಾನೆಯೇ, ಅಲ್ಲಿ ಅಸಂಖ್ಯ ಮುತ್ತು ಮಾಣಿಕಗಳೂ ಚಿನ್ನದ ಒಡವೆಗಳೂ, ಬೆಳ್ಳಿ ಬಂಗಾರದ ನಾಣ್ಯಗಳೂ ಬಿದ್ದಿದ್ದವು. ಅಲ್ಲದೆ ಪಟ್ಟು ಪಟ್ಟಾವಳಿಗಳೂ ಅನಂತನಗಗಳೂ, ಹೊನ್ನಿನ ರಾಶಿಗಳೂ ಅಗಣಿತವಾಗಿ ಹರಿವಿದ್ದವು. ಅದೇ ಅವುಗಳ ನೆರೆಯಲ್ಲಿಯೇ ವಿಭೂತಿಗಳ ಒಂದು ಮೊಟ್ಟೆಯೂ ಬಿದ್ದಿದ್ದನ್ನು ಕಂಡನು. ಭದ್ರಗಾಯಕನು ಅದನ್ನು ಕಂಡ ಕೂಡಲೆ ದ್ರವ್ಯವನ್ನು ತೆಗೆದುಕೊಂಡು ಹೋಗಬೇಕೆಂಬ ಅವನ ಅಭಿಲಾಷೆಯು ಹೋರಟು ಹೋಗಿಬಿಟ್ಟಿತು. ಅವನು ತನ್ನೊಳಗೆ—ಈ ವಿಭೂತಿಯು ಭವರೋಗಕ್ಕೆ ಔಷಧವು, ಇದರ ಮುಂದೆ ಅವುದೂ ಅಲ್ಲ, ಎಂದು ಅಂದು ಅವನು ಇತರ ಧನಕನಕ ದ್ರವ್ಯಾದಿಗಳನ್ನು ಬಿಟ್ಟು ಕೊಟ್ಟು ಅತ್ಯಂತ ಸ್ಥೈರ್ಯದಿಂದ ಆ ವಿಭೂತಿಯ ಮೊಟ್ಟೆಯನ್ನೆತ್ತಿಕೊಂಡು ಬಂದು, ಇದಷ್ಟೇ ನನಗೆ ಸಾಕು ಎಂದು ಚಾರಮರಾಯನಿಗೆ ಹೇಳಿ ತನ್ನ ಗ್ರಾಮಕ್ಕೆ ಬಂದನು ಮತ್ತು ಅದನ್ನು ತನ್ನ ಹೆಂಡತಿಯ ಮುಂದೆ ಇಟ್ಟನು.

ಅವನ ಹೆಂಡತಿಯು ಆ ಮೊಟ್ಟೆಯಲ್ಲಿ ಬರೀ ವಿಭೂತಿಗಳೇ ಇರುವದನ್ನು ನೋಡಿ ಅತ್ಯಂತ ಕೆರಳಿದವಳಾಗಿ ತನ್ನ ಮೊಗವನ್ನು ತಿರುಹಿ—ಈ ಬೂದಿಯನೇಕೆ ತಂದೆ? ಎಂದು ನುಡಿಯಲು, ಭದ್ರಗಾಯಕನು - ಅಯ್ಯೋ, ಹೀಗೆನ್ನಬೇಡ. ವಿಭೂತಿಯು ಬಹು ಶ್ರೇಷ್ಠವಾದುದು ಎಂದು ಹೇಳಲು, ಅವಳು—ಇದೆಲ್ಲ ಸಟೆ, ಎಂದು ನುಡಿಯಲು, ಭದ್ರಗಾಯಕನು—ಹರ ಹರಾ, ಭಸ್ಮದ ಮಹಿಮೆ ಎಂದಾದರೂ ಸಟೆಯೇ? ಇದರಲ್ಲಿ ನೀನು ಕೈಯಿಕ್ಕಿ ನೋಡು ಎಂದು ಸತಿಗೆ ಅನ್ನಲು ಅವಳು ಆ ಮೊಟ್ಟೆಯೊಳಗೆ ಕೈಹಾಕಿ ನೋಡಲು ಅದರಲ್ಲಿ ಅವಳಿಗೆ ಮುತ್ತು ಚಿನ್ನ ಚಿನ್ನಾಭರಣಗಳೇ ಹತ್ತುತ್ತಿದ್ದವು. ಆಗ ಆ ಸತಿಯು—ನನ್ನಿಂದ ತಪ್ಪಾಯಿತು. ನಾನು ಇನ್ನು ಮುಂದೆ ಶಿವಭಕ್ತಿಯನ್ನೇ ಮಾಡುವೆನು ಎಂದು ಅಂದು ಪತಿಗೆರಗಿ ಹಾಗೆಯೇ ಅವಳು ಮುಂದೆ ನಡೆಯುವವಳಾದಳು.

ಈ ಪ್ರಕಾರ ಭದ್ರಗಾಯಕನು ಲಿಂಗಕ್ಕೆ ರಾಗವನ್ನು ಕೇಳಿಸುತ್ತ ಗಾಯನ ಕಾಯಕವನ್ನು ಮಾಡುತ್ತ ರಾಗದಲ್ಲಿಯೇ ಶಿವನೊಡೆವೆರೆದನು.

ಈ ಚರಿತ್ರೆಯಲ್ಲಿ ಗಾಯನವ ಮಹತ್ವವೆಷ್ಟಿದೆ, ಕಾಯಕವನ್ನು ಹೇಗೆ ಮತ್ತು ಯಾರಲ್ಲಿ ಮಾಡಬೇಕು, ದ್ರವ್ಯಲೋಭಿಯಾಗಬಾರದು, ಕಾಯಕದಲ್ಲಿ ಧನಕನಕಗಳ ಮಹತ್ವವಿಲ್ಲ, ಶಿವಭಕ್ತಿಯು ಮಹತ್ವವೇ ಅನಶ್ವರವಾದದ್ದು, ವಿಭೂತಿಯು ಮಹತ್ವವೆಷ್ಟಿದೆ ಇವೇ ಮೊದಲಾದ ವಿಷಯಗಳು ನಿರೂಪಿತವಾಗಿರುತ್ತವೆ.

ಬಸವೇಶ್ವರನು ಚಾರಮರಾಯನನ್ನು ತನ್ನ ವಚನಗಳಲ್ಲಿ ಬಹಳ ಕಡೆಗೆ ಹೊಗಳಿದ್ದಾನೆ. ಭದ್ರಗಾಯಕ, ನಂಬಿಯಣ್ಣ, ಗೊಗ್ಗವ್ವೆ ಇವರೆಲ್ಲರೂ ಚಾರಮರಾಯನಿಗೆ ಸಮಕಾಲೀನರು. ಆದುದ್ದರಿಂದ ಭದ್ರಗಾಯಕನು ಬಸವೇಶ್ವರನಕ್ಕಿಂತಲೂ ಹಿಂದಿನವನಾಗುತ್ತಾನೆ.

ಉಂಡು ಉಪವಾಸಿ ಮತ್ತು ಬಳಸಿ ಬ್ರಹ್ಮಚಾರಿಗಳು.

ಬಸವೇಶ್ವರನ ಕಾಲದಲ್ಲಿ ಕರ್ನಾಟಕದಲ್ಲಿ ಜೈನ ಧರ್ಮವು ಬಹು ಪ್ರಬಲವಾಗಿ ಅದರ ಸಂಸ್ಕೃತಿಯು ಜನತೆಯಲ್ಲಿ ಈಗಿನಗಿಂತಲೂ ಹೆಚ್ಚಾಗಿ ಪ್ರಸಾರ ಹೊಂದಿತ್ತು. ದೇಹವನ್ನು ಕ್ಲೇಶಪಡಿಸುವದೂ ಸಂಸಾರವನ್ನು ತ್ಯಜಿಸಿ ಏಕಾಂತವಾಸಿಯಾಗಿರುವದೂ ಅರಣ್ಯಗಳಲ್ಲಿ ಹೋಗಿ ಗುಹೆಗಳಲ್ಲಿ ವಾಸಮಾಡುವದೂ ದಿಗಂಬರಿಗಳಾಗಿರುವದೂ ಅವರಿಗೆ ವಾಡಿಕೆಯಾಗಿದ್ದವು. ಬ್ರಾಹ್ಮಣ ಸಂಸ್ಕೃತಿಯಲ್ಲಿಯೂ ಕೂಡ ಇದೇ ತರದ ವಿಚಾರಗಳು ಹೆಚ್ಚು ಕಡಿಮೆ ಪ್ರಮಾಣದಿಂದ ಇರುವದು ಕಂಡು ಬರುತ್ತದೆ. ಅವರಲ್ಲಿಯೂ ಕೂಡ ಅನೇಕರು ಸಂಸಾರವನ್ನು ತ್ಯಜಿಸಿ ಅರಣ್ಯಗಳಲ್ಲಿ ಇದ್ದುಕೊಂಡು ತಪಸ್ಸು ಮಾಡಿದ್ದಾರೆ. ಅವರು ವಾನಪ್ರಸ್ಥಾಶ್ರಮಿಗಳಾಗಿದ್ದಾರೆ. ಆದರೆ ಶಿವಾನುಭವದ ತತ್ವಗಳ ಪ್ರಕಾರ ಹೀಗೆ ದೇಹವನ್ನು ಕ್ಲೇಶಪಡಿಸುವದು ಅನಾವಶ್ಯಕವಿರುತ್ತದೆ. ವೀರಶೈವರು ಸಂಸಾರದಲ್ಲಿಯೇ ಇದ್ದುಕೊಂಡು ಲಿಂಗಭೋಗೋಪಭೋಗಿಗಳಾಗಿ ಲಿಂಗಾಂಗ ಸಾಮರಸ್ಯ ಸ್ಥಿತಿಯನ್ನು ಹೊಂದಬಹುದು. ಅದರಂತೆ ಆಚರಿಸಿದಲ್ಲಿ ಅವರು ಉಪವಾಸಾದಿ ವ್ರತಗಳನ್ನು ಪಾಲಿಸುವ ಅವಶ್ಯವಿಲ್ಲ. ವಿರಕ್ತರಾಗುವ ಅವಶ್ಯವೂ ಇಲ್ಲ. ಲಿಂಗಾಂಗದ ಈ ರೀತಿಯನ್ನು ತಿಳಿದ ಶಿವಶರಣರು ಹಿಂದಿನ ಕಾಲದಲ್ಲಿ ಅನೇಕ ಮಹಿಮೆಗಳನ್ನು ಮಾಡಿದ್ದು ಕಂಡು ಬರುತ್ತದೆ.

ಕರ್ನಾಟಕದಲ್ಲಿ ಕೆಲವೊಂದು ಪಟ್ಟಣದಲ್ಲಿ ಒಬ್ಬ ವಿರಕ್ತನು ಒಬ್ಬ ಭಕ್ತನೂ ವಾಸವಾಡಿಕೊಂಡಿದ್ದರು. ಉಭಯತರು ಶಿವಾನುಭವರ ಅರ್ಪಣ ಮತ್ತು ಪ್ರಸಾದದ ರೀತಿಯನ್ನು ತಿಳಿದು ಆದರಂತೆ ಆಚರಿಸುವವರಾಗಿದ್ದರು. ಆದ್ದರಿಂದ ಆ ವಿರಕ್ತನು ಉಂಡು ಉಪವಾಸಿ ಎಂತಲೂ ಆ ಭಕ್ತನು ಬಳಸಿ ಬ್ರಹ್ಮಚಾರಿ ಎಂತಲೂ ಪ್ರಸಿದ್ಧರಾದರು.

ಅವರು ಇದ್ದ ಪಟ್ಟಣವು ಒಂದು ನದೀ ತೀರದಲ್ಲಿ ಇತ್ತು. ಅದರ ಒಂದು ಭಡದಲ್ಲಿ ಬಳಸಿ ಬ್ರಹ್ಮಚಾರಿಯು ಒಂದು ಮನೆಯನ್ನು ಮಾಡಿಕೊಂಡು ತನ್ನ ಹೆಂಡತಿಯೊಡನೆ ಪ್ರಪಂಚ ಮಾಡಿಕೊಂಡಿದ್ದನು. ಅದರ ಇದಿರಿನ ದಂಡೆಯಲ್ಲಿ ಉಂಡು ಉಪವಾಸಿಯು ವಿರಕ್ತಾಶ್ರಮಿಯಾಗಿ ಒಂದು ಆಶ್ರಮವನ್ನು ಕಟ್ಟಿಕೊಂಡು ಲಗ್ನ ಮಾಡಿಕೊಳ್ಳದೆ ಶಿವಾನುಭವದ ಆಚರಣೆಯನ್ನು ಪಾಲಿಸುತ್ತ ವಾಸವಾಡಿಕೊಂಡಿದ್ದನು.

ಹೀಗಿರಲು ಒಂದು ದಿನ ಬಳಸಿ ಬ್ರಹ್ಮಚಾರಿಯ ಹೆಂಡತಿಯು ತನ್ನ ಗಂಡನಿಗೆ--ನೀವು ನನ್ನೊಡನೆ ಬಾಳ್ವೆ ಮಾಡುತ್ತಲಿದ್ದರೂ ನೀವು ಬ್ರಹ್ಮಚಾರಿಗಳೆಂದು ಜನರು ನಿಮ್ಮನ್ನು ಕರೆಯುತ್ತಾರೆ. ಇದು ಹೇಗೆ? ಎಂದು ಕೇಳಿದಳು. ಅದಕ್ಕೆ ಆ ಭಕ್ತನು ತನ್ನ ಹೆಂಡತಿಗೆ--ನಿನಗೆ ನನ್ನ ಆಚರಣೆಯ ಮಹಿಮೆಯನ್ನು ಪ್ರತ್ಯಕ್ಷ ಮಾಡಿ ತೋರಿಸುತ್ತೇನೆ. ನೀನು ಹೊಳೆಯ ಆಚೆಗೆ ಇರುವ ಉಂಡು ಉಪವಾಸಿ ವಿರಕ್ತನಿಗೆ ಎಡೆಯನ್ನು ತೆಗೆದುಕೊಂಡು ಹೋಗು, ದಾರಿಯಲ್ಲಿ ನದಿಯು ಕಟ್ಟಿದರೆ ಬಳಸಿ ಬ್ರಹ್ಮಚಾರಿಗಳು ದಾರಿಯ ಬಿಡಹೇಳಿದರು ಎಂದೆನ್ನು, ನದಿಯು ದಾರೀ ಬಿಟ್ಟದ್ದೇ ಆದರೆ ಆಗ ನೀನು ನನಗೆ ಬ್ರಹ್ಮಚಾರಿ ಎಂದೆನ್ನು ಎಂದು ಹೇಳಿದನು. ಹಾಗೆಯೇ ಆಗಲೆಂದು ಆಕೆಯು ಎಡೆತೆಗೆದುಕೊಂಡು ಹೋಗುತ್ತಿರಲು ಹೊಳೆಯು ಅಡ್ಡಗಟ್ಟಿ ಆವಳು ತನ್ನ ಗಂಡನು ಹೇಳಿದಂತೆ ಉಚ್ಚರಿಸಲಾಗಿ, ಹೊಳೆಯು ಇಬ್ಭಾಗವಾಗಿ ಆಕೆಗೆ ದಾರಿ ಬಿಟ್ಟಿತು. ಆಗ ಆಕೆಯು ತನ್ನ ಗಂಡನು ನಿಜವಾಗಿ ಬ್ರಹ್ಮಚಾರಿ ಎಂದು ತಿಳಿದುಕೊಂಡು ನದಿಯನ್ನು ದಾಟಿ ಹೋದಳು.

ಮುಂದೆ ಅವಳು ಉಪವಾಸಿ ದೇವರ ಆಶ್ರಮಕ್ಕೆ ಹೋಗಿ ತಾನು ತಂದ ಅಡಿಗೆಯನ್ನು ಅವರ ಮುಂದಿಟ್ಟು ಅದನ್ನು ಉಣ್ಣಾ ಹೇಳಿದಳು.

ಅವರಾದರೂ ಅದನ್ನು ಭೋಜನ ಮಾಡಿದ ಬಳಿಕ ಆ ಸತಿಯು ಅವರಿಗೆ--ನಾನು ತಂದ ಅಡಿಗೆಯನ್ನು ನೀವು ಭೋಜನ ಮಾಡಿದಿರಿ. ಆದರೂ ಜನರು ನಿಮಗೆ ಉಪವಾಸಿಗಳೆಂದು ಕರೆಯುತ್ತಾರೆ. ಇದು ಹೇಗೆನಲು ಅವರು ಅವಳಿಗೆ--ನೀನು ನಿನ್ನ ಮನೆಗೆ ತಿರುಗಿ ಹೋಗು, ದಾರಿಯಲ್ಲಿ ಹೊಳೆ ಕಟ್ಟಿದರೆ ನೀನು ಉಪವಾಸಿ ದೇವರು ದಾರಿಯ ಬಿಡಹೇಳಿದರೆನ್ನು, ಆಗ ನದಿಯು ದಾರಿ ಬಿಟ್ಟರೆ ನಾನು ಉಪವಾಸಿ ಎಂದು ತಿಳಿ ಎಂದು ಹೇಳಿದರು. ಹಾಗೆಯೇ ಆಗಲೆಂದು ಆ ಸತಿಯು ತಿರುಗಿಬರುವಾಗ ನದಿಯು ಇನ್ನೂ ದಾರೀ ಕಟ್ಟಿರಲು, ಉಪವಾಸಿ ದೇವರು ಹೇಳಿದಂತೆ ಆವಳು ಉಚ್ಚರಿಲು ನದಿಯು ಕೂಡಲೆ ದಾರೀ ಬಿಟ್ಟಿತು.

ಆಗ ಅವಳು ತನ್ನ ಗಂಡನನ್ನು ಕಂಡು, ಆದ ಸಂಗತಿಗಳನ್ನು ಅರುಹಿ ನಿಮ್ಮಿಬ್ಬರ ಮಹತ್ವವನ್ನು ನಾನು ಈ ದಿನ ಪ್ರತ್ಯಕ್ಷ ಕಂಡೆನು. ಇಂಥ ಅದ್ಭುತ ಶಕ್ತಿಯು ನಿಮಗೆ ಹೇಗೆ ಬಂದಿತು ಎಂದು ಕೇಳಲು ಬಳಸಿ ಬ್ರಹ್ಮಚಾರಿಯು ಶಿವಾನುಭವದ ಪ್ರಕಾರ ಲಿಂಗಾರ್ಪಣವೆಂದರೇನು, ಪ್ರಸಾದವೆಂದರೇನು, ಪ್ರಸಾದದಿಂದ ವಿಶ್ವದಲ್ಲಿ ಚಲಿಸುವ ಶಕ್ತಿಯನ್ನು ಹೇಗೆ ಅಂಕಿತ ಮಾಡಿಕೊಳ್ಳಬಹುದು, ಲಿಂಗ ಭೋಗೋಪಭೋಗಿಯಾಗಿರುವ ರೀತಿಯು ಯಾವುದು, ಅದರಂತೆ ಆಚರಿಸಿದಲ್ಲಿ ಉಪವಾಸಾದಿ ವ್ರತಗಳು ಹೇಗೆ ಅನಾವಶ್ಯಕವಾದವುಗಳು, ವಿವಾಹಾದಿಗಳು ವಿರಕ್ತಾಶ್ರಮಕ್ಕೆ ಹೇಗೆ ವಿರೋಧವಲ್ಲ, ಇವೇ ಮೊದಲಾದ ಸಂಗತಿಗಳನ್ನು ತಿಳಿಸಿ ಹೇಳಿದನು. ಆಗ ಆ ಸತಿಯು ಲಿಂಗಾಂಗ ಸಾಮರಸ್ಯದ ರೀತಿಯನ್ನು ತಿಳಿದು ಅದರಂತೆಯೇ ಮುಂದೆ ಆಚರಿಸುವವಳಾದಳು. ಉಂಡು ಉಪವಾಸಿ ಬಳಸಿ ಬ್ರಹ್ಮಚಾರಿಗಳು ತಮ್ಮ ಶಿವಾನುಭವದ ಆಚರಣೆಯಂತೆ ಆಚರಿಸುತ್ತ ಶಿವಶರಣರಲ್ಲಿ ಉಚ್ಚ ಸ್ಥಾನವನ್ನು ಪಡೆದರು. ಅವರ ನಡೆಯೂ ಹೆಸರುಗಳೂ ಲೋಕದಲ್ಲಿ ಪ್ರಸಿದ್ಧವಾದವು. ಅವರ ಹೆಸರುಗಳು ಶಿವಾನುಭವ ಶಾಸ್ತ್ರದಲ್ಲಿ ಯಾವಾಗಲೂ ಉಲ್ಲೇಖಿಸಲ್ಪಡುತ್ತ ಬಂದಿವೆ. ಚನ್ನಬಸವೇಶ್ವರ, ಅಲ್ಲಮಪ್ರಭು, ಮತ್ತು ಉರಿಲಿಂಗಪೆದ್ದಿಗಳು ಅವರ ನಡೆಯ ರೀತಿಯನ್ನು ತಮ್ಮ ವಚನಗಳಲ್ಲಿ ವಿವರವಾಗಿ ಹೇಳಿದ್ದಾರೆ. ಅದು ಹೇಗೆಂದರೆ--

(೧) ಬೇಕೆನಲಾಗದು ಶರಣಂಗೆ. ಬೇಡೆನಲಾಗದು ಶರಣಂಗೆ. ಬಂದ ಸುಖವನತಿಗಳೆಯಲಾಗದು ಶರಣಂಗೆ. ಇದು ಕಾರಣ ಕೂಡಲ

ಚನ್ನಸಂಗಯ್ಯ ನಿಮ್ಮ ಶರಣರು ಉಂಡು ಉಪವಾಸಿಗಳು, ಬಳಸಿ ಬ್ರಹ್ಮಚಾರಿಗಳು. (ಚನ್ನಬಸವ)

(೨) ಸತಿಯ ಕಂಡು ಬ್ರತಿಯಾದ ಬಸವಣ್ಣ. ಬ್ರತಿಯಾಗಿ ಬ್ರಹ್ಮಚಾರಿಯಾದ ಬಸವಣ್ಣ. ಬ್ರಹ್ಮಚಾರಿಯಾಗಿ ಭವಗೆಟ್ಟನಯ್ಯ ಬಸವಣ್ಣ. ಗುಹೇಶ್ವರಾ ನಿಮ್ಮಲ್ಲಿ ಬಾಲಬ್ರಹ್ಮಚಾರಿಯಾದಾತ ಬಸವಣ್ಣನೊಬ್ಬನೇ. (ಅಲ್ಲಮಪ್ರಭು)

(೩) ಹೊನ್ನ ಬಿಟ್ಟು, ಹೆಣ್ಣ ಬಿಟ್ಟು, ಮಣ್ಣ ಬಿಟ್ಟು, ಬ್ರಹ್ಮಚಾರಿಗಳಾಗಬೇಕೆಂದು ಬಣ್ಣವಿಟ್ಟು ನುಡಿವ ಅಣ್ಣಗಳ ಪರಿಯ ನೋಡಿರೋ. ಹೆಣ್ಣ ಬಿಟ್ಟಡೆಯೂ ಹೊನ್ನ ಬಿಡಿರಿ. ಹೊನ್ನ ಬಿಟ್ಟಡೆಯೂ ಮಣ್ಣ ಬಿಡಿರಿ. ಒಂದು ಬಿಟ್ಟಡೆಯೂ ಒಂದು ಬಿಡಿರಿ. ಬ್ರಹ್ಮಚಾರಿಗಳೆಂತಪ್ಪಿರಿ ಹೇಳಿರಣ್ಣಾ? ಹೆಣ್ಣ ಬಿಟ್ಟು ಬ್ರಹ್ಮಚಾರಿಗಳಾಗಬೇಕೆಂದು ಅವರೆಂತು ಹೇಳಿದರು? ನೀವೆಂತು ಕೇಳಿದಿರಿ? ಹೆಣ್ಣನು ಹೆಣ್ಣೆಂದರಿವಿರಿ. ಹೊನ್ನನು ಹೊನ್ನೆಂದರಿವಿರಿ. ಮಣ್ಣನು ಮಣ್ಣೆಂದರಿವಿರಿ. ಬ್ರಹ್ಮಚಾರಿಗಳೆಂತಪ್ಪಿರಣ್ಣಾ? ಬಿಟ್ಟಡೆ ಹೆಣ್ಣು, ಮಣ್ಣು, ಹೊನ್ನು ಈ ಮೂರನು ಬಿಟ್ಟು ಜ್ಞಾನದಲ್ಲಿ ಸುಳಿಯಬಲ್ಲಡೆ ಭವಂ ನಾಸ್ತಿ ತಪ್ಪದು. ಹಿಡಿದಡೆ ಹೆಣ್ಣು ಮಣ್ಣು ಹೊನ್ನು ಈ ಮೂರನು ಹಿಡಿದು ಸದ್ಭಕ್ತಿಯಿಂದ ದಾಸೋಹವ ಮಾಡಬಲ್ಲಡೆ ಭವಂ ನಾಸ್ತಿ ತಪ್ಪದು. ಅದೆಂತೆಂದೊಡೆ, ವೀರಾಗಮೆ-ಮಾತರಃ ಪಿತರಶ್ಚೈವಸ್ವಪತ್ನೀನಾಂ ಬಾಲಕಸ್ತಥಾ। ಹೇಮ ಭೂಮಿಶ್ಚ ನ ದುಃಖೀ ಬ್ರಹ್ಮಚಾರಿಣಾಂ ॥ ಎಂದುದಾಗಿ ಹೆಣ್ಣು, ಹೊನ್ನು, ಮಣ್ಣು ಈ ಮೂರನು ಹಿಡಿದು ಸದ್ಭಕ್ತಿಯಿಂದ ದಾಸೋಹವ ಮಾಡಬಲ್ಲಡೆ ಭವಂ ನಾಸ್ತಿ. ಅಲ್ಲಿ ಇದ್ದರೆಯೂ ನೀರ ತಾವರೆಯಂತಿಪ್ಪರು ಉರಿಲಿಂಗಪೆದ್ದಿ ಪ್ರಿಯ ವಿಶ್ವೇಶ್ವರಾ ನಿಮ್ಮ ಶರಣರು. (ಉರಿಲಿಂಗ ಪೆದ್ದಿ)

ಶಿವಶರಣರಾದ ಬಳಸಿ ಬ್ರಹ್ಮಚಾರಿ ಉಂಡು ಉಪವಾಸಿಗಳು ಆಚರಿಸಿದ ಈ ಶಿವಾನುಭವದ ತತ್ವಗಳು ವೀರಶೈವರ ಸಾಮಾಜಿಕ ನೀತಿಯಲ್ಲಿ ಮಹತ್ವದ ಬದಲಾವಣೆಗಳನ್ನು ಮಾಡಿವೆ. ಆದುದರಿಂದ ಅವರ ಚರಿತ್ರೆಗಳು ಮಹತ್ವವಾದವುಗಳಾಗಿವೆ.

ಅಗ್ಗವಣಿಯ ಹೊನ್ನಯ್ಯ ಮತ್ತ ಓಲೆಯ ಶಾಂತಯ್ಯಗಳು

ಅಗ್ಗವಣಿಯ ಹೊನ್ನಯ್ಯನು ವಿಜಾಪುರ ಜಿಲ್ಲೆಯಲ್ಲಿರುವ ತಾಳೀಕೋಟಿಯಿಂದ ಈಶಾನ್ಯ ದಿಕ್ಕಿಗೆ ೧೦ ಮೈಲುಗಳ ಮೇಲೆ ಕಲಬುರ್ಗಿ ಜಿಲ್ಲೆಯಲ್ಲಿರುವ ಅಗ್ನಿ ಎಂಬ ಗ್ರಾಮದವನು. ಮುದನೂರು ಅಲ್ಲಿಂದ ನಾಲ್ಕು ಮೈಲುಗಳ ಮೇಲೆ ಇದೆ. ಅದೇ ಗ್ರಾಮದಲ್ಲಿ ಓಲೆಯ ಶಾಂತಯ್ಯನೆಂಬ ಶಿವಶರಣನೂ ವಾಸಮಾಡಿಕೊಂಡಿದ್ದನು. ಅಗ್ಗವಣಿಯ ಹೊನ್ನಯ್ಯನು ಕಲ್ಯಾಣದಲ್ಲಿ ಬಸವೇಶ್ವರನ ದಾಸೋಹಕ್ಕೆ ಭೀಮಾನದಿಯ ಉದಕವನ್ನು ಕಂಬಿಯಿಂದ ಹೊತ್ತು ತಂದು ಅವನಿಗೆ ಮುಟ್ಟಿಸುವ ಕಾಯಕವನ್ನು ಕೈಕೊಂಡಿದ್ದನು. ಹೀಗಿರಲು ಒಂದು ದಿನ ಅವನು ಉದಕವನ್ನು ತರುವಾಗ ಮಾರ್ಗದಲ್ಲಿ ಮುಗ್ಗುರಿಸಿ ಬೀಳಲು ಅವನು ನೆಲಕ್ಕೆ ಬಿದ್ದರೂ ಕಾವಡಿಯು ನೆಲಕ್ಕೆ ಬೀಳದಂತೆ ಅಂತರದಲ್ಲಿ ಅದನ್ನು ಹಿಡಿದುಕೊಂಡಿದ್ದನು. ಆಗ ಅವನ ನಡುವು ಮುರಿಯಿತು. ಶಿವನು ಅದನ್ನು ನೋಡಿ ಅವನ ನಿಷ್ಠೆಗೆ ಮೆಚ್ಚಿ ಪ್ರತ್ಯಕ್ಷನಾಗಿ ನಿನಗೇನು ಬೇಕು, ಬೇಡು ಎಂದೆನ್ನಲು ಹೊನ್ನಯ್ಯನು--ನನಗೆ ಶರಣರ ಸಂಗವನ್ನು ಕೊಟ್ಟು ನನ್ನ ಪ್ರಾಣವಿರುವ ವರೆಗೆ ನನ್ನ ವ್ರತವನ್ನು ನಡೆಯಿಸುವಂತೆ ಮಾಡು ಎಂದು ಬೇಡಿಕೊಂಡನು. ಆಗ ಶಿವನು ಅವನು ಹೆಗಲ ಮೇಲೆ ಹೊರುವ ಕಂಬಿಯು ನಾಲ್ಕು ಬೆರಳು ಅಂತರದಲ್ಲಿ ನಿಲ್ಲುವಂತೆ ಕರುಣಿಸಿದನು. ಇದರಿಂದ ಅವನು ಏನೂ ಆಯಾಸವಿಲ್ಲದೆ ಭೀಮಾ ನದಿಯ ಉದಕವನ್ನು ಕಲ್ಯಾಣಕ್ಕೆ ತಂದು ಬಸವೇಶ್ವರನಿಗೆ ಒಪ್ಪಿಸಿದನು. ಈ ಪ್ರಕಾರ ಅವನು ತನ್ನ ಕಾಯಕವನ್ನು ನಡಿಸುತ್ತ ಅನೇಕ ವರ್ಷಗಳನ್ನು ಕಳೆದನು. ಇದರಿಂದ ಅವನು ಅಗ್ಗವಣಿಯ ಹೊನ್ನಯ್ಯನೆಂಬ ಹೆಸರಿನಿಂದ ಪ್ರಸಿದ್ಧವಾದನು.

ಹೀಗಿರುವಲ್ಲಿ ಇದೇ ಅಗ್ನಿ ಗ್ರಾಮದಲ್ಲಿ ವಾಸಿಸುತ್ತಿದ್ದ ಶಿವಶರಣನಾದ ಓಲೆಯ ಶಾಂತಯ್ಯನು ಓಲೆಯ ಗರಿಗಳನ್ನು ಸಂಗ್ರಹಿಸಿ ಅವುಗಳನ್ನು ಪೇಟಿಗಳಲ್ಲಿ ಬರಹಗಾರರಿಗೆ ವಿಕ್ರಯಿಸಿ ಬಂದ ಲಾಭದಿಂದ ತನ್ನ ದಾಸೋಹ ಕಾರ್ಯಗಳನ್ನು ನಡಿಸುತ್ತಾ ಇದ್ದನು. ಒಂದು ದಿನ ಅವನು ಅವುಗಳನ್ನು ಮಾರಲಿಕ್ಕೆ ಸಂತೆಗೆ ಹೋಗಿರುವಾಗ ಅವನು

ಭೀಮಾ ನದೀ ತೀರಕ್ಕೆ ಬಂದು ಅಲ್ಲಿ ತನ್ನ ಪಾದರಕ್ಷೆಗಳನ್ನು ಬೇರೆ ತೆಗೆದಿಡದೆ ತನ್ನ ಲಿಂಗಕ್ಕೆ ಮಜ್ಜನವನ್ನು ನೀಡಹತ್ತಿದನು. ಆಗ ಅಗ್ಗವಣಿಯ ಹೊನ್ನಯ್ಯನು ಅಲ್ಲಿಯೇ ಇದ್ದು ಅದನ್ನು ನೋಡಿ—ನೀನು ಹೀಗೆ ಕ್ರಿಯೆಯನ್ನುಲ್ಲಂಘಿಸಿ ಎಂದಾದರೂ ನಡೆಯಬಹುದೇ? ಎಂದು ತಿರಸ್ಕರಿಸಿ ನುಡಿದನು. ಹೀಗೆ ನುಡಿದ ಕೂಡಲೆ ಅಂತರದಲ್ಲಿದ್ದ ಅವನ ಉದಕದ ಕಾವಡಿಯು ಜಗ್ಗನೆ ಅವನ ಹೆಗಲ ಮೇಲೆ ಬಂದು ಕುಳಿತಿತು. ಆದರೂ ಅವನು ಆಯಾಸದಿಂದ ಅದನ್ನು ಹೊತ್ತುಕೊಂಡು ಕಲ್ಯಾಣದ ವರೆಗೆ ಬಂದು ಬಸವಣ್ಣನ ದಾಸೋಹದಲ್ಲಿ ಉದಕವನ್ನು ಸುರಿದು ಮನೆಗೆ ಬಂದು ವಿಶ್ರವಿಸಿ ಕೊಳ್ಳಹತ್ತಿದನು. ಆಗ ಅವನ ಸತಿಯು ಅದನ್ನು ಕಂಡು ಅವನಿಗೆ—ನೀವು ಇಂದಿನ ದಿನ ಬಹಳ ಬಸವಳಿದು ಬಂದಿರುವಿರಿ. ಇದೇನು ಕಾರಣ ಎಂದು ಕೇಳಲು ಅದಕ್ಕೆ ಅವನು ಒಬ್ಬ ಶರಣನು ತನ್ನ ಲಿಂಗಕ್ಕೆ ಮಜ್ಜನವನ್ನು ನೀಡುವಾಗ ಅವನು ಕೆರಹನ್ನು ಹೊತ್ತನೆಂದು ಸಂದೇಹವನ್ನು ನಾನು ಮಾಡಿದೆನು. ಅದು ನಿಮಿತ್ತದಿಂದ ಹೀಗಾಗಿರಬಹುದು ಎಂದೆನಲು, ಅವನ ಸತಿಯು— ಹಾಗೆಯೇ ಇರಬಹುದು, ನೀವು ಅವನಿಗೆ ಶರಣು ಹೊಕ್ಕು ನಿಮ್ಮ ಬಳಲಿಕೆಯನ್ನು ಪರಿಹರಿಸಿಕೊಂಡು ಬನ್ನಿರಿ, ಎಂದು ಹೇಳಿ ಕಳುಹಿಸಿದಳು. ಹೊನ್ನಯ್ಯನು ಅವನನ್ನು ಹುಡುಕಿಕೊಂಡು ಬರುವಾಗ ಪಟ್ಟಣದ ಸಂತೆಯಲ್ಲಿಯೇ ಆ ಶಾಂತಯ್ಯನು ಓಲೆಗಳನ್ನು ಮಾರುತ್ತ ನಿಂತಿದ್ದನ್ನು ಕಂಡು ಅವನ ಬಳಿಗೆ ಹೋಗಿ ಸಾಷ್ಟಾಂಗವೆರಗಿದನು. ಆಗ ಶಾಂತಯ್ಯನು ಇದೇಕೆಂದು ಕೇಳಲು ಹೊನ್ನಯ್ಯನು— ನಿಮ್ಮ ನಿಲುಕಡೆಯನ್ನು ತಿಳಿಯದೆ ನೀವು ಎಕ್ಕಡವನ್ನು ಮೆಟ್ಟಿಕೊಂಡು ಲಿಂಗಕ್ಕೆ ಮಜ್ಜನವನೆರೆಯಬಹುದೇ ಎಂದು ನಾನು ನಿಮ್ಮನ್ನು ದೂಷಿಸಿದೆನು. ಆಗಲೇ ನನ್ನ ಕಂಬಿಯು ಭಾರವಾಯಿತು ಎಂದು ಹೇಳಿ ನನ್ನ ಅಪರಾಧಕ್ಕೋಸ್ಕರ ನನ್ನನ್ನು ಕ್ಷಮಿಸಬೇಕು ಎಂದು ವಿನ್ನವಿಸಿಕೊಂಡನು. ಆಗ ಆ ಕಂಬಿಯು ಪುನಃ ಮೊದಲಿನಂತೆ ನಾಲ್ಕು ಬೆರಳು ಅಂತರದಲ್ಲಿ ಉಳಿಯಲು ಪ್ರಾರಂಭವಾಯಿತು. ಮತ್ತು ಹೊನ್ನಯ್ಯನು ಭೀಮಾ ನದಿಯಿಂದ ಉದಕವನ್ನು ನಿರಾಯಾಸವಾಗಿ ಹೊತ್ತು ತರುವ ಕಾಯಕವನ್ನು ನಡಿಸಿಕೊಂಡು ಬರಹತ್ತಿದನು. ಹೀಗೆ ಇವರಿಬ್ಬರೂ ತಮ್ಮ ತಮ್ಮ ಕಾಯಕಗಳನ್ನು ನಡಿಸುತ್ತ ಲಿಂಗಾಂಗ ಸಾಮರಸ್ಯಪದವನ್ನು ಹೊಂದಿದರು.

ಈ ಚರಿತ್ರೆಗಳಿಂದ ಕೇವಲ ಕರ್ಮತತನಕ್ಕಿಂತಲೂ ಭಕ್ತಿಯು ಮಹತ್ವವಾದದ್ದು ಮತ್ತು ಶಿವಶರಣರು ಪರಸ್ಪರ ಮಾತ್ಸರ್ಯವನ್ನು ತಾಳದೆ ತಮ್ಮ ತಮ್ಮ ಕಾಯಕಗಳನ್ನು ನಡಿಸುತ್ತಲಿರಬೇಕು ಎಂಬ ಸಂಗತಿಗಳು ಸಿದ್ಧವಾಗುತ್ತವೆ.

ಅಗ್ಗವಣಿ ಹೊನ್ನಯ್ಯ ಮತ್ತು ಓಲೆಯ ಶಾಂತಯ್ಯಗಳ ಹೆಸರುಗಳು ಗಣಸಹಸ್ರದಲ್ಲಿ ಬಂದಿರುತ್ತವೆ. ಆದ್ದರಿಂದ ಅವರು ಪುರಾತನರು. ಆದರೂ ಅವರು ಬಸವೇಶ್ವರನ ಕಾಲದವರು. ಬನವಾಸಿ ಮಧುಕೇಶ್ವರನ ದೇವಾಲಯದಲ್ಲಿ ಒಂದು ಕಲ್ಲು ಮಂಟಪವಿದ್ದು ಅದರ ಕೆಳಭಾಗದಲ್ಲಿ ಕೆಲವು ಶಿವಶರಣರ ಮೂರ್ತಿಗಳನ್ನು ಕಟ್ಟಿದು ಅವುಗಳ ಕೆಳಗೆ ಅವರವರ ಹೆಸರುಗಳನ್ನು ಕೊರೆದಿದ್ದಾರೆ. ಅವುಗಳಲ್ಲಿ ಅಗ್ಗವಣಿಯ ಹೊನ್ನಯ್ಯನ ಮೂರ್ತಿಯೂ ಇದೆ. ಅವನ ಹೆಸರಿನ ದೇವಾಲಯವು ಅಗ್ನಿ ಗ್ರಾಮದಲ್ಲಿ ಈಗಲೂ ಇದೆ. ಇದು ಈಗ ಪುಣ್ಯಸ್ಥಾನವೆಂದು ತಿಳಿಯಲ್ಪಟ್ಟಿದೆ.

ಸತ್ಯಕ್ಕ.

ಮೈಸೂರು ಸಂಸ್ಥಾನದಲ್ಲಿ ಶಿವಮೊಗ್ಗೆ ಜಿಲ್ಲೆಯಲ್ಲಿ ಶಿಕಾರಿಪುರದಿಂದ ೪ ಮೈಲು ದೂರವಾಗಿ ಹಿರೇಜಂಬೂರು ಎಂಬ ಗ್ರಾಮವಿದೆ. ಇದು ಬಸವೇಶ್ವರನ ಕಾಲದಲ್ಲಿ ಶಿವಶರಣರ ಆವಾಸಸ್ಥಾನವಾಗಿತ್ತು. ಈ ಗ್ರಾಮದಲ್ಲಿ ಸತ್ಯಕ್ಕನೆಂಬ ಶಿವಶರಣೆಯು ವಾಸವಾಗಿದ್ದಳು. ಅವಳು ಕೇವಲ ಶಿವಭಕ್ತೆಯಾಗಿ ಶಿವಭಕ್ತರ ಅಂಗಳವನ್ನು ಉಡಿಗಿ ಅವರ ಮನೆಯ ಸಮ್ಮಾರ್ಜನೆಯನ್ನು ಮಾಡುತ್ತ ಅವರು ಕೊಟ್ಟುದರ ಮೇಲೆ ಉಪಜೀವಿಸುತ್ತಿದ್ದಳು. ಇದೇ ಅವಳ ಕಾಯಕವಾಗಿತ್ತು. ಅವಳು ಶಿವಾನುಭವ ಜ್ಞಾನವನ್ನು ಹೊಂದಿ ಭಸ್ಮ ರುದ್ರಾಕ್ಷಿ ಶಿವ ಮಂತ್ರಸ್ಮರಣೆಯಿಂದ ತನ್ನ ಕಾಯಕವನ್ನು ನಿಶ್ಚಲ ಬುದ್ಧಿಯಿಂದ ಮಾಡುತ್ತ ಬರುವಳು. ಅವಳು ಶಿವನೊಬ್ಬನೇ ದೇವರೆಂದು ಭಾವಿಸಿ ಅನ್ಯ ಶಬ್ದಗಳನ್ನು ಕೇಳುತ್ತಿದ್ದಿಲ್ಲ. ಅನ್ಯ ದೇವತಾ ಪೂಜೆಯನ್ನು ಎಂದೂ ಮಾಡಳು. ಹೀಗಿರಲು ಒಂದು ದಿನ ಶಿವನು ಅವಳ ಮನ

ನ್ನನ್ನು ನೋಡಬೇಕೆಂದು ಅಪೇಕ್ಷಿಸಿ ಕಂಥೆ, ಕಮಂಡಲು, ದಂಡಕೋಲು ಗುಂಡುಗಪ್ಪರವೆರಿಸಿ ಭಿಕ್ಷುಕ ವೃತ್ತಿಯಿಂದ ಬಂದು ಸತ್ಯಕ್ಕನ ಮನೆಯ ಮುಂದೆ ನಿಂದಿರಲು ಸತ್ಯಕ್ಕನು ಹುಟ್ಟಿನಿಂದ ಭಿಕ್ಷವನ್ನು ತಂದು ನೀಡಲಾಗಿ ಆ ಜಂಗಮನ ಜೋಳಿಗೆಯು ಹರಿದದ್ದರಿಂದ ಅದರೊಳಗಿಂದ ಕಾಳುಗಳು ನೆಲಕ್ಕೆ ಬೀಳಹತ್ತಿದವು. ಅದಕ್ಕೆ ಆ ಜಂಗಮನು—ಅಯ್ಯೋ, ಕಾಳು ಹರಿದ ಹರಿಯಿಂದ ನೆಲಕ್ಕೆ ಬಿದ್ದಿತು, ಜೋಳಿಗೆಯಾಚೆಲಿ ಹರಿ, ಹರಿಯಿಂದೆ ಭಿಕ್ಷೆ ಸೂಸಿತ್ತು ಎಂದೆನಲು ಸತ್ಯಕ್ಕನು ಜಂಗಮನು ಬುದ್ಧಿಪೂರ್ವಕವಾಗಿ ಹೀಗೆ ಹರಿ ಶಬ್ದವನ್ನು ಉಚ್ಚರಿಸುತ್ತ ತನ್ನನ್ನು ನಿಂದಿಸಿ ನುಡಿದನೆಂದು ತಿಳಿದುಕೊಂಡು ಅತ್ಯಂತ ಕುಪಿತಳಾಗಿ ತನ್ನ ಕಯ್ಯಲ್ಲಿದ್ದ ಹುಟ್ಟಿನಿಂದ ಅವನನ್ನು ಒಳಿತಾಗಿ ಹೊಯ್ದಳು. ಆಗ ಅವನ ಹಲ್ಲುಗಳು ಮುರಿದು ಬಿದ್ದವು. ಅದರ ವೇದನೆಯಿಂದ ಅವನು ಮೊರೆ ಇಡುತ್ತ ಬೀದಿಯಲ್ಲಿ ಬಂದು ನಿಲ್ಲಲು ಊರ ಜನರು ನೆರೆದು ನೋಡುತ್ತಿರಲು ಆ ಜಂಗಮನು ಅವರಿಗೆ--ಸತ್ಯಕ್ಕನು ಸತ್ಕೆಯುಳ್ಳ ಭಕ್ತೆಯೆಂದು ನಾನು ಭಿಕ್ಷಕ್ಕೆ ಹೋದರೆ ಇವಳು ನನ್ನನ್ನು ಹೀಗೆ ಹಿಂಸೆ ಬಡಿಸಿದಳು ಎಂದು ಹೇಳಿದನು. ಅವರು ಸತ್ಯಕ್ಕನಿಗೆ--ಈ ರೀತಿ ಭಿಕ್ಷುಕನನ್ನು ನೀನು ಹೊಡೆಯಬಹುದೇ ಎಂದು ನುಡಿಯಲು, ಅವಳು—ಅನ್ಯ ಶಬ್ದವನ್ನು ಜಂಗಮನು ನುಡಿದದ್ದರಿಂದ ನಾನು ಹೀಗೆ ಹೊಡೆದೆನೆಂದು ಎನ್ನಲು, ಹೀಗೆ ನುಡಿದದ್ದೇನೆಂದು ಅವರ್ಷ್ಟ ಪ್ರಶ್ನಮೂರ್ತಿಯನ್ನು ಕೇಳಲಾಗಿ ಅವನು – ನನ್ನ ಜೋಳಿಗೆಯ ಹರಿದ ಹರಿಕಿನಲ್ಲಿ ಭಿಕ್ಷದ ಕಾಳು ಜಿಲ್ಲಿದವು ಎಂದು ನುಡಿದನು. ಹೀಗೆ ಅವನು ಮೊದಲಿನಂತೆಯೇ ಶಬ್ದವನ್ನು ಉಚ್ಚರಿಸಿದ್ದರಿಂದ ನೆರೆದ ಜನರು ನೋಡುವಂತೆಯೇ ಸತ್ಯಕ್ಕನು ಅವನನ್ನು ಭರದಿಂದ ಪುನಃ ಹೊಡೆದಳು. ಆಗ ಹರನು ಅಕೆಯ ಏಕದೇವ ನಿಷ್ಠೆಯ ಬಗ್ಗೆ ಇದ್ದ ಗಣಾಚಾರವನ್ನು ನೋಡಿ ಪ್ರೀತನಾಗಿ ತನ್ನ ರೂಪು ದೋರಿ - ಸತ್ಯಕ್ಕನೇ ನಾನು ನಿನಗೆ ಮೆಚ್ಚಿದೆನು. ನಿನಗೆ ಬೇಕಾದುದನ್ನು ಬೇಡು ಎನಲು ಸತ್ಯಕ್ಕನು - ಶಿವ ಶಿವಾ, ನನ್ನ ಹುಟ್ಟಿನಲ್ಲಿ ನಿನ್ನನ್ನು ಹೊಡೆದೆನು. ನೀನು ಸೊಂದೆ. ಆದ್ದರಿಂದ ನನ್ನನ್ನೇ ಭಿಕ್ಷೆಯನ್ನಾಗಿ ಮಾಡಿ ನಿನ್ನ ಕುಕ್ಷಿಯಲ್ಲಿಟ್ಟುಕೊಳ್ಳು ಎಂದು ಬೇಡಿಕೊಳ್ಳಲು ಪರಮಾತ್ಮನು ಹಾಗೆಯೇ ಆಗಲೆಂದು ಅವಳನ್ನು ತನ್ನ ಕುಕ್ಷಿಯಲ್ಲಿಟ್ಟುಕೊಂಡು ಅವಳಿಗೆ ನಿಜ

ಪದವನ್ನು ಕೊಟ್ಟನು. ಸತ್ಯಕ್ಕನ ಚರಿತ್ರೆಯಿಂದ ದೇವರು ಒಬ್ಬನೇ ಇದ್ದಾನೆ, ಅವನೊಬ್ಬನನ್ನೇ ಭಜಿಸಬೇಕು ಎಂಬ ಶಿವಾನುಭವದ ತತ್ವವು ಆ ಕಾಲದಲ್ಲಿ ಎಷ್ಟು ದೃಢಪಟ್ಟಿತ್ತೆಂಬುದು ಗೊತ್ತಾಗುತ್ತದೆ.

ಸತ್ಯಕ್ಕನು ವಚನಕಾರಳಿದ್ದಾಳೆ. ಅವಳ ವಚನಗಳನ್ನು ಅನೇಕ ಸಂಗ್ರಹಕಾರರು ತಮ್ಮ ಗ್ರಂಥಗಳಲ್ಲಿ ಉದಹರಿಸಿದ್ದಾರೆ. ಅಷ್ಟು ಅವು ಸುಂದರವೂ ಮೋಹಕವೂ ಆಗಿರುತ್ತವೆ. ನಮಗೆ ದೊರಿದ ೨೦ ವಚನಗಳನ್ನು ನಾವು ಶಿವಾನುಭವ ಗ್ರಂಥ ಮಾಲೆಯಲ್ಲಿ ಪ್ರಸಿದ್ಧಿಸಿದ್ದೇವೆ. ಅವಳ ಮುದ್ರಿಕೆಯು 'ಶಂಭು ಜಕ್ಕೇಶ್ವರಾ' ಎಂದಿದೆ.

ಅವಳು ತನ್ನ ವಿಚಾರಗಳನ್ನು ಸೊಗಸಾದ ಭಾಷೆಯಲ್ಲಿ ಸ್ವಾರಸ್ಯಪೂರ್ಣವಾಗಿ ನಿರೂಪಿಸಿದ್ದಾಳೆ. ಮಾದರಿಗಾಗಿ ಅವಳ ಕೆಲವು ವಚನಗಳನ್ನು ಇಲ್ಲಿ ಉದಹರಿಸುತ್ತೇವೆ.

ವಚನಗಳು

(೧) ಆದಿಯಲ್ಲಿ ದೇವಾ ನಿಮ್ಮನಾರು ಬಲ್ಲರು? ವೇದಂಗಳು ಮುನ್ನತ್ತಲರಿಯವು. ವೇದಿಗಳು ಪರಬ್ರಹ್ಮವೆಂಬರು. ನಾದ ಬಿಂದು ಕಳಾತೀತನೆಂದೆಂಬರು. ಸಾಧು ಸಜ್ಜನ ಭಕ್ತರಿಚ್ಛೆಗೆ ಬಂದೆಯಾಗಿ ಈಗೀಗ ದೇವನಾದೆ ಶಂಭುಜಕ್ಕೇಶ್ವರಾ.

(೨) ಏಕೆನ್ನ ಬಾರದ ಭವಂಗಳಲ್ಲಿ ಬರಿಸಿದೆ? ಏಕೆನ್ನ ಘೋರ ಸಂಸಾರದಲ್ಲಿರಿಸಿದೆ. ಏಕೆನಗೆ ಕರುಣಿಸಲೊಲ್ಲದೆ ಕಾಡಿಹೆ ಹೇಳಾ, ಹೇಳಾ ಎಲೆ ಲಿಂಗವೇ? ಆನು ಮಾಡಿದ ತಪ್ಪೇನು? ಸಾಕಲಾದುದೆಂದು ಒತ್ತಿ ನುಡಿದಡೆ ಏಕೆ ನಾ ನಿಮ್ಮ ಬಿಡುವೆ ಶಂಭು ಜಕ್ಕೇಶ್ವರಾ?

(೩) ದೇವನೊಳ್ಳಿದನೆಂದು ಮುಯ್ಯೆನಲು ಬೇಡ. ಕರಕಟ ಕಾಡುವನೊಳ್ಳಿದನೇ? ಅಳಿಸುವ ನಗಿಸುವ ನೊಳ್ಳಿದನೇ? ಬೆದರದೆ ಬೆಚ್ಚದೆ ತೊತ್ತುತನವ ಮಾಡಲು ತನ್ನ ನೀವ ಶಂಭು ಜಕ್ಕೇಶ್ವರಾ.

ಶರಣನು ಪರಮಾತ್ಮನಿಗೆ ತನ್ನನ್ನು ಅರ್ಪಿಸಿ ಕಾರ್ಯ ಮಾಡಬೇಕೇ ಹೊರತು ವಿಧಿವಶನಾಗಿ ಕಾರ್ಯ ಮಾಡಕೂಡದೆಂದು ಶಿವಾ

'ದೇವಿಯರ ತ್ರಿವಿಧಿ' ಎಂಬ ಗ್ರಂಥದಲ್ಲಿ ಈಕೆಯ ಉಲ್ಲೇಖವಿದೆ. ಅದು ಹೇಗೆಂದರೆ—

ಹರನು ಚರರೂಪಿಂದೆ। ಹರಿ ಎಂಬ ನುಡಿವೇಳೆ
ಕರದ ಹುಟ್ಟಿಂದೆ ತಿವಿದೀಶನೊಲಿಸಿದ
ಗುರುವೆ ಸತ್ಯಕ್ಕ ಶರಣಾಗು.

ಹಿರಿಯ ಜಂಬೂರು ಗ್ರಾಮದಲ್ಲಿ ಸತ್ಯಕ್ಕನ ಪ್ರತಿಮೆಯು ಆಕೆಯು ಹುಟ್ಟುಸಹಿತವಾಗಿ ಈಗಲೂ ಇರುತ್ತದೆ. ಹೀಗೆ ಇರುವ ದೇವಾಲಯಕ್ಕೆ 'ಸತ್ಯಕ್ಕನ ಗುಡಿ' ಎಂದು ಅಲ್ಲಿಯ ಜನರು ಕರೆಯುತ್ತಾರೆ. ಗಣಸಹಸ್ರದಲ್ಲಿ ಈಕೆಯ ಹೆಸರಿದೆ.

ಅವಳು ತನ್ನ ವಚನಗಳಲ್ಲಿ ದೇವರ ದಾಸಿಮಯ್ಯ, ಚನ್ನಯ್ಯ, ನಂಬಿಯಕ್ಕ, ಮುಕ್ತಾಯಕ್ಕ ಇವರನ್ನು ಸ್ಮರಿಸಿದ್ದಾಳೆ. ಇವರಲ್ಲಿ ಮೊದಲನೆಯ ಮೂವರು ಬಸವೇಶ್ವರನಕಿಂತಲೂ ಹಿಂದಿನವರು. ಅವರನ್ನು ಬಸವೇಶ್ವರನು ತನ್ನ ವಚನಗಳಲ್ಲಿ ಅನೇಕ ಕಡೆಗೆ ಸ್ಮರಿಸಿದ್ದಾನೆ. ಮುಕ್ತಾಯಕ್ಕನು ಅಲ್ಲಮಪ್ರಭುವಿನ ಸಮಕಾಲೀನಳು. ಅವಳು ಬಸವೇಶ್ವರನಕಿಂತಲೂ ಸ್ವಲ್ಪ ಹಿರಿಯಳಾಗಿರಬೇಕು. ಈ ಸಂಗತಿಗಳಿಂದಲೂ ಸತ್ಯಕ್ಕನು ಬಸವೇಶ್ವರನನ್ನು ತನ್ನ ವಚನಗಳಲ್ಲಿ ಸ್ಮರಿಸದೆ ಇರುವದರಿಂದಲೂ ಅವಳ ಚರಿತ್ರೆಯಲ್ಲಿ ಅವಳು ಕಲ್ಯಾಣಕ್ಕೆ ಹೋಗಿದ್ದರ ಉಲ್ಲೇಖವಿರದ್ದರಿಂದಲೂ ಅವಳು ಬಸವೇಶ್ವರನಕಿಂತಲೂ ಸ್ವಲ್ಪ ಹಿಂದಿನವಳಾಗಿರಬೇಕೆಂದು ತೋರುತ್ತದೆ.

ಕೇಶಿರಾಜ

ವಿಜಾಪುರ ಜಿಲ್ಲೆಯಲ್ಲಿ ಒಂದುತಾಲೂಕು ಸ್ಥಳವಾದ ಸಿಂದಗಿಗ್ರಾಮದ ಈಶಾನ್ಯೆಯ ದಿಕ್ಕಿಗೆ ೧೦ ಮೈಲಿನ ಮೇಲೆ ಗುಲಬುರ್ಗಾ ಜಿಲ್ಲೆಯಲ್ಲಿ ಕೊಂಡಗುಳಿ ಎಂಬ ಗ್ರಾಮವಿದೆ. ಅಲ್ಲಿ ಕೇಶಿರಾಜನೆಂಬ ಸದ್ಭಕ್ತನು ವಾಸಮಾಡುತ್ತಿದ್ದನು. ಅವನ ಹೆಂಡತಿಯ ಹೆಸರು ಗಂಗಾದೇವಿಯು, ಗುರುವು ವಿರೂಪಾಕ್ಷನು, ಇಷ್ಟದೇವತೆಯು ಸೋಮನಾಥನು. ಅವನು ಅತ್ಯಂತ ಬುದ್ಧಿವಂತನೂ ಲಿಂಗಪೂಜಾರತನೂ ಕವಿಯೂ ಆಗಿದ್ದನು.

ನುಭವದ ತತ್ವವಿದೆ. ಇದರಿಂದ ಪೂರ್ವಾರ್ಜಿತವೂ ಭವ ಮಾಲೆಯೂ ತಪ್ಪುವವು. ಈ ವಿಚಾರಗಳನ್ನು ಕುರಿತು ಸತ್ಯಕ್ಕನು ಹೇಳಿದುದೇನಂದರೆ—

(೪) ಶಿವಶರಣೆಂದು ಪೂರ್ವಾರ್ಜಿತವನುಂಡರೆ ಭಂಗ. ಹರಶರಣೆಂದು ಭವಮಾಲೆಗೊಳಗಾದರೆ ಭಂಗ. ಹರವಶವೆನಿಸಿ ವಿಧಿವಶವೆನಿಸಿದರೆ ಅದು ನಿಮ್ಮ ಭಂಗ ಕಾಣಾ ಶಂಭು ಜಕ್ಕೇಶ್ವರ ದೇವ.

ಸ್ತ್ರೀಪುರುಷರು ಸಮಾನರೆಂದು ಸತ್ಯಕ್ಕನು ಕೆಳಗಿನ ವಚನದಲ್ಲಿ ಹೇಳಿದ್ದಾಳೆ. ಸ್ತ್ರೀಯಳಿಗೆ ಮೊಲೆ ಮುಡಿ ಇದ್ದ ಮಾತ್ರಕ್ಕೆ ಅವಳು ಕಡಿಮೆಯವಳಲ್ಲ. ಗಂಡಸು ಕಾಸೆ, ಮೀಸೆ, ಕತ್ತಾರಿ ಹಿಡಿದ ಮಾತ್ರಕ್ಕೆ ಹೆಚ್ಚಿನವನಾಗುವದಿಲ್ಲ. ಆದರೆ ಹೇಗೆ ಮಾಧುರ್ಯದಿಂದ ಹಣ್ಣು, ಸುವಾಸನೆಯಿಂದ ಹೂವು ಜನರಿಗೆ ಪ್ರಿಯಕರವಾಗುತ್ತವೋ ಹಾಗೆ ಸ್ತ್ರೀಪುರುಷರಲ್ಲಿಯ ಸದ್ಗುಣಗಳ ಮೂಲಕ ಅವರ ಶ್ರೇಷ್ಠತೆಯು ಆವಲಂಬಿಸಿರುತ್ತದೆಂಬ ಭಾವವು ಕೆಳಗಿನ ವಚನದಲ್ಲಿ ಬಂದಿದೆ.

(೫) ಮೊಲೆಮುಡಿ ಇದ್ದುದೇ ಹೆಣ್ಣೆಂದು ಪ್ರಮಾಣಿಸಲಿಲ್ಲ. ಕಾಸೆ, ಮೀಸೆ, ಕತ್ತಾರಿ ಇದ್ದುದೇ ಗಂಡೆಂದು ಪ್ರಮಾಣಿಸಲಿಲ್ಲ. ಅದು ಜಗದ ಹೋಹು. ಬಲ್ಲವರ ನೀತಿಯಲ್ಲ. ಎತರ ಹಣ್ಣಾದಡೂ ಮಧುರವೇ ಕಾರಣ. ಚಂದವಿಲ್ಲದ ಕುಸುಮಕ್ಕೆಯೂ ವಾಸನೆಯೇ ಕಾರಣ. ಇದರಂದವ ನೀನೇ ಬಲ್ಲೆ ಶಂಭುಜಕ್ಕೇಶ್ವರಾ.

ಸತಿಪತಿ ಭಾವದ ಕೆಳಗಿನ ವಚನದಲ್ಲಿ ಸತ್ಯಕ್ಕನು ತನ್ನಲ್ಲಿರುವ ಭಕ್ತಿ ಭಾವವನ್ನು ವ್ಯಕ್ತಪಡಿಸಿದ್ದಾಳೆ.

(೬) ಭಾವನೇಕೆ ಬಾರನೆನ್ನ ಮನೆಗೆ? ಹರಿಯ ಮಗನನುರುಹಿದ ಗರ್ವದ ಭಾವನೇಕೆ ಬಾರನೆನ್ನ ಮನೆಗೆ? ಅಸುರರ ಪುರವ ಸುಟ್ಟ ವೀರ ಭಾವನೇಕೆ ಬಾರನೆನ್ನ ಮನೆಗೆ? ದಕ್ಷನ ಶಿರವನರಿದು ಯಾಗವ ಕೆಡಿಸಿ ಕುರಿದಲೆಯ ಹತ್ತಿಸಿ ಬಿನ್ನಾಣದ ಬಲುಹ ಮೆರೆದ ಏಕೋಭಾವನೇಕೆ ಬಾರನೆನ್ನ ಮನೆಗೆ? ಹರಿಯ ನಯನದ ಪೂಜೆ ಚರಣದಲೊಪ್ಪಿತ್ತೆಂಬ ದುರುಳತನವು ತನಗೆ ಬೇಡವ್ವಾ. ಪರವಧು ವಿಂಗಳುಪಿದ ವಿಗಡತನದ ದುರುಳುತನ ಬೇಡವ್ವಾ. ಆತನ ಕರೆದು ತಾರವ್ವಾ. ಶಂಭುಜಕ್ಕೇಶ್ವರನ ನೆರೆದು ನೋಡುವೆನು.

ಅವನು ಕಂದ ತ್ರಿವಿದಿ ರಗಳೆ ವಚನ ಪದಪದ್ಯ ದಂಡಕ ಅಷ್ಟಕ ಇವು ಮೊದಲಾದ ರಚನೆಗಳಿಂದ ಪದಗಳನ್ನು ದಿನಾಲು ಹೊಸತಾಗಿ ಮಾಡುತ್ತ ಪರಮಾತ್ಮನಿಗೆ ಅವುಗಳನ್ನು ಅರ್ಪಿಸಿ ಭಜಿಸುವನು. ಅವನು ಅಲ ಶ್ಲೋಕಗಳಿಂದ ಷಡಕ್ಷರಿಯ ಮಂತ್ರದ ಮಹಿಮೆಯನ್ನು ಹೊಗಳಿದ್ದಾನೆ. ಈ ಪ್ರಕಾರ ಕೇಶಿರಾಜನು ಪುರಾತನ ಶಿವಶರಣರಲ್ಲಿ ವಿದ್ವಾಂಸನೂ ಬುದ್ಧಿವಂತನೂ ಕವಿಯೂ ಎಂದು ಪ್ರಸಿದ್ಧನಾಗಿದ್ದಾನೆ.

ಅವನು ಮೊದಲು ಸ್ವಗ್ರಾಮವಾದ ಕೊಂಡಗುಳಿಯಲ್ಲಿದ್ದು ಆ ಮೇಲೆ ಅವನು ಕಲ್ಯಾಣ ಪಟ್ಟಣದ ದಕ್ಷಿಣಕ್ಕೆ ೮ ಮೈಲು ದೂರವಿರುವ ಮಂಗಳೂರು ಎಂಬ ಗ್ರಾಮಕ್ಕೆ ಬಂದು ಅಲ್ಲಿಯೂ ಎಂದಿನಂತೆ ಶಿವ ಪೂಜೆಯಲ್ಲಿ ತತ್ಪರನಾಗಿ ವಾಸಮಾಡಹತ್ತಿದನು.

ಅಲ್ಲಿ ಕೆಲವು ಕಾಲ ಕಳೆದ ನಂತರ ಅವನು ಕಲ್ಯಾಣಕ್ಕೆ ಸಮೀಪವಿರುವ ಶಿವಪುರಕ್ಕೆ ಬಂದು ಅಲ್ಲಿ ಲಿಂಗಾರ್ಚನೆ ಜಂಗಮ ದಾಸೋಹವನ್ನು ಮಾಡುತ್ತ ಒಬ್ಬ ಶ್ರೇಷ್ಠ ಶಿವಾನುಭವಿ ಎಂದು ಜನರಲ್ಲಿ ಪ್ರಸಿದ್ಧನಾದನು.

ಕೇಶಿರಾಜನಿದ್ದ ಈ ಕಾಲದಲ್ಲಿ ಕಲ್ಯಾಣಪಟ್ಟಣದಲ್ಲಿ ಪೇರ್ಮಾಡಿದೇವನೆಂಬ ಅರಸನು ರಾಜ್ಯವಾಳುತ್ತಿದ್ದನು. ಅವನು ತನಗಿದ್ದ ಮಂತ್ರಿಗಳು ಸರಿಯಾದವರಿಲ್ಲ, ಮಂತ್ರಿಪದದಲ್ಲಿದ್ದು ರಾಜ್ಯಭಾರವನ್ನು ಚನ್ನಾಗಿ ನಡಿಸಬಲ್ಲ ಬುದ್ಧಿವಂತರೊಬ್ಬರು ತನ್ನ ರಾಜ್ಯದಲ್ಲಿ ಯಾರಾದರೂ ಇರುವರೋ ಹೇಗೆಂಬುದನ್ನು ತನ್ನನ್ನು ಕಾಣಲಿಕ್ಕೆ ಬಂದ ಆಗ್ರಹಾರಗಳ ವಿಪ್ರರನ್ನು ಯಾವಾಗಲೂ ವಿಚಾರಿಸುತ್ತಿದ್ದನು. ಹೀಗಿರುವಲ್ಲಿ ಕೊಂಡಗುಳಿಯ ಮಹಾಜನರು ಕೇಶಿರಾಜನೆಂಬುವನು ಸರ್ವಜ್ಞನೂ ಸಜ್ಜನನೂ ನಿಯತಾಚಾರಿಯೂ ಇದ್ದು ಅವನು ತಮ್ಮ ಗ್ರಾಮದವನೆಂದು ತಿಳಿಸಲು ಪೇರ್ಮಾಡಿದೇವನು ಅವನಿದ್ದ ಶಿವಪುರಕ್ಕೆ ಚಾರರನ್ನು ಕಳಿಸಿ ಅವನನ್ನು ಕಲ್ಯಾಣಕ್ಕೆ ಬರಮಾಡಿಕೊಂಡು ಅವನಿಗೆ ಹಿರಿಯ ಪ್ರಧಾನಿಕೆಯ ಪಟ್ಟವನ್ನು ಕೊಟ್ಟನು ಮತ್ತು ಅವನಿಗೆ 'ಕೇಶಿರಾಜ ದಣ್ಣಾಯಕರೆಂ'ಬ ಬಿರುದನ್ನು ಕೊಟ್ಟನು.

ಕೇಶಿರಾಜನು ಅತ್ಯಂತ ಬುದ್ಧಿವಂತನು. ಆದ್ದರಿಂದ ಅವನು ರಾಜಕಾರಣದ ನಿಯೋಗವನ್ನು ತೃಪ್ತಿಕರವಾಗಿ ಸಾಗಿಸುತ್ತ ಬಂದನು. ಅರ

ಸನು ಯಾವಾಗಲೂ ಅವನ ಸಲಹೆಯನ್ನು ಕೇಳುವನು. ಕೇಶಿರಾಜನು ಶಿವಾನುಭವಿಯಾದ್ದರಿಂದ ಶಿವಾನುಭವದ ತತ್ವಗಳನ್ನು ರಾಜ್ಯದಲ್ಲಿ ಪ್ರಸಾರಗೊಳಿಸಹತ್ತಿದನು. ಪರವಾದಿಗಳನ್ನು ಅವನು ವಾದದಲ್ಲಿ ಗೆಲಿದು ಬೇರೊಬ್ಬನೇ ಇದ್ದಾನೆಂಬ ತತ್ವವನ್ನು ನಿರೂಪಿಸಹತ್ತಿದನು. ಲಿಂಗಜಂಗಮಾರ್ಚನೆಗಳನ್ನು ರಾಜ್ಯದಲ್ಲಿ ಹೆಚ್ಚಿಸಿದನು. ಶರಣರಿಗೆ ಮನ್ನಣೆಯನ್ನಿತ್ತು ಶಿವಗೋಷ್ಠಿಯಲ್ಲಿಯೂ ಪುರಾತನರ ಗೀತೆಗಳಲ್ಲಿಯೂ ತಲ್ಲೀನನಾಗಿರುವನು. ಶಿವನ ಪದ್ಯಗಳನ್ನೋದಿ ಅವುಗಳಲ್ಲಿ ಬೀಗಿ ಬೆರೆಯುವನು. ಇದರಿಂದ ರಾಜ್ಯದಲ್ಲಿಯ ಶಿವಭಕ್ತರು ಅತ್ಯಂತ ಹಿಗ್ಗಿದರು. ಆದರೆ ವಿಪ್ರರು ಮಾತ್ರ ಅವನ ವಿಷಯವಾಗಿ ಮತ್ಸರ ಬುದ್ಧಿಯುಳ್ಳವರಾಗಿ ಅವನನ್ನು ಪ್ರಧಾನಿ ಪಟ್ಟದಿಂದ ಹೇಗಾದರೂ ಮಾಡಿ ತಳ್ಳಿ ಹಾಕಬೇಕೆಂಬ ಹಂಚಿಕೆಯನ್ನು ಹಾಕಹತ್ತಿದರು.

ಒಂದು ದಿವಸ ಆವಿಪ್ರರೆಲ್ಲರೂ ಕೂಡಿಕೊಂಡು ಪೆರ್ಮಾಡಿರಾಯನನ್ನು ಕಂಡು—ನಿಮ್ಮ ದಣ್ಣಾಯಕನು ವಿಷ್ಣು ನಿಂದಕನು. ಅವನಿಗೆ ನೀವು ಪ್ರಧಾನ ಪಟ್ಟವನ್ನು ಕೊಟ್ಟಿದ್ದೀರಿ. ಆಚಾಗಲಿ, ಆದರೆ ಅವನು ನಿಮ್ಮನ್ನು ಸಹ ಬಗೆಯುವದಿಲ್ಲ. ನಿಮಗೆ ಎಂದೂ ನಮಸ್ಕರಿಸುವದಿಲ್ಲ. ಒಂದು ವೇಳೆ ನಮಸ್ಕರಿಸಿದರೆ ಅವನು ತನ್ನ ಬೆರಳಲ್ಲಿರುವ ದೇವ ಗುರುಪಾದ ಮುದ್ರಿಕೆಯನ್ನು ಮೊದಲು ಮನದೊಳಗೆ ನಮಸ್ಕರಿಸುತ್ತಾನೆ. ಇದನ್ನು ತಾವು ಪರೀಕ್ಷಿಸಬಹುದು. ಅವನು ಶಿವಭಜನೆಯನ್ನು ಮಾಡುತ್ತ ರಾಜ್ಯಭಾರವನ್ನು ದುರ್ಲಕ್ಷಿಸಹತ್ತಿದ್ದಾನೆ ಎಂದು ಮೊದಲಾಗಿ ಅವರು ರಾಜನಿಗೆ ಕೊಂಪೆಯನ್ನು ಹೇಳಿದರು. ಆಗ ಅರಸನು ಇದನ್ನು ಪರೀಕ್ಷಿಸಬೇಕೆಂದು ಒಬ್ಬ ಚಾರನನ್ನು ಕಳಿಸಿ ಕೇಶಿರಾಜನನ್ನು ಓಲಗಕ್ಕೆ ಬರಮಾಡಿಕೊಂಡನು.

ಕೇಶಿರಾಜನು ಅರಸನ ಓಲಗಕ್ಕೆ ಬಂದು ತನ್ನ ಗದ್ದುಗೆಯಲ್ಲಿ ಸುಖಿತ ಬಳಿಕ ಅರಸನು ಸರಸಸಲ್ಲಾಪಗಳನ್ನು ಮಾಡುತ್ತ ಕೇಶಿರಾಜನ ಬೆರಳಿನಲ್ಲಿದ್ದ ಉಂಗುರವನ್ನು ನೋಡಿ—ಇದರ ಮಾಟವು ಎಷ್ಟು ಚಂದವು! ಇದನ್ನು ನೋಡುವಾ, ಎಂದಂದು ಅದನ್ನು ಇಸಿದುಕೊಂಡು ತನ್ನ ಬೆರಳಿನಲ್ಲಿಟ್ಟುಕೊಂಡನು. ಆ ಮೇಲೆ—ನೀವು ಮನೆಗೆ ಹೋಗಬಹುದೆಂದು ಹೇಳಿದನು. ಆಗ ಕೇಶಿರಾಜನು ಅರಸನಿಗೆ ನಮಸ್ಕಾರವನ್ನು ಮಾಡದೆ ಗಳಗಳನೆ ಓಲಗದ ಹೊರಗೆ ಹೋಗಿಬಿಟ್ಟನು. ಅದನ್ನು ಅರಸನು ನೋಡಿ ವಿಪ್ರರು ಆರೋಪಿಸಿದ್ದು ನಿಜವಾದ ಸಂಗತಿ

ಎಂದು ತಿಳಿದವನಾಗಿ ಅತ್ಯಂತ ಮುನಿದು---ಅವನನ್ನು ಕರೆ ಕರೆ ಎಂದು ಜಾರರಿಂದ ಒಳಗೆ ಬರಿಸಿ ಕೋಪಿಸುತ್ತ---ನೀನು ನನ್ನಿಂದ ಸಂಪತ್ತನ್ನು ಹೊಂದಿದೆ. ನಿನ್ನ ದಾರಿದ್ರ್ಯವನ್ನು ತೊಡೆದೆನು. ಆದರೆ ನೀನು ಹೀಗೆ ನನಗೆ ಉದಾಸೀನವನ್ನು ಮಾಡಬಹುದೇ? ಎಂದು ಕೇಳಿದನು. ಆದಕ್ಕೆ ಕೇಶಿರಾಜನು ಅರಸನ ಇಂಗಿತವನ್ನರಿತು---ನಿನ್ನ ಸಿರಿಯು ನಿನಗಿರಲಿ. ಶಿವನ ಸಂಗಸಂಪದವು ನನಗಿರಲಿ. ನೀನು ಕೊಟ್ಟ ಪದವು ನನಗೆ ಬೇಡ. ಅದು ಭಕ್ತಿಸಿರಿಗೆ ಸರಿಯಲ್ಲ. ನನಗೆ ಈ ಸೇವಕ ವೃತ್ತಿಯು ಬೇಡ, ಎಂದಂದು ಅರಸನು ತನಗೆ ಕೊಟ್ಟದ್ದ ಮುದ್ರೆಯುಂಗುರವನ್ನೂ ಹಾರವನ್ನೂ ಅವನ ಮುಂದಿಟ್ಟು ಓಲಗದಿಂದ ಹೊರಟನು. ಅದನ್ನು ಓಲಗದ ಜನರು ಕಂಡು ಬೆರಗಾದರು.

ಅಮೇಲೆ ಕೇಶಿರಾಜನು ತನ್ನ ಮನೆಗೆ ಬಂದು ನಡೆದ ಸಂಗತಿಗಳನ್ನು ತನ್ನ ಹೆಂಡತಿ ಗಂಗಾದೇವಿಗೆ ತಿಳಿಸಿದನು. ಆದಕ್ಕೆ ಆವಳು---ಇದು ಒಳ್ಳೆಯದಾಯಿತು. ಇನ್ನು ಮೇಲೆ ತಾವು ಜಂಗಮದನುಭಾವ ಸಮ್ಮೋಷ್ಮಿಯಲ್ಲಿರಲು ಸ್ವತಂತ್ರರಾದಿರಿ. ನಮ್ಮ ಹರಕೆ ಕೈಗೂಡಿತು ಎಂದು ನುಡಿದು ತನ್ನಲ್ಲಿದ್ದ ಆಭರಣಗಳನ್ನು ತನ್ನ ಸೇವಕ ಸೇವಿಕೆಯರಿಗೆ ಕೊಟ್ಟು ತಾನು ಒಂದು ವೇತ್ರವನ್ನುಟ್ಟು ಕೇಶಿರಾಜನ ಕೂಡ ರಾಜಧಾನಿಯನ್ನು ಬಿಟ್ಟು ಹೊರಡಲು ಸಿದ್ಧಳಾದಳು.

ಅಮೇಲೆ ಉಭಯತರು ಕಲ್ಯಾಣ ಪಟ್ಟಣದಿಂದ ಒಂಬು ಯೋಜನದ ಮೇಲೆ ಇದ್ದ ಶಿವಪುರ ಎಂಬ ಪಟ್ಟಣಕ್ಕೆ ಪಾದಚಾರಿಗಳಾಗಿ ಬಂದರು. ಅಲ್ಲಿ ಊರ ಹೊರಗೆ ಒಂದು ಗುಡಿಸಲಿನಲ್ಲಿ ವಂಶವರ್ಧನನೆಂಬ ಹೆಸರಿನ ಒಬ್ಬ ಮೇದರವನು ಬಿದಿರಿನ ಕಾಯಕವನ್ನು ಮಾಡುತ್ತ ಕುಳಿತಿದ್ದನು. ಅವನು ಕೇಶಿರಾಜನನ್ನು ನೋಡಿ ಅವನನ್ನು ಬರಮಾಡಿಕೊಂಡು ಮಾವಿನ ಮರದ ಅಡಿಯಲ್ಲಿ ಬಿದಿರಿನಿಂದ ತಾನು ಮಾಡಿದ ಆಸನದಲ್ಲಿ ಹೊಸ ಹಸೆಯ ಮೇಲೆ ಕುಳ್ಳಿರಿಸಿ ಸತ್ಕರಿಸಿ---ನೀವು ಸೋಮನಾಥನಿಗೆ ಜೋನವನ್ನು ಸವಿಸುತ್ತಾ ನನ್ನಲ್ಲಿಯೇ ಇರಬೇಕೆಂದು ಹೇಳಿಕೊಂಡನು.

ಆಷ್ಟರಲ್ಲಿ ರಾಜಧಾನಿಯಲ್ಲಿ ನಡೆದ ಈ ಸಂಗತಿಗಳನ್ನು ಭಕ್ತ ಜನರು ಕೇಳಿ ಅವರು ತಂಡ ತಂಡವಾಗಿ ಶಿವಪುರಕ್ಕೆ ಬರಲು ಮೇದ

ರವನು ಅವರನ್ನೂ ಕೂಡ ತನ್ನಲ್ಲಿ ಬರಮಾಡಿಕೊಂಡು---ನೀವೆಲ್ಲರೂ ನನ್ನನ್ನು ಕೃತಾರ್ಥನನ್ನಾಗಿ ಮಾಡಿದಿರೆಂದು ಅವರೆಲ್ಲರನ್ನು ಸತ್ಕರಿಸಿದನು.

ಆಗ ಕೇಶಿರಾಜನು ಅಲ್ಲಿ ಎಲ್ಲರೊಡನೆ ಶಿವಾನುಭವ ಸಮ್ಮೋಷ್ಮಿಯಲ್ಲಿ ಕಾಲಕಳೆಯ ಹತ್ತಿದನು. ಮಾತು ಮಾತಿಗೆ ಪುರಾತನರ ಗೀತಗಳು ಅವನ ಬಾಯಿಂದ ಹೊರಡುತ್ತಿದ್ದವು. ಹೀಗೆ ಅವನು ಇರುಳು ಹಗಲೆನ್ನದೆ ಎಲ್ಲರೊಡನೆ ಆನಂದದಿಂದ ಕಾಲಕಳೆಯಹತ್ತಿದನು. ಅವನನ್ನು ಕಾಣಲು ಬರುತ್ತಿದ್ದ ಜನರ ಸಂದೋಹವು ಬರಬರುತ್ತ ಬಹಳ ಹೆಚ್ಚಿತು. ಹೀಗೆ ಆವನು ಅಲ್ಲಿ ಏಳು ದಿವಸಗಳ ವರೆಗೆ ಇದ್ದನು. ಆಗ ನೆರೆದ ಭಕ್ತ ಜನರು ಈ ಮೇದರವನ ಮನೆಯಿಂದ ಕಲ್ಯಾಣದ ತ್ರಿಪುರಾಂತಕ ದೇವರ ಮುಂಟಪದ ವರೆಗೆ ರಂಗಮುಂಟಪಗಳನ್ನು ರಚಿಸಿ ಕೇಶಿರಾಜನನ್ನು ವೈಭವದಿಂದ ಕಲ್ಯಾಣಕ್ಕೆ ಬರಮಾಡಿಕೊಳ್ಳಬೇಕೆಂದು ನಿಶ್ಚಯಿಸಿದರು.

ಆಮೇಲೆ ಅವರು ದಾರಿಯುದ್ದಕ್ಕೆ ತ್ರಿಪುರಾಂತಕ ದೇವರ ಮುಂಟಪದ ವರೆಗೆ ಚಿತ್ರತರವಾದ ಮುಂಟಪಗಳನ್ನು ರಚಿಸಿದರು. ಶಿವಗೋಷ್ಮಿಯ ಸಲುವಾಗಿ ಮುಂತ್ರಿಪದವನ್ನು ತ್ಯಜಿಸಿದ ಕೇಶಿರಾಜನನ್ನು ಸನ್ಮಾನಿಸಬೇಕೆಂದು ಅಸಂಖ್ಯ ಜನರು ನೆರೆದು ವಾದ್ಯ ನರ್ತನ ಮೊದಲಾವುಗಳಿಂದ ಮಹತ್ತರವಾದ ಮೆರವಣಿಗೆಯನ್ನು ತೆಗೆದರು. ಹೀಗೆ ಭಕ್ತ ಜನರು ಮಹಾವೈಭವದಿಂದ ಪಟ್ಟಣವನ್ನು ಪ್ರವೇಶಿಸಿದರು. ಪಟ್ಟಣದ ಬೀದಿಗಳಲ್ಲಿ ಮಹಾಧ್ವನಿಯು ಭೋರೆಂದು ಭೋರ್ಗರೆಯುತ್ತಿತ್ತು.

ಮೆರವಣಿಗೆಯ ಮಹಾಧ್ವನಿಯು ಪೆರ್ಮಾಡಿರಾಯನ ಕಿವಿಮುಟ್ಟಲು ಅವನು ಇದೇನದ್ಭುತವೆಂದು! ಉಪ್ಪರಿಗೆಯಿಂದ ನೋಡಲಾಗಿ ಕೇಶಿರಾಜನ ಸನ್ಮಾನಕ್ಕೋಸ್ಕರ ಈ ವೈಭವವು ಏರ್ಪಟ್ಟಿದೆ ಎಂಬುದನ್ನು ತಿಳಿದು ಮನದಲ್ಲಿ, ಕೇಶಿರಾಜನು ಶಿವಶರಣನು, ಶಿವಾನುಭವಿಯು, ಅವನನ್ನು ಸನ್ಮಾನಿಸಬೇಕೆಂಬ ಅಪೇಕ್ಷೆಯುಂಟಾಯಿತು. ಆಮೇಲೆ ಅವನು ಕೂಡಲೆ ಉಪ್ಪರಿಗೆಯಿಂದ ಇಳಿದು ಪರಿಮಿತ ಪರಿವಾರದೊಂದಿಗೆ ಕಾಲ್ನಡೆಯಲ್ಲಿ ನಡೆದು ಬರುತ್ತ ಕೇಶಿರಾಜನನ್ನು ಸಮಸ್ಕರಿಸಿ---ನಾನು ನಿಮ್ಮ ಅಡಿಗಳ ಸಾಮರ್ಥ್ಯವನ್ನು ತಿಳಿಯದೆ

ಬಂದಿತು. ಅದನ್ನು ಅಲ್ಲಿದ್ದ ಭಕ್ತಮಹೇಶ್ವರರು ನೋಡಿ ಲಿಂಗವನ್ನಸಂತ ಪಯಿಂದ ಸ್ತೋತ್ರವಮಾಡಿ ಮುಂದೆ ಹೊರಡಲುದ್ಯುಕ್ತರಾದರು.

ಅವರು ನದಿಯನ್ನು ದಾಟಬೇಕೆಂದು ಮುಂದೆ ಹೋಗಲು ಕೇಶಿರಾಜನ ಪಾದಸ್ಪರ್ಶವಾದ ಕೂಡಲೆ ಅದು ಇಬ್ಭಾಗವಾಯಿತು. ಹೀಗೆ ಅದು ದಾರಿಯನ್ನು ಬಿಡಲು ನೆರೆದ ಜನರೆಲ್ಲ, ಉಘೇ ಉಘೇ ಎಂದು ಉಘ್ಘೋಷಿಸುತ್ತ ಹೊಳೆಯನ್ನು ದಾಟಿದರು. ಅವರು ಹೊಳೆ ದಾಟಿದ ಕೂಡಲೆ ಅದು ಎಂದಿನಂತೆ ಹರಿಯ ತೊಡಗಿತು. ಆ ಮೇಲೆ ಕೇಶಿರಾಜನು ತನ್ನ ಗ್ರಾಮವಾದ ಕೊಂಡಗುಳಿಗೆ ಬಂದು ಶಿವಾನುಭವದಲ್ಲಿ ಇದ್ದುಕೊಂಡು, ಭಕ್ತಜನರನ್ನು ಕೃತಾರ್ಥರನ್ನಾಗಿ ಮಾಡುತ್ತ ತನ್ನ ಪದಪದ್ಯಗಳಿಂದ ಪರಮಾತ್ಮನನ್ನು ಭಜಿಸುತ್ತ ಅಲ್ಲಿಯೇ ಸಾಮರಸ್ಯ ಪದವನ್ನು ಹೊಂದಿದನು.

ಕೇಶಿರಾಜನಿದ್ದುದು ಪೆರ್ಮಾಡಿ ರಾಜನ ಕಾಲದಲ್ಲೆಂದು ಅವನ ಚರಿತ್ರೆಯಿಂದ ತಿಳಿದು ಬರುತ್ತದೆ. ಚಾಲುಕ್ಯರಾಜರಲ್ಲಿ ಅತ್ಯಂತ ಪ್ರಸಿದ್ಧನಾದ ವಿಕ್ರಮಾದಿತ್ಯನು 'ತ್ರಿಭುವನಮಲ್ಲ ವಿಕ್ರಮಾದಿತ್ಯ ಪೇರ್ಮಾಡಿದೇವ'ನೆಂದು ಶಿಲಾಶಾಸನಗಳಲ್ಲಿ ಕರೆಯಲ್ಪಟ್ಟಿದ್ದಾನೆ. ಆದ್ದರಿಂದ ವಿಕ್ರಮಾದಿತ್ಯನಿಗೆ ಪೇರ್ಮಾಡಿ ಎಂಬ ಬೇರೆ ಹೆಸರೂ ಇದ್ದದ್ದು ತಿಳಿಯುತ್ತದೆ. ಇದು ಅವನ ಪೂರ್ವದ ನಿಜವಾದ ಹೆಸರಿರಬೇಕು. ಬಿಜ್ಜಳನ ತಂದೆಯ ಹೆಸರೂ ಪೇರ್ಮಾಡಿ ಎಂದಿದೆ. ಆದರೆ ಕೇಶಿರಾಜನನ್ನು ಪ್ರಧಾನಿಯನ್ನಾಗಿ ಮಾಡಿದವನು ಇವನಿರದೆ ಚಾಲುಕ್ಯ ವಿಕ್ರಮಾದಿತ್ಯನಿರಬೇಕೆಂದು ನಮಗೆ ತೋರುತ್ತದೆ. ಬಿಜ್ಜಳನ ತಂದೆಯಾದ ಪೆರ್ಮಾಡಿಯು ಭೀಮಾನದೀ ತೀರದಲ್ಲಿದ್ದ ತರ್ದವಾಡಿಯಲ್ಲಿ ಒಬ್ಬ ಚಿಕ್ಕ ಮಾಂಡಲಿಕನಾಗಿದ್ದನು. ಆದರೆ ಕೇಶಿರಾಜನು ಕಲ್ಯಾಣ ಪಟ್ಟಣದಲ್ಲಿ ಆಳುತ್ತಿದ್ದ ಪೇರ್ಮಾಡಿಯ ಮಂತ್ರಿಯಾಗಿದ್ದನು. ಕೇಶಿರಾಜನ ಚರಿತ್ರೆಯಲ್ಲಿ ತರ್ದವಾಡಿಯ ಉಲ್ಲೇಖವಿರದೆ ಕಲ್ಯಾಣದ ಉಲ್ಲೇಖವಿದೆ. ಕೇಶಿರಾಜನಂತೆಯೇ ಬಾಹೂರು ಜೊಮ್ಮಯ್ಯ, ತೆಲುಗು ಜೊಮ್ಮಯ್ಯ, ಇಲಿಹಾಳ ಬ್ರಹ್ಮಯ್ಯ ಇವರೂ ಕೂಡ ಪೇರ್ಮಾಡಿ ರಾಯನ ಕಾಲದಲ್ಲಿದ್ದುದು ಅವರ ಚರಿತ್ರೆಗಳಿಂದ ತಿಳಿದು ಬರುತ್ತದೆ. ಇವರಿದ್ದುದು ಕಲ್ಯಾಣ ಪಟ್ಟಣದ ಪೇರ್ಮಾಡಿರಾಯನಲ್ಲಿ. ಈ ಎಲ್ಲ ಸಂಗತಿಗಳಿಂದ ಕೇಶಿರಾಜನು ಚಾಲುಕ್ಯ ವಿಕ್ರಮಾದಿತ್ಯನ ಕಾಲದಲ್ಲಿ ಪ್ರಸಿದ್ಧಿಗೆ ಬಂದಿರಬಹುದೆಂದು ನಮಗೆ ತೋರುತ್ತದೆ.

ಹಾಗೆ ಮಾಡಿದೆನು, ನಾನು ಪುಣ್ಯ ಹೀನನು, ನನ್ನನ್ನು ಕರುಣಿಸಬೇಕು ಎಂದು ಹೇಳಿಕೊಂಡನು. ಆಗ ಕೇಶಿರಾಜನು ಅವನನ್ನು ಸನ್ಯಾನಿಸಿ ತ್ರಿಪುರಾಂತಕ ದೇವರ ದರ್ಶನವನ್ನು ಹೊಂದಿ ರಾಜನಲ್ಲಿಗೆ ಬಂದು ಅವನಲ್ಲಿ ಕೆಲಕಾಲ ಶಿವಗೋಷ್ಠಿಯಲ್ಲಿದ್ದು ಅರಮನೆಯಲ್ಲಿರಲು ಒಪ್ಪದೆ, ತಿರುಗಿ ಮೇದರನ ಗುಡಿಸಲಿಗೆ ಬಂದನು.

ಮುಂದೆ ಅವನು ಶಿವಪುರವನ್ನು ಬಿಟ್ಟು ಸ್ವಗ್ರಾಮವಾದ ಕೊಂಡಗುಳಿಗೆ ಹೊರಟನು. ಆಗ ಅವನ ಮಹಿಮೆಯನ್ನರಿತ ಬಹುಜನ ಭಕ್ತರು ಅವನನ್ನು ಹಿಂಬಾಲಿಸಿದರು. ಅವರು ದಾರಿಯನ್ನು ನಡಿದು ಬರುತ್ತಲಿರುವಾಗ ಒಂದು ಅರಣ್ಯ ಮಧ್ಯಕ್ಕೆ ಬಂದರು. ಅಲ್ಲಿ ಒಂದು ವಿಶಾಲವಾದ ನದಿಯೂ ಹರಿಯುತ್ತಿತ್ತು. ಅಲ್ಲಿದ್ದ ಪ್ರಕೃತಿ ಸೌಂದರ್ಯವನ್ನು ಕಂಡು ಕೇಶಿರಾಜನು ಶಿವಧ್ಯಾನದಲ್ಲಿರಬೇಕೆಂದು ಬಯಸಿ ತನ್ನ ಇಷ್ಟಲಿಂಗವನ್ನು ಗಂಧಾಕ್ಷತೆ, ಕೆಂದಾವರೆ, ದಾಸವಾಳ ಪುಷ್ಪಗಳಿಂದ ಅರ್ಚಿಸುತ್ತ ಧ್ಯಾನಮಗ್ನನಾದನು. ಆಗ ಒಂದು ಗರುಡ ಪಕ್ಷಿಯು ಮೇಲೆ ಹಾರಾಡುತ್ತಿರುವಾಗ ಅವನ ಲಿಂಗವನ್ನು ನೋಡಿ ಅದು ತನ್ನ ಆಹಾರವೆಂದು ತಿಳಿದು ಪುಷ್ಪಸಹಿತವಾಗಿ ಅದನ್ನು ಮೇಲಕ್ಕೆ ಎತ್ತಿಕೊಂಡು ಹೋಯಿತು. ಆದರೆ ಅಷ್ಟರಲ್ಲಿ ಆ ಲಿಂಗವು ಕೆಳಕ್ಕೆ ಓಸರಿಸಲು ಅದು ನದಿಯಲ್ಲಿಯೇ ಬಿದ್ದು ಬಿಟ್ಟಿತು.

ಅದನ್ನು ಅಲ್ಲಿ ನೆರೆದ ಭಕ್ತ ಮಹೇಶ್ವರರು ಕಂಡು ಹರಿಗೋಲಿನಿಂದ ಅರಸಿಕೊಂಡು ಬರುವೆವೆಂದು ಅದನ್ನು ಹುಡುಕಲು ಉದ್ಯೋಗಿಸಿದರು. ಆದರೆ ಕೇಶಿರಾಜನು ಅವರ ಆಯಾಸವನ್ನು ಕಂಡು—ನೀವು ಇಷ್ಟು ಶ್ರಮವನ್ನು ವಹಿಸುವ ಕಾರಣವಿಲ್ಲ ಎಂದು ಹೇಳಿ ನದಿಯ ದಂಡೆಯಲ್ಲಿ ಕುಳಿತು ಶರಣಸತಿ ಲಿಂಗಪತಿ ಎಂಬ ಭಾವದಿಂದ ದಶಾವಸ್ಥೆಯನ್ನು ಹೊಂದಿ ಲಿಂಗವನ್ನು ಸ್ತುತಿಸಹತ್ತಿದನು. ಲಿಂಗವು ಮಂತ್ರಮಯವಾದುದು. ಆದುದರಿಂದ ಶಿವಮಂತ್ರವನ್ನು ನೆನೆಯುತ್ತ ಅದರ ಮಹಿಮೆಯನ್ನು ಉಸುರಹತ್ತಿದನು. ಮಂತ್ರದಿಂದಲೇ ಶಿವನು ಮಂತ್ರಸಿದ್ಧನಿದ್ದಲ್ಲಿಗೆ ಬರುವನೆಂದು ಆಗಮ ವಾಕ್ಯವಿದೆ. ಅದಕ್ಕನುಸರಿಸಿ ಕೇಶಿರಾಜನು ನದಿಯಲ್ಲಿ ಬಿದ್ದ ಲಿಂಗವನ್ನು ನೆನೆಯಲಾಗಿ ಅದು ತಾನಾಗಿಯೇ ಮೊದಲಿನ ಗಂಧಾಕ್ಷತೆ ಕೆಂಪಿನ ದಾಸಿವಾಳ ಸಹಿತವಾಗಿ ಕೇಶಿರಾಜನ ಕರಸ್ಥಲಕ್ಕೆ

ಈ ಚಾಲುಕ್ಯ ವಿಕ್ರಮನು ೧೦೭೬ ರಿಂದ ೧೧೨೬ ವರೆಗೆ ಅತ್ಯಂತ ವೈಭವದಿಂದ ರಾಜ್ಯವಾಳಿದನು. ಆದುದರಿಂದ ಕೇಶಿರಾಜನು ಬಸವೇಶ್ವರನಕಿಂತಲೂ ೬೦-೭೦ ವರ್ಷ ಹಿಂದಿನವನಾಗುತ್ತಾನೆ. ಅವನ ಚರಿತ್ರೆಯಲ್ಲಿ ಬಸವೇಶ್ವರನ ಉಲ್ಲೇಖವು ಎಷ್ಟು ಮಾತ್ರವು ಬರುವದಿಲ್ಲ. ಅವನು ಕಲ್ಯಾಣ ಪಟ್ಟಣದಲ್ಲಿದ್ದರೂ ಬಸವೇಶ್ವರನ ಉಲ್ಲೇಖವಿರುವದಿಲ್ಲ. ಬಸವೇಶ್ವರನಕಿಂತಲೂ ಅವನು ಮೊದಲಿನವನಾಗಿದ್ದದರಿಂದ ಇಂಥ ಉಲ್ಲೇಖವಿಲ್ಲೆಂದು ನಾವು ಅನುಮಾನ ಮಾಡಬೇಕಾಗುತ್ತದೆ.

ಕೇಶಿರಾಜನು ಬಸವೇಶ್ವರನಂತೆಯೇ ಶಿವಾನುಭವಿಯೂ ವಿದ್ವಾಂಸನೂ ಆಗಿದ್ದನು. ಬಸವೇಶ್ವರನಿಗೆ ಹೇಗೆ ಮಂತ್ರಿಪದವು ಪ್ರಾಪ್ತವಾಯಿತೋ ಹಾಗೆಯೇ ಕೇಶಿರಾಜನಿಗೂ ಮಂತ್ರಿಪದವು ಪ್ರಾಪ್ತವಾಯಿತು. ಕೇಶಿರಾಜನು ಅಧಿಕಾರವನ್ನು ಹೊಂದಿದಬಳಿಕ ಬಸವೇಶ್ವರನಂತೆಯೇ ಅವನೂ ವೀರಶೈವ ಮತವನ್ನು ರಾಜ್ಯದಲ್ಲಿ ಪ್ರಸಾರಗೊಳಿಸಿದನು. ಇದರಿಂದ ಅವನು ಪರವಾದಿಗಳ ಕೋಪಕ್ಕೆ ಈಡಾದನು. ಆದರೆ ಅವನು ಅತ್ಯಂತ ಸರಳ ಸ್ವಭಾವದವನು. ಆದುದರಿಂದ ಅವನ ವಿರೋಧಿಗಳು ಒಂದು ಉಪಾಯದಿಂದ ಅವನ ಮಂತ್ರಿಪದವನ್ನು ತಪ್ಪಿಸಿದರು. ಆದರೆ ಬಸವೇಶ್ವರನು ಬಹಳ ಜಾಣನು. ಆದ್ದರಿಂದ ಬಿಜ್ಜಳನನ್ನು ವಿರೋಧಿಸುವ ಪ್ರಸಂಗಗಳು ಅವನಿಗೆ ಆಗಿಂದಾಗ್ಗೆ ಬಂದರೂ ಅವನು ಉಪಾಯದಿಂದ ಅವುಗಳನ್ನು ತಪ್ಪಿಸಿಕೊಳ್ಳುತ್ತ ಬಂದನು. ಕೇಶಿರಾಜನು ತನ್ನ ಪ್ರಧಾನಿಪಟ್ಟವನ್ನು ಬಿಟ್ಟುಕೊಟ್ಟ ಬಳಿಕ ಅವನು ಸ್ವಗ್ರಾಮಕ್ಕೆ ಬಂದು ತನ್ನ ಶಿವಾನುಭವ ಗೋಷ್ಠಿಯಲ್ಲಿಯೇ ಕಾಲಕಳೆಯುತ್ತಿದನು. ಇಂಥ ಪ್ರಸಂಗವು ಬಸವೇಶ್ವರನಿಗೂ ಬರಲು ಅವನು ತನ್ನ ಪ್ರಧಾನಿಪಟ್ಟವನ್ನು ತ್ಯಜಿಸಲಾಗಿ ದೇಶದಲ್ಲಿ ಒಂದು ಮಹತ್ತರವಾದ ಧಾರ್ಮಿಕ ಮತ್ತು ಸಾಮಾಜಿಕ ಕ್ರಾಂತಿಯೇ ಉದ್ಭವಿಸಿತು. ಅಷ್ಟರಲ್ಲಿ ಅಸಂಖ್ಯ ಶಿವಶರಣರು ದೇಶದಲ್ಲಿ ಉಂಟಾಗಿದ್ದದರಿಂದ, ಅವರ ಬಲದಿಂದ ಪ್ರಬಲವಾದ ಕ್ರಾಂತಿಯು ಉಂಟಾಯಿತು. ಆದರೆ ವೀರಶೈವ ಧರ್ಮವು ಬಸವೇಶ್ವರನ ಕಾಲದಲ್ಲಿ ಇಷ್ಟು ಪ್ರಬಲವಾದದ್ದಕ್ಕೆ ಕೇಶಿರಾಜನಂಥ ಶಿವಶರಣರು ಅವನಕಿಂತಲೂ ಮೊದಲು ಉದ್ಭವಿಸಿ ಶಿವಾನುಭವವನ್ನು ರಾಜ್ಯದಲ್ಲಿ ಹೆಚ್ಚಿಸಿದ್ದೇ ಮುಖ್ಯ ಕಾರಣವೆಂದು ನಮಗೆ ತೋರುತ್ತದೆ.

೫೪. ಕ್ರಿಯಾಸಂಪದನಾದಲ್ಲಿ ಉರಿ ಕಾಷ್ಮವ ವೇಧಿಸಿದಂತಿರಬೇಕು. ಆಚಾರಪರವೊಡಗೂಡಿದಂತಿರಬೇಕು. ಜಲ ಜಲವ ಕೂಡಿದಂತೆ ಹೆರೆ ಬಿಂಗುದಕ್ಕೊಡಲಿಲ್ಲ. ವಾರಿಯ ಸಿಲೆ ಬಲಿದು ನೋಡ ನೋಡ ನೀರಾದಂತಿರಬೇಕು. ಇಷ್ಟಲಿಂಗ ಸಂಬಂಧದ ನಿಷ್ಠೆ ಪ್ರಾಣ ಕೂಟ ಉಭಯ ಮೋಸವಿಲ್ಲದಿರಬೇಕು ಐಘಟ ದೂರ ರಾಮೇಶ್ವರಲಿಂಗವನರಿವುದಕ್ಕೆ.

೫೫. ಸ್ಥೂಲದಿಂದ ಕಾಂಬುದು. ಸೂಕ್ಷ್ಮದಿಂದ ಅರಿವುದು. ಕಾರಣದಲ್ಲಿ ಮಾಡುವುದು. ತ್ರಿವಿಧಭೇದವ ನಿಃಕರಿಸಿ ತ್ರಿವಿಧದ ಭೇದದಿಂದ ಕಾಣು. ತ್ರಿವಿಧದ ಭೇದವ ಕೂಡಿ ಮುರಿ. ಐಘಟ ದೂರ ರಾಮೇಶ್ವರಲಿಂಗವ ಏನೂ ಎನ್ನದಿರು.

೫೬. ಊರ್ಧ್ವ ಮುಖದಲ್ಲಿ ಐದಿದ ವಿಹಂಗ ಅಧೋಮುಖದಲ್ಲಿದ್ದ ಧರೆಯ ನೋಡಿ ತಾನಡರುವ ತೆರನ ಕಾಂಬಂತೆ ತುರೀಯದಲಿ ಐದಿ ತಿತದಲ್ಲಿ ನೋಡಿ ತತ್ವದಲ್ಲಿ ನಿಶ್ಚಯವ ಮಾಡಬೇಕು ಇಷ್ಟಲಿಂಗದಲ್ಲಿ. ಆ ಇಷ್ಟ ನಿಶ್ಚಯದ ನಿಜತತ್ವದಲ್ಲಿ ಆಶ್ರಯಿಸಿ ಬಚ್ಚಬಯಲಾಗಬೇಕು ಐಘಟ ದೂರ ರಾಮೇಶ್ವರಲಿಂಗವನರಿವುದಕ್ಕೆ.

೫೭. ಅಂಗ ಲಿಂಗ ಸಂಬಂಧದಿರವು ಬೀಜವೊಡೆದು ಮೊಳೆದೋರುವಂತೆ, ಕುಸುಮ ಬಲಿದು ದೆಸೆಗೆ ವಾಸನೆ ಪಸರಿಸುವಂತೆ, ಭೂಜಲ ಉಣ್ಮೈಪರಿವಂತೆ. ಘನಲಿಂಗ ಘಟಕುರುಹಿನಲ್ಲಿ ನಿಜದೋರುತ್ತಿದೆ. ಐಘಟ ದೂರ ರಾಮೇಶ್ವರಲಿಂಗಮೂರ್ತಿ ಅಮೂರ್ತಿ ಆಗುತ್ತಿದೆ.

೫೮. ಇಷ್ಟಲಿಂಗ ಸಂಬಂಧ ಮುಕ್ತಿಪದ. ಭಾವಲಿಂಗ ಸಂಬಂಧ ಭವಕ್ಕೆ ಬೀಜ. ಪ್ರಾಣಲಿಂಗ ಸಂಬಂಧ ಪ್ರಣಮದ ಗೊತ್ತು. ಇಂತೀ ತ್ರಿವಿಧ ಭೇದವರತು ನಿಂದುದು ಐಕ್ಯಲಿಂಗ ಸಂಬಂಧ, ಐಘಟ ದೂರ ರಾಮೇಶ್ವರಲಿಂಗದಲ್ಲಿ.

೫೯. ಮಣ್ಣಿನಲ್ಲಿ ನೀರ ಬೆರಸಿ ಮುಖಿಸಲಾಗಿ ನಿಂದು ನಿಲಿಸಿತೋರಿ ಮುನ್ನಿನಂತಾಯಿತ್ತು. ಅಪ್ಪು ಸಂಗ ಸಂಗವನೆಯ್ದಿದಂತೆ ಇರಬೇಕು. ಇಷ್ಟಪ್ರಾಣಯೋಗ ಸಂಬಂಧ ಐಘಟ ದೂರ ರಾಮೇಶ್ವರಲಿಂಗವನರಿವುದಕ್ಕೆ.

೬೦ ಬೀಜ ಕೊಳೆತಾಗ ಅಂಕುರ ನಷ್ಟವಾಯಿತ್ತು. ಸಸಿಯಿಲ್ಲದೆ ಫಲವುಂಟೇ ಅಯ್ಯ? ಇಷ್ಟದ ಅರ್ಚನೆ ಅರತು ಚಿತ್ತ ದೃಷ್ಟವ ಕಾಬು

ದಕ್ಕೆ ಗೊತ್ತಾವುದು ಹೇಳಯ್ಯ? ಅದು ಮುಟ್ಟಿದ ಮುಟ್ಟಿನಲ್ಲಿ ಒದಗು ಐಘಟ ದೂರ ರಾಮೇಶ್ವರಲಿಂಗವನರಿವುದಕ್ಕೆ.

೮೧. ಅಪ್ಪುವಿಲ್ಲದ ಏರಿ, ಚಿತ್ತವಿಲ್ಲದ ಘಟ, ನಿಜತತ್ವವನರಿಯದ ಪೂಜೆ ವ್ಯರ್ಥವಾಯಿತ್ತು ಇವನಿರವು ಐಘಟ ದೂರ ರಾಮೇಶ್ವರಲಿಂಗವನರಿಯದೆ.

೮೨. ಮೆಟ್ಟಿದ ಅಡಿಯು ದೃಢವಾಗಿ ಮೆಟ್ಟಿ ಆಜೆಯಲ್ಲಿ ಕಿತ್ತು ಅಡಿಯಿಡಬೇಕು. ಮುಂದಕ್ಕೆ ಪೊದಗು ಹಿಂದಕ್ಕೆ ದೂರವಾಯಿತ್ತು. ಇಷ್ಟವಲ್ಲಿ ಚಿತ್ತ ನೆವಿಮ್ಮಿ ಮತ್ತೆ ಪ್ರಾಣನ ಪಥ್ಯವನರಿಯಬೇಕು. ಘಲವ ತೊಡಪು ಕೈಗೆ ತಾಹಂತೆ ಘಟ ಜ್ಞಾನಕ್ಕೆ ಭಿನ್ನವಿಲ್ಲ ಐಘಟ ದೂರ ರಾಮೇಶ್ವರಲಿಂಗವನರಿವುದಕ್ಕೆ.

೮೩. ಇಚ್ಛಾಶಕ್ತಿ ಸ್ವರೂಪ ವರ್ತುಳವಾಗಿ ಕ್ರಿಯಾಶಕ್ತಿ ಸ್ವರೂಪ ಗೋಮುಖವಾಗಿ ಜ್ಞಾನಶಕ್ತಿ ಸ್ವರೂಪ ಶಲಾಕೆ ರೂಪಾಗಿ ತ್ರಿವಿಧ ಭೇದ ಒಡಗೂಡಿ ತ್ರಿವಿಧಶಕ್ತಿ ಲಿಂಗವಾಯಿತ್ತು. ಇಚ್ಛಾಶಕ್ತಿಗೆ ಕ್ರಿ, ಕ್ರಿಯಾ ಶಕ್ತಿಗೆ ಜ್ಞಾನ, ಜ್ಞಾನಶಕ್ತಿಗೆ ಸರ್ವ ಭಾವ, ಕೂಟ ಭಾವ ಇಷ್ಟದಲ್ಲಿ ನಿಂದು, ತ್ರಿವಿಧದ ತೊಟ್ಟು ಬಿಟ್ಟು ಐಘಟ ದೂರ ರಾಮೇಶ್ವರಲಿಂಗವ ನರಿವುದಕ್ಕೆ ಇದೇ ಗೊತ್ತು.

೮೪. ಕುರುಹೇ ಘಟವಾಗಿ ಅರಿವೇ ತತ್ಮನಾಗಿ, ಉಭಯವನ ರಿವುದು. ಆಚಾರದಂಗವಾಗಿ ಇವು ನಿಂದು ಅಳಿಯೆ ಐಘಟ ದೂರ ರಾಮೇಶ್ವರಲಿಂಗದ ಇರವು ಬಚ್ಚಬಯಲಾಯಿತ್ತು.

೮೫. ನೀರೊಳಗಣ ಕಿಚ್ಚಿಗೆ ನೀರೇ ತಾಯಿ. ಕಲ್ಲೊಳಗಣ ಕಿಚ್ಚಿಗೆ ಕಲ್ಲೇ ತಾಯಿ. ಮರದೊಳಗಣ ಕಿಚ್ಚಿಗೆ ಮರವೇ ತಾಯಿ. ಅವು ಹೊರ ಹೊಮ್ಮಿದಾಗ ತಾಯ ತಿಂದು ತಾವು ತಲೆದೋರುವಂತೆ ಕುರುಹಿಂದ ಅರಿವನರಿತು ಅರಿವು ಕುರುಹ ನಷ್ಟವ ಮಾಡಿ ನಿಂದಲ್ಲಿಯೇ ಐಘಟ ದೂರ ರಾಮೇಶ್ವರಲಿಂಗವು ಅಂಗವರತು ನಿಂದ ನಿಲವು.

೮೬. ಮೊದಲು ರೂಪಾದ ಬಿತ್ತು ಭೂಮಿಯಲ್ಲಿ ಬಿತ್ತಿ ಅಳಿದು ಬೀಜ ನಾಮ ನಿಂದು ಸಸಿಯೆಂಬ ನಾಮವಾಯಿತ್ತು. ಸಸಿ ಬಲಿದು ಬೆಳೆದು ಉಂಡಿಗೆಯ ಬೀಜವೆಂಬ ಉಭಯ ನಾಮವ ತಾಳಿದುದು. ಬೀಜ ಒಂದೋ ಎರಡೋ ಎಂಬುದನರಿದಲ್ಲಿ ಕ್ರಿಶೂನ್ಯವೆಂಬ ಉಭಯ

ನಾಮವಡಗಿತ್ತು. ಐಘಟ ದೂರ ರಾಮೇಶ್ವರಲಿಂಗವು ಉಭಯ ನಾಮ ನಿಂದಿತ್ತು.

೮೭. ಚಿನ್ನ ವಿಶೇಷ, ಮಣ್ಣು ಅಧಮವೆಂದಡೆ ಅದು ನಿಂದು ಕರಗೂಪಕ್ಕೆ ಮಣ್ಣಿನ ಕೋವೆಯೇ ಮನೆಯಾಯಿತ್ತು. ವಿಷ್ಯವನರಿದು ವಸ್ತುವ ನಿವಾಸ್ಯಾದಕ್ಕೆ ಇದೇ ದೃಷ್ಟ, ಐಘಟ ದೂರ ರಾಮೇಶ್ವರಲಿಂಗ ವನರಿವುದಕ್ಕೆ.

೮೮. ಕ್ರಿಯೆಯು ತೆರನ ಅರಿಯೆನೆಂದು ಬಿಡಬಹುದೇ ಆಚಾರವ? ಆಚಾರದ ತೆರನ ಅರಿಯೆನೆಂದು ಮರೆಯಬಹುದೇ ಮಾರ್ಗವ? ಇಂತೀ ನಾನಾ ಭೇದಂಗಳಲ್ಲಿ ಅರಿದು ವಿಚಾರಿಸಿ ಮಣ್ಣಿನಲ್ಲಿ ಕೆಡಿಸಿ ಮಣ್ಣಿ ನಲ್ಲಿ ಅರಸುವಂತೆ, ಮನೆಯಲ್ಲಿರಿಸಿದ ಒಡವೆಯ ಮರೆದು ನೆನೆವಂತೆ ಅರಿ. ಇಷ್ಟಲಿಂಗ ಪ್ರಾಣಲಿಂಗದ ಗೊತ್ತೆಂಬುಭಯ ಬೇಡ. ಅದು ನಿಶ್ಚಯ ವೊಂದಲ್ಲದೆ ಬೇರೆ ನಾಮವಿಲ್ಲ ಐಘಟ ದೂರ ರಾಮೇಶ್ವರಲಿಂಗಕ್ಕೆ.

೮೯. ಸ್ವಪ್ನದಲ್ಲಿ ಮರೆದು ಸಕಲವ ಕಂಡು ಅರಿದು ಹೇಳೂದು ಆತ್ಮ ಭಿನ್ನವೋ ಘಟ ಭಿನ್ನವೋ? ಇಷ್ಟಲಿಂಗವೆಂದು ಪ್ರಾಣಲಿಂಗವೆಂದು ಕಟ್ಟಿ ಹೋರುವಾಗ ತಾನು ದೃಷ್ಟದ ಅಂಗವ ಹೊತ್ತು ಹೋರುತ್ತಿದ್ದುದು ಮತ್ತೆ ಕ್ರಿಯಲ್ಲಾಯೆಂಬುದಕ್ಕೆ ತೆರಪಾವುದು? ಅಲ್ಲ ಅಹುದೆಂದು ಗೆಲ್ಲ ಸೋಲಕ್ಕೆ ಹೋರುವುದು ಕ್ರಿಯೋ ನಿಃಕ್ರಿಯೋ? ಮುಂದಿಯ ನಡುವೆ ನಿಂದಿರ್ದ ಉಡುವಿನಂತೆ ಕಣ್ಣು ಮುಚ್ಚಿ ಗೆದ್ದೆನೆಂದು ಬಡಿಯಿಸಿಕೊಂಬ ತೆರದ ಮಾತಿನ ಮಾಲೆ ಬೇಡ. ನೂಲ ಹಿಡಿದು ಬೆಟ್ಟವನೇರುವಂತೆ, ಅಧವೆ ಬಾಲನ ಹಿಡಿದು ಬದುಕುವಂತೆ, ಕೂಷ್ಮಾಂಡವ ಹಿಡಿದು ಐದುವ ಜಲ ದಲ್ಲಿ ಜರಿಸುವನಂತೆ, ನೆರೆನಂಬು. ಮಾಡುವ ಕ್ರಿಯಲ್ಲಿ ಅರಿವು ಹೀನವಾ ಗಬೇಡ. ಬಿಡದಿರು ಮಾಡುವ ಸತ್ಕ್ರಿಯೆ. ಇವನರಿದು ಒಡಗೂಡು ಐಘಟ ದೂರ ರಾಮೇಶ್ವರಲಿಂಗದ ಉಭಯ ಭಾವವಳಿದು.

೯೦. ಒಂದ ಬಿಟ್ಟೊಂದ ಹಿಡಿದಿಹೆನೆಂದಲ್ಲಿ ಸಿಕ್ಕತ್ತು ಅರಿವು. ರಮಂಧವೆಂಬ ಮಂದಿರದಲ್ಲಿ ಹಿಡಿದುದ ಬಿಟ್ಟು ವಾರಿಯಲ್ಲಿ ಹೊಳಹು ಹೋರಿದ ಮುಚ್ಚಕ್ಕೆ ಹೋಹ ಶಿವ ಬುದ್ಧಿಯಂತಾಗಬೇಡ. ಹಿಡಿದಲಿ ಕಂಡು ಕಂಡಲ್ಲಿ ನಿಂದು ನಿಂದಲ್ಲಿ ಕೂಡಿ ಕೂಡಿದಲ್ಲಿಯೇ ಉಭಯ ಬಯಲಾಯಿತ್ತು ಐಘಟ ದೂರ ರಾಮೇಶ್ವರಲಿಂಗವು ತಾನು ತಾನೇ.

೭೧. ಅಂಗದಲ್ಲಿ ಕಟ್ಟಿವ ವಸ್ತ್ರವ ಬಿಟ್ಟು ನೋಡಲಾಗಿ ಲಿಂಗದ ಕುರುಹು ಇಲ್ಲದಿರೆ ಇದೇನು ಅಂಗನಾಸ್ತಿಯಾದೆ ಏಘಟ ಬಿಟ್ಟು ಓಘಟ ನಾಸ್ತಿಯಾದೆ ಎಂಬುವಕ್ಕೆ ಮೊದಲೇ ಅಂಗ ಬಯಲಾಯಿತ್ತು ರಾಮೇ ಶ್ವರಲಿಂಗದಲ್ಲಿ.

೭೨. ಅಂಗದಲ್ಲಿದ್ದು ಕೈಗೆ ಬಂದೆ. ಕೈಯಿಂದ ಮನಕ್ಕೆ ಬಾರೆ ಯಯ್ಯ. ನಾ ಹಾಡೆ ನೀ ಕೇಳಿ ಬಾಯಿ ಕಿವಿ ನೋವಿಲ್ಲವೇ ಅಯ್ಯ? ನೀ ಸಾವ ದಿನವಿಲ್ಲ. ನಾನಳುವ ದಿನವಿಲ್ಲ. ನಿನ್ನಂಗವಡಗದು. ಎನ್ನ ಮನ ಉಡುಗದು. ಕ್ರಿಯೆಂಬ ಹಾವಸೆಯಲ್ಲಿ ಸಿಕ್ಕಿ ಮೇಲನರಿಯದೆ ತೊಳಲು ತ್ತಿದೆನೆ. ಏಘಟಕೆ ತಾವ ಹೇಳಾ ಏಘಟ ದೂರ ರಾಮೇಶ್ವರಲಿಂಗವೇ.

ಗುರು ಲಿಂಗ ಜಂಗಮ.

೭೩. ಬೀಜ ಗುರುವಾಗಿ, ಅಂಕುರ ಲಿಂಗವಾಗಿ, ಅದರ ಫಲರಸ ಕಳೆ ಜಂಗಮವಾಗಿ, ಮೂರನುಳಿಯೆ ನಿಂದುದು ನಿಜತತ್ವವಾಗಿ, ವಿರಕ್ತ ಭಾವದಲ್ಲಿ ನಿಂದುದು ಜ್ಞಾನ ಜಂಗಮ. ಆ ಭಾವ ಏಘಟ ದೂರ ರಾಮೇ ಶ್ವರಲಿಂಗವು ತಾನೆ.

೭೪. ಕಾಲವಿರಹಿತ ಗುರುವಾಗಬೇಕು. ಕರ್ಮವಿರಹಿತ ಲಿಂಗ ವಾಗಬೇಕು. ಭವವಿರಹಿತ ಜಂಗಮವಾಗಬೇಕು. ಈ ಮೂರನರಿತು ಛೇದಿಸಿ ನಿರಕ್ತನಾಗಬೇಕು, ಏಘಟ ದೂರ ರಾಮೇಶ್ವರಲಿಂಗವನರಿವುದಕ್ಕೆ.

ತಾಮಸಜಂಗಮರ ರೀತಿ.

೭೫. ಅಶನದಾಸೆಗಾಗಿ ಆಚಾರವ ತಪ್ಪಿ ವಿಷಯದಾಸೆಗಾಗಿ ವಿರಕ್ತಿಯ ಬಿಟ್ಟು ಸಕಲರ ಕೂಟದಲ್ಲಿ ವಿಕಳತೆಗೊಂಬ ಪ್ರಕೃತಿ ಭಾವಿ ಗುಂಟೇ ನಿಜ ಭಕ್ತಿ ಏಘಟ ದೂರ ರಾಮೇಶ್ವರಲಿಂಗವನರಿವುದಕ್ಕೆ?

೭೬. ರಾಜರ ಬಾಗಿಲಲ್ಲಿ ನಿಂದು ಕೂಗಿ ಮೊರೆಯಿಟ್ಟು, ನೀನಾರೋ ಎಂದು ಕೇಳಿ ಕರೆದೊಡೆ, ನಾನೊಡೆಯರು ಎಂದೊಡೆ ಅಡಗದೇಕೆ ನಿನ್ನ ಬಾಯಿ? ತಡೆಯಿಸಿಕೊಂಡು ಒಡೆಯತನವುಂಟೇ ನಿನಗಲ್ಲಿ? ಇಂತೀ ಬಿಡು

ಹೋರಿಗಳ ಬುಡ ಅಡಗದೇಕೆ, ಏಘಟ ದೂರ ರಾಮೇಶ್ವರಲಿಂಗವ ನರಿಯದೆ?

೭೭. ನರದೇಹವ ತೊಟ್ಟು ತಾ ಗುರುವೆಂದು ಇದಿರಿಗೆ ಇಷ್ಟವ ಕೊಟ್ಟು ಅವರ ಮನೆಯಲ್ಲಿ ಒಲ್ಲದೆ ಅಕ್ಕಿ ತುಪ್ಪವನೀಸಿಕೊಂಡು ಅಟುಗೊಂಡು ಉಂಬ ವಿಟ್ಟಿಯ ಭಂಡರ ಕೆಯ್ಯಲ್ಲಿ ಕಟ್ಟಿಸಿಕೊಂಡ ಲಿಂಗ ದೃಷ್ಟದಿ ಶ್ರವಕಾಯ. ಇದನರಿತು ಅಲ್ಲಿ ಹೊಕ್ಕು ಉಂಡವಂಗೆ ಕರಟನ ಕೆಯ್ಯಕೀಟಕ ಆ ಕೂಳು ಘಟತಮಯ ಏಘಟ ದೂರ ರಾಮೇಶ್ವರಲಿಂಗವು ಅವರ ಒಲ್ಲನಾಗಿ.

೭೮. ಗುರುವಿಗೆ ಲಿಂಗ ಸಾಕ್ಷಿ. ಲಿಂಗಕ್ಕೆ ಜಂಗಮ ಸಾಕ್ಷಿ. ಆ ಜಂಗ ಮಕ್ಕೆ ಅರಿವು ಸಾಕ್ಷಿ. ಇಂತೀ ಅರಿವ ಮರೆದು ನರಗುರಿಂಗಳ ಬಾಗಿ ಲಲ್ಲಿ ನಿಂದು ತಡೆಯಿಸಿಕೊಂಬ ಅರಿಗುರಿಗೇಕೆ ಅರಿವಿನ ಮಾತು? ಏಘಟ ದೂರ ರಾಮೇಶ್ವರಲಿಂಗಕ್ಕೆ ಅವರ ಇರವು ಹೊರಗಾಗಿಹುದು.

೭೯. ಬೋಧೆಯ ಹೇಳಿ ಉಂಬವಂಗೆ ಆಗುಚಾಗೆಯ ಮಾತೇಕೆ? ಆವ ಮಾತ ಕಲಿತ ಮಾಗತನಂತೆ, ಆಟವ ಕಲಿತ ಕೊಲಾಟಿಕನಂತೆ ಚಿ: ಅದೇತರ ಅರಿವು? ಏಘಟ ದೂರ ರಾಮೇಶ್ವರಲಿಂಗಕ್ಕೆ ವಿನ್ನವೇದೂರ.

೮೦. ಇರುಳಿಗೆ ಮೊಲೆ ಯೋನಿ ಅಧರ, ಹಗಲಿಗೆ ಸಂಪುಟ ಲೇಖ ಮಾತಿನ ಮಾಲೆಯ ಸರಕ. ವೇಷದ ಪುಣ್ಯವ ಸುಡು. ಭ್ರಾಂತರ ಮಾತು ಸಾಕು ನಿಲ್ಲು, ಏಘಟ ದೂರ ರಾಮೇಶ್ವರಲಿಂಗವು ಅವರ ಒಲ್ಲನಾಗಿ.

೮೧. ಹೆರುವ ಹೆಂಗೂಸು ಕೂಸು ಸಿಕ್ಕಿ ತನ್ನ ಉಡಿಯ ತೋರು ವಂತೆ ಅದು ಕೂಸಿನ ಆಸೆಯೋ, ತನ್ನ ಅಪಮಾನದಾಸೆಯೋ, ತನ್ನ ಅಸುವಿನ ಆಸೆಯೋ? ಮಾತ ಕಲಿತು ವೇಷವ ತೋರಿ ಘಾತಕತನ ದಲ್ಲಿ ಉಂಬ ಪಾಶಧಾರಿಗಳಿಗೇಕೆ ನಿರ್ಜಾತನ ಮಾತು? ಅದು ನೀತಿ ಯಲ್ಲ ಏಘಟ ದೂರ ರಾಮೇಶ್ವರಲಿಂಗವು ಅವರ ಒಲ್ಲನಾಗಿ.

೮೨. ಕಾಣಬೇಕೆಂದು ಮುಂದೆ ನಿಂದು ಕೇಳಬೇಕೆಂದು ಕೂಗಿ ಕರೆದು ಈ ಕೇಣಸರದ ಜಾಣತನದ ಗುರುವೇಕೆ? ಸುಡುವೊಡಲ ಬಿಡು. ಅಸುವ ನಿನಗೆ ಒಡೆಯತನವೇಕೆ? ಸುಖದಡಗಿಂಗೆ ಸಿಕ್ಕಿ ಹಿಡಿ ಪೊಲಕ್ಕೆ ಗಿಡುವಿನ ಹಂಗಿಲ್ಲ. ಬಿಡುವನವರ ಏಘಟ ದೂರ ರಾಮೇಶ್ವರಲಿಂಗವು.

೮೩. ವಾಹನದ ಕೀಳಾಗಿ ತಿರುಗುವ ಚೂಣಿಯಲ್ಲಿ ಹೋಹ ಪೇಳೆಯ ಕಾವ ಕಳುಗುಡುಹಿಗೇಕೆ ಭಾಳೇಕ್ಷಣನ ಭಾವ? ಕೀಳು ಜೀವ ಪಿಂಕೆ ಅಡಗದು? ಮತ್ತೆ ನಾನೆಂಬುದೇಕೆ ಅಡಗದು ಐಘಟ ದೂರ ರಾಮೇಶ್ವರಲಿಂಗವನರಿಯದೆ?

೮೪. ವ್ರತಭ್ರಷ್ಟನ ಗುರು ಘಾತಕನ ವಂದಿಸಿ ನಿಂದಿಸುವನ ದ್ರವ್ಯದಾಸೆಗೆ ಅವನ ಮುಂದಿರವ ಹೊಕ್ಕುಂಡಡೆ ಜಂಬುಕ ತಿಂದ ಹಡುವ ವಿಕ್ಕು ಹುಳಿತವ ತಾ ತಿಂದಂತೆ ಐಘಟ ದೂರ ರಾಮೇಶ್ವರಲಿಂಗ.

೮೫. ಮಣ್ಣು ಬೆಂದು ಮಡಕೆಯಾಗಿ ಒಡೆದೊಡೆ ಮುನ್ನಿನಂತಾ ದುದಿಲ್ಲ. ವಿಸುನಿ ವಿಶ್ವದೊಳಗಿದ್ದು ತನ್ನಯ ರಸ ಕುಲವ ಬೆರಸಿದು ದಿಲ್ಲ. ಕ್ಷೀರ ಬಲಿದು ನಿಂದು ಮುನ್ನಿನ ಪಿಸಿತವ ಸಾರಿದುದಿಲ್ಲ. ಮೂರ ನರಿದು ಹರಿದು ಮೂರನೊಡಗೂಡುವ ಡಾಗಿನ ಪಶುಗಳಿಗೇಕೆ ನೆರೆ ನೀರನ ಹೊಲಬು ಐಘಟ ದೂರ ರಾಮೇಶ್ವರಲಿಂಗವನರಿಯುದಾಗಿ?

೮೬. ತಡೆವನ ಬಾಗಿಲಲ್ಲಿ ನಿಂದು ಕರೆಯಿಸಿಕೊಂಡು ಹೋದೆಹೆ ನೆಂಬ ಒಡೆಯತನವೇಕೆ? ಇವೆಲ್ಲವನರಿದು ಬಿಟ್ಟು ತಿರಿಗಲ್ಲಿಗೆ ಬಹ ಸ್ಥಾಣುವಿನ ಮರೆಯ ಖುಲ್ಲನ ಹಸುವಿನಂತಾಯಿತ್ತು ನಿಮ್ಮರಿವು ಐಘಟ ದೂರ ರಾಮೇಶ್ವರಲಿಂಗವನರಿಯದೆ.

ನಿರ್ದೇಪತ್ತ.

೮೭. ಹುಡಿಹತ್ತದ ಗಾಳಿಯಂತೆ ವಾಚ ಹತ್ತದ ಸರ್ವಸಾರ ಸಂಬಂಧಿಯಂತೆ ಭಸ್ಮದಲ್ಲಿದ್ದ ಸುಘಟಿಯ ಬೀಜದಂತೆ ಘೃತ ಕಿಸಲ ಯದಂತೆ ಏತರಲ್ಲಿಯೂ ಬಂಧವಿಲ್ಲದೆ ಕಪಿತ್ಥ ವೃಕ್ಷದಲ್ಲಿದ್ದ ಮಧು ಪಾನದಂತಿರಬೇಕು ಐಘಟ ದೂರ ರಾಮೇಶ್ವರಲಿಂಗವನರಿವುದಕ್ಕೆ.

೮೮. ಭಕ್ತನಾದಲ್ಲಿ ಪಂಕವ ಹೊದ್ದದ ವಾರಿಯಂತಿರಬೇಕು. ಜಲವ ಮುಟ್ಟದ ತೈಲದಂತಿರಬೇಕು. ರಸಬದ್ಧಯೋಗದಂತಿರಬೇಕು. ಮರಾಳನ ವಾಟದಂತೆ ಸಂಸಾರದ ಒದಗನರಿತು ಅರಿಯದಂತಿರಬೇಕು ಐಘಟ ದೂರ ರಾಮೇಶ್ವರಲಿಂಗದಲ್ಲಿ.

೮೯. ಅರಿದವನಿರವು ಕಮಠನ ಅಂಗದಂತೆ ಲಂಪಟನುಲುಹಿನ ಬೆಂಬಳಿಯ ಅಂಗವಾಸಿಯಂತಿರಬೇಕು. ಅದು ಲಿಂಗಾಂಗಿಯ ಬೆಡಗು. ಐಘಟ ದೂರ ರಾಮೇಶ್ವರಲಿಂಗವನರಿವುದಕ್ಕೆ ಅದೇ ಸದ್ಭಾವದ ಗೊತ್ತು.

೯೦. ಕ್ರಿಭಾನ ಶುದ್ಧತೆ ಆದವನಿರವು ಬೆಂಕಿ ಕಾಷ್ಠವ ಕೂಡಿ ವ್ಯಂಪ್ತವಾಗಿ ಉರಿದು ಹಿಂಗಿ ನಂದಿದಂತಿರಬೇಕು. ಹುಳಿ ಸಿಹಿಯ ಕೂಡಿ ಕೂಟಸ್ಥದಿಂದ ಉಳುಮೆಯ ಘೃತದಂತಿರಬೇಕು. ವಿಷ ಶರೀರ ದಲ್ಲಿ ವೇಧಿಸಿ ದೆಸೆಯನಳಿದಂತಿರಬೇಕು. ಅಗ್ನಿಯಲ್ಲಿ ಅರತ ಉದ ಕದಂತೆ ಬಯಲೊಳಗಡಗಿದ ಶಬ್ದದಂತೆ ಇರು ಐಘಟ ದೂರ ರಾಮೇ ಶ್ವರಲಿಂಗವನರಿವುದಕ್ಕೆ.

೯೧. ಕಾಳಿಕೆ ಹರಿದ ಹಿಮುದಂತೆ ನಾಳಿಕೇರ ಫಲವ ನುಂಗಿದ ವಾರಣದಂತೆ ಬೆರಸಿ ಬೆರಸದಂತಿರಬೇಕು. ಅದು ನಾಲಗೆಯ ಹುಣ್ಣಿನಂತೆ ಮೀರಬಾರದು ಅಂಗೀಕರಿಸಬಾರದು. ಕ್ರಿಜ್ಞಾನ ಸಂಪದದಲ್ಲಿ ಕಾಬ ವಂಗೆ ಭಾವ ಶುದ್ಧವಾಗಿರಬೇಕು ಐಘಟ ದೂರ ರಾಮೇಶ್ವರಲಿಂಗ ವನರಿವುದಕ್ಕೆ.

೯೨. ಮರುತ ಸಂಗವ ಮಾಡಿದ ಉರಿ ವಾರಿಗಂಧದಂತೆ ವಾಳುಕ ಸಂಬಂಧಿಯಾದ ಜಲದ ಇರವಿನಂತೆ ಶಿಲೆ ತೈಲದ ಒಲುಮೆಯಂತಿರ ಬೇಕು ಐಘಟ ದೂರ ರಾಮೇಶ್ವರಲಿಂಗವನರಿವುದಕ್ಕೆ.

೯೩. ಅದ್ರಿಯಲ್ಲಿ ಕರೆಯೆ ಆ ಶಬ್ದ ತನ್ನ ಒಡಗೂಡಿ ಕರೆ ವಂತೆ ಚಿತ್ತ ನೆನೆದು ತಾ ಹೊತ್ತಿದ್ದ ಘಟವ ಎತ್ತಿಕೊಂಡು ಹೋಹಂತೆ ವಿಹಂಗನ ಅಕ್ಷಿಯಲ್ಲಿ ಮರೆಯುವ ಸಂಹಾರದ ಒಳುಪಿನಂತೆ ವಿಂಚಿಸ ಸಂಚ ತೋರಿ ಹಿಂಜು ಮುಂಚಿಲ್ಲದಂತಿರಬೇಕು ಐಘಟ ದೂರ ರಾಮೇ ಶ್ವರಲಿಂಗವನರಿವುದಕ್ಕೆ.

ಅರಿವು

೯೪. ಪಟುಕದ ಘಟದಲ್ಲಿ ರಜ ನೀರ ತುಂಬಿದಡೆ ಧವಲ ಸಂ ಸೂತ್ರ ಉಂಟೇ? ಉದಕ ಹಿಂಗೆ ಆ ಘಟ ಮುನ್ನಿನಂದು. ಅದನಳಿದು ಕಾಣು ಐಘಟ ದೂರ ರಾಮೇಶ್ವರಲಿಂಗವ.

೯೫. ಕುಟಿಲಕ್ಕುಲ್ಲದೆ ಜಗ ಸಿಕ್ಕದು. ವಾಚಕಂಗಲ್ಲದೆ ಭೋಗ ವಿಲ್ಲ. ಘಟ ಧರ್ಮಕ್ಕೆ ಹೊರಗಾಗು, ಐಘಟ ದೂರ ರಾಮೇಶ್ವರಲಿಂಗ ವನರಿವುದಕ್ಕೆ.

೯೬. ಪೃಥ್ವಿ ಸದ್ಯೋಜಾತನ ಹಂಗು, ಜಲ ವಾಮದೇವನ ಹಂಗು, ಅಗ್ನಿ ಅಘೋರನ ಹಂಗು, ವಾಯು ತತ್ಪುರುಷನ ಹಂಗು, ಆಕಾಶ ಈಶಾನ್ಯದ ಹಂಗು. ಪಂಚ ಬ್ರಹ್ಮವ ಮರೆದು ಓಂಕಾರ ಬ್ರಹ್ಮನನರಿ ಐಘಟ ದೂರ ರಾಮೇಶ್ವರಲಿಂಗವ.

ಸಾಮರಸ್ಯ

೯೭. ಕುರುಹಿಟ್ಟಲ್ಲಿ ಅರಿವು ನಷ್ಟವಾಯಿತ್ತು. ಅರಿವ ನುಂಗಿದ ಕುರುಹು ಇದಿರ ಭಾವಕ್ಕೊಡಲಾಯಿತ್ತು. ತನ್ಮಯ ನಷ್ಟವಾಗಿ ಉಭಯ ದೋರವೆ ನಿಂದಲ್ಲಿ ಆ ನಿಲವು ತಾನೇ ಐಘಟ ದೂರ ರಾಮೇಶ್ವರ ಲಿಂಗವು.

೯೮. ಉಂಟೆಂಬುದು ಭಾವದ ನೆಮ್ಮುಗೆ. ಇಲ್ಲ ಎಂಬುದು ಚಿತ್ತದ ಪ್ರಕೃತಿ. ಉಭಯ ನಾಮ ನಷ್ಟವಾಗಿ ನಿಂದ ಉಳುಮೆ ಐಘಟ ದೂರ ರಾಮೇಶ್ವರಲಿಂಗ ಇಕ್ಕಿದ ಗೊತ್ತು.

೯೯. ಅಪ್ಪುವಯ ಬಲಿದು ಜಗ ಸಾಕಾರವಾಗಿ ನಿಂದಲ್ಲಿ ಧರೆ ಸಲಿಲ ಅನಲ ಕುರುಹಾಗಿ ನಿಂದಿತ್ತು. ಆಪ್ ನಿಳಯಾಂತವಾಗಿ ವಾಯು ಘಟಿಸಿತ್ತು. ಇಂತೀ ಪಂಚಬ್ರಹ್ಮ ಮೂರ್ತಿ ಐಘಟೇಶ್ವರ ಲಿಂಗವಾ ಯಿತ್ತು. ಇಂತಿವು ಪ್ರಳಯಕ್ಕೊಳಗೆಂದು ಹೊರಗಾಗಿ ನಿಂದ ಐಘಟ ದೂರ ರಾಮೇಶ್ವರಲಿಂಗವು.

೧೦೦. ಸ್ಥಾಣುವಿನ ರಜ್ಜು ವೀರಿ ಎಯ್ದುದೇಸಿ ಆಡಿ ತನ್ನಯ ಸ್ಥಾನಕ್ಕೆ ಬಹಂತೆ ವಸ್ತುವಿನ ಗೊತ್ತಿನಿಂದ ಕಟ್ಟು ವೀರಲಿಲ್ಲವಾಗಿ ಐಘಟ ದೂರ ರಾಮೇಶ್ವರಲಿಂಗದಲ್ಲಿಂಗೆ ಐದುವ ತೆರ.

೧೦೧. ಸರ್ವವೆಲ್ಲವು ವಸ್ತುವಿನ ಅಧೀನವಾದಲ್ಲಿ ಬೇರೊಂದು ತಟ್ಟುವ ಮುಟ್ಟುವ ತಾವುಂಟೆ? ಸರ್ವಜ್ಞ ಭಾವಗೆ ಭಿನ್ನ ಭಾವವಿಲ್ಲ ಐಘಟ ದೂರ ರಾಮೇಶ್ವರಲಿಂಗದಲ್ಲಿ.

ಶಿವಾನುಭವ

ವರ್ಷ ೦೯ | ಜುಲೈ ೧೯೪೫. | ಸಂಚಿಕೆ ೦೦

ಚನ್ನಬಸವಣ್ಣನವರ ವಚನ ವಿಶೇಷಗಳು.

(ವಿಹಂಗವು ನೋಟ)

ಶ್ರೀ. ಜ. ಪ. ಚನ್ನಬಸವರಾಜ ದೇಶಿಕೇಂದ್ರ ಸ್ವಾಮಿಗಳವರು,
ಜಗದ್ಗುರು ಶ್ರೀಮನ್ನಿಡುಮಾವಿಡಿ ಶ್ರೀಶೈಲ ಸಂಸ್ಥಾನ.

—: ಲಿಂಗ ಜಂಗಮದ ಮುದ್ರೆ. :—

ಶ್ರೀಗುರುವು ಶಿವದೀಕ್ಷೆಯ ಕರುಣಿಸುವಲ್ಲಿ ಬೋಧಿಸಿದ ಲಿಂಗ-ಜಂಗಮಗಳ ಅಂಡಾಂಗಿ ಭಾವವನ್ನು ಮರೆತು ಬಿಡುತ್ತೇವೆ. ಲಿಂಗ ಜಂಗಮವೊಂದೇ ಎಂದು ಹೇಳಿದುದನ್ನು ವಿಪರೀತವಾಗಿ ಭಾವಿಸಿಕೊ ಳ್ಳುತ್ತೇವೆ. ಲಿಂಗದಲ್ಲಿಯೆ ಜಂಗಮವಿದೆಯೆಂದು ಲಿಂಗದಲ್ಲಿಯೆ ಸರ್ವ ಕ್ರಿಯೆಗಳನ್ನು ಸಮರ್ಪಿಸಲು ತೊಡಗುತ್ತೇವೆ. ಇದು ತಪ್ಪು. ಇದನ್ನು ಶಿವಶರಣರು ಒಪ್ಪರು. ಲಿಂಗ ಜಂಗಮ ಒಂದೇ ಆದರೂ ಅಂಗಾಂಗಿ ಭಾವದಿಂದ ತರತಮವಿದೆ. ಅಂಗಕ್ಕೂ ಅಂಗಿಗೂ ಯಾವ ಭೇದವಿದೆಯೊ ಆ ಭೇದ ಲಿಂಗಜಂಗಮಕ್ಕಿದೆ. ಸುಖಿಸುವ ಶಕ್ತಿ ಜೀವನಿಗಿದೆಯೆ ವಿನಾ ದೇಹಕ್ಕಿಲ್ಲ. ಮರ ನೀರುಂಬುವುದು ಪೃಥ್ವಿಯ ಆಧಾರದಿಂದ. ಇದರಂತೆ ಲಿಂಗ ಜಂಗಮಗಳೆರಡರಲ್ಲಿ ಸುಖಿಸುವ ಶಕ್ತಿ ಜಂಗಮಕ್ಕಿದೆಯೆ ವಿನಾ ಲಿಂಗಕ್ಕಿಲ್ಲ. ಅದುಕಾರಣ ಜಂಗಮದೊಳಗೆ ಲಿಂಗವಿದೆಯೆ ವಿನಾ ಲಿಂಗ ದೊಳಗೆ ಜಂಗಮವಿಲ್ಲ. ದೇಹಾತ್ಮಗಳಂತೆ ಇವೆರಡೂ ಒಂದೇ ಆಗಿ ಹೋದರೂ ಅಂಗಾಂಗಿ ಭಾವದ ಅರಿವನ್ನು ನಾವೆಂದಿಗೂ ಮರೆಯಬಾ

ರದು. ದೇಹದೊಳಗೆ ಜೀವವಿದೆಯೆ ಹೊರ್ತು ಜೀವದೊಳಗೆ ದೇಹ ವಿಲ್ಲ. ನೆಲದಲ್ಲಿ ಮರವಿದೆಯೆ ಹೊರ್ತು ಮರದಲ್ಲಿ ಪೃಥ್ವಿಯಿಲ್ಲ. 'ರಾತಿಗಿಕ್ಕಿದ ಲಚ್ಚಣ ರಾಶಿಯ ಕೊಳಬಲ್ಲುದೆ?' ದೇಹ ಜೀವದ ಮುದ್ರೆ. ಲಿಂಗ ಜಂಗಮದ ಮುದ್ರೆ. (ಪು. ೧೧ ವಚನ ೮.)

ಭಕ್ತಪಾಕಕ್ಕೆ ಭವಿತನವಿಲ್ಲ.

"ಭವಿಯ ಮನೆಯ ಭವಿಪಾಕವಲ್ಲದೆ ಭಕ್ತರ ಮನೆಯ ಭವಿಪಾಕವಿಲ್ಲವಯ್ಯ..." ಭಕ್ತರ ಮನೆಯ ಪಾಕವನ್ನ ಭವಿಪಾಕವೆಂದು ಸ್ವೀಕರಿಸದಿರುವ ಶೀಲವಂತರು ಅಂದೆ ಇದ್ದಿರಬೇಕು. ಇಂದಿಗೂ ಈ ಸಂಪ್ರದಾಯವು ಹಲಕೆಲವರಲ್ಲಿ ಹಾಗೆಯೇ ಸಾಗಿ ಬಂದಿರುತ್ತದೆ. ಆದರೆ ಅಂದು ಭವಿಪಾಕವೆಂಬ ಭಾವನೆಯಿದ್ದರೆ ಇಂದು ಅಪವಿತ್ರವೆಂಬ ಅಶುದ್ಧವೆಂಬ ಸಂಕುಚಿತ ಭಾವನೆಯಿದೆ. ತಾವು ಶೀಲವಂತರೆಂಬ ಹೆಪ್ಪಿನಿಂದ ಭಕ್ತರ ಮನೆಯ ಪ್ರಸಾದದಲ್ಲಿ ಸೂತಕವನೆಣಿಸುವುದು ಮಹಾಪಾತಕವೆಂಬುದನ್ನವರು ಅರಿಯರು. ಭಕ್ತರ ಮನೆಯ ಪ್ರಸಾದ ಸ್ವೀಕೃತವಾದರೂ ಸೇವ್ಯ? ಭಕ್ತಿರತಿಯಿಂದ--ಲಿಂಗಹಸ್ತದಿಂದ ಗುರುಲಿಂಗಜಂಗಮಕ್ಕೆ ಬೇಕೆಂದು ಮಾಡಿದ ಪದಾರ್ಥಗಳೆಲ್ಲ ಪವಿತ್ರವಾದವುಗಳು. ಅವು ಲಿಂಗಕ್ಕೆ ಸಲ್ಲುವವು. ಅವನತಿಗಳೆದಡೆ ಅದೆ ದ್ರೋಹ. ಲಿಂಗವಂತಿಕೆಯ ಭಕ್ತಿ ಜೀವನದಲ್ಲಿ ಹೆಣ್ಣುಗಂಡೆಂಬ ಕವಲಿಲ್ಲ. ಭಕ್ತಿಯೆ ಮುಖ್ಯ. ಆ ಭಕ್ತಿರತಿಯುಳ್ಳ ಭಕ್ತರು ಯಾರಾದರೂ ಅವರು ಶಿವಸ್ವರೂಪರು. 'ಭಕ್ತದೇಹಿಕ ದೇವ' ಎಂಬ ಶ್ರುತಿ ವಚನವ ಕೇಳಿ ತಿಳಿದು ಮರಳಿ ಪೈಲಿಗೆಯ ಭವಿತನವನರಸುವ ಪಾತಕಕ್ಕಿಂತಲೂ ಬೇರೆ ಹೆಚ್ಚಿನ ಪಾತಕವುಂಟೆ? ಇದು ಮುಕ್ತಿ ಪಥಕ್ಕೆ ಸಲ್ಲದು. ಇದನರಿದು ಈ ಸಂಕುಚಿತ ಕಲ್ಪನೆಯ ಆಚಾರವನ್ನು ಬಿಟ್ಟುಬಿಡುವುದೇ ಲೇಸು.

ಭಕ್ತರ ಮನೆಗೆ ಹೋಗಿ ಬೇರೆ ಪಾಕವ ಮಾಡಿಕೊಂಬುವುದು ವಿಹಿತಾಚಾರವಲ್ಲ, ಮುಟ್ಟ ಪೈಲಿಗೆಗಳನ್ನು, ತಟ್ಟ ತಡೆಗಳನ್ನು ಬಳಸುವುದು ಭಕ್ತಿ ಪಂಥದ ಸಾಮ್ಯವಾದದ ಕುರುಹಲ್ಲ. ಭಕ್ತರ ಮನೆಗೆ ಹೋಗಿ ಅವರಲ್ಲಿಯೆ ಅಶುಚಿತನವನ್ನು ಕಲ್ಪಿಸುವ ಈ ತಪ್ಪು ರೂಢಿಯು ಅಂದೇ ಅಲ್ಲಗಳೆಯುವಷ್ಟು ಹಬ್ಬಿರಬೇಕಾದರೆ ಅಂದಿನ ಸಮಾಜವು ನೂತನವೊ ಇಲ್ಲವೆ ನಸು ಹಿಂದಿನದೊ ವಾಚಕರೆ ವಿಚಾರಿಸಬೇಕು.

ಪ್ರಸಾದ ಪರಿಗ್ರಹ!

ಪ್ರಸಾದಿಯು ಪ್ರಸಾದವನ್ನು ಹಿತ-ಮಿತವಾಗಿ ಪರಿಗ್ರಹಿಸಬೇಕು. ಅತಿಯಾಗಿ ಸ್ವೀಕರಿಸುವುದು ಅನಾಚಾರ, ಅನಾರೋಗ್ಯ. ಮೇಲಾಗಿ ತಪ್ಪು, ಆಚಾರ, ಆರೋಗ್ಯಗಳನ್ನ ಹಾಳುಮಾಡಿಕೊಂಡ ಮಹಾಪಾತಕ ಸುಡಲಲ್ಲಿ ಬೀಳುತ್ತದೆ. ಹೆಚ್ಚುಂಡು ಹೊಟ್ಟೆ ಕೆಡಿಸಿಕೊಳ್ಳುವ ದುರಾಚಕಯುಳ್ಳವನು ಆದೆಂದಿಗೂ ಪ್ರಸಾದಿಯೆನಿಸಲಾರ! ಇದಕ್ಕಿಂತಲೂ ದುರಾಚಾರ ಬೇರೊಂದಿಲ್ಲ. ಈ ವಿಷಯದಲ್ಲಿ "..... ಲಿಂಗಪ್ರಸಾದ ಅಖಂಡಿತವಾದಡೆ (ಹೆಚ್ಚಾದರೆ) ಶಿವಲಿಂಗ ಪ್ರಸಾದಿಗಳಿಗೆ ಕೊಡುವುದು. ಕೊಡದೆ ಫಲಗ್ರಾಹಕತನದಿಂದ ಕೊಂಡು, ಒಡಲ ಕೆಡಿಸಿಕೊಂಡಡೆ ಪಂಚಮಹಾಪಾತಕವಯ್ಯ. ಆ ದುರಾಚಾರಿಯ ಮುಖವ ನೋಡಲಾಗದು. ಕೂಡಲ ಚನ್ನ ಸಂಗಮದೇವ" ಎಂಬ ವಚನದಲ್ಲಿ ಪ್ರಾಕೃತಿಕ ವಿಧಿಯನ್ನು ಪಾರಮಾರ್ಥಿಕವಾಗಿಯೂ ಒಳಸುವ--ಬೆಸುಗೆ ಹಾಕುವ ಜಾಣ್ಮೆಯನ್ನು ಕಾಣಬಹುದಲ್ಲದೆ, ಅತ್ಯಾಶೆಯಿಂದ ಮಿತಿತಪ್ಪಿದ ಪ್ರಸಾದಿಯು ಪಡುವ ಪಾಡನ್ನೂ ಕೆಡುವ ಕೇಡನ್ನೂ ಕಾಣಬಹುದು. ಆದ್ದರಿಂದ ಬರೀ ಪ್ರಸಾದಿಗಳೇ ಅಲ್ಲ–ಯಾರಾದರಾಗಲಿ ಹೆಚ್ಚು ಆಶೆಬಿದ್ದು ಆರೋಗ್ಯ ಕೆಡುವಂತೆ ಋಣದಂತೆ ಎಚ್ಚರದಿಂದಿರಬೇಕು. ಇಲ್ಲದಿದ್ದರೆ ಇಹ–ಪರ ಎರಡೂ ಇಲ್ಲ. ಇಹ ಸುಖವಾಗಲಿ, ಪರಸುಖವಾಗಲಿ ನಾವು ಉಣ್ಣುವುದರಲ್ಲಿಯೇ ಇದೆ. ಚನ್ನಾಗಿ ಉಣಗಲಿತರೆ ಬೇರೆ ತಪಗಿಪಗಳ ಅವಶ್ಯಕತೆಯಿಲ್ಲ. ಯಮ ನಿಯಮಗಳ ನಿರ್ಬಂಧವಿಲ್ಲ. ರುಚಿಗೆದ್ದವನೇ ರುಷಿ, ಪ್ರಸಾದದಲ್ಲಿಯೆ ಪ್ರಸನ್ನತೆಯಿದೆ. ಇದನ್ನು ಪಡೆದವನೆ ಪ್ರಸಾದಿ!

ಸದಾಚಾರಿಯೆ ಶಿವಾಲಯ!

ಸದಾಚಾರಿಗೆ ಸರ್ವಾಂಗಲಿಂಗಿಗೆ ಬೇರೆ ಶಿವಾಲಯದ ಅವಶ್ಯಕತೆ ಎಂದಿಗೂ ಇಲ್ಲ. ಸದಾಚಾರಿಯ ಶರೀರೇಂದ್ರಿಯಗಳು ಸ್ಥಾವರ ಶಿವಾಲಯಕ್ಕಿಂತಲೂ ಸಾವಿರಪಟ್ಟು ಮೇಲು. ಅಲ್ಲಿ ಅಳಿವಿದೆ, ಇಲ್ಲಿ ಅಳಿವಿಲ್ಲ. ಉಚ್ಚಳಿಯದ ಸೌಂದರ್ಯವಿದೆ. ಈ ಅಳಿವಿಲ್ಲದ ಶಿವಾಲಯದ ಸೊಬಗನ್ನು ವಚನ ಮುಖದಿಂದಲೆ ಕಂಡು ಕಣ್ಣಣಿಯಬೇಕು. ಅದಿಂತು—"ಸದಾಚಾರಿಯಾದಡೆ ಉಪ್ಪರಗುಡಿ ಸಿಂಧುಪತಾಕೆ, ಒಬ್ಬರಿಗೊಬ್ಬರು ಶರಣೆಂಬುವುದೆ ಸರ್ವತೀರ್ಥ, ಆ ಭಕ್ತನ ದೇಹವೆ ತ್ರಿಕೂಟದ ಶಿವಾಲಯ,

ಕಾಲೇ ಕಂಭ, ಶಿರವೇ ಸುವರ್ಣದ ಕಳಸ, ಶಿವಾಚಾರವೆ ಪಾಳಿ, ವಿಭೂತಿಯ ಧವಳಿಸಿ, ಪರದೈವವ ಹೊಗಳಿಸವೆ; ಪ್ರಣವ ಪಂಚಾಕ್ಷರಿಯ ಗುಡಿಯ ದ್ವಾರವಾಟ ಒಪ್ಪತ್ತಿರೆ; ವಿನಯವೆ ಅಗ್ಗವಣಿ; ಸಜ್ಜನವೆ ಮಜ್ಜನ, ಸದಾ ಸನ್ನಿಹಿತವೆ ಲಿಂಗಪೂಜೆ, ಸತ್ಯವೆ ಅಡ್ಡಣಿಗೆ ಸಮತೆಯೆ ಪರಿವಾಣ, ಮನವೆ ಮೀಸಲೋಗರ, ಲಿಂಗವಾರೋಗಣೆಯ ಮಾಡುತ್ತಿರಲು, ಹರುಷವೆ ಹಸ್ತಮಜ್ಜನ, ಪ್ರೀತಿಯೆ ಕಪ್ಪುರದ ವೀಳ್ಯ, ಕಲಿತನವೆ ಜಾಗಟ, ಫಲಪದವೆ ಭೇರಿ, ವಿರಕ್ತಿಯೆ ಮದ್ದಳೆ, ಸಾಂಪ್ರದಾಯವೆ ಗೀತ, ಇದುಕಾರಣ ಕೂ. ಚ. ಸಂಗಯ್ಯ ನಿಮ್ಮ ಶರಣರು ಸರ್ವಾಂಗ ಲಿಂಗಿಗಳು." ಆ ಸದಾಚಾರಿಯ ಆ ದೇಹ ದೇಗುಲದಲ್ಲಿ ಸದ್ಗುಣ ಸಾಮಗ್ರಿಗಳಿಂದ, ಜಾವದ ಜಂಜಡವಿಲ್ಲದೆ ಜರಗುತ್ತಿರುವ ಈ ಅರ್ಚನೆಯ ನಿಷ್ಠ ನೋಟವು ಯಾವ ಸದ್ಭಕ್ತನ ಕಣ್ಮನಗಳನ್ನು ತಣಿಸವು, ತನ್ಮಯವಾಗಿಸವು, ಸದಾಚಾರಿಯು ಕಂಡರೆ ಸದಾ ಪೂಜೆ ನಡೆಯುತ್ತಿರುವ ಶಿವಾಲಯವನ್ನು ಕಂಡ ಭಾಗ್ಯ! ಸಕಲ ವಾದ್ಯ ಗೀತೆಗಳನ್ನು ಕೇಳಿದ ಸೌಭಾಗ್ಯ. !

ಮಹೇಶ್ವರನ ಗುರುಹು.

ಬರೀ ಮಾತಿನ ಮಾಲೆಯಲ್ಲಿ ಮಾಹೇಶ್ವರತ್ವವಿಲ್ಲ. ಮಾಹೇಶ್ವರನ ಹೆಗಲ ಮೇಲೆ ಹೆಚ್ಚಿನ ಹೊಣೆಗಾರಿಕೆಯಿದೆ. ಅದನ್ನು ನಿರಾತಂಕವಾಗಿ ನಿರ್ವಹಿಸುವ ಶಕ್ತಿಯುತ ವ್ಯಕ್ತಿತ್ವವು ಆತನಲ್ಲಿ ವ್ಯಗ್ಗಳಿಸಿರಬೇಕು. ನಿಷ್ಠಾಗರಿಷ್ಠನಾಗಿರಬೇಕು. ಇದನ್ನು ಸಾರಭೂತವಾಗಿ ಈ ವಚನದಲ್ಲಿ ವ್ಯಕ್ತಗೊಳಿಸಿದ್ದಾರೆ.

" ಲಿಂಗ ನೈಷ್ಠೆ ನಿಬ್ಬೆರಗು ಗಟ್ಟಿಗೊಂಡೊಡೆ ಮಹೇಶ್ವರ. ಏಕೋಭಾವದಲ್ಲಿ ಸೊಮ್ಮು ಸಂಬಂಧ ಆಹ್ವಾನ ವಿಸರ್ಜನ ನಿರ್ಭಾವಬುದ್ಧಿ ನೆಲೆಗೊಂಡೊಡೆ ಆತ ಮಹೇಶ್ವರ. ಗುರುಮುಖದಲ್ಲಿ ಶುದ್ಧವಾಗಿ ಪಂಚಭೂತದ ಹಂಗಡಗಿದೊಡೆ ಆತ ಮಹೇಶ್ವರ. ಪರದೈವದ ಪೂಜೆ ಮಾನವರ ಸೇವೆ, ಪರಧನ ಪರಸ್ತ್ರೀ ಹಿಂಸೆಯಂ ಬಿಟ್ಟು ಏಕಲಿಂಗನಿಷ್ಠನಾಗಿರಬೇಕು. 'ದಾಸತ್ವಂ ವೀರದಾಸತ್ವಂ...' ಎಂಬ ಶ್ರುತಿಯರ್ಥವ ನೋಡಿ, ನಿಯತನಾಗಬಲ್ಲಡೆ ಆತ ಮಹೇಶ್ವರನಪ್ಪನಯ್ಯ. ಗುರುಮಾರ್ಗವೆ ತನಗೆ ಸನ್ಮತವಾಗಿ, ತನ್ನ ಮಾರ್ಗವೆ ಗುರುವಿಗೆ ಸನ್ಮತವಾಗಿ ವೀರಶೈವಾ

ಚಾರ ಸಂಪನ್ನವಾಗಿರಬಲ್ಲಡೆ ಆತ ಮಹೇಶ್ವರನಪ್ಪನಯ್ಯ. ಇಂತೀ ಸನ್ಮತದ ವಿವರವನರಿಯದೆ ನಾನು ಮಹೇಶ್ವರ ತಾನು ಮಹೇಶ್ವರನೆಂಬರಯ್ಯ. ಈ ಮೂಕೊರೆಯರ ಮೆಚ್ಚವನೆ ನಮ್ಮ ಕೂ. ಚ. ಸಂ. ದೇವ."

ಈ ನಿಷ್ಠೆ ನಿಬ್ಬೆರಗು ಏಕೋಭಾವ ನಿರ್ಭಾವಾದಿ ಗುಣಸಂಪನ್ನನಾಗದವನು ಬರಿ ಮಾತಿನಲ್ಲಿಯೆ ಮಾಹೇಶ್ವರನಲ್ಲದೆ ನೈಜಮಾಹೇಶ್ವರನಲ್ಲ, ಅಂಥವನಿಂದ ಸಮಾಜಕ್ಕಾಗಲಿ ಸ್ವಂತಕ್ಕಾಗಲಿ ಏನೊಂದೂ ಪ್ರಯೋಜನವಿಲ್ಲ. ಮಹಾ-ಈಶ್ವರತ್ವವು ಬರೀ ಮಾತಿನಲ್ಲಿಯೆ ಬರುವಷ್ಟು ಸುಲಭವಲ್ಲ.

ಭವಿಪಾಕ ಭಕ್ತರಿಗೆ ಸಲ್ಲದು.

ಈ ವಿಚಾರವು ಇಂದಿನ ವೀರಶೈವರಿಗೆ ತುಂಬಾ ಜಟಿಲವಾಗಿದೆ. ಇದು ಬರೀ ಹೇಳಿಕೆಯಲ್ಲಿದೆಯೆ ಹೊರತು ನಡವಳಿಕೆಯಲ್ಲಿಲ್ಲ. ಶಿವಾನುಭವ ಶಾಸ್ತ್ರವನರಿತ ಅಭಿಮಾನಿಗಳೆ ಈ ನಿಯಮಕ್ಕೆ ಹೊರಗಾದ ಮೇಲೆ ಇನ್ನು ಇತರರ ಪಾಡೇನು? "...ಭವವಿರಹಿತಲಿಂಗಕ್ಕೆ ಭವಿಪಾಕವ ಕೊಟ್ಟಡೆ ರೌರವ ನರಕ ತಪ್ಪದು...ಕೂ. ಚ. ಸಂಗಯ್ಯ ಭವಿಪಾಕ ಪುನರಪಿ ಜನ್ಮ" ಎಂಬ ವಚನ ಸಿದ್ಧಾಂತ. ಹೋಟಲುಗಳ ಈ ಕಾಲದಲ್ಲಿ ಭವಿಪಾಕಕ್ಕೆ ಬಾಯಿಬಿಡುವ ಅಣ್ಣಗಳಿಗೆಲ್ಲ ಜನ್ಮಬಸವಣ್ಣನ ಅಪ್ಪಣೆಯಂತೆ ಪುನ್ನರಕವಾಸವು. ಪುನರ್ಜನ್ಮವು ಕಟ್ಟಿಟ್ಟ ಬುತ್ತಿ. ಇದನರಿದು ಲಿಂಗವಂತರು ಬಲು ಎಚ್ಚರದಿಂದಿರಬೇಕು.

ತಂದೆ ಗುರುವಾಗಲಾರ!

ತಂದೆ ತಾ ಬಲ್ಲಿದನೆಂದು ತನ್ನ ಮಗನಿಗೆ ದೀಕ್ಷೆಯನಿತ್ತು ಗುರುವಾಗಲು ಬರುವದಿಲ್ಲ. ಇದು ಇಂದಿನ ವಿಷಮ ವಾತಾವರಣದಲ್ಲಿ ಒಡಮೂಡತೊಡಗಿದೆ. ಇದರಿಂದ ಇಬ್ಬರಿಗೂ ಹೇಳತೀರದ ಕಷ್ಟನಷ್ಟಗಳೊದಗುತ್ತವೆ. ಅಲ್ಲದೆ ಅವರಿಬ್ಬರಲ್ಲಿ ಗುರುಶಿಷ್ಯ ಸಂಬಂಧವೂ ಸವಿನಿಸುವದಿಲ್ಲ. ಇದನ್ನು ಇಲ್ಲಿ ನೋಡಿ!

"ತನ್ನ ಪುತ್ರಂಗೆ ತಾನೆ ಗುರುವಾದೆನೆಂಬ ಗುರುದ್ರೋಹಿಯ ಮಾತು ಕೇಳಲಾಗದು. ಎನಗೆ ಎನ್ನ ತಂದೆಯೇ ಗುರುವೆನ್ನುವ ದ್ರೋಹಿಯ ಮುಖವ ನೋಡಲಾಗದು. ಅವರಿಬ್ಬರೊಳಗೆ ಗುರುಶಿಷ್ಯ

ಸಂಬಂಧವನಾಚರಿಸಿದೊಡೆ, ಅವರಿಬ್ಬರ ತರ್ಕಿಸಿ ಕಟ್ಟಿ ಹೊತ್ತಿಸಿ ನೊಂದಿಸಿ ಸುಡುವ ನಮ್ಮ ಕೂ. ಚ. ಸಂ. ದೇವ"

ಹಾಗೆ ಮಾಡುವಾತ ಗುರುದ್ರೋಹಿ! ಮಾಡಿಸಿಕೊಂಬುವಾತ ತತ್ವದ್ರೋಹಿ!!

ಬಾಹ್ಯದ್ವೈತವು ಬಾಳದು.

ಅದ್ವೈತಭಾವನೆಯು ಅಂತರಂಗದಲ್ಲಿ ಒಡಮೂಡಿ ಅಲ್ಲಿಯೆ ಅಚ್ಚಳಿಯದಿರಬೇಕೆ ವಿನಾ ಬಾಹ್ಯದಲ್ಲಿ ಬಳಸಲಾಗದು. ಎಲ್ಲವೂ ಒಂದೇ ಎಂದು ಆಚಾರಗಳನ್ನೆಲ್ಲ ಬಿಟ್ಟು ವಿಚಾರ ಬಂದಂತೆ ಹೋಗುವುದು ಮನುಷ್ಯನ ಕರ್ತವ್ಯವಲ್ಲ. ಇದರಿಂದ ಅದ್ವೈತಸಿದ್ಧಿಯೂ ಇಲ್ಲ. ಈ ಮಾತನ್ನು ಸ್ವಾರಸ್ಯವಾದ ಉಪಮೆಗಳಿಂದ ಪ್ರತಿಪಾದಿಸಿದ ಈ ವಚನವನ್ನೆ ಓದಿ ನೋಡಿ!

"ಸರ್ವವು ಶಿವನಿಂದುದ್ಭವಿಸಿದವೆಂದೊಡೆ ಹುಟ್ಟಿದವೆಲ್ಲವು ಶಿವನೆ? ಸಕಲಬೀಜವ ಬಿತ್ತುವ ಒಕ್ಕಲಿಗನೆಂದೊಡೆ ಆ ಬೆಳೆಯೆಲ್ಲ ಒಕ್ಕಲಿಗನೆ? ಮಡಕೆಯ ಮಾಡುವವ ಕುಂಬರನೆಂದೊಡೆ ಆ ಮಡಕೆಯೆಲ್ಲವು ಕುಂಬರನೆ? ಕಬ್ಬಿಣವು ಕಂಬರ ಮಾಡುವನೆಂದೊಡೆ, ಆ ಕಬ್ಬಿಣವು ಕಂಬರನೆ? ಈ ಪರಿಯಲ್ಲಿ ಸಕಲ ಸಚರಾಚರ ಪ್ರಾಣಿಗಳಿಲ್ಲವನು ಶಿವ ತನ್ನ ವಿನೋದಕ್ಕೆ ಸೇವಕರಿಂದೆ ಸೃಷ್ಟಿಸಿದೊಡೆ ಆ ಸಚರಾಚರದ ಪ್ರಾಣಿಗಳೆಲ್ಲವು ಶಿವನೆ? ಹಾಗಾದೊಡೆ, ಅಷ್ಟಾದಶವರ್ಣಂಗಳೇಕಾದವು? ಭವಿ ಭಕ್ತರೆಂಬುಭಯವೇಕಾದವು? ಆಚಾರ ಅನಾಚಾರವೇಕಾದವು? ಇದು ಕಾರಣವಾಗಿ ಸದಾಚಾರ ಸದ್ಭಕ್ತಿಯಲ್ಲಿಪ್ಪುದು. ಅಲ್ಲಿಪ್ಪನಲ್ಲದೆ ಎಲ್ಲ ಒಂದೇ ಎಂದು ಬೊಗಳುವ ಚಾಂಡಾಲರಿಗೆ ಅಘೋರ ನರಕ ತಪ್ಪದಯ್ಯಾ ಕೂ. ಚ. ಸಂ. ದೇವ."

ಸರ್ವಾದ್ವೈತವು ಬಾಹ್ಯಾದ್ವೈತವಾಗಿ ಬೆಲೆ ಬಾಳದು. ಈ ಮಾತಿನ ಸಿದ್ಧಿಗಾಗಿ ವಚನದಲ್ಲಿ ಬರುವ ಕುಂಬರ, ಕಂಬರ ಉಪಮೆಗಳು ಉತ್ಕೃಷ್ಟವಾದವುಗಳು. ಪ್ರಶ್ನೆಗಳು ಪರಿಪಕ್ವವಾದವುಗಳು.

ಸಪ್ತವಿಧ ತಾಮಸ ಪ್ರಸಾದ.

ಗುರು ಲಿಂಗ ಜಂಗಮದಿಂದ ಬರುವುದೇ ಪ್ರಸಾದವಲ್ಲ. ತನ್ನ ಮನದ ಸಂಕಲ್ಪಗಳೂ ಪ್ರಸಾದಗಳೆ. ಸತ್‌ಸಂಕಲ್ಪಗಳು ಶುದ್ಧಾದಿ

ತ್ರಿವಿಧ ಪ್ರಸಾದಗಳು. ಆದೆ ದುಸ್ಸಂಕಲ್ಪಗಳಾದರೆ ಮುಂದೆ ಈ ವಚನವು ಸ್ವತಂತ್ರವಾಗಿ ಹೆಸರಿಸಿದ ಮತ್ತು ವಿವರಿಸಿದ '೧ ಉಪಜೀವಿತ ಪ್ರಸಾದ, ೨ ತುಡುಗುಣಿ ಪ್ರಸಾದ, ೩ ದಳಾದುಳಿ ಪ್ರಸಾದ, ೪ ಪೀಡೆಕಾರ ಪ್ರಸಾದ, ೫ ಸಮಯ ಪ್ರಸಾದ, ೬ ಹುಸಿನುಸುಳು ದೆಸೆಗೇಡಿ ಪ್ರಸಾದ, ೭ ಸಂದೇಹ ಕಂದಿನ ಪ್ರಸಾದ ಈ ಸಪ್ತವಿಧ ಪ್ರಸಾದಗಳಾಗುತ್ತವೆ. ಇವುಗಳಿಂದ ಯಾವ ಪ್ರಸನ್ನತೆಯೂ ಇಲ್ಲ. ಆದರಿವು ಜನ ಮನದಲ್ಲಿ ತನುವಿನಲ್ಲಿ ಎಷ್ಟು ಸಹಜವಾಗಿರುತ್ತವೆಂಬುದನ್ನು ಈ ವಚನವು ಸಹಜ ಸ್ಪಷ್ಟವಾಣಿಯಲ್ಲಿ ವಿವರಿಸಿದೆಯೆಂಬುದನ್ನ ನೋಡಬೇಕು.

"ಅಡಿಗಡಿಗೆ ಸಿರಿವಂತರೆಂದು ನೋಡಿಕೊಂಬುವುದು, ಉಪಜೀವಿತ ಪ್ರಸಾದ. ಬಡವರೆಂದು ಒರೆ ಮುಗ್ಗಲಾಗಿ ಕೊಂಬುವುದು, ತುಡುಗುಣಿ ಪ್ರಸಾದ. ನಚ್ಚು ಮುಚ್ಚಿನಿಂದ ಎಳೆದು ಸೆಳೆದುಕೊಂಬುವುದು, ದಳಾದುಳಿ ಪ್ರಸಾದ. ಇಕ್ಕುದವರನಂಜಿಸಿಕೊಂಡು ಕೊಂಬುವುದು ಪೀಡೆಕಾರ ಕರ್ಮ ಪ್ರಸಾದ. ಇಕ್ಕುವಾತ ಮನದಲ್ಲಿ ಗುಡಿಗಟ್ಟಿಕೊಂಬುವುದು ಸಮಯ ಪ್ರಸಾದ. ವೇಷಧಾರಿ ಹುಸಿಹುಂಡರಲ್ಲಿ ಕೊಂಬುವುದು, ಹುಸಿನುಸುಳು ದೆಸೆಗೇಡಿ ಪ್ರಸಾದ. ಅರಿವು ಆಚಾರ ಹೀನರಾದ ಸಂಕಲ್ಪದಲ್ಲಿ ಕೊಂಬುವುದು, ಸಂದೇಹ ಕಂದಿನ ಪ್ರಸಾದ. ಇದು ಕಾರಣ ಕೂ. ಚ. ಸಂ. ದೇವಾ ನಿಮ್ಮ ಪ್ರಸಾದಿಗಳಪೂರ್ವವಯ್ಯ!"

ಈ ವಚನವನ್ನು ಓದುವಾಗಲೆ ಈ ಸಂಕಲ್ಪ, ಈ ಇಂದ್ರಿಯಜೇಷ್ಟೆ ಪ್ರಸಾದ ತೆಗೆದುಕೊಂಬುವಾಗ ಇರುವುದು ಬರುವುದು ಸರಿಯೆಂದ ಮನಸ್ಸು ಒಪ್ಪಿಕೊಳ್ಳುತ್ತದೆ. ಕೊನೆಯ ಮೂರು ಪಂಕ್ತಿಗಳಲ್ಲಿ ಹೇಳಿದಂತಹ, ಪ್ರಸಾದವನ್ನಣಿಮಾಡಿ ಎಡೆಮಾಡುವ ವ್ಯಕ್ತಿಗಳಿರುವುದೂ ಕಣ್ಣಿದುರು ಕಂಡಂತಾಗುತ್ತದೆ.

ಪತ್ರ ಪ್ರಸಾದ (ಎಲೆಯೂಟ)ದ ಫಲ!

"ಭಕ್ತ ಲಿಂಗಾರ್ಪಿತವ ಮಾಡಿದ ಪತ್ರಭಾಜನಮುಂ ಶ್ವಾನ, ಸೂಕರ, ಗಾರ್ದಭ, ಕುಕ್ಕುಟ, ಮಾರ್ಜಾಲಂಗಳು ಮುಟ್ಟಿಸೊಡೆ ಅವರ ಕೂಡ ಸಹ ಭೋಜನವ ಮಾಡಿದಂತೆ ಕಾಣಿರಣ್ಣ!" ಎಂಬೀ ವಚನದಿಂದ ಎಲೆಯಲ್ಲಿ ಊಟ ಮಾಡುವದರಿಂದೊದಗುವ ಪ್ರತಿಫಲವು ಗೊತ್ತಾಗುವದಲ್ಲದೆ, ಅಂದಿಗೂ ವೀರಶೈವರು ಎಲೆಗಳಲ್ಲಿಯೆ ಭೋಜನ

ನೈಯುತ್ತಿದ್ದರೆಂಬುದು ಸಿದ್ಧಾಂತವಾಗುತ್ತದೆ. ಈ ಅನಾಚಾರವನ್ನು ಅಲ್ಲಗಳೆಯುವದಕ್ಕೇನೆ ಚನ್ನಬಸವಣ್ಣನವರ ಈ ವಚನದ ಉತ್ಪತ್ತಿ! ಇದೇ ಉದ್ದೇಶ! ಇದನೋದಿ ಅರಿದಾದ ಮೇಲಾದರೂ ಎಲೆಯೂಟ ಮಾಡುವದನ್ನು ಲಿಂಗ ಭಕ್ತರು ಬಿಟ್ಟರೆ ಲೇಸಲ್ಲವೆ?

ಲಿಂಗ ಭಿನ್ನವಾದರೆ? ಬಿದ್ದುಹೋದರೆ?

ಲಿಂಗ ಭಿನ್ನವಾದರೆ ಅಂಗಕ್ಕೆ ಅಲಗನಿಕ್ಕಿ ಅಂಗವನ್ನು ಭಿನ್ನ ಭಿನ್ನಗೊಳಿಸುವರು ಕೆಲವರು. ಲಿಂಗ ಕಳಚಿಹೋದರೆ ಅಸುವಳಿವರು ಕೆಲವರು. ಲಿಂಗ ಭಿನ್ನವಾದರೆ ಇಲ್ಲವೆ ಬಿದ್ದುಹೋದರೆ, ಅಂಗಛೇದನವಾಗಲಿ, ಪ್ರಾಣ ಪರಿತ್ಯಜಿಸುವದಾಗಲಿ ಪರಂಪರೆಯಾಗಿ ಬಂದ ಮೂಢ ಸಂಪ್ರದಾಯ. ಇದು ಅರುವಿಗೆ ಹೊರಗು. ಪ್ರತಿಯಿಲ್ಲದ ಲಿಂಗಕ್ಕೆ ಭಿನ್ನತ್ವವುಂಟೆ? ಅತ್ಯತಿಷ್ಠದ್ದಶಾಂಗುಲಂ ಲಿಂಗಕ್ಕೆ ಅಗಲಕಿಯುಂಟೆ? ಎಂದಿಗೂ ಇಲ್ಲ. ಇದನರಿಯದೆ ಶರೀರದ ಮೇಲೆ ಶಸ್ತ್ರವನಿಕ್ಕುವುದು ಆತ್ಮಘಾತಕತ್ವ, ಇದಕ್ಕಿಂತ ಬೇರೆ ದ್ರೋಹವಿಲ್ಲ. ದುರ್ಭಾಗ್ಯವಿಲ್ಲ.

ಗುರುಕಾರುಣ್ಯವುಳ್ಳ ಭಕ್ತನ ಲಿಂಗವು ಒಂದು ವೇಳೆ ಓಸರಿಸಿದರೂ ಸಹ ಆತ ವ್ರತಕ್ಕೆ ಬಾಹಿರನಾಗನು. ಆತನ ಪ್ರಾಣಕ್ಕೆ ಸಂಚಕಾರ ತೆರಲಾಗದು. "ಶಸ್ತ್ರ, ಸಮಾಧಿ, ಜಲ, ತಾಡನ, ದಿಗ್ಬಲಿ, ದಹನ ಈ ಆರರಲ್ಲಿ ಸತ್ತಡೆ ಅಘೋರ ನರಕದಲ್ಲಿಕ್ಕುವ" ಎಂದುದು ವಚನ. ಒಂದುವೇಳೆ ಭಾಷೆಗೆ ಇಲ್ಲವೆ ಸಂಪ್ರದಾಯಕ್ಕೆ ಕಟ್ಟುಬಿದ್ದು ಅಂಗದ ಮೇಲೆ ಅಲಗನೆತ್ತಿದರೆ, ಜೀವಸಮಾಧಿಯನೈದಿದರೆ, ಕೆರೆ ಭಾವಿಗಳ ಪಾಲಾದರೆ, ತಾಡನಗಳಿಂದ ಪಂಚಪ್ರಾಣಗಳ ಈಡಾಡಿದರೆ, ದಿಗ್ಬಲಿಯಿಂದ ನಿರ್ಜೀವಿಯಾದರೆ, ದಹನ ಕ್ರಿಯೆಯಿಂದ ದೇಹ ಭಸ್ಮವ ಮಾಡಿದರೆ ಆತ ಲಿಂಗ ಜಂಗಮಕ್ಕೆ ದೂರ; ಪ್ರಸಾದಕ್ಕೆ ಹೊರಗು; ಪಾದೋದಕಕ್ಕೆ ಸಲ್ಲ. ಇದಕ್ಕಿಂತಲೂ ಬೇರೆ 'ವ್ರತಗೇಡಿತನ'ವಿಲ್ಲ. ಆತ ಶರಣನೆನಿಸಲಾರ. ಆತ ಅಂಗವೆ ಆತ್ಮ-ಲಿಂಗವೇ ಸಂಬಂಧ ಎಂಬ ಅಂಗಲಿಂಗದ ಬೆಸುಗೆಯನರಿಯ. ಎಲ್ಲೆಲ್ಲಿಯೂ ತುಂಬಿ ತುಳುಕುವ ಲಿಂಗವು ಬೀಳುವುದೆಲ್ಲಿ? ಏಳುವುದೆಲ್ಲಿ? ಎರಡಿಲ್ಲದೆ ಏಕವಾದ ಲಿಂಗವು ಅಗಲುವದೆಲ್ಲಿ? ತ್ರಿಕಾಲಾಬಾಧಿತವಾದ ಲಿಂಗಕ್ಕೆ ಭಿನ್ನತ್ವ

ಘಟಿಪುದೆಂದರೇನು? ಅಲ್ಲವೆ ಬಂಟನೋರ್ವನು ಕಲಿತನವ ಸಾಧಿಸುವಲ್ಲಿ ಕೋಲು ಕಳಚಿದರೆ ಅದು ಭಂಗವಲ್ಲ. ಮರಳಿ ಆ ಕೋಲು ಕೊಂಡು ಅಭ್ಯಾಸ ಮಾಡುವುದೆ ಉಚಿತ. ಅದೆ ಉತ್ತುಮಿಕೆ.

ಅನುಭಾವಕ್ಕೆ ಏಕಾಂತ!

ಅನುಭಾವಕ್ಕೆ ಅನುಗುಣವಾದ ಏಕಾಂತ ಬೇಕೇಬೇಕು. ಅದನ್ನು ಸಿಕ್ಕಸಿಕ್ಕಲ್ಲಿ ಹೇಳಕೂಡದು. ಏಕೆ ಹೇಳಕೂಡದೆಂದು ವಿತಂಡವಾದವ ಮಾಡುವವನನ್ನು ವಚನಕಾರನು "...ಸಂತೆಯೊಳಗೆ ಸಮಾಧಿಯುಂಟಿ ಮರುಳೆ?'' ಎಂದು ಕೇಳುತ್ತಾನೆ; ಮೂದಲಿಸುತ್ತಾನೆ. ಸಾಲದ್ದಕ್ಕೆ.

"ಅನುಭಾವ ಅನುಭಾವವೆಂದೆಂಬಿರಿ; ಅನುಭಾವವೆಂಬುದು ನೆಲದ ಮರೆಯ ನಿಧಾನ ಕಾಣಿರೊ. ಅನುಭಾವವೆಂಬುದೇನು ರಜ್ಜೆಯ ಮಾತೆ? ಅನುಭಾವವೆಂಬುದೇನು ಸಂತೆಯ ಸುದ್ದಿಯೆ? ಅನುಭಾವವೆಂಬುದೇನು ಬೀದಿಯ ಪಸಾರವೆ? ಏನ ಹೇಳುವೆನಯ್ಯ ಅನುಭಾವದ ಘನವನು? ಆನೆಯ ಮಾನದೊಳಗಿಕ್ಕಿದೊಡೆ ಅಡಗುವುದೆ ದರ್ಪಣ ದೊಳಗಲ್ಲದೆ? ಆ ಹಾಗೆ ಕಂಡಕಂಡಲ್ಲಿ ಗೋಷ್ಠಿ ಗೋಷ್ಠಿ, ನಿಂದ ನಿಂದಲ್ಲಿ, ಬಂದ ಬಂದಲ್ಲಿ ಅನುಭಾವವ ಮಾಡುವ ಪಾತಕರನೆನಗೊಮ್ಮೆ ತೋರದಿರಯ್ಯ ಕೂಡಲಚನ್ನಸಂಗಮದೇವಾ!"

ಅನುಭಾವದ ಗೋಪ್ಯತೆಯನ್ನು ಬಿಚ್ಚಿ ನುಡಿಯಲ್ಲಿ ಬಿತ್ತರಿಸಿದ್ದಾನೆ. ಸಿಕ್ಕಲ್ಲಿ ಬಳಸುವವರು ಪಾತಕರು. ಅವರೊಡನೆ ಮಾತಾಡುವದೊಂದೆಡೆಗಿರಲಿ ಅವರ ದರ್ಶನವು ಅನುಚಿತವೆಂದು ದೃಢಸಂಕಲ್ಪ ಮಾಡುತ್ತಾನೆ. ಅಂಥವರನ್ನು ತೋರದಿರೆಂದು ಕೂಡಲಚನ್ನಸಂಗನನ್ನು ಪ್ರಾರ್ಥಿಸುತ್ತಾನೆ.

—ಮುಂಬಪ್ಪುದು.

ವೀರಶೈವ ಮತವು ಶಿವಶರಣ ನಿರ್ಮಿತವು.

(ಲೇಖಕ—ಧರ್ಮಾಭಿಮಾನಿ)

(ಈ ವಿಷಯವು ವಾದಾಸ್ಪದವಿದ್ದು, ಇದರಲ್ಲಿಯ ಎಲ್ಲ ವಿಚಾರಗಳು ಸಂಪಾದಕರಂಗೆಸಮ್ಮತವೆಂದು ಭಾವಿಸಕೂಡದು.—ಸಂಪಾದಕ)

ಈ ಲೇಖವನ್ನು ನಿರ್ವಿಕಾರ ಬುದ್ಧಿಯಿಂದಲೂ ಮತದ ವಿಶೇಷ ಅಭಿಮಾನದಿಂದಲೂ ಬರೆಯುತ್ತಿದ್ದೇನೆ. ಶೈವ ಮತದ ಸ್ಥಾವರ ಲಿಂಗ ಪೂಜೆಯ ನಿರಸನ, ಜಾತಿ ಭೇದ ರೂಪ ವರ್ಣಾಶ್ರಮ ನಿರಾಕರಣೆ ಇವುಗಳಿಂದ ಶೈವ ಮತ ಖಂಡನೆ ಮತ್ತು ಇಷ್ಟಲಿಂಗ ಪೂಜೆ, ಸಮತಾ ಭಾವವುಳ್ಳ ಸಮಾಜ ರಚನೆ, ಶಿವಾನುಭವ ಸಾಧನ ಇವುಗಳಿಂದ ವೀರಶೈವ ಮತ ಮಂಡನವನ್ನು ಬಸವಾದಿ ಪ್ರಮುಥರೇ ತಮ್ಮ ಅನುಭವ ಮಂಟಪದ ಚರ್ಚಾತ್ಮಕ ಮಥನದಿಂದ ಮಾಡಿದ್ದಾರೆ. ಈ ಪ್ರಮಥ ಪುಂಗವರೇ ತಮ್ಮ ಪ್ರತ್ಯಕ್ಷ ಅನುಭವಕ್ಕೆ ಬಂದ ಶಿವಾನುಭವವನ್ನೇ ವಚನಶಾಸ್ತ್ರದಿಂದ ಪ್ರತಿಪಾದಿಸಿ ಅದರಂತೆ ಆಚರಿಸಿ, ಸಮಾಜ ಸಂಘಟನೆಯನ್ನು ಮಾಡಿ ವೀರಶೈವ ಧರ್ಮವನ್ನು ಪ್ರಸ್ಥಾಪಿಸಿದ್ದಾರೆ. ಪ್ರಮಥರಾದ ಶಿವಶರಣರು, ಅಚ್ಚ ಶಿವಾನುಭವಿಗಳಿದ್ದು ಶಿವಸಾಕ್ಷಾತ್ಕಾರದಿಂದ ವೀರಶೈವ ಧರ್ಮ ದಷ್ಟಾರರಾಗಿದ್ದಾರೆಂಬದನ್ನು ಅವರು ಐಕ್ಯಾವಸ್ಥೆಯ ಆನಂದ ಪರವಶ ಸ್ಥಿತಿಯನ್ನು ಅನುಭವಿಸಿದನಂತರ ಉತ್ಥಾನರಾಗಿ ಸಹಜ ಸ್ಥಿತಿಯಲ್ಲಿ ನುಡಿದ ವಚನಗಳಿಂದ ಮನಗಂಡ ಐತಿಹಾಸಿಕ ಸಂಗತಿಯಾಗಿದೆ. ಈ ವಿಷಯದ ಬಗ್ಗೆ ಶ್ರೀಮಾನ್ ರಂಗರಾವ ದಿವಾಕರ ಎಂ. ಎ.; ಎಲ್. ಎಲ್. ಬಿ. ಅವರಂಥ ಪರಮತಿಯರೂ ಕೂಡ ಶಿವಶರಣರ ವಚನಶಾಸ್ತ್ರವನ್ನು ಸಾಕಷ್ಟು ಆಳವಾಗಿ ಅಭ್ಯಾಸ ಮಾಡಿ ವಚನಾಮೃತ ರಹಸ್ಯವೆಂಬ ಅಮೌಲ್ಯ ಗ್ರಂಥವನ್ನು ರಚಿಸಿದ ವರ ಅಭಿಪ್ರಾಯವು ಸಾಕ್ಷಿಯಾಗಿದೆ. ಶ್ರೀಮಾನ್ ದಿವಾಕರರು ಪಾಶ್ಚಿಮಾತ್ಯ ಹಾಗೂ ಪೌರ್ವಾತ್ಯ ತತ್ವಜ್ಞಾನವನ್ನು ಚನ್ನಾಗಿ ಅಭ್ಯಾಸಮಾಡಿದ್ದಾರೆ. ಇಂಥವರು ತಮ್ಮ ವಚನಾಮೃತ ರಹಸ್ಯದಲ್ಲಿ ಶಿವಶರಣರನ್ನೂ ಅವರ ವಚನಗಳನ್ನೂ ಪೂರ್ವಕಾಲದ ಋಷಿಗಳಿಗೂ ಆವರ ಉಪನಿಷತ್ತುಗಳಿಗೂ, ಇಲ್ಲಿಯ ಹಾಗು ಇತರದೇಶಗಳ ತತ್ವಜ್ಞಾನಿಗಳಿಗೂ ಸಾಕ್ಷಾತ್ಕಾರಿಗಳಿಗೂ

ಚನ್ನಾಗಿ ಹೋಲಿಸಿ ಶರಣರು ತಮ್ಮ ವಚನಗಳಲ್ಲಿ ನುಡಿದಂತೆ ನಡೆವ ಶಿವಾನುಭವಿಗಳೂ, ಶಿವಾನಂದ ಸಾಕ್ಷಾತ್ಕಾರಿಗಳೂ ವೀರಶೈವ ಧರ್ಮ ದೃಷ್ಟಾರರೂ ಆಗಿದ್ದರೆಂದು ಸರಳ ಹೃದಯದಿಂದಲೂ, ಆದರ ಭಾವದಿಂದಲೂ ಸಾರಾಸಾರ ವಿಚಾರಪೂರ್ಣ ವಿಮರ್ಶಕ ಬುದ್ಧಿಯಿಂದಲೂ ಅಭಿಪ್ರಾಯಪಟ್ಟಿದ್ದಾರೆ. ಇತರ ಮತ ಪ್ರಸಾರಕರು ತಮ್ಮ ಧ್ಯೇಯವಾದ ಸಾಕ್ಷಾತ್ಕಾರವನ್ನು ತಮಗೆ ಸರಿದೋರಿದ ಒಂದೊಂದೇ ಸಾಧನವನ್ನು ಉಪಯೋಗಿಸಿ ಪಡೆದಿದ್ದಾರೆ. ಶಿವಶರಣರು ಜ್ಞಾನ, ಭಕ್ತಿ, ಧ್ಯಾನ ಮತ್ತು ಕ್ರಿಯೆಗಳನ್ನೊಳಗೊಂಡ ಸಮನ್ವಯ ಮಾರ್ಗವಾದ ಶಿವಯೋಗವನ್ನು ಸಾಧಿಸಿ ಲಿಂಗಾಂಗ ಸಾಮರಸ್ಯದ ಶಿವಾನಂದವನ್ನು ಪಡೆದು ಅದರ ಪರಿಣಾಮವಾಗಿ ಎಲ್ಲ ಲಿಂಗಧಾರಿಗಳಿಗೂ ಜ್ಞಾನಯುಕ್ತ ಕ್ರಿಯಾದ್ವೈತವನ್ನೇ ಸುಲಭವಾದ ಅಚ್ಚಗನ್ನಡದಲ್ಲಿ ಬೋಧಿಸಿ ಪಾಮರ ಪಂಡಿತರು ಮನುಷ್ಯಮಾತ್ರರು ಅನುಸರಿಸಲು ಯೋಗ್ಯವಾದ ವಿಶ್ವಧರ್ಮವನ್ನೇ ತಮ್ಮ ಆಚಾರ ವಿಚಾರಗಳಿಂದ ಪ್ರಸಾರಗೊಳಿಸಿ ಪರಸ್ಪರ ಭಕ್ತಿ ಪ್ರೇಮ ಭಾವವುಳ್ಳ ಲಿಂಗಾಯತ ಸಮಾಜವನ್ನು ಸಂಘಟಿಸಿದ್ದಾರೆಂದು ಅಂತಃಕರಣ ತುಂಬಿದ ಪ್ರೇಮಭಾವದಿಂದ ಶಿವಶರಣರನ್ನು ಕೊಂಡಾಡಿದ್ದಾರೆ. ಈ ಪ್ರಕಾರ ದಿವಾಕರ ರಂಗರಾಯರು ಶಿವಶರಣರ ವಚನಗಳ ರಹಸ್ಯವನ್ನು ವಿಚಾರ ಪರಿಪ್ಲುತವಾದ ಸರಳ ಪ್ರೌಢಿಯಲ್ಲಿ ಬರೆದು ಕನ್ನಡಿಗರ ವಿಶೇಷವಾಗಿ ವೀರಶೈವರ ಸೇವೆಗೈದು ಅವರನ್ನು ಉಪಕೃತರನ್ನಾಗಿ ಮಾಡಿದ್ದಾರೆ. ಈ ವಿವರಣೆಯಿಂದ ಬಸವಾದಿ ಪ್ರಮಥರು ವೀರಶೈವ ಧರ್ಮ ದೃಷ್ಟಾರರೂ ಪ್ರಸ್ಥಾಪಕರೂ ಆಗಿದ್ದಾರೆಂದು ವಾಚಕರಿಗೆ ಮನವರಿಕೆಯಾಗಬಹುದೆಂದು ನಂಬಿದ್ದೇನೆ.

ಆದರೆ ಈ ಪ್ರಮಥರ ಕಾಲವಾದ ೧೨ನೆಯ ಶತಮಾನಕ್ಕಿಂತ ಪೂರ್ವದಲ್ಲಿ ದೇವರದಾಸಿಮಯ್ಯ, ಶಂಕರದಾಸಿಮಯ್ಯರಂಥ ಅಪವಾದಾತ್ಮಕ ಶರಣರಸುತ್ತಲೂ ಶೈವಮತವೇ ಎಲ್ಲೆಲ್ಲಿಯೂ ಹಬ್ಬಿತ್ತು. ಆದರ ಖಂಡನ, ವೀರಶೈವ ಮತ ಮಂಡನಗಳನ್ನು ಬಸವಾದಿ ಪ್ರಮಥರು ಮಾಡಿದನಂತರ ಶೈವ ಆರಾಧ್ಯ ಬ್ರಾಹ್ಮಣರು ಪ್ರಮಥರ ಲಿಂಗಾಯತ ಮತವನ್ನು ಸ್ವೀಕರಿಸಿದರೂ ಕೂಡ ತಮ್ಮ ಪೂರ್ವಾಶ್ರಯವಾದ ಸ್ಥಾವರ ಲಿಂಗಪೂಜೆ ವರ್ಣಭೇದವನ್ನು ನಿರಾಕರಿಸದೆ 'ತಾವು ಆಚಾರ್ಯರು'

ಆರಾಧ್ಯರು—ಶರ್ಮಾರವರು—ಲಿಂಗೀ ಬ್ರಾಹ್ಮಣರು ತಮ್ಮ ಸಂಬಂಧಿಕರು ಮಹೇಶ್ವರರು, ಉಳಿದವರು ಸಾಮಾನ್ಯ ಭಕ್ತರು ಈ ಭೇದವು ಜನನದಿಂದಲೇ ಬರುವದೆಂದು ರೂಢಿಗೈದರು. ಈ ರೂಢಿಯು ಪ್ರಮುಥರಿಂದ ನಿರಾಕರಿಸಲ್ಪಟ್ಟ ಶೈವಮತಕ್ಕೆ ಸಂಬಂಧಿಸಿದ್ದು ಮಾತ್ರ. ಹರಳಯ್ಯ ಮಧುವಯ್ಯರ ಪ್ರಕರಣದಿಂದ ಪಾಠ ಕಲಿತವರಿಂದ ಅದರ ಪರಿಣಾಮವನ್ನು ತಪ್ಪಿಸುವದಕ್ಕೋಸ್ಕರ ಅಂಗೀಕರಿಸಿದ್ದು. ಅಂಗದ ಮೇಲೆ ಲಿಂಗ ಧರಿಸಿದ ನಂತರ ಪೂರ್ವಾಶ್ರಯ ನಿರಸನದ್ವಾರಾ ಉಂಟಾದ ಸಮತಾ ಭಾವದ ಜಾತಿಭೇದವಿಲ್ಲದ ಸಮಾಜರಚನೆಯುಳ್ಳ ವೀರಶೈವ ಧರ್ಮಕ್ಕೆ ವಿರುದ್ಧವಾದದ್ದು. ಧರ್ಮ ಸ್ವಾತಂತ್ರ್ಯ- ರಾಜಕೀಯ ಸ್ವಾತಂತ್ರ್ಯ—ವ್ಯಕ್ತಿ ಸ್ವಾತಂತ್ರ್ಯ ಇವುಗಳ ಪ್ರಾಬಲ್ಯವು ಎಲ್ಲೆಲ್ಲಿಯೂ ಬೆಳೆದ ಈಗಿನ ಇಪ್ಪತ್ತನೆಯ ಶತಮಾನದಲ್ಲಿಯಂತೂ ಈ ವರ್ಣ–ಜಾತಿಭೇದ ದೃಷ್ಟಿಯಂತೂ ತೀರ ತಿರಸ್ಕರಣೀಯ ಮತ್ತು ಅಕ್ಷಮ್ಯವಾದದ್ದು. ವೀರಶೈವ ಧರ್ಮದೃಷ್ಟಾರರು— ಪ್ರಸ್ತಾಪಕರು ಆದ ಪ್ರಮುಥರು ಮಾತ್ರ ಪ್ರತಿಯೊಬ್ಬ ಲಿಂಗಧಾರಿಯು ಶ್ರದ್ಧಾಭಕ್ತಿಯಿಂದ ಭಕ್ತನೂ, ನಿಷ್ಠಾಭಕ್ತಿಯಿಂದ ಮಹೇಶ್ವರನೂ ಅವಧಾನ ಭಕ್ತಿಯಿಂದ ಪ್ರಸಾದಿಯೂ, ಅನುಭವ ಭಕ್ತಿಯಿಂದ ಪ್ರಾಣಲಿಂಗಿಯೂ, ಆನಂದ ಭಕ್ತಿಯಿಂದ ಶರಣನೂ ಮತ್ತು ಸಮರಸಭಕ್ತಿಯಿಂದ ಐಕ್ಯನೂ ಹೀಗೆ ಕ್ರಮೇಣ ಅನುಭವ ಬಲಿತಂತೆ, ಶಿವಾನುಭವವು ಅಂಗಕ್ಕೆ ಅಳವಟ್ಟಂತೆ ಪೂರ್ಣ ಪ್ರಗತಿಯ ಶಿವಮಯ ಸ್ಥಿತಿ ಪಡೆಯಲು ಈ ಸೋಪಾನ ಮಾರ್ಗವನ್ನ ನುಡಿದು ಅದರಂತೆ ನಡೆದು ಆದರ್ಶರಾಗಿದ್ದಾರೆ. ಇಷ್ಟೆಲ್ಲ ಸಂಗತಿಗಳು ಶಿವಶರಣರ ಚರಿತ್ರೆಗಳಿಂದಲೂ ಅವರ ವಚನಶಾಸ್ತ್ರ ಸಾಹಿತ್ಯದಿಂದಲೂ ಕಂಡುಬರುತ್ತವೆ.

ಮುಂದೆ ಪ್ರಮುಥರ ಕಾಲದ ನಂತರ ಹದಿಮೂರನೆಯ ಶತಮಾನದಿಂದೀಚೆಗೆ ಅವರಿಂದ ಪ್ರತಿಪಾದಿಸಲ್ಪಟ್ಟ ಧರ್ಮದ ಷಟ್‌ಸ್ಥಲಾತ್ಮಕ ಅನುಭವ ತತ್ವಗಳನ್ನು ಸಂಸ್ಕೃತ ಭಾಷಾಪ್ರವೀಣರು, ಧರ್ಮದ ಪ್ರೌಢಿಗಾಗಿ ಗೌರವಕ್ಕಾಗಿ ಶೈವರನ್ನನುಸರಿಸಿ ಸಂಸ್ಕೃತದಲ್ಲಿ ಪ್ರತಿಪಾದಿಸತೊಡಗಿದರು. ಇವರ ಪರಿಶ್ರಮದ ಫಲವಾಗಿ ವೀರಶೈವ ಸಿದ್ಧಾಂತ ಶಿಖಾಮಣಿ, ವೀರಶೈವಪರ ವ್ಯಾಸಸೂತ್ರ ಭಾಷ್ಯ, ಶಿವಾನುಭವಸೂತ್ರ ಕ್ರಿಯಾಸಾರ, ಲಿಂಗಧಾರಣ ಚಂದ್ರಿಕೆ ಮುಂತಾದ ಸಂಸ್ಕೃತ ಗ್ರಂಥಗಳು ಕ್ರಮವಾಗಿ ಶ್ರೀಶಿವಯೋಗಿ ಶಿವಾಚಾರ್ಯ (೧೩ನೆಯ ಶತ

ಮಾನ) ಶ್ರೀ ನೀಲಕಂಠ ಶಿವಾಚಾರ್ಯ (ಸುಮಾರು ಕ್ರಿ. ಶ. ೧೪೦೦) ಶ್ರೀನೊಗ್ಗಿಮಾಯದೇವ. (೧೪ಜಂ) ಶ್ರೀನಂದಿಕೇಶ್ವರ ಶಿವಾಚಾರ್ಯ (೧೭ನೆಯ ಶತಮಾನ) ರಿಂದ ರಚಿಸಲ್ಪಟ್ಟಿವೆ. ಅಲ್ಲದೆ ಪ್ರಮುಥರ ಷಟ್‌ಸ್ಥಲಶಾಸ್ತ್ರವು ಶೈವಾಗಮದಲ್ಲಿ ಉತ್ತರಭಾಗವಾಗಿ ಕೇರಿಸಲ್ಪಟ್ಟ ವಾತುಲೋತ್ತರ ಮುಂತಾದ ವೀರಶೈವಪರ ಆಗಮಗಳಾಗಿವೆ. ಮೊದಲು ಕೇವಲ ಶೈವ ಶಾಕ್ತ ಮತ್ತು ಪಾಂಚರಾತ್ರ ಅಥವಾ ವೈಷ್ಣವ ಆಗಮಗಳೆಂದು ಮೂರೇ ವಿಧವಾದ ಆಗಮ ವಿಭಾಗಗಳಿದ್ದವು. ಈ ಸಂಗತಿಗಳನ್ನು ಲಿಂಗರಾಜ ಕಾಲೇಜದ ಸಂಸ್ಕೃತ ಪ್ರೋಫೇಸರರಾದ ಎಂ. ಆರ್. ಸಾಖರೆ ಎಂ. ಎ.; ಟಿ; ಡಿ. (ಲಂಡನ್) ಅವರು ತಮ್ಮ ಲಿಂಗಧಾರಣ ಚಂದ್ರಿಕೆಯ ಪ್ರಸ್ತಾವನೆಯಲ್ಲಿ ಸವಿಸ್ತಾರವಾಗಿ ಪ್ರತಿಪಾದಿಸಿದ್ದಾರೆ. ಜಿಜ್ಞಾಸುಗಳು ಅವರ ಗ್ರಂಥವನ್ನು ಪರಿಶೀಲಿಸಬಹುದು. ಈ ಸಂಶೋಧನ ಕಾರ್ಯದ ಬಗ್ಗೆ ಪ್ರೊ. ಸಾಖರೆಯವರಿಗೆ ಸಮಾಜವು ಅತ್ಯಂತ ಋಣಿಯಾಗಿದೆ. ಐತಿಹಾಸಿಕ ಸಂಗತಿಗಳು ಹೀಗಿದ್ದರೂ ಸಹ ಶರಣಸಾಹಿತ್ಯ ಪತ್ರಿಕೆಯ ಎಪ್ರೀಲ ತಿಂಗಳ ಸಂಚಿಕೆಯಲ್ಲಿ ಶಿವಮೂರ್ತಿ ಬಿ. ಶಿವಮೂರ್ತಿಶಾಸ್ತ್ರಿಗಳು ಕೀರ್ತನಕೇಸರಿಯವರು ವೀರಶೈವ ಮತವೂ ಸನಾತನತ್ವವೂ ಎಂಬ ಲೇಖವನ್ನು ಬರೆದು ವೀರಶೈವ ಮತವು ಎಂಟನೆಯ ಶತಮಾನದಷ್ಟಾದರೂ ಸನಾತನದ್ದೆಂದು ಸಾಧಿಸಲು ಪ್ರಯತ್ನಿಸಿದ್ದಾರೆ. ಆ ಲೇಖದಲ್ಲಿ ಶಾಸ್ತ್ರಿಗಳು ಮುಂದಿನಂತೆ ಬರೆದಿರುವರು. ಶ್ರೀನೀಲಕಂಠ ಶಿವಾಚಾರ್ಯರು ವ್ಯಾಸಸೂತ್ರಕ್ಕೆ ವೀರಶೈವ ಪರಭಾಷ್ಯವನ್ನು ಬರೆದು, ಅದ್ವೈತ ಮತ ಪ್ರಸಾರಕರಾದ ಶ್ರೀ ಶಂಕರಾಚಾರ್ಯರ ಕೂಡ ಯಶಸ್ವಿಯಾಗಿ ವಾದಿಸಿದ್ದಾರೆಂದು ಕೆಲವು ಚರಿತ್ರಾಂಶಗಳಿಂದ ಕಂಡುಬರುವದರಿಂದ ಶ್ರೀನೀಲಕಂಠ ಶಿವಾಚಾರ್ಯರು ಶ್ರೀ ಶಂಕರಾಚಾರ್ಯರ ಸಮಕಾಲಿನರಿದ್ದು ಎಂಟನೆಯ ಶತಮಾನದಲ್ಲಿರಲಿಕ್ಕೆಬೇಕು. ಆದ್ದರಿಂದ ವೀರಶೈವಪರ ಭಾಷ್ಯ ಬರೆದ ಶ್ರೀ ನೀಲಕಂಠ ಶಿವಾಚಾರ್ಯರೇ ವೀರಶೈವ ಮತಕ್ಕೆ ಬುನಾದಿಯವರು ಮತ್ತು ವೀರಶೈವ ಮತವು ಅಷ್ಟ ಸನಾತನದ್ದು. ಈ ವಿಧಾನಕ್ಕೆ ಆಧಾರಗಳನ್ನೇನೂ ಕೊಟ್ಟಿಲ್ಲ. ಆದರೆ ಇದಕ್ಕೆ ವಿರುದ್ಧವಾಗಿ ಕರ್ನಾಟಕ ಕವಿಚರಿತ್ರೆಯ ಒಂದನೆಯ ಭಾಗದ ಳಳಳನೆಯ ಪಾನಿನಲ್ಲಿ ವೀರಶೈವ ಪರಭಾಷ್ಯಕಾರರಾದ ಶ್ರೀ ನೀಲಕಂಠ ಶಿವಾಚಾರ್ಯರು ಸುಮಾರು ೧೪೦೦ ಕ್ರಿ. ಶ.

ದಲ್ಲಿದ್ದಿರಬೇಕು ಎಂದು ಕವಿಚರಿತ್ರೆಕಾರರು ಬರೆದಿರುತ್ತಾರೆ. ಇದರಿಂದ ಕಂಡುಬರುವದೇನಂದರೆ ಶ್ರೀ ನೀಲಕಂಠ ಶಿವಾಚಾರ್ಯರು ತಮ್ಮ ಭಾಷ್ಯವನ್ನು ಕ್ರಿ. ಶ. ೧೪೦೦ ರ ಸುಮಾರಕ್ಕೆ ಇದ್ದು ಬರೆದು ಗ್ರಂಥದಲ್ಲಿ ಶ್ರೀ ಶಂಕರಾಚಾರ್ಯರ ಅದ್ವೈತ ಮತವನ್ನು ಖಂಡಿಸಿ ವಾದಿಸಿರಬೇಕು, ಗ್ರಂಥರೂಪದಿಂದ ವಾದಿಸಲಿಕ್ಕೆ ಅವರು ಶಂಕರಾಚಾರ್ಯರ ಸಮಕಾಲವಾದ ಎಂಟನೆಯ ಶತಮಾನದಲ್ಲಿರುವದು ಅವಶ್ಯವಿಲ್ಲ. ಗ್ರಂಥದಲ್ಲಿಯ ವಾದದಿಂದ ಅವರು ಪ್ರತ್ಯಕ್ಷವಾಗಿ ಅವರ ಕಾಲದಲ್ಲಿದ್ದು ಅವರ ಕೂಡ ವಾದಿಸಿದರೆಂದು ಹೇಳಲಿಕ್ಕೆ ಬರುವದಿಲ್ಲ. ಆದ್ದರಿಂದ ವೀರಶೈವ ಮತವು ಅನೆಯ ಶತಮಾನದಷ್ಟು ಸನಾತನದ್ದೆಂದು ಹೇಳಲಾಗದು. ಅಲ್ಲದೆ ಕೀರ್ತನಕೇಸರಿ ಶಾಸ್ತ್ರಿಗಳು ಮುಂದಿನಂತೆ ತಮ್ಮ ಲೇಖವನ್ನು ಮುಂದುವರಿಸಿರುತ್ತಾರೆ. ವೀರಶೈವಸಿದ್ಧಾಂತಶಿಖಾಮಣಿ ಮತ್ತು ಲಿಂಗಧಾರಣ ಚಂದ್ರಿಕೆ ಎಂಬ ಸಂಸ್ಕೃತ ಗ್ರಂಥಕಾರರಾದ ಶ್ರೀ ಶಿವಯೋಗಿ ಶಿವಾಚಾರ್ಯರು ಮತ್ತು ಶ್ರೀ ನಂದಿಕೇಶ್ವರ ಶಿವಾಚಾರ್ಯರು ಬಹು ಪ್ರಾಚೀನ ಸಂಸ್ಕೃತ ಪಂಡಿತರು. ಆದ್ದರಿಂದ ವೀರಶೈವ ಮತವು ಆ ಪಂಡಿತರಷ್ಟು ಸನಾತನದ್ದೆಂಬದು ನಿರ್ವಿವಾದವು. ಆದರೆ ಪ್ರೊ. ಸಾಖರೆಯವರು ಈ ಸಂಸ್ಕೃತ ಗ್ರಂಥಕಾರರು ೧೩—೧೭ನೆಯ ಶತಮಾನಗಳಲ್ಲಿ ಕ್ರಮವಾಗಿ ಇದ್ದರೆಂದು ಆ ಪಂಡಿತರ ಗ್ರಂಥಗಳ ಆಧಾರಗಳಿಂದಲೇ ಗ್ರಂಥಕಾರರು ತಮ್ಮ ಗ್ರಂಥಗಳ ಆರಂಭಕ್ಕೆ ಹೇಳಿದಂತೆಯೇ ಸಿದ್ಧವಾಗುತ್ತದೆಂದು ಲಿಂಗಧಾರಣ ಚಂದ್ರಿಕೆಯ ಪ್ರಸ್ತಾವನೆಯಲ್ಲಿ ಸವಿಸ್ತಾರವಾಗಿ ಬರೆದು ನಿರ್ಣಯಿಸಿರುತ್ತಾರೆ. ಸಿದ್ಧಾಂತ ಶಿಖಾಮಣಿಕಾರರಾದ ಶಿವಯೋಗಿ ಶಿವಾಚಾರ್ಯರು ತಾವು ಸಿದ್ಧರಾಮೇಶ್ವರ ಶಿವಯೋಗಿಯ ನಾಲ್ಕನೆಯ ತಲೆಯವರೆಂದು ತಾವೇ ತಮ್ಮ ಗ್ರಂಥದಲ್ಲಿ ಆರಂಭಕ್ಕೆ ಹೇಳಿಕೊಂಡಿದ್ದಾರೆ. ಅಲ್ಲದೆ ಟಿಪ್ಪಣಿಕಾರರಾದ ಶಿವಮೂರ್ತಿ ಕರಿಬಸವಪ್ಪ ಶಾಸ್ತ್ರಿಗಳು ತಮ್ಮ ಟಿಪ್ಪಣಿಯಲ್ಲಿ ಸ್ಪಷ್ಟಗೊಳಿಸಿದ್ದಾರೆ. ಸಿದ್ಧರಾಮೇಶ್ವರ ಶಿವಯೋಗಿಗಳು ೧೨ನೆಯ ಶತಮಾನದಲ್ಲಿದ್ದದರಿಂದ ಸಿದ್ಧಾಂತಶಿಖಾಮಣಿಕಾರರು ೧೩ನೆಯ ಶತಮಾನದಲ್ಲಿದ್ದಿರಬೇಕು. ಐತಿಹಾಸಿಕ ಸಂಗತಿಗಳು ಹೀಗಿದ್ದರೂ ಕೂಡ ಈ ಗ್ರಂಥಕಾರರು ಬಹು ಪ್ರಾಚೀನ ಪಂಡಿತರು, ಆದ್ದರಿಂದ ವೀರಶೈವ ಮತವು ಅಷ್ಟೊಂದು ಸನಾತನದ್ದೆಂದು ಸಾಧಿಸಲು ಪ್ರಯತ್ನಿಸುವದು

ಧರ್ಮದ ಸಂಗತಿಗಳನ್ನು ಅರಿಯದ ಅನುಯಾಯಿಗಳನ್ನು ಮೋಸಗೊಳಿಸಿದಂತೆ ಆಗುವದಿಲ್ಲವೇ ಎಂದು ವಿಷಾದವಾಗುತ್ತದೆ. ಆದ್ದರಿಂದಲೇ ಈ ಲೇಖವನ್ನು ಬರೆಯುವ ಇಚ್ಛೆಯುಂಟಾಯಿತು. ನಿಜವಾದ ಸಂಗತಿಗಳನ್ನು ಬರೆದರೆ ಮತದ ಅನುಯಾಯಿಗಳು ಕೃತಜ್ಞತೆಯಿಂದ ಅಭಿಮಾನಪೂರ್ವಕ ಒಪ್ಪಿಕೊಂಡು ಹೆಮ್ಮೆಪಡಬಹುದು. ಆದರೆ ವೀರಶೈವ ಧರ್ಮಕ್ಕೆ ಸಂಸ್ಕೃತ ಗ್ರಂಥಗಳೇ ಆಧಾರ ಗ್ರಂಥಗಳು, ಅವು ಬಹು ಪ್ರಾಚೀನ ಗ್ರಂಥಗಳು, ಆಚಾರ್ಯರೇ ವೀರಶೈವ ಧರ್ಮಕ್ಕೆ ಮೂಲಪುರುಷರು, ಬಸವಾದಿಪ್ರಮಥರು ಅಗಂತುಕರು, ಅವರ ವಚನ ಶಾಸ್ತ್ರವು ಕೇವಲ ಕನ್ನಡದಲ್ಲಿದ್ದು ಧರ್ಮಕ್ಕೆ ಆಧಾರಗ್ರಂಥಗಳಾಗಲಾರವು, ಅವರು ವರ್ಣಸಂಕರ ಮಾಡಿ ಧರ್ಮದ ಕಟ್ಟುನಿಟ್ಟುಗಳನ್ನು ತೆಗೆದೊಗೆದು ಕೇವಲ ಪಾಮರರ, ಸಾಮಾನ್ಯ ಜನರ ಪಕ್ಕಾಮಡಿಯನ್ನು ಪಾಲಿಸದ ತಾರತಮ್ಯಭಾವವಿಲ್ಲದ ಕಾಡು ಧರ್ಮವನ್ನಾಗಿ ಮಾಡಿದರು, ಆದ್ದರಿಂದ ಬಸವಾದಿಪ್ರಮಥರು ಅನುಕರಣೀಯರಲ್ಲ, ಆದರೆ ಆಚಾರ್ಯರೆಂಬುವಂತೆ ಮಡಿವೈಲಿಗೆಯ ಶೀಲದಿಂದ ಜನನದಿಂದ ಧರ್ಮದ ಅನುಯಾಯಿಗಳಲ್ಲಿ ಜಾತಿಗಳುಂಟು ಲಿಂಗ ಧರಿಸಿದರೂ ಪೂರ್ವಾಶ್ರಯ ಹೋಗುವದಿಲ್ಲ, ಆದ್ದರಿಂದ ಪರಸ್ಪರ ಬಳಿಕೆ ಮಾಡಕೂಡದು, ಮಹೇಶ್ವರರು ಮಾತ್ರ ಬಳಿಕೆ ಮಾಡಲು ಅಡ್ಡಿ ಇಲ್ಲ, ಹೀಗೆ ಸಾಧಿಸುವ ವಿಶಿಷ್ಟ ಹೇತುವಿನಿಂದ ವೀರಶೈವ ಧರ್ಮವು ಬಹು ಸನಾತನದ್ದೆಂದು ಬುಧ್ಯಾಪೂರ್ವಕ ಸಾಧಿಸುತ್ತ ಬಂದಿದ್ದರಿಂದ ಈಗ ಸಮಾಜದಲ್ಲಿ ಭಕ್ತಮಹೇಶ್ವರರೆಂದೆನಿಸಿಕೊಳ್ಳುವವರಲ್ಲಿ, ಗುರು – ವಿರಕ್ತರೆಂದೆನಿಸಿಕೊಳ್ಳುವವರಲ್ಲಿ ಭಿನ್ನಾಭಿಪ್ರಾಯಕ್ಕೆ,—ಮನಸ್ತಾಪಕ್ಕೆ ಕಾರಣವಾಗಿರುವದು. ಆದ್ದರಿಂದ ಬರಹಗಾರರು ಧರ್ಮದ ಸಂಗತಿಗಳನ್ನು ಚನ್ನಾಗಿ ಪರಿಶೀಲಿಸಿ ನಿಜಾಂಶಗಳನ್ನು ಮಾತ್ರ ಪ್ರಕಟಗೊಳಿಸಬೇಕು. ಅಲ್ಲದೆ ಬುಧ್ಯಾಪೂರ್ವಕ ನಿಜವಲ್ಲವೆಂದು ಗೊತ್ತಿದ್ದ ಸಂಗತಿಗಳನ್ನೂ ಕೂಡ ಒಂದು ವಿಶಿಷ್ಟ ಹೇತುವಿನಿಂದ ನಿಜವೆಂದು ಸಾಧಿಸಿ ಬರೆದರೆ ಸಮಾಜದಲ್ಲಿ ಅನೈಕ್ಯತೆಯುಂಟಾಗಿ ಪರಸ್ಪರ ದುಃಖಕ್ಕೆ ಕಾರಣವಾಗುವದೆಂದು ತಿಳಿದು ನಿಸ್ವಾರ್ಥಬುದ್ಧಿಯಿಂದ ವರ್ತಿಸಿದರೆ ಸಮಾಜಕ್ಕೆ ಕಲ್ಯಾಣಬಯಸಿದಂತಾಗುವದು. ಇದರಿಂದ ವಾಚಕರಿಗೆ ಕಂಡುಬರುವದೇನಂದರೆ— ವೀರಶೈವ ಧರ್ಮವು ಶಿವಶರಣ ನಿರ್ಮಿತವು. ವಚನ

ಶಾಸ್ತ್ರವೇ ಆದಕ್ಕೆ ಆಧಾರ ಗ್ರಂಥವು. ಸಂಸ್ಕೃತ ಗ್ರಂಥಗಳು ಆ ಶಾಸ್ತ್ರವನ್ನೇ ಪುಷ್ಟೀಕರಿಸುತ್ತವೆ. ಧರ್ಮಕ್ಕೆ ಗೌರವ ತಂದು ಕೊಡುತ್ತವೆ. ಆಚಾರ್ಯರು ಶಿವಶರಣರ ನಂತರ ಬಸವಾದಿಪ್ರಮಥರ ನಂತರ ಮತಗಳನ್ನು ಸ್ಥಾಪಿಸಿ ಸಂಸ್ಕೃತದಲ್ಲಿ ಧರ್ಮಗ್ರಂಥಗಳನ್ನು ಬರೆದು ಧರ್ಮವನ್ನು ಕ್ರಮೇಣ ವೃದ್ಧಿಗೊಳಿಸುತ್ತ ತಮ್ಮ ವಿಶಿಷ್ಟ ರೀತಿಯಿಂದ ಧರ್ಮದ ವಿಶೇಷವಾಗಿ ಮತದ ಪರಂಪರೆಯನ್ನು ಸಾಗಿಸುತ್ತ ಬಂದಿರುವರು. ಆದರೆ ಯಾರೇ ಆದರೂ ಮತಪ್ರವರ್ತಕರಾದ ಬಸವಾದಿ ಪ್ರಮಥರನ್ನು ಮರೆಯಲಾಗದು ದೂಷಿಸಲಾಗದು. ಅವರು ರಚಿಸಿದ ಸಮತಾಭಾವದ ಸಮಾಜದ ರಚನೆಯನ್ನು ಮರೆಯಲಾಗದು. ಯೋಗ್ಯತೆಪಡೆದವರೆಲ್ಲರಿಗೂ ಗುರುಲಿಂಗಜಂಗಮತ್ವದ ಶಿವಾನುಭವದ ಗುರಿಯನ್ನು ಸಾಧಿಸುವದಕ್ಕೆ ಪ್ರತಿಬಂಧಕವಿರಕೂಡದೆಂದು ಈ ಲೇಖದ ಮುಖ್ಯ ತಾತ್ಪರ್ಯ. ಇದಕ್ಕೆ ವಿರುದ್ಧವಾದ ಧರ್ಮದ ತಥ್ಯಾಂಶಗಳೇನಾದರೂ ಇದ್ದಪಕ್ಷದಲ್ಲಿ ಅವುಗಳನ್ನು ಬಲ್ಲವರು ಒಪ್ಪುವಂತೆ ಬರೆದು ಮನನಾಡಿಸಿದರೆ ಲೇಖಕನು, ಸಮಾಜದವರು ಉಪಕೃತರಾಗುವರು.

ಧರ್ಮದ ಅಭಿಮಾನಿಗಳು ಗಮನಿಸಬೇಕಾದ ಇನ್ನೊಂದು ವಿಷಯವೇನಂದರೆ, ಧರ್ಮವೆಂದು ಕರೆಯಿಸಿಕೊಳ್ಳಲು ಯೋಗ್ಯವಾದ ಎಲ್ಲ ಧರ್ಮಗಳ ಕೆಲಕೆಲವು ಮೂಲಭೂತ ತತ್ವಗಳನ್ನು ವೇದ, ಆಗಮ, ಬಾಯಿಬಲ್ ಕುರಾನ ಮುಂತಾದ ಎಲ್ಲ ಧರ್ಮಗ್ರಂಥಗಳಲ್ಲಿಯೂ ಕಂಡುಹಿಡಿಯಬಹುದು. ಅಷ್ಟರಿಂದಲೇ ಆ ಧರ್ಮಗಳೆಲ್ಲವೂ ವೇದ, ಆಗಮಪ್ರತಿಪಾದಿತವೆಂದೂ ಅಷ್ಟು ಸನಾತನದವೆಂದೂ ಹೇಳಲಾಗದು. ಅದಾಗ್ಯೂ ಯಾವದಾದರೂ ಧರ್ಮವು ವೇದಾಗಮಗಳಷ್ಟು ಸನಾತನವಲ್ಲದಿದ್ದ ಪಕ್ಷದಲ್ಲಿ ಆ ಧರ್ಮದ ತತ್ವಗಳು, ಆಚಾರವಿಚಾರಗಳು ಶ್ರೇಷ್ಠವಿದ್ದರೆ, ಆ ಧರ್ಮದ ಮಹತ್ವವು ಕಡಿಮೆಯಾಗಲಾರದು ಆಗಲೂ ಬಾರದು. ಈ ಮಾತು ವೀರಶೈವ ಧರ್ಮಕ್ಕೂ ಅನ್ವಯಿಸುತ್ತದೆ. ಹೊಳೆದ ವಿಚಾರಗಳನ್ನು ಪ್ರಾಂಜಲಬುದ್ಧಿಯಿಂದ ವಾಚಕರ ಗಮನಕ್ಕೆ ತಂದದ್ದಾಗಿದೆ.

ಹಿಂದೂಧರ್ಮ ಮತ್ತು ಲಿಂಗಾಯತ ಧರ್ಮ.

(ಲೇಖಕರು—ಪ್ರೊ. ಎಮ್. ಆರ್. ಸಾಖರೆ, ಎಮ್. ಏ ಟಿ. ಡಿ. ಬೆಳಗಾವ.)

[ಹಿಂದಿನಿಂದ ಮುಂದುವರಿದುದು.]

ಹಿಂದೂ ಧರ್ಮ ಮತ್ತು ಲಿಂಗಾಯತ ಧರ್ಮ ಇವೆರಡರಲ್ಲಿ ಅನೇಕ ಬೇಧಗಳಿರುವವು. ಕೇವಲ ತೋರಿಕೆಯಂತಲ್ಲ. ಅದ್ದರಿಂದಲೇ ಈ ಎರಡು ಧರ್ಮಗಳು ಅತ್ಯಂತ ಭಿನ್ನವಾಗಿರುವವು. ಲಿಂಗಾಯತ ಧರ್ಮದ ವೈಶಿಷ್ಟ್ಯಗಳೇನೆಂದರೆ:—

(೧) ಹಿಂದು ಧರ್ಮವು ವರ್ಣಾಶ್ರಮಯುಕ್ತವಾದದ್ದು. ಲಿಂಗಾಯತ ಧರ್ಮವು ವರ್ಣಾಶ್ರಮವಿಹೀನವಾದದ್ದು. ವರ್ಣಾಶ್ರಮ ಧರ್ಮವನ್ನು ಲಿಂಗಾಯತ ಧರ್ಮದಿಂದ ಸಂಪೂರ್ಣ ತೆಗೆದುಹಾಕಿದ್ದರಿಂದಲೇ ಹಿಂದುಧರ್ಮದಿಂದ ಲಿಂಗಾಯತ ಧರ್ಮವು ಸಂಪೂರ್ಣ ವಿಭಕ್ತವಾಗಿರುವದು.

(೨) ವರ್ಣಾಶ್ರಮ ಧರ್ಮವನ್ನು ಬಿಟ್ಟದ್ದರಿಂದ ಹಿಂದೂಜನರ ಷೋಡಶ ಸಂಸ್ಕಾರಗಳು ಲಿಂಗಾಯತರಲ್ಲಿ ಇಲ್ಲವಾಗಿ ಈ ಧರ್ಮದಲ್ಲಿ ದೀಕ್ಷೆ ಎಂಬ ಒಂದೇ ಒಂದು ಸಂಸ್ಕಾರವಿರುವದು. ಇದು ಯಾವತ್ತರಿಗೆ ಕೊಡಬೇಕಾಗುವದು. ಇದು ನಿಜವಾದ ಧರ್ಮಸಂಸ್ಕಾರ. ಏಕೆಂದರೆ ಈ ಸಂಸ್ಕಾರದಿಂದ ಭಕ್ತನು ಅಧ್ಯಾತ್ಮ ಜೀವನದಲ್ಲಿ ಪ್ರವೇಶಿಸುವನು.

(೩) ಲಿಂಗಾಯತ ಧರ್ಮವು ಯಾವತ್ತರಿಗೂ ಮುಕ್ತದ್ವಾರವಿಟ್ಟಿದೆ. ಈ ಧರ್ಮವನ್ನು ಯಾರಾದರೂ ಸ್ವೀಕರಿಸಬಹುದು. ಇದರಲ್ಲಿ ಮೇಲು ಕೀಳವೆಂಬ ಭೇದವಿಲ್ಲ. ಯಾವತ್ತರೂ ಸರಿಸಮಾನರಿರುವರು. ಹಿಂದೂ ಧರ್ಮವು ಹೀಗಿರದೆ ಜನ್ಮದಿಂದಲೇ ಈ ಧರ್ಮಕ್ಕೆ ಅಧಿಕಾರವುಂಟಾಗುವದು. ಸುಮ್ಮೈವದಿಂದ ಹಿಂದುವಾಗಿ ಹುಟ್ಟಬೇಕು. ಅದರಲ್ಲಿ ಮೊದಲನೇ ತ್ರಿವರ್ಣಗಳಲ್ಲಿ ಪುರುಷನಾಗಿ ಹುಟ್ಟಬಂದರೇನೇ ಮಾನವನು ಧರ್ಮಸಂಸ್ಕಾರಕ್ಕೆ ಉಚಿತನಾಗುವನು. ಇಲ್ಲದಿದ್ದರೆ ಅವನ ಹಣೆಯಲ್ಲಿ ಸೇವಕತ್ವವು ಕಟ್ಟಿಟ್ಟದ್ದು. ಆದರೆ ಲಿಂಗಾಯತ ಧರ್ಮದಲ್ಲಿ ಸಂಸ್ಕಾರದಿಂದ ಯಾರನ್ನಾದರೂ ಸೇರಿಸಿಕೊಳ್ಳಬಹುದು. ಅದ್ದರಿಂದ ಲಿಂಗಾಯತ ಧರ್ಮದಲ್ಲಿ ವಿಶ್ವಬಂಧುತ್ವವು ತುಂಬಾ ಅಡಕವಾಗಿರುವದು.

(೪) ಲಿಂಗಾಯತ ಧರ್ಮದಲ್ಲಿ ಸ್ತ್ರೀಯರಿಗೆ ಧರ್ಮ ಸಂಸ್ಕಾರದ ಬಾಧ್ಯತೆ ಇರುವದರಿಂದ ಅವರಿಗೆ ಅಧ್ಯಾತ್ಮ ಜೀವನದಿಂದ ಮುಕ್ತಿಮಾರ್ಗವು ದೊರೆಯುತ್ತಿದೆ. ಹಿಂದೂ ಧರ್ಮದಲ್ಲಿ ಹೀಗಿರದೆ ಸ್ತ್ರೀಯರಿಗೆ ಸಂಸ್ಕಾರಗಳಿಲ್ಲ.

(೫) ದೇಹದ ಮೇಲೆ ಧಾರಣ ಮಾಡಿದ ಲಿಂಗವು ಮೂರ್ತಿಯಲ್ಲ. ಆದ್ದರಿಂದ ಲಿಂಗಾಯತರು ಮೂರ್ತಿಪೂಜಕರಲ್ಲ. ಧಾರಣ ಮಾಡಿದ ಲಿಂಗವು ಚಿಕ್ಕ ಸ್ಥಾವರ ಲಿಂಗವಲ್ಲದೆ ಭೌತಿಕ ದೇವತೆಯಾಗಿದೆ. ಆದ್ದರಿಂದ ಇಷ್ಟಲಿಂಗದ ಪೂಜೆಯ ಕಾಲಕ್ಕೆ ಸ್ಥಾವರಲಿಂಗ ಪೂಜೆಗೆ ಆವಶ್ಯಕವಾದ ಆಹ್ವಾನ ವಿಸರ್ಜನೆಗಳು ಬೇಕಾಗಿಲ್ಲ. ಸ್ಥಾವರಲಿಂಗವು ಕೇವಲ ಈಶನ ಪ್ರತಿನಿಧಿ ಅಥವಾ ಪ್ರತಿಮೆ. ಇಷ್ಟಲಿಂಗವು ಸಾಕ್ಷಾತ್ ಪರಮೇಶ್ವರ.

(೬) ಧಾರಣಮಾಡಿದ ಲಿಂಗಪೂಜೆಗೆ ಅಹಂ ಗ್ರಹೋಪಾಸನೆ ಎಂದೆನ್ನುವರು. ಈ ಉಪಾಸನೆಯಲ್ಲಿ "ಭಕ್ತನು ನಾನೇ ನೀನು ನೀನೇ ನಾನು" ಎಂಬ ಭಾವನೆಯಿಂದಲೇ ಈಶನು ಉಪಾಸನೆ ಮಾಡುವನು. ಈಶನು ಭಕ್ತನ ಗೆಳೆಯನಾಗಿ ಯಾವಾಗಲೂ ಭಕ್ತನ ಸಹವಾಸದಲ್ಲಿರುವದಲ್ಲದೆ ಆತನ ರಕ್ಷಕ ಮತ್ತು ಮಾರ್ಗದರ್ಶಕನಾಗಿರುವನು. ಈ ಅಹಂ ಗ್ರಹೋಪಾಸನೆಗೆ ಆಗಮಗಳಲ್ಲಿ ಸಹಮಾರ್ಗವೆನ್ನುವರು. ಆದರೆ ಹಿಂದು ಧರ್ಮದಲ್ಲಿ ಸಂಪದುಪಾಸನೆ ಪ್ರತಿಮಾ ಅಥವಾ ಪ್ರತೀಕೋಪಾಸನೆ ಮತ್ತು ನಿರ್ಗುಣೋಪಾಸನೆ ಎಂಬ ಉಪಾಸನೆಗಳಿರುವವು. ಕಡೆಯ ಉಪಾಸನೆಯು ಹಿಂದುಗಳಿಗೆ ಕಡೆಯದು.

(೭) ಲಿಂಗಾಯತ ಧರ್ಮದಲ್ಲಿ ಅನ್ಯರನ್ನು ತನ್ನಲ್ಲಿ ಸೇರಿಸಿಕೊಳ್ಳಲಿಕ್ಕೆ ಬರುತ್ತದೆ. ಹಿಂದು ಧರ್ಮದಲ್ಲಿ ಹೀಗೆ ಮಾಡಲು ಅವಕಾಶವಿಲ್ಲ.

(೮) ಲಿಂಗಾಯತ ಧರ್ಮಾಚಾರಕ್ಕೆ ಶಿವಯೋಗ ಎಂದೆನ್ನುವರು. ಇದು ಮೇಲ್ತರದ ಯೋಗವು. ಇದರಲ್ಲಿ ಇತರ ಯೋಗಗಳು ಅಂದರೆ ಭಕ್ತಿಯೋಗ, ಕರ್ಮಯೋಗ, ಜ್ಞಾನಯೋಗ, ಮಂತ್ರಯೋಗ ಲಯಯೋಗ (ರಾಜಯೋಗ) ಅಡಕವಾಗಿರುವವು. ಇವೆಲ್ಲವು ಶಿವಯೋಗದ ಉಪಾಂಗಗಳು ಆಗಿರುವವು. ಈ ಉಪಾಂಗಗಳು ಮಾನವನ ಚತುರ್ವಿಧ ಸ್ವಭಾವಗಳಿಗೆ ಅನುಕೂಲವಾಗಿರುವವು. ಈ ಚತುರ್ವಿಧ ಸ್ವಭಾವಗಳೆಂದರೆ (೧) ಭಾವನಾಪ್ರಧಾನ ಇದಕ್ಕೆ (ಭಕ್ತಿಯೋಗ) (೨) ಕರ್ಮಪ್ರಧಾನ ಇದಕ್ಕೆ (ಕರ್ಮಯೋಗ) (೩) ವಿಚಾರಪ್ರಧಾನ ಇದಕ್ಕೆ (ಜ್ಞಾನಯೋಗ) (೪) ಗೂಢಪ್ರಧಾನ ಇದಕ್ಕೆ (ಮಂತ್ರಯೋಗ).

(೯) ಈ ಶಿವಯೋಗವಿಧಿಗೆ ಷಟ್‌ಸ್ಥಲವೆಂಬ ಹೆಸರು. ಶಿವಯೋಗಕ್ಕೆ ಲಿಂಗಪೂಜೆ ಎಂದೆನ್ನುವರು. ಷಟ್‌ಸ್ಥಲ ಕ್ರಮವು ಲಿಂಗಾಯತ ಧರ್ಮದ ವಿಶೇಷ ಲಕ್ಷಣ. ಇನ್ನಾವ ಧರ್ಮದಲ್ಲಿ ಇದು ಸಿಗಲಾರದು.

(೧೦) ಷಟ್‌ಸ್ಥಲಸಿದ್ಧಾಂತವು ಮಾನವನ ಶರೀರಶಾಸ್ತ್ರ ಮತ್ತು ಮಾನಸಶಾಸ್ತ್ರಗಳ ಆಧಾರದ ಮೇಲೆ ರಚಿತವಾದದ್ದರಿಂದ ಇದೇ ಪೂರ್ಣ ಶಾಸ್ತ್ರಸಿದ್ಧವಾದದ್ದು. ಸ್ಥೂಲಶರೀರದೊಳಗಿನ ಮುಖ್ಯ ಆರು ಆಧಾರಗಳಿಗೆ ಸಮಾನವಾದ ಸೂಕ್ಷ್ಮಶರೀರಗಳಲ್ಲಿ ಆರು ಲಿಂಗಗಳು ವಾಸ ಮಾಡುವವು. ಈ ಅಂತಃಸ್ಥಿತ ಲಿಂಗಾರಾಧನೆಯು ಬಾಹ್ಯ ಇಷ್ಟಲಿಂಗದ ಆರಾಧನೆಯಿಂದ ಆಗುವದು. ಮತ್ತು ಅಂತಃಶಕ್ತಿಯು ಬೆಳೆಯುತ್ತ ಹೋಗುವದು. ಅದರಿಂದ ಭಕ್ತನು ಮುಕ್ತಿಯನ್ನು ಪಡೆಯುವನು.

ಇನ್ನು ಲಿಂಗಾಯತ ಧರ್ಮದ ಮೂಲತತ್ವ ಅಥವಾ ಸಿದ್ಧಾಂತವನ್ನು ನೋಡೋಣ.

(೧) ಶಕ್ತಿವಿಶಿಷ್ಟಾದ್ವೈತವು ಲಿಂಗಾಯತ ಧರ್ಮದ ಸಿದ್ಧಾಂತವಾಗಿರುವದು. ಅಂದರೆ ಪರಶಿವನು ಆತನ ಚಿದ್ರೂಪದ ಶಕ್ತಿಯಿಂದ ಕೂಡಿರುವನು. ಶಿವನೂ ಆತನ ಶಕ್ತಿಯೂ ಒಂದೇ ಒಂದಾಗಿರುವವು. ಅವು ಬೇರೆ ಅಲ್ಲ. ಆ ಶಕ್ತಿಗೆ ಸಂವಿತ್ ಅಥವಾ ವಿಮರ್ಶ (ಆತ್ಮ ವಿಮರ್ಶ)ವೆಂಬ ಬೇರೆ ಹೆಸರು.

(೨) ಶಕ್ತಿವಿಶಿಷ್ಟಾದ್ವೈತವು ಶಂಕರಾಚಾರ್ಯರ ಕೇವಲಾದ್ವೈತಕ್ಕಿಂತ ಹೆಚ್ಚಿನದು. ಶಕ್ತಿವಿಶಿಷ್ಟಾದ್ವೈತವು ಶಂಕರಾಚಾರ್ಯರ ಮಾಯಾವಾದವನ್ನು ನಿರಾಕರಿಸಿದೆ. ಅದು ಅದರ ಖಂಡನೆ ಮಾಡುವದು. ಕೇವಲಾದ್ವೈತ ಮತದಂತೆ ಪರಬ್ರಹ್ಮವು ದೃಗ್ಗೋಚರವಾದ ಸೃಷ್ಟಿಯಿಂದ ಅಲಿಪ್ತವಾಗಿ ಬೇರೆಯಾಗಿ ಕುಳಿತಿರುವದು. ಅವಿಕಾರಿಯಾದ ನಿರುಪಾಧಿಕ ಬ್ರಹ್ಮನಿಗೆ ಕೂಟಸ್ಥವೆಂಬ ಹೆಸರು. ಇದು ಸಾಂಖ್ಯರ ಪುರುಷನಂತೆ ನಿಷ್ಕ್ರಿಯವಾದ ಒಂದು ವಸ್ತು.

(೩) ಶಂಕರಾಚಾರ್ಯರ ಮತದಂತೆ ದುಃಖಮಯ ಸಂಸ್ಕಾರದ ಮೂಲಕಾರಣವಾದ ಮಾಯೆಯು ಕೂಟಸ್ಥ ಬ್ರಹ್ಮನ ಶಕ್ತಿ ಎಂದು

ಹೇಳಿದೆ. ಆದರೆ ಅದು ಎಲ್ಲಿಂದ ಬರುವದು ಮತ್ತು ಎಲ್ಲಿರುವದು ಎಂಬ ದನ್ನು ಸಮಂಜಸವಾಗಿ ಹೇಳಿಲ್ಲ. ಇವೆರಡು ಮಾಯಾವಾದದಲ್ಲಿ ಮುಖ್ಯವಾದ ಕುಂದುಗಳು. ಶಕ್ತಿವಿಶಿಷ್ಟಾದ್ವೈತದಲ್ಲಿ ಈ ಎರಡು ಕುಂದು ಗಳು ಇಲ್ಲ. ಮತ್ತು ಇದರಿಂದ ವಿಶ್ವದ ಉತ್ಪತ್ತಿ ಮತ್ತು ಲಯಗಳು ಒಳ್ಳೇ ರೀತಿಯಿಂದ ಹೇಳಲ್ಪಟ್ಟವೆ. ಅಜ್ಞಾನ ಅಥವಾ ಅವಿದ್ಯಾ ಇವರ ವಿವಂಚನೆಯು ಮಾನಸ ಶಾಸ್ತ್ರದ ಪ್ರಕಾರ ಚನ್ನಾಗಿ ಕೊಟ್ಟಿದೆ. ಅದು ಹೇಗೆಂದರೆ ಜ್ಞಾನ ಮತ್ತು ಕ್ರಿಯಾ ಇವೆರಡು ಮೂಲತಃ ಒಂದೇ ಇರುವವು. ಅವು ಭಿನ್ನವೆಂದು ತಿಳಕೊಳ್ಳುವದೆ ಅಜ್ಞಾನ. ಇದು ಷಟ್ ತತ್ವಗಳಲ್ಲಿಯು ಆರನೇ ತತ್ವವಾಗಿದೆ. ಇದರಿಂದ ಅಧೋ ಸೃಷ್ಟಿಗೆ ಆರಂಭವಾಗುವದು.

(೪) ಲಿಂಗಾಯತರ ಸಿದ್ಧಾಂತದಲ್ಲಿ ಮುಕ್ತಿಗೆ ಸಾಮರಸ್ಯವೆಂಬ ಹೆಸರು. ಸಾಮರಸ್ಯವು ತಾದಾತ್ಮ್ಯವಲ್ಲ. ಷಟ್‌ಸ್ಥಲ ಸಿದ್ಧಾಂತದಂತೆ ನಡಕೊಂಡವರಿಗೆ ಈ ಮುಕ್ತಿಯು ದೊರಕುವದು.

(೫) ಈಗಿನ ಪ್ರಯೋಗದಿಂದ ಸಿದ್ಧವಾಗಿರುವಂಥ ಭೌತಿಕ ಶಾಸ್ತ್ರವು ಶಕ್ತಿವಿಶಿಷ್ಟಾದ್ವೈತ ತತ್ವಕ್ಕೆ ಹೋಲುತ್ತದೆ. ಯಾಕಂದರೆ— ಭೂತ ವಸ್ತುಗಳಿಗೂ ಅದರೊಳಗಿನ ಶಕ್ತಿಗೂ ಭೇದವಿರದೆ ಇವೆರಡೂ ಒಂದೇ ಯಾಗಿರುತ್ತವೆ. ಅಥವಾ ಒಂದೇ ವಸ್ತುವಿನ ಎರಡು ರೂಪ ಅಥವಾ ಪ್ರಕಾರವೆಂದು ಭೌತಿಕ ಶಾಸ್ತ್ರದಿಂದ ಸಿದ್ಧವಾಗಿದೆ. ಇದು ಶಕ್ತಿವಿಶಿಷ್ಟಾದ್ವೈತದ ತಿರುಳು.

ಇನ್ನುಮೇಲೆ ಲಿಂಗಾಯತ ಧರ್ಮ ಮತ್ತು ಇತರ ಶೈವಧರ್ಮಗಳಲ್ಲಿರುವ ವ್ಯತ್ಯಾಸಗಳನ್ನು ನೋಡುವಾ. ಲಿಂಗಾಯತರು ಲಿಂಗರೂಪಿಯಾದ ಶಿವೋಪಾಸಕರಾಗಿದ್ದರಿಂದ ಇವರು ವಿಶಿಷ್ಟಪ್ರಕಾರದ ಶೈವರೆಂದೂ ಲಿಂಗಾಯತೆ ಧರ್ಮವು ಶೈವಧರ್ಮದ ಒಂದು ಉಪಪಂಥವೆಂದೂ ರೂಢವಾದ ಕಲ್ಪನೆ ಇರುವದು. ಇದು ತೀರ ವಿಪರೀತವಾದ ಸಂಗತಿ. ಈ ತಿಳವಳಿಕೆಯು ಹೇಗೆ ತಪ್ಪಿರುವದೆಂಬ ಮಾತು ಕೆಳಗೆ ಹೇಳಿದ ಸಂಗತಿಗಳಿಂದ ಸ್ಪಷ್ಟವಾಗುವದು. ಮತ್ತು ಕೆಳಗೆ ಕಾಣಿಸಿದ ಸಂಗತಿಗಳು ಹಿಂದೂಧರ್ಮ ಮತ್ತು ಲಿಂಗಾಯತ ಧರ್ಮಗಳು ಹೇಗೆ ಭಿನ್ನವಾಗಿರುವವು ಎಂಬುದಕ್ಕೆ ಹೆಚ್ಚಿನ ಕಾರಣಗಳಾಗುವವು.

(೧) ಲಿಂಗಾಯತ ಧರ್ಮದ ಮುಖ್ಯವಾದ ದೇವತೆಯು ಲಿಂಗವು. ಇದರ ಎರಡನೇ ಹೆಸರು ಶಿವ. ಘನಲಿಂಗವು ಆದ್ಯದೈವತ. ಇದು

ಯಾವತ್ತೂ ವಿಶ್ವದ ಮೂಲಕಾರಣ. ಇದಕ್ಕೆ ಪರಕಾರಣವೆಂದು ಅನ್ನುವರು. ಈತನ ಶಕ್ತಿಗೆ ಆದಿಮಾಯಾ ಮಾಹಾ ಮಾಯಾ ಶುದ್ಧಮಾಯಾ ಎಂಬ ಹೆಸರುಗಳು ಉಂಟು. ಈ ಆದಿಮಾಯಾ ಯಾವತ್ತು ವಿಶ್ವವನ್ನು ಘನಲಿಂಗನ ಅಪ್ಪಣೆಯ ಮೇರೆಗೆ ಹುಟ್ಟಿಸುವದು. ಈ ಶಕ್ತಿಯಿಂದ ತತ್ವಗಳು ಹೊರಡುವವು. ಆರನೇ ತತ್ವವಾದ ಅಘೋಮಾಯೆಯು ಶಂಕರಾಚಾರ್ಯರ ಅಜ್ಞಾನದ ಸಮಾನವಾದುದು. ಘನಲಿಂಗಕ್ಕೆ ಪರಸ್ಥಲವೆಂಬುವರು. ಪರಸ್ಥಲವೆಂದರೆ ವಿಶ್ವದ ಆದ್ಯ ಮತ್ತು ಅಂತಿಮ ಸ್ಥಾನ. ಈ ಪರಸ್ಥಲದಲ್ಲಿ ಸೃಷ್ಟಿಯು ಬೇರುಗೊಂಡು ಪ್ರಳಯದಲ್ಲಿ ಇದರಲ್ಲಿಯೇ ಸಮರಸವಾಗುವದು.

(೨) ವೇದಾಂತದ ಯಾವತ್ತೂ ಮತ ಶಾಸ್ತ್ರಗಳಲ್ಲಿ ಹೇಳಿದಂತೆ ಲಿಂಗಾಯತರ ಸಿದ್ಧಾಂತದಲ್ಲಾದರೂ ಘನಲಿಂಗನಿಗೆ ಲೀಲೆ ಇರುವದು. ಈ ಲೀಲೆಗೆ ಉಪಾಸ್ಯೋಪಾಸಕ ಲೀಲೆಯೆಂಬ ಹೆಸರು. ಇದರಿಂದ ಘನಲಿಂಗನು ದ್ವಿವಿಧನಾಗುವನು. (೧) ಲಿಂಗವೆಂಬ ಉಪಾಸ್ಯ (೨) ಅಂಗವೆಂಬ ಉಪಾಸಕ. ಮೊದಲು ಈ ಉಪಾಸ್ಯ ಲಿಂಗದ ಮೂರು ಪ್ರಕಾರವಾಗುವವು. (೧) ಭಾವಲಿಂಗ (೨) ಪ್ರಾಣಲಿಂಗ (೩) ಇಷ್ಟಲಿಂಗ. ತದನಂತರ ಈ ಮೂರು ಲಿಂಗಗಳು ದ್ವಿವಿಧ ದ್ವಿವಿಧವಾಗುವವು. ಅವು (೧) ಮಹಾಲಿಂಗ ಮತ್ತು (೨) ಪ್ರಸಾದಲಿಂಗ. ಇವು ಭಾವ ಲಿಂಗದ ದ್ವಿವಿಧ ಪ್ರಕಾರಗಳು. (೩) ಚರಲಿಂಗ (೪) ಶಿವಲಿಂಗ ಇವು ಪ್ರಾಣಲಿಂಗದ ದ್ವಿವಿಧಗಳು (೫) ಗುರುಲಿಂಗ (೬) ಆಚಾರಲಿಂಗ ಇವು ಇಷ್ಟಲಿಂಗದ ದ್ವಿವಿಧಗಳು. ಈ ಲಿಂಗಗಳಿಗೆ ಸಾದಾರಣವಾದ ಅವುಗಳಿಗೆ ಅನುಸರಿಸಿ ಅಂಗನು ಮೊದಲು ತ್ರಿಪ್ರಕಾರವಾಗಿ ಮುಂದೆ ಆರು ಪ್ರಕಾರದವಾಗುವನು. (೧) ಯೋಗಾಂಗ ಇದರ ಎರಡು ಪ್ರಕಾರಗಳಿಂದರೆ (೧) ಐಕ್ಯ (೨) ಶರಣ. ಇದೇ ಪ್ರಕಾರ (೨) ಭೋಗಾಂಗದ ದ್ವಿವಿಧಗಳು (೧) ಪ್ರಾಣಲಿಂಗ (೨) ಪ್ರಸಾದಿ. (೩) ತ್ಯಾಗಾಂಗದ ಎರಡು ದ್ವಿವಿಧಗಳು (೧) ಮಹೇಶ್ವರ (೨) ಭಕ್ತ. ಲೀಲೆಯಲ್ಲಿ ಮೇಲೆ ಹೇಳಿದಂತೆ ಘನಲಿಂಗವು ಷಟ್‌ಪ್ರಕಾರವನ್ನು ಹೊಂದುವ ಕಾಲಕ್ಕೆ ಆ ಲಿಂಗದಲ್ಲಿ ಅವಿನಾ ಭಾವದಿಂದಿರುವ ಶಕ್ತಿಯಾದರೂ ಮೊದಲು ತ್ರಿವಿಧವಾಗಿ ಮುಂದೆ ಷಡ್ವಿಧಗಳಾಗುವದು. ಆಗ ಕಲೆಯೆಂಬ ಹೆಸರು ಪಡೆಯುವಳು. ತ್ರಿವಿಧ ಮತ್ತು ಲಿಂಗಕ್ಕನುಸಾರವಾಗಿ ಆ ಲಿಂಗ ಸಮಾನ

ಆರುಪ್ರಕಾರಗಳುಳ್ಳವಳಾಗುವಳು. ಆ ಆರುಪ್ರಕಾರಗಳು. (೧) ಪ್ರಕಾಶ ಸಕಲಾ ಮತ್ತು ಇದರ ಎರಡು ಪ್ರಕಾರ (೧) ಶಾಂತ್ಯತೀತೋತ್ತರ ಕಲಾ (೨) ಶಾಂತ್ಯತೀತಕಲಾ [೨] ವಿಮರ್ಶನಕಲಾ ಮತ್ತು ಇದರ ಎರಡು ಪ್ರಕಾರಗಳು [೧] ಶಾಂತಿಕಲಾ [೨] ವಿದ್ಯಾಕಲಾ [೩] ಆಭಾಸನಕಲಾ ಇದರ ಎರಡು ಪ್ರಕಾರಗಳು. [೧] ಪ್ರತಿಷ್ಠಾ ಅಥವಾ ಜ್ಞಾನ [೨] ನಿವೃತ್ತಿ ಅಥವಾ ಕ್ರಿಯಾ. ಈ ಶಕ್ತಿಯು ಘನಲಿಂಗನ ಲೀಲೆಯುಲ್ಲಿ ಅಂಗಕ್ಕೆ ಸದೃಶವಾದ ಭಕ್ತಿರೂಪದಿಂದ ಪರಿಣಮಿಸುವಳು. ಭಕ್ತಿಯಾದರೂ ಆರು ಲಿಂಗಗಳಿಗೋಸ್ಕರ ಮೊದಲು ಎರಡು ಪ್ರಕಾರವನ್ನು ಹೊಂದಿ ಮುಂದೆ ಷಡ್ವಿಧವಾಗುವದು. ಅವಾವುವೆಂದರೆ [೧] ವಿಶುದ್ಧಭಕ್ತಿ ಮತ್ತು ಇದರ ದ್ವಿಪ್ರಕಾರ [೧] ಸಮರಸಭಕ್ತಿ [೨] ಆನಂದಭಕ್ತಿ [೨] ವಿಚಾರಭಕ್ತಿ ಮತ್ತು ಇದರ ದ್ವಿಪ್ರಕಾರ [೧] ಅನುಭವ [೨] ಅವಧಾನ [೩] ವಿಧೇಯಭಕ್ತಿ ಮತ್ತು ಇದರ ದ್ವಿಪ್ರಕಾರ [೧] ನಿಷ್ಠಾ [೨] ಶ್ರದ್ಧಾಕಲೆಯು ಲಿಂಗವನ್ನೊಡಗೂಡುವದು. ಭಕ್ತಿಯು ಅಂಗವನ್ನೊಡಗೂಡುವದು. ಮೋಕ್ಷವನ್ನು ಬಯಸುವ ಜೀವನು ಅಂಗನು. ಆತನ ಯೋಗಾಸನದಲ್ಲಿದ್ದ ಧ್ಯಾನಸ್ಥ ಶರೀರವು ಲಿಂಗಾಕಾರದ್ದಾಗುವದು. ಆದ್ದರಿಂದ ಜೀವಾತ್ಮನ ಧ್ಯೇಯವು ಇಷ್ಟಲಿಂಗದ ಚೈತನ್ಯದಿಂದ ಯುಕ್ತವಾದಂಥಾದ್ದು ಅಂಗವಾಗಿರುವದು.

ತಲೆ ಬುರಡೆಯೊಳಗಿದ್ದ ದೊಡ್ಡ ಮಿದುಳು (Cerebrum) ಬುದ್ಧಿ ಸ್ಥಾನವಾಗುವದು. ಇದಕ್ಕೆ ಸಹಸ್ರಾರ ಚಕ್ರವೆಂದೆನ್ನುವರು. ಇದರಲ್ಲಿ ಪರಮಾತ್ಮನ ಚೈತನ್ಯವು ವಾಸವಾಡುವದು. ಈ ಬುದ್ಧಿಮಯ ಚೈತನ್ಯಾಂಶಕ್ಕೆ ಯೋಗಾಂಗವೆನ್ನುವರು. ಶಿರೋ ಮಧ್ಯವರ್ತಿ ಮಿದುಳಿನ ಶಾಖೆಗಳು ಕೆಳಗೆ ಇಳಿದು ಯಾವತ್ತು ಶರೀರದಲ್ಲಿ ಹಬ್ಬಿರುವವು. ಶರೀರ ಯಂತ್ರವನ್ನು ಸುಸೂತ್ರವಾಗಿ ಸಾಗುವದಕ್ಕಾಗಿ ಶಾಖೆಗಳು ಕೆಳಗೆ ಹಬ್ಬುವ ಕಾಲಕ್ಕೆ ದೇಹದ ಮುಖ್ಯ ಸ್ಥಾನಗಳಲ್ಲಿ ನರಗ್ರಂಥಿಗಳಾಗುವವು. ಈ ಗ್ರಂಥಿಗಳಲ್ಲಿ ಚೈತನ್ಯವು ವಾಸವಾಡುವದು. ಇಂಥ ಗ್ರಂಥಿಗಳಿಗೆ ಚಕ್ರಗಳೆಂದು ಅನ್ನುವರು. ಈ ಚಕ್ರಗಳಲ್ಲಿ ಘನಲಿಂಗದ ಆರು ಪ್ರಕಾರವು ಷಡ್ವಿಧ ಲಿಂಗರೂಪವಾಗಿ ಇರುವದು. ಮೊದಲನೇ ಗ್ರಂಥಿಯು ಎರಡು ಹುಬ್ಬುಗಳ ಮಧ್ಯದಲ್ಲಿ ಇರುವಂಥ ಗ್ರಂಥಿಯು. ಇದು ಆಜ್ಞಾ ಚಕ್ರವಾಗಿದೆ. ಇದರಲ್ಲಿ ಮಹಾಲಿಂಗವು ಇರುವದು. ಕಂಠಸ್ಥಾನದಲ್ಲಿದ್ದ ಗ್ರಂಥಿಗೆ

ವಿಶುದ್ಧಿ ಚಕ್ರವಾಗಿ ಇದರಲ್ಲಿ ಪ್ರಸಾದಲಿಂಗವು ವಾಸಮಾಡುವದು. ಈ ಎರಡು ಅಂಗಗಳು ಬುದ್ಧಿಮಯವಾದ ಭಾವಲಿಂಗವಾಗಿವೆ. ಈ ಎರಡರಲ್ಲಿ ತತ್ಸದೃಶವಾದ ಐಕ್ಯ ಮತ್ತು ಶರಣವೆಂಬ ದ್ವಿವಿಧಾಂಗಗಳು ಉಪಾಸಕರಾಗಿರುವರು. ಮಹಾಲಿಂಗ ಮತ್ತು ಪ್ರಸಾದಲಿಂಗಕ್ಕೆ ಸದೃಶವಾದ ಮೊದಲನೆಯ ಎರಡು ಶಕ್ತಿಯ ಕಲೆಗಳು ಎರಡು ಲಿಂಗಗಳನ್ನೊಳಗೊಂಡಿರುವವು. ಮತ್ತು ದ್ವಿವಿಧಾಂಗಕ್ಕೆ ಸದೃಶವಾದ ದ್ವಿವಿಧ ಶಕ್ತಿಯಿಂದ ಪರಿಣತವಾದ ದ್ವಿವಿಧ ಭಕ್ತಿಯು (ಸಮರಸ ಮತ್ತು ಆನಂದವುಳ್ಳದ್ದು) ದ್ವಿವಿಧಾಂಗನ ಉಪಾಸನೆಗಾಗಿ ಆ ಲಿಂಗಗಳಿಗೆ ಕೂಡಿರುವದು. ಇದೇ ಪ್ರಕಾರ ಹೃದಯದಲ್ಲಿ ಹೃತ್‌ಕಮಲ ನಾಮಧೇಯವುಳ್ಳ ಅನಾಹತ ಚಕ್ರ ಮತ್ತು ಕೆಳಗೆ ನಾಭಿ ಸ್ಥಾನದಲ್ಲಿ ಮಣಿಪೂರ ಚಕ್ರಗಳಲ್ಲಿ ಪ್ರಾಣಲಿಂಗದ ದ್ವಿಪ್ರಕಾರವಾದ ಜಂಗಮಲಿಂಗ ಮತ್ತು ಶಿವಲಿಂಗ ಇವೆರಡು ಇರುತ್ತವೆ. ಇವೆರಡರ ಮೂಲವಾದ ಪ್ರಾಣಲಿಂಗವು ಸ್ವತಂತ್ರವಿರುವ ನರಗಳ ಶಾಖೆಯಲ್ಲಿ ಇಹುವದು ಇದಕ್ಕೆ ಈಗಿನ ಶರೀರ ಶಾಸ್ತ್ರದಲ್ಲಿ (Sympathetic nervous system) ಎಂದೆನ್ನುವರು. ಈ ಎರಡು ಲಿಂಗಗಳಿಗನುಸಾರವಾದ ಎರಡು ಶಕ್ತಿಗಳ ಕಲೆಗಳು (ಶಾಂತಿಕಲಾ ಮತ್ತು ವಿದ್ಯಾಕಲಾ) ಒಡಗೂಡಿರುವವು. ಈ ಲಿಂಗ ಸದೃಶವಾದ ಭೋಗಾಂಗವು ಅದರ ದ್ವಿವಿಧಾಂಗವು (ಪ್ರಾಣಲಿಂಗೀ ಪ್ರಸಾದೀ) ಸೂಕ್ಷ್ಮ ಶರೀರದಲ್ಲಿ ಸೂಕ್ಷ್ಮರೂಪದಿಂದಲೂ ಸ್ಥೂಲಶರೀರದಲ್ಲಿ ಸ್ಥೂಲರೂಪದಿಂದಲೂ ಪ್ರಾಣಲಿಂಗ ಮತ್ತು ಅದರ ಎರಡು ಪ್ರಕಾರದ ಲಿಂಗಗಳಲ್ಲಿ ಉಪಾಸಕನಾಗಿರುವನು. ಈತನಿಗೆ ಉಪಾಸನೆಗಾಗಿ ವಿಚಾರ ಭಕ್ತಿಯು ಸಂಬಂಧಿಸಿದೆ. ಮತ್ತು ಈತನ ಎರಡು ಪ್ರಕಾರಗಳಿಗೆ ಭಕ್ತಿಯ ಎರಡು ಪ್ರಕಾರಗಳು (ಅನುಭವ, ಅವಧಾನ) ಸಂಬಂಧಿಸಿರುವವು. ಇದೇ ಪ್ರಕಾರ ಕೆಳಗಿರುವ ಸ್ವಾಧಿಷ್ಠಾನ ಮತ್ತು ಮೂಲಾಧಾರ ಚಕ್ರಗಳಲ್ಲಿ ಭೌತಿಕಮಯ ಇಷ್ಟಲಿಂಗದ ದ್ವಿವಿಧವಾದ ಗುರುಲಿಂಗ ಮತ್ತು ಆಚಾರಲಿಂಗಗಳಿರುವವು. ಈ ಲಿಂಗದ ಉಪಾಸಕನಾದ ತ್ಯಾಗಾಂಗ ಮತ್ತು ಅದರ ದ್ವಿವಿಧವಾದ ಅಂಗಾಂಗಗಳು (ಮಹೇಶ್ವರ ಮತ್ತು ಭಕ್ತ) ಇಷ್ಟಲಿಂಗ ಮತ್ತು ಅದರ ದ್ವಿವಿಧ ಲಿಂಗಕ್ಕೆ ಸಂಬಂಧಪಟ್ಟಿರುವವು. ಈ ಲಿಂಗಕ್ಕೆ ಆಬಸವ ಶಕ್ತಿಯ ಎರಡು ಕಲೆಗಳು (ಜ್ಞಾನ ಮತ್ತು ಕ್ರಿಯಾ) ಸಂಬಂಧಪಟ್ಟಿರುವವು.

ಮತ್ತು ಕಲಾಸದೃಶವಾದ ದ್ವಿವಿಧಭಕ್ತಿಯು (ನಿಷ್ಠಾ ಮತ್ತು ಶ್ರದ್ಧಾ) ಮೇಲ್ಕಾಣಿಸಿದ ದ್ವಿವಿಧಾಂಗಕ್ಕೆ ಸಂಬಂಧಿಸಿರುವವು.

ಮೇಲೆ ಕಾಣಿಸಿದ ಯಾವತ್ತು ತೀರ ಸಂಕ್ಷಿಪ್ತ ವರ್ಣನೆಯಿಂದ ಇತರ ಶೈವರಿಗೂ ಲಿಂಗಾಯತರಿಗೂ ಸ್ವಲ್ಪಾದರೂ ಸಂಬಂಧವಿಲ್ಲದಂಥ ಭೇದಗಳು ಕಂಡುಬರುವವು.

(ಮುಂದುವರಿಯುವದು.)

ಬಚ್ಚಬರಿಯುಬಯಲು.

(ವಚನ)

"ಕಟ್ಟಿಯ ಬಸವೇಶ್ವರ"

ಅಂಗವುಳ್ಳನ್ನಕ್ಕ ಲಿಂಗವೆಂದೆನುತಿರ್ದೆ. ಲಿಂಗವುಳ್ಳನ್ನಕ್ಕ ಅಂಗವೆಂದೆನುತಿರ್ದೆ. ಅಂಗಲಿಂಗ ಉಭಯವುಳ್ಳನ್ನಕ್ಕ ಅರುಹೆಂದೆನುತಿರ್ದೆ. ಅರುಹುಳ್ಳನ್ನಕ್ಕ ತಿಳುಹೆಂದೆನುತಿರ್ದೆ. ತಿಳುಹುಳ್ಳನ್ನಕ್ಕ ಅರುಹೆಂದೆನುತಿರ್ದೆ. ಅರುಹು ತಿಳುಹು ಉಭಯ ಉಳ್ಳನ್ನಕ್ಕ ನಾನೆಂದೆನುತಿರ್ದೆ. ನಾನುಳ್ಳನ್ನಕ್ಕ ನೀನೆಂದೆನುತಿರ್ದೆ. ನೀನುಳ್ಳನ್ನಕ್ಕ ನಾನೆಂದೆನುತಿರ್ದೆ. ಅಂಗಲಿಂಗದೊಳಡಗಿ, ಲಿಂಗ ಅಂಗದೊಳಡಗಿ, ಅರುಹು ತಿಳುಹಿನೊಳಡಗಿ, ತಿಳುಹು ಅರುಹಿನೊಳಡಗಿ, ನಾನು ನಿನ್ನೊಳಡಗಿ, ನೀನು ನನ್ನೊಳಡಗಿ—ಉಭಯ ಏಕವಾಗಲು ಬಚ್ಚಬರಿಯ ಬಯಲುಕಾಣಾ—ಬಸವಲಿಂಗಪ್ರಿಯ ಕಟ್ಟಿಯಬಸವೇಶ್ವರಾ.

ಬಗೆದು ಅವಳನ್ನೂ ಅವಳ ಪತಿಯನ್ನೂ ಅರಮನೆಗೆ ಕರೆತಂದು ಅವರನ್ನು ಬಹಳ ಸನ್ಮಾನಿಸಿದನು. ಆಗ ಅವನೂ ಅಲ್ಲಿದ್ದ ಬಹುಜನ ಪ್ರಾಹ್ಮಣರೂ ತಮ್ಮ ಮೊದಲಿನ ವಿಷ್ಣುಧರ್ಮವನ್ನು ಬಿಟ್ಟು ಶಿವಧರ್ಮವನ್ನು ಸ್ವೀಕರಿಸಿದರು. ವರದಾನಿಯಮ್ಮನು ಕೈಯಿಟ್ಟ ವಿಷ್ಣುಮೂರ್ತಿಯ ತಲೆಯ ಮೇಲೆ ಈಗಲೂ ಶಿವಜಿನ್ನವಿರುತ್ತದೆ. ಅವಳ ಮೂಲಕ ಹೀಗೆ ರಾಜಧಾನಿಯಲ್ಲಿ ನಡೆದ ಮಹತ್ಕಾರ್ಯದ ಪ್ರಸಿದ್ಧಿಯು ದೇಶದಲ್ಲಿ ಹೆಚ್ಚುತ್ತ ಹೋಗಲು ಬಹುಜನ ಕುರುಡ ಕುಂಟರು ವರದಾನಿಯಮ್ಮನನ್ನು ಕಂಡು ಅವಳಿಂದ ಪುನೀತರಾಗಿ ಆರೋಗ್ಯವನ್ನು ಹೊಂದಿ ಮರಳಹತ್ತಿದರು. ಈಮೇರೆಗೆ ವರದಾನಿಯು ಕಾಂಚೀಪಟ್ಟಣದಲ್ಲಿ ಕೆಲವು ದಿವಸ ವಾಸಮಾಡಿದಳು.

ಅಲ್ಲಿಂದ ಉಭಯತರು ದೇಶದಲ್ಲಿಯ ಕ್ಷೇತ್ರಗಳನ್ನು ನೋಡಬೇಕೆಂದು ಬಯಸಿ ಉತ್ತರಕ್ಕೆ ತೆರಳಿ ಕಾಶೀವಿಶ್ವೇಶ್ವರನ ದರ್ಶನವನ್ನು ಹೊಂದಿ ಅಲ್ಲಿಂದ ಪ್ರಯಾಗ, ಗಯಾಕ್ಷೇತ್ರಗಳನ್ನು ನೋಡಿ ಪುನಃ ದಕ್ಷಿಣಕ್ಕೆ ಹೊರಳಿ ಸೊನ್ನಲಿಗೆಗೆ ಬಂದರು. ಈ ಸ್ಥಳದಲ್ಲಿ ಸಿದ್ಧರಾಮೇಶ್ವರನು ಜಗದ್ಗುರುವಾಗಿ ಅನೇಕ ರಾಜರಿಂದಲೂ ಸಾಮಂತರಿಂದಲೂ ಪೂಜಿತನಾಗಿ ಬಹಳ ಸನ್ಮಾನವನ್ನು ಹೊಂದಿದ್ದನು. ಅವನು ಬಲ್ಲಿದನಾದ ಶಿವಯೋಗಿಯು. ಆದುದರಿಂದ ಉಭಯತರು ಶಿವಯೋಗದ ವಿಚಾರಗಳಲ್ಲಿ ಕೆಲಕಾಲ ಕಳೆದರು. ಆಗ ದಾನಮ್ಮನ ಮನಸ್ಸಿನಲ್ಲಿ ಬಸವಾದಿ ಪ್ರಮಥರ ಸ್ಥಾನಗಳನ್ನು ಸಂದರ್ಶಿಸಬೇಕೆಂಬ ಬಯಕೆಯುಂಟಾಗಲು ಮೊದಲು ಬಸವೇಶ್ವರನು ಐಕ್ಯಹೊಂದಿದ ಸ್ಥಳವಾದ ಕೂಡಲ ಸಂಗಮ ಕ್ಷೇತ್ರಕ್ಕೆ ಬಂದಳು. ಅಲ್ಲಿ ಕೆಲವು ದಿವಸವಿದ್ದು ಅಲ್ಲಿಂದ ಪಶ್ಚಿಮಕ್ಕೆ ೧೮ ಮೈಲುಗಳ ಮೇಲೆ ಇರುವ ಘಟಪ್ರಭಾನದಿಯು ಕೃಷ್ಣೆಗೆ ಕೂಡಿದ ಸಂಗಮಸ್ಥಾನಕ್ಕೆ ಬಂದಳು. ಇದಕ್ಕೆ ಸಮೀಪವಾಗಿ ಇಲಿಹಾಳ ಜೊನ್ನಯ್ಯ, ಚಂದಿಮರಸರು ಮೊದಲಾದ ಶಿವಶರಣರ ಸ್ಥಳಗಳಿವೆ. ಅವುಗಳನ್ನು ಅವಳು ಸಂದರ್ಶಿಸಿ ಅಲ್ಲಿಂದ ೨೦ ಮೈಲುಗಳ ಮೇಲೆ ಇರುವ ಬಸವೇಶ್ವರನ ಜನನ ಸ್ಥಾನವಾದ ಬಾಗೇವಾಡಿಗೆ ಬಂದಳು. ಅವಳು ಬಸವೇಶ್ವರನ ಕೇವಲ ಭಕ್ತಳು. ಅವ್ವರಿಂದ ಅವಳನ್ನು ಕಾಣಲು ಬಹುಜನರು ಬಂದು ಅವಳಿಂದ ವೀರಶೈವ ದೀಕ್ಷೆಯನ್ನು ಹೊಂದಿದರು. ಬಸವೇಶ್ವರನು ಬಾಗೇವಾಡಿಯಿಂದ ಹೊರಗೆ

ಪಾಕಲ್ಪಟ್ಟಬಳಿಕ ಅವನು ಪುನಃ ಸ್ವಗ್ರಾಮಕ್ಕೆ ಹೋದಂತೆ ಎಲ್ಲಿಯೂ ಉಲ್ಲೇಖವಿಲ್ಲ. ಆದರೆ ಅವನ ಭಕ್ತಳಾದ ವರದಾನಿಯಮ್ಮನು ಈ ಗ್ರಾಮಕ್ಕೆ ಬಂದಬಳಿಕ ಅಲ್ಲಿಯ ಬಹುಜನ ಬ್ರಾಹ್ಮಣರೂ ಕೂಡ ಅವಳನ್ನು ಆದರಿಸಿ ಶಿವಾನುಭವದ ಉಪದೇಶವನ್ನು ಹೊಂದಿದರೆಂದು ಗ್ರಂಥಗಳಲ್ಲಿ ಉಲ್ಲೇಖಗಳಿವೆ.

ಅಮೇಲೆ ವರದಾನಿಯಮ್ಮನು ತನ್ನ ಪತಿಯೊಡನೆ ಬಾಗೇವಾಡಿಯಿಂದ ಗುಡ್ಡಾಪುರಕ್ಕೆ ಹೋಗಲು ಉದ್ಯುಕ್ತಳಾದಳು. ಅವರು ದಾರಿಯಲ್ಲಿ ೧೨ ಮೈಲುಗಳ ಮೇಲಿರುವ ಮಣ್ಣಗೂಳಿ ಎಂದರೆ ಈಗ ಕರೆಯಲ್ಪಡುವ ಮನಗೋಳಿ ಎಂಬ ಗ್ರಾಮಕ್ಕೆ ಬಂದರು. ಅವರು ಅಲ್ಲಿಗೆ ಬಂದಕಾಲದಲ್ಲಿ ಅಲ್ಲಿಯ ಗೌಡಿತಿಯು ಗೌರಮ್ಮನೆಂಬುವಳಿದ್ದು ಅವಳಿಗೆ ಒಬ್ಬನೇ ಮಗನಿದ್ದು ಅವನು ಮರಣಹೊಂದಿದ್ದನು. ಆಗ ಆಕೆಯು ಅತ್ಯಂತ ದುಃಖಿತಳಾಗಿ ವರದಾನಿಯಮ್ಮನ ಮಹತ್ವವನ್ನು ಅರಿತವಳಾಗಿ ಅವಳಿಗೆ ಮೊರೆಹೊಗಲು ಅವಳು ಬಾಲಕನಿಗೆ ಆಯುಷ್ಯವು ಮುಗಿದಿಲ್ಲ ಎಂಬುದನ್ನು ತನ್ನ ಅಂತರ್ಜ್ಞಾನದಿಂದ ತಿಳಿದವಳಾಗಿ ಅವನ ಮೃತದೇಹದ ಮೇಲೆ ಕೆಯ್ಯನ್ನು ಆಡಿಸಲು ಅವನು ಎಚ್ಚರಾದವನಂತೆ ಎದ್ದು ಕುಳಿತನು. ಆಗ ಎಲ್ಲರೂ ಸೋಜಿಗಗೊಂಡು ಅವಳು ಮಹತ್ಪ್ರಿಕಳೆಂದು ತಿಳಿದವರಾಗಿ ಅವಳಿಂದ ವೀರಶೈವ ದೀಕ್ಷೆಯನ್ನು ಹೊಂದಿದರು.

ಅಮೇಲೆ ಉಭಯತರು ತಾವು ಮೊದಲು ಲಿಂಗಾನುಸಂಧಾನ ಮಾಡುತ್ತಿದ್ದ ಗುಡ್ಡಾಪುರಕ್ಕೆ ಬಂದರು. ಅಲ್ಲಿಗೆ ಬರುವಷ್ಟರಲ್ಲಿ ವರದಾನಿಯಮ್ಮನ ಮಾತೆಯಾದ ಶಿರಸಮ್ಮನು ಮತ್ತು ಪಿತನಾದ ಅನಂತರಾಯನು ಅದೇ ಸ್ಥಳದಲ್ಲಿ ಸಮಾಧಿಸ್ಥರಾಗಿದ್ದರು. ಅವರ ಗದ್ದುಗೆಗಳಿಗೆ ಅವರು ಶರಣೆಂದು ಸಾಷ್ಟಾಂಗವೆರಗಿದರು. ಅವರು ಗುಡ್ಡಾಪುರಕ್ಕೆ ಬರುವಷ್ಟರಲ್ಲಿ ಅವರು ಮಾಡಿದ ಮಹತ್ಕಾರ್ಯಗಳು ಎಲ್ಲರಿಗೂ ಅರಿಕೆಯಾಗಿದ್ದವು. ಆದ್ದರಿಂದ ಪುರಜನರು ಅವರನ್ನು ಅತ್ಯಂತ ಸಂಭ್ರಮದಿಂದ ಇದಿರ್ಗೊಂಡು ಸನ್ಮಾನಿಸಿದರು.

ಹೀಗೆ ಕೆಲವು ದಿವಸಗಳು ಗತಿಸಿದ ಮೇಲೆ ವರದಾನಿಯಮ್ಮನು ಇನ್ನುಮೇಲೆ ಇಹಲೋಕಯಾತ್ರೆಯನ್ನು ಮುಗಿಸಿ ಪರಮಾತ್ಮನಲ್ಲಿ ಬೆರೆ

ಯುವ ಸಮಯವು ಪ್ರಾಪ್ತವಾಯಿತೆಂದು ತಿಳಿದವಳಾಗಿ ಒಂದು ದಿವಸ ಸಂಭ್ರಮದಿಂದ ತನ್ನ ಪೂಜಾದಿಕಾರ್ಯಗಳನ್ನು ನೆರವೇರಿಸುತ್ತಿರುವಾಗ ಅವು ಮುಗಿದು ಪ್ರಸಾದವು ನೆರವೇರುವ ಕಾಲದಲ್ಲಿ ಜನಸಮುದಾಯವು ಸಾಷ್ಟಾಂಗವೆರಗಿದಾಗ ಅವಳು ತನ್ನ ಲಿಂಗದಲ್ಲಿ ಬೆರೆದಳು. ಆದರೆ ಅವಳ ದೇಹವು ನೋಡನೋಡುತ್ತಿರುವಾಗ ಭವ್ಯವಾದ ಶಿಲಾಮೂರ್ತಿಯಾಗಿ ಅವರೆದುರಿಗೆ ನಿಂತುಬಿಟ್ಟಿತು. ಆಗ ನೆರೆದ ಭಕ್ತಜನರು ವರದಾನಿಯಮ್ಮನ ಮಹತ್ವವನನ್ನು ಕಂಡು ತಾವು ಧನ್ಯರಾದೆವೆಂದು ಅವಳನ್ನು ಸ್ತುತಿಸಿದರು.

ವರದಾನಿಯಮ್ಮನು ಸಾಮಾನ್ಯ ಮನುಷ್ಯಳಲ್ಲ. ಅವಳು ರೇವಣಸಿದ್ಧೇಶ್ವರ, ಅಲ್ಲಮಪ್ರಭು, ತೋಂಟದಾರ್ಯ ಇವರ ಪಙ್ತಿಯಲ್ಲಿ ಬರುತ್ತಾಳೆ. ಅವಳು ಮಾಡಿದ ಘನತರವಾದ ಕಾರ್ಯಗಳು ಈ ಮಹಾನುಭಾವರ ಕಾರ್ಯಗಳನ್ನ ಹೋಲುತ್ತವೆ. ಅವರಂತೆಯೇ ಅವಳು ಧರ್ಮಪ್ರಸಾರ ಕಾರ್ಯಗಳನ್ನು ಮಾಡಿದ್ದಾಳೆ. ಅವಳು ಹೋದಲ್ಲೆಲ್ಲ ವೀರಶೈವ ಧರ್ಮವನ್ನು ಬೋಧಿಸಿ ಬಹುಜನರಿಗೆ ವೀರಶೈವ ದೀಕ್ಷೆಯನ್ನು ಕೊಟ್ಟಿದ್ದಾಳೆ. ಅವಳು ಅವರಂತೆಯೇ ಮಹಾತ್ಮಿಕಳು. ಅವಳು ಪ್ರಸಾದಿ ಪ್ರಾಣಲಿಂಗಿಸ್ಥಳಗಳನ್ನು ಒಳಕೊಂಡವಳು. ಬಸವೇಶ್ವರನ ತರುವಾಯ ದೇಶದಲ್ಲಿ ಅನೇಕ ಬಿಕ್ಕಟ್ಟುಗಳು ಉಂಟಾದಾಗ್ಗೆ ಅವಳು ಅಂಜಿ ಅರಣ್ಯಪ್ರದೇಶಗಳಿಗೆ ಓಡಿಹೋಗಲಿಲ್ಲ. ಶಸ್ತ್ರವನ್ನೆತ್ತಿ ತನ್ನ ಭಕ್ತರನ್ನು ಹುರಿದುಂಬಿಸಿ ವೈರಿಗಳೊಡನೆ ಯುದ್ಧ ಮಾಡಿದ್ದಾಳೆ. ಹೇಗೆ ಈ ಕಾಲದಲ್ಲಿ ಚನ್ನಬಸವೇಶ್ವರ, ಮಡಿವಾಳಮಾಚಿದೇವ, ಕಿನ್ನರಿಬ್ರಹ್ಮಯ್ಯಗಳು ಶತ್ರುಗಳ ಕೂಡ ಧರ್ಮಸ್ಥಾಪನೆಗಾಗಿ ಹೋರಾಡಿದರೋ ಹಾಗೆ ಇವಳೂ ಹೋರಾಡಿದ್ದಾಳೆ. ಮತ್ತು ಅದರಲ್ಲಿ ಅವಳು ಯಶಸ್ಸನ್ನೂ ಸಂಪಾದಿಸಿದ್ದಾಳೆ. ಅವಳು ಯಾವಲ್ಲಿ ವೀರಶೈವ ಧರ್ಮದ ಪ್ರಸಾರವಿರಲಿಲ್ಲವೋ ಅಂಥ ಸ್ಥಳಗಳಲ್ಲಿ ಅಂದರೆ ದಕ್ಷಿಣ ಮೈಸೂರು ಪ್ರಾಂತ, ಜೋಳ ಕೇರಳ ದೇಶಗಳಲ್ಲಿ ಧರ್ಮೋದ್ಧಾರ ಕಾರ್ಯಗಳನ್ನು ಮಾಡಿದ್ದಾಳೆ. ಪಾಪೇಶ್ವರದ ವರೆಗೂ ಹೋಗಿ ಅಲ್ಲಿ ಬಸವೇಶ್ವರನ ದೇವಾಲಯವನ್ನು ಸ್ಥಾಪಿಸಿ ವೀರಶೈವರ ಒಂದು ಸ್ಥಿರವಾದ ಗುರುತನ್ನು ಅಲ್ಲಿ ನಿಲ್ಲಿಸಿದಳು. ಹೇಗೆ ರೇವಣಸಿದ್ಧೇಶ್ವರ, ತೋಂಟದಾರ್ಯರು ಆಗಿನ ರಾಜರಲ್ಲಿ ತಮ್ಮ ಪ್ರಭಾವವನ್ನು ಬೀರಿದರೋ ಹಾಗೆಯೇ ವರದಾನಿಯಮ್ಮನು

ಪರರಾಜರಲ್ಲಿ ತನ್ನ ವರ್ಚಸ್ಸನ್ನು ಕೆಡಹಿದ್ದಾಳೆ. ಹೀಗೆ ಈಕೆಯ ಉಜ್ವಲ ವರ್ತನೆ ಇದೆ. ಇದರಿಂದ ಅವಳ ಉಲ್ಲೇಖವನ್ನು ವೀರಶೈವ ಗ್ರಂಥಕಾರರೆಲ್ಲರೂ ಯಾವಾಗಲೂ ಮಾಡುತ್ತ ಬಂದಿದ್ದಾರೆ. ಅವಳ ವರ್ಚಸ್ಸು ದೇಶದಲ್ಲಿ ಎಷ್ಟು ಪ್ರಬಲವಾಗಿತ್ತೆಂಬುದು ಕೆಳಗೆ ಕಾಣಿಸಿದ ಶಿಲಾಶಾಸನದಿಂದ ತಿಳಿದುಬರುತ್ತದೆ.

ವರದಾನಿಯಮ್ಮನು ಇದ್ದ ಗುಡ್ಡಾಪುರವು ತರ್ದವಾಡಿನಾಡಿನಲ್ಲಿ ಅಂದರೆ ಈಗಿನ ಉತ್ತರ ವಿಜಾಪುರ ಜಿಲ್ಲೆಯಲ್ಲಿದ್ದು ಈ ಭಾಗವು ೧೨೭೦ ರಿಂದ ೧೩೭೪ ರ ವರೆಗೆ ಆಳಿದ ದೇವಗಿರಿಯ ಯಾದವ ವಂಶದವನಾದ ಮಹಾದೇವ ರಾಜನ ಆಧೀನದಲ್ಲಿ ಇತ್ತು. ಅವನ ಪಾಂಡಲಿಕನಾವ ಸಾಯಿದೇವನು ಈ ಭಾಗದಲ್ಲಿ ಅವನ ಪರವಾಗಿ ರಾಜ್ಯವಾಳುತ್ತಿದ್ದನು. ಅವನು ವರದಾನಿಯಮ್ಮನ ವಿಷಯವಾಗಿ ಭಕ್ತಿಯನ್ನು ತಾಳಿ ಅವನು ಭೀಮಾ ತೀರದಲ್ಲಿರುವ ವಾತಾಖ್ಯಪುರವೆಂಬ ಪಟ್ಟಣವನ್ನು ಹೊಸದಾಗಿ ಕಟ್ಟಿಸಿ ಅಲ್ಲಿ ವರದಾನಿಯಮ್ಮನ ದೇವಾಲಯವನ್ನು ಸ್ಥಾಪಿಸಿದನು. ಈ ದೇವಾಲಯಕ್ಕೋಸ್ಕರ ಅರಸನ ಸಮ್ಮತಿಯಿಂದ ಅದರ ಸುತ್ತಲಿನ ಅನೇಕ ಗ್ರಾಮಗಳಲ್ಲಿದ್ದ ಭೂಮಿಯನ್ನು ಅವನು ಉಂಬಳಿಯಾಗಿ ಹಾಕಿ ಕೊಟ್ಟನು. ಈ ಸಂಗತಿಯು ಶಕೆ ವರುಷ ೧೨೦೦ ಅಂದರೆ ಕ್ರಿಸ್ತಶಕ ೧೨೭೮ನೆಯ ವೈಶಾಖ ಶು॥ ೧೫ ಆದಿತ್ಯವಾರ ಜರಿಗಿತೆಂದು ಅಲ್ಲಿಯ ಶಿಲಾಶಾಸನದಿಂದ[1] ತಿಳಿದು ಬರುತ್ತದೆ. ಇದರಲ್ಲಿ ಉಲ್ಲೇಖವಾದ ಕೆಲವು ವಿಷಯಗಳು ವಿಶೇಷವಾಗಿ ಲಕ್ಷಿಸತಕ್ಕಂಥವಿರುತ್ತವೆ. ಈ ದೇವಾಲಯಕ್ಕೋಸ್ಕರ ಗ್ರಾಮದಲ್ಲಿ ಬಂದ ವ್ಯಾಪಾರದ ಸರಕುಗಳ ಮೇಲಿನ ಸುಂಕದ ಭಾಗಗಳು ಕೊಡಲ್ಪಟ್ಟವೆ. ಅವು ಬತ್ತ, ವೀಳ್ಯೆದ ಎಲೆಗಳು, ಗಾಣದ ಎಣ್ಣೆ, ಉಪ್ಪು ಇವುಗಳು ಇರುತ್ತವೆ. ಆದರೆ ನೆಯ್ದ ಬಟ್ಟೆಗೆ ಸುಂಕವಿಲ್ಲ. ಅಲಂಪುರದಲ್ಲಿ ಶಿವಲಿಂಗವನ್ನು ಸ್ಥಾಪಿಸುವಲ್ಲಿ ವರದಾನಿಯಮ್ಮನಿಗೆ ಮುಖ್ಯವಾಗಿ ಈ ಕಾಯಕದವರು ಬಹಳ ಸಹಾಯ ಮಾಡಿದ್ದರಿಂದ ಅವರಿಂದ ಯಾವ ಸುಂಕವೂ

(1) Inscriptions in Northern Karnataka & Kolhapur State, No 21 by Pro. K. G. Kundangar M. A. (ಶಿವಾನುಭವ ಸಂಪುಟ ೧೩-೧೧-೪೮೫.)

ಎತ್ತಲ್ಪಟ್ಟಿರಲಿಕ್ಕಿಲ್ಲೆಂದು ತೋರುತ್ತದೆ. ಹಾಗೆಯೇ 'ಸರ್ವಮಾನ್ಯ ದೇವಿ'ಯರ ಕಮ್ಮತದ ಭತ್ತ ಮತ್ತು ದೇವ ಧನ ಮಾರಿದರೆ ಬಂದ ಹಣದ ಮೇಲೆ ಸುಂಕವಿಲ್ಲ. ಆದರೆ ಇದರಲ್ಲಿ ಹೇಳಿರುವದೇನಂದರೆ— ಪುರನೊಳಗೆ ಅನ್ಯಾಯವಾಗಬಾರದು. ನಿಪುತ್ರಿಕತನವಿರಬಾರದು. ಪಟ್ಟಣದಲ್ಲಿ ಅನಾಹುತಗಳಾದರೆ 'ಅರಸರು ಮನ್ನೆಯರು ಹಿರಿಯರು ಪಟ್ಟಣದ ಹಲವರು ಸರ್ವಬಾಧೆ ಪರಿಹಾರವಾಗಿ ಪುರವನ್ನು ಪಾಲಿಸುವುದು' ಎಂದು ಹೇಳಿದೆ. ಇದರಿಂದ ವರದಾನಿಯ ಹೆಸರಿನಿಂದ ಸ್ಥಾಪಿತವಾದ ಈ ಪಟ್ಟಣದಲ್ಲಿ ಎಲ್ಲರೂ ಸನ್ಮಾರ್ಗಿಗಳೂ, ನ್ಯಾಯವಂತರೂ ಇರಬೇಕೆಂಬ ಅಭಿಪ್ರಾಯವು ಇಪರಲ್ಲಿದೆ. ಇದರಿಂದ ವರದಾನಿಯು ಜೀವಂತ ವಿದ್ದಾಗ್ಗೆ ಅವಳು ಎಷ್ಟು ನ್ಯಾಯದಿಂದಲೂ ನೀತಿಯಿಂದಲೂ ವರ್ತಿಸುತ್ತಿದ್ದಳೆಂಬುದನ್ನು ನಾವು ಊಹಿಸಬಹುದು.

ಈ ಶಿಲಾಶಾಸನದಲ್ಲಿ ಉಕ್ತವಾದ ವಾತಾಖ್ಯಪುರವು ಈಗ ತದ್ದೇವಾಡಿಯಿಂದ ಪಶ್ಚಿಮಕ್ಕೆ ೧೪ ಮೈಲುಗಳ ಮೇಲೆ ಮತ್ತು ವಿಜಾಪುರ ಪಟ್ಟಣದಿಂದ ಉತ್ತರಕ್ಕೆ ೫೦ ಮೈಲುಗಳ ಮೇಲೆ ಭೀಮಾತೀರದಲ್ಲಿದೆ. ಇದು ಗುಡ್ಡಾಪುರದಿಂದ ೪೦ ಮೈಲು ಉತ್ತರಕ್ಕೆ ಇರುತ್ತದೆ. ಈ ಗ್ರಾಮಕ್ಕೆ ಈಗಿನ ಹೆಸರು 'ವಾಡಪುರಿ'ಎಂದಿದೆ.

ದಾನಮ್ಮನು ತನ್ನ ಜೀವಿತದ ಕಾಲದಲ್ಲಿ ಅತ್ಯಂತ ಪವಿತ್ರತೆಯಿಂದಲೂ ಶುಚಿಯಿಂದಲೂ ಇರುತ್ತಿದ್ದದರಿಂದ ಅವಳ ಸ್ಮಾರಕಕ್ಕಾಗಿ ಕಟ್ಟಿಸಿದ ಈ ಗ್ರಾಮವಲ್ಲಿಯ ಜನರೂ ಕೂಡ ಮೇಲೆ ಶಿಲಾಶಾಸನದಲ್ಲಿ ಹೇಳಿದಂತೆ ನೀತಿಯಿಂದಲೂ ಧರ್ಮದಿಂದಲೂ ವರ್ತಿಸಬೇಕೆಂದು ಅದರಲ್ಲಿ ಹೇಳಿಂಬಹುದೆಂದು ನಮಗೆ ತೋರುತ್ತದೆ. ಶಿಲಾಶಾಸನಗಳಲ್ಲಿ ಹೀಗೆ ಬರೆಯುವ ಪದ್ಧತಿಯು ಬಹಳ ಕಡಿಮೆ ಇರುತ್ತದೆ. ಈಗಲೂ ಸಹ ದಾನಮ್ಮನು ಅತ್ಯಂತ ಪವಿತ್ರ ದೇವತೆಯೆಂದು ಕರ್ನಾಟಕದ ಉತ್ತರ ಭಾಗದಲ್ಲಿ ಬಹು ಪ್ರಸಿದ್ಧಳಾಗಿದ್ದಾಳೆ. ಯಾರ ಮನೆಯಲ್ಲಿ ಅವಳು ಇದ್ದಾಳೆಯೋ ಅವರು ಅವಳ ಪೂಜಾಕಾಲದಲ್ಲಿ ಅತ್ಯಂತ ಶುಚಿಯಿಂದಲೂ ಮಡಿ ಮೈಲಿಗೆಯಿಂದಲೂ ಆಚರಿಸುವ ಸಂಪ್ರದಾಯವಿದೆ. ದಾನಮ್ಮನಿಗೆ ನಡೆದುಕೊಳ್ಳುವ ಜನರು ಉತ್ತರ ಕರ್ನಾಟಕ, ಮಹಾರಾಷ್ಟ್ರದ ದಕ್ಷಿಣಭಾಗ, ಸೊಲ್ಲಾಪುರ ಜಿಲ್ಲೆ ಮತ್ತು ನಿಜಾಮ ಇಲಾಖೆಯಲ್ಲಿ ಅಸಂಖ್ಯಾತರಾ

ಗಿದ್ದಾರೆ. ಆಕೆಯ ದೇವಸ್ಥಾನದಲ್ಲಿ ಯಾತ್ರಿಕರು ಪ್ರತಿದಿವಸ ಇರುತ್ತಾರೆ. ಗುಡ್ಡಾಪುರಕ್ಕೆ ಹೋಗಿಬರಲು ಸವಿೂಪದ ರೇಲ್ವೆ ಮಾರ್ಗಗಳಿಲ್ಲ. ಸರಿಯಾದ ಲೈನ ಮಾರ್ಗಗಳೂ ಇಲ್ಲ. ಯಾತ್ರಿಕರು ಕಾಲುದಾರಿಗಳಿಂದ ಹೋಗಬೇಕಾಗುತ್ತದೆ. ಇದರ ಸುತ್ತಲೂ ಒಂದು ವೃಕ್ಷವಾದರೂ ಇರದೆ ರಣಗುಟ್ಟುವ ಪ್ರದೇಶ, ಎಲ್ಲೆಲ್ಲಿಯೂ ತಗ್ಗು ತೆವರುಗಳಿಂದ ತುಂಬಿದ ಕೊರಕಲುಗಳುಳ್ಳ ಕಲ್ಲು ನಾಡು, ಮಳೆಗಾಲದಲ್ಲಿ ಸ್ವಲ್ಪ ಮಳೆಯಾದ ಕೂಡಲೆ ದೊಡ್ಡ ನದಿಗಳಂತೆ ಹರಿಯುವ ಹಳ್ಳಕೊಳ್ಳಗಳು, ಬಿಸಿಲು ಗಾಲದಲ್ಲಿ ರೌದ್ರ ಮುದ್ರೆಯುಳ್ಳ ಭಯಾನಕ ಸೃಷ್ಟಿಯ ದೃಶ್ಯ, ಈ ತೆರದ ಪ್ರದೇಶದಲ್ಲಿ ವರದಾನಿಯಮ್ಮನು ಶಿವಯೋಗ ಸಾಧನೆಯನ್ನು ಮಾಡಿದ್ದಾಳೆ. ಇಂಥ ಪ್ರದೇಶಗಳಲ್ಲಿಯೇ ಪರಮಾತ್ಮನು ತನ್ನ ಭಕ್ತರಿಗೆ ದೃಗ್ಗೋಚರವಾಗುವಂತೆ ತೋರುತ್ತದೆ. ಇಂಥಲ್ಲಿಯೇ ಶೂರರೂ ಸಾಹಸಿಗರೂ ಧರ್ಮಪುರುಷರೂ ಆಗಿ ಹೋಗಿದ್ದು ಕಂಡು ಬರುತ್ತದೆ.

ಪ್ರಸಿದ್ಧ ಕವಿಯಾದ ಲಕ್ಕಣ್ಣ ದಂಡೇಶನು ವರದಾನಿ ಗುಡ್ಡಮ್ಮಾಯು ಗುಡ್ಡಾಪುರದಿಂದ ೩೦ ಗಾವುದಗಳ ಮೇಲೆ ಮಲಾಪಹಾರೀ ನದಿಯ ದಂಡೆಯ ಮೇಲೆ ಇರುವ ಅಲಂಪುರದಲ್ಲಿ ಬಾಲ ಬ್ರಹ್ಮೇಶನನ್ನು ಸ್ಥಾಪಿಸಿದಳೆಂದು ತನ್ನ ಕಾವ್ಯದಲ್ಲಿ ಬರೆದಿದ್ದಾನೆ. ಆದರೆ ಈ ಹೆಸರಿನ ಗ್ರಾಮವಾಗಲಿ ಇಲ್ಲವೆ ಬಾಲಬ್ರಹ್ಮೇಶನ ದೇವಾಲಯವಾಗಲಿ ಈ ನದಿಯ ದಂಡೆಯ ಮೇಲೆ ಎಲ್ಲಿಯೂ ಇಲ್ಲ. ಆದ್ದರಿಂದ ಇದು ತಪ್ಪು ವಿವರಣೆ ಎಂದು ನಮಗೆ ತೋರುತ್ತದೆ. ಅಲಂಪುರವು ರಾಯಚೂರು ಜಿಲ್ಲೆಯಲ್ಲಿ ಒಂದು ಅತ್ಯಂತ ಪವಿತ್ರವಾದ ಸ್ಥಳವು. ಅಲ್ಲಿ ಬಾಲಬ್ರಹ್ಮೇಶನ ವಿಸ್ತಾರವಾದ ದೇವಾಲಯವೂ[೧] ಇದೆ. ತುಂಗಭದ್ರಾ ತೀರದಲ್ಲಿಯೇ ಇದು ಇದೆ. ಆದುದರಿಂದ ವರದಾನಿಯು ಯುದ್ಧವಾಡಿದ ಸ್ಥಳವು ಇದೇ ಆಗಿರಬಹುದೆಂದು ನಾವು ಊಹಿಸುತ್ತೇವೆ.

ಲಕ್ಕಣ್ಣ ದಂಡೇಶನು ತನ್ನ ಕಾವ್ಯದಲ್ಲಿ ಅಲಂಪುರ ಗ್ರಾಮವು ಆಕೆಯು ಇದ್ದ ಗ್ರಾಮದಿಂದ ೩೦ ಗಾವುದ ಅಂದರೆ ೯೦ ಮೈಲು ದೂರವಾಗಿ ಇತ್ತೆಂದು ಬರೆದಿದ್ದಾನೆ. ಆದರೆ ಗುಡ್ಡಾಪುರವು ಇಲ್ಲಿಂದ ಸರಳ

(೧) ಮಿ। ದೇಸಾಯಿ ಪಾಂಡುರಂಗರಾಯರ ಲೇಖ. ಪ್ರಬುದ್ಧ ಕರ್ನಾಟಕ ಸಂಪುಟ ೨೫—೨—೨೫)

ರೇಷೆಯಲ್ಲಿ ೩೫೦ ಮೈಲು ದೂರವಾಗುತ್ತದೆ. ಆದರೆ ಆದವಾನಿಯು ಇಲ್ಲಿಂದ ೬೦ ಮೈಲು ಇದೆ. ಆದ್ದರಿಂದ ಆವಳು ಆದವಾನಿಯಲ್ಲಿ ಗದ್ದಾಗೆ ಅವಳು ಅಲಂಪುರದ ಮೇಲೆ ದಂಡೆತ್ತಿ ಹೋಗಿರಬಹುದೆಂದು ತೋರುತ್ತದೆ. ಇಷ್ಟರಲ್ಲಿ ಅವಳ ಬಗ್ಗೆ ಅತ್ಯಂತ ಭಕ್ತಿಯುಳ್ಳವರಾದವರು ಬಹುಜನರಾಗಿದ್ದು ಅವರು ದಾನಮ್ಮನ ಸೈನಿಕರಾಗಿ ಅವಳ ಪಕ್ಷಕ್ಕೆಳಗೆ ಯುದ್ಧ ಮಾಡಿರುವದು ಸಂಭವನೀಯವಿರುತ್ತದೆ.

ಉಮರಾಣಿಯು ಭೀಮಾತೀರದಲ್ಲಿ ವಿಜಾಪುರ ಜಿಲ್ಲೆಯಲ್ಲಿದೆ. ಇನ್ನೊಂದು ಉಮರಾಣಿಯು ಗುಡ್ಡಾಪುರದ ದಕ್ಷಿಣಕ್ಕೆ ೧೨ ಮೈಲುಗಳ ಮೇಲಿರುತ್ತದೆ. ಈ ಎರಡನೇ ಉಮರಾಣಿಯೇ ವರದಾನಿಯಮ್ಮನ ಜನ್ಮಸ್ಥಳವೆಂದು ನಮಗೆ ತೋರುತ್ತದೆ. ಯಾಕಂದರೆ ಈಗಲೂ ಸಹ ಈ ಉಮರಾಣಿಯಿಂದಲೇ ನೈವೇದ್ಯವು ಗುಡ್ಡಾಪುರಕ್ಕೆ ಹೋಗದ ಹೊರ್ತು ದಾನಮ್ಮನ ಪೂಜೆಯಾಗುವದಿಲ್ಲ. ಇದಕ್ಕೆ ಸವಿೂಪವಾಗಿ ೧೪ ಮೈಲುಗಳ ಮೇಲೆ ಸಂಕ ಗ್ರಾಮವಿದ್ದು ಇದು ಆಕೆಯ ಗಂಡನ ಗ್ರಾಮವಿರಬೇಕು. ಆದರೆ ಭೀಮಾತೀರದಲ್ಲಿ ಬೇರೊಂದು ಸಂಕ ಗ್ರಾಮವು ಇದ್ದು ಅದು ಆಕೆಯ ಗಂಡನ ಊರು ಇರಲಿಕ್ಕಿಲ್ಲ.

ದಾನಮ್ಮನ ದೇವಾಲಯವು[೨] ವಿಸ್ತಾರವಾದ ಪ್ರಾಕಾರಗಳಿಂದಲೂ ಉನ್ನತವಾದ ಗೋಪುರಗಳಿಂದಲೂ ಕೂಡಿಕೊಂಡು ಭವ್ಯವಾಗಿದೆ. ಇದರ ಪ್ರಾಕಾರವು ೨೪೦ ಘೂಟು ಉದ್ದ ೧೬೫ ಘೂಟು ಅಗಲವಾಗಿರುತ್ತದೆ. ಆವಾರದ ಪಶ್ಚಿಮ ದಿಕ್ಕಿಗೆ ಸೊಮೇಶ್ವರ ಲಿಂಗದ ದೇವಾಲಯವಿದೆ. ಇದು ಪುರಾತನ ಕಾಲದ್ದು. ಅಲ್ಲಿ ಒಂದು ಶಿಲಾಶಾಸನವಿದೆ. ಈ ಸೋಮೇಶನ ನೆರೆಯಲ್ಲಿಯೇ ವರದಾನಿಯಮ್ಮನು ತನ್ನ ಶಿವಯೋಗವನ್ನು ಸಾಧಿಸಿದ್ದಾಳೆ. ಆತನೇ ಅವಳ ಇಷ್ಟದೇವತೆಯಾಗಿರಬಹುದು. ದೇವಾಲಯದ ಸವಿೂಪವಾಗಿ ವೀರಭದ್ರನ ಮತ್ತು ಮಲ್ಲಿಕಾರ್ಜುನನ ಗುಡಿಗಳು ಇರುತ್ತವೆ. ಇವಲ್ಲದೆ ನಂದೀಕೋಲು ಮತ್ತು ಗುರುವಾದುಕೆಯ ಸ್ಥಾನಗಳೂ ಇವೆ.

(೧) ಮಿ। ದೇಸಾಯಿ ಪಾಂಡುರಂಗರಾಯರು ಈ ಸ್ಥಳಗಳನ್ನು ಸಂದರ್ಶಿಸಿ ಬರೆದ ಲೇಖವನ್ನು ನೋಡುವದು ಶಿವಾನುಭವ ೧೬—೫—೨೪೫ ಈ ಸ್ಥಳಗಳಲ್ಲಿ ದಾನಮ್ಮನ ಕುರುಹುಗಳಿಲ್ಲೆಂದು ಅವರು ಬರೆದಿದ್ದಾರೆ.

(೨) ಶಿವಾನುಭವ ೧೬—೫—೨೪೫ ಮತ್ತು ೧-೪-೩ ನೋಡಿರಿ

ದಾನವ್ಮನ ವಿಗ್ರಹವು ೪ ಅಡಿ ಎತ್ತರವಾಗಿ ಮನುಷ್ಯಾಕೃತಿಯಾಗಿದ್ದು ಅದು ಶಿಲೆಯದಾಗಿದೆ. ಕಾಲು ಮಡಿಚಿಕೊಂಡು ಎಡಗೈಯ್ಯಲ್ಲಿ ಇಷ್ಟಲಿಂಗ, ಬಲಗಯ್ಯಲ್ಲಿ ಜಪಮಾಲಿಕೆ ಇವೆ. ದಾನವ್ಮನು ತಾವು ಶಿವಯೋಗದಲ್ಲಿ ಕುಳಿತ ರೀತಿಯು ಇದಾಗಿರಬಹುದು. ಅವಯವಗಳು ತುಂಬಿಕೊಂಡು ಸ್ವಲ್ಪ ಗಾತ್ರವುಳ್ಳವಾಗಿವೆ. ಎದ್ದುಕಾಣುವಂಥ ಗುಳ್ಳೆ ಗಣ್ಣಗಳನ್ನು ತಲೆಗೆ ಬಿರಿಯಾಗಿ ಕಟ್ಟಿದ ಹೆಣೆದ ಕುಲಾಯಿಯನ್ನು ನೋಡಿದಲ್ಲಿ ಆಕೆಯ ಪಾರ್ಥಿವ ರೂಪಕ್ಕೆ ಇದು ಸಮೀಪವರ್ತಿಯಾಗಿರಬಹುದೆಂದು ತೋರುತ್ತದೆ.

ದಾನವ್ಮನು ಲಿಂಗೈಕ್ಯಳಾದ ಬಳಿಕ ಅವಳ ಮಹತ್ವವು ಮತ್ತಿಷ್ಟು ಹೆಚ್ಚುತ್ತ ಹೋಗಿ ಅವಳು ಹಿಂದುಗಡೆ ಪಾರ್ವತಿಯ ಅವತಾರವೆಂದು ಭಾವಿಸಲ್ಪಟ್ಟಿರುತ್ತಾಳೆ. ಲಕ್ಕಣ್ಣ ದಂಡೇಶನು ತನ್ನ ಕಾವ್ಯದಲ್ಲಿ ಆಕೆಯನ್ನು ಹೀಗೆಯೇ ವರ್ಣಿಸಿದ್ದಾನೆ.

ಗುಡ್ಡಾಪುರವು ಜತ್ತ ಸಂಸ್ಥಾನಕ್ಕೆ ಸೇರಿದ್ದಾಗಿದೆ. ಈ ಗುಡಿಯ ಎಲ್ಲ ವ್ಯವಸ್ಥೆಯನ್ನು ಜತ್ತ ಸರಕಾರದ ಸ್ವಾಧೀನದಲ್ಲಿದೆ. ಗುಡಿಗೆ ಬರುವ ಆದಾಯವನ್ನು ಸರಕಾರದವರು ದೇವಾಲಯದ ಕಟ್ಟಡ, ಅದರ ಸೇವಾದಿಗಳ ವ್ಯವಸ್ಥೆ, ಯಾತ್ರಿಕರ ಸೌಕರ್ಯ ಇವುಗಳಿಗಾಗಿ ಉಪಯೋಗಿಸುತ್ತಾರೆ.

ದಾನವ್ಮನ ಮೊದಲಿನ ಹೆಸರು ಲಿಂಗವ್ಮನೆಂದಾಗಿತ್ತು. ಆದರೆ ಕಲ್ಯಾಣಕ್ಕೆ ಬಂದ ಬಳಿಕ ಅವಳಿಗೆ ದಾನವ್ಮನೆಂಬ ಹೆಸರು ಪ್ರಾಪ್ತವಾಯಿತು. ಅವಳು ಧನಿಕಳಾಗಿ ಇತರರಿಗೆ ದಾನ ಕೊಡುತ್ತಿದ್ದುದಕ್ಕಾಗಿ ಅವಳಿಗೆ ಈ ಹೆಸರು ಬಂದಂತೆ ತೋರುವದಿಲ್ಲ. ಅವಳು ಶ್ರೀಮಂತಳಿದ್ದಳೆಂದು ಅವಳ ಚರಿತ್ರೆಯಲ್ಲಿ ಉಲ್ಲೇಖವೆಲ್ಲಿಯೂ ಇಲ್ಲ. ಷಟ್‌ಕರ್ಮಗಳಲ್ಲಿ ದಾನ ಪ್ರತಿಗ್ರಹಗಳು ಬರುತ್ತಿದ್ದು ಇವು ವೀರಶೈವರಿಗೆ ಅನ್ವಯಿಸುವದಿಲ್ಲ. ಅರ್ಪಿತದಿಂದ ಕ್ರಿಯೆಗಳನ್ನು ಮಾಡುವದು ಶಿವಾನುಭವದ ಮುಖ್ಯ ತತ್ವವಾಗಿದೆ. ಈ ರೀತಿ ದಾನವ್ಮನು ಆಚರಿಸುತ್ತಿದ್ದದರಿಂದ ಬಸವೇಶ್ವರನು ಅವಳಿಗೆ ಈ ಹೆಸರನ್ನು ಕೊಟ್ಟಂತೆ ತೋರುತ್ತದೆ. ಮುಂದೆ ದಾನವ್ಮನು ವೀರಶೈವ ಧರ್ಮದ ಪ್ರಚಾರ ಕಾರ್ಯ ಮಾಡುತ್ತ ದೇಶವನ್ನು ಸಂಚರಿಸುವಾಗ ಅವಳು ಬಹುಜನರಿಗೆ ಅವರ

ಇಷ್ಟಾರ್ಥಗಳನ್ನು ಸಲ್ಲಿಸಿದ್ದಾಳೆ. ಆದ್ದರಿಂದ ಅವಳಿಗೆ ವರದಾನಿ, ಅಥವಾ ವರದಾನಿಯಮ್ಮ ಎಂಬ ಹೆಸರು ಪ್ರಾಪ್ತವಾಗಿರಬಹುದು. ಅವಳು ಗುಡ್ಡಾಪುರದಲ್ಲಿದ್ದು ಅಲ್ಲಿ ಶಿವಯೋಗವನ್ನು ಸಾಧಿಸಿ ಕಡೆಗೆ ಅಲ್ಲಿಯೇ ಐಕ್ಯಳಾದ್ದರಿಂದ ಸಾಮಾನ್ಯವಾಗಿ ಜನರು ಅವಳನ್ನು ವರದಾನಿಗುಡ್ಡಮ್ಮೆ ಅಥವಾ ಸಂಕ್ಷಿಪ್ತವಾಗಿ ಗುಡ್ಡಮ್ಮೆ ಎಂದು ಕರೆಯುತ್ತ ಬಂದರು. ಆದರೆ ಆಕೆಯ ನಿಜವಾದ ಹೆಸರು ದಾನವ್ಮ ಎಂದು ಇದ್ದು ಇದೇ ಹೆಸರನ್ನು ಅವಳಿದ್ದ ಭಾಗದ ಜನರು ತಮ್ಮ ಮಕ್ಕಳಿಗೆ ಇಡುವ ಸಂಪ್ರದಾಯವು ಈಗಲೂ ಇದೆ.

ದೇವಿಯರ ತ್ರಿವಿದಿಯಲ್ಲಿ ಅವಳ ಉಲ್ಲೇಖವಿದೆ. ಅದು ಹೇಗೆಂದರೆ–

ವಾರಿಜಾಕ್ಷನ ಕಿತ್ತು ನಾರಮೈರಿಯ ನಿಲಿಸಿ
ಧಾರಿಣಿಯ ಮೇಲೆ ಜಪಮಾಲಿತ್ತೀಶನ ಬೆರಿದ
ಧೀರೆ ಗುಡ್ಡವ್ವೆ ಶರಣಾಗು.

ವರದಾನಿಗುಡ್ಡಮ್ಮೆಯು ಶಿವಯೋಗವನ್ನು ಆಚರಿಸುತ್ತ ಪರಮಾತ್ಮನಲ್ಲಿ ಬೆರೆದಳೆಂದು ಇದರಲ್ಲಿ ಹೇಳಿದೆ. ಅವಳ ಹೆಸರು ಗಣಸಹಸ್ರದಲ್ಲಿದೆ. ಈಕೆಯು ಬಸವೇಶ್ವರನ ಸಮಕಾಲೀನಳಾಗಿದ್ದಾಳೆ.

ಪುಲಿಗೆರೆಯ ಸೋಮಯ್ಯ.

ಧಾರವಾಡ ಜಿಲ್ಲೆಯಲ್ಲಿರುವ ಈಗಿನ ಲಕ್ಷ್ಮೇಶ್ವರ ಗ್ರಾಮಕ್ಕೆ ಮೊದಲು 'ಪುಲಿಗೆರೆ' ಅಥವಾ 'ಶಾರ್ದೂಲಪುರ'ವೆಂಬ ಹೆಸರಿತ್ತು. ಅದು ಕರ್ನಾಟಕದಲ್ಲಿ ಬಹು ಪ್ರಸಿದ್ಧವಾದ ಪಟ್ಟಣವು. ಇನೇ ಶತಮಾನದ ಹಿಂದೆ ಅಲ್ಲಿ ಅನೇಕ ಜೈತ್ಯಾಲಯಗಳಿದ್ದು ಜೈನ ಸಂಸ್ಥೆಗೆ ಅದು ಮುಖ್ಯ ಸ್ಥಾನವೆಂದು ಗಣಿಸಲ್ಪಟ್ಟಿತ್ತು. ಅಲ್ಲಿ ಬಹುಕಾಲ ಕೆಲವು ರಾಜಮನೆತನದವರೂ ಮಂಡಲಾಧೀಶ್ವರರೂ ರಾಜ್ಯವಾಳಿದ್ದಾರೆ.

ಹೀಗಿರಲು ಈ ಪಟ್ಟಣದಲ್ಲಿ ಸೋಮಣ್ಣನೆಂಬವನು ಜೈನಕುಲದಲ್ಲಿ ಹುಟ್ಟಿ ಜಿನ ಧರ್ಮದಂತೆ ಆಚರಿಸುತ್ತಿದ್ದನು. ಆದರೆ ನಾಡಿ

ನಲ್ಲಿ ಶಿವಾನುಭವದ ತತ್ವಗಳು ಪ್ರಸಾರವಾಗಲು ಅವನು ತನ್ನ ಜಿನ ಧರ್ಮವನ್ನು ಬಿಟ್ಟುಕೊಟ್ಟು ಶಿವಧರ್ಮವನ್ನು ಪಾಲಿಸಹತ್ತಿದನು. ಅವನು ದಿನಾಲು ಒಂದು ಶಿವಾಲಯಕ್ಕೆ ಹೋಗಿ ಲಿಂಗಪೂಜೆಯನ್ನು ತಪ್ಪದೆ ಮಾಡಿಬರುವನು. ಅವನಲ್ಲಿ ಕ್ರಮೇಣ ಶಿವಭಕ್ತಿಯು ಬೆಳೆಯುತ್ತಲೇ ಹೋಯಿತು. ಮುಂದೆ ಅವನು ಶಿವಪೂಜೆ ಇಲ್ಲದೆ ಊಟಮಾಡಲಿಕ್ಕಿಲ್ಲೆಂಬ ವ್ರತವನ್ನು ಇಟ್ಟುಕೊಂಡು ಅದರಂತೆ ಆಚರಿಸಹತ್ತಿದನು. ಆದರೆ ಅವನ ಮಕ್ಕಳೂ ಅವನ ಬಂಧುಬಳಗದವರೂ ಅವನನ್ನು ಅನುವರ್ತಿಸದೆ ತಮ್ಮ ಜಿನ ಧರ್ಮವನ್ನೇ ಪಾಲಿಸುತ್ತ ಬಂದರು.

ಹೀಗಿರಲು ಒಂದು ದಿನ ಸೋಮಣ್ಣನಿಗೆ ಕಣ್ಬೇನೆಯಾಗಿ ಅವನಿಗೆ ಕಣ್ಣುಗಳು ಕಾಣದಂತಾದವು. ಇದರಿಂದ ಅವನು ಶಿವಾಲಯಕ್ಕೆ ಹೋಗುವದು ನಿಂತಿತು. ಆದರೆ ಅವನ ಮಕ್ಕಳೂ ಬಾಂಧವರೂ ಅವನನ್ನು ಶಿವಾಲಯಕ್ಕೆ ಕರೆದುಕೊಂಡು ಹೋಗಲಿಕ್ಕೆ ಒಪ್ಪಲಿಲ್ಲ. ಆದ್ದರಿಂದ ಅವನು ಉಪವಾಸವಿರಹತ್ತಿದನು. ಹೀಗೆ ಕೆಲವು ದಿವಸ ಅವನು ಉಪವಾಸವಿದ್ದರೂ ಕೂಡ ಅವನು ತನ್ನ ವ್ರತವನ್ನು ಬಿಡಲಿಲ್ಲ. ಕಡೆಗೆ ಅವನ ಮಕ್ಕಳು ಅವನು ಸಾಯುತ್ತಾನೆಂದು ಕನಿಕರಪಟ್ಟು ಅವನಿಗೆ—ನಿನಗೆ ಲಿಂಗವನ್ನು ತೋರಿಸುತ್ತೇವೆ ಎಂದು ಹೇಳಿ ಅವನ ಕೈಹಿಡಿದು ಶಿವಾಲಯಕ್ಕೆ ಒಯ್ಯದೆ ಒಂದು ಬಸದಿಗೆ ಕರೆದುಕೊಂಡು ಹೋಗಿ ಅಲ್ಲಿಯ ಜಿನನ ಮೂರ್ತಿಯ ಮುಂದೆ ನಿಲ್ಲಿಸಿದರು. ಆಗ ಅವರು ಅವನಿಗೆ—ಇದೇ ಶಿವಲಿಂಗವು, ಇದನ್ನು ಪೂಜಿಸು, ಎಂದು ಹೇಳಿದರು. ಆಗ ಸೋಮಯ್ಯನು ಆ ಮೂರ್ತಿಯೇ ಲಿಂಗವೆಂದು ಭಾವಿಸಿ ನಿತ್ಯದಂತೆ ಅತ್ಯಂತ ಭಕ್ತಿಯಿಂದ ಪೂಜಿಸಿ ನಮಸ್ಕಾರ ಮಾಡಿದನು. ಅವನ ಈ ಪೂಜೆಯು ಮುಗಿದ ಬಳಿಕ ಅವನ ಮಕ್ಕಳು ಅವನಿಗೆ—ತಂದೆಯೇ, ಏಳೇಳು, ಈ ಜಿನೇಶ್ವರನು ಎಂದೆಂದು ಹೀಗೆಯೇ ತನ್ನನ್ನೇ ಪೂಜೆ ಮಾಡಬೇಕೆಂದು ನಿನಗೆ ಹೇಳುತ್ತಿದ್ದಾನೆ. ಏಳು ಏಳು, ಎಂದು ಅವನನ್ನು ಎಬ್ಬಿಸಿ ಅವನಿಗೆ ಹಾಸ್ಯಮಾಡಹತ್ತಿದರು. ಅದನ್ನು ಸೋಮಯ್ಯನು ಕೇಳಿ—ನಾನು ಶಿವನನ್ನು ಬಿಟ್ಟು ಜಿನ್ನ ಗಿನ್ನನನ್ನು ಪೂಜಿಸಿದೆನೇ ಎಂದು ಅವರಿಗೆ ಕೇಳಲು, ಅವರು—ಇದು ಜಿನ್ನನೋ, ಶಿವನೋ ಎಂಬುದನ್ನು ಸ್ವಲ್ಪ ಕಣ್ಣುತೆರೆದು ನೋಡು, ಎಂದೆನ್ನಲು ಅವನು ಶ್ರಮದಿಂದ

ಕಣ್ಬೆರೆದು ನೋಡುವಲ್ಲಿ ಒಂದು ಅದ್ಭುತವಾಯಿತು. ಅವನ ಮುಂದಿದ್ದ ಆ ಜಿನ್ನನ ರೂಪು 'ಛಟ, ಛಟ' ಎಂದು ಸಪ್ಪಳ ಮಾಡುತ್ತ ಹೋಳಾಗಿ ಬಿಟ್ಟಿತು. ಮತ್ತು ಅದರ ಸ್ಥಳದಲ್ಲಿ ಶಿವನು ಪಂಚಮುಖ, ದಶಭುಜ, ತ್ರಿನೇತ್ರ, ವೃಷಭಾರೂಢನಾಗಿ ಸೋಮಣ್ಣನ ಇದಿರಿಗೆ ಪ್ರತ್ಯಕ್ಷನಾಗಿ ನಿಂತಿದ್ದನು. ಆಗ ಶಿವನು ಅವನಿಗೆ—ಸೋಮಯ್ಯನೇ, ನಾನು ನಿನ್ನ ಭಕ್ತಿಗೆ ಮೆಚ್ಚಿದೆನು. ನಿನಗೇನು ಬೇಕು ಬೇಡು ಎಂದೆನ್ನಲು, ಸೋಮಯ್ಯನು ಅವನಿಗೆ—ನಿಮ್ಮ ಪಾದದಲ್ಲಿ ಸದ್ಭಕ್ತಿಯಿಂದ ಯಾವಾಗಲೂ ಇರುವಂತೆ ಕರುಣಿಸಬೇಕು ಎಂದು ಬೇಡಿಕೊಂಡನು. ಶಿವನು ಹಾಗೆಯೇ ಆಗಲೆಂದು ನುಡಿಯಲು, ಸೋಮಯ್ಯನು ಪ್ರತ್ಯಕ್ಷನಾದ ಆ ಶಿವನ ರೂಪಿನಲ್ಲಿಯೇ ಅಡಗಿಬಿಟ್ಟನು.

ಶಿವನು ಸೋಮಯ್ಯನ ಭಕ್ತಿಯು ಚಿರಕಾಲ ಜನರ ಸ್ಮರಣೆಯಲ್ಲಿ ಉಳಿಯಲೆಂದು ಅವನು ಸೋಮೇಶ್ವರನೆಂಬ ಹೆಸರಿನಿಂದ ಆ ದೇವಾಲಯದಲ್ಲಿ ನೆಲಿಸಿದನು. ಅಂದಿನಿಂದ ಆ ದೇವಾಲಯವು 'ಹುಲಿಗೆರೆಯ ಸೋಮನಾಥ'ನೆಂಬ ಹೆಸರಿನಿಂದ ನಾಡಿನಲ್ಲಿ ಪ್ರಸಿದ್ಧವಾಯಿತು. ಒಬ್ಬ ವಚನಕಾರನು 'ಹುಲಿಗೆರಿಯ ಸೋಮನಾಥ' ಎಂಬ ಅಂಕಿತವನ್ನಿಟ್ಟುಕೊಂಡು ತನ್ನ ವಚನಗಳನ್ನು ರಚಿಸಿದ್ದಾನೆ. ಇದು ಈ ದೇವಾಲಯದ ಮಹತ್ವವನ್ನು ಸೂಚಿಸುತ್ತದೆ. ಬಸವೇಶ್ವರನ ತರುವಾಯ ಆದಯ್ಯನು ತನ್ನ ದೇಶವಾದ ಸೌರಾಷ್ಟ್ರ ಅಂದರೆ ಈಗಿನ ಗುಜರಾಥದಿಂದ ಪುಲಿಗೆರೆಗೆ ಬಂದು ಸುರಹೊನ್ನೆ ಬಸದಿಯಲ್ಲಿ ಸೌರಾಷ್ಟ್ರ ಸೋಮನಾಥನನ್ನು ಸ್ಥಾಪಿಸಿದ ವೃತ್ತಾಂತವು ಹಿಂದೆಯೇ ಬಂದಿದೆ. (ಹಿಂದೆ ಪುಟ ೪೮ ನೋಡಿರಿ.) ಈ ದೇವಾಲಯವು 'ಸೌರಾಷ್ಟ್ರ ಸೋಮನಾಥ' ಎಂಬ ಹೆಸರಿನಿಂದ ಪ್ರಸಿದ್ಧವಾಯಿತು. ಆದರೆ ಸೋಮಯ್ಯನ ಮೂಲಕ ಉಂಟಾದ ಸೋಮನಾಥ ದೇವಾಲಯವು ಅದಕ್ಕೂ ಹಿಂದಿನದಾದ ಒಂದು ಪ್ರಸಿದ್ಧ ದೇವಾಲಯವಾಗಿರುತ್ತದೆ. ಸೋಮಯ್ಯನ ಹೆಸರು ಗಣಸಹಪ್ರದಲ್ಲಿ ಬಂದಿದೆ. ಇದರಿಂದ ಅವನು ಪುರಾತನ ಕಾಲದವನೆಂದು ಊಹಿಸಬಹುದಾಗಿದೆ.

ಸೋಮಯ್ಯನಿಗೆ 'ಸೋವಣ್ಣ' ಎಂಬ ಬೇರೆ ಹೆಸರೂ ಕೆಲವು ಗ್ರಂಥಗಳಲ್ಲಿ ಬಂದಿದೆ.

ವೈದುನ ರಾಮಯ್ಯ.

ಆಂಧ್ರದೇಶದಲ್ಲಿ ಭೀಮಾವತೀ ಎಂಬ ಗ್ರಾಮವಿದ್ದು ಅಲ್ಲಿ ಸೋಮನಾಥನೆಂಬ ಶೈವ ಬ್ರಾಹ್ಮಣನು ವಾಸವಾಡುತ್ತಿದ್ದನು. ಅವನ ಹೆಂಡತಿಯ ಹೆಸರು ಮಹಾದೇವಿ. ಉಭಯ ದಂಪತಿಗಳು ಬಹಳ ಬಡವರು. ಆದ್ದರಿಂದ ಅವರು ಕಷ್ಟದಿಂದ ತಮ್ಮ ಜೀವನವನ್ನು ಸಾಗಿಸುತ್ತ ಬಂದರು. ಆದರೂ ಅವರು ಶಂಕರನ ಪ್ರೇಮಿಗಳು. ಶಂಕರನ ಭಜನೆಯಲ್ಲಿಯೇ ಅವರು ಸಂತೋಷದಿಂದ ಕಾಲಕಳೆಯುವರು. ಹೀಗಿರುವಲ್ಲಿ ಮುಂದೆ ಅವರಿಗೆ ಒಬ್ಬ ಮಗನು ಜನಿಸಿದನು. ಅವರು ಆತನಿಗೆ 'ರಾಮಯ್ಯ' ಎಂಬ ಹೆಸರನ್ನಿಟ್ಟರು. ಆದರೆ ಸೋಮನಾಥನು ಮುಂದೆ ಸ್ವಲ್ಪ ದಿವಸಗಳಲ್ಲಿ ಮರಣಹೊಂದಿದನು. ಇದರಿಂದ ಮಹಾದೇವಿಯ ಮೇಲೆ ತನ್ನ ಮಗನನ್ನು ಸಲುಹುವ ಭಾರವು ಬೀಳಲು ಅವಳು ತನ್ನ ಬಡತನದಲ್ಲಿ ತನ್ನ ಸಂಸಾರವನ್ನು ಕಷ್ಟದಿಂದ ಸಾಗಿಸುತ್ತ ಬಂದಳು.

ಮಗನು ಸ್ವಲ್ಪ ದೊಡ್ಡವನಾದ ಬಳಿಕ ಮಹಾದೇವಿಯು ಅವನಿಗೆ ವಿದ್ಯಾಭ್ಯಾಸ ಮಾಡಿಸಬೇಕೆಂದು ಬಯಸಿ ಅವಳು ಅವನನ್ನು ಒಬ್ಬ ಶೈವ ಬ್ರಾಹ್ಮಣನ ಕಡೆಗೆ ಇಟ್ಟಳು. ಈ ಬ್ರಾಹ್ಮಣನು ಇತರ ಬಾಲಕರೊಡನೆ ಇವನಿಗೂ ಓದ ಕಲಿಸಹತ್ತಿದನು. ರಾಮಯ್ಯನು ಬಹು ಕುಶಾಗ್ರಬುದ್ಧಿಯುವನು. ಅವನು ಗುರುವು ಹೇಳಿದ್ದನ್ನು ತಿಳಿದುಕೊಂಡು ತನ್ನ ಅಭ್ಯಾಸದಲ್ಲಿ ಎಲ್ಲರಿಗಿಂತಲೂ ಮಿಗಿಲಾದವನೆಂದು ಎಣಿಸಿಕೊಂಡನು.

ಹೀಗಿರುವಲ್ಲಿ ಓದುವ ಮಕ್ಕಳೆಲ್ಲರೂ ದೀಪಾವಳಿಯ ಹಬ್ಬದ ಪೂರ್ವದಲ್ಲಿ ಒಂದು ದಿನ ಒಂದು ಗಿಡದಡಿಯಲ್ಲಿ ನೆರೆದು ಅವರು ತಮ್ಮ ತಮ್ಮೊಳಗೆ ಮಾತನಾಡುತ್ತಿರುವಾಗ--ನಾವು ಹಬ್ಬಕ್ಕೆ ನಮ್ಮ ಅಕ್ಕ ಭಾವಂದಿರನ್ನು ಕರೆತರುವೆವು. ಅವರೊಡನೆ ನಾವು ನಮ್ಮ ಹಬ್ಬವನ್ನು ಮಾಡುವೆವು ಎಂದ ಹೇಳಿಕೊಳ್ಳಹತ್ತಿದರು. ಅದನ್ನು ರಾಮಯ್ಯನು ಕೇಳಿ--ನಾನೂ ನನ್ನಕ್ಕಭಾವರನ್ನು ಕರೆತರುವೆನು ಎಂದೆನಲು ಆ ಮಕ್ಕಳೆಲ್ಲರೂ ಅವನಿಗೆ--ನೀನೊಬ್ಬ ಮುಂಡೆಯ ಮಗ. ನಿನಗೆಲ್ಲಿ ಅಕ್ಕಭಾವಂದಿರಿದ್ದಾರೆ? ಅವರನ್ನೆಲ್ಲಿಂದ ತರುವೆ? ನೀನು ದರಿದ್ರ. ನೀನೇನು ಹಬ್ಬ ಮಾಡುವಿ? ಎಂದು ಅವನಿಗೆ ಚುಚ್ಚಿ ನುಡಿದು ಹಾಸ್ಯ ಮಾಡಿದರು.

ಈ ನುಡಿಗಳು ರಾಮಯ್ಯನ ಮನಸ್ಸಿಗೆ ಬಹಳ ತಾಕಿದವು. ಅವನು ಅಳುತ್ತ ತನ್ನ ತಾಯಿಯ ಬಳಿಗೆ ಬಂದು--ನನ್ನ ಅಕ್ಕ ಭಾವಂದಿರು ಎಲ್ಲಿದ್ದಾರೆ ಎಂದು ಕೇಳಿದನು. ಮಹಾದೇವಿಯಾದರೂ ಶಿವನಲ್ಲಿ ಅತ್ಯಂತ ನಿಷ್ಠೆಯುಳ್ಳವಳು. ಅವಳು ತನ್ನ ಮಗನ ಇಂಗಿತವನ್ನು ತಿಳಿದುಕೊಂಡು--ನಿನಗೆ ಅಕ್ಕ ಭಾವಂದಿರು ಇದ್ದಾರೆ ಎಂದು ಹೇಳಿದಳು. ಅವರ ಹೆಸರು ಹೇಳು ಎಂದು ಬಾಲಕನು ಅಳುತ್ತಿರಲು, ತಾಯಿಯು ಅವನಿಗೆ--ನಿನ್ನ ಅಕ್ಕ ಗೌರಿ, ನಿನ್ನ ಭಾವ ಚನ್ನಮಲ್ಲಿಕಾರ್ಜುನ, ಅವರು ಇರುವ ಊರು ಶ್ರೀಶೈಲ ಎಂದು ಹೇಳಲು ಬಾಲಕನು ಅವರನ್ನು ಹಬ್ಬಕ್ಕೆ ಕರೆತರುವೆನೆಂದು ಶ್ರೀಶೈಲಕ್ಕೆ ಹೊರಟನು. ಅವನು ಅಲ್ಲಿಗೆ ಹೋಗಿ ಗೌರಕ್ಕಾ, ಚನ್ನಮಲ್ಲಯ್ಯಾ, ಎಂದು ಕೂಗಿ ಕರೆಯಹತ್ತಿದನು. ಆದರೆ ಯಾರೂ ಮಾತಾಡದಿರಲು ಬಾಲಕನು--ನಾನೆಂಥ ಪಾಪಿಯು, ಎಂದು ಹಲುಬುತ್ತ ದುಃಖಿಸುತ್ತ ಅರಣ್ಯವನ್ನು ಸುತ್ತುತ್ತ ತಿರುಗಹತ್ತಿದನು. ಅವನು ಅಳಿಗಿಳಿಗಳನ್ನೂ ತರುಗಿರಿಗಳನ್ನೂ ಖಗ ಮೃಗಗಳನ್ನೂ ಕೇಳುತ್ತ ಸಾಗಿದನು. ಅವನು ಕಲ್ಲುಮುಳ್ಳುಗಳನ್ನು ತುಳಿಯುತ್ತ ಹೋದನು. ಕಾಲುಗಳಿಂದ ನೆತ್ತರು ಬಸಿಯುತ್ತಿದ್ದರೂ ಲಕ್ಷಿಸಲಿಲ್ಲ. 'ಹಬ್ಬ ಹತ್ತಿರ ವಾಯಿತ್ತು. ನಮ್ಮಕ್ಕ ಭಾವನನ್ನು ಕಾಣಿರೇ' ಎಂದು ತಾನು ಕಂಡ ಪಕ್ಷಿಗಳನ್ನೂ ಮರಗಳನ್ನೂ ಸಿಂಹ ಶಾರ್ದೂಲಗಳನ್ನೂ ಕೇಳುವನು. ಹಸಿವೆ ಬಳಲಿಕೆಗಳಿಂದ ಎಷ್ಟು ಕಷ್ಟಪಟ್ಟರೂ ತನ್ನ ಅಕ್ಕ ಭಾವಗಳ ಸ್ಮರಣೆಯೊಂದೇ ಅವನಿಗಾಯಿತು. ಹೀಗಿರುವಲ್ಲಿ ಅವನು ಬಸವಳಿದು ಒಂದು ಕೋಡುಗಲ್ಲಿನ ಕೆಳಗೆ ಬಂದು ಬಿದ್ದನು. ಆಗ ಅವನು ನಿಶ್ಚೇಷ್ಟಿತನಾಗಿರಲು ಶಿವನಲ್ಲಿ ಅವನಿಗೋಸ್ಕರ ಕರುಣೆಯುಂಟಾಗಿ ಅವನು ಗಿರಿಜೆ ಸಹಿತ ಪ್ರತ್ಯಕ್ಷನಾಗಿ ರಾಮಯ್ಯನ ಕೈ ಹಿಡಿದು, ಅವನನ್ನು ಸಂತವಿಸಿ, ಅವನಿಗೆ ಅಂದದ್ದು--ನಾವೇ ನಿನ್ನ ಅಕ್ಕ ಭಾವಂದಿರು. ನಮ್ಮನ್ನು ನೀನು ಕಂಡೆ. ಇನ್ನು ಮೇಲೆ ನೀನು ಮನೆಗೆ ತಿರುಗಿಹೋಗು ಎಂದು ಹೇಳಲು ಬಾಲಕನು ಅವರಿಗೆ--ನೀವು ನಮ್ಮ ಮನೆಗೆ ಬಂದಲ್ಲದೆ ಹಬ್ಬವನ್ನು ಮಾಡೆವು. ನೀವು ನನ್ನೊಡನೆ ಊರಿಗೆ ಬರಬೇಕು ಎಂದು ನುಡಿದನು. ಆಗ ಶಿವನೂ ಆಗಜೆಯೂ ಬಾಲಕನ ಮುಗ್ಧಭಕ್ತಿಗೆ ಮೆಚ್ಚಿದವರಾಗಿ ಅವನೊಡನೆ ಭೀಮಾವತೀ ಗ್ರಾಮಕ್ಕೆ ಬಂದು ತಾಯಿಮಗನೊಡನೆ ಹಬ್ಬವನ್ನು ತೀರಿಸಿದರು. ಆಗ ಶಿವನು ತನಗೆ ವೈದುನನಾಗಿ ಆಚರಿಸಿದ ರಾಮಯ್ಯನ

ಭಕ್ತಿಗೆ ಮೆಚ್ಚಿ ಅವನಿಗೆ ವೀರಶೈವೋಪದೇಶವನ್ನು ಮಾಡಿ ಇಷ್ಟಲಿಂಗದ ಮೂಲಕ ನಾನು ನಿನ್ನಲ್ಲಿ ಸದಾ ವಾಸಿಸುತ್ತೇನೆಂದು ಅಭಯವನ್ನಿತ್ತು ಅಲ್ಲಿಯೇ ಅಂತರ್ಧಾನನಾದನು.

ಅಂದಿನಿಂದ ರಾಮಯ್ಯನು ವೈದುನ ರಾಮಯ್ಯನೆಂಬ ಹೆಸರಿನಿಂದ ಲೋಕದಲ್ಲಿ ಪ್ರಸಿದ್ಧನಾದನು. ಅವನು ವೀರಶೈವೋಪದೇಶವನ್ನು ಹೊಂದಿ ಶಿವಾನುಭವದ ಆಚರಣೆಯಂತೆ ನಡಿಯುತ್ತ ಒಬ್ಬ ಶ್ರೇಷ್ಠ ಶಿವಶರಣನೆಂದೆನಿಸಿಕೊಂಡನು. ವೈದುನ ರಾಮಯ್ಯನು ವಚನಕಾರನಿದ್ದಾನೆ. ಅವನ ನಾಲ್ಕು ವಚನಗಳು ಮಾತ್ರ ನಮಗೆ ದೊರೆತಿವೆ. 'ಮಹಾಲಿಂಗ ಚನ್ನರಾಮ' ಎಂಬುದೇ ಅವನ ಮುದ್ರಿಕೆಯು.

ವಚನಗಳು.

(೧) ಮಳಲಲ್ಲರಸಲುಂಟೇ? ನೆಳಲಿಗೆ ತಡೆಯುಂಟೇ? ರಣದಲ್ಲಿ ತಪ ಉಂಟೇ? ನೇಹ ತಪ್ಪಿದಲ್ಲಿ ಮೋಹವನರಸಲುಂಟೇ? ಮಹಾಲಿಂಗ ಚನ್ನರಾಮನ ಮನ ಮುರಿದ ಬಳಿಕ ಕಂಗಳಿಗೆ ವಿಷವಯ್ಯ.

(೨) ಹೊಲೆಯರಲ್ಲುಂಡೆ. ನೀ ಕುಲವಂತನೇ? ತರುಳನ ಕೊಲಿಸಿದೆ. ನೀ ಕರುಣವಂತನೇ? ತಿರಿದುಂಬೆ. ನೀ ಸಿರಿವಂತನೇ? ಪಂಡವರ್ಣದ ಮುಖ. ನೀ ಚೆಲುವನೇ? ಕಂಚಿಲ್ಲದೆ ಹಂಚಿನಲ್ಲುಂಬೆ. ಮರುಳ್ಗಳನೊಡಗೂಡಿ ಬೂದಿಯುಂ ಹೂಸಿದೆ. ನಮ್ಮಕ್ಕನೊಡನಾಡಿ ನೀ ಸೊಕ್ಕಿದೆಯಾ ಮಹಾಲಿಂಗ ಚನ್ನರಾಮಾ?

(೩) ಗಣಂಗಳ ಬರವ ಕಂಡು ಕೈಮುಗಿದು ಅಂಜಲೇಬೇಕು. ಶರಣೆನ್ನಲೊಲ್ಲದೀ ಮನವು. ಅಳ್ಳನೆಂದು ನಂಬಿ ನಂಬಲೊಲ್ಲದಾಗಿ ಮಹಾಲಿಂಗ ಚನ್ನರಾಮನೆನ್ನ ಕೆಡೆ ನೋಡಿ ನಗುತ್ತಲೈದಾನೆ.

(೪) ಎನಗೆ ನೀ ಕಟ್ಟುವರೆ ಎಂಬಲ್ಲಿ ಕೇಳು ಭಂಡಾರಿ ಬಸವಣ್ಣನೇ, ಎನಗೆ ನೀ ಕಟ್ಟುವರೆ ಕೇಳು ನಂಬಿಯಣ್ಣನೇ, ಎನಗೆ ನೀ ಕಟ್ಟುವರೆ ಎಂಬಲ್ಲಿ ಕೇಳು ಅಜಗಣ್ಣನೇ, ಆನೆ ಮುರಿದಲ್ಲಿ ಸುಂಡಾಲವೇ? ಆನಿಲ್ಲದಿರ್ದಡೆ ನೀನಿಲ್ಲ. ನೀನಿಲ್ಲದಿರ್ದೊಡೆ ಆನಿಲ್ಲ. ಆನು ನೀನೆಂಬುದಂತಿರಲಿ. ಹಿಡಿಯೋ, ಮುಡಿಯೋ, ನೀ ಮಾಡಿದಂತಿಪ್ಪೆನು.

ಸಾತ್ವಿಕ ಸಜ್ಜನ ಸದ್ಗುರುವಿನಿಂದೆ ಬದುಕಿದೆನಾಗಿ ನಿಮ್ಮನಾನಂಜೆ ಮಹಾಲಿಂಗ ಚನ್ನರಾನೂ.

ಈ ಕಡೆಯ ವಚನದ ಮೇಲಿಂದ ವೈದುನ ರಾಮಯ್ಯನು ಬಸವೇಶ್ವರನ ತರುವಾಯ ಪ್ರಸಿದ್ಧಿಗೆ ಬಂದನೆಂಬುದು ಸ್ಪಷ್ಟವದೆ. ಇವನ ಹೆಸರು ಗಣಸಹಸ್ರದಲ್ಲಿ ಬಂದಿದೆ. ಆದ್ದರಿಂದ ಇವನು ಶಿವಶರಣರಲ್ಲಿ ಪುರಾತನ ಕಾಲದವನು. ಇವನ ಹೆಸರು ಶಿವಶರಣರ ಹೆಸರುಗಳ ಯಾವ ಮಾಲಿಕೆಯಲ್ಲಾದರೂ ಬರುವದುಂಟು. ಇಷ್ಟು ಈತನು ಪ್ರಸಿದ್ಧನಾಗಿದ್ದಾನೆ. ಆರಂಭದಲ್ಲಿ ಇವನು ಮುಗ್ಧಭಕ್ತಿಯುಳ್ಳವನಾಗಿ ಗಿರಿಜೆ ಮತ್ತು ಶಿವ ಇವರು ತನ್ನ ಅಕ್ಕ ಭಾವಂದಿರು ಎಂದು ತಿಳಿದು ಆ ಬಗೆಯ ಪ್ರೇಮದಿಂದ ವರ್ತಿಸಿ ಪರಮಾತ್ಮನನ್ನು ಒಲಿಸಿದ್ದಾನೆ. ಇದು ಅವನ ವೈಶಿಷ್ಟ್ಯವು. ಆರಂಭದಲ್ಲಿ ಚಿಕ್ಕಮುಕ್ಕಳಂತೆ ಮುಗ್ಧಭಕ್ತಿಯುಳ್ಳವನಾದರೂ ಮುಂದೆ ಅವನು ಒಬ್ಬ ಶ್ರೇಷ್ಠ ಶಿವಾನುಭವಿಯಾಗಿ ಆಚರಿಸಿದನೆಂಬುದು ನಾವು ಮೇಲೆ ಉಲ್ಲೇಖಿಸಿದ ವಚನಗಳ ಮೇಲಿಂದ ಕಂಡು ಬರುತ್ತದೆ. ರಾಮಯ್ಯನು ಆಂಧ್ರದೇಶದವನು. ಅವನು ಬಹುಶಃ ಶ್ರೀಶೈಲಕ್ಕೆ ಸಮೀಪವರ್ತಿಯಾದ ಕೆಲವೊಂದು ಗ್ರಾಮದಲ್ಲಿದ್ದನೆಂದು ತೋರುತ್ತದೆ. ಬಸವೇಶ್ವರನ ಕಾಲದಲ್ಲಿ ಅನೇಕ ಆಂಧ್ರರು ವೀರಶೈವ ಧರ್ಮವನ್ನು ಸ್ವೀಕರಿಸಿ ಕನ್ನಡ ಭಾಷೆಯಲ್ಲಿ ವಚನಗಳನ್ನು ರಚಿಸಿದ್ದಾರೆ. ಅಂಥವರಲ್ಲಿ ವೈದುನ ರಾಮಯ್ಯನು ಒಬ್ಬನು ಇದ್ದಾನೆ.

ಕೋಳೂರು ಕೊಡಗೂಸು.

ಕಲಬುರ್ಗಿ ಜಿಲ್ಲೆಯಲ್ಲಿರುವ ಯಾದಗಿರಿಯಿಂದ ಪಶ್ಚಿಮಕ್ಕೆ ೧೬ ಮೈಲು ಮತ್ತು ಸುರಪುರದಿಂದ ಈಶಾನ್ಯಕ್ಕೆ ೧೪ ಮೈಲು ದೂರದಲ್ಲಿ ಕೋಳೂರೆಂಬ ಗ್ರಾಮವಿದೆ. ಅದಕ್ಕೆ ಈಗ ಕನ್ನೆಕೋಳೂರೆಂದು ಹೆಸರಿದೆ. ಇಲ್ಲಿ ಶಿವದೇವನೆಂಬ ಶಿವಭಕ್ತನೂ ಅವನ ಹೆಂಡತಿಯೂ ವಾಸ ಮಾಡುತ್ತಿದ್ದರು. ಅವರು ಶಿವನಲ್ಲಿ ಅತ್ಯಂತ ಭಕ್ತಿಯುಳ್ಳವರಾಗಿ ತಮ್ಮ ಗ್ರಾಮದಲ್ಲಿದ್ದ ಕಲ್ಲೇಶ್ವರ ಲಿಂಗಕ್ಕೆ ದಿನಾಲು ಕಪಿಲ ವರ್ಣದ ಗೋವಿನ ಹಾಲನ್ನು ಒಂದು ಬಳ್ಳತುಂಬ ನೈವೇದ್ಯ ಕೊಡುವ ನೇಮ

ವನ್ನು ಇಟ್ಟುಕೊಂಡಿದ್ದರು. ಅವರಿಗೆ ಚನ್ನಕ್ಕನೆಂಬ ೭ ವರುಷದ ಚಿಕ್ಕ ಮಗಳೊಬ್ಬಳಿದ್ದಳು. ತಾಯಿ ತಂದೆಗಳು ಅವಳ ಮೇಲೆ ಅತ್ಯಂತ ಪ್ರೀತಿಯುಳ್ಳವರಾಗಿದ್ದರು.

ಮುಂದೆ ಕೆಲವೊಂದು ದಿವಸ ತಾಯಿ ತಂದೆಗಳು ದೇವರ ದರ್ಶನದ ಸಲುವಾಗಿ ಪರ ಊರಿಗೆ ಹೋಗುವಾಗ ಅವರು---ಮಗಳೇ ನಾವು ಊರಿಗೆ ಹೋಗುತ್ತೇವೆ. ನೀನು ಹಾಲನ್ನು ಬಟ್ಟಲಲ್ಲಿ ಒಯ್ದು ಶಿವನಿಗೆ ಅರ್ಪಿಸುತ್ತಿರು ಎಂದು ಹೇಳಿ ಹೋದರು. ಆಗ ಚನ್ನಕ್ಕನು---ಇಂದು ನಾನು ದೇವರಿಗೆ ಹಾಲನೆರೆಯುವೆನೆಂದು ಬಲು ಹಿಗ್ಗಿ ಅವಳು ತನ್ನ ತಾಯಿ ತಂದೆಗಳು ಮಾಡುತ್ತಿದ್ದಂತೆ ಸ್ನಾನವನ್ನು ಮಾಡಿ ಮಡಿಬಟ್ಟೆಯನ್ನು ಉಟ್ಟುಕೊಂಡು ಭಸಿತವನ್ನು ಧರಿಸಿ, ಕವಿಯಲ್ಲಿ ಹುವ್ವಿನೋಲೆಯನ್ನಿಟ್ಟು ಬಳ್ಳದ ತುಂಬ ಹಾಲನ್ನು ತೆಗೆದುಕೊಂಡು ಕಲ್ಲೇಶ್ವರನ ದೇವಾಲಯಕ್ಕೆ ಹೋಗಿ ಅಲ್ಲಿ ಹಾಲನ್ನು ದೇವರ ಮುಂದಿರಿಸಿ, ಮುಗ್ಧಭಕ್ತಿಯಿಂದ---ಲಿಂಗವೇ ಹಾಲನ್ನು ತಂದಿದ್ದೇನೆ. ಅದನ್ನು ಸವಿಸು, ಎಂದು ಬಿನ್ನವಿಸಿಕೊಂಡಳು. ಆದರೆ ಶಿವನು ಸುಮ್ಮನಿರಲು ಅವಳು ಅವನನ್ನು ರಮ್ಮಿಸಿ, ಬಣ್ಣಿಸಿ ಹಾಲನ್ನುಣ್ಣೆಂದು ಹೇಳಹತ್ತಿದಳು. ಆದರೆ ದೇವರು ಕುಡಿಯದಿರಲು ಅವಳು-ಗುರುಕಲ್ಲಿನಾಥಾ ಎಂದು ಬಿನ್ನೈಸುತ್ತ ನಾನು ದೂರ ಮರೆಗೆ ನಿಲ್ಲುವೆನು. ನೀನು ಉಣ್ಣು ಎಂದು ಹೇಳಿ ಹಿಂಪೆ ಸರಿದು ಅಲ್ಲಿ ಕೆಲಹೊತ್ತು ನಿಂತು, ತಿರುಗಿ ಬಂದು ನೋಡುತ್ತಾ, ಹೀಗೆ ಅವಳು ಬಹಳ ವೇಳೆ ಅನೇಕ ರೀತಿಯಿಂದ ಹಾಲು ಕುಡಿ ಎಂದು ದೇವರಿಗೆ ಹೇಳಿಕೊಳ್ಳುತ್ತಾ ಉಳಿದಳು. ಆದರೆ ಹಾಲು ಇದ್ದ ಹಾಗೆಯೇ ಇರಲು,--- ತಂದೆ, ನೀನಾರೋಗಿಸದೆ ಇರುವ ಕಾರಣವೇನು? ಈ ಹಾಲು ನಿನಗೆ ಬೇಸರವಾಯಿತೇ? ಅಥವಾ ನಾನು ಬಾಲೆ ಎಂದು ನೀನು ಉಣಲೊಲ್ಲೆಯೋ? ನೀನು---ನನಗೆ ಬೇಕು, ಬೇಡ ಎಂಬುದನ್ನು ಏಕೆ ಉಸಿರಲೊಲ್ಲೆ? ಎಂದು ದುಃಖಿಸುತ್ತ ಎಷ್ಟು ಹೇಳಿಕೊಂಡರೂ ಶಿವನು ಉಣ್ಣದಿರಲು ಆ ಬಾಲೆಯು--- ನೀನು ಈ ಹಾಲನ್ನು ಆರೋಗಿಸದ ಹೊರ್ತು ನಾನು ನಿನ್ನನ್ನು ಬಿಡೆನು. ನಾನು ಹಿಂದಕ್ಕೆ ಮನೆಗೆ ಹೋಗುವವಳಲ್ಲ. ನೀನು ಕುಡಿಯದಿದ್ದರೆ ನಾನು ಇಲ್ಲಿಯೇ ಸತ್ತು ಬೀಳುವೆನು ಎಂದು ನುಡಿದು ಅವಳು ತನ್ನ ತಲೆಯನ್ನು ಅಲ್ಲಿದ್ದ ಕಲ್ಲಿಗೆ ತಾಟಿಸಿಕೊಳ್ಳಲು ಸಿದ್ಧಳಾದಳು. ಮುಂದೆ

ಶಿವಾನುಭವ

ವರ್ಷ ೧೯	ಆಗಷ್ಟ ೧೯೪೫.	ಸಂಚಿಕೆ ೧೦

ಚನ್ನಬಸವೇಶ್ವರ ವಚನ ವಿಶೇಷಗಳು.

(ಲೇಃ— ಶ್ರೀ. ಜ. ಪ. ಚನ್ನಬಸವರಾಜದೇಶಿಕೇಂದ್ರ ಸ್ವಾಮಿಗಳವರು, ಜಗದ್ಗುರು ಶ್ರೀಮನ್ನಿಡುಮಾಮಿಡಿ ಶ್ರೀಶೈಲ ಸಂಸ್ಥಾನ.)

ಅನುಭಾವವೇ ಭಕ್ತಿಗೆ ಬೀಜ!

ವೀರಶೈವವು ಭಾಕ್ತಿಕ ಮತ. ಅದೇ ಅದರ ಜೀವಾಳ! ಆದರೆ ಆ ಭಕ್ತಿಯು ಮೂಢಸಾಂಪ್ರದಾಯದ್ದಾಗಿರಬಾರದು. ಅನುಭವದ ಸಾರದಿಂದ ಭರಿತವಾಗಿರಬೇಕು. ಅನುಭವದ ಐಶ್ವರ್ಯದಿಂದ ಪರಿಶೋಭಿತವಾಗಿರಬೇಕು. ಅನುಭಾವವಿಲ್ಲದ ಭಕ್ತಿ ಕಾಯಿಬಿಡದ ಬಳ್ಳಿಯಂತೆ ವ್ಯರ್ಥ. ಅನುಭಾವದಿಂದೊಡಗೂಡಿದ ಭಕ್ತಿಯಿಲ್ಲದ ಭಕ್ತ ಭಕ್ತನಲ್ಲ. ಅತನಿಗೆ ಮುಕ್ತಿ ದೊರಕೊಳ್ಳದು. ಈ ವಿಷಯವನ್ನು ಹೃದಯಂಗಮವಾಗಿ ಹೇಳುವ ಈ ವಚನವನ್ನು ನೋಡಿ!

"ಭಕ್ತಿಗೆ ಅನುಭಾವವೇ ಬೀಜ ಕಾಣಿರೋ. ಭಕ್ತಿಗೆ ಅನುಭಾವವೇ ಆಚರಣೆ ಕಾಣಿರೋ. ಭಕ್ತಿಗೆ ಅನುಭಾವವೇ ಸಕಲೈಶ್ವರ್ಯವ ಶೃಂಗಾರ ಕಾಣಿರೋ. ವೀರಶೈವಾಚಾರ ಸಂಪನ್ನರೆನಿಸುವ ಪರಮ ಸದ್ಭಕ್ತರಿಗೆ ಅನುಭಾವವೇ ಅರುವಿನ ಗೊತ್ತು ಕಾಣಿರೋ. ಅದು ಕಾರಣವಾಗಿ ಅನುಭಾವವಿಲ್ಲದವನ ಭಕ್ತಿ ಎಳತಟಗೊಳಿಸಿತ್ತು. ಅನುಭಾವವನರಿಯದವ ಕಾಮುಕ ಕಾಣಿರೋ. ಆ ಮಹಾನುಭಾವವ ಮಾಡುವಲ್ಲಿ ಸಕಲ ಸಂಚವನಳದು ವಿನಯದಿಂದಿ ಕೇಳವಿರ್ದಡೆ, ನಮ್ಮ ಕೂ. ಚ. ಸಂ. ದೇವರು ಅಘೋರ ನರಕದಲ್ಲಿಕ್ಕದೆ ಮಾಣ್ಬನೇ?"

ಕುಲಜನಾರು?

ಕುಲಮದ ಕೆಲವರನ್ನು ಬಾಧಿಸುತ್ತಿದೆ. ನಾ ಕುಲಜ, ನೀ ಅಕುಲಜ ಎಂದು ಅಹಮಿಕೆಯಿಂದ ಕೆಲವರು ಬಿರ್ರನೆ ಬೀಗಿರುವರು. ನಿಜವಾದ ಕುಲಜರಾರೆಂಬ ವಿಮರ್ಶೆ ಅವರಿಗಿಲ್ಲ. ಕುಲದ ಕತ್ತಲೆಯಲ್ಲಿ ವ್ಯಾಕುಲರಾಗಿ-ವ್ಯಗ್ರರಾಗಿ ಕಂಗಾಣದವರಾಗಿರುತ್ತಾರೆ. ಕುಲಜರೆಂಬುವರೆ ಅಕುಲಜರಾಗಿ-ಅನಾಚಾರಿಗಳಾಗಿ ಬಾಳುತ್ತಿದ್ದಾರೆ. ನಿರಾಕುಲರಾಗುವುದೆ ನಿಜವಾದ ಕುಲಜತ್ವವೆಂಬುದನ್ನು ಮರೆತಿದ್ದಾರೆ.

"ಶಿವಭಕ್ತನೆ ಕುಲಜನೆಂಬರು ನೋಡಯ್ಯ. ಯುಕ್ತಿವಿಡಿದು ವಿಚಾರಿಸರು ನೋಡಾ. ವ್ಯಾಕುಳ, ನಿರಾಕುಳ ಎಂಬುವೆರಡು ಕುಳ(ಲ) ನೋಡಯ್ಯ! ವ್ಯಾಕುಳವೆ ಭವಿ, ನಿರಾಕುಳವೆ ನಿರ್ಭವಿ. ವ್ಯಾಕುಳವೇ ಭವಿ, ನಿರಾಕುಳವೆ ಭಕ್ತ.....ಜ್ಞಾನಿಗೆ ಕತ್ತಲೆ ಇಲ್ಲ. ಅಜಾತಂಗೆ ಹೊಲೆಯಿಲ್ಲ. ಅತನೆ ಕುಲಜ ನೋಡಯ್ಯ. ಕುಲದೀಪಕನಾರೆಂದೊಡೆ ನಮ್ಮ ಕೂ. ಚ. ಸಂ. ನಲ್ಲಿ ಅರಿವು ಆಚಾರ ಸತ್ಕ್ರಿಯೆ ಸಂಪತ್ಸನ್ಮಾದ್ಧಿಯನುಳ್ಳ ಶಿವಸಂಧಾನಿಗಳೆ ಕಾಣಿರೋ."

ಈ ವಚನವನ್ನು ಓದಿದಲ್ಲಿ ಕುಲದ ಕಚ್ಚಾಟ ಕುಸಿದುಹೋಗುತ್ತದೆ. ವ್ಯಾಕುಲವ ಕಳೆದು ನಿರಾಕುಳಕ್ಕೆ ನಿಲಯವಾದಾಗ ನಿಜವಾದ ಕುಲವಂತಿಕೆ ಬರುವುದೆಂಬುದು ಮನವರಿಕೆಯಾಗುತ್ತದೆ. ಅರಿವು, ಆಚಾರ, ಸತ್ಕ್ರಿಯೆ, ಸಂಪತ್ಸವೃದ್ಧಿಗಳನ್ನು ಸಂಪಾದಿಸಿದವನೆ ಕುಲದೀಪಕನೆಂಬುದು ಕಣ್ಣಿಗೆ ಕಟ್ಟಿದಂತಾಗುತ್ತದೆ. ಬರೀ ವ್ಯಾಕುಳವನ್ನು ಕಳೆದು ಕುಲಜರಾದರೆ ಪ್ರಯೋಜನವಿಲ್ಲ. ಜೊತೆಗೆ ಅರಿವು. ಆಚಾರಾದಿಗಳನ್ನು ಅಳವಡಿಸಿಕೊಂಡು ಕುಲದೀಪಕರೂ ಆಗಬೇಕು. ಆಗ ಅತ ಭಕ್ತ; ಮುಕ್ತ.

ಲಿಂಗಪೂಜೆಗೆನಿಸು ಕಾಲ?

ಗುರುಕಾರುಣ್ಯವ ಪಡೆದ ಸಾಧಕನು ತಪ್ಪದೆ ಮೂರು ವೇಳೆ ಲಿಂಗಾರ್ಚನೆಯ ಮಾಡುವುದು ಉಚಿತ. ಅದು ಸಾಧಿಸದಿದ್ದಲ್ಲಿ ಎರಡು ಕಾಲ. ಅದೂ ಸಾಧಿಸದಿದ್ದಲ್ಲಿ ಒಂದು ಕಾಲವಾದರೂ ಮಾಡಿಯೇ ತೀರಬೇಕು. ಇಲ್ಲವಾದರೆ "...ಹೊಂದಿತಲ್ಲ ಗುರುವಚನಕ್ಕೆ ಭಂಗ. ಒಂದುಕಾಲದಲ್ಲಿ ಲಿಂಗಾರ್ಚನೆಯ ತಡೆದೊಡೆ ರೌರವ ನರಕವೆಂದುದು

ಗುರು ವಚನ. ನಮ್ಮ ಕೂ. ಚ. ಸಂ. ನಲ್ಲಿ ಇದೇ ಪ್ರತಿಜ್ಞೆಯಯ್ಯ!" ಇದು ಸಾಧಕನಿಗೆ ಹೇಳುವ ಮಾತು. ಐಕ್ಯನಿಗೆ ಇದರ ತಿಕ್ಕಾಟವಿಲ್ಲ. ಹೊತ್ತಿನ ಗೊತ್ತಿಲ್ಲ, ನಿರಾಳಲಿಂಗದಲ್ಲಿ ನಿರವಯವನಾದಗ ಹೊತ್ತಿನ ಗೊತ್ತೆಲ್ಲಿ?

ಗುರುವಾರು?

ಸಮಾಜದಲ್ಲಿ ಗುರು ಸಂಖ್ಯೆ ಹೆಚ್ಚುತ್ತಿದೆ. ನಾ ಗುರು, ನೀ ಗುರು ಎಂದು ಮುಂದುವರಿಯುತ್ತಾರೆ. ಆದರೆ ಗುರುಶಕ್ತಿ ಎಂತಹದು? ಗುರುಗುಣ ಯಾವು? ಎಂಬ ವಿಚಾರವೆ ಇಲ್ಲದಾಗಿದೆ. ಗುರುಶಕ್ತಿಯಿಲ್ಲದೆ ಗುರುವಾಗುವುದು ಪರಿಹಾಸ್ಯಕ್ಕೆ ಪರಿಕರಣ. ಶಕ್ತಿಪಾತವಿಲ್ಲದ ಗುರುವಿನ (?) ಉಪದೇಶ ಶಿಷ್ಯರ ಯಾವ ಪಾತಕವನ್ನೂ ಪರಿಹರಿಸದು. ಯಾರಾದರಾಗಲಿ ಗುರುವಾಗಲು ಒಂದು ಸಮರ್ಥತೆಯ ಸಂಪತ್ತು ಆವಶ್ಯಕ; ಅನುಗ್ರಹಶಕ್ತಿ ಅಗತ್ಯ; ಸ್ವಯಂಜ್ಯೋತಿಸ್ವರೂಪು ಅನಿವಾರ್ಯ ಎಂಬುದನ್ನು ಎಂದಿಗೂ ಮರೆಯಲಾಗದು. "..... ಗುರುಸ್ಥಲವೆಂಬುದು ತಾನು ಸ್ವಯಂಜ್ಯೋತಿ ಪ್ರಕಾಶವು. ಅಂತಪ್ಪ ಸ್ವಯಂಜ್ಯೋತಿ ಪ್ರಕಾಶವಂ ತಂದು ಉರಜ್ಯೋತಿಯ ಹತ್ತಿಸಿದೊಡೆ, ಆ ಜ್ಯೋತಿ ತನ್ನಂತೆ ಮಾಡಿತ್ತು..." ಈ ಗುಣವುಳ್ಳವನೇ ಗುರು. ಈ ಗುರುವೇ ಶಿಷ್ಯನ ಅಂತರಂಗದಲ್ಲಿ ಲಿಂಗರೂಪನಾಗಿ ವಾಸಿಸುತ್ತಾನೆ. ಮಂತ್ರಮಯನಾಗಿ ರೂಪುಗೊಳ್ಳುತ್ತಾನೆ. ಇದಾಗಬೇಕಾದರೆ ಸಾಮಾನ್ಯ ಗುರುವಿಗೆ ಸಾಧ್ಯವಿಲ್ಲ. ಅತ ಗುರುವೂ ಅಲ್ಲ.

ಜಂಗಮನು ದೀಕ್ಷಾಧಿಕಾರಿಯೆ?

"ಗುರುವಿನ ಗುರು ಪರಮಗುರು ಪರಬ್ರಹ್ಮ ಜಂಗಮವೆನಿಸಿಕೊಂಡ ಬಳಿಕ ತಾನೆ ಗುರುವಾಗಿ ಉಪದೇಶವ ಮಾಡಲಾಗದು. ಮುಂದೆ ಶಿಷ್ಟೆ ದೀಕ್ಷೆಗಳಿಂದ ಗುರುಕರುಣವ ಪಡೆದವರಿಂದೆ ದಾಸೋಹವ ಮಾಡಿಸಿಕೊಳ್ಳಲ್ಕರ್ತನಲ್ಲದೆ, ತನ್ನ ಪ್ರಾಣಲಿಂಗವ ಕೊಡ ಕರ್ತನಲ್ಲ. ತನ್ನ ಪ್ರಾಣಲಿಂಗವ ಕೊಟ್ಟು ಗುರುವಾದ ಬಳಿಕ, ಜಂಗಮ ಸ್ಥಲಕ್ಕೆ ಭಂಗಹೊಂದಿತ್ತು....."

ಗುರು ಸಾಭಾರಿ, ನಿರಾಭಾರಿ ಎಂದು ಎರಡು ವಿಧ. ಜಂಗಮನು ನಿರಾಭಾರಿ ಗುರು, ಅಥವಾ ಈ ವಚನಾಭಿಪ್ರಾಯದಂತೆ ಪರಮಗುರು.

ಈತನಿಗೆ ಸಮಾಜದ ಭಾರ ಇರದು. ಆದ್ದರಿಂದ ಈತನು ದೀಕ್ಷಾದಿ ಕಾರ್ಯಗಳನ್ನು ಮಾಡಕೂಡದು. ಮಾಡಿದಲ್ಲಿ ಜಂಗಮಸ್ಥಲಕ್ಕೆ ಭಂಗ ಎಂಬ ವಚನದ ಕಟ್ಟಪ್ಪಣೆ! ಇದನರಿಯದೆ ಕೆಲ ಜಂಗಮರು ನಾವೇಕೆ ದೀಕ್ಷೆಯ ಮಾಡಬಾರದೆಂದು ವಾದಿಸುತ್ತ, ಒಳೊಳಗೆ ದೀಕ್ಷೆಯ ಮಾಡುತ ಪ್ರತಿಫಲಾಕಾಂಕ್ಷೆಯಿಂದ ಆಪ್ತಶಿಷ್ಯವೃಂದವನ್ನು ಹೆಚ್ಚಿಸಿಕೊಳ್ಳುವ ಅಕ್ರಮವೃತ್ತಿಗೆ ಒಳಪಟ್ಟಿದ್ದಾರೆ. ಇದು ತತ್ವಕ್ಕೂ ಶಿವಶರಣರ ದೃಷ್ಟಿಗೂ ಎಂತಹ ವಿರೋಧವೆಂಬುದನ್ನು ಈ ವಚನದಿಂದಾದರೂ ಅರಿತರೆ ಲೇಸು! ಅಂಗೀಕರಿಸಿದರೆ ಒಳಿತು!

ಜಂಗಮವಾರು?

ಈ ವಿಷಯದಲ್ಲಿ ಸ್ವಂತದ ವಿವರಣೆ ಅನಾವಶ್ಯಕ. ಈ ಕೆಳಗಿನ ವಚನಗಳಲ್ಲಿಯೆ ವಿವರವಾಗಿದೆ, ಸ್ಪಷ್ಟವಾಗಿದೆ.

"ಜಂಗಮ ಜಂಗಮವೆಂದೊಡೇನು? ಬಾಯಲಿಕ್ಕಕ್ಕೆ ಜಂಗಮವೆ? ಜಂಗಮ ಜಂಗಮವೆಂದೊಡೆ ಉಪಾಧಿಕನೆ? ಜಂಗಮ ಜಂಗಮವೆಂದೊಡೆ ಬೋಧಕನೆ? ಜಂಗಮ ಜಂಗಮವೆಂದೊಡೆ ಅಶಕನೆ? ಜಂಗಮ ಜಂಗಮವೆಂದೊಡೆ ಕಾರ್ಯಕಾರಣನೆ? ಜಂಗಮ ಜಂಗಮವೆಂದೊಡೆ ಸ್ತ್ರೀಲಂಪಟನೆ? ಈ ಷಡ್ಗುಣದಿಚ್ಛಿಕರ ಜಂಗಮವೆನ್ನೆನಯ್ಯ!..."

"ಬರೆ ಜಾಳು ಬೋಳರೆಲ್ಲ ಜಂಗಮವೆ? ವೇಷಧಾರಿಗಳೆಲ್ಲ ಜಂಗಮವೆ? ಆಚಾರಭ್ರಷ್ಟರಾದ, ಅನಾಚಾರ ವಿಶ್ರವಾದ ಅಪಸ್ಮಾರಿಗಳೆಲ್ಲ ಜಂಗಮವೆ? ತಾನು ವಿಷಯದೊಳಗೆ ಸಿಲ್ಕಿ ಅಹಂ ನಾನು ನನ್ನದೆಂದು ಮುಂದುವರಿವವರೆಲ್ಲ ಜಂಗಮವೆ? ಲಿಂಗಾಂಗ ಸಂಗ ಸಮರಸವರಿದಾನಂದಿಸುವ ಶಿವಯೋಗೀಶ್ವರರ ನಿಲವನರಿಯದೆ ವಿಶ್ವವನುಡಿದು, ಸ್ತುತಿನಿಂದೆಯ ಮಾಡುವವರು ಜಂಗಮವೆ? ನೀತಿಯ ನಿಜವ ಬಿಟ್ಟು, ಸತ್ಯಸದಾಚಾರವನೊತ್ತಿ ನ್ಯಾಯವ ಮಾಡುವವರು ಜಂಗಮವೆ? ಜಂಗಮ ಜಂಗಮವೆಂದೊಡೆ ನಾಮರೂಪಿಗಳೆಲ್ಲ ಜಂಗಮವೆ? ನಾಮು ಕಲ್ಲು ಮರ ಮೊದಲಾದ 'ಜಿಂ' ಎಂಬ ಹುಳುವಿಗುಂಟು..."

"ಕೇಶ ಕಾಷಾಯಾಂಬರವನಿಕ್ಕಿದೊಡೇನೊ? ವಿಭೂತಿ ರುದ್ರಾಕ್ಷಿ ಧರಿಸಿದೊಡೇನೊ? ಸಾಕಾರದಲ್ಲಿ ಸನ್ಮತನಲ್ಲ. ನಿರಾಕಾರದಲ್ಲಿ ನಿರುತನಲ್ಲ. ಪಾರಮಾರ್ಥದಲ್ಲಿ ಪರಿಣಾಮಿಯಲ್ಲ. ಇನು ಕಾರಣವಾಗಿ ಕೂ. ಚ. ಸಂ. ದೇವಾ ತುರುಬಾಗಲಿ, ಜಡೆಯಾಗಲಿ, ಬೋಳಾಗಲಿ ಅರಿವು ಆಚಾರವುಳ್ಳೊಡೆ ಜಂಗಮು."

"...ಗಮನ ಜಂಗಮವಲ್ಲೆಡೆಯಲುಂಟು. ನಿರ್ಗಮನ ಜಂಗಮವ ಪೂರ್ವವಯ್ಯ!..."

"...ಬೇಡದೆ ಮಾಡುವ ಭಕ್ತನುಂಟಾದಡೆಯೂ ಬೇಡದೆ ಮಾಡಿಸಿಕೊಂಬ ಜಂಗಮವಪೂರ್ವವಯ್ಯ!"

"ಮಾತುಕಲಿತು ಮುಂಡೆಯುಬೋಳಿಸಿಕೊಂಡಡೇನು? ವೇಷಲಾಂಛನ ಉದರ ಪೋಷಕನಲ್ಲದೆ ಶಿವಾನುಭಾವದ ಸುವಿಚಾರದ ಸುಯಿಧಾನದ ಹೊಲಬನರಿಯರು..."

"ಲಕ್ಷಕ್ಕಾದಡೂ ಒಬ್ಬ ಭಕ್ತನುಂಟು. ಕೋಟಿಗಾದಡೆಯೂ ಒಬ್ಬ ಜಂಗಮವಿಲ್ಲ."

"...ನಿಜ ಜಂಗಮವೆಂತೆಂದೊಡೆ, ನಿರ್ದೋಷಕ, ನಿರುಪಾಧಿಕ, ನಿರ್ಭೇದ್ಯ, ನಿರಾಶ್ರಿತ ಜಂಗಮು. ನಿರ್ಲಂಪಟ ಜಂಗಮು. ಈ ಷಡ್ಗುಣ ಭರಿತನಾದಾತನೇ ನಿರವಯ ಜಂಗಮು...."

"ನಿಷ್ಪೈಕ್ಯನಾದ ನಿಶ್ಚೀಮನೆ ಜಂಗಮು. ಅರಿವು ಆಚಾರ ಸಚ್ಚಿಯೆಯುಳ್ಳೊಡೆ ಜಂಗಮು. ಅಂತಪ್ಪ ಸಚ್ಚಿದಾನಂದ ನಿತ್ಯ ನಿರಂಜನ ಜಂಗಮುದ ಸುಳುಹು ಪಾವನ...."

ಆರೋಗಣೆಗೆ ನಿಷೇಧವೆಲ್ಲಿ?

"ಕರಸ್ಥಲದಲ್ಲಿ ಲಿಂಗವ ಧರಿಸಿಕೊಂಡು ಆರೋಗಣೆಯ ಮಾಡಲಾಗದು. ಭಾಜನದಲ್ಲಿ ಸಹ ಭೋಜನವ ಮಾಡಲಾಗದು. ಅದೇನು ಕಾರಣವೆಂದೊಡೆ, ಸಾಕ್ಷೇ--ಸರ್ವಾಂಗಸ್ತು ಗತಂ ಪ್ರಾಣಂ ಭಾಜನಂ ಭೋಜನಂ ತಥಾ। ಹಸ್ತಲಿಂಗಂಪ್ರತಿಗ್ರಾಹ್ಯಂ ನರಕೇ ಕಾಲಮಕ್ಷಯಂ॥ ಎಂದುದಾಗಿ ಕೂ. ಚ. ಸಂ. ದೇವ ಕರಸ್ಥಲದಲ್ಲಿ ಲಿಂಗವ ಧರಿಸಿ ಸಹ ಭೋಜನವ ಮಾಡಿದೊಡೆ ನಾಯಕನರಕವಯ್ಯ."

ಈ ವಚನದಲ್ಲಿ ಆರೋಗಣೆಗೆ ನಿಷೇಧ ಕಾಲವನ್ನು ನಿರೀಕ್ಷಿಸ ಬಹುದಾಗಿದೆ. ಆದರೆ ಕರಸ್ಥಲದಲ್ಲಿ ಲಿಂಗಧರಿಸಿದಾಗ ಪ್ರಸಾದ ಸ್ವೀಕರಿಸಬಾರದೆಂಬುದಕ್ಕೆ ಅನುಭವದ ಪ್ರಮಾಣವನ್ನೇನೂ ಹೇಳಲಿಲ್ಲ. ಆಗಮ ವಚನವೆ ಪ್ರಮಾಣವಾಗಿ ಬಂದುದು ವಿಚಾರಾರ್ಹವು. ಈ ಸೂಕ್ಷ್ಮವಿಧಿಯು ಮುನ್ನವೆ ಹುಟ್ಟಿರಬೇಕಾದರೆ ಸಮಾಜವು ಶರಣರ ಹಿಂದೆ ಯಾವ ರೂಪಕ್ಕೆ ಬಂದಿರಬೇಕೆಂಬುದನ್ನು ಓದುಗರೇ ಊಹಿಸ ಬಹುದಾಗಿದೆ.

ದ್ವೈತಾದ್ವೈತಾಚರಣೆಗಳು.

ವೀರಶೈವರಿಗೆ ಇವೆರಡೂ ಹೂವು-ಕಾಯಿಗಳಂತೆ ಹೊಂದಿಕೊಂಡಿವೆ. ಒಂದನ್ನು ಬಿಟ್ಟು ಇನ್ನೊಂದು ಫಲಿಸುವಂತಿಲ್ಲ. ಹೂವರಳವಾಗಿದಲ್ಲದೆ ಕಾಯಿಯೆಲ್ಲಿ? ದ್ವೈತಾಚರಣೆಯೊಡನೆ ಅದ್ವೈತಾಚರಣೆಯ ಪರಿಯನ್ನೂ ಇರುವನ್ನೂ ಈ ವಚನವು ವಿವರಿಸುತ್ತದೆ.

"..... ನಾ ನೀನೆಂಬ ಭ್ರಮೆಯುಳ್ಳನ್ನಕ್ಕರ ಅಷ್ಟವಿಧಾರ್ಚನೆ ಷೋಡಶೋಪಚಾರವ ಮಾಡಲೇಬೇಕು. ದ್ವೈತಾದ್ವೈತದಿಂದೆ ಇವ ಮಾಡದಿರ್ದೊಡೆ ನಾಯಕ ನರಕ ತಪ್ಪದಯ್ಯ ಕೂ. ಚ. ಸ. ದೇವ."

ಶರಣನಾಗುವುದು ಸಹಜವಲ್ಲ.

ಶರಣನಾಗಬೇಕಾದರೆ ವ್ರತಸ್ಥನಾಗಬೇಕು, ನೇಮಸ್ಥನಾಗಬೇಕು, ಭಾಷೆವಂತನಾಗಬೇಕು, ಶೀಲವಂತನಾಗಬೇಕು, ಭಕ್ತ ಜಂಗಮರಿವು ಮೈಗೂಡಬೇಕು, ಪ್ರಸಾದದೊಡಲು ಕೈವಶವಾಗಬೇಕು, ಪ್ರಪಂಚದೊಡಲೊಳಗಾದರೆ ವ್ರತಸ್ಥನಾಗಲಾರ. ಸಂದೇಹಿಯಾದರೆ ನೇಮಸ್ಥನಾಗಲಾರ. ಸಂಚಲತ್ವವು ಭಾಷೆವಂತತನಕ್ಕೆ ದೂರ. ಕೃತಕವುಳ್ಳೊಡೆ ಶೀಲವಂತಿಕೆಗೆ ಸಲ್ಲದು. ಬೇಡುವಿಕೆ— ಮಾಡಿದೆನೆಂಬುವಿಕೆ ಮೈಗೊಂಡೆ ಜಂಗಮ-ಭಕ್ತತನದ ಅರಿವು ನಿಲ್ಲದು. ಬಯಕೆಯುಂಟಾದಲ್ಲಿ ಪ್ರಸಾದಿತ್ವವು ಸಿದ್ಧಿಸದು. ಇವೆಲ್ಲ ಇಲ್ಲದ ಮೇಲೆ ಶರಣತನವು ಸಮನಿಸದು. ಶರಣತನವು ಸಮನಿಸದೆ ಶರಣನೆಂದು ಹೇಳಿಕೊಂಡರೆ, 'ಕಂಡವರ ಕಂಡು ಕಂಡೆವೆಂಬಂತೆ, ಉಂಡವರ ಕಂಡು ಉಂಡೆವೆಂಬಂತೆ' ವ್ಯರ್ಥ, ನಿರರ್ಥ. ಆದಕಾರಣ ಶರಣನಾಗಬೇಕಾದಲ್ಲಿ ಪ್ರಪಂಚದ ಹಂಗು ಹರಿಯಬೇಕು. ಮನದ ಸಂಕಲ್ಪ ವಿಕಲ್ಪಗಳ ಅಂಕಿತವ ವೀರಬೇಕು. ಹರಿದಾಟವ

ಹಂದೊಗೆಯಬೇಕು. ಸೂತಕತನವ ಘಾತಿಸಬೇಕು. ಮಾಡಿದೆನೆಂಬುದ ಮನದಲ್ಲಿ ಮೂಡಕೂಡದು. ಬಯಕೆ ಬೇಡಿಕೆಗಳ ಬೇರನ್ನು ಬಗೆದೊಗೆಯಬೇಕು. ಅನನ್ಯಗತಿಕನಾಗಿ ತನ್ನಂತರಾತ್ಮನಿಗೆ (ಲಿಂಗಕ್ಕೆ) ಶರಣುಹೋಗಬೇಕು. ತನ್ನ ಸರ್ವಸ್ವವೂ ಆತನದಾಗಬೇಕು. ಆಗ ಶರಣನಾಗುವುದು ಸಹಜ. ಆತ ಶರಣ.

ನಿದ್ರಾಮಾಯೆ ಅಜೇಯವು!

ಇದರ ವಿವರಣೆ ಈ ವಚನ ರಚನೆಯಲ್ಲಿಯೆ ರುಚಿಕರವಾಗಿದೆ.

" ದೇವ ದಾನವ ಮಾನವರು ಮೊದಲಾದ ಎಲ್ಲ ಜೀವದಲ್ಲಿಯು ಹಿರಿದು ಕಿರಿದೆನ್ನದೆ ನಿದ್ರೆ ಎಂಬಾಹುತಿಯ ಬೀಸಿ ಸರಿದುಗಿಯಲೊಡನೆ ಅರಿವು ಮರಹಾಯಿತ್ತು. ನೋಟ ಜಾರಿತ್ತು, ಬುದ್ಧಿ ತೊಡೆಯಿತ್ತು, ಜೀವ ಹಾರಿತ್ತು, ದೇಹ ಒರಗಿತ್ತು, ಹೀಗೆ ನಿಚ್ಚ ನಿಚ್ಚ ಬಾಹುದು, ಹೋಹುದು ಅರು ಅರಿಯರಯ್ಯ! ಕೂ. ಚ. ಸ. ದೇವ ನಿಮ್ಮ ಮಾಯಾಸೂತ್ರದ ಹೊಲಬರಿತವರಪೂರ್ವ "

ಈ ವಚನದಲ್ಲಿ ಉಕ್ತವಾದಂತೆ ಅರಿವು ಮರವೆಯ ಸಂಗದಲ್ಲಿ ಸಮರಸವಾಗಲು ಮಯೆಯೇ ಕಾರಣ! ಆ ಮಾಯೆ ನಿದ್ರೆಯೆಂಬ ಜಾಲವನ್ನು ಜಗದ ಜೀವರ ಮೇಲೆ ಎಂದಿನಿಂದಲೂ ಬೀಸುತ್ತ ಇದೆ. ಆ ಬಲೆಯಲ್ಲಿ ಬಿದ್ದು ಪ್ರತಿ ಜೀವನು ದೇವನು ಸಹ ಮುಂಗಾಣದೆ ಮುಂಕುವರಿಸಿ, ದೇಹ ಒರಗಿ, ಜೀವ ಹಾರಿ ಹೋಗುತ್ತದೆ;—ಈ ನಿದ್ರೆ ಬರುತ್ತದೆ. ಇದು ದಿನದಿನವೂ ನಡೆಯುತ್ತಿದ್ದರೂ ಯಾರೂ ಅರಿಯದೆ ಅಂಧರಂತೆ ಇದೇ ಶಾಶ್ವತವೆಂದು ಭ್ರಮಿಸಿ ಮೇಜಾಡುತ್ತಿರುವುದು ಪರಮಾಶ್ಚರ್ಯ. ಇದನರಿತವರು ತೀರ ಅಪೂರ್ವ.

ಶೀಲವಾವುದು?—ಶೀಲವಂತನಾರು?

'ಶೀಲಶೀಲವೆಂದೊಡೇನು? ಭಕ್ತರ ಮಠಕ್ಕೆ ಹೋಗಿ ಒಳಹೊರಗೆಂಬುದು ಶೀಲವೆ? ನಮ್ಮ ಲಿಂಗಕ್ಕೆ ಒಳ್ಳೆ ಅಗ್ಗವಣಿ ತನ್ನಿ, ಒಳ್ಳೆ ಪುಷ್ಪವ ತನ್ನಿ, ಒಳ್ಳೆ ಓಗರವ ಮಾಡಿ ಎಂಬುದು ಶೀಲವೇ? ಭವಿ ನೋಡಿದ ಮಡಕೆಯನು ಕಳಿವುದು ಶೀಲವೇ? ಕೆರೆಭಾವಿಯ ಕಳಿವುದು ಶೀಲವೆ? ಒಸರುವ ಉದಕವ ತಾಹದು ಶೀಲವೆ? ಅಲ್ಲಲ್ಲ.

ಅಂಗನೆಯರ ಅಧರ ಪಾನ ಉದರಕ್ಕೆ ಹೋಗುವನ್ನಕ್ಕರ ಶೀಲವಲ್ಲಿಯದೊ? ಈಷಣತ್ರಯವೆಂಬ ಸೊಣಗಂಗಳು ಬೆಂಬತ್ತಿ ಬರುತ್ತಿರಲು ಶೀಲವೆಲ್ಲಿಯದೊ? ಇಂತಹರು ಶೀಲವಂತರಾಗರು, ನದಿಯ ತಟಾಕದಲ್ಲಿ ಕನ್ನವನಿಕ್ಕಿ ಉದಕವ ತಂದು ಮಜ್ಜನಕ್ಕೆರೆವ ಶೀಲವಂತರು ಸುಯ್ಯಾನಿಗಳಪ್ಪರಿ? ಭವಿಪಾಕ ಪರಪಾಕವನೆ ಭುಂಜಿಸುವ ಉದರ ಪೋಷಕರೆಲ್ಲರು ಶೀಲವಂತರಪ್ಪರೆ? ಆಗರು.

ಚಿತ್ತಸಂಚಲವಳಿದು ಮನವು ಮಹದಲ್ಲಿ ನೆಲೆಗೊಂಬುದೇ ಶೀಲ. ಗುರುಲಿಂಗ ಜಂಗಮವೇ ಪ್ರಾಣವೆಂಬ ಪರಮ ಪರಿಣಾಮ ನೆಲೆಗೊಂಬುವೇ ಶೀಲ. ಬೀಭತ್ಸ ಶಬ್ದ. ದ್ವಿಗುಣ, ತ್ರಿಗುಣ, ಪಂಚಭೂತ, ಅರಿಷಡ್ವರ್ಗ, ಸಪ್ತವ್ಯಸನ, ಅಷ್ಟಮದ, ನವಗ್ರಹ, ದಶವಾಯು, ದಶೇಂದ್ರಿಯ ಇಂತಿವೆಲ್ಲವ ಕೊಲ್ಲುವುದೇ ಶೀಲ. ಕೊಂದು ತಿಂದಾತನೇ ಶೀಲವಂತ. ಅಶನವರತು, ವ್ಯಸನಬೆಂದು, ಹುಸಿಮುಸಣಿಸಿ, ಮಹಾಲಿಂಗದ ವಿಷಯದೊಳಗೆ ತಲ್ಲೀಯವಾಗಿ ಸರ್ವಾಂಗವು ಸಮತೆಯಾಗಿರಬಲ್ಲೊಡೆ ಅವರಚ್ಚ ಶೀಲವಂತರು.

ತಾಳು—ಬೋಳು ಕಪ್ಪರ!

ಇವುಗಳ ನಿಜ ಹೃದಯವೇನು? ಇವನ್ನು ಹೇಗೆ ಉಪಯೋಗಿಸಬೇಕು? ಹೇಗೆ ಆಚರಿಸಬೇಕು? ಹೇಗೆ ಪರಿಣಾಮಿಸಬೇಕು. ಇಲ್ಲದಿದ್ದರೆ ಯಾವ ಗತಿ? ಎಂಬುದನ್ನು ಈ ವಚನದಲ್ಲಿ ಕಾಣಬಹುದು.

''ತಾಳು ಬೋಳು ಕಪ್ಪುರವೆಂತೆಂಬರು ತಾಳಾವುದು, ಬೋಳಾವುದು ಕಪ್ಪುರವಾವುದೆಂದರಿಯರು. ಕಾಯದ ಕಳವಳದ ಗುಣವ ತಾಳಬಲ್ಲಡೆ ತಾಳು. ಸಂಸಾರ ವಿಷಯವ ಬೋಳಿಸಬಲ್ಲಡೆ ಬೋಳು. ಪರದಲ್ಲಿ ಪರಿಣಾಮಿಸಬಲ್ಲಡೆ ಕಪ್ಪರ. ಇಂತಿಲ್ಲದಿದ್ದೊಡೆ ನಮ್ಮ ಕೂ. ಚ. ಸ. ನಲ್ಲಿ ಡೊಂಬರ ಬೋಳು.

ಐಕ್ಯ.

ಐಕ್ಯವೆಂದರೆ ಸುಖದುಃಖಗಳ ಸಮರಸ, ಸತಿಪತಿಭೇದದ ಸಮನ್ವಯ. ಬೇಕು ಬೇಡೆಂಬ ಬಯಕೆಗಳ ಉಪರತಿ; ಹಸಿವು ತೃಪೆಗಳ ಉಪಶಾಂತಿ. ಮಾನಾಪಮಾನಗಳ ವಿಲಯ; ಲಾಭಾಲಾಭಗಳಲಿ ನಿರ್ಭಯ. ಜಯಾಪಜಯಗಳ ಸಮತ್ವ; ಗುರುಶಿಷ್ಯಭಾವದ ಏಕತ್ವ. ಆಶೆ

ನಿರಾಶೆಗಳ ನಿವೃತ್ತಿ; ಇನ್ನೂ ತಿಳಿಯಾಗಿ ಹೇಳಬೇಕೆಂದರೆ ಸಂತೃಪ್ತಿ. ಈ ಸ್ಥಿತಿಯಲ್ಲಿ ಯಾವ ಹೊಯ್ದಾಟವೂ ಇರುವದಿಲ್ಲ. ತಾನೆತಾನಾಗಿರುತ್ತಾನೆ. ಇದೇ ಐಕ್ಯ. ಕಳಗೆ ಸಂಗ್ರಹಿಸಿದ ಖಂಡಾಖಂಡ ವಚನಗಳು ನಮ್ಮ ಈ ಮಾತುಗಳನ್ನು ಸಮರ್ಥಿಸುತ್ತವೆ.

'' ಹೊನ್ನುಳ್ಳಾತ ಭಕ್ತನಲ್ಲ. ಹೆಣ್ಣುಳ್ಳಾತ ಶರಣನಲ್ಲ. ಮಣ್ಣುಳ್ಳಾತ ಲಿಂಗೈಕ್ಯನಲ್ಲ. ''

''ಸತಿಯುಳ್ಳನ್ನಕ್ಕರ ಶರಣನಲ್ಲ. ಪತಿಯುಳ್ಳನ್ನಕ್ಕರ ಐಕ್ಯನಲ್ಲ.''

''ಗುರುಸ್ಥಲ ನಾಸ್ತಿಯಾದಲ್ಲದೆ ಐಕ್ಯನಲ್ಲ. ಭಕ್ತಕೆಟ್ಟ ಭವಿಯಾದಲ್ಲದೆ ಲಿಂಗೈಕ್ಯನಲ್ಲ. ''

'' ಗುರುಶಿಷ್ಯ ಸಂಬಂಧವೆಂಬ ಪ್ರತಿಬಿಂಬದ ಭಾವವುಳ್ಳನ್ನಕ್ಕರ ಮಹಾಲಿಂಗೈಕ್ಯವೆಲ್ಲಿಯದೋ''

"ಅಂಜಿಕೆಯುಳ್ಳನ್ನಕ್ಕರ ಪ್ರಾಣಲಿಂಗಿಯಲ್ಲ ಎಂಜಲುಳ್ಳನ್ನಕ್ಕರ ಪ್ರಸಾದಿಯಲ್ಲ. ಸೂತಕವುಳ್ಳನ್ನಕ್ಕರ ಶರಣನಲ್ಲ, ಈ ತ್ರಿವಿಧವುಳ್ಳನ್ನಕ್ಕರ ಲಿಂಗೈಕ್ಯನಲ್ಲ ನಮ್ಮ ಕೂ. ಚ. ಸ ನಲ್ಲಿ. "

'' ಐಕ್ಯನಾದೊಡೆ ಬಯಲು ಬಯಲಾಗಿರಬೇಕು. "

'' ಐಕ್ಯನಾದೊಡೆ ತಾನು ತಾನಾಗಿ ಹೆರೆಹಿಂಗದಂತಿರಬೇಕು. "

''ಭವಿ ಸಾಹಿತ್ಯವಿದ್ದಾತನ ಭಕ್ತರೆಂಬೆ ಪರನು ಲಿಂಗೈಕ್ಯರೆಂಬೆನು."

''ಸಹಜವೆನ್ನದೆ ಅಸಹಜವೆನ್ನದೆ ಅಚಲವೆನ್ನದೆ ಅವ್ಯಯವೆನ್ನದೆ, ನಿರಾಳವೆನ್ನದೆ ನಿರಂಜನವೆನ್ನದೆ, ಶೂನ್ಯವೆನ್ನದೆ ನಿಃಶೂನ್ಯವೆನ್ನದೆ, ಭೇದ್ಯವೆನ್ನದೆ ಅಭೇದ್ಯವೆನ್ನದೆ, ವಾಚ್ಯವೆನ್ನದೆ ಅವಾಚ್ಯವೆನ್ನದೆ, ತೀತವೆನ್ನದೆ ಅತೀತವೆನ್ನದೆ. ಗೋಚರವೆನ್ನದೆ ಅಗೋಚರವೆನ್ನದೆ, ಏನು ಏನು ಎನ್ನದೆ ನಿಂದುದೆ ನಮ್ಮ ಕೂ. ಚ. ಸಂ. ನಲ್ಲಿ ರಹಸ್ಯಪಾದ ಲಿಂಗೈಕ್ಯವು."

ಇದು ಐಕ್ಯದ ಪರಿ. ಇದು ಪರಮ ಲಿಂಗೈಕ್ಯದ ರಹಸ್ಯ. ವೀರಶೈವನಿಗೆ ಇದೇ ಕೊನೆ, ಇದೇ ಮೊದಲು. ಇಲ್ಲಿಗೆ ಮತಾಂಶಗಳು ಮುಗಿದವು. ಮುಂದಿನ ಲೇಖಾಂಕದಲ್ಲಿ 'ವಿವರಣೆ'ಗಳನ್ನು ಕುರಿತು ವಿಚಾರಿಸೋಣವಾಗುತ್ತದೆ.

ಮಗ್ಗೆಯ ಮಾಯಿದೇವ.

ಲೇಃ—ಕಾವ್ಯತೀರ್ಥ, ವಿದ್ವಾನ್, ಶಾಂತವೀರದೇವ ಐಹೊಳಿ.

ವಿಜಾಪುರ ಜಿಲ್ಲೆಗೆ ಒಳಪಟ್ಟ ಐಹೊಳಿ ಎಂಬ ಗ್ರಾಮವೊಂದಿದೆ. ಇದು ಐತಿಹಾಸಿಕ ದೃಷ್ಟಿಯಿಂದ ಬಹು ಮುಖ್ಯವೂ ಮಹತ್ವವುಳ್ಳದೂ ಆದ ಸ್ಥಾನವಾಗಿದೆ.

ನಾಲಂದ, ತಕ್ಷಶಿಲೆ, ಮುಂತಾದ ಸ್ಥಳಗಳಲ್ಲಿ ಹಿಂದಿನ ಕಾಲಕ್ಕೆ ದೊಡ್ಡ ದೊಡ್ಡ ವಿಶ್ವವಿದ್ಯಾಲಯಗಳಿದ್ದಂತೆ. ಈ ಐಹೊಳಿ ಗ್ರಾಮದಲ್ಲಿಯೂ ವಿಶ್ವವಿದ್ಯಾನಿಲಯವಿದ್ದುದು ಅಲ್ಲಿಯ ಶಿಲಾಲಿಪಿಗಳಿಂದ ತಿಳಿದು ಬರುತ್ತದೆ. –ಈ ಸಂಗತಿಯು ಆರನೇಯ ಶತಮಾನದ ಆಜೆಯ ಮಾತಾಗಿದೆ. ಈ ಗ್ರಾಮದ ವಿಶ್ವವಿದ್ಯಾನಿಲಯದಲ್ಲಿ ಐದುನೂರು ಜನ ವಿದ್ವಾಂಸರು ವಿದ್ಯಾರ್ಥಿಗಳಿಗ ಶಿಕ್ಷಣ ಕೊಡುತ್ತಿದ್ದರು.

ಇಲ್ಲಿ ಎಷ್ಟೋ ಜನ ವಿದ್ವಾಂಸರಿದ್ದರೂ ಅವರಲ್ಲಿ ಯಾವ ಗ್ರಂಥಗಳನ್ನು ಬರೆದಿರುವರೆಂಬುದು ತಿಳಿಯುವದಿಲ್ಲ. ಆದರೆ ರವಿಕೀರ್ತಿ ಮತ್ತು ಮಗ್ಗೆಯ ಮಾಯಿದೇವರು ಸಾಹಿತ್ಯಸೇವೆ ಮಾಡಿದಂತೆ ತಿಳಿಯುತ್ತದೆ.

ರವಿಕೀರ್ತಿ ಕವಿಯು ಐಹೊಳಿಯವನು ಈತನು ಚಲುಕ್ಯರಲ್ಲಿ ಆಸ್ಥಾನ ವಿದ್ವಾಂಸನಾಗಿದ್ದನು. ತಾನು ಕಾವ್ಯರಚನೆಯಲ್ಲಿ ಕಾಲಿದಾಸನನ್ನು ಸರಿಗಟ್ಟಬೇಕೆಂದು ಹವಣಿಸುತ್ತಿದ್ದನಂತೆ; ಈ ಸಂಗತಿಯಿಂದ ಈ ಕವಿಯು ಸಾಹಿತ್ಯಸೇವೆ ಮಾಡಿರಲಿಕ್ಕೆಬೇಕೆಂದು ಎನಿಸುತ್ತದೆ. ಆದರೆ ಇಲ್ಲಿಯವರೆಗೆ ಈ ಕವಿಯ ಯಾವ ಕೃತಿಗಳೂ ದೊರೆತಿಲ್ಲ.

ಮಗ್ಗೆಯ ಮಾಯಿದೇವನು ಮಾತ್ರ ಕನ್ನಡ ಮತ್ತು ಸಂಸ್ಕೃತ ಭಾಷೆಗಳಿರಡರಲ್ಲಿಯೂ ಉದ್ದಾಮ ಪಂಡಿತನಿದ್ದನೆಂದು ಆತನ ಗ್ರಂಥಗಳಿಂದ ತಿಳಿದು ಬರುತ್ತದೆ.

ಈತನು ಅನುಭವಸೂತ್ರ, ವಿಶೇಷಾರ್ಥಪ್ರಕಾಶಿಕೆ, ಪ್ರಭುಗೀತೆ, ಏಕೋತ್ತರ ಶತಸ್ಥಲ, ಷಟಸ್ಥಲಗದ್ಯ, ಶತಕತ್ರಯ, ಮಗ್ಗೆಯ ಮಾಯಿದೇವ ವಚನ, ಎಂಬ ಏಳು ಗ್ರಂಥಗಳನ್ನು ರಚಿಸಿದ್ದಾನೆ. ಇವುಗಳಲ್ಲಿ ಅನುಭವಸೂತ್ರ, ವಿಶೇಷಾರ್ಥಪ್ರಕಾಶಿಕೆ, ಶತಕತ್ರಯ, ಎಂಬ ಮೂರು

ಗ್ರಂಥಗಳು ಮಾತ್ರ ಅಚ್ಚಿನ ಮನೆಯನ್ನು ಕಂಡಿವೆ. ಇನ್ನುಳಿದ ಗ್ರಂಥಗಳು ಇಲ್ಲಿಯ ವರೆಗೆ ಎಲ್ಲಿಯೂ ದೊರೆತಂತೆ ಕಾಣುವುದಿಲ್ಲ ಅಚ್ಚಾದ ಈ ಮೂರು ಗ್ರಂಥಗಳಲ್ಲಿ ಅನುಭವಸೂತ್ರ, ವಿಶೇಷಾರ್ಥ ಪ್ರಕಾಶಿಕೆ ಎಂಬೆರಡು ಗ್ರಂಥಗಳು ಸಂಸ್ಕೃತ ಭಾಷೆಯಲ್ಲಿವೆ. ಶತಕತ್ರಯ, ಎಂಬುದು ಕನ್ನಡ ಗ್ರಂಥವಾಗಿದೆ. ಇವುಗಳನ್ನು ಓದಿದರೆ ಮಗ್ಗೆಯ ಮಾಯಿದೇವನು ಮಹಾ ಪಂಡಿತನಾಗಿದ್ದನೆಂದು ತಿಳಿಯುತ್ತದೆ.

ಈತನಿಗೆ ಮಾಯಿದೇವ, ಮಗ್ಗೆಯ ಮಾಯಿದೇವ, ಮಾಯಿದೇವಾರ್ಯ, ಮಾಯಿದೇವ ಪ್ರಭುವರ ಎಂಬ ಹೆಸರುಗಳಿವೆ. ವೀರಶೈವ ಕವಿಗಳನೇಕರು ಇವನ ಹಿರಿಮೆಯನ್ನು ಸೂಚಿಸುವದಕ್ಕಾಗಿ ಪ್ರಭು, ವಿಭು, ಎಂದು ವಿಶೇಷಣಗಳಿಂದ ಅವನನ್ನು ಸ್ತುತಿಸಿದುದು ಕಂಡುಬರುತ್ತದೆ.

ಇವನು ಪ್ರೌಢದೇವರಾಯನ (೧೪೧೯—೧೪೪೬) ಕಾಲದಲಿ ಪ್ರಖ್ಯಾತ ಪಂಡಿತನಾಗಿದ್ದನೆಂಬ ಸಂಗತಿಯು ವಿರೂಪಾಕ್ಷ ಪಂಡಿತನ (೧೫೮೪) ಚನ್ನಬಸವ ಪುರಾಣದಲ್ಲಿ,

"ಎಲೆರಾಮ ಕೇಳಿನ್ನು ಸಕಲಾಗಮಂಗಳಿಗೆ।
ನಿಲೆಯೆನಿಸಿ ಪ್ರೌಢನಿಂ ಪೂಜೆಯಂಕೊಂಡು ಷ॥
ಸ್ಥಲ ಮಾರ್ಗಮಂ ಸಕಲ ಶಿವಭಕ್ತ ಸಂತತಿಗೆ ಕರತಳಾಮಳಕವಾಗಿ॥
ತಿಳಿವೊಲನುಭವ ಸೂತ್ರವಾದಿ ಶಾಸ್ತ್ರಂಗಳಂ।
ಗೆಲವಿನಿಂ ಪೇಳ್ದು ನಿಜ ಶಿವ ಸಮಾಧಿಯಲಿಮಿಗೆ।
ನಲನಿನಿಂದಲ್ಲಿ ಮಗ್ಗೆಯಮಾಯಿದೇವ ಪ್ರಭುವರನಿರದೆ ಮುಕ್ತನಹನ॥೧॥

ಎಂಬ ಪದ್ಯದಿಂದ ತಿಳಿಯುವದು. ಶಾಂತಲಿಂಗದೇಶಿಕನ (೧೬೭) ಭೈರವೇಶ್ವರ ಕಾವ್ಯದ ಕಥಾಸೂತ್ರರತ್ನಾಕರದಿಂದಲೂ, ಶಿವ್ಥನಂಜೇಶನ (೧೬೫೦) ಗುರುರಾಜಚಾರಿತ್ರದಿಂದಲೂ, ತೋಂಟದಾರ್ಯನ (೧೫೬೦) ಪಾಲ್ಕುರಿಕೆ ಸೋಮೇಶ್ವರ ಪುರಾಣದಿಂದಲೂ ಮಗ್ಗೆಯ ಮಾಯಿದೇವನು ವೀರಶೈವರಿಗೆ ನರಕವಿಲ್ಲೆಂದು ವಿಜಯನಗರದ ಪ್ರೌಢದೇವರಾಯನ ಆಸ್ಥಾನದಲ್ಲಿ ಪರವಾದಿಗಳೊಡನೆ ವಾದ ಮಾಡಿ ಆದರಲ್ಲಿ ಜಯ ಹೊಂದಿದನೆಂತಲೂ ಈ ಜಯಸೂಚನೆಗಾಗಿ ಅಲ್ಲಿ ಭೂವಿಯ ಮೇಲೆ ನೆರಳು ಬೀಳದಂತಹ ವಿಜಯಸ್ತಂಭವೊಂದನ್ನು ನೆಟ್ಟಂತೆಯೂ ತಿಳಿದುಬರುತ್ತದೆ.

"ನಾಋಷಿಃಕುರುತೇಕಾವ್ಯಂ" ಎಂಬಂತೆ ಈ ಮಾಯಿದೇವರು ನರಕವಿಗಳಾಗಿರಲಿಲ್ಲ. "ಮಾಯಿದೇವೋಮಹಾತ್ಮಾ" ಎಂದು ಇವನ ಸಂಸ್ಕೃತ ಗ್ರಂಥದಲ್ಲಿ ಕಂಡುಬರುವದರಿಂದ ಇವನು ವರಕವಿಯಾಗಿದ್ದನು. ಮಹಾತ್ಮನಾಗಿ ಮಹಿಮೆಗಳನ್ನು ತೋರ್ಪಡಿಸಿರಲೂಬೇಕು. ಇವನ ಅದ್ವಿತೀಯ ಪಾಂಡಿತ್ಯವೂ ಅಗಾಧವ ಹಿಮೆಯೂ ಆಳವಾದ ಶಿವಾನುಭವ ವಿದ್ಯೆಯೂ ಇವನನ್ನು ಜನರೆಲ್ಲರೂ ಕೊಗಳುವಂತೆ ಮಾಡಿರಬೇಕು.

ಪ್ರೌಢದೇವ ರಾಜನಲ್ಲಿ ಇವನು ಪೂಜೆಗೊಂಡಿದ್ದು ಮೊದಲಾದ ಅಂಶಗಳನ್ನು ಹಿಂದಿನ ಪಂಡಿತರನೇಕರು ಒಮ್ಮತದಿಂದ ಒಪ್ಪಿಕೊಂಡಿದ್ದಾರೆ. ಕವಿಚರಿತೆಕಾರರೂ ಈ ಐತಿಹಾಸಿಕಾಂಶವನ್ನೂ ತಮ್ಮ ಕರ್ನಾಟಕ ಕವಿಚರಿತೆ (ಭಾ ೨)ಯಲ್ಲಿ ವಿವರಿಸಿದ್ದಾರೆ.

ಮಾಯಿದೇವನು ಹುಟ್ಟಿ ಬಳೆದು ಅಗಾಧ ಪಾಂಡಿತ್ಯವನ್ನು ಗಳಿಸಿದ ಗ್ರಾಮವಾವುದೆಂಬದರ ಬಗ್ಗೆ ಅನೇಕರು ಅನೇಕ ಬಗೆಯಾಗಿ ತರ್ಕವಿತರ್ಕಗಳನ್ನು ಮಾಡಿದ್ದಾರೆ. ಆದರೆ ಈ ವಿಷಯದ ಸತ್ಯಾಂಶವು ಇಲ್ಲಿಯ ವರೆಗೆ ಹೊರಬಂದಿಲ್ಲ.

ಬಾಗೇವಾಡಿಯ ಬಸವಣ್ಣನವರು ಮಂತ್ರಿಯಾಗಿದ್ದ ಕಲ್ಯಾಣ ನಗರವೇ ಮಾಯಿದೇವರ ಜನ್ಮಭೂಮಿ ಎಂದು ಹಲವರು ಅಭಿಪ್ರಾಯ ಪಟ್ಟರೆ ಇನ್ನು ಕೆಲವರು ಐಹೊಳೆ ಗ್ರಾಮದ ಉತ್ತರಕ್ಕೆ ಆರು ಮೈಲು ಅಂತರದಲ್ಲಿ ಮಾಗಿ ಎಂಬ ಗ್ರಾಮವೊಂದಿದೆ, ಈ ಗ್ರಾಮವೇ ಮುಗ್ಗೆಯ ಮಾಯಿದೇವರ ಜನ್ಮ ಭೂಮಿಯೆಂದೂ ಹೇಳಿ ಪತ್ರಿಕೆಯಲ್ಲಿ ಪ್ರಸಿದ್ಧ ಪಡಿಸಿದ್ದನ್ನು ತಿಳಿದಿದ್ದೇವೆ.

"ಸಾವಿರ ಮಡಕೆಗೆ ಸಾಲದೆ ಒಂದು ಡೊಣ್ಣೆ?" ಎಂಬಂತೆ ಕವಿಯೇ ತನ್ನ ಜನ್ಮಭೂಮಿಯ ವಿಚಾರವಾಗಿ ತನ್ನ ಗ್ರಂಥದಲ್ಲಿ ಹೇಳಿದ್ದಾನೆ. ಅದು ಹೇಗೆಂದರೆ— ಐಪುರದಲ್ಲಿ (ಐಹೊಳೆ) ಸೋಮೇಶನ ಪಾದಕಮಲಾಸಕ್ತನಾದ ಉಪಮನ್ಯು ಶಿವಾಚಾರ್ಯನಿದ್ದನು. ಈತನ ಮಗ ಭೀಮನಾಥ, ಮಗ ಕಳೇಶ್ವರ, ಮಗ ಜೊಪ್ಪನಾಥ, ಮಗ ನಾಕರಾಜ, ಶಿಷ್ಯ ಸಂಗಮೇಶ್ವರ, ಮಗ ಕವಿ ಮಾಯಿದೇವ, ಎಂದು ತನ್ನ ವಂಶಾವಳಿಯನ್ನು ಹೇಳಿದ್ದಾನೆ. ಈ ಎಲ್ಲ ವಂಶಿಜರಿಗೆ ಐಹೊಳೆಯೇ ಜನ್ಮಭೂಮಿಯಾಗಿತ್ತು. ಹೀಗೆ ಮಾಯಿದೇವನ ವಂಶದವರಿಗೆಲ್ಲ ಒಂದೇ

ಊರು ಜನ್ಮಸ್ಥಳವಾಗಿರುವಾಗ ಈತನ ಜನ್ಮಭೂಮಿಯೂ ಐಹೊಳೆಯೇ ಆಗಿರಲಿಕ್ಕೆಬೇಕಾಗುತ್ತದೆ. ತನ್ನ ಅನುಭವಸೂತ್ರದಲ್ಲಿ

"ಏತಸ್ಯ ಸಂಗಮೇಶಾರ್ಯವರ್ಯಸ್ಯಾಯಂತನೂಭವಃ ॥ ನಾಮ್ನಾ ಕಲ್ಯಾಣದಃ ಶ್ರೀಮಾನ್ ಮಾಯಿದೇವ ಇತಿಸ್ಥಿತಃ ॥೧॥ ಎಂಬ ಪದ್ಯವನ್ನು ಹೇಳಿದ್ದಾನೆ. ಸಂಗಮೇಶನು ಐಹೊಳಿ ಗ್ರಾಮದಲ್ಲಿ ನೆಲಸಿದ್ದನು. "ಜನನೀ ಜನ್ಮಭೂಮಿಶ್ಚ ಸ್ವರ್ಗಾದಪಿಗರೀಯಸಿ" ಎಂಬಂತೆ ಪ್ರತಿಯೊಬ್ಬ ಮಾನವನಿಗೆ ತನ್ನ ಜನ್ಮಭೂಮಿಯ ವಿಶ್ವಾಸವೂ ಆದರ ಗೌರವಗಳೂ ಇದ್ದೇ ಇರುತ್ತವೆ. ಜನ್ಮಭೂಮಿಯಲ್ಲಿರುವ ಆದರ ಗೌರವಗಳನ್ನು ಮಾಯಿದೇವನು ತನ್ನ ಅನುಭವಸೂತ್ರದಲ್ಲಿ ವಿವರಿಸದೆ ಬಿಟ್ಟಿಲ್ಲ. ತನ್ನ ಜನ್ಮಭೂಮಿಯ ವಿಚಾರವಾಗಿ ಕವಿ ಏನು ಹೇಳುತ್ತಾನೆ ಎಂಬುದನ್ನು ಕವಿವಾಣಿಯಿಂದಲೇ ಕೇಳೋಣ.

ಮಲಪ್ರಹಾರಿಣೀ ನಾಮ ಗಂಗಾ ತ್ರಿಮಲನಾಶಿನೀ ॥ ತ್ರಿದೀಕ್ಷಾ ಪಥಗಾ ತೀರ್ಥಂ ತತ್ತೀರಂ ಕ್ಷೇತ್ರ ಮೈಪುರೀ ॥೧॥ ತಾ ಮೈಪುರೀ ಮಹಂ ವಂದೇ ಭವಪಾಶ ನಿಕೃಂತನೀಂ ॥ ಯಸ್ಯಾಂ ಸನ್ನಿಹಿತಃ ಸೋಮಃ ಸೋಮಾರ್ಧ ಶೇಖರಃ ॥೨॥

ಎಂದು ಐಹೊಳೀ ಕ್ಷೇತ್ರದ ಮಹಿಮೆಯನ್ನು ಬಹು ಆದರಪೂರ್ವಕವಾಗಿ ಹೇಳಿಕೊಂಡಿದ್ದಾನೆ. ಅದೂ ಅಲ್ಲದೆ ಶತಕತ್ರಯವೆಂಬ ತನ್ನ ಧಾರ್ಮಿಕ ಗ್ರಂಥದಲ್ಲಿ 'ಶಿವಾಧವಾ', 'ಶಿವಾವಲ್ಲಭಾ', 'ಮಹದೈಪುರೀಶ್ವರಾ' ಎಂದು ಪದ್ಯಗಳ ಕೊನೆಯಲ್ಲಿ ಮುದ್ರಿಕೆಯುಳ್ಳ ಮೂರು ಶತಕಗಳಿರುತ್ತವೆ. ಮೂರನೇಯ ಶತಕವಾದ 'ಮಹದ್ಧೈಪುರೀಶ್ವರ' ಎಂಬ ಮುದ್ರಿಕೆಯುಳ್ಳ ಶತಕವನ್ನು ಕವಿ ರಚಿಸಬೇಕಾದರೆ ತನ್ನ ಗ್ರಾಮದ ಮೇಲ್ಮೆಯ ಸೂಚನೆಗಾಗಿಯೂ ತನ್ನ ಇಷ್ಟದೈವವಾದ ಸೋಮೇಶ್ವರನ ಸ್ತುತಿರೂಪವಾಗಿಯೂ ಇದೆಯಲ್ಲದೆ ಬೇರೆ ಯಾವ ಉದ್ದೇಶವೂ ಆಗ ಕವಿಯ ಹೃದಯದಲ್ಲಿರಲಿಲ್ಲವೆಂದು ವಿಮರ್ಶಕರಿಗೆ ತೋರದೇ ಇರದು.

ಆದುದರಿಂದ ಕವಿಯ ಗ್ರಾಮವನ್ನು ಐಹೊಳೆಯೆಂದೇ ಒಪ್ಪಿಕೊಳ್ಳಬೇಕು "ಕಲ್ಯಾಣದಃ ಶ್ರೀಮಾನ್ ಮಾಯಿದೇವಃ" ಎಂದು ಕವಿ ಹೇಳಿಕೊಂಡಲ್ಲಿ ಕೆಲವು ವಿಮರ್ಶಕರು ಕವಿಗೆ "ಕಲ್ಯಾಣದಃ" ಹೆಸರಿತ್ತಿದೆಂದು ಹೇಳುತ್ತಾರೆ. ಇನ್ನು ಹಲವರು 'ಕಲ್ಯಾಣದಃ' ಎಂಬ ಶಬ್ದಕ್ಕೆ ಕಲ್ಯಾ

ಣದವನೆಂದೂ ಭ್ರಮೆಯಿಂದ ಅರ್ಥಮಾಡಿ ಬಿಟ್ಟಿದುದುಂಟು. ಆದರೆ ಈ ಶಬ್ದವು ಕವಿಯ ಮೂಲ ಹೆಸರಾಗದೆ ವಿಶೇಷಣ ಪದವಾಗಿದೆ ಹಾಗು ಗ್ರಾಮ ಸೂಚನೆಯ ಶಬ್ದವೂ ಆಗಿಲ್ಲ. "ಮಾಯಿದೇವಃ" ಎಂಬ ಶಬ್ದಕ್ಕೆ ಕಲ್ಯಾಣದಃ ಎಂಬ ಶಬ್ದವು ವಿಶೇಷಣ ಪದವಾಗಿದೆಯೇ ಹೊರತು ಬೇರೆ ಏನೂ ಅಲ್ಲ. ''ಕಲ್ಯಾಣಂ ಮಂಗಲಂ ಪರೋಪಕಾರ ರೂಪಂ ಮಂಗಲಂ ವಾ ದದಾತೀತಿ ಕಲ್ಯಾಣದಃ" ಎಂದು ವ್ಯುತ್ಪತ್ತಿಯನ್ನು ಮಾಡಿಕೊಳ್ಳಬೇಕು. ಯಾವಾಗಲೂ ಕಲ್ಯಾಣ ಅಥವಾ ಹಿತವಾಡುವ ಕಾರಣದಿಂದ ''ಕಲ್ಯಾಣದಃ" ಎಂಬ ಬಿರುದು ವಿಶೇಷಣ ರೂಪವಾಗಿ ಮಾಯಿದೇವರಿಗೆ ಬಂದುದನ್ನು ಹೇಳಿದೆ.

ಇನ್ನು ಮಗ್ಗೆಯ ಮಾಯಿದೇವನೆಂಬಲ್ಲಿ ''ಮಾಗಿ" ಎಂಬ ಗ್ರಾಮದವನಾದಕಾರಣ ಮಾಗಿಯ ಮಾಯಿದೇವ ಅಥವಾ ಮಗ್ಗೆಯ ಮಾಯಿದೇವ ಎಂದು ಕರೆದಿರಬಹುದೆಂದು ಸಮಾಧಾನಪಡಬಹುದು. ಈ ಸಂಗತಿಯು ಹಲಕೆಲವರಿಗೆ ಆಹುದೆನಿಸಬಹುದು. ಆದರೆ ಇದಂತೂ ಶುದ್ಧ ತಪ್ಪಿನ ವಿಚಾರವೆಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. ಯಾಕೆಂದರೆ ಮಾಗಿ ಎಂಬುವದು ಈತನ ಊರೇ ಎಂದು ಊಹಿಸಲಿಕ್ಕಾಗುವದಿಲ್ಲ. ಒಂದೇ ಒಂದಾದ ಈ ಕಾರಣದಿಂದ ವಿಷಯವು ಸಿದ್ಧಾಂತಕ್ಕೆ ಬರಲು ಯೋಗ್ಯವಾಗದು.

ಐಹೊಳಿ ಗ್ರಾಮಕ್ಕೆ ಹೊಂದಿರುವ ರಾಜಮಾರ್ಗದ ಮುಂದೆ ಪಶ್ಚಿಮ ಭಾಗಕ್ಕೆ ಗುಡಿಗಳ ಗುಂಪೊಂದು ಕಾಣುತ್ತದೆ. ಅದರ ಸಮೀಪದಲ್ಲಿ ''ಮಾಗಿಯಮಠ'' ಎಂಬುದೊಂದು ಪುತ್ರವರ್ಗದ ಪಟ್ಟಾಧಿಕಾರಿಗಳ ಸ್ಥಾನವಿತ್ತು. ಅಲ್ಲಿದ್ದ ಪುರಾತನ ಕಾಲದ ಕಟ್ಟಡವು ನೆಲಸಮವಾಗಿದೆ. ಅದೇ ಭಾಗದಲ್ಲಿ ಲೈನ ಮಾರ್ಗವಿದೆ. ಹೀಗಾಗಿ ಹಿಂದಿನ ಪ್ರಸಿದ್ಧ ಜನಗಳ ಸ್ಥಾನವು ನಾಶವಾಗಿ ಹೋಗಿದೆ. ಈಗಲೂ ಈ ಸ್ಥಾನಕ್ಕೆ ಹಿರಿಯರು ಮಾಗಿಯ ಮಠದ ಸ್ಥಾನವೆಂದು ಕರೆಯುವ ರೂಢಿಯುಂಟು. ಮಾಯಿದೇವನು ಇದರ ಮಠಾಧಿಕಾರಿಯೇ ಆಗಿರುವದರಲ್ಲಿ ಸಂಶಯವಿಲ್ಲ. ''ಮಾಗಿಯ ಮಠದ ಮಾಯಿದೇವ"ರೆಂದು ಇವರ ಪೂರ್ಣ ಹೆಸರು. ಆದರೆ ಆಲಸ್ಯದಿಂದಲೋ ಅಥವಾ ವ್ಯವಹಾರಲಾಘವಕ್ಕಾಗಿಯೋ ಈತನನ್ನು ಮಾಗಿಮಠದ ಮಾಯಿದೇವನೆಂದು ವ್ಯವಹಾರಿಕರು ಕರೆದಿರಬಹುದು. ಅನಂತರ ಕವಿಯು ವಿಜ್ಞಾನಿಯಾದ ನಂತರ ಎಲ್ಲ ಸಾಹಿತಿಗಳ ದೃಷ್ಟಿಯು ಮಾಯಿದೇವನ ಮೇಲೆ ಬಿದ್ದಿರ

ಲಿಕ್ಕೆ ಸಾಕು. ಆಗ ಸಾಹಿತಿಗಳು ತಮ್ಮ ಸಾಹಿತ್ಯದಲ್ಲಿ ಮಿರುಗುವ ರತ್ನದಂತೆ ಇವರ ಹೆಸರನ್ನಿರಿಸಿದರು. ಆಗ ''ಮಾಗಿಮಠ" ಎಂಬ ಶಬ್ದವನ್ನು ಸಾಹಿತ್ಯಾಂಶಕ್ಕೆ ಸರಿಹೋಗುವ ರೀತಿಯಲ್ಲಿ ''ಮಗ್ಗಿ" ಅಥವಾ ''ಮಗ್ಗೆ'' ಎಂದು ಕರೆದಿರುವದರಲ್ಲಿ ಅಭ್ಯಂತರವೇನೂ ಇಲ್ಲ.

ಕವಿಯು ತಾನು ಪಟ್ಟಾಧಿಕಾರಿ ಎಂಬ ಅಂಶವನ್ನು ಸೂಕ್ಷ್ಮವಾಗಿ ಸೂಚಿಸುವದಕ್ಕಾಗಿ ಶತಕತ್ರಯದ ಮಂಗಲಶ್ಲೋಕವಾದ

ಶ್ರೀಗುರುವೆ ಮಹಾಗುರುವೆ ಶಾಂತಿಕಳಾ ಗುರುವೆ ಶಿವಾತ್ಮವಿ ।
ದ್ಯಾ ಗುರುವೆ ಪುರಾಗುರುವೆ ವಿಶ್ವ ಜಗದ್ಗುರುವೆ ವಿಶುದ್ಧ ಚೇ ॥
ಷ್ಟಾ ಗುರುವೆ ಸುಧೀಗುರುವೆ ಭಕ್ತಿಯಶೋ ಗುರುವೆ ಪ್ರಸಾದ ತೇ ।
ಜೋ ಗುರುವೇ ಕೃಪಾಗುರುವೆ ಮದ್ಗುರುವೆ ಗುರುವೆ ಶಿವಾಭವ ॥೧॥

ಎಂಬ ಅಂಶದಿಂದ ಗುರುಸ್ತೋತ್ರ ಮಾಡಿದ್ದಾನೆ. ಈ ಗುರು ರೂಪ ಮಂಗಲದಿಂದ ಕವಿಯು ಗುರುವರ್ಗಕ್ಕೆ ಸೇರಿದವನಾಗುವನೆಂದು ಅನುಮಾನ ಮಾಡಬಹುದು.

ವೀರಮಾಹೇಶ್ವರರು ಪಟ್ಟಾಧಿಕಾರವನ್ನಾಗಲಿ ಅಥವಾ ನಿರಂಜನ ಪಟ್ಟವನ್ನಾಗಲಿ ಸ್ವೀಕರಿಸುವಾಗ ತಮ್ಮ ಹಿಂದಿನ ವಂಶದ ಹೆಸರುಗಳನ್ನು ಬಿಟ್ಟು ಮುಂದಿನ ಆಶ್ರಮದ ಗುರುಪರಂಪರೆಯ ಹೆಸರುಗಳನ್ನು ಇಟ್ಟುಕೊಳ್ಳುತ್ತಾರೆ. ನುತ್ತು ಪ್ರಸಿದ್ಧಿಪಡೆದ ಕವಿಗಳೇನಕರು ತಮ್ಮ ವಂಶಕ್ಕನುಗುಣವಾಗಿ ಬಂದ ಹೆಸರನ್ನು ಬಿಟ್ಟು ಪಾಂಡಿತ್ಯಗೌರವ ಸೂಚಿಸುವ ಬಿರುದುಗಳನ್ನೇ ತಮ್ಮ ನಾಮವನ್ನಾಗಿ ಸ್ವೀಕರಿಸುತ್ತಾರೆ. ಇಂಥ ಸಂಪ್ರದಾಯವು ಸಾವಿರ ವರ್ಷಗಳಿಂದ ಇಲ್ಲಿಯವರೆಗೆ ಪರಂಪರೆಯಾಗಿ ನಡೆಯುತ್ತಬಂದಿದೆ.

ಮಾಯಿದೇವರು ಪಟ್ಟಾಧಿಕಾರಿಗಳಾದ ಕಾರಣ ತಮ್ಮ ಹಿಂದಿನ ವಂಶಪರಂಪರೆಯಾಗಿ ಬಂದ ಹೆಸರನ್ನೂ ಬಿಟ್ಟಿರಬೇಕು. ಯಾಕೆಂದರೆ ಲಿಂಗಾಯತರಲ್ಲಿ ಮಾಯಿದೇವನೆಂದು ಹೆಸರಿಡುವ ರೂಢಿಯು ಕಂಡು ಬರುವದಿಲ್ಲ. ಶಿವೋಪಾಸಕರಾದ ಲಿಂಗಾಯತರು ನಾಲಿಗೆಯಲ್ಲಿ ಸರಳವಾಗಿ ಅನ್ನಲಿಕ್ಕೆ ಬರುವ ಶಿವನ ಸಹಸ್ರನಾಮಗಳಲ್ಲೊಂದನ್ನು ತಮ್ಮ ಮಕ್ಕಳಿಗೆ ನಾಮಕರಣ ಮಾಡುತ್ತಾರೆ. ಅಥವಾ ಶರಣ ಶರಣೆಯರ

ಮತ್ತು ಮಹಾತ್ಮರ ನಾಮಗಳಲ್ಲೊಂದು ನಾಮವನ್ನು ಪುತ್ರಪುತ್ರಿಯರಿಗಿಡುವದುಂಟು. ಈ ರೀತಿ ಹೆಸರಿಡುವ ನಾಗರಿಕ ಪದ್ಧತಿಯನ್ನು ಶಿವಾಗಮಗಳಿಂದ ತಿಳಿದುಕೊಂಡಂತೆ ಕಾಣುವದು. ಸಂಸಾರಿಗಳು ತಮ್ಮ ಸಂಸಾರದಲ್ಲಿ ಶಿವನನ್ನು ಮರೆಯುವ ಪ್ರಸಂಗಗಳನೇಕ ಬಂದೊದಗುತ್ತವೆ. ಆಗ ಇಂಥ ಶಿವಾಂಶಗಳಾದ ಹೆಸರನ್ನಿಟ್ಟು ತಮ್ಮ ಮಕ್ಕಳ ಕರೆವಾಗಲಾದರೂ ದೇವರ ನಾಮಸ್ಮರಣೆಯುಂಟಾಗಲೆಂಬ ಮುಖ್ಯ ಉದ್ದೇಶವಿದೆ.

ಮಾಯಿದೇವರ ಹಿಂದಿನ ವಂಶದ ಹೆಸರು ಇಂಥದೇ ಎಂದು ತಿಳಿಯಲಿಕ್ಕಾಗದಿದ್ದರೂ ಶಿವಾಂಶ ಸೂಚಕವಾದ ರೂಢಿಯ ಯಾವದಾದರೊಂದು ಹೆಸರಿರಲಿಕ್ಕೆಬೇಕು. ಆಗಿನ ಕಾಲದಲ್ಲಿ ಧರ್ಮದ ಸಂಸ್ಕೃತಿಯು ಪ್ರತಿವ್ಯಕ್ತಿಯ ರಕ್ತನಾಳದಲ್ಲಿ ಸಂಚರಿಸುತ್ತಿತ್ತೆಂದು ಅವಶ್ಯವಾಗಿ ನಂಬಬೇಕಾಗಿರುತ್ತದೆ.

ಮಾಯಿದೇವನು ತನ್ನ ಮಠದ ಪರಂಪರೆಯವರ ನಾಮವನ್ನಾವರೂ ತನಗೆ ಇಟ್ಟುಕೊಂಡಂತೆ ಕಾಣುವದಿಲ್ಲ ಎಂದು ಹೇಳಿದರೆ ಆಶ್ಚರ್ಯವೆನಿಸದಿರದು. ಹೀಗೆ ಈ ಪಟ್ಟಾಧಿಕಾರಾಶ್ರಮದ ಪರಂಪರೆಯ ಹೆಸರನ್ನು ಬಿಟ್ಟು ಮಾಯಿದೇವ ಎಂದು ಹೆಸರಿಟ್ಟುಕೊಂಡಲ್ಲಿ ಬಲವಾದ ಕಾರಣಗಳಿರಬೇಕಾಗಿದೆ.

ಶಕ್ತಿ ವಿಶಿಷ್ಟಾದ್ವೈತ ಮತದಲ್ಲಿ ಮಾಯಿದೇವರು ಹುಟ್ಟಿ ಬಳೆದುದರಿಂದ ಈ ಮತದಲ್ಲಿ ಅವರಿಗೆ ಬಹು ಆದರ ವಿಶ್ವಾಸಗಳಿದ್ದವು. ಈ ವಿಶ್ವಾಸವು ಮನದಲ್ಲಿ ಮಾತ್ರ ತುಂಬಿಕೊಂಡಿರದೆ ಕಾರ್ಯರೂಪದಲ್ಲಿ ಬಂದಿತು. ತನ್ನ ಮತಕ್ಕೆ ಸರಿ ಮತ ಧರ್ಮಗಳಾವವೂ ಇಲ್ಲ ಎಂಬ ಸಿದ್ಧಾಂತವನ್ನು ಜನಗಳಿಗೆ ಮನವರಿಕೆ ಮಾಡಿಕೊಡುತ್ತಿದ್ದರು. ಈ ವ್ಯವಸಾಯಕ್ಕೆ ಆಗ ಬಹು ಆದರವಿತ್ತು. ಜೈನ ವೈಷ್ಣವ ಮತಗಳ ಖಂಡನೆ ಮಾಡುವವರಿಗೆ ರಾಜವಾಹಾರಾಜರು ಮನ್ನಣೆ ಮಾಡುತ್ತಿದ್ದರು. ಪರಮತ ಖಂಡನೆಯಲ್ಲಿ ಪಂಡಿತನಾವ ಈ ಕವಿಯನ್ನು ಬುದ್ಧಿವಂತರು "ಕುಮತವಿಭೇದೀ" "ಷಟ್ಸ್ಥಲಬ್ರಹ್ಮವಾದೀ" ಎಂಬೆರಡು ಬಿರುದುಗಳನ್ನು ಕೊಟ್ಟಂತೆ ಅನುಭವ ಸೂತ್ರದಿಂದ ತಿಳಿಯುತ್ತದೆ.

ಆದರೆ ಇವೆಲ್ಲ ಬಿರುದುಗಳಲ್ಲಿ ಹೆಚ್ಚಿನದೂ ಪೂಜ್ಯವೂ ಆವ "ಮಾಯಿದೇವ" ಎಂಬ ಬಿರುದಿನಲ್ಲಿ ಕವಿಗೆ ಬಹು ಆದರವಿದ್ದುದರಿಂದ

ಇದನ್ನೇ ತನ್ನ ಹೆಸರನ್ನಾಗಿ ಸ್ವೀಕರಿಸಿದ್ದಾನೆ. "ಮಾಯಿದೇವ" ಎಂಬ ಶಬ್ದದ ವಿಚಾರವಾಗಿ ಕವಿಯು "ಮಾಯಿನಃ ಪರೋ ಯೋ ದೇವಃ ಮಾಯಿದೇವ" ಎಂದು ಈ ಶಬ್ದದ ನಿರ್ವಚನವನ್ನು ವಿವರಿಸಿದ್ದಾನೆ. "ಮಾಯಿ"ಎಂದರೆ ವಿಷ್ಣುವು. ಇವನಕಿಂತ "ಪರ" ಎಂದರೆ ಶ್ರೇಷ್ಠನಾದ ದೇವನು ಅಂದರೆ ಶಿವನೆಂದು ಕವಿಯ ಅಭಿಪ್ರಾಯವು.

ಶಿವಸರ್ವೋತ್ತಮತೆಯನ್ನೂ ಪರವಾದಿಗಳ ಜಯಿಸಲು ಸೂಚಕವಾದ 'ಮಾಯಿದೇವ' ಎಂಬ ಹೆಸರನ್ನೂ ತನ್ನದಾಗಿ ಸ್ವೀಕರಿಸಿದಲ್ಲಿ ಕವಿಯ ಔಚಿತ್ಯವು ಸ್ತೋತ್ರಾರ್ಹವೂ ಅರ್ಥಪೂರ್ಣವೂ ಆಗಿದೆ.

ದೇವನೆಂತಿರುವನಂತೆ?

(೧)

ನೆಲದ ಮರೆಯ ಹೇಮದಂತೆ
ಫಲದ ಮರೆಯ ರುಚಿಯಂತೆ
ತಿಲದ ಮರೆಯ ತೈಲದಂತೆ
ಜಲದ ಮರೆಯ ಅನಲದಂತೆ

(೨)

ಶಶಿಯೊಳಗಣ ತಂಪಿನಂತೆ
ನನೆಯೊಳಗಣ ಗಂಧದಂತೆ
ಕನ್ನೆಯೊಳಗಣ ನೇಹದಂತೆ
ನೀರೊಳಲೆವ ಛಾಯೆಯಂತೆ

(೩)

ಗೋವಿನೊಳಗಣ ಕ್ಷೀರದಂತೆ
ದರ್ಪಣದಲಿರುವ ಬಿಂಬದಂತೆ
ಜೀವಕೋಟ ಮನಸಿನಲ್ಲಿ
ದೇವನಿಂತಿರುವನಂತೆ!

—ಮಹಾಂತದೇವ
ಶ. ಮಂದಿರ ಇಲಕಲ್ಲ.

ಹಿಂದೂಧರ್ಮ ಮತ್ತು ಲಿಂಗಾಯತ ಧರ್ಮ.

(ಲೇಖಕರು—ಪ್ರೊ. ಎಸ್ಸ್. ಆರ್. ಸಾಖರೆ, ಎಸ್ಸ್. ಏ ಟಿ. ಡಿ. ಬೆಳಗಾವ.)

[ಹಿಂದಿನಿಂದ ಮುಂದುವರಿದು ಮುಗಿದುದು.]

ಶೈವರು ಕೇವಲ ವರ್ಣಾಶ್ರಮದ ಸ್ಥಾವರಲಿಂಗ ರೂಪ ಮೂರ್ತಿ ಪೂಜಕರಾಗಿರುವರು. ಅವರಲ್ಲಿ ಅದಕ್ಕನುಸರಿಸಿದ ಸಿದ್ಧಾಂತವಾಗಲಿ ಅಥವಾ ಆಚಾರವಾಗಲಿ ಇರುವದಿಲ್ಲಾದ್ದರಿಂದ ಲಿಂಗಾಯತರು ಶೈವರ ಉಪಾಂಗವೆಂದೂ ಲಿಂಗಾಯತ ಧರ್ಮವು ಶೈವಧರ್ಮದ ಒಂದು ಬಗೆಯ ಸ್ವರೂಪವೆಂದೂ ನಿರ್ಣಯಾತ್ಮಕ ಸಿದ್ಧಾಂತವು ಹೊರಡಲಾರದು. ಇದೇ ಪ್ರಕಾರ ಲಿಂಗಾಯತರಿಗೂ ಹಿಂದುಗಳಿಗೂ ಧರ್ಮದ ವಿಷಯದಲ್ಲಿ ಎಳ್ಳಷ್ಟಾದರೂ ಸಂಬಂಧವಿಲ್ಲವೆಂಬುವದು ಸಿದ್ಧವಾಗುವದು. ಇತರ ಧರ್ಮಗಳ ಸಿದ್ಧಾಂತ ಮತ್ತು ಆಚಾರಗಳಿಗಿಂತ ಲಿಂಗಾಯತ ಧರ್ಮದ ಸಿದ್ಧಾಂತ ಮತ್ತು ಆಚಾರ ಇವೆರಡು ತೀರ ಭಿನ್ನವಾಗಿರುವದರಿಂದ ಲಿಂಗಾಯತ ಧರ್ಮವು ತೀರ ಭಿನ್ನವಾಗಿರುವದೆಂಬ ಮಾತು ಖಂಡಿತವಾಗಿ ಸಿದ್ಧವಾಗುವದು.

ಜೈನ ಮತದಂತೆ ಅಹಿಂಸೆಯು ಲಿಂಗಾಯತ ಧರ್ಮದ ಮುಖ್ಯ ತತ್ವವಾಗಿರದಿದ್ದರೂ ಅಹಿಂಸಾ ತತ್ವವು ಲಿಂಗಾಯತ ಧರ್ಮದಲ್ಲಿ ತುಂಬಿರುವದು. ದಯವಿಲ್ಲದ ಧರ್ಮವಿಲ್ಲ ಎಂಬ ಮಾತು ಲಿಂಗಾಯತ ಧರ್ಮವನ್ನು ವ್ಯಾಪಿಸಿದೆ. ಈ ಮಾತು ಮರೆಯತಕ್ಕದ್ದಲ್ಲ. ಆದ್ದರಿಂದ ಲಿಂಗಾಯತರು ಸಂಪೂರ್ಣ ಶಾಕಾಹಾರಿಗಳಾಗಿರುವರು. ಮತ್ತು ಈ ಧರ್ಮದಲ್ಲಿ ಮದ್ಯವು ನಿಷೇಧಿಸಲ್ಪಟ್ಟಿದ್ದಲ್ಲದೆ ಮಾದಕ ಪದಾರ್ಥಗಳ ಸೇವನೆಯು ತುಂಬಾ ನಿಷಿದ್ಧವಾಗಿರುತ್ತದೆ. ಇಂಥ ಅಹಿಂಸಾತ್ಮಕ ಮಾದಕ ಪದಾರ್ಥ ಸೇವನ ರಹಿತ; ವರ್ಣಾಶ್ರಮ ಧರ್ಮದಲ್ಲಿದ್ದ ಜನ್ಮ ಸಿದ್ಧವಾದ ಹೆಚ್ಚುಕಡಿಮೆ ಭಾವನೆಯನ್ನು ಹೊರದೂಡಿದ; ಸ್ತ್ರೀಪುರುಷರಿಗೆ ಧರ್ಮದ ವಿಷಯದಲ್ಲಿ ಸರಿಸಮಾನವಾದ ಹಕ್ಕುಗಳನ್ನು ಕೊಟ್ಟಂಥ ಎಲ್ಲ ಮಾನವ ಜಾತಿಗೆ ಭೇದ ಮಾಡದೆ ಕರುಣೆಯಿಂದ ಆತ್ಮೋನ್ನತಿಗಾಗಿ ಧರ್ಮಮಾರ್ಗವನ್ನು ತೆರೆದಿಟ್ಟಂಥ, ಶರೀರಶಾಸ್ತ್ರ ಮತ್ತು ಮಾನಸಶಾಸ್ತ್ರ ಇವೆರಡರ ಮೂಲ ತತ್ವದ ಮೇಲೆ ರಚಿಸಲ್ಪಟ್ಟಂಥ, ಪ್ರತಿ

ವ್ಯಕ್ತಿಯು ತನ್ನ ತನ್ನ ಆತ್ಮೋನ್ನತಿಯು ತನ್ನ ಕೈಯ್ಯಲ್ಲಿರುವದರಿಂದ ಅನ್ಯರ ಮಧ್ಯಸ್ಥಿಕೆಯನ್ನು ಅವಲಂಬಿಸದೆ ತಾನೇ ತನ್ನ ಆತ್ಮೋನ್ನತಿಗಾಗಿ ದುಡಿಯಬೇಕೆಂದು ಷಟ್‌ಸ್ಥಲಮಾರ್ಗವನ್ನು ತೋರಿಸಿದಂಥ, ಯಾವತ್ತೂ ಭಿನ್ನ ಭಿನ್ನ ಯೋಗಗಳನ್ನೊಳಕೊಂಡ ಶಿವಯೋಗವೆಂಬ ಹೆಸರುಳ್ಳ ಶಿವಪೂಜಾತ್ಮಕವಾದಂಥ, ಪ್ರಪಂಚದಲ್ಲಿ ಸಿಕ್ಕಿದ್ದರೂ ಪ್ರಪಂಚವನ್ನು ಸಾಗುವಾಗಲೇ ಪರಮಾರ್ಥಧ್ಯೇಯವನ್ನು ಮುಂದಿಟ್ಟು ಯಾವತ್ತರಿಗೆ ಆಧ್ಯಾತ್ಮಿಕ ಮಾರ್ಗಕ್ಕೆ ಹಚ್ಚುವಂಥ, ಇತ್ತೀಚಿಗೆ ತಲೆದೋರಿದ ಸರ್ವಸಮತಾವಾದ ಭಾವನಾಪೂರ್ಣ (Principals of Communism) ಕಾಯಕವೆಂಬ ನೀತಿ ಪೂರ್ಣ ಸಂಸಾರ ಮಾರ್ಗವನ್ನು ತೋರಿಸಿದಂಥ, ಯಾವತ್ತರಿಗೆ ತಮ್ಮ ತಮ್ಮ ಭಾವಕ್ಕನುಸಾರವಾಗಿ ಉಪಾಸನೆಯ ಸುಲಭೋಪಾಯವನ್ನು ಹೇಳುವಂಥದು ಲಿಂಗಾಯತ ಧರ್ಮವಿರುತ್ತದೆ. ಈ ಎಲ್ಲ ಸಂಗತಿ ವಿಹೀನವಾದಂಥ ಹಿಂದೂ ಧರ್ಮದ ಒಂದು ಉಪಾಂಗವು ಇದು ಇರುತ್ತದೆಂಬ ತಿಳುವಳಿಕೆಯು ತೀರ ಸುಳ್ಳು ಮತ್ತು ಶುಚಿತವಾದಂಥಾದ್ದು ಇರುವದು. ಆದ್ದರಿಂದ ಲಿಂಗಾಯತ ಧರ್ಮವು ಇತರ ಧರ್ಮದ ಆಶ್ರಯವನ್ನವಲಂಬಿಸಿ ಅದರ ಜೊಗ್ಗಾಳಾಗಿ ಇರುವ ಧರ್ಮವಲ್ಲ. ಇದು ಉಚ್ಚ ಮತ್ತು ವಿಶ್ವಬಂಧುತ್ವ ತತ್ವಗಳಿಂದ ತುಂಬಿದ ಬೇರೆಯಾದ ಸ್ವತಂತ್ರವಾದ ಧರ್ಮವೆಂದು ಉಚಿತ ಹೆಮ್ಮೆಯಿಂದ ಹೇಳುವಷ್ಟ ಸ್ವತಂತ್ರವಾಗಿರುವದೆಂಬದನ್ನು ಮರೆಯಕೂಡದು.

ಇನ್ನು ಹಿಂದು ಮತ್ತು ಲಿಂಗಾಯತರ ಸಂಬಂಧವು ಏನಿರುವದೆಂಬದನ್ನು ನೋಡುವಾ. ಲಿಂಗಾಯತರು ಲಿಂಗಾಯತ ಧರ್ಮವು ಉದಯ ಹೊಂದುವ ಪೂರ್ವದಲ್ಲಿದ್ದ ಉಚ್ಚ ನೀಚ ನಾನಾವಿಧ ಜಾತಿಗಳಿಂದ ವಿಚಿತ್ರ ಆಕಾರ ಹೊಂದಿದ ಹಿಂದೂಗಳ ವಂಶಜರು ಸರಿ. ಇವರು ಪಾರಸಿಯರಂತೆ ಪರದೇಶದಿಂದ ಬಂದಂಥವರಲ್ಲ. ಅಥವಾ ಅನ್ಯ ಧರ್ಮ ಸಂಸ್ಕಾರದಿಂದ ಕ್ರಿಶ್ಚನ್ನರಂತೆ ಬೇರೆಯಾದಂಥವರಲ್ಲ. ಈ ದೇಶದಲ್ಲಿ ಹುಟ್ಟಿದ ಸ್ವಂತ ಧರ್ಮವನ್ನು ಸ್ವೀಕರಿಸಿ ಇದೇ ದೇಶದಲ್ಲಿ ಇದ್ದ ಉಚ್ಚ ನೀಚ ಭಾವನೆಯಿಂದ ತುಂಬಿತುಳಕುವ ಹಿಂದು ಜನರನ್ನು ಸರಿಸಮಾನರನ್ನು ಮಾಡಿ ಅವರಿಂದ ವಿಭಕ್ತರಾಗಿ ಎದಿತಟ್ಟ ಬೇರೆಯಾಗಿ ನಿಂತಂಥ ಹಿಂದುಗಳು ಲಿಂಗಾಯತರು. ಇದೇ ಇವುಗ

ಳಲ್ಲಿರುವ ಸಂಬಂಧ. ಆದರೆ ಇವರು ಹಿಂದುಧರ್ಮದಿಂದ ಖಂಡ ತುಂಡಾಗಿ ವಿಚ್ಛೇದನ ಹೊಂದಿ ತಮ್ಮ ಸ್ವತಂತ್ರ ಧರ್ಮದಿಂದ ಮೆರೆಯುವಂಥ ಲಿಂಗಾಯತರು ಹಿಂದು ಧರ್ಮದವರಲ್ಲ, (ಈ ವಿಷಯದಲ್ಲಿ ಲಿಂಗಾಯತರು ಜೈನರಿಗೆ ಹೋಲುವರು.) ಜೈನರು ಇದೇ ದೇಶದಲ್ಲಿ ಹುಟ್ಟಿರುವರು. ಆದರೆ ಅವರು ಹಿಂಸಾತ್ಮಕ ಹಿಂದು ಧರ್ಮವನ್ನು ತ್ಯಜಿಸಿ ಅಹಿಂಸಾ ತತ್ವದ ಮೇಲೆ ಮಹಾತ್ಮನಾದ ಮಹಾವೀರನಿಂದ ಸ್ಥಾಪಿತವಾದ ಧರ್ಮದ ಅನುಯಾಯಿಗಳು. ಅವರು ವಂಶದಿಂದ ಹಿಂದುಗಳು, ಆದರೆ ಧರ್ಮದಿಂದ ಜೈನರು. ಇದರಂತೆ ಲಿಂಗಾಯತರು ವಂಶದಿಂದ ಹಿಂದುಗಳು, ಆದರೆ ಧರ್ಮದಿಂದ ಲಿಂಗಾಯತರು.

ಇನ್ನೊಂದು ಉದಾಹರಣೆಯನ್ನು ತಕ್ಕೊಳ್ಳುವಾ. ಈಗಿನ ಆರ್ಯ ಸಮಾಜದವರು ಸಂಪೂರ್ಣ ವೇದಾನುಯಾಯಿಗಳೂ ವರ್ಣಾಶ್ರಮದ ಧರ್ಮದವರೂ ಆಗಿರುವರು. ಆದರೆ ಅವರ ವರ್ಣಾಶ್ರಮವು ಜನ್ಮ ಸಿದ್ಧ ಹಕ್ಕಲ್ಲ. ಗುಣ ಕರ್ಮಾನುಸಾರವಾಗಿರುವದೆಂದು ಅನ್ನುವರು. ಮತ್ತು ಮೂರ್ತಿಪೂಜೆಯು ಅವೈದಿಕವಾಗಿರುವದರಿಂದ ಅದನ್ನು ತ್ಯಜಿಸಿದಂಥವರು. ಆದ್ದರಿಂದ ಈಗಿನ ಜಾತಿ ನಿರ್ದಿಷ್ಟ ಜನ್ಮದಿಂದ ವರ್ಣಾಶ್ರಮವನ್ನು ಪರಿಪಾಲಿಸುವ ಒಂದುಗಳೊಳಗೆ ಇರಬಾರದೆಂಬ ಹೇತುವಿನಿಂದಲೇ ಅವರಿಂದ ಸಂಪೂರ್ಣ ಬೇರೆಯಾಗಿ ತೋರುವದಕ್ಕಾಗಿ ಬೇರೆ ಸಮಾಜದವರೆಂದು ಅಂದುಕೊಳ್ಳುವರಷ್ಟೇ ಅಲ್ಲ, ಬೇರೆಯಾಗಿ ನಿಂತಿರುವರು.

ಇದನ್ನು ನೋಡಿದರೆ ಹಿಂದೂ ಧರ್ಮದ ನಾಮದಿಂದ ಮೋಹಿತರಾಗಿ ಅವರೊಳಗೆ ಬೆಲೆಯಿಲ್ಲದ ಡೊಗ್ಗಾಳಿನಂತೆ ಆಶ್ರಯಿಸುವದರಲ್ಲಿ ಏನಿದೆ ಎಂಬದನ್ನು ತಿಳಿಯಲಸಾಧ್ಯ. ಲಿಂಗಾಯತ ಧರ್ಮವು ಅತಿ ವರ್ಣಾಶ್ರಮಿಯಾದ ಧರ್ಮ ಮತ್ತು ಲಿಂಗಾಯತರು ಅತಿ ವರ್ಣಾಶ್ರಮಿಗಳು. ಇದನ್ನು ಮರಿ ತೋಂಟದಾರ್ಯರು ತಮ್ಮ ವೀರಶೈವಾನಂದ ಚಂದ್ರಿಕೆಯಲ್ಲಿ ಒಳ್ಳೇ ರೀತಿಯಿಂದ ಸಮರ್ಥಿಸಿ ಸಿದ್ಧಮಾಡಿರುವರು. ಮತ್ತು ಅದರಂತೆ ಅವೈದಿಕ ಧರ್ಮಗಳಿಂದ (ಚಾರ್ವಾಕ, ಬುದ್ಧ, ಸೌಗತಾದಿ ಧರ್ಮಗಳಿಂದ) ಮತ್ತು ವೈದಿಕ ವರ್ಣಾಶ್ರಮವುಳ್ಳ ಇತರ ಧರ್ಮಗಳಿಂದ (ಶೈವ, ವೈಷ್ಣವ, ಶಾಕ್ತಾದಿ ಧರ್ಮಗಳಿಂದ) ತೀರ ಭಿನ್ನವೆಂದು ಸಿದ್ಧಗೊಳಿಸಿರುವರು. ಇದು ಮರೆಯಲಾರದಂಥ ಮಾತಾಗಿದೆ.

ಲಿಂಗಾಯತರಿಗೆ ಅಪ್ರಾಕೃತ ಬ್ರಾಹ್ಮಣರೆಂದು ಮತ್ತೊಂದು ನಾಮವಿದೆ. ಅಂದರೆ ಪ್ರಕೃತಿ ಭೂತವಾದ ಪ್ರಾಕೃತ, ಸ್ಥಾವರ, ಲಿಂಗ ಪೂಜೆ ಮಾಡಿದರೆ ಪ್ರಕೃತಿಗೆ ಒಳಗಾಗುವದು. ಅದನ್ನು ಬಿಟ್ಟು ಅಪ್ರಾಕೃತ ಅಂದರೆ ಪ್ರಕೃತಿಯ ಸೆರಗನ್ನು ಹರಿದು ಇಷ್ಟಲಿಂಗ ಪೂಜೆ ಮಾಡುವಂಥವರು ಅಪ್ರಾಕೃತ ಬ್ರಾಹ್ಮಣರೆಂಬ ಅರ್ಥಪೂರ್ಣ ಹೆಸರು ಲಿಂಗಾಯತರಿಗೆ ಸಲ್ಲುವದು. ಇದನ್ನು ನಿರಾಕರಿಸಿ ಜನ್ಮದಿಂದ ಬಂದ ಪೊಳ್ಳ ಬ್ರಾಹ್ಮಣ್ಯಕ್ಕೆ ಹವಣಿಸಿದರೆ ಕೈಯ್ಯಲ್ಲಿದ್ದ ಸಕ್ಕರೆಯಂತೆ ಸವಿಯಾದ ಅಮೃತವನ್ನು ಬಿಟ್ಟು, ಕಡುಕಹಿಯಾದ ಬೇವಿನ ರಸಕ್ಕೆ ಹವಣಿಸಿದಂತೆ ಆಗುವದೆಂಬುದು ನಮ್ಮ ಅತಿ ದೃಢವಾದ ನಂಬಿಕೆ ಇದೆ.

ಮಾತೇಕೆ? ಕೃತಿಯಿರಲಿ!

ಮಾತೇಕೆ ? ಕೃತಿಯಿರಲಿ.
ಕೃತಿಯಲ್ಲಿ ಸೊಬಗಿರಲಿ.
ಹೂವಾಗಿ ಶೋಭಿಸುವ ತರುಲತೆಗಳಂತೆ.

ಸಟೆಯೇಕೆ ? ದಿಟವಿರಲಿ.
ದಿಟದಲ್ಲಿ ಮನವಿರಲಿ.
ಕೂಸು ತಾ ತಾಯಿಯನು ಹಂಬಲಿಸುವಂತೆ.

ಅಳುವೇಕೆ ? ನಗೆಯಿರಲಿ.
ಶಾಂತತೆಯ ಸೊಬಗಿರಲಿ.
ಅರುಣನುದಯದಿ ಮೆರೆವ ರವಿಕಿರಣದಂತೆ.

ಎರಡೇಕೆ ? ಒಂದಿರಲಿ.
ಹೊಂದಿಕೆಯ ಪೊಲಬಿರಲಿ.
ಹಣ್ಣಿನಲಿ ಬೆರೆತಿರುವ ಸೀ ರಸದಂತೆ.

—ಆನಂದಕವಿ—ಕುರುಗುಂದ.

ವೀರಶೈವ ಸಮಾಜಕ್ಕೆ ಗುರುಲಿಂಗ ಜಂಗಮ ಸಂಬಂಧ.

(ಶ್ರೀಯುತ ಎನ್. ರಾಜೋಟಿಯ್ಯ ಕಾನಕಾನಹಳ್ಳಿ.)

ರಾಗ—ಆದಿತಾಳ.

ತನುವಿನ ಮೂರಿ ಲಿಂಗದ ಮುಸಣಿ ಜಂಗಮದೊಳಗೈಕ್ಯಾ ॥ಪ॥
ತ್ರಿವಿಧದ ಹೊಲಬಂ ತಿಳಿಯದ ಮನುಜರು ತಿರುಗಿ ತಿರುಗಿ ಬಹು ಬಳಲುವರಹಹಾ ॥ತ॥

ತನುವಿನ ಕ್ರಿಯೆಯೇ ಗುರುವಿನದಾಗಿ ಮನದ ಹಂಬಲವ ಲಿಂಗದಲ್ಕೀಗಿ ಧನದಲಿ ನಿಷ್ಕಲ ಜಂಗಮವಾಗಿ ತ್ರಿವಿಧವ ತ್ರಿವಿಧಕೆ ಮೂರಿರ್ಪರಾಗಿ ॥ತ॥

ಮನವನು ಲಿಂಗದಿ ಮುಸಣಿಪರಾಗಿ ಮನತಾ ಮುನ್ನವೇ ಲಿಂಗವಾಗಿ ಮನವನು ವಿಾರಿದೊಡಾತನೆ ಯೋಗಿ ಘನಗುರುದೇವನೆ ಮಹಲಿಂಗ ಯೋಗಿ ॥ತ॥

ಗುರು ಕರುಣವ ತಾ ಪಡೆದವರಾಗಿ ಗುರು ಚರಣಕೆ ತಾವ್ ನಡೆದವರಾಗಿ ಈ ಪರಿ ತಿಳಿಯದೆ ಬಳಲುವರಾಗಿ ಗುರುವಿನಾಜ್ಞೆಯವಿಾರಿರ್ಪರಾಗಿ ॥ತ॥

ಮೂರಿಯೆಂದಡೆ ತನುಗುಣ ಮೂರಿ ಮನಲಿಂಗಕು ತಾ ಮುಸಣಿಸಿ ಕೂಡಿ ವಿನಯವೆಂಬುವ ಜಪವನು ಮಾಡಿ ಕನಿಕರದಿಂದಲಿ ಪ್ರಾಣಿಯ ನೋಡಿ ಬರಿಬರಿದಾರತಿ ಎತ್ತಲು ಬೇಡಿ ॥ತ॥

ಪಂಚಾಚಾರವ ಪಾಲಿಪರಾಗಿ ಪಂಚಸೂತಕವ ತೊರೆದವರಾಗಿ ಪಂಚತತ್ವವ ತಿಳಿದವರಾಗಿ ಪಂಚಾಕ್ಷರಿಯ ಜಪಿಸುವರಾಗಿ ॥ತ॥

ಆರುಭ್ರಮೆಗಳ ನೀಗುವರಾಗಿ ಆರುತತ್ವವ ತಿಳಿದವರಾಗಿ ಆರು ಭಕ್ತಿಯೋಳ್ ಬೆಳಗುವರಾಗಿ ಆರುಲಿಂಗದಿ ಕೂಡುವರಾಗಿ ಆರಾರ್ಥರೆನ್ನಲ್ ಪೇಳುವರಾಗಿ ॥ತ॥

ತನುವಿನ ಹಂಬಲ ತೊರೆದವರಾಗಿ ತಿರುಕುಳ ದೈವವ ಪೂಜಿಪರಾಗಿ ಮೂರಿವೂರಿ ಎಂದೋಡುವ ಜನರೇ ಮೂರಿಯ ಸೇವೆಯಿಂ ಬೇಡುವಜನರೇ ಹಾಡುವುದು ನಮ್ಮ ಗುರುವರನುಂ ನೋಡುವುದು ನಮ್ಮ ಲಿಂಗವನುಂ ॥ ತ ॥

ಬೇಡುವುದು ನಮ್ಮ ಜಂಗಮವಂ ನೋಡಿರಿ ಕರುಣದಿ ಬೇಡುವೆ ನಮ್ಮಂ ಪಾಡುತ ಗುರುವರನಂಘ್ರಿಯನುಂ ॥ತನುವಿನಮೂರಿ॥

ಪ್ರತಕರ್ತೃಯ—

ಶಿವನೆ ಶಿವಾರ್ಚನೈಕರತನಾಗಿರಲೋಸುಗ ಮಾತ್ಮ ಲೋಕದಿಂ ।
ದವತರಿಸಿ ಸ್ವಕೀಯ ಘನಲೀಲೆಯೊಳೊಯ್ಯನೆ ಮಾನುಷೀಯಮು ॥
ಪ್ಪ ವಿಮಳವೇಷಮುಂ ಧರಿಸಿ ಸರ್ವಜಗದ್ಧಿತ ದಿವ್ಯ ಚೇಷ್ಟೆಯಿಂ ।
ತವೆ ಪರಿರಂಜಿಪಂ ಪರಮಭಕ್ತಮಯ ಸ್ಥಳದೊಳ್ ಶಿವಾಧವಾ ॥

ಸರ್ವಜ್ಞ—

ಆರೈದು ನುಡಿವಾತ ಆರೈದು ನಡೆವಾತ ।
ಆರೈದು ನಡೆದು ನುಡಿವಾತ ।
ಆರಾಧ್ಯನಂತಕ್ಕು ಸರ್ವಜ್ಞ ॥

ಷಟ್‌ಸ್ಥಲ.

ಆರು ಮೂವತ್ತಾರಾಗಿ, ಮೂವತ್ತಾರು ಎರಡುನೂರಾ ಹದಿನಾರಾಗಿ, ಆ ಇನ್ನೂರಾ ಹದಿನಾರು ಪ್ರಭೆಯನು, ಆ ಮೂವತ್ತಾರರಲ್ಲಿಯೇ ಭೇದಿಸಿ, ಆ ಮೂವತ್ತಾರರ ಬೆಳಗನು ಆರು ಸ್ಥಲದಲ್ಲಿಯೆ ಅರಿದು, ಆ ಆರು ಸ್ಥಲದನ್ವಯವನು ಮೂರು ಸ್ಥಲದಲ್ಲಿಯೆ ಅರಿದು, ಆ ಮೂರು ಸ್ಥಲದ ಮೂಲವನು ಉಭಯ ಸ್ಥಲದಲ್ಲಿಯೆ ಅರಿದು, ಆ ಉಭಯ ಸ್ಥಲದ ಉಪಮೆಯನು ಉಪಮಾತೀತದಲ್ಲಿಯೆ ಅರಿದು, ಉಪಮೆ ಅನುಪಮೆಯೆಂಬ ಆರುವರಿತು ಮರುಹು ನಷ್ಟವಾಗಿ ಶ್ರುತಿ । ಪಾಜಾತೀತಂ ಮನೋತೀತಮಗೋಚರಂ । ಸರ್ವಶೂನ್ಯಂ ನಿರಾಕಾರಂ । ನಿತ್ಯತ್ವಂ ಪರಮಪದಂ । ಯೆಂದುದಾಗಿ । ಶ್ಲೋಕ । ಅದಿಶೂನ್ಯಂ । ವಿದ್ಯಾ ಶೂನ್ಯಂ । ಅಂತ್ಯಶೂನ್ಯಂ ನಿರಾವಯಂ । ಸರ್ವಶೂನ್ಯಂ ನಿರಾಲಂಬಂ । ನಿಃಶಬ್ದಂ ಬ್ರಹ್ಮಮುಚ್ಯತೆ ॥ ಎಂದು ನುಡಿವಿಡಿದು ನಿಜವನೆಯಿಟ್ಟಿಪ್ಪಾತನೀಗ ಅಭೇದ್ಯ ಭೇದಕ, ಅಸಾಧ್ಯಸಾಧಕ, ಚಿನ್ಮಯ ಚಿದ್ರೂಪ ಚಿದಾನಂದ ಇಂತಿಪ್ಪ ದಿವ್ಯ ಶಿವಯೋಗಿ ಮಹಾಶರಣ ಶಿವಾನಂದನ ಕರುಣದಿಂದಾನು ಬದುಕಿದೆನಯ್ಯ ಮಲ್ಲಿಕಾರ್ಜುನ.

—ಮು. ಹ. ಪಾಟೀಲ— ರಾಮದುರ್ಗ.

ಕಬೀರದಾಸನ ವಚನಗಳು.

(ರವೀಂದ್ರರ ಕವಿತೆಯ ಆಧಾರದ ಮೇಲಿಂದ)

ಲೇ.:— ಬ. ವಿ. ಮಾನ್ವಿ ರಬಕವಿ.

ಅಯ್ಯಾ, ಮಾನವನೇ ಕ್ಷಣವಾದರೂ ಯೋಚಿಸಿದೆಯಾ? ವಿಶ್ವ ಬಂಧುತ್ವದ ಬಗ್ಗೆ, ಸತ್ಯವನು ಮೆಟ್ಟಿ ವಿಭಿನ್ನ ನೋಸಗಳಿಂದೊಡಗೂಡಿದೆ, ನಿನ್ನ ಜೀವನ. ಆಶೆ ಆಕಾಂಕ್ಷೆಗಳಿಂದ ನಿನ್ನ ತಲೆ ಭಾರ ಹೆಚ್ಚಿದೆ, ಈ ಭಾರ ಹೊರೆಯನ್ನು ಇಳಿಸುವವರಾರಯ್ಯ.

ಎಚ್ಚರಾಗು ಏಳು, ಕ್ಷಣಕ್ಷಣಕ್ಕೂ ಮೃತ್ಯು ಸಿಂಹವು ಹಾರಿ ನೆಗೆದು ಬರುತಿದೆ. ನೋಡು, ಪವಿತ್ರ ನೇತ್ರಗಳಿಂದ ನಿನ್ನ ಮುಂದಿರುವ ನಿರ್ಮಲ ಜಲವನ್ನು (ಅಮೃತವನ್ನು), ಇದನ್ನೆ ಕುಡಿದು ಧ್ರುವ, ಪ್ರಲ್ಹಾದ, ಚಿರಂಜೀವಿ, ಶುಕದೇವ ರಾಮುದಾಸರು ಅಮರತ್ವವನ್ನು ಪಡೆಯಲಿಲ್ಲವೆ? ಮಹಾಮುನಿಗಳು ಇದಕ್ಕಾಗಿ ಹೋರಾಡಲಿಲ್ಲವೆ? ಸತ್ಯ, ಭಕ್ತಿ, ಪ್ರೇಮಗಳನ್ನು ಪಾಲಿಸು. ನಂತರ ಅಮೃತವನ್ನು ಕುಡಿಯಬಲ್ಲೆ. ಅಮರತ್ವವನ್ನು ಪಡೆಯಬಲ್ಲೆ.

ಹೃದಯವೇ, ಒಂದಿಷ್ಟೂ ತಾಳ್ಮೆ ಇಲ್ಲವೇಕೆ ನಿನಗೆ? ಹುಟ್ಟಿಸಿದ ದೇವನು ಹುಲ್ಲು ಮೇಯಿಸುವನೆ? ಪಶುಪಕ್ಷಿಗಳನ್ನು, ಕ್ರಿಮಿ ಕೀಟಗಳನ್ನು ಕಾಪಾಡುವಾತ ನಿನ್ನನ್ನು ಮರೆಯುವನೆ? ತಾಯಿಯ ಗರ್ಭದಲ್ಲಿದ್ದಾಗ ರಕ್ಷಿಸಿದಾತ, ನೀನು ಬೆಳೆದು ಬಂದಾಗ ತೊರೆಯುವನೆ? ಹೃದಯವೇ ದೇವನ ಸ್ಮರಣೆಯನ್ನು ಬಿಟ್ಟು ತಿರುಗುವದೇಕೆ? ಕೊರಗುವದೇಕೆ? ನಿಜವಾದ ದೇವನಂ ಮರೆತಿರುವಿ, ಅನ್ಯರಿಗೆ ಅಂಗಲಾಚಿ ಬೇಡುವಿ. ಅದಕ್ಕಾಗಿ ನಿನ್ನ ಕಾರ್ಯಗಳೆಲ್ಲ ವ್ಯರ್ಥ ನೋಡಾ!

ದೇವಾ! ನಿನ್ನ ದರ್ಶನ ಎಷ್ಟು ದುರ್ಲಭವು! ಮಳೆನೀರಿಗಾಗಿ ಕಾದು ಸಾಯುವದೆ ಹೊರತು, ಅನ್ಯನೀರಿಗೆ ಮನ ಎಳೆಸುವದೇ ಜಾತಕ ಪಕ್ಷಿಯು? ಗಾನದ ಮಾಯೆಯಲಿ ಮರುಳಾಗಿ ಸಾಯುವದೇ ಹೊರತು ಬೆಚ್ಚಿ ಹಿಂದೋಡುವುದೆ ಚಿಗರಿಯು? ತನ್ನ ಮೃತ ಪತಿಯ ಬಳಿಯಲ್ಲಿ ಬಿದ್ದು ಸಾಯುವಳೆ ಹೊರತು ಅಗ್ನಿಗೆ ಅಂಜುವಳೇ ವಿಧವೆಯು? ನಿನ್ನ ಸಾನ್ನಿಧ್ಯದಲ್ಲಿರುವ ಅನುಮತಿಯ ಹೊರತು, ಈ ಶರೀರದ ತೃಪ್ತಿಗಾಗಿ ಎಳೆಸುವದೇ ನಿನ್ನ ಭಕ್ತನ ಮನ?

ಅವಳು ತನ್ನ ಪ್ರಾಣವನ್ನು ಕೊಡುತ್ತಿರುವಷ್ಟರಲ್ಲಿ ಪರಮಾತ್ಮನು ಪ್ರತ್ಯಕ್ಷನಾಗಿ ಅವಳ ಕಯ್ಯನ್ನು ಹಿಡಿದು ಮುಗ್ಧಳಾಗಿ ನಕ್ಕು ಬಾಲಕಿಯು ತಂದಂಥ ಬಟ್ಟಲ ಹಾಲನ್ನು ಕುಡಿದುಬಿಟ್ಟನು. ಅದನ್ನು ಆ ಬಾಲೆಯು ನೋಡಿ ಆನಂದಬಡುತ್ತ ಮನೆಗೆ ತಿರುಗಿಹೋದಳು.

ಹೀಗೆಯೇ ಅವಳು ಪ್ರತಿದಿನ ಹಾಲನ್ನು ಚನ್ನಾಗಿ ಕಾಯಿಸಿ ಗುಡಿಗೆ ಹೋಗಿ ಅದನ್ನು ದೇವರ ಮುಂದೆ ಇಡಲು ದೇವರು ತಪ್ಪದೆ ಅದನ್ನು ಕುಡಿಯುತ್ತಿದ್ದನು. ಅವನು ಕುಡಿದ ಬಳಿಕ ಚನ್ನಕ್ಕನು ಬರಿಯ ಬಟ್ಟಲನ್ನು ಮನೆಗೆ ತರುತ್ತಿದ್ದಳು.

ಈಪ್ರಕಾರ ಕೆಲವು ದಿನ ಗತಿಸಲು ಊರಿಗೆ ಹೋದ ತಂದೆ ತಾಯಿಗಳು ಮನೆಗೆ ತಿರುಗಿಬಂದರು. ಅವರು ಬರುವಾಗ ಇದಿರಿನಲ್ಲಿ ಮಗಳು ಗುಡಿಗೆ ಹೋಗಿ ತಿರುಗಿ ಬರುವದನ್ನು ಕಂಡು ಅವರು ಆ ಬಟ್ಟಲಲ್ಲಿ ಹಾಲಿಲ್ಲದ್ದನ್ನು ನೋಡಿ, ತಂದೆಯು ಅವಳಿಗೆ—ಈ ಬಟ್ಟಲಲ್ಲಿ ಹಾಲಿಲ್ಲ, ಅದನ್ನು ನೀನು ಚಲ್ಲಿದೆಯೋ ಅಥವಾ ನೀನೇ ಕುಡಿದಿಯೋ ಎಂದು ಅಬ್ಬರಿಸಿ ಕೇಳಲು, ಅವಳು ಹಾಲನ್ನು ಲಿಂಗಕ್ಕೆ ನೀಡಿದೆನು, ಲಿಂಗವು ಕುಡಿಯಿತು ಎಂದು ಹೇಳಿದಳು. ಅದಕ್ಕೆ ಅವನು—ಕಲ್ಲು ಲಿಂಗವು ಎಂದಾದರೂ ಕುಡಿಯುವದುಂಟೇ? ನೀನು ಹೇಳುವದು ಸಟೆ ಎಂದು ನುಡಿದು ಮರುದಿನ ಅವಳು ಅಂದದ್ದನ್ನು ಪರೀಕ್ಷಿಸಬೇಕೆಂದು ಆಗ ಸುಮ್ಮನಾದನು.

ಮರುದಿನ ಅವನು ತನ್ನ ಮಗಳಿಗೆ ಹಾಲನ್ನು ಅಳೆದು ಕೊಟ್ಟು ಗುಡಿಗೆ ಹೋಗೆಂದು ಅವಳನ್ನು ಮುಂದೆ ಕಳಿಸಿದನು. ಅವಳು ಮುಂದೆ ಹೋದಹಾಗೆ ತಾನೂ ಅವಳ ಹಿಂದೆ ಹೋಗಿ ಗುಡಿಯಲ್ಲಿ ಮರೆಗೆ ನಿಂತು ನೋಡಹತ್ತಿದನು. ಆಗ ಕಲ್ಲಿನಾಥನು ಈ ಬಾಲಿಕೆಯ ಮುಗ್ಧಭಕ್ತಿಯನ್ನು ಜಗಕ್ಕೆ ತೋರಬೇಕೆಂದು ಬಯಸಿ ಅವಳು ಮುಂದಿಟ್ಟ ಹಾಲನ್ನು ಮುಟ್ಟಲಿಲ್ಲ.

ಆಗ ತಂದೆಯು ಮುಂದೆಬಂದು ಘುಡುಘುಡಿಸುತ್ತ ಮಗಳಿಗೆ—ನೀನು ನಿನ್ನೆ ಹೇಳಿದ್ದೆಲ್ಲವೂ ಸುಳ್ಳು. ಹಾಲನ್ನು ನೀನೇ ಕುಡಿದೆ. ನೀನು ಲಿಂಗದ್ರೋಹಿ. ನಿನ್ನನ್ನು ಕಡಿದುಹಾಕುವೆನು ಎಂದು ಅಬ್ಬರಿಸಿ ಮುಂದೆ

ಬರಲು ಆ ಕನ್ನೆಯು ಭೀತಿಗೊಂಡು—ಹಾ, ಶಿವನೇ, ಹಾ! ನೀನೇ ನನಗೆ ಗತಿಯು, ನನ್ನನ್ನು ಕಾಯು ಎಂದು ಒರಲುತ್ತ ಓಡಿ ಹೋಗು ವದರಲ್ಲಿದ್ದಳು. ಅಷ್ಟರಲ್ಲಿ ಶಿವನು ರೂಪುಗೊಂಡು ತನ್ನ ಅಭಯ ಹಸ್ತ ವನ್ನು ಮುಂದೆ ನೀಡಿ ತನ್ನ ಮುಂದಿದ್ದ ಬಟ್ಟಲಲ್ಲಿಯ ಹಾಲನ್ನು ಕುಡಿದು ಓಡಿಹೋಗುತ್ತಿದ್ದ ಬಾಲಿಕೆಯ ಸೆರಗನ್ನು ಹಿಡಿದು ಆಕೆಯನ್ನು ತನ್ನಲ್ಲಿ ಅಡಗಿಸಿಕೊಳ್ಳಹತ್ತಿದನು. ತಂದೆಯು ಈ ಅದ್ಭುತವನ್ನು ಕಂಡು ಚಕಿತನಾಗಿ— ನನ್ನ ಮಗಳು ನಿಜವಾದ ಶರಣೆಯು. ಅವಳು ಹೇಳಿದ್ದು ನಿಜವು. ಆದರಿ ಅವಳು ನನ್ನನ್ನು ಬಿಟ್ಟು ಹೋಗಹತ್ತಿದ್ದಾಳೆ. ಅವಳನ್ನು ನಾನು ಬಿಡಲಾರೆನು ಎಂದು ಅವಳ ಕೂದಲುಗಳನ್ನು ಹಿಡಿಯಲು ಆ ಕೂದಲುಗಳು ಲಿಂಗದ ಹೊರಗೆಯೇ ಉಳಿದವು ಮತ್ತು ಅವಳ ದೇಹವು ಲಿಂಗದ ಒಳಗೆ ಸೇರಿ ಶಿವನಲ್ಲಿಯೇ ಅವಳು ಅಡಗಿ ಬಿಟ್ಟಳು.

ಕಲ್ಲಿನಾಥನ ದೇವಾಲಯವು ಕೋಳೂರಲ್ಲಿ ಈಗಲೂ ಇದೆ. ಅದರಲ್ಲಿಯ ಲಿಂಗದ ಮೇಲೆ ಆಕೆಯ ತಲೆಗೂದಲುಗಳ ಗುರುತುಗಳಿವೆ. ಈ ಗ್ರಾಮವು ಪುಣ್ಯಕ್ಷೇತ್ರವೆಂದು ಈಗಲೂ ಭಾವಿಸಲ್ಪಟ್ಟಿದೆ.

ಕೋಳೂರು ಕೊಡಗೂಸೆಂದು ಆಕೆಯ ಹೆಸರು ಗಣಸಹಸ್ರದಲ್ಲಿ ಬಂದಿದೆ. ಅವಳು ಬಹಳ ಹಿಂದಿನವಳು. ಅನೇಕ ಕವಿಗಳು ಅವಳ ಚರಿತ್ರೆಯನ್ನು ಬಹು ಸುಂದರವಾಗಿ ತಮ್ಮ ಕವನಗಳಲ್ಲಿ ವರ್ಣಿಸಿದ್ದಾರೆ.

ದೇವಿಯರ ತ್ರಿವಿದಿಯಲ್ಲಿ ಆಕೆಯ ಉಲ್ಲೇಖವು ಇದ್ದುದು ಹೇಗೆಂದರೆ—

ಬಾಲವಯದಲಿ ಸತತ । ಪಾಲನೀಶಗೆ ಕುಡಿಸಿ
ಸಾಲೋಕ್ಯ ಪದವ ಮೀರಿ ನಿಜದೊಳು ನಿಂದ
ಕೋಳೂರು ಹೆಣ್ಣೆ ಶರಣಾಗು.

ಮಾದರ ಚನ್ನಯ್ಯ.

ಮಾದರ ಚನ್ನಯ್ಯನು ಶಿವಶರಣರಲ್ಲಿ ಅತ್ಯಂತ ಪ್ರಖ್ಯಾತನು. ಅವನನ್ನು ಸ್ಮರಿಸದ ಯಾವ ವೀರಶೈವ ಕವಿಯೂ ವಚನಕಾರನೂ ಇರುವದಿಲ್ಲ. ಬಸವೇಶ್ವರನು ತನ್ನ ವಚನಗಳಲ್ಲಿ ಅವನನ್ನು ಆಗಿಂದಾಗೆ ಸ್ಮರಿಸುತ್ತಾನೆ. ಅವನ ವಿಷಯವಾಗಿ ವೀರಶೈವ ಗ್ರಂಥಕಾರರು ಇಷ್ಟು ಪೂಜ್ಯಭಾವವನ್ನು ತಾಳಿದ್ದಾರೆ.

ಚನ್ನಯ್ಯನು ಜಾತಿಯಿಂದ ಮಾದರನು. ಆದರೂ ಅವನು ಅತ್ಯಂತ ಜ್ಞಾನಿಯು. ಅವನು ವಚನಕಾರನೂ ಇದ್ದಾನೆ. ನಮಗೆ ದೊರೆದ ಅವನ ಹತ್ತು ವಚನಗಳಲ್ಲಿ ಕೆಲವುಗಳನ್ನು ಮಾತ್ರ ನಾವು ಈ ಚರಿತ್ರೆಯ ಅಂತ್ಯದಲ್ಲಿ ಕೊಟ್ಟಿದ್ದೇವೆ. ಅವನ ಒಂದು ವಚನದಿಂದ ಅವನು ಮೊದಲು ಚರ್ಮವನ್ನು ಹದಮಾಡಿ ಜನರು ಮೆಟ್ಟುವ ಜೋಡುಗಳನ್ನು ಮಾಡುವ ಕಾಯಕವನ್ನು ಕೈಕೊಂಡಿದ್ದನೆಂದು ತೋರುತ್ತದೆ. ಆದರೆ ಮುಂದೆ ಅವನು ಅಡವಿಗೆ ಹೋಗಿ ಹುಲ್ಲನ್ನು ಕೊಯ್ದು ಪಟ್ಟಣದಲ್ಲಿ ತಂದುಹಾಕುವ ಕಾಯಕವನ್ನು ಕೈಕೊಂಡನು.

ಮಾದರ ಚನ್ನಯ್ಯನು ಪ್ರಸಿದ್ಧಿಗೆ ಬಂದದ್ದು ತಮಿಳು ದೇಶದಲ್ಲಿದ್ದ ಕಾಂಚೀ ಪಟ್ಟಣದಲ್ಲಿ. ಆದರೆ ಅವನು ಕನ್ನಡ ಭಾಷೆಯಲ್ಲಿ ವಚನಗಳನ್ನು ರಚಿಸಿರುವದರಿಂದ ಅವನು ಕನ್ನಡಿಗನಾಗಿದ್ದನೆಂಬದು ಪ್ರಸ್ಪಷ್ಟವು. ಅವನು ಮೊದಲು ಕರ್ನಾಟಕದಲ್ಲಿದ್ದು ಹಿಂದುಗಡೆ ತಮಿಳು ದೇಶಕ್ಕೆ ಹೋಗಿರಬಹುದೆಂದು ತೋರುತ್ತದೆ.

ಚನ್ನಯ್ಯನು ಕಾಂಚೀಪಟ್ಟಣದಲ್ಲಿದ್ದಾಗ್ಗೆ ಕರಿಕಾಲಚೋಳನು ರಾಜ್ಯವಾಳುತ್ತಿದ್ದನು. ಈ ರಾಜನು ಕ್ರಿ. ಶ. ೧೦೭೦ ರಿಂದ ೧೧೨೦ ರವರೆಗೆ ಅತ್ಯಂತ ಘನತೆಯಿಂದ ರಾಜ್ಯವಾಳಿದನು. ಅವನಿಗೆ ರಾಜೇಂದ್ರ ಚೋಳ. ಮತ್ತು ಕುಲೋತ್ತುಂಗ ಚೋಳ ಎಂಬ ಹೆಸರುಗಳೂ ಇದ್ದವು.[1] ಅವನು ಅತ್ಯಂತ ಶಿವಮತಾಭಿಮಾನಿಯು. ಅವನು ತಮಿಳು ವಾಙ್ಮಯದಲ್ಲಿ ಅತ್ಯಂತ ಪ್ರಸಿದ್ಧಿಯನ್ನು ಹೊಂದಿರುವ ಪಿರಿಯ

(1) History of the Shri Vaishnawas by T. A. Gopinathrao P. 38 publihed by the University of Madras

ಪುರಾಣವನ್ನು ಬರೆಯಿಸಿದನು. ಕ್ರಿ. ಶ. ೧೦೭೬ ರಿಂದ ೧೧೨೬ ರ ವರೆಗೆ ಕಲ್ಯಾಣ ಪಟ್ಟಣದಲ್ಲಿ ರಾಜ್ಯವಾಳಿದ ಚಾಲುಕ್ಯರ ರಾಜನಾದ ೬ನೇ ವಿಕ್ರಮಾದಿತ್ಯನ ಕೂಡ ಅವನು ಅನೇಕ ತುಮುಲಯುದ್ಧಗಳನ್ನು ನಡಿಸಿದನು. ಆದರೆ ಕಡೆಗೆ ವಿಕ್ರಮಾದಿತ್ಯನು ಅವನ ಮಗಳನ್ನು ಲಗ್ನವಾಗಿ ಉಭಯತರು ಸಂಧಾನ ಮಾಡಿಕೊಂಡಂತೆ ತೋರುತ್ತದೆ. ಆ ಕಾಲದಲ್ಲಿ ಕರ್ನಾಟಕಸ್ತರಿಗೂ ತಮಿಳರಿಗೂ ಅನೇಕ ರೀತಿಯಿಂದ ನಿಕಟ ಸಂಬಂಧವಿದ್ದಿತು. ತಮಿಳರ ೬೩ ಪುರಾತನರನ್ನು ವೀರಶೈವರು ಈಗಲೂ ಪೂಜ್ಯಭಾವದಿಂದ ಕಾಣುತ್ತಾರೆ. ಹಾಗೆಯೇ ಅನೇಕ ಶಿವಶರಣರು ತಮಿಳು ದೇಶಕ್ಕೆ ಹೋಗಿ ಅಲ್ಲಿ ತಮ್ಮ ಶಿವಾನುಭವದ ನಡೆಯನ್ನು ಪಸರಿಸಿದ್ದೂ ಕಂಡುಬರುತ್ತಿದೆ. ಆದ್ದರಿಂದ ಚನ್ನಯ್ಯನು ಇವರಂತೆಯೇ ಕರ್ನಾಟಕವನ್ನು ಬಿಟ್ಟು ಕಾಂಚೀ ಪಟ್ಟಣಕ್ಕೆ ಹೋಗಿ ಅಲ್ಲಿ ವಾಸ ಮಾಡಿದನೆಂದು ತೋರುತ್ತದೆ.

ಕರಿಕಾಲಚೋಳನು ಬಸವೇಶ್ವರನಕಿಂತಲೂ ಮೊದಲಿನವನು. ಮತ್ತು ಬಸವೇಶ್ವರನು ತನ್ನ ವಚನಗಳಲ್ಲಿ ಚನ್ನಯ್ಯನನ್ನು ಆಗಿಂದಾಗ್ಗೆ ಉಲ್ಲೇಖಿಸುತ್ತಾನೆ. ಆದ್ದರಿಂದ ಚನ್ನಯ್ಯನು ಬಸವೇಶ್ವರನಕಿಂತಲೂ ಸ್ವಲ್ಪ ಕಾಲ ಹಿಂದಿನವನೆಂದು ತೋರುತ್ತದೆ.

ಚನ್ನಯ್ಯನು ಗುರುಕಾರುಣ್ಯವನ್ನು ಪಡೆದು ಇಷ್ಟಲಿಂಗಧಾರಿಯಾಗಿದ್ದನೆಂದು ಅವನ ಎಲ್ಲ ಚರಿತ್ರೆಗಳಲ್ಲಿ ಹೇಳಿದೆ. ಮಹಾಕವಿಯಾದ ಹರಿಹರನು ಅವನು ಲಿಂಗಾಭಿಮಾನಿಯೂ ಲಿಂಗಪ್ರಾಣಿಯೂ ಆಗಿದ್ದನೆಂದು ಅವನನ್ನು ಹೊಗಳುತ್ತಾನೆ. ಚನ್ನಯ್ಯನ ಚರಿತ್ರೆಯಿಂದ ಅವನು ಪ್ರಸಾದಿಸ್ಥಲವನ್ನು ಹೊಂದಿ ಎಲ್ಲವನ್ನೂ ಲಿಂಗಾರ್ಪಣಮಾಡಿ ಲಿಂಗ ಭೋಗೋಪಭೋಗಿಯಾಗಿ ಗುಪ್ತಭಕ್ತಿಯಿಂದ ಆಚರಿಸುತ್ತಿದ್ದನೆಂದು ತಿಳಿಯುತ್ತದೆ.

ಚನ್ನಯ್ಯನು ಕರಿಕಾಲಚೋಳನ ರಾಜ್ಯದಲ್ಲಿ ಇರಹತ್ತಿದ ಬಳಿಕ ಹುಲ್ಲುಕೊಯ್ಯುವ ಕಾಯಕವನ್ನು ಅವನು ಪಾಲಿಸುವವನಾಗಿ ಹುಲ್ಲನ್ನು ಕೊಯ್ದು ಅದನ್ನು ರಾಜನ ಕುದುರೆಗಳ ಲಾಯದಲ್ಲಿ ಹಾಕುವ ಕೆಲಸವನ್ನು ಕೈಕೊಂಡನು. ಮುಂದೆ ಹುಲ್ಲುಕೊಯ್ಯುವ ಅಲ್ಲಿಯ ಕಬಾಡಿಗರ ಒಡೆಯನೂ ಆದನು. ಅವನು ದಿನಾಲು ಈ ಕಬಾಡಿಗರನ್ನು

ಕೂಡಿಕೊಂಡು ಕಾನನಕ್ಕೆ ಹೋಗಿ ಅವರಿಂದ ಹುಲ್ಲನ್ನು ಕೊಯ್ಯಿಸಿ ಅದನ್ನು ಹೊರೆಗಟ್ಟಿಕೊಂಡು ರಾಜಧಾನಿಗೆ ಬಂದು ಅರಸನ ಲಾಯದಲ್ಲಿ ಅದನ್ನು ಚಲ್ಲಿಸುವನು.

ಚನ್ನಯ್ಯನು ಹೀಗೆ ಕಾನನದಲ್ಲಿ ಸಂಚರಿಸುವಾಗ್ಗೆ ಶಿವಾನುಭವದಲ್ಲಿಯ ಪ್ರಸಾದಿಯ ಆಚರಣೆಯಂತೆ ಆಚರಿಸುವನು. ಅವನು ಸುಂದರವಾದ ವಸ್ತುಗಳನ್ನು ಅಲ್ಲಲ್ಲಿ ಕಂಡಕೂಡಲೆ ಅವುಗಳನ್ನು ಮೊದಲು ಲಿಂಗಾರ್ಪಿತಮಾಡಿ ಅನುಭವಿಸುವನು. ಹರಿಹರ ಕವಿಯು ಹೇಳುವದೇನೆಂದರೆ—ಅವನು ತನ್ನ ಕಣ್ಣುಗಳ ಮುಖದಿಂದಲೇ ಸೌಂದರ್ಯವನ್ನು ಶಿವನಿಗರ್ಪಿಸುವನು. ಕೇಳುವಂಥ ಸವಿನುಡಿಗಳನ್ನು ಕಿವಿಮುಖದಿಂದಲೇ ಅರ್ಪಿಸುವನು. ವಾಸಿಸುವ ಗಂಧವನ್ನು ನಾಸಿಕದ ಮುಖದಿಂದಲೇ ಶಿವನಿಗೆ ಅರ್ಪಿಸುವನು. ಸೋಂಕಿದ ಮೃದುದ್ರವ್ಯಗಳನ್ನು ಅಂಗದಿಂದಲೇ ಶಿವಾರ್ಪಣಮಾಡುವನು. ಚಿತ್ತದಲ್ಲಿ ಉಂಟಾಗುವ ನೆನಹನ್ನು ಮನದಿಂದಲೇ ಲಿಂಗಾರ್ಪಣ ಮಾಡುವನು. ಹೀಗೆ ಅವನು ಲಿಂಗಾರ್ಪಣ ಮಾಡುತ್ತ ಕಾಂತಾರ ಮಧ್ಯದಲ್ಲಿ ಪರಮಾತ್ಮನ ನೆನಹಿನಲ್ಲಿ ಸಂಚರಿಸುತ್ತ ತನ್ನ ಹುಲ್ಲಿನ ಕಾಯಕವನ್ನು ಮಾಡುವನು. ಅದು ತೀರಿದ ಬಳಿಕ ಅವನು ಯಾರಿಗೂ ತಿಳಿಯದಂತೆ ಒಂದು ಏಕಾಂತಸ್ಥಳಕ್ಕೆ ಹೋಗಿ ಮುಗಮುಗಿಸುವ ಪುಷ್ಪಗಳ ಮಂಟಪವನ್ನು ಹುಡಿಕಿಕೊಂಡು ಅದರ ತಣ್ಣೆಳಲಲ್ಲಿ ಉಸಿಕಿನ ಹಾಸಿಕೆಯ ಮೇಲೆ ಒಂದು ವಸ್ತ್ರವನ್ನು ಹಾಸಿ ಅಲ್ಲಿ ಪರಮಾತ್ಮನನ್ನು ನೆನೆಯುತ್ತ ಕೆಲ ಹೊತ್ತು ಕುಳ್ಳಿರುವನು. ಆಮೇಲೆ ತನ್ನ ಸೆಜ್ಜೆಯಲ್ಲಿದ್ದ ಇಷ್ಟಲಿಂಗವನ್ನು ಭಕ್ತಿಯಿಂದ ಹೊರಗೆ ಕೈಯ್ಯಲ್ಲಿ ತೆಗೆದುಕೊಂಡು ಅದಕ್ಕೆ ನಮಸ್ಕರಿಸಿ ತಿಳಿಯಾದ ಅಗ್ಗವಡೆಯನ್ನು ಎರೆದು, ಮಕರಂದವನ್ನು ತೀಡುವ ಅಲ್ಲಿದ್ದ ಕಾಡು ಹೂವುಗಳನ್ನು ಅದಕ್ಕೆ ಸಮರ್ಪಣಮಾಡಿ ಲಿಂಗಪೂಜೆಯನ್ನು ಮಾಡುವನು. ಆಮೇಲೆ ಅಲ್ಲಿದ್ದ ಫಲಗಳನ್ನು ಅರ್ಪಿಸಿ ಪರಮಾತ್ಮನನ್ನು ಕೊಂಡಾಡುತ್ತ ಲಿಂಗಾರ್ಪಿತದಿಂದ ಪ್ರಸಾದ ಗ್ರಹಣ ಮಾಡುವನು. ಆಮೇಲೆ ತನ್ನ ಮೊದಲಿನ ಸ್ಥಳಕ್ಕೆ ಬಂದು ಸಿದ್ಧವಾಗಿದ್ದ ಹುಲ್ಲಿನ ಹೊರೆಗಳನ್ನು ಹೊರಿಸಿಕೊಂಡು ಚೋಳ ರಾಜನ ಲಾಯದಲ್ಲಿ ಒಗಿಸಿ ತನ್ನ ಗೃಹಕ್ಕೆ ಬರುವನು. ಆಗ ಅವನ ಹೆಂಡತಿಯು ಅವನನ್ನು ಆನಂದದಿಂದ ಕಂಡು ಮನೆಯಲ್ಲಿದ್ದ ಊಟದ ಪದಾರ್ಥಗಳನ್ನು ಅವನಿಗೆ

ಉಣಬಡಿಸುವಳು. ಚನ್ನಯ್ಯನು ಅತ್ಯಂತ ಬಡವನು. ಆದರೂ ತನಗೆ ನೀಡಿದ ಪದಾರ್ಥಗಳನ್ನು ಅವೃತಸಮಾನವಾಗಿ ಕಂಡು ಮೊದಲು ಅವುಗಳನ್ನು ಲಿಂಗಾರ್ಪಿತ ಮಾಡಿ ಅವುಗಳನ್ನು ಪ್ರಸಾದರೂಪಾಗಿ ಸ್ವೀಕರಿಸುವನು. ಹೀಗೆ ಉಭಯದಂಪತಿಗಳು ತಮ್ಮ ಕಾಯಕವನ್ನು ನಡಿಸುತ್ತ ಲಿಂಗಭಕ್ತಿಯನ್ನು ಅತ್ಯಂತ ಗೌಪ್ಯತರವಾಗಿ ಮಾಡುತ ಶಿವಾನುಭವಿಗಳಾಗಿ ಆನಂದದಿಂದ ಕಾಲಕಳೆಯುತ್ತಿದ್ದರು. ಇವರು ಇಂಥ ಲಿಂಗಭಕ್ತಿಯುಳ್ಳವರೆಂಬುದನ್ನು ಯಾರೂ ಅರಿತಿರಲಿಲ್ಲ. ಈಪ್ರಕಾರ ಚನ್ನಯ್ಯನು ತನ್ನ ಹೆಂಡತಿಯೊಡನೆ ೬೦ ವರುಷಗಳ ವರೆಗೆ ಜೋಳ ರಾಜನ ರಾಜ್ಯದಲ್ಲಿ ಹುಲ್ಲಿನ ಕಾಯಕ ಮಾಡುತ್ತ ವಾಸಿಸಿದನು.

ಪರಮಾತ್ಮನು ಚನ್ನಯ್ಯನ ಈ ಪ್ರಸಾದಿಯ ಉಚ್ಚತರ ನಡೆಗೆ ಅತ್ಯಂತ ಪ್ರೀತನಾಗಿ ಇನ್ನುಮೇಲೆ ಇವನ ಭಕ್ತಿಯನ್ನ ಜಗತ್ತಿನಲ್ಲಿ ಮೆರೆಯಿಸಬೇಕೆಂದು ಬಯಸಿ ಕೆಳಗೆ ಕಾಣಿಸಿದ ಒಂದು ಉಪಾಯವನ್ನು ಯೋಜಿಸಿದನು.

ಒಂದು ದಿನ ಚನ್ನಯ್ಯನು ನಿತ್ಯದಂತೆ ಹುಲ್ಲು ಕೊಯ್ದು ಜೋಳನ ಲಾಯದಲ್ಲಿ ಅದನ್ನು ಒಗೆದು ಮನೆಗೆ ಬಂದು ಪರಮಾತ್ಮನ ಧ್ಯಾನ ದಲ್ಲಿದ್ದಾಗ, ಅವನಿಗೆ ಅತ್ಯಂತ ಶ್ರಮವಾದುದನ್ನು ಅವನ ಹೆಂಡತಿಯು ಕಂಡು ಮನೆಯಲ್ಲಿ ಏನೂ ಇಲ್ಲದ್ದರಿಂದ ತೆಳ್ಳಗಿನ ಅಂಬಿಲಿಯನ್ನು ಸಿದ್ಧಮಾಡಿ ಅವನ ಮುಂದೆ ತಂದು ಇಟ್ಟಳು. ಚನ್ನಯ್ಯನು ಅದನ್ನು ಕಂಡು ಲಿಂಗಾರ್ಪಿತಭಾವದಿಂದ ಅದನ್ನು ಸವಿಯಹತ್ತಿದನು. ಆಗ ಅದು ನಿತ್ಯದಕಿಂತಲೂ ನೂರ್ಮಡಿ ಹೆಚ್ಚು ಸವಿಯಾಗಿ ರುಚಿಸಿತು. ಅವನು ಆ ರುಚಿಯನ್ನು ತನ್ನ ಅಂತರ್ಲಿಂಗಕ್ಕೆ ಸಮರ್ಪಿಸಲು ಪರಮಾತ್ಮನು ರೂಪುದೋರಿ ತನ್ನೊಡನೆ ಉಣ್ಣುವಂತೆ ಅವನಿಗೆ ತೋರಿತು. ಆಗ ಆ ಉಭಯತರು ಆ ಅಂಬಿಲಿಯನ್ನು ಸುರಿದುಕೊ ಳ್ಳಹತ್ತಿದರು. ಹೀಗೆ ಚನ್ನಯ್ಯನು ಸುರಿದುಕೊಳ್ಳುವಾಗ ಶಿವಪದವು ತನಗೆ ಸಾಧ್ಯವಾದಷ್ಟು ಸುಖವು ಅವನಿಗೆ ಆಯಿತು. ಈ ಸುಖದಲ್ಲಿಯೇ ಅವನು ತನ್ನ ಪ್ರಸಾದ ಸೇವನೆಯನ್ನು ಮಾಡುತ್ತ ಆ ದಿನ ಓಲಾ ಡಿದನು.

ಹೀಗಿರುವಲ್ಲಿ ಮರುದಿನ ಮುಂಜಾವಿನಲ್ಲಿ ಇತ್ತ ಕರಿಕಾಲಜೋಳನು ಎಂದಿನಂತೆ ಶಿವಾಲಯಕ್ಕೆ ಹೋಗಿ ದೇವರ ದರ್ಶನವನ್ನು ಹೊಂದಿದ

ಬಳಿಕ ಪರಮಾತ್ಮನನ್ನು ಒಲಿಸಿಕೊಂಡು ಅವನನ್ನು ಪ್ರತ್ಯಕ್ಷ ಮಾಡಿ ಕೊಳ್ಳಬೇಕೆಂಬ ಉತ್ಕಟೇಚ್ಛೆಯು ಅವನಲ್ಲಿ ಉಂಟಾಯಿತು. ಅದಕ್ಕೋಸ್ಕರ ಅವನು ಸರ್ವಸನ್ನಾಹಗಳನ್ನು ಮಾಡಿಕೊಂಡನು. ಅವನು ಪೂಜಾ ಸಾಮಗ್ರಿಗಳನ್ನು ಅಪರಿಮಿತವಾಗಿ ಶೇಖರಿಸಿದನು. ವಿಭೂತಿ ರುದ್ರಾ ಕ್ಷಿಗಳನ್ನು ಧಾರಣಮಾಡಿಕೊಂಡು ಹೊಸತಾದ ಅನೇಕ ಬಗೆಯ ನೂತನ ವಸ್ತ್ರಗಳನ್ನೂ ಬೆಲೆಯುಳ್ಳ ರತ್ನಾಭರಣಗಳನ್ನೂ ತರಿಸಿ ದೇವರಿಗರ್ಪಿಸಿ ಅತ್ಯಂತ ಭಕ್ತಿಭಾವದಿಂದ ಪರಮಾತ್ಮನನ್ನು ಭಜಿಸುವವನಾದನು. ಅವನು ಬಹಳ ವೇಳೆ ಹೀಗೆ ಭಜಿಸಿದ ಬಳಿಕ ತಾನು ಸಿದ್ಧಪಡಿಸಿ ಕೊಂಡಿದ್ದ ರುಚಿಕರವಾದ ಶಾಕಗಳನ್ನೂ ಜೋನವನ್ನೂ ಆಹಾರದ ಅನೇಕತರದ ಜೀನಸುಗಳನ್ನೂ ನೂರಾರು ಭಂಗಾರದ ಹರಿವಾಣಗ ಳಲ್ಲಿ ತುಂಬಿಸಿ ಅವುಗಳನ್ನು ದೇವರೆದುರಿಗೆ ಇಟ್ಟು, ನಾನಾವಿಧ ವಾದ್ಯ ವೈಭವದಲ್ಲಿ ಪರಮಾತ್ಮನನ್ನು ಬಹಳಹೊತ್ತು ಸ್ತುತಿಸಿದನು. ಆಗ ಅವನಲ್ಲಿ ಉಂಟಾದ ಭಕ್ತಿಯ ಉದ್ರೇಕಕ್ಕೆ ಪಾರಾವಾರವಿಲ್ಲ. ಕಡೆಗೆ ಅವನು ದೇವರಿಗೆ ಉದ್ದೇಶಿಸಿ—ಪರಮಾತ್ಮನೇ ನಾನೀಗ ನಿನ್ನಗೋಸ್ಕರ ಅತ್ಯಂತ ರುಚಿಕರವಾದ ಪದಾರ್ಥಗಳನ್ನು ತಂದಿದ್ದೇನೆ. ಇದನ್ನು ನೀನು ಪ್ರತ್ಯಕ್ಷ ಸೇವಿಸು ಎಂದು ಹೇಳಿ ದೇವರೆದುರಿಗೆ ಅವುಗಳನ್ನಿಟ್ಟು ಮುಂದೆ ಪರದೆಯನ್ನು ಎಳೆದು ದೇವರು ಉಣ್ಣುವ ಸಪ್ಪಳ ಕೇಳಬೇ ಕೆಂದು ಬಯಸಿ ಅದನ್ನು ಆಲಿಸಬೇಕೆಂದು ಹಿಂದೆ ನಿಂತುಕೊಂಡನು. ಹೀಗೆ ಕೆಲಹೊತ್ತಾದ ಬಳಿಕ ತೆರೆಯೊಳಗಿಂದ ಅವನು ಒಳಗೆ ಇಣಕಿ ಹಾಕಿ ನೋಡಲು ಆಹಾರ ಪದಾರ್ಥಗಳಿಲ್ಲವನ್ನು ದೇವರು ಏನೂ ಲಕ್ಷಿ ಸದೆ ಇದ್ದಕ್ಕಿದ್ದಹಾಗೆಯೇ ಸ್ತಬ್ಧವಾಗಿ ಇರುವದನ್ನು ಕಂಡು ತೆರೆಯನ್ನು ತೆರೆದು—ಪರಮಾತ್ಮನೇ, ನಾನು ಕೆಟ್ಟೆನು ಕೆಟ್ಟೆನು, ನನ್ನ ಸೇವೆಯು ನಿನಗೆ ಮುಟ್ಟದೆಹೋಯಿತು. ನಾನು ಇನ್ನುಮೇಲೆ ಬದುಕಿರಲಾರೆನು, ಎಂದು ನುಡಿಯುತ್ತ ತನ್ನ ಕತ್ತಿಯನ್ನು ಒರೆಯೊಳಗಿಂದ ಹಿರಿದು ತನ್ನ ಕೊರಳನ್ನು ಕತ್ತರಿಸಿಕೊಳ್ಳುವಷ್ಟರಲ್ಲಿ ಪರಮಾತ್ಮನು ಅವನಿಗೆ ಪ್ರತ್ಯಕ್ಷನಾಗಿ— ಜೋಳನೇ, ನಿನಗೆಸ್ಟೂ ಸೈರಣೆ ಇಲ್ಲವಲ್ಲಾ! ನಾನು ಮಾಪರ ಚನ್ನಯ್ಯನೊಡನೆ ಉಂಡಿದ್ದೇನೆ. ನನಗೆ ಹಸಿವೆ ಇಲ್ಲ. ಚನ್ನ ಯ್ಯನು ಸಿದ್ಧಪಡಿಸಿದ ಅಂಬಿಲಿಯ ರುಚಿಯನ್ನು ನಾನೇನು ನಿನಗೆ ಹೇಳಲಿ! ಅಂಥ ರುಚಿಯಾದ ಅಂಬಿಲಿಯು ಜೋಳಾದಿಗಳಿಗೆ ದೊರೆಯದು.

ನೀನು ಮಾಡಿದ ದೇವಾನ್ನ ದಿವ್ಯಾನ್ನಗಳ ರುಚಿಯು ಅದಕ್ಕೆ ಏನೂ ಸರಿಬಾರದು ಎಂದು ಹೇಳಿ ಆ ಲಿಂಗದಲ್ಲಿಯೇ ಅಡಗಿದನು.

ಜೋಳರಾಜನು ಈ ನುಡಿಗಳನ್ನು ಕೇಳಿ ಅತ್ಯಂತ ಬೆರಗಾದನು. ಅವನು ತನ್ನ ರಾಜ್ಯದಲ್ಲಿ ಪರಮಾತ್ಮನೊಡನೆ ಉಂಡ ಮಹಾತ್ಮನೂ ಒಬ್ಬನು ಇದ್ದಾನೆಂಬುದು ತಿಳಿಯಿತು. ಆಗ ಅವನ ದರ್ಶನವನ್ನು ಹೊಂದ ಬೇಕೆಂಬ ಬಲವಾದ ಕಾಂಕ್ಷೆಯು ಉತ್ಪನ್ನವಾಯಿತು. ಆದ್ದರಿಂದ ಅವನನ್ನು ಹುಡುಕುತ್ತ ದಾರಿಗುಂಟ ನಡೆದನು. ಅವನು ಹೋಗುವಾಗ—ಚನ್ನಯ್ಯನೆಂಬ ಶರಣನನ್ನು ನೀವು ಕಂಡಿರುವಿರೇ ಹೇಗೆ? ಅವನು ಪರಮಾತ್ಮನೊಡನೆ ಉಂಡಿದ್ದಾನೆ. ಅಂಥ ಶಿವಶರಣನನ್ನು ತೋರಿಸಿರಿ ಎಂದು ಜನರಿಗೆ ಕೇಳುತ್ತ ಹೊರಟನು. ಸುತ್ತಲೂ ಚಾರರನ್ನ ಕಳಿಸಿದನು. ಈ ಚಾರರಲ್ಲಿ ಕೆಲವರು ಅಕಸ್ಮಾತ್ತಾಗಿ ಮೂಗರ ಕೇರಿಯನ್ನು ಹೊಕ್ಕು ಇಲ್ಲಿ ಚನ್ನಯ್ಯನೆಂಬುವವನು ಇದ್ದಾನೆಯೇ ಎಂದು ಕೇಳಲು ಅಲ್ಲಿದ್ದವರು ಅವನು ಇದ್ದಾನೆ ಎಂದು ಅವನ ಮನೆಯನ್ನು ಅವರಿಗೆ ತೋರಿಸಲಾಗಿ ಅವರು ಅವನ ಮನೆಯನ್ನು ಪ್ರವೇಶಿಸಿ ಒಳಗೆ ಅವನು ಇರುವದನ್ನು ಕಂಡು ಅರಸನಲ್ಲಿಗೆ ಬಂದು ಅದನ್ನು ತಿಳಿಸಿದರು. ಆಗ ಅರಸನು ಅತ್ಯಂತ ಆನಂದಬಟ್ಟು ತನ್ನ ಎಲ್ಲ ಪರಿವಾರದೊಡನೆ ಅತಿ ಸಂಭ್ರಮದಿಂದ ಮಾದಿಗ ಕೇರಿಯನ್ನು ಪ್ರವೇಶಿಸಿದನು.

ಚನ್ನಯ್ಯನು ಅವರು ಬರುವದನ್ನು ಕಂಡು—ನನ್ನ ಮನೆಗೆ ಈ ಅರಮನೆಯ ಚಾರರೇಕೆ, ಅರಸನೇಕೆ? ಶಿವಶಿವಾ ಮಹಾದೇವಾ, ನಾನು ಭಕ್ತನೆಂದು ಜನರು ಅರಿಯದಿದ್ದರೆ ಮಾತ್ರ ನಾನು ಬದುಕುವೆನು. ಅವರು ನನ್ನನ್ನು ಅರಿತ ಬಳಿಕ ನಾನು ಹೇಗೆ ಬದುಕಲಿ? ಹರಹರಾ ನಾನೇನು ತಪ್ಪುಮಾಡಿದೆನು? ಎಂದು ನುಡಿಯುತ್ತಿರಲು ಜೋಳರಾಜನು ರಾಜಪುತ್ರರನ್ನು ಕೂಡಿಕೊಂಡು ಅವನಿದ್ದಲ್ಲಿಗೆ ಬಂದು ಅವನಿಗೆ ಸಾಷ್ಟಾಂಗವೆರಗಿದನು.

ಆಗ ಚನ್ನಯ್ಯನು ಅರಸನಿಗೆ—ಜೋಳರಾಜನೇ ನಾನು ಮಾದರನು. ನನ್ನ ಜಾತಿಯನ್ನು ನೋಡದೆ ಹೀಗೆ ನೀನು ಮಾಡಬೇಕೇ? ಎಂದು ಕಂಪಿಸಿ ನುಡಿಯುತ್ತ—ರಾಜನೇ ನನ್ನ ಕಾಲನ್ನು ಬಿಡು ನಿನ್ನಾಣೆ, ಎನ್ನಾಣೆ ಎಂದು ಅನ್ನುತ್ತಿರಲು ಅರಸನು ಅವನಿಗೆ—ಪರಮಾತ್ಮನು

ಒಲಿದ ಜಾತಿಯೇ ನಿರ್ಮಲನಾದದ್ದು. ಪರಮಾತ್ಮನು ನಿನ್ನೊಡನೆ ಉಂಡಿದ್ದಾನೆ. ನಿನ್ನ ಜಾತಿಗೆ ಆವ ಜಾತಿಯು ಸರಿಯು? ನಿನ್ನ ಕೆರೆ ಹಿಗೆ ನನ್ನ ಶಿರಸ್ಸು ಸಹ ಸರಿಯಲ್ಲ, ಎಂದು ಅಂದು—ಚನ್ನಯ್ಯನೇ ಪರಮಾತ್ಮನಿದ್ದಲ್ಲಿಗೆ ನಾವು ಈಗ ಹೋಗೋಣ ನಡೆ, ಕುಲಗೋತ್ರದ ರೀತಿಯನ್ನು ಅವನಲ್ಲಿ ಕೇಳೋಣ, ಎಂದು ನುಡಿದು ಚನ್ನಯ್ಯನನ್ನು ಆನೆಯ ಮೇಲೆ ಕುಳ್ಳಿರಿಸಿ, ತಾನು ಕುದುರೆಯನ್ನೇರಿ ಅದರ ಮುಂದೆ ಹೋಗುತ್ತ ರಾಜಕುವಾರರ ಸಂದಣಿಯಲ್ಲಿ ಚನ್ನಯ್ಯನನ್ನು ಸಂಭ್ರಮದಿಂದ ಕರೆದುಕೊಂಡು ದೇವಾಲಯದ ಮುಂದೆ ಬಂದು ಇಳಿದನು.

ಆಮೇಲೆ ಚನ್ನಯ್ಯನು ಶಿವಲಿಂಗದಿದಿರಿಗೆ ಬಂದು ನಿಂತು—ಪರಮಾತ್ಮನೇ, ನಾನು ಯಾವ ಅಪರಾಧವನ್ನು ಮಾಡಿದೆನು? ಜೋಳರಾಜನಿಂದ ಹೀಗೆ ನನ್ನನ್ನು ಹಿಡಿಸಿಕೊಂಡು ಬರಬೇಕೇ? ನಾನು ನಿನಗೆ ಏನು ಮಾಡಿದೆನು? ನಾನು ನಿನ್ನಲ್ಲಿ ಯಾವ ಪದವಿಯನ್ನು ಬೇಡಲಿಲ್ಲ. ನಾನು ಗುಪ್ತಭಕ್ತಿಯನ್ನು ಮಾಡುತ್ತ ಸುಖವಾಗಿದ್ದನು. ನನ್ನ ಭಕ್ತಿಯು ಈಗ ಜಗತ್ತಿಗೆ ತೋರಿತು. ನಾನು ಇನ್ನುಮೇಲೆ ಜಗತ್ತಿನಲ್ಲಿ ಇರಲಾರೆನು ಎಂದು ನುಡಿದು ಅಲಗನ್ನು ಕಿತ್ತು ತನ್ನ ಕೊರಳನ್ನು ಅರಿದು ಪರಮಾತ್ಮನಿಗೆ ಅದನ್ನು ಅರ್ಪಿಸಲು ಸಿದ್ಧನಾದನು.

ಅಷ್ಟರಲ್ಲಿ ಶಿವಲಿಂಗದೊಳಗಿಂದ ಶಿವನು ಪ್ರತ್ಯಕ್ಷನಾಗಿ ಚನ್ನಯ್ಯನ ಕರವನ್ನು ಹಿಡಿದು—ಚನ್ನಯ್ಯನೇ, ಹೀಗೆ ಅವಿಚಾರದಿಂದ ನಡೆಯಬಹುದೇ? ನಾನು ನಿನ್ನ ರೀತಿಯನ್ನು ಜೋಳನಲ್ಲಿ ಹೇಳಿದರೆ ಕೋಪವೇಕೆ? ಎಂದು ಅಂದು ಜೋಳರಾಜನಿಗೆ—ಜೋಳನೇ ಇದು ನೋಡು ಚನ್ನಯ್ಯನ ಈ ಗುಪ್ತಭಕ್ತಿಯನ್ನು. ಅವನ ಭಕ್ತಿಯಲ್ಲಿ ಆಡಂಬರವೆಂಬುದಿಲ್ಲ. ಮಾದರ ಚನ್ನನೇ, ನೀನೇ ನನ್ನ ನಿಜವಾದ ಭಕ್ತನು. ನಿನ್ನ ಗುಪ್ತ ಪೂಜೆಯು ನನಗೆ ಪ್ರಿಯವಾಯಿತು. ಇನ್ನು ಚನ್ನನು ಜಗತ್ತಿನಲ್ಲಿ ಸೆರೆಯಲಿ ಎಂದು ನುಡಿದು ಲಿಂಗದಲ್ಲಿ ಅಡಗಿದನು. ಆಗ ಕರಿಕಾಲಜೋಳನು ಪ್ರಸಾದದ ರೀತಿಯನ್ನು ಮಾದರ ಚನ್ನಯ್ಯನಿಂದ ಅರಿತವನಾಗಿ ಅವನನ್ನು ಸೇವಿಸುವವನಾದನು. ಚನ್ನಯ್ಯನು ಜೋಳರಾಜ್ಯದಲ್ಲಿ ಇದ್ದು ಅಲ್ಲಿಯೇ ಅವನು ಲಿಂಗಾಂಗ ಸಮರಸ್ಯವನ್ನು ಹೊಂದಿದನು.

ಮಾದರ ಚನ್ನಯ್ಯನು ಉಚ್ಚತರದ ಶಿವಾನುಭವಿಯು. ಅವನು ವಚನಕಾರನೂ ಇದ್ದಾನೆ. ಅವನ ಮುದ್ರಿಕೆಯು 'ಕಯ್ಯುಳಿಗತ್ತಿ ಅಡಿಗೂಂಟಕ್ಕೆಡೆಯಾಗಬೇಡ ಅರಿನಿಜಾತ್ಮ ರಾಮು ರಾಮುನಾ' ೧ ಎಂದಿದೆ. ಮಾದರರು ತಮ್ಮ ಕಾಯಕವನ್ನು ಮಾಡುವಾಗ ಕಯ್ಯಲ್ಲಿ ಉಳಿ ಮತ್ತು ಕತ್ತಿಯನ್ನು ಹಿಡಿದು ಚರ್ಮವನ್ನು ಅಡೆ ಎಂದರೆ ಕಟ್ಟಿಗೆಯ ಫಳಿಯ ಮೇಲೆ ಹಾಕಿ ಆ ಫಳಿಯನ್ನು ಒಂದು ಗೂಟಕ್ಕೆ ಆನಿಸಿ ಕೆತ್ತುತ್ತ ಸ್ವಚ್ಛ ಮಾಡುತ್ತಾರೆ. ಇದರಲ್ಲಿಯೇ ಅವರು ಮುಗ್ನರಾಗಬಾರದು. ಅವರು ತಮ್ಮ ಆತ್ಮನಲ್ಲಿ ಪರಮಾತ್ಮನಿದ್ದಾನೆಂಬುದನ್ನು ಅರಿತುಕೊಳ್ಳಬೇಕು ಎಂದು ಅವನು ಈ ಮುದ್ರಿಕೆಯ ಮೂಲಕ ತನ್ನ ಸಮಾಜದವರನ್ನು ಎಚ್ಚರಿಸುತ್ತಿದ್ದಾನೆ.

ವಚನಗಳು.

(೧) ಸ್ಥೂಲ ಸೂಕ್ಷ್ಮ ಕಾರಣವೆಂಬ ಮೂರು ಕಂಭವ ನಟ್ಟು ಅಗುಚಾಗು ಎಂಬ ದಡಿಗೋಲಿನಲ್ಲಿ ಅಗಡದೆಮ್ಮೆಯ ಚರ್ಮವ ತೆಗೆದು ಉಭಯನಾಮವೆಂಬ ನಾರಿನಲ್ಲಿ ತಿತ್ತಿಯನೊಪ್ಪವ ಮಾಡಿ ಭಾವವೆಂಬ ತಿಗುಡಿನಲ್ಲಿ ಸರ್ವಸಾರವೆಂಬ ಖಾರದಲ್ಲಿ ನೀರ ಹೊಯಿದು ಅಟ್ಟಿಯ ದುರ್ಗುಣ ಕೆಟ್ಟ ಮೆಟ್ಟಡಿಯವರಿಗೆ ಮೆಟ್ಟಿಸಬಂದೆ. ಮೆಟ್ಟಡಿಯ ತಪ್ಪಲ ಕಾಯದೆ ಮೆಟ್ಟಡಿಯ ಬಟ್ಟಿಯ ನೋಡಿಕೊಳ್ಳಿ. ಕೈಯ್ಯುಳಿಗತ್ತಿ ಅಡಿಗೂಂಟಕ್ಕೆಡೆಯಾಗಬೇಡ ಅರಿನಿಜಾತ್ಮರಾಮು ರಾಮುನಾ.

ಭಾವಃ— ಇದರಲ್ಲಿ ಮಾದರ ಚನ್ನಯ್ಯನು ತನ್ನ ಕಾಯಕದ ರೀತಿಯನ್ನು ಹೇಳುವಲ್ಲಿ ಅದಕ್ಕೆ ಪಾರಮಾರ್ಥಿಕ ಸ್ವರೂಪನ್ನು ಕೊಟ್ಟು ಅದರಿಂದ ಹೇಗೆ ಮೋಕ್ಷವನ್ನು ಹೊಂದಬೇಕೆಂಬುದನ್ನು ಹೇಳಿದ್ದಾನೆ. ಇದು ಬೆಡಗಿನ ವಚನವಿದೆ. ಮನುಷ್ಯನಿಗೆ ಸ್ಥೂಲ ಸೂಕ್ಷ್ಮ ಕಾರಣವೆಂಬ ದೇಹಗಳೆಂಬುವಿವೆ. ಅವು ಚರ್ಮವನ್ನು ಹದ ಮಾಡುವಲ್ಲಿ ಬೇಕಾಗುವ ಮೂರು ಕಂಭಗಳಂತೆ ಇವೆ. ಅಲ್ಲದೆ ಈ ಕಾಯಕಕ್ಕೆ ಚರ್ಮ, ದಡಿಗೋಲು, ನಾರು, ತಿಗುಡಿ ಎಂಬ ವನಸ್ಪತಿ, ಖಾರ, ಇವುಗಳನ್ನು

೧. ಕೆಲವು ಕಡೆಗೆ 'ಕಯ್ಯುಳಿಗತ್ತಿ ಅಡಿಗೂಂಟ ಕೆಡೆಯಾಗಬೇಡ ಅರಿನಿಜಾತ್ಮ ರಾಮು ರಾಮುನಾ' ಎಂತಲೂ ಇದೆ.

ಉಪಯೋಗಿಸುವದುಂಟು. ಈ ಸನ್ನಾಹಗಳು ಮನುಷ್ಯನ ಶರೀರದಲ್ಲಿಯೇ ಇದ್ದು ಅವುಗಳ ಮೂಲಕ ದೇಹವನ್ನು ಶುದ್ಧಗೊಳಿಸಬೇಕು. ಹೀಗೆ ದೇಹವನ್ನು ಶುದ್ಧಪಡಿಸಿ, ಹೇಗೆ ಹದಗೊಳಿಸಿದ ಚರ್ಮವನ್ನು ಮೆಟ್ಟಲಿಕ್ಕೆ ಉಪಯೋಗಿಸುತ್ತಾರೋ ಹಾಗೆಯೇ ಮನುಷ್ಯನು ಆಚರಿಸುತ್ತ ಲಿಂಗಾಂಗ ಸಾಮರಸ್ಯವನ್ನು ಹೊಂದಬೇಕೆಂಬ ಭಾವವು ಇದರಲ್ಲಿದೆ.

ಈ ವಚನದ ಮೇಲಿಂದ ಮಾದರ ಚನ್ನಯ್ಯನು ಮೊದಲು ಚರ್ಮವನ್ನು ಹದ ಮಾಡುತ್ತಿದ್ದನೆಂದು ಊಹಿಸಲಿಕ್ಕೆ ಅವಕಾಶವಿದೆ. ಆದರೆ ಮುಂದೆ ಅವನು ಕರಿಕಾಲಚೋಳನ ರಾಜ್ಯದಲ್ಲಿ ವಾಸಿಸಹತ್ತಿದ ಬಳಿಕ ಅವನಲ್ಲಿ ಹುಲ್ಲು ಕೊಯ್ದು ಅವನ ಲಾಯಕ್ಕೆ ಹಾಕುವ ಕಾಯಕವನ್ನು ಕೈಕೊಂಡಿರಬೇಕೆಂದು ತೋರುತ್ತದೆ.

(೨) ಕಾಯದ ಸುಳುಹುಳ್ಳನ್ನಕ್ಕ ಜ್ಞಾನವನರಿಯಬೇಕೆಂಬರು. ಜೀವನ ಸಂಚಾರವುಳ್ಳನ್ನಕ್ಕ ಜ್ಞಾನವನರಿಯಬೇಕೆಂಬರು. ಜ್ಞಾನ ಧ್ಯಾನಿಸಿಕಾಂಬಲ್ಲಿ ಕಾಯದ ಕರ್ಮದಿಂದ ಮುಕ್ತಿಯೋ? ಜೀವನ ಜ್ಞಾನದಿಂದ ಮುಕ್ತಿಯೋ? ಜ್ಞಾನ ಧ್ಯಾನದಿಂದ ಮುಕ್ತಿಯೋ? ಧ್ಯಾನಿಸಿ ಕಾಂಬ ಕುರುಹ ಎನಗೊಂದು ಬಾರಿ ತೋರಾ ಕಯ್ಯುಳಿಗತ್ತಿ ಅಡಿಗೂಂಟಕ್ಕೆಡೆಯಾಗಬೇಡ ಅರಿನಿಜಾತ್ಮ ರಾಮು ರಾಮುನಾ.

ಭಾವಃ— ಇದರಲ್ಲಿ ಚನ್ನಯ್ಯನು, ಕರ್ಮ, ಜ್ಞಾನ, ಧ್ಯಾನಗಳ ಪರಸ್ಪರ ಸಂಬಂಧವನ್ನು ಹೇಳುತ್ತಾನೆ. ಶಿವಾನುಭವವು ಇಷ್ಟಲಿಂಗವನ್ನು ಧ್ಯಾನಿಸುತ್ತ ಪರಮಾತ್ಮನನ್ನು ಅರಿಯಬೇಕೆಂದು ಹೇಳುತ್ತದೆ. ಇಂಥ ಇಷ್ಟಲಿಂಗದ ತಿಳುವಳಿಕೆಯಿಂದ ವೀರಶೈವನು ತನ್ನ ಕರ್ಮಗಳನ್ನು ಮಾಡುತ್ತಾನೆ. ಅದರ ಮೂಲಕವೇ ಅವನು ಜ್ಞಾನವನ್ನು ಹೊಂದಿ ತನ್ನ ಜೀವನ ಚಂಚಲತ್ವವನ್ನು ತೊರೆದುಬಿಡುತ್ತಾನೆ. ಅವನು ಶಿವಯೋಗದಂತೆ ಆಚರಿಸುತ್ತ ತನ್ನ ಕುರುಹಿನ ರೀತಿಯನ್ನು ತಿಳಿಯುತ್ತಾನೆ. ಈ ರೀತಿಯನ್ನು ತಿಳಿದುಕೊಂಡು ಹಿಂಸಾಯುಕ್ತವಾದ ಮಾದರರ ಆಚರಣೆಯನ್ನು ಬಿಟ್ಟುಕೊಟ್ಟು ತನ್ನಲ್ಲಿಯೇ ಇರುವಂಥ ಪರಮಾತ್ಮನನ್ನು ತಿಳಿಯಬೇಕು ಎಂದು ವಚನಕಾರನು ಬೋಧಿಸುತ್ತಾನೆ.

(೩) ನಡೆನುಡಿ ಸಿದ್ಧಾಂತವಾದಲ್ಲಿ ಕುಲ ಹೊಲಿ ಸೂತಕವಿಲ್ಲ. ನುಡಿ ಲೇಸು ನಡೆಯುಧಮವಾದಲ್ಲಿ ಅದೇ ಬಿಡುಗಡೆ. ಇಲ್ಲದ ಹೊಲಿ

ಕಳವು ಪರದಾರಂಗಳಲ್ಲಿ ಹೊಲಬನರಿಯದೆ ಕೆಟ್ಟು ನಡೆಯುತ್ತ ಮತ್ತ ಕುಲಜರೆಂಬ ಒಡಲವರುಂಟೇ? ಆಚಾರವೇ ಕುಲ, ಅನಾಚಾರವೇ ಹೊಲೆ. ಇಂತೀ ಉಭಯವನಳಿದುಲಿಯಬೇಕು ಕಯ್ಯುಳಿಗತ್ತಿ ಅಡಿಗೂಂಟಕ್ಕೆಡೆಯಾಗಬೇಡ ಅರಿನಿಜಾತ್ಮ ರಾಮ ರಾಮುನಾ.

ಭಾವಃ— ನಿಜವಾಗಿ ಅಸ್ಪೃಶ್ಯತ್ವವೆಂಬುದಿಲ್ಲವೆಂದು ವಚನಕಾರನು ಕೇಳುತ್ತಾನೆ. ಎಲ್ಲಿ ನಡೆನುಡಿಗಳು ದೃಢವಾಗಿವೆಯೋ ಅಲ್ಲಿ ಅಸ್ಪೃಶ್ಯತ್ವ ಅಥವಾ ಹೊಲೆ ಎಂಬುವುಗಳು ಇರಲಾರವು. ಆದರೆ ನುಡಿಯಲ್ಲಿ ಮಾತ್ರ ಲೇಸು ಇದ್ದು ನಡೆಯಲ್ಲಿ ಅಧಮತನವಿದ್ದರೆ, ಅದೇ ಬಿಡುಗಡೆ ಅಂದರೆ ತ್ಯಾಜ್ಯವಾದ ಸ್ಥಿತಿಯು. ಯಾರಾದರೂ ಹೊಲೆ, ಕಳವು, ಹಾದರಗಳನ್ನು ಮಾಡುತ್ತ ಇದ್ದರೆ ಅವರು ಶ್ರೇಷ್ಠ ಕುಲದವರೆಂದು ಎಂದಿಗೂ ಹೇಳಲಿಕ್ಕೆ ಬರಲಾರದು. ಎಲ್ಲಿ ಆಚಾರವಿದೆಯೋ ಅದೇ ಉತ್ತಮ ಕುಲ ಮತ್ತು ಎಲ್ಲಿ ಅನಾಚಾರವಿದೆಯೋ ಅದೇ ಹೊಲೆಯ ಕುಲ, ಹೀಗೆ ಭಾವಿಸಬೇಕು. ಆದರೆ ವೀರಶೈವನಾದವನು ಇತರರ ಉತ್ತಮ ಕುಲ, ಹೀನಕುಲ ಇವುಗಳನ್ನು ಸಹ ನೀರಿ ನಡೆಯಬೇಕು ಎಂದು ವಚನಕಾರನು ಹೇಳುತ್ತಾನೆ.

(೪) ವೇದಶಾಸ್ತ್ರಕ್ಕೆ ಹಾರುವನಾಗಿ ವೀರವಿತರಣಕ್ಕೆ ಕ್ಷತ್ರಿಯನಾಗಿ ಸರ್ವವನಾರೈದು ನೋಡುವಲ್ಲಿ ವೈಶ್ಯನಾಗಿ ವ್ಯವಹಾರದೊಳಗಾಗಿ ಕೃಷಿಯ ಮಾಡುವುದಕ್ಕೆ ಶೂದ್ರನಾಗಿ ಇಂತೀ ಜಾತಿ ಗೋತ್ರದೊಳಗಾದ ನೀಚ ಶ್ರೇಷ್ಠವೆಂಬೆರಡು ಕುಲವಲ್ಲದೆ ಹೊಲೆ ಹದಿನೆಂಟು ಜಾತಿ ಎಂಬ ಕುಲವಿಲ್ಲ. ಬ್ರಹ್ಮವನರಿದಲ್ಲಿ ಬ್ರಾಹ್ಮಣ. ಸರ್ವ ಜೀವ ಹಿತಕ್ಕೊಳಗಾದಲ್ಲಿ ಸಮ್ಯಕ್ಕಾರ. ಈ ಉಭಯವನರಿದು ಮರೆಯಲಿಲ್ಲ ಕಯ್ಯುಳಿಗತ್ತಿ ಅಡಿಗೂಂಟಕ್ಕೆಡೆಯಾಗಬೇಡ ಅರಿನಿಜಾತ್ಮರಾಮ ರಾಮುನಾ.

ಭಾವಃ— ಚಾತುರ್ವರ್ಣಗಳು ಉದ್ಯೋಗದ ಮೇಲೆ ಕಲ್ಪಿಸಲ್ಪಟ್ಟವೆ. ವೇದಶಾಸ್ತ್ರಗಳನ್ನು ಬಲ್ಲವನಾದರೆ ಅವನು ಹಾರುವನೆಂತಲೂ ಶೂರನೂ ಉದಾರಿಯೂ ಆದಲ್ಲಿ ಕ್ಷತ್ರಿಯನೆಂತಲೂ ಜೀನಸುಗಳನ್ನು ಶೋಧಿಸಿ ಅವುಗಳ ವ್ಯವಹಾರವನ್ನು ಮಾಡಿದಲ್ಲಿ ವೈಶ್ಯನೆಂತಲೂ ಒಕ್ಕಲುತನ ಮಾಡಿದರೆ ಅವನು ಶೂದ್ರನೆಂತಲೂ ಹೇಳುವದುಂಟು.

ಆದರೆ ಮಾನವರಲ್ಲಿ ಉತ್ತಮ ಗುಣವುಳ್ಳವರು, ನೀಚ ಗುಣವುಳ್ಳವರು ಎಂಬ ಎರಡೇ ಜಾತಿಗಳಿರುತ್ತವೇ ಹೊರ್ತು ಹೊಲೆ ಹದಿನೆಂಟು ಜಾತಿಗಳಿರುವದಿಲ್ಲ. ಬ್ರಹ್ಮಜ್ಞಾನಹೊಂದಿದವನು ಬ್ರಾಹ್ಮಣನಾಗುತ್ತಾನೆ. ಜೀವ ಹಿಂಸೆ ಮಾಡುವವನು ಸಮ್ಯಕ್ಕಾರನಾಗುತ್ತಾನೆ. ಈ ರೀತಿಯನ್ನು ತಿಳಿದುಕೊಂಡು ಇದರಂತೆಯೇ ಆಚರಿಸಬೇಕೆಂದು ವಚನಕಾರನು ಇಲ್ಲಿ ಹೇಳುತ್ತಾನೆ.

(೫) ಸಾಂಖ್ಯ ಶ್ವಪಚ, ಅಗಸ್ತ್ಯ ಕಬ್ಬಿಲಿಗ, ದುರ್ವಾಸ ಮಚ್ಚಿಗ, ದಧೀಚಿ ಕೇಲಿಗ, ಕಶ್ಯಪ ಕಮ್ಮಾರ, ರೋಮಜ ಕಂಚುಗಾರ, ಕೌಂಡಿಲ್ಯ ನಾವಿದನೆಂಬುದನರಿದು ಮೇಲೆ ಕುಲ ಉಂಟೆಂದು ಫಲಕ್ಕೆ ಹೋರಲೇತಕ್ಕೆ? ಇಂತೀ ಸಪ್ತ ಋಷಿಯರುಗಳೆಲ್ಲರು ಸತ್ಯದಿಂದ ಮುಕ್ತರಾದರೆಂಬುದನರಿಯದೆ ಅಸತ್ಯದಲ್ಲಿ ನಡೆದು ನಾವು ವಿಪ್ರರು ನಾವು ಘನವೆಂದು ಹೋರುವ ಹೊತ್ತು ಹೋಕರ ಮಾತೇತಕ್ಕೆ ಕೈಯ್ಯುಳಿಗತ್ತಿ ಅಡಿಗೂಂಟಕ್ಕೆಡೆಯಾಗಬೇಡ ಅರಿನಿಜಾತ್ಮರಾಮ ರಾಮುನಾ.

ಭಾವಃ— ಹಿಂದಿನ ಕಾಲದಲ್ಲಿ ಆಗಿಹೋದ ಅನೇಕ ಋಷಿಗಳ ಜನನವನ್ನು ನೋಡಿದರೆ ಅವರು ಹೀನ ಕಾಲಗಳಲ್ಲಿ ಜನಿಸಿರುತ್ತಾರೆಂಬುದು ಕಂಡುಬರುತ್ತದೆ. ಆದ್ದರಿಂದ ಇದು ಉತ್ತಮ ಕುಲ ಇದು ಹೀನ ಕುಲ ಎಂದು ಜಗಳಾಡಬಾರದು. ಋಷಿಗಳು ಹೀನ ಕುಲದಲ್ಲಿ ಜನಿಸಿದರೂ ಕೂಡ ಅವರು ಸತ್ಯವನ್ನು ಆಚರಿಸಿದ್ದರಿಂದ ಮುಕ್ತಿಯನ್ನು ಹೊಂದಿದರು. ಆದರೆ ವಿಪ್ರರು ಅಸತ್ಯತನದಿಂದ ನಡೆದು ನಾವು ದೊಡ್ಡವರು ಎಂದು ವಾದಿಸಿದರೆ ಅವರ ನುಡಿಯನ್ನು ಲಕ್ಷಿಸಬೇಡಿರೆಂದು ವಚನಕಾರನು ಹೇಳುತ್ತಾನೆ.

ಮೆರೆಮಿಂಡದೇವ.

ಮೆರೆಮಿಂಡದೇವನು ಜೋಳಮಂಡಲದಲ್ಲಿರುವ ತಿರುವಾರೂರು ಎಂಬ ಗ್ರಾಮದವನು. ಅವನು ವಚನಕಾರನಿದ್ದಾನೆ. ಅವನ ೧೦೧ ವಚನಗಳನ್ನು ನಾವು ಶಿವಾನುಭವ ಗ್ರಂಥಮಾಲೆಯಲ್ಲಿ ಪ್ರಕಟಮಾಡಿದ್ದೇವೆ. ಇವನು ತಮಿಳು ನಾಡಿನವನು. ಆದರೂ ಕನ್ನಡ ಭಾಷೆಯಲ್ಲಿ ಶಿವಾನುಭವದ ತತ್ವಗಳನ್ನು ನಿರೂಪಿಸಿದ್ದಾನೆ. ಅವನು ತನ್ನ ವಚನ

ಗಳಲ್ಲಿ ಕ್ರಿಯಾಜ್ಞಾನದ ಭೇದವನ್ನೂ ಇಷ್ಟಲಿಂಗ, ಪ್ರಾಣಲಿಂಗ, ಭಾವ ಲಿಂಗಗಳ ಸ್ವರೂಪವನ್ನು, ಗುರುಲಿಂಗಜಂಗಮದ ರೀತಿಯನ್ನೂ ಬಹು ಅಳವಾಗಿ ವಿವೇಚಿಸಿದ್ದಾನೆ. ಇದರಿಂದ ತಮಿಳು ದೇಶದಲ್ಲಿ ಸಹ ವೀರ ಶೈವ ಧರ್ಮದ ತತ್ವಗಳ ಪ್ರಚಾರವು ಉಂಟಾಗಿತ್ತೆಂದು ಕಂಡುಬರು ತ್ತದೆ. ಹೇಗೆ ಆಂಧ್ರದೇಶದಲ್ಲಿಯೂ ಕೇರಳ ದೇಶದಲ್ಲಿಯೂ ವೀರ ಶೈವ ಶಿವಶರಣರು ಆಗಿಹೋಗಿರುವರೋ ಹಾಗೆಯೇ ತಮಿಳು ದೇಶ ದಲ್ಲಿಯೂ ಕೂಡ ಅವರು ಉತ್ಪನ್ನವಾಗಿರುತ್ತಾರೆ.

ಪೆರಿಯಿಂಡದೇವನು ತನ್ನ ವಚನಗಳನ್ನು 'ಐ ಘಟದೂರ ರಾಮೇ ಶ್ವರಲಿಂಗ' ಎಂಬ ಮುದ್ರಿಕೆಯನ್ನಿಟ್ಟುಕೊಂಡು ರಚಿಸಿದ್ದಾನೆ. ಅಂದರೆ ಅಂಗ ಅಥವಾ ಲೌಕಿಕ ವ್ಯವಹಾರದಿಂದ ದೂರನಾದ ಪರಮಾತ್ಮನೇ ಎಂದು ಸಂಬೋಧಿಸುತ್ತ ತನ್ನ ವಿಚಾರಗಳನ್ನು ಪ್ರಕಟಿಸಿದ್ದಾನೆ. 'ವಿಘಟ ದೂರ ರಾಮೇಶ್ವರಲಿಂಗ' ಎಂತಲೂ ಅವನ ಮುದ್ರಿಕೆಯು ಇದೆ. ವಿಘಟ ಎಂದರೆ ಭೇದ. ಇದಕ್ಕೆ ದೂರನಾದ ಪರಮಾತ್ಮನೆಂಬ ಭಾವವು ಇದರಲ್ಲಿದೆ.

ಪೆರಿಯಿಂಡದೇವನು ೬೩ ಪುರಾತನರಲ್ಲಿ ಒಬ್ಬನಿದ್ದಾನೆ. ಈ ಪುರಾತನರೆಲ್ಲರೂ ತಮಿಳು ದೇಶದವರಿದ್ದು ಅವರಲ್ಲಿ ಕರ್ನಾಟಕದ ವೀರಶೈವ ಸಂಸ್ಕೃತಿಯನ್ನು ಕುರಿತು ಇವನೊಬ್ಬನ ಹೊರತು ಬೇರೆ ಯಾರೂ ನಿರೂಪಿಸಿದಂತೆ ತೋರುವದಿಲ್ಲ. ಇದೊಂದು ಈತನ ಚರಿ ತ್ರೆಯಲ್ಲಿ ಲಕ್ಷಿಸತಕ್ಕ ಮಹತ್ವದ ಸಂಗತಿಯಾಗಿದೆ.

ಶಿವಾನುಭವವು ಸ್ತ್ರೀಪುರುಷರಲ್ಲಿ ಮತ್ತು ಜಾತಿಜಾತಿಗಳಲ್ಲಿ ಭೇದ ವನ್ನು ಎಣಿಸುವದಿಲ್ಲ. ವೀರಶೈವರೆಲ್ಲರೂ ಸಮಾನರೆಂದು ಅದು ಯಾವಾ ಗಲೂ ಪ್ರತಿಪಾದಿಸುತ್ತದೆ. ಇಷ್ಟೇಅಲ್ಲ, ಅದು ಭಕ್ತ, ಗುರು, ಲಿಂಗ, ಜಂಗಮ ಇವುಗಳಲ್ಲಿಯೂ ಕೂಡ ಪರಸ್ಪರ ಸಾಮರಸ್ಯವನ್ನು ಪ್ರತಿ ಪಾದಿಸುತ್ತದೆ. ಇಂಥ ಸಮರಸಾಚರಣೆಯಿಂದ ಭಕ್ತನು ತನ್ನಲ್ಲಿ ಗುರು, ಲಿಂಗ, ಜಂಗಮಗಳ ತತ್ವಗಳನ್ನು ಒಳಕೊಳ್ಳತಕ್ಕದ್ದು. ಹಾಗೆಯೇ ಗುರು, ಲಿಂಗ, ಜಂಗಮಗಳು ಭಕ್ತ ಮತ್ತು ಇತರ ಆವರಣಗಳ ಮೂಲಕ ತಮ್ಮ ತಮ್ಮ ನಡೆಗಳನ್ನು ದೃಢಪಡಿಸಿಕೊಳ್ಳತಕ್ಕದ್ದು. ಹೀಗೆ ಶಿವಾನುಭವದ ತತ್ವವಿದೆ. ಈ ತತ್ವಕ್ಕನುಸರಿಸಿಯೇ ವೀರಶೈವಾಚರಣೆ ಗಳು ಕಲ್ಪಿಸಲ್ಪಟ್ಟಿರುತ್ತವೆ.

ಆದ್ದರಿಂದ ಹೇಗೆ ವೀರಶೈವರಿಗೆಲ್ಲ ಗುರು, ಲಿಂಗ, ಜಂಗಮಗಳ ನಿಂದೆಯು ಮತ್ತು ಅನಾದರಣೆಯು ಅಸಹನೀಯವೋ ಹಾಗೆಯೇ ಭಕ್ತನಿಂದೆಯೂ ಅಸಹನೀಯವಾದುದು. ಯಾರು ಇದಕ್ಕೆ ವಿರುದ್ಧ ವಾಗಿ ವರ್ತಿಸುತ್ತಾರೋ ಅವರು ಶಿವಶರಣರಿದ್ದರೂ ಕೂಡ ಅವರು ತಮ್ಮ ಮಹತ್ವವನ್ನು ಕಳೆದುಕೊಂಡಿರುವದು ಶಿವಶರಣರ ಚರಿತ್ರೆಗ ಳಿಂದ ತಿಳಿದುಬರುತ್ತದೆ. (ಹಿಂದೆ ಅಗ್ಗಳಣಿಯ ಹೊನ್ನಯ್ಯ ಮತ್ತು ಓಲೆಯ ಶಾಂತಯ್ಯಗಳ ಚರಿತ್ರೆಗಳನ್ನು ನೋಡಿರಿ. ಪುಟ ೬೭) ಇದ ರಿಂದ ವೀರಶೈವ ಸಮಾಜದ ಸಂಘಟನೆಯಲ್ಲಿ ಮತ್ತು ಅವರ ಮಠ ಗಳ ವ್ಯವಸ್ಥೆಯಲ್ಲಿ ಪೂರ್ಣ ಲೋಕಸತ್ತಾತ್ಮಕ ತತ್ವಗಳು ಸೇರ್ಪಡೆ ಯಾದದ್ದನ್ನು ನಾವು ಕಾಣಬಹುದು.

ತಿರುವಾರೂರು ಅನೇಕ ಶಿವಾಲಯಗಳಿಂದಲೂ ಶಿವಭಕ್ತರಿಂದಲೂ ತುಂಬಿಕೊಂಡು ಚೋಳದೇಶದಲ್ಲಿ ಮನೋಹರವಾಗಿ ಕಂಗೊಳಿಸುತ್ತಿತ್ತು. ಅಲ್ಲಿ ತಿರುವಾರೂರೇಶ್ವರ ದೇವಾಲಯವೇ ಮುಖ್ಯ ಗುಡಿಯಾಗಿತ್ತು. ಪೆರಿಯಿಂಡದೇವನು ಶಿವಭಕ್ತಿಯಿಂದ ಕೂಡಿಕೊಂಡು ಗಣಾಚಾರವು ಳ್ಳವನಾಗಿ ಆ ಗ್ರಾಮದಲ್ಲಿ ಪ್ರಸಿದ್ಧನಾಗಿ ಮೆರೆಯುತ್ತಿದ್ದನು. ಆ ತಿರು ವಾರೂರೇಶ್ವರನ ಜಾತ್ರೆಯು ಒಂದುದಿನ ಪ್ರಾರಂಭವಾಗಲು ಭಕ್ತರು ದಿನಾಲು ಶಿವಾಲಯದಲ್ಲಿ ಹೆಜ್ಜಾಗಿ ಬರುತ್ತ ಇದ್ದು ರಥವನ್ನು ಎಳೆಯುವ ದಿವಸ ಅವರು ದೇವಾಲಯದಲ್ಲಿ ತುಂಬಿ ಹೋದರು. ರಥೋತ್ಸವವನ್ನು ನೋಡಲಿಕ್ಕೆ ಪೆರಿಯಿಂಡದೇವನೂ ದೇವಾಲಯಕ್ಕೆ ಬಂದಿದ್ದನು.

ಅವನು ಅಲ್ಲಿ ನಿಂತುಕೊಂಡು ನೋಡುತ್ತಿರುವಾಗ್ಗೆ ಸೌಂದರ ನಂಬಿಯನ್ನನೆಂಬ ಶಿವಭಕ್ತನು ಅತ್ಯಂತ ವೈಭವದಿಂದ ದೇವಾಲಯದ ಹೆಬ್ಬಾಗಿಲಿಗೆ ಬಂದನು. ಅವನ ಸುತ್ತಲೂ ಕವಡಿ ಮದ್ದಳಿಗಳೂ ಶಂಖ ನಾದವೂ ಜೋರ್ಗರೆಯುತ್ತಿದ್ದವು. ಅನೇಕ ನರ್ತಕರೂ ಗಾಯಕರೂ ತಮ್ಮ ಹಾಡುಗಾರಿಕೆಯನ್ನು ತೋರಿಸುತ್ತ ಅವನೆದುರಿಗೆ ನಡೆದಿದ್ದರು. ಅವನು ಉತ್ತಮತರದ ಉಡುಪುಗಳನ್ನು ಧರಿಸಿಕೊಂಡು ಕೊರಳಲ್ಲಿ ಪೂಮಾಲೆಗಳು ಲಲಾಟದಲ್ಲಿ ಕಸ್ತೂರಿ ಮೈಯಲ್ಲೆಲ್ಲ ಚಂದನ ಇವುಗಳ ಸುಗಂಧ ಎತ್ತಲೂ ಹಬ್ಬಿರಲು ಅಶ್ವಾರೂಢನಾಗಿ ಒಳ್ಳೇ ಉತ್ಸವದಿಂದ ದೇವಾಲಯಕ್ಕೆ ಬಂದು ಹೆಬ್ಬಾಗಿಲಿನಲ್ಲಿ ಇಳಿಯದೆ ಕುದುರೆಯನ್ನು ಹಾಗೆಯೇ ಬಾಗಿಲಿನ ಒಳಗಿಂದ ನಡೆಯಿಸುತ್ತ ಎಡಬಲದಲ್ಲಿ ಅನೇಕ

ಶಿವಭಕ್ತರು ನೆರೆದಿದ್ದರೂ, ಅವರನ್ನು ನೋಡದೆ ನಮಸ್ಕರಿಸದೆ ಒಳಗೆ ಹೋಗಿ ಗುಡಿಯ ಮುಂದೆ ಕುದುರೆಯಿಂದ ಇಳಿದು ಎಲ್ಲ ಕಡೆಗೂ ಸೊಕ್ಕೇರಿ ನೋಡುತ್ತ ದೇವಾಲಯದ ಒಳಗೆ ಪ್ರವೇಶಿಸಿದನು.

ಮೆರೆಮಿಂಡದೇವನು ಅವನ ವರ್ತನೆಯನ್ನು ನೋಡಿ ಅತ್ಯಂತ ಕೋಪಾವಿಷ್ಟನಾಗಿ ನೆರೆದ ಭಕ್ತರಿಗೆ—ಇವನಾರು? ಶಿವಾಲಯದ ಮಹಾ ದ್ವಾರದಲ್ಲಿ ಕುದುರೆಯನ್ನಿಳಿಯದೆ ಒಳಗೆ ಪ್ರವೇಶಮಾಡುತ್ತಾನೆ. ಇವನ ಗರ್ವವೆಷ್ಟು ಎಂದು ನುಡಿಯಲು ನೆರೆದ ಜನರು—ಇವನು ಸೌಂದರ ನಂಬಿಯ ಣ್ಣನು. ಇವನು ದೇವರಿಗೆ ಸಲುಗೆವಂತನಾಗಿದ್ದಾನೆ. ಈಶ್ವ ರನು ದಿನಾಲು ಇವನಿಗೆ ಪಡಿ ಹೊನ್ನು ಕೊಟ್ಟು ಇವನಿಗೆ ತನ್ನ ಪ್ರೀತಿ ಯನ್ನು ತೋರಿಸುತ್ತಾನೆ ಎಂದು ಹೇಳಲು ಮೆರೆಮಿಂಡದೇವನು ಘುಡು ಘುಡಿಸುತ್ತ-ಇದೇತರ ಭಕ್ತಿ? ಇಂಥವನ ಭಕ್ತಿಯನ್ನು ಶಿವನು ಕೈಕೊಳ್ಳು ವನೇ? ಇವನ ನಡೆಯು ಭಕ್ತ ಸಭೆಗೆ ಹೊರತಾದದ್ದು. ಇಂಥ ಸೊಕ್ಕಿನ ವನಿಗೆ ಶಿವನು ಪ್ರೀತಿಸುವನೇ? ಇವನನ್ನು ಬಂಧಿಸಿರಿ ಎಂದು ಕೋಪಾ ಟೋಪದಿಂದ ನುಡಿಯಲು ನೆರೆದ ಭಕ್ತರು ಅವನಂತೆಯೇ ಕೋಪೋ ದ್ರೇಕವುಳ್ಳವರಾಗಿ ನಂಬಿಯಣ್ಣನನ್ನು ಮುತ್ತಲು ಅವನು ಅಂಜಿ ಅವರ ಕೈಯಿಂದ ಪಾರಾಗಿ ದೇವಾಲಯದ ಗರ್ಭಗುಡಿಯನ್ನು ಪ್ರವೇಶಿಸಿ ಅವರ ಬಾಗಿಲುಗಳನ್ನು ಭದ್ರವಾಗಿ ಮುಚ್ಚಿಕೊಂಡನು.

ಆಗ ನಂಬೆಣ್ಣನ ಕುದುರೆಯೊಂದೆಸೆ, ಅವನ ತುರಾಯಿಯೊಂದೆಸೆ, ಅವನ ಪರಿವಾರ ಒಂದೆಸೆಯಾಗಿ ಬಿಟ್ಟವು. ನಂಬೆಣ್ಣನು ಗಾಬರಿಯಾಗಿ ಕಂಪಿಸುತ್ತ ದೇವರೆದುರಿಗೆ ನಿಂತು -- ದೇವರೇ ನಿನ್ನ ನಂಬಿದ ನಂಬಿಗೆ ನಿನ್ನೆದುರಿಗೆ ಹೀಗಾಗಬೇಕೇ? ನನ್ನನ್ನು ಇವರು ಕೊಲ್ಲಲು ಸಿದ್ಧರಾಗಿ ದ್ದಾರೆ. ನನ್ನನ್ನು ಕಾಯಿ ಎಂದು ಆರ್ತಸ್ವರದಿಂದ ರೋದಿಸುತ್ತ ದೇವರ ಕಾಲನ್ನು ಹಿಡಿದನು.

ಆಗ ಶಂಕರನು ಲಿಂಗ ಮಧ್ಯದಿಂದ ಹೊರಗೆ ಬಂದು ಅವನೂ ಗಾಬರಿಯಾದವನಂತೆ ನಟಿಸುತ್ತ— ಮಗನೇ, ನೀನೇಕೆ ಭಕ್ತರನ್ನು ವಂದಿಸದೆ ಇಲ್ಲಿಗೆ ಬಂದೆ? ನನಗೂ ಭಕ್ತರಿಗೂ ಹೀಗೆ ಅಂತರಿಸಬಹುದೇ? ನಾನು ಭಕ್ತಕಾಯನೆಂಬುದನ್ನು ನೀನು ಮರೆತೆಯಾ ಎಂದು ಕೇಳಲು, ನಂಬಿಯು-ನೀನುಸಹ ಭಕ್ತರಿಗೆ ಹೀಗೆ ಅಂಜಿದರೆ ನನ್ನ ಪಾಡೇನು?ನಾನು ಉಳಿಯುವುದೆಂತು? ಎಂದು ಮತ್ತಿಷ್ಟು ಗಟ್ಟಿಯಾಗಿ ರೋದಿಸಹತ್ತಿದನು.

ಶಿವಾನುಭವ

ವರ್ಷ ೦೯	ಸಪ್ಟಂಬರ ೧೯೪೫.	ಸಂಚಿಕೆ ೦೨

ಜನ್ನಬಸವೇಶ್ವರ ವಚನ ವಿಶೇಷಗಳು.

(ಲೇಃ— ಶ್ರೀ. ಜ. ಪ. ಜನ್ನಬಸವರಾಜದೇಶಿಕೇಂದ್ರ ಸ್ವಾಮಿಗಳವರು, ಜಗದ್ಗುರು ಶ್ರೀಮನ್ನಿಡುಮಾವಿಡಿ ಶ್ರೀಶೈಲ ಸಂಸ್ಥಾನ.)

ನಿವರಣೆಗಳು.

ಚನ್ನಬಸವಣ್ಣನು ಹೇಗೆ ಜ್ಞಾನಿಯೋ ಹಾಗೆ ವಿಮರ್ಶಕ. ಯಾವೊಂ ದು ಜೀವನವನ್ನಾಗಲಿ, ವಿಷಯವನ್ನಾಗಲಿ ಆಳವಾಗಿ ಅಳೆಯುತ್ತಾನೆ. ಮರ್ಮವನ್ನು ಮುಟ್ಟುತ್ತಾನೆ. ಆದ್ಯಂತವಾಗಿ ವಿವರಿಸುತ್ತಾನೆ. ಅತನು ಹೆಚ್ಚಾಗಿ ಹೇಳುವದಿಲ್ಲ. ಹೇಳಿದಷ್ಟನ್ನು ಮಾತ್ರ ಖಚಿತವಾಗಿ ಸಾಕ ಲ್ಯವಾಗಿ ಹೇಳುತ್ತಾನೆ. ವಿಮರ್ಶೆಯಲ್ಲಿ ವಾಸ್ತವಿಕತೆಯ ಎಲ್ಲೆಯನ್ನು ಎಳ್ಳಷ್ಟೂ ಮೀರುವದಿಲ್ಲ. ಅತನ ವಿಮರ್ಶೆ ಭಾವಗಮ್ಯ, ಹೃದಯರಮ್ಯ. ಇದಕ್ಕೆ ಈ ವಚನಗಳೆ ಸಾಕ್ಷಿ!

"ಅಜಕೋಟಿ ವರುಷದವರೆಲ್ಲರೂ ಹಿರಿಯರೇ? ಹುತ್ತೇರಿ ಬೆತ್ತ ಬೆಳೆದ ತಪಸ್ವಿಗಳೆಲ್ಲರೂ ಹಿರಿಯರೇ? ನಡುಮುರಿದು ಗುಡಗೂರಿ ತಲೆ ನಡುಗಿ ನರೆ ತೆರೆ ಹೆಚ್ಚಿ ಮತಿಗೆಟ್ಟು, ಒಂದನಾಡ ಹೋಗಿ ಒಂಬತ್ತ ನಾಡುವ ಅಜ್ಞಾನಿಗಳೆಲ್ಲರೂ ಹಿರಿಯರೇ? ಅನುವರಿದು ಘನವ ತೀರಿಸಿ ಹಿರಿದುಕಿರಿದೆಂಬ ಭೇದವ ಮರೆದು, ಕೂ. ಚ. ಸಂ. ನಲ್ಲಿ ಬೆರಸಿ ಬೇರಿ ಲ್ಲದಪ್ಪ ಹಿರಿಯತನ ನಮ್ಮ ಮಹದೇವಿಯಕ್ಕಂಗಾಯಿತ್ತು."

ಇದು ಅಕ್ಕನ ಅರುವಿನ ಹಿರಿಯತನದ ವಿಮರ್ಶೆ. 'ಮೇಲು ಕೀಳೆಂಬ ಕೊಳೆಯ ಕಳೆಯದವನು, ತನ್ನ ತಾನರಿಯದವನು ನಗರವಾಸಿಯಾದ

ರೇನು? ವನನಿವಾಸಿಯಾದರೇನು? ನಾಕ ನಿವಾಸಿಯಾದರೇನು? ಅವಕ್ಕಿಲ್ಲ ಜಹುಕಾಲ ಬದುಕಿದರೇನು? ಅವರು ಅದೆಂದಿಗೂ ಹಿರಿಯರಲ್ಲ.' ಎಂದು ಹೇಳುವ ಈ ವಾಣಿಯಲ್ಲಿ ವಾಸ್ತವಿಕತೆಗೆ ಕೊರತೆಯೆ? ಮಾರ್ಮಿಕತೆಗೆ ಕೊರತೆಯೆ? ಸಾಕಲ್ಯತೆಗೆ ಕೊರತೆಯೆ? ಹೃದಯಂಗಮ ಶೈಲಿಗೆ ಕೊರತೆಯೆ? ಯಾವುದಕ್ಕೆ ಕೊರತೆಯಿದೆ?

"ಅದ್ಯರ ಅರವತ್ತು ವಚನಕ್ಕೆ ದಣ್ಣಾಯಕರ ಇಪ್ಪತ್ತು ವಚನ. ದಣ್ಣಾಯಕರ ಇಪ್ಪತ್ತು ವಚನಕ್ಕೆ ಪ್ರಭುದೇವರ ಹತ್ತು ವಚನ. ಪ್ರಭುದೇವರ ಹತ್ತು ವಚನಕ್ಕೆ ಅಜಗಣ್ಣನ ಐದು ವಚನ. ಅಜಗಣ್ಣನ ಐದು ವಚನಕ್ಕೆ ಕೂ. ಚ. ಸಂ. ನಲ್ಲಿ ಮಹದೇವಿಯಕ್ಕಗಳ ಒಂದು ವಚನ ನಿರ್ವಚನ ಕಾಣಾ ಸಿದ್ಧರಾಮಯ್ಯ!"

ಇದು ಅಕ್ಕನ ಅಮೃತವಾಣಿಯ ವೈಶಿಷ್ಟ್ಯದ ತೂಕ! ಈ ತೂಕದಲ್ಲಿ ಚನ್ನಬಸವಣ್ಣನು ಅರೆಗಾಣಿಯನ್ನೂ ಸೋತಿಲ್ಲ. ಆತ ಅಂತಹ ಜಾಣ! ಮೇಲ್ಕಂಡ ವಚನದಲ್ಲಿ ಸೂಕ್ಷ್ಮವಾದ ಅರುವನ್ನೆ ಅಳವಾಗಿ ಅನನ್ಯ ಸಾಧಾರಣವಾಗಿ, ತಿಳಿದವರು ತಲೆದೂಗುವಂತೆ, ಅಳೆದ ಚನ್ನಬಸವಣ್ಣನಿಗೆ ಸ್ಥೂಲವಾದ ಅರುವಿನ ಕಾರ್ಯವಾದ ವಾಣಿಯನ್ನು ತೂಗುವದೊಂದು ಹೆಜ್ಜೆ? ಅಕ್ಕನ ವಚನ ವಾಣಿಯು ಸವಿಯನ್ನುಂಡ ಇಂದಿನ ಸಾಹಿತಿಗಳಿಗೆ ಚನ್ನಬಸವಣ್ಣನ ಈ ಮಾತಿನಲ್ಲಿ ಎಷ್ಟು ಸತ್ಯತೆಯಿದೆ, ಎಷ್ಟು ಸಹಜಿಕತೆಯಿದೆ ಎಂಬುದು ಮನವರಿಕೆಯಾಗದೆ ಇರದು.

ಹೀಗೆ ಚನ್ನಬಸವಣ್ಣನು ಯಾವುದಾದರೊಂದು ಪದದ ಅಥವಾ ಶಬ್ದದ ವಿವರಣೆಯನ್ನಾಗಲಿ ವಿಮರ್ಶೆಯನ್ನಾಗಲಿ ಮಾಡುತ್ತಿದ್ದರೆ ಓದುಗರ ಹೃದಯದಲ್ಲಿ–ಧಮನಿಗಳಲ್ಲಿ ಒಂದು ಸ್ಫುರಣಶಕ್ತಿ–ವಚನಶಕ್ತಿ ಸ್ಫುರಿಸುವಂತೆ ಮಾಡುತ್ತಾನೆ. ನಿಚ್ಚಳವಾದ, ನಿಶ್ಚಿತವಾದ ಶೈಲಿಯಲ್ಲಿ ಬೆಲೆಯನ್ನು ಕಟ್ಟುತ್ತಾನೆ. ಅದರ ಅಂತರವನ್ನೆಲ್ಲ ಕೆದಕಿ, ಬೆದಕಿ ಸಾರವನ್ನು ಎತ್ತಿ ಬೀರುತ್ತಾನೆ. ತೋರುತ್ತಾನೆ. ಅಂತಹ ಹಲಕೆಲ ವಿವರಣೆಗಳನ್ನು ಇಲ್ಲಿ ಸಾಧ್ಯವಾದಷ್ಟು ಸಂಗ್ರಹಿಸೋಣವಾಗಿದೆ.

ಅನಾಚಾರವೆಂದರೇನು?

ಅನಾಚಾರದ ವಿವರಣೆಯನ್ನು ಮಾಡುವ ಮೊದಲು ಆಚಾರದ ಅವಶ್ಯಕತೆ ಯಾರಾರಿಗಿದೆಯೆಂಬುದನ್ನೂ, ಆ ಸದಾಚಾರವುಳ್ಳವಂಗೂ

ಅನಾಚಾರಕ್ಕೂ ಹಗಲಿರುಳಿನಷ್ಟು ಹೊಂದಾವಣಿಕೆಯಿದೆಯೆಂಬುದನ್ನೂ ಈ ಒಂದೇ ಒಂದು ಮಾತಿನಲ್ಲಿ ಸಾರವಾಗಿ, ಸಂತೃಪ್ತಿಕರವಾಗಿ ಹೇಳುತ್ತಾನೆ!

"ದೇವಂಗಾಗಲಿ, ಭಕ್ತಂಗಾಗಲಿ, ಲಿಂಗಕ್ಕಾಗಲಿ, ಜಂಗಮಕ್ಕಾಗಲಿ ಸದಾಚಾರಬೇಕಲ್ಲದೆ ಆ ಸದಾಚಾರವುಳ್ಳವಂಗೆ ಅನಾಚಾರ ಹೊದ್ದಲಾಗದು...."

'ಅಷ್ಟಾವರಣವೇ ಅಂಗ, ಪಂಚಾಚಾರವೇ ಪ್ರಾಣ.' ಎಂಬುದು ವೀರಶೈವ ಮತತತ್ವದ ಶಿರೋವಾಕ್ಯ. ಇದರಲ್ಲಿ ಹೇಳಿರುವಂತೆ ವೀರಶೈವಂಗೆ ಆಚಾರವೇ ಉಸಿರು. ದೇವ, ಭಕ್ತ, ಲಿಂಗ, ಜಂಗಮ ಇವರಲ್ಲಿ ಯಾರಾದರಾಗಲಿ ಆಚಾರವಿಲ್ಲದ ವಿನಾ ಅವರ ಅಸ್ತಿತ್ವವಿಲ್ಲ. ಇದನ್ನು ತಿಳಿದವರು ತೀರ ಕಡಿಮೆ. ತಿಳಿದು ಆಚರಿಸುವವರು ಇದ್ದದ್ದೂ ವಿರಳ.

ಆಚಾರವೇ ಪ್ರಾಣವೆಂದು ಬರಿ ಹೇಳಿಬಿಟ್ಟಲ್ಲ. ಅದಕ್ಕೆ ತಕ್ಕ ಪ್ರಾಶಸ್ತ್ಯವನ್ನೂ ಕೊಟ್ಟಿದ್ದಾರೆ. ವೀರಶೈವ ತತ್ವಗಳಲ್ಲಿ ಆಚಾರಕ್ಕಿರುವ ಪ್ರಾಶಸ್ತ್ಯ ಇನ್ನಾವುದಕ್ಕೂ ಇಲ್ಲ. ದೇವಂಗಾಗಲಿ ಆಚಾರದೇಕೆನ್ನುವಷ್ಟು ಮುಂದುವರಿದಿದ್ದಾರೆ. ತ್ರಿವಿಧ ಪ್ರಾಣಲಿಂಗಿಗಳಲ್ಲಿ 'ಆಚಾರ ಪ್ರಾಣ'ಯೇ ಮೊದಲಿಗನು! ಆ ಮೇಲಿನವರು ಲಿಂಗಪ್ರಾಣಿ, ಜಂಗಮಪ್ರಾಣಿಗಳು. ಅಲ್ಲದೆ ಅರು ಲಿಂಗಗಳಲ್ಲಿ ಆಚಾರವೇ ಮೊದಲಿನ ಲಿಂಗವಾಗಿದೆ. ಆಚಾರವು ಆದಿಲಿಂಗವಾಗಬೇಕಾದರೆ ಅದಕ್ಕಿರುವ ಪ್ರಾಮುಖ್ಯತೆ ಎಷ್ಟೆಂಬುದು ಮನವಂಕೆಯಾಗದಿರದು.

ಪ್ರಾಣಪ್ರಾಯವಾದ ಆಚಾರವಿಲ್ಲದ ಮೇಲೆ ಆತ ವೀರಶೈವನಲ್ಲ;—ಆತ ಸಜೀವ ವ್ಯಕ್ತಿಯೂ ಅಲ್ಲ. ಆದಕಾರಣ ಅನಾಚಾರವು ವೀರಶೈವರ ಹತ್ತಿರದಲ್ಲಿಯೇ ಸುಳಿಯಬಾರದು. ಸುಳಿದರೆ ಲಿಂಗವಂತಿಕೆಗೆ ದೂರ. ಹಾಗಾದರೆ ಅನಾಚಾರವೆಂದರೇನೆಂಬುದನ್ನು ವೀರಶೈವನು ವಿವರವಾಗಿ ತಿಳಿಯಲೇಬೇಕು.

"ಅನಾಚಾರವೆಂದೊಡೆ ಅನಾಯತ; ಅನಾಯತವೆಂದೊಡೆ ಅನುಸರಣೆ; ಅನುಸರಣೆ ಎಂಬುದೇ ಅಂಗದಿಚ್ಛೆ; ಅಂಗದಿಚ್ಛೆಯೆಂಬುದೇ ಅನಾಚಾರ; ಅನಾಚಾರವೆಂಬುದೇ ಪಂಚಮಹಾಪಾತಕ. ಇದುಕಾರಣ ಅನಾಚಾರವಾಗಿ ಕೂ. ಚ. ಸಂ. ನಲ್ಲಿ ಆಚಾರವಂತರೆನಿಸಿಕೊಂಡಬಳಿಕ ಅನಾಚಾ

ರಕ್ಕೆ ಅನುಸರಣೆಯು ಮಾಡಿದರೆ, ಆಚಾರಭ್ರಷ್ಟಂಗೆ ಅನುಸಂಧಾನ ನಡೆದೊಡೆ ಅಘೋರನರಕ ತಪ್ಪದು ನೋಡಿರೀ!"

ಈ ವಚನದಲ್ಲಿ ಅನಾಚಾರದ ವಿವರಣೆ ಎಷ್ಟು ಸ್ವಾರಸ್ಯವಾಗಿದೆ, ಸರಳವಾಗಿದೆ. ಅನಾಯತ, ಅನುಸರಣೆ, ಅಂಗದಿಚ್ಛೆ ಇವು ಮೂರೂ ಅನಾಚಾರದ ಗರ್ಭಕೋಶಗಳು; ಪ್ರಾಣನಾಡಿಗಳು. ಆತ್ಮನಿಗೆ ಇಂದ್ರಿಯಗಳ ಮೇಲೆ ಆಯತ (ಅಧಿಕಾರ) ವಿಲ್ಲದೆ ಹೋದರೆ ಇಂದ್ರಿಯಗಳಂತೆ ಅನುಸರಿಸಬೇಕಾಗುತ್ತದೆ. ಇಂದ್ರಿಯಾನುಸರಣೆಯು ಅಂಗದಿಚ್ಛೆಯು ತಳಹದಿಯ ಮೇಲೆ ನಿಂತಿರುತ್ತದೆ. ಆದ್ದರಿಂದ ಈ ದೇಹೇಂದ್ರಿಯ ವ್ಯಾಪಾರವೇ ಅನಾಚಾರ. ಇದುಳ್ಳವನೇ ಅನಾಚಾರಿ. ಇವನೊಡನೆ ಅನುಸಂಧಾನವುದೂ ಸಹ ಅವಾರ ಪಾಪ; ಅಘೋರನರಕ!

ಒಕ್ಕುಮಿಕ್ಕುವಾವು?

ಕೇವಲ ಗುರು-ಜಂಗಮರಿಗೆ ಕೊಟ್ಟು ಕೊಂಬುವುದೇ ಒಕ್ಕುಮಿಕ್ಕ ಪ್ರಸಾದವಲ್ಲ. ಅದನ್ನು ಮಾತ್ರ ತಡೆಯುವವನೇ ಪರಿಪೂರ್ಣ ಪ್ರಸಾದಿಯಲ್ಲ. ಅದು ಬರಿ ಬಹಿರಂಗದ ನಡೆ; ಮುಂದೊದಗುವ ಗುರಿಗೆ ಸಾಧನ. ಇದಕ್ಕೂ ಮುಂದೆ ಬೇರೊಂದು ಅಂತರಂಗದ ಅನುಭವವಿದೆ. ಅದನ್ನು ಅರಿತು ಅನುಭವಿಸುವ ಪ್ರಸಾದಿಗಳು ಅಪರೂಪ. ಅಂತಹದನ್ನು ವಿವರಿಸುವುದೇ ಈ ವಚನದ ಗುರಿ!

"ಒಕ್ಕುದ ಮಿಕ್ಕುದ ಕೊಂಬೆವೆಂಬ ನಿಶ್ಚಲದ ಶರಣರಾರೊ? ಒಕ್ಕುದ ಮಿಕ್ಕುದ ಕೊಂಬೆವೆಂಬ ವಿವರ ಬಲ್ಲವರಾರೋ? ಇದ ಬಲ್ಲಡೆ ಬಲ್ಲರು ಸಚ್ಚಿದಾನಂದ ನಿತ್ಯ ನಿರ್ಮಳವಾದ ನಿಜಶರಣರು. ಅದೆಂತೆಂದೊಡೆ- 'ಒಕ್ಕುದೆಂಬುದೆ ಕಾಯ, ಮಿಕ್ಕುದೆಂಬುದೆ ಪ್ರಾಣ.' ಈ ಉಭಯವೇ ತಕ್ಕುದೆಂದು ಕೊಳಬಲ್ಲಡೆ ಸಿಕ್ಕುವ ನಮ್ಮ ಕೂ. ಚ. ಸಂಗಯ್ಯ"

ಏನು ವಿವರಣ ಶಕ್ತಿ! ಎಂತಹ ಪ್ರಜೋದಕ ಶೈಲಿ!! ಎಂತಹ ಜಟಿಲ ವಿಷಯವನ್ನಾದರು ತುಸು ಮಾತಿನಲ್ಲಿ, ತುಂಬಿಬರುವ ಪದ ಪ್ರಬಂಧದಲ್ಲಿ ತಿಳಿವಂತೆ ಹೇಳುವ ಸಮ್ಯಕ್ ಸಾಮರ್ಥ್ಯ ಚನ್ನಬಸವಣ್ಣನದು. ಆದ್ದರಿಂದ ಈತನು ಬರೀ ಬಸವನಲ್ಲ, ಚನ್ನ-ಬಸವ!

ಇದುವೆ ನಿಜವಾದ ಒಕ್ಕುಮಿಕ್ಕುದರ ವಿವರಣೆ! ಇದನಂದವರೆ ನಿಜವಾದ ಪ್ರಸಾದಿಗಳು. ಇದರಂತೆ ಆಚರಿಸಿ ಅನುಭವಿಸುವವರೆ ನಿಶ್ಚಲದ ಪ್ರಸನ್ನಾತ್ಮರು.

ಪ್ರಣವುವಾವುದು?

ಪ್ರಣವುವೆಂದರೆ ಓಂಕಾರವೆಂಬುದೇ ನಮ್ಮ ಗ್ರಹಿಕೆ! ಅದು ನಾವಿತ್ತ ರೂಹೇ ಹೊರ್ತು ರಹಸ್ಯವಲ್ಲ. ಅದರ ಅಂಶಕ್ಯಗಳನ್ನು ನಾವು ಅರಿಯೆವು. ಅದರ ಅನಾಹತ ನಾದವು ನಮ್ಮ ಕಿವಿಗೆ ಕೇಳದು. ಅದರ ನಿರೂಹ್ಯವಾದ ನೆಲೆಯು ನಮ್ಮ ಮನಕ್ಕೆ ನಿಲುಕದು. ಅದರ ನಿರಾಕಾರ ಕಲೆಯು ನಮ್ಮ ಕಣ್ಣಿಗೆ ಕಾಣದು. ಹೀಗೆ ಭೇದಿಸಲರಿಯದ ಪ್ರಣವುದ ಭೇದವನ್ನು ಈ ವಚನವು ಬಿತ್ತರಿಸುತ್ತದೆ. ಪ್ರಾಣ ಸ್ವರೂಪವೆಂದು ಹೇಳಿ ನಿತ್ಯ ನಿಕಟಸಂಬಂಧವನ್ನು ಸಾರುತ್ತದೆ.

"ಪ್ರಣವು ಪ್ರಣವುವೆಂದೊಡೇನು? ಆ ಪ್ರಣವುದ ಭೇದ ಬಲ್ಲವರಾರೋ?.....ಪ್ರಣವುವೆಂಬುದು ಪ್ರಾಣವಾಯು. ನೆಲೆಯನರಿದು ಬಿಡಬಲ್ಲಡೆ ಪ್ರಣವು. ಸಾಕಲ್ಯಬ್ರಹ್ಮ ಮೂಲಾಂಕುರದ ಶ್ರುತಿಯ ನರಿಯಬಲ್ಲಡೆ ಪ್ರಣವು. ಐವತ್ತೆರಡು ಅಕ್ಷರದಲ್ಲಿ ಭೇದಭ್ರಮೆಯ ತಿಳಿದು, ಓದಬಲ್ಲಡೆ ಪ್ರಣವು. ನಾದ ಬಿಂದು ಕಲಾತೀತನಾಗಬಲ್ಲಡೆ ಪ್ರಣವು. ಇದು ಕಾರಣ ಕೂ. ಚ. ಸಂಗಯ್ಯ ನಿಮ್ಮ ಶರಣರು ಸಹಸ್ರನೇದಿಗಳಾದ ಕಾರಣ ಪ್ರಣವು ಪ್ರತಿಷ್ಠಾಚಾರ್ಯರು....."

ಪ್ರಣವು ಬೇರೆಯಲ್ಲ; ಪ್ರಾಣ ಬೇರೆಯಲ್ಲ. ಬರಿಯುವ ರೂಪೇ ರಹಸ್ಯವಲ್ಲ. ಉಪಾಸನೆಗೆ ರೂಹು ಮಾತ್ರ ರೂಹು ಹರಿಯಬೇಕು. ಇದೇ ಬೀಡುವಿಕೆ. ಸಾಕಲ್ಯಬ್ರಹ್ಮಕ್ಕೆ ಅತೀತವಾದ ಮಾತು. ಮನಂಗಳಿಗತೀತವಾದ, ಐವತ್ತೆರಡು ಅಕ್ಷರಗಳನ್ನು ಐಕ್ಯಗೊಳಿಸಿಕೊಂಡಿದ್ದರೂ ಅವಾಕ್‌ಸ್ವರೂಪವಾದ, ನಾದಬಿಂದುಕಲಾತೀತವಾದ ಯಾವ ಸ್ವರೂಪವಿದೆಯೋ ಅದು ಪ್ರಣವು! ಅದನ್ನು ತಿಳಿದವರು ಸಹಸ್ರವೇದಿಗಳಾದ ಅಂದರೆ ಸರ್ವವನ್ನು ತಿಳಿದ ಶರಣರಲ್ಲದೆ ಅಜ್ಞಾನ, ಅನಾಚಾರಗಳಿಂದ ಬಳಲಿ ತೊಳಲುವ ಹುಲುಮಾನವರಿಂದ ಸಾಧ್ಯವಿಲ್ಲ. ಆದ್ದರಿಂದ ಶರಣರು ಪ್ರಣವು ಪ್ರತಿಷ್ಠಾಚಾರ್ಯರೆಂದು ಬಿರುದಿಸುತ್ತಾನೆ ಚನ್ನಬಸವಣ್ಣ! ಪ್ರಣವುದ ವಿಚಾರದಲ್ಲಿ ಇದಕ್ಕಿಂತಲೂ ಬೇರೆ ವಿವರಣೆ ಬೇಕೆ? ಬೇರೆ ವಿಚಾರ ಬೇಕೆ?

ತನ್ನ ಅನುಭವವನ್ನು ವಿಭಜಿಸಿ ವಿವರಿಸುವ ವಿಶಿಷ್ಟ ಶಕ್ತಿ ಚನ್ನಬಸವಣ್ಣನಿಗಿದೆ. ತನ್ನ ಪೂರ್ಣದೃಷ್ಟಿಯನ್ನು ಪ್ರಯೋಗಿಸುವದರಲ್ಲಿ

ಪೂರ್ಣಪ್ರವೀಣ; ಮಾತು ಮಿತ; ಭಾವ ಸಮುನ್ನತಿ ಅಮಿತ. ಅತನ ವಿವರಣೆಯ ವಿಚಾರ ಶೈಲಿಯಲ್ಲಿ ಕಾವ್ಯ ಸೌಂದರ್ಯವೂ ಶಬ್ದ ಮಾಧುರ್ಯವೂ ಒಡಮೂಡಿವೆ. ಅತನ ಸಮಗ್ರ ವಚನದಲ್ಲಿ ಇದೇ ಶೈಲಿಯ ಬಡೆಯಾಟವಿಲ್ಲದಿದ್ದರೂ ಅದರಿಂದ ಅತನಿಗೆ, ಅತನ ವೈಶಿಷ್ಟ್ಯತೆಗೆ ಯಾವ ಕೊರತೆಯಿಲ್ಲ. ಒಟ್ಟಿನಲ್ಲಿ ಅತ ನಿಜವಾದ ವಿಮರ್ಶಕ. ವಿವರಣೆಯ ಕ್ಷೇತ್ರದಲ್ಲಿ ಇತರರಿಂಗೆ ದಿಗ್ದರ್ಶಕ!

ಸಿದ್ಧಹಸ್ತದಿಂದ ವಿಷಯಗಳನ್ನು ಹೇಗೆ ವಾಸ್ತವವಾಗಿ ವಿವರಿಸಬಲ್ಲನೋ ಹಾಗೆ ಸೂತ್ರದಂತೆ ಸಾರವಾಗಿ, ಗಾದೆಗಳಂತೆ ಗಂಭೀರವಾಗಿ ಇರುವ ಕೆಲವು ಮಾತುಗಳನ್ನೂ ಹೇಳಬಲ್ಲ. ಹೇಳಿದ್ದಾನೆ. ಆ ಮಾತುಗಳನ್ನು ಒಮ್ಮೆ ಓದಿದರೆ ಅದೆಂದಿಗೂ ಮರೆಯುವಂತಿಲ್ಲ. ನಿದರ್ಶನಕ್ಕಾಗಿ ಕೆಲವನ್ನಿಲ್ಲಿ ಗುಂಪುಗೂಡಿಸಲಾಗಿದೆ.

ಮರೆಯದ ಮಾತುಗಳು.

೧ ಅರಿದಾಗಲಿದ್ದಿತ್ತು, ಮರೆದಾಗ ಬಿದ್ದಿತ್ತು.
೨ * ಅರಿವುಳ್ಳಾತಂಗೆ ಅಗ್ಗವಣಿಯ ಹಂಗೇಕೋ?
೩ * ಆರೆಭಕ್ತರಾದವರ ಸೆರೆಯಲ್ಲಿರಲಾಗದು.
೪ ಅಂಗಲಿಂಗ ಸಂಗ ಸಮರಸವಾದಡೆ ಭಕ್ತಕಾಯ
೫ ಅಂಗವೆ ಸೆಜ್ಜೆ, ಆಚಾರವೆ ಶಿವದಾರ, ತ್ರಿಕರಣಶುದ್ಧಿಯೇ ಕುಳಿಕೆ.
೬ ಆಚಾರವೇ ಅಂಗ, ಅಂವೇ ಪ್ರಾಣ.
೭ * ಆಚಾರಸಹಿತ ಭಕ್ತ, ಅನಾಚಾರ ಸಹಿತ ನರ.
೮ * ಆನೆಯ ಮಾನದೊಳಗಿಕ್ಕಿದೊಡೆ ಆಡಗುವುದೆ?
೯ * ಇದ್ದುದ ವಂಚನೆ ಮಾಡದಿಪ್ಪುದೆ ಶೀಲ; ಇಲ್ಲದುದಕ್ಕೆ ಕಡನ ಮಾಡದಿಪ್ಪುದೆ ಶೀಲ.
೧೦ ಒಕ್ಕುದೆಂಬುದೆ ಕಾಯ, ಮಿಕ್ಕುದೆಂಬುದೇ ಪ್ರಾಣ.
೧೧ * ಒಮ್ಮೆಯಲ್ಲದೆ ಇಮ್ಮೆಯುಂಟೆ ಪೂಜೆ?
೧೨ * ಓಡಲಾಗದ ಮೃಗವು ಶ್ವಾನಂಗೆ ಪಾಂಸವನೀವಂತೆ.
೧೩ ಜಂಗಮ ಪ್ರೇಮಿಗೆ ಜಡಮತಿಯುಂಟೆ?
೧೪ * ದೇವಾ, ನೀವು ನಿಮ್ಮಂತೆ, ಉಳಿದುದೆಲ್ಲವೂ ನೀವಿಂಸಿದಂತೆ.

೧೫ * ನದಿಯುದಕವ ನದಿಗಿತ್ತಂತೆ.
೧೬ * ನಾನಿಲ್ಲದ ಮುನ್ನ ನೀನಿರ್ದುದಿಲ್ಲವಯ್ಯ.
೧೭ * ನಿಮ್ಮನುಭಾವಿಯ ನೀವೆಂಬೆನಯ್ಯ.
೧೮ * ನಿಷ್ಠೆಯುಳ್ಳಾತಂಗೆ ನಿತ್ಯನೇಮದ ಹಂಗೇಕೋ?
೧೯ * ಪರುಷದ ಪರ್ವತದಲ್ಲಿ ಕಬ್ಬುನವುಂಟೆ?
೨೦ * ಪರಿಮಳವ ಸೋಂಕಿದ ವಾಯುವ ವಿವರಿಸಬಹುದೆ?
೨೧ ಪಾಕಸಂಬಂಧಿಗೆ ಪ್ರಸಾದ ದೂರ.
೨೨ ಭವಿವಿಮಿಶ್ರದ ಭಂಗಗಾರರು ಅತ್ತಲು ಇಲ್ಲ. ಇತ್ತಲು ಇಲ್ಲ.
೨೩ ಭವಿಪಾಕ ಪುನರಪಿ ಜನ್ಮ.
೨೪ * ಭಕ್ತರೂಪೇ ಗುರುರೂಪು, ಗುರುರೂಪೇ ಭಕ್ತರೂಪು.
೨೫ ಬಯಸಿ ಬಂದುದು ಅಂಗಭೋಗ, ಬಯಸದೆ ಬಂದುದು ಲಿಂಗಭೋಗ.
೨೬ ಬಸವಣ್ಣನೆ ಭಕ್ತ, ಪ್ರಭುವೆ ಜಂಗಮ.
೨೭ * ಭಕ್ತರಿಗೆ ಅನುಭಾವವೇ ಬೀಜ; ಅನುಭಾವವೆ ಅರುವಿನಗೊತ್ತು.
೨೮ ಭಕ್ತಕೆಟ್ಟು ಭವಿಯಾದಲ್ಲದೆ ಲಿಂಗೈಕ್ಯನಲ್ಲ.
೨೯ ಬೇಡುವಾತ ಜಂಗಮವಲ್ಲ; ಬೇಡಿಸಿಕೊಂಬಾತ ಭಕ್ತನಲ್ಲ.
೩೦ * ಬೇಕೆಂಬುದು ಕಾಯಗುಣ, ಬೇಡೆಂಬುದು ವೈರಾಗ್ಯ.
೩೧ * ಮರ್ಮವಿಡಿದು ಮಾಡುವಂಗೆ ಕರ್ಮವಿಲ್ಲ.
೩೨ * ಮಹಾನುಭಾವಿಗಳು ಊಡು, ಉಳಿದವರು ನೀಡು.
೩೩ * ಮನಶುದ್ಧವುಳ್ಳಾತಂಗೆ ಮಂತ್ರದ ಹಂಗೇಕೆ?
೩೪ * ಮಾಟವಿಲ್ಲದ ಕೂಟವದೇಕೊ? ಕೂಟವಿಲ್ಲದ ಮಾಟವದೇಕೊ?
೩೫ * ಮುತ್ತು ನೀರಿನಲ್ಲಿ ಹುಟ್ಟಿ ಮತ್ತೆ ನೀರಪ್ಪುದೆ?
೩೬ * ರಾಶಿಗಿಕ್ಕಿದ ಲಚ್ಚಣ ರಾಶಿಯಕೊಳಬಲ್ಲುದೆ?
೩೭ ಲಕ್ಷಕ್ಕಾದಡೂ ಒಬ್ಬ ಭಕ್ತನುಂಟು; ಕೋಟಿಗಾದಡೆಯೂ ಒಬ್ಬ ಜಂಗಮವಿಲ್ಲ.
೩೮ ಲಿಂಗಮುಟ್ಟಿದವರ ಕೈ ಮೀಸಲು.
೩೯ ಲಿಂಗವೇ ಕ್ಷೇತ್ರ, ಜಂಗಮವೇ ಬೀಜ.
೪೦ ಲಿಂಗ ನಿಷ್ಠೆಯಿಲ್ಲದವರ ಆಂಗಣವ ಮೆಟ್ಟಲಾಗದು.

೪೧ * ವಿಶ್ವತೋಚಕ್ಷುವಿನೊಳಗೆ ಜ್ಞಾನಚಕ್ಷುವೊಂದೆ.
೪೨ * ವ್ಯಾಕುಳವೆ ಭವಿ, ನಿರಾಕುಳವೆ ನಿರ್ಭವಿ.
೪೩ * ಶರಣು ಶರಣೆನಲರಿಯದೆ ಬಂದೊರೆಯಾದರು.
೪೪ * ಸತ್ಯವಿಲ್ಲದ ಭಕ್ತಿ ಹತ್ತು ಸಾವಿರಕಾಲ ಮಾಡಿದಡೇನು?
೪೫ * ಸಂತೆಯೊಳಗೆ ಸಮಾಧಿಯುಂಟೆ?
೪೬ * ಸಾವಿರಕೊಬ್ಬ ಸತ್ಯ, ಲಕ್ಷಕ್ಕೊಬ್ಬ ಭಕ್ತ, ಕೋಟಿಗೊಬ್ಬ ಶರಣ.
೪೭ ಹಮ್ಮನುಡಿದ ಭಕ್ತನ ಮನೆಯಾರೋಗಣೆ ಕಾದಿದ ಕೂಳು.
೪೮ * ಹಗರಣದ ಓಗರ ಹಳಸಿದಂತೆ.
೪೯ * ಹೇಳಬಾರದ ಘನವ ಕೇಳಬಾರದು.
೫೦ * ಹಾಲ ಸಾಗರದೊಳಗಿರ್ದು ವಾಳಿಯಾವಿನ ಬೆನ್ನ ಹಂವುದೆ?
೫೧ * ಜ್ಞಾನಿಗೆ ಕತ್ತಲಿಲ್ಲ, ಅಜಾತಂಗೆ ಹೊಲೆಯಿಲ್ಲ.

* ಈ ಗುರುತು ಕಾಣಿಸಿದ ಮೂವತ್ತು ಮೂರು ಮಾತುಗಳು ಇಡೀ ಮಾನವ ಪ್ರಪಂಚಕ್ಕೇನೆ ಸಂಬಂಧಿಸುವ, 'ಸರಂ' ಎಂದೊಪ್ಪುವ ಅನರ್ಘ್ಯ ರತ್ನಗಳು; ಅನುಗ್ರಾಹ್ಯ ಸಂದೇಶಗಳು. ಉಳಿದವು ಹದಿನೆಂಟು ಮತಾಚಾರಕ್ಕೆ ಸಂಬಂಧಿಸಿದವುಗಳಾದರೂ ಆಚಾರಾನುಭವಗಳ ಮಥನದಿಂದ ಹೊರಹೊಮ್ಮಿದ ಮೌಕ್ತಿಕಗಳು. ಒಟ್ಟಿನಲ್ಲಿ ಇವೆಲ್ಲದರಲ್ಲಿಯೂ ಚನ್ನಬಸವಣ್ಣನ ಹಣ್ಣಾದ ಜ್ಞಾನಾನುಭವಗಳ ಸವಿಯನ್ನು ಚನ್ನಾಗಿ ಸವಿಯಬಹುದಾಗಿದೆ; ಸುಖಿಸಬಹುದಾಗಿದೆ. ಜೊತೆಯಲ್ಲಿ ವಿವರಿಸಿ ಹೇಳುವ ವಿಶಿಷ್ಟ ಶಕ್ತಿಯಿದ್ದಂತೆ, ವೇದಸಮಾನವೆಂದು ಹೆಸರಾದ ಗಾದೆಯಂತಹ ಸರ್ವಮಾನ್ಯ ಸಣ್ಣ ಮಾತುಗಳನ್ನು ಹೇಳುವ ಶಕ್ತಿಯನ್ನೂ ಕೌಶಲ್ಯವನ್ನೂ ಕಂಡರಿಯಬಹುದಾಗಿದೆ.

(ಮುಂದೆ)

ಷಡ್ಲಿಂಗಗಳ ಮತ್ತು ಅಷ್ಟಾವರಣಗಳ ವಿವರಣೆ.

(ಲೇಖಕಃ— ಮುಂಗೇಂದ್ರ ಟೊಣ್ಣೂರ ಸಂಪನಾವ ಜಿ॥ ಬೆಳಗಾವ)

೧ ಆಚಾರಲಿಂಗಃ— ಆಚಾರಲಿಂಗ ನಾಸಿಕದಲ್ಲಿ ಐಕ್ಯವಿರುತ್ತದಿಲ್ಲವೇ? ನಾಸಿಕಕ್ಕೆ ಆಚಾರಲಿಂಗವೆಂದು ಯಾಕೆ ಹೆಸರಾಯಿತೆಂದರೆ ಆಡಾಪಿಂಗಳ ನಾಡಿಯಿಂದ ರೇಚಕ ರೂಪಕಂಗಳು ಸೇರಿ ವರ್ತಿಸುವ ನಿಮಿತ್ಯ ನಾಸಿಕಕ್ಕೆ ಆಚಾರಲಿಂಗವೆಂದು ಹೆಸರಾಯಿತು.

೨ ಗುರುಲಿಂಗಃ— ಗುರುಲಿಂಗವು ಜಿಹ್ವೆಯೊಳಗೆ ಐಕ್ಯವಿರುವದಿಲ್ಲವೇ? ಜಿಹ್ವೆಗೆ ಗುರುವೆಂದು ಏನುಕಾರಣ ಹೆಸರು ಬಂದಿತೆಂದರೆ, ಷಡಕ್ಷರ ಗುರುವಾದ ಕಾರಣ ಷಡಾಕ್ಷರವೇ ಷಡ್ರುಚಿಯಾಗಿ ಜಿಹ್ವಾ ಮುಖದಲ್ಲಿ ಅರಿತ ಕಾರಣ ಗುರುಲಿಂಗವೆಂದು ಹೇಳುವದಾಯಿತು.

೩ ಶಿವಲಿಂಗಃ—ಶಿವಲಿಂಗವು ನೇತ್ರದಲ್ಲಿ ಐಕ್ಯವಿರುತ್ತದಲ್ಲವೇ? ನೇತ್ರಕ್ಕೆ ಶಿವಲಿಂಗವೆಂದು ಏನು ಕಾರಣ ಹೆಸರಾಯಿತ್ತೆಂದರೆ ಸ್ವಯಂ ಪ್ರಕಾಶವೇ ಶಿವನಾದ ಕಾರಣ ಸ್ವಯಂ ಪ್ರಕಾಶವೇ ನೇತ್ರದಲ್ಲಿ ಇಂಬುಗೊಂಡು ತೋರುವದರಿಂದ ನೇತ್ರಕ್ಕೆ ಶಿವಲಿಂಗವೆಂದು ಹೇಳಬೇಕಾಯಿತು.

೪ ಜಂಗಮಲಿಂಗಃ— ಜಂಗಮಲಿಂಗ ತ್ವಕ್ಕಿನಲ್ಲಿ ಐಕ್ಯವಿರುತ್ತದಲ್ಲವೇ? ತ್ವಕ್ಕಿಗೆ ಜಂಗಮಲಿಂಗವೆಂದು ಏನು ಕಾರಣ ಹೆಸರಾಯಿತೆಂದರೆ, ಸ್ಪರ್ಶನವು ತ್ವಕ್ಕಿನಲ್ಲಿ ನೆಲೆಗೊಂಡ ಕಾರಣ ತ್ವಕ್ಕಿಗೆ ಜಂಗಮಲಿಂಗವೆಂದು ಹೇಳಬೇಕಾಯಿತು.

೫ ಪ್ರಸಾದಲಿಂಗಃ— ಪ್ರಸಾದಲಿಂಗ ಶ್ರೋತ್ರದಲ್ಲಿ ಐಕ್ಯವಿರುವದಲ್ಲವೇ? ಶ್ರೋತ್ರಕ್ಕೆ ಪ್ರಸಾದಲಿಂಗವೆಂದು ಏನು ಕಾರಣ, ಹೆಸರಾಯಿತೆಂದರೆ ಘೋಷಾ ಮಹಾ ಶಬ್ದಂಗಳು ಪ್ರಕಾಶವಾದ ಕಾರಣ ಸುಶಬ್ದ ಮಹಾಶಬ್ದಗಳು ಶ್ರೋತ್ರಂಗಳಲ್ಲಿ ಇಂಬುಗೊಂಡು ತೋರುವದರ ದಶೆಯಿಂದ ಶ್ರೋತ್ರಕ್ಕೆ ಪ್ರಸಾದಲಿಂಗವೆಂದು ಹೆಸರಾಯಿತು.

೬ ಮಹಾಲಿಂಗಃ—ಮಹಾಲಿಂಗವು ಹೃದಯದಲ್ಲಿ ಹೊಕ್ಕು ಇರುತ್ತದಲ್ಲವೇ? ಪಂಚೇಂದ್ರಿಯ ಮುಖದಲ್ಲಿ ಶಬ್ದ-ಸ್ಪರ್ಶ-ರೂಪ-ರಸ-ಗಂಧ-ಅಂತಃಕರಣ ಇವು ಪರಿಣಾಮಿಸಿದ ಕಾರಣ ಮಹಾಲಿಂಗವಾಯಿತು.

ಅಂತರಂಗ ಅಷ್ಟಾವರಣಗಳು.

೧ ಎನ್ನ ಅರುವಿನಲ್ಲಿ ಗುರುವಾಗಿ ಎನ್ನ ಪ್ರಾಣದಲ್ಲಿ ಲಿಂಗವಾಗಿ ಎನ್ನ ಜ್ಞಾನದಲ್ಲಿ ಜಂಗಮವಾಗಿ ಎನ್ನ ಜಿಹ್ವೆಯಲ್ಲಿ ಪಾದೋದಕ, ಎನ್ನ ನಾಸಿಕದಲ್ಲಿ ಪ್ರಸಾದ. ಎನ್ನ ತ್ವಕ್ಕಿನಲ್ಲಿ ವಿಭೂತಿ ಎನ್ನ ನೇತ್ರದಲ್ಲಿ ರುದ್ರಾಕ್ಷೆ ಎನ್ನ ಶ್ರೋತ್ರದಲ್ಲಿ ಪಂಚಾಕ್ಷರಿ ಇಂತೀ ಇವು ಅಷ್ಟಾವರಣ ಸ್ವರೂಪವಾಗಿ ಎನ್ನ ಕರಸ್ಥಲದೊಳಗೆ ಬಂದು ನಿಂದಾತನೇ ಕೂಡಲ ಸಂಗಮದೇವ.

೨ ಅಯ್ಯಾ ಕ್ರಿಯಾಚಾರದಲ್ಲಿ ಮೋಹವುಳ್ಳಾತನೇ ಸದ್ಭಕ್ತನೆಂದೆ. ಜ್ಞಾನಾಚಾರದಲ್ಲಿ ನೈಷ್ಠೆಯುಳ್ಳಾತನೇ ಸಚ್ಚಿದಾನಂದ ಲಿಂಗವೆಂದೆ ನೋಡಾ. ಭಾವಾಚಾರದಲ್ಲಿ ಪ್ರಿಯವುಳ್ಳಾತನೇ ಪರತ್ಪರ ಜಂಗಮವೆಂಬೆ ನೋಡಾ. ಈ ತ್ರಿವಿಧಾಚಾರದಲ್ಲಿ ಕಾಂಕ್ಷೆಯುಳ್ಳಾತನೇ ನಿಜ ಶರಣನೆಂಬೆ ನೋಡಾ. ಇಂತು ಆಚಾರ-ಸನ್ಮಾರ್ಗ-ಗುರುಲಿಂಗ-ಜಂಗಮ ಶರಣರೇ ಗುಹೇಶ್ವರ ಲಿಂಗಕ್ಕೆ ಮೋಕ್ಷ ಮಂದಿರವೆಂಬೆ ನೋಡಾ ಚನ್ನಬಸವಣ್ಣ.

೩ ಅರಿವೇ ಗುರು, ಆಚಾರವೇ ಶಿಷ್ಯ, ಜ್ಞಾನವೇ ಲಿಂಗ, ಪರಿಣಾಮವೇ ತಪ, ಸಮತೆಯೆಂಬುದೇ ಯೋಗದಾಗು ನೋಡಾ. ಈಸುವ ನರಿಯದೆ ಲೋಚು ಬೋಳಾದರೆ ಮಹಾಲಿಂಗ ಕಲ್ಲೇಶ್ವರ ದೇವರು ನಗುವರು.

೪ ಲಿಂಗವೆಂಬುದು ಪರಶಕ್ತಿಯುತ ಪರಶಿವನ ನಿಜದೇಹ. ಲಿಂಗವೆಂಬುದು ಪರಶಿವನ ಘನತೇಜ. ಲಿಂಗವೆಂಬುದು ಪರಶಿವನ ನಿರತಿಶಯಾನಂದ ಸುಖವು. ಲಿಂಗವೆಂಬುದು ಪರಶಿವನ ಪರಮಜ್ಞಾನ. ಲಿಂಗವೆಂಬುದು ಷಡಧ್ವಮಯ ಜಗಜ್ಜನ್ಮಭೂಮಿ. ಲಿಂಗವೆಂಬುದು ಅಖಂಡ ವೇದ ಶಂಭುಲಿಂಗ ಪೆದ್ದಿ ಪ್ರಿಯ ವಿಶ್ವೇಶ್ವರಾ.

೫ 'ಓಂ ನಮಃ ಶಿವಾಯ' ಎಂಬಾತ ಇಷ್ಟ ಬ್ರಹ್ಮವೆಂಬ ಮಹಾಲಿಂಗವು. ಆ ಪಂಚಾಕ್ಷರವೇ ಪರಮೇಶ್ವರನು. ಆ ಪಂಚಾಕ್ಷರವೇ ಪರತತ್ವವು. ಆ ಪಂಚಾಕ್ಷರವೇ ಪರಮಯೋಗ. ಆ ಪಂಚಾಕ್ಷರವೇ ಪರಮಾತ್ಮನು.

ಮರುಳಸಿದ್ಧ ಕಾವ್ಯ ವಿಮರ್ಶೆ.

(ವಿಮರ್ಶಕರು:-ಶ್ರೀಯುತ ಹುಲ್ಲೂರು ಶ್ರೀನಿವಾಸ ಜೋಯಿಸ ವಕೀಲ ಚಿತ್ರದುರ್ಗ)

(ಸಂಪಾದಕರು ಶ್ರೀ ಅ. ನ. ಕೃಷ್ಣರಾಯರು. ಪ್ರಕಾಶಕರು ವಿಶ್ವವಾಣಿ ಪ್ರಕಟನ ಮಂದಿರ. "ಅನ್ನಪೂರ್ಣ" ವಿಶ್ವೇಶ್ವರ ಪುರಂ, ಬೆಂಗಳೂರು ನಗರ. ಕಿರೀಟ ಅಕ್ಷರದ ಪುಟ IX+೫೬+೧೨೪ ಬೆಲೆ ಮೂರು ರೂಪಾಯಿ.)

(೧) ಗ್ರಂಥ ವಸ್ತು ವೀರಶೈವಾಚಾರ್ಯರನ್ನೂ, ಶಿವಯೋಗಿಯೂ ಉಜ್ಜಯಿನೀ ಸದ್ಧರ್ಮ ಪೀಠಾಸನ ಶರಳಬಾಳು ಗುರುಪೀಠ ಸ್ಥಾಪಕನೂ ಆದ ಶ್ರೀಮರುಳಸಿದ್ಧನು. ಮೂಲ ಗ್ರಂಥಕರ್ತನು ಶಿವಶರಣಗದ್ದುಗೆಯ ರಾಮಿತಂದೆ. ಇದನ್ನು ಅನುಸರಿಸಿ ಬರೆದ ಕವಿ ಹೆಸರಾದ ಬಾಳ್ಗಳಿಯ ದೇಪ. ಸಂಪಾದಿಸಿದವರು ಶರುಣ ಸಾಹಿತಿಗಳಾದ ಶ್ರೀ. ಅ. ನ. ಕೃಷ್ಣರಾಯರು. ಅರ್ಪಣೆ ಜಗದ್ವಿಖ್ಯಾತರಾದ ಪೂಜ್ಯ ಬಾಪೂಜಿಯವರಿಗೆ. ಅಂದಮೇಲೆ ಹೆಚ್ಚು ವಿವರಣೆ ಅನವಶ್ಯಕ.

ಮೊದಲಲ್ಲಿ ೪ ಪುಟಗಳ ಮುನ್ನುಡಿಯೂ ೫೬ ಪುಟಗಳ ಪೀಠಿಕೆಯೂ ಕೊಡಲ್ಪಟ್ಟಿವೆ. ಪೀಠಿಕೆಯಲ್ಲಿ (೧) ಕಾವ್ಯ, ಪುರಾಣಗಳಲ್ಲಿ ಬರುವ ಉಲ್ಲೇಖಗಳು. (೨) ಶಾಸನಗಳು. (೩) ಕಾಲನಿರ್ಣಯ. (೪) ಸ್ಥಳನಿರ್ದೇಶ (೫) ಕಾವ್ಯವಿಚಾರ (೬) ಕಥಾ ಸಾರಾಂಶ (೭) ಮರುಳಸಿದ್ಧನ ಗ್ರಂಥಗಳು (೮) ವಿಮರ್ಶೆ ಎಂದು ೮ ಭಾಗಗಳಾಗಿ ವಿಂಗಡಿಸಿದೆ. ಅನಂತರ ಕಾವ್ಯವನ್ನೂ ಕೊನೆಯಲ್ಲಿ ಶಬ್ದಕೋಶವನ್ನೂ ಕೊಟ್ಟಿದೆ.

(೨) ಪೀಠಿಕೆಯ ೧ ಮತ್ತು ೨ನೆಯ ಭಾಗಗಳಲ್ಲಿ ಕೊಟ್ಟಿರುವ ಉಲ್ಲೇಖಗಳು ಮತ್ತು ಶಾಸನಗಳು ಮರುಳಸಿದ್ಧನ ಜೀವನಚರಿತ್ರೆಯು ಸಂಶೋಧಕರಿಗೆ ಉಪಯೋಗಕರವಾಗಿವೆ. ಆದರೆ ಪಂಡಿತಾರಾಧ್ಯ ಪ್ರಬಂಧ, ಮರುಳಸಿದ್ಧೇಶ್ವರ ಸಾಂಗತ್ಯ, ಮರುಳಸಿದ್ಧ ಚಾರಿತ್ರ್ಯ, ಸೋಮನಾಥ ಭಾಷ್ಯ, ಮತ್ತು ಕೊನಲುಪಾಠ ಮಹಾತ್ಮ್ಯಮು ಎಂಬ ಗ್ರಂಥಗಳಲ್ಲಿ ಮರುಳಸಿದ್ಧನ ವಿಷಯವಾಗಿ ಉಕ್ತವಾಗಿರುವ ಅಂಶಗಳ

ಸಾರಾಂಶವನ್ನು ತಿಳಿಸಿದ್ದರೆ ಚೆನ್ನಾಗಿತ್ತು. ಶಿವತತ್ವ ರತ್ನಾಕರ ಮತ್ತು ಸಂಗನಬಸವನ ವಚನಗಳಲ್ಲಿಯೂ ಮರುಳಸಿದ್ಧನ ಹೆಸರು ಉಕ್ತವಾಗಿದೆ. ಶಾಸನ ಪಟ್ಟಿಯ ೧ ರಿಂದ ೫ನೆಯ ಶಾಸನಗಳಲ್ಲಿ ಮರುಳಸಿದ್ಧನ ವಿಷಯವೇನೂ ಉಕ್ತವಾಗಿರುವುದಿಲ್ಲ. ಈ ಶಾಸನಗಳ ವಿಷಯವನ್ನು ಇಲ್ಲಿ ಉಲ್ಲೇಖಿಸಲು ಕಾರಣಗಳನ್ನು ವಿವರಿಸಬೇಕಾಗಿತ್ತು.

(೨) ಕಾಲನಿರ್ಣಯ ವಿಷಯದಲ್ಲಿ ಹಲವು ವಿದ್ವಾಂಸರ ಅಭಿಮತವನ್ನು ಮಾತ್ರ ಎತ್ತಿಕೊಟ್ಟು ಮರುಳಸಿದ್ಧನು ೧೨ನೆಯ ಶತಮಾನಕ್ಕೆ ಸೇರಿದವನೆನ್ನುವುದಕ್ಕೆ ಪ್ರಬಲವಾದ ಪ್ರಮಾಣಗಳು ದೊರಕಿವೆ ಎಂದು ಮಾತ್ರ ಸಂಪಾದಕರು ಹೇಳಿರುತ್ತಾರೆ. ಈ ಪ್ರಮಾಣಗಳನ್ನೆಲ್ಲಾ ಕಾವ್ಯದೃಷ್ಟಿಯಿಂದ ವಿಮರ್ಶಿಸಿ ಕ್ಲಿಷ್ಟವಾದ ಕಾಲನಿರ್ಣಯ ವಿಷಯದಲ್ಲಿ ಸಂಪಾದಕರು ತಮ್ಮ ಅಭಿಮತವನ್ನು ವ್ಯಕ್ತಪಡಿಸಿದ್ದರೆ ಗ್ರಂಥಕ್ಕೆ ಕಳೆ ಏರುತ್ತಿತ್ತೆಂಬುವುದರಲ್ಲಿ ಸಂದೇಹವಿಲ್ಲ. ಹೀಗೆ ಮಾಡದಿರುವುದು ಒಂದು ಲೋಪವಾಗಿರುತ್ತದೆ.

ಈ ಗ್ರಂಥದಲ್ಲಿ ಉಕ್ತವಾಗಿರುವ ಚಾರಿತ್ರಕ ಪುರುಷನಾದ ನೊಣಬೇಶ, ಬಲ್ಲಾಳನೃಪ, ಮತ್ತು ಗಣಪತಿ ಇವರ ಕಾಲವು ಕನ್ನಡನಾಡಚರಿತ್ರೆಯಲ್ಲಿ ಗೊತ್ತಾಗಿದೆ. ರೇವಣಸಿದ್ಧ ಕಾಲವೂ ಅನೇಕ ಸಂಶೋಧಕರ ಪ್ರಯತ್ನದಿಂದ ಗೊತ್ತುಹಚ್ಚಲ್ಪಟ್ಟಿದೆ. ಕಾಕತೀಯ ವಂಶದ ಗಣಪತಿಯು ಕ್ರಿ. ಶ. ೧೧೯೯ ರಿಂದ ೧೨೬೦ ರ ವರೆಗೆ ರಾಜ್ಯಭಾರ ಮಾಡಿದನು. ಹಳೆಯ ಬೀಡಿನ ಹೊಯಿಸಳರಸರಲ್ಲಿ ಬಲ್ಲಾಳರೆಂಬುವರು ನಾಲ್ವರು ರಾಜರಿದ್ದರು. ಗಣಪತಿಯ ಕಾಲದಲ್ಲಿದ್ದ ರಾಜ ಇಮ್ಮಡಿ ಬಲ್ಲಾಳನು ಕ್ರಿ. ಶ. ೧೧೭೩ ರಿಂದ ೧೨೨೦ ರ ವರೆಗೆ ರಾಜ್ಯಭಾರ ಮಾಡಿದನು. ನೊಣಬೇಶನು ಯಾರು ಎಂಬುದನ್ನು ನಿರ್ಧರಿಸಲು ಸ್ವಲ್ಪ ವಿಚಾರ ಮಾಡಬೇಕಾಗಿದೆ. ಈ ಗ್ರಂಥದಲ್ಲಿ ಉಕ್ತವಾಗಿರುವ ಮರುಳಸಿದ್ಧನ ಪುಣ್ಯಕ್ಷೇತ್ರಗಳೆಲ್ಲಾ ಚಿತ್ರದುರ್ಗ ಜಿಲ್ಲೆಯ ಜಗಲೂರು, ಹರಿಹರ ಮತ್ತು ದಾವಣಗೆರೆ, ತಾಲ್ಲೂಕುಗಳಲ್ಲಿಯೂ ಮತ್ತು ಅಕ್ಕಪಕ್ಕದ ಬಳ್ಳಾರಿ ಜಿಲ್ಲೆಯ ಕೂಡ್ಲಿಗಿ ತಾಲ್ಲೂಕಿನಲ್ಲಿಯೂ ಇವೆ. ಈ ಭಾಗದ ರಾಜ್ಯಕ್ಕೆ ಕ್ರಿ. ಶ. ೧೦ ರಿಂದ ೧೨ನೆಯ ಶತಮಾನದಲ್ಲಿ ನೊಳಂಬವಾಡಿ ಎಂದು ಹೆಸರಿತ್ತು. ಮೊದಲು ವಿಸ್ತಾರವಾದ ನೊಳಂಬವಾಡಿ ೩೨೦೦೦ ರಾಜ್ಯಕ್ಕೆ ನಿಡುಗಲ್ಲಿನಲ್ಲಿಂದ ಆಳುತ್ತಿದ್ದ ನೊಳಂಬಪಲ್ಲವರು ರಾಜರಾಗಿದ್ದರು.

ಉಚ್ಚಂಗಿಯ ಪಾಂಡ್ಯರು ೧೦ನೆಯ ಶತಮಾನದ ಕೊನೆಯಲ್ಲಿ ನೊಳಂಬವಾಡಿ ೩೨೦೦೦ ಪ್ರಾಂತವನ್ನು ವಶಮಾಡಿಕೊಂಡಾಗ ನಿಡುಗಲ್ಲು ನೊಳಂಬರು ಈ ಪಾಂಡ್ಯರಲ್ಲಿ ಐಕ್ಯವಾಗಿ ಹೋದರು.[೧] ಅನಂತರ ಪಾಂಡ್ಯರೇ ೧೨ನೇ ಶತಮಾನದ ಅಂತ್ಯದ ವರೆವಿಗೂ ಧರಣೀಯುವತಿಗೆ ಕಟಿನೂಪರವೆನಿಪ ನೊಳಂಬವಾಡಿ ೩೨೦೦೦ ರಾಜ್ಯಕ್ಕೆ ಮಹಾಮಂಡಲೇಶ್ವರರಾಗಿದ್ದರು. ವಿಜಯಪಾಂಡ್ಯದೇವ ಅಥವಾ ಕಾಮದೇವನೆಂಬ ಮಹಾಪರಾಕ್ರಮಿಯಾದ ಮಹಾಮಂಡಲೇಶ್ವರನು ಕ್ರಿ ಶ. ೧೧೪೪ ರಿಂದ ೧೧೪೭ ರವರೆಗೂ ರಾಜನಾಗಿದ್ದನು. ಅನಂತರ ಕ್ರಿ. ಶ. ೧೨೦೦ ರ ವರೆಗೂ ಇವನು ಜೀವಿಸಿದ್ದಂತೆ ಆಧಾರಗಳಿವೆ. ಪಾಂಡ್ಯರಾಜರ ಪೀಳಿಗೆಯನ್ನು ಅವಶ್ಯಕವಾದಷ್ಟು ಮಾತ್ರ ಕೆಳಗೆ ಕೊಟ್ಟಿದೆ.

ಪಾಂಡ್ಯ ರಾಜರ ಪೀಳಿಗೆ.

ಪಲಾಶ ಪಾಂಡ್ಯ (೧೦೭೫. *A. D.*)

|

ಇರುಕ ವೇಳ (೧೧೦೧–೧೧೨೪ *A. D.*)

|

ರಾಯಪಾಂಡ್ಯ (೧೧೨೪–೧೧೨೫ *A. D.*)

ರಾಣಿ ಸೋವಲದೇವಿ

|

ಪಂಡಿತ ಪಾಂಡ್ಯ (೧೧೨೪-೧೧೪೪ *A. D.*)	ವೀರಪಾಂಡ್ಯ (೧೧೪೪-೧೧೪೭ *A. D.*)

ವಿಜಯ ಪಾಂಡ್ಯ. ಅಥವಾ ಕಾಮದೇವ (೧೧೪೪-೧೧೪೭ *A D.*)

ಇವ್ಮಡಿ ವೀರಬಲ್ಲಾಳ ಉಚ್ಚಂಗೀದುರ್ಗವನ್ನು ಸ್ವಾಧೀನ ಮಾಡಿಕೊಂಡು ತದ್ರಾಜ್ಯವನ್ನು ಹಿಂದಕ್ಕೆ ಕೊಟ್ಟು ಪರಣ ಭರಣದಿಂದ ಖ್ಯಾತಿಯನ್ನು ಪಡೆದನು. ಮರುಳಸಿದ್ಧನು ಜನಿಸಿದಂದಿನಿಂದಲೂ ದೇಶೋದ್ಧಾರಕಾರ್ಯವನ್ನು ಕೈಗೊಂಡು ಸಂಚರಿಸಿದ ಊರುಗಳನ್ನೊಳಗೊಂಡ ನೊಳಂಬ

೧. ಕನ್ನಡನಾಡಿನ ಚರಿತ್ರೆ ಮೊದಲನೆಯ ಭಾಗ ಪುಟ ೫೬-೫೭.

ವಾಡಿ ರಾಜ್ಯಕ್ಕೆ ಅರಸನಾದ ವಿಜಯಪಾಂಡ್ಯನನ್ನೇ ಕವಿದೇವನು ನೋಡಬೇಕು ಎಂದು ಸಂಬೋಧಿಸಿದಂತೆ ವ್ಯಕ್ತವಾಗುವುದು. ಉಜ್ಜನೀ ಸಿದ್ಧೇಶ್ವರ ದೇವಾಲಯದ ಹೊರ ಆವರಣದಲ್ಲಿ ಬಿದ್ದಿರುವ ಜಗದ್ದಳ ಪಾಂಡ್ಯನ ಶಕ ೧೧೧೫ ನೇ ಸಂವತ್ಸರದ (೧೧೯೨ *A. D.*) ಶಿಲಾಶಾಸನವು ಇದನ್ನು ಪುಷ್ಟೀಕರಿಸುತ್ತದೆ. ಕ್ರಿ. ಶ. ೧೧೮೭ ನೆಯ ಸಂವತ್ಸರದ ಸಿರಿವಾಳ ಶಾಸನದಲ್ಲಿ ಉಕ್ತವಾಗಿರುವ ದಾನವನ್ನು ಸ್ವೀಕರಿಸಿದ ರೇವಣ ಸಿದ್ಧನು ಮರುಳಸಿದ್ಧನ ಗುರುವಾಗಿರುವನು. ಮರುಳಸಿದ್ಧನು ರೇವಣ ಸಿದ್ಧನಿಗಿಂತಲೂ ವಯಸ್ಸಿನಲ್ಲಿ ಬಹಳ ಚಿಕ್ಕವನಾಗಿಯೇ ಇರಬೇಕು ಎಂದು ಸ್ಪಯಂ ವ್ಯಕ್ತವಾಗುವುದು. ಮರುಳಸಿದ್ಧನು ಕ್ರಿ. ಶ. ೧೧೪೦ ರಲ್ಲಿ ಜನಿಸಿರಬಹುದು. ರೇವಣಸಿದ್ಧರ ಕಾಲ ಸುಮಾರು ೧೧೦೦ ರಿಂದ ಕ್ರಿ. ಶ. ೧೨೦೦ ರ ವರೆಗೆ ಎಂದು ಬೇರೆಕಡೆ ವಿವರಿಸಿದ್ದೇನೆ.[೨] ಮರುಳಸಿದ್ಧನು ಗಣಪತಿಯ ಕಾಲದಲ್ಲಿ ಓರಗಲ್ಲನ್ನು ಸಂದರ್ಶಿಸಿದನೆಂದು ಹೇಳಿರುವುದರಿಂದಲೂ ನಂತರ ಕೆಲವು ವರ್ಷಗಳ ಕಾಲ ಮರುಳಸಿದ್ಧನು ಜೀವಿಸಿದ್ದುದರಿಂದಲೂ ಕ್ರಿ. ಶ. ೧೨೧೦ ರ ವರೆಗೆ ಜೀವಿಸಿದ್ದನೆಂದು ಸದ್ಯಕ್ಕೆ ಹೇಳಬಹುದು. ಇನ್ನೂ ಆಚೆ ಈಚೆ ಇದ್ದನೇ ಎಂಬುದು ಸಂಶೋಧನೆಯಿಂದ ಕಂಡು ಹಿಡಿಯಬೇಕಾಗಿದೆ.

(೪) ಸ್ಥಳ ನಿರ್ದೇಶ ವಿಷಯದಲ್ಲಿ ಶ್ರೀ ಮಲ್ಲಿಕಾರ್ಜುನ ದೇಶಿಕರು, ಈ ವಿಮರ್ಶಕ, ಮತ್ತು *T. H. M.* ಸದಾಶಿವಯ್ಯನವರು ಇವರುಗಳ ಅಭಿಪ್ರಾಯವನ್ನು ತಿಳಿಸಿ ಅನಂತರ ಶ್ರೀ. ಜೀರಿಗೆ ಕಟ್ಟೆ ಬಸಪ್ಪನವರ 'ಮರುಳಸಿದ್ಧನ ಕೆಲವು ಪುಣ್ಯ ಕ್ಷೇತ್ರಗಳು' ಎಂಬ ಅಪ್ರಕಾಶಿತ ಲೇಖನ ಮಾಲೆಯಿಂದ ಕೆಲವು ಪುಣ್ಯ ಕ್ಷೇತ್ರ ಟಿಪ್ಪಣಿಯನ್ನು ಕೊಟ್ಟಿದ್ದಾರೆ. ನನ್ನ ಅಭಿಪ್ರಾಯವು ಶ್ರೀ. ಮಲ್ಲಿಕಾರ್ಜುನ ದೇಶಿಕರ ಲೇಖನವನ್ನೇ ಅವಲಂಬಿಸಿರುವುದರಿಂದ ಇದು ದ್ವಿರುಕ್ತಿಯಾಗಿದೆ. ಅಲ್ಲದೆ ಶ್ರೀ. ಜೀರಿಗೆ ಕಟ್ಟೆ ಬಸಪ್ಪನವರ ಹೊಸ ಶೋಧದಿಂದ ನನ್ನ ಅಭಿಪ್ರಾಯವನ್ನು ಬದಲಾಯಿಸಿಕೊಳ್ಳಬೇಕಾಗಿದೆ. ಶ್ರೀಯುತ ಬಸಪ್ಪನವರು ಮರುಳಸಿದ್ಧನ ನೈಜ ಚರಿತ್ರೆಯ ಬಗ್ಗೆ ಹೊಸ ಬೆಳಕನ್ನು ಬೀರಿರುತ್ತದೆ ಎಂಬ ಸಂಪಾದಕರ ಅಭಿಪ್ರಾಯವು ಸಹಜವಾದದ್ದೇ ಸರಿ. ಪೂಜ್ಯಬಾಪೂಜೀಯವರ ಚಲನ ಚಿತ್ರ ನಿರ್ಮಾಣಕನಂತೆ (*Director of*

೨. ಶರಣ ಸಾಹಿತ್ಯ ಸಂಪುಟ ೮ ಸಂಚಿಕೆ ೨. ೫ ಪುಟ.

documentary film) ಶ್ರೀ ಕಟ್ಟೆ ಬಸಪ್ಪನವರೂ ಸ್ತೋತ್ರಾರ್ಹರಾಗಿರುತ್ತಾರೆ. ಕನ್ನಡ ನಾಡಿನ ಮಹಾಪುರುಷರ ಚರಿತ್ರೆಯ ಸಂಶೋಧಕರು ಈ ರೀತಿಯ ಶೋಧನವನ್ನು ಕೈಗೊಳ್ಳಬೇಕಾದುದು ಅತ್ಯಾವಶ್ಯಕವಾದದ್ದೆಂದು ಒತ್ತಿ ಹೇಳದಿರಲಾರೆ. ಈ ಕಾವ್ಯದಲ್ಲಿ ಉಕ್ತವಾಗಿರುವ ಇನ್ನೂ ಇತರ ಸ್ಥಳಗಳಾದ ಬನ್ನಿಕೋಡು, ಹಳೆಯ ಬೀಡು, ಕುಂಭಿನಿ (ಕುಂಬಳಾರು) ಚಿನ್ಮೂಲಗಿರಿ, ರಾಯಶೆಟ್ಟಿಯ ಕೆರೆಯಪುರ, ಓರಗಲ್ಲು ಮತ್ತು ಕೊಲ್ಲಾಪುರ ಮುಂತಾದ ಸ್ಥಳಗಳ ವಿಷಯದಲ್ಲಿ ಸಂಪಾದಕರು ಕೆಲವು ಟಿಪ್ಪಣಿಗಳನ್ನಾದರೂ ಬರೆದಿದ್ದರೆ ಚನ್ನಾಗಿತ್ತು. ಅಲ್ಲದೆ ಪಾಠಕರು ಗ್ರಂಥದ ವಿಷಯವನ್ನು ಸುಲಭವಾಗಿ ಗ್ರಹಿಸಲು ಸ್ಥಳ ನಿರ್ದೇಶಗಳ ಒಂದು ಭೂಪಟವನ್ನೂ ಕೆಲವು ಚಿತ್ರಗಳನ್ನೂ ಕೊಟ್ಟಿದ್ದರೆ ಚನ್ನಾಗಿತ್ತು. ಬನ್ನಿಕೋಡು ಹರಿಹರ ಕಾಲೋಕ್ತಿನಲ್ಲಿದೆ. ವಿಜಯ ಪಾಂಡ್ಯನ ತಾಯಿ ಸೋಪಲದೇವಿಯು ಬನ್ನಿಕೋಡಿನ ಸ್ವಯಂಭು ಕಲಿದೇವರು ಮತ್ತು ಮಲ್ಲಿಕಾರ್ಜುನ ದೇವರಿಗೆ ಹೇರಳವಾಗಿ ದಾನ ಮಾಡಿರುವಳು.[೩] ಆಗ್ಗೆ ಈ ದೇವಾಲಯಗಳು ವಿದ್ಯಾ ಮತ್ತು ಧರ್ಮ ಕೇಂದ್ರಗಳಾಗಿದ್ದವು. ಹಳೆಯಬೀಡು ಹಾಸನ ಜಿಲ್ಲೆಯಲ್ಲಿದೆ. ಹೊಯಿಸಳರ ರಾಜಧಾನಿಯಾದ ದೋರ ಸಮುದ್ರವೇ ಇದು. ಕುಂಭಿನಿ ಅಥವ ಕುಂಬಳಾಪುರವು ಹೆಂಹರ ಕಾಲೋಕ್ತಿನ ಮಲೆಯುಬೆನ್ನೂರು ಹೋಬಳಿಯಲ್ಲಿದೆ. ಚಿನ್ಮೂಲಗಿರಿ ಎಂದರೆ ಚಿತ್ರ ದುರ್ಗಕ್ಕೆ ಆಗ್ಗೆ ಇದ್ದ ಹೆಸರು. ರಸಸಿದ್ಧರ ವಾಸಸ್ಥಳವಾಗಿತ್ತು. ರೇವಣಸಿದ್ಧನು ಈ ಬೆಟ್ಟದ ಮೇಲಿರುವ ಸಿದ್ಧನಾಥ ದೇವಾಲಯದಲ್ಲಿ (ಈಗ ಈ ಗುಡಿಗೆ ಚಂಪಕಾ ಸಿದ್ಧೇಶ್ವರ ಎಂದು ಹೆಸರು) ರುವ ಗುಹೆಗಳಲ್ಲಿ ವಾಸವಾಡಿದ್ದನು. ರಾಯಶೆಟ್ಟಿಯ ಕೆರೆ ನೈಜಾಮ ರಾಜ್ಯದಲ್ಲಿರುವ ಮುದನೂರು ಎಂದು ಶ್ರೀ ಸದಾಶಿವಯ್ಯನವರು ಅಭಿಪ್ರಾಯ ಪಟ್ಟಿದ್ದಾರೆ.[೪] ಓರಗಲ್ಲು ನೈಜಾಮ ರಾಜ್ಯದಲ್ಲಿದೆ. ಕಾಕತೀಯ ಅರಸರ ಈಚಿನ ರಾಜಧಾನಿಯಾಗಿತ್ತು. ಕೊಲ್ಲಾಪುರ ಬೊಂಬಾಯಿ ಪ್ರಾಂತದಲ್ಲಿರುವ ಇದೇ ಹೆಸರಿನ ರಾಜ್ಯದ ರಾಜಧಾನಿ. ಆಗ್ಗೆ ಸಿದ್ಧರ ನೆಲೆವೀಡು. ಕನ್ನಡ ದೇವತೆಯಾದ ಮುಡಾ

೩. ದಾವಣಗೆರೆ ೭೭ ನೇ ಶಾಸನ.

೪. ಮುದನೂರಿನ ಏಕೋರಾಮನೂ ಗದ್ವಾಗೆಯ ರಾಮಿತಂದೆಯೂ ಬೇರೆ ಬೇರೆ ವ್ಯಕ್ತಿಗಳು ಎಂದು ನನಗೆ ತೋರುತ್ತದೆ.

ಲಕ್ಷ್ಮಿಯು ಕೊಲ್ಲಾಪುರದರಸರ ಮನೆದೇವತೆ. ಈ ಸ್ಥಳಗಳನ್ನೆಲ್ಲಾ ಸಂದರ್ಶಿಸಿ ಮರುಳಸಿದ್ಧನ ಕುರುಹುಗಳನ್ನು ಶೋಧಿಸುವದು ಸೂಕ್ತವಾಗಿದೆ.

(೫) ಕಥಾ ಸಾರಾಂಶವನ್ನು ಶ್ರೀ ಅರ್ಚಕ ವೆಂಕಟೇಶರು ಬರೆದು ಕೊಟ್ಟಿದ್ದಾರೆ. ಇವರು ತರುಣ ಬರಹಗಾರರು. ಇವರ ಹಲವು ಕತೆ ಕವನಗಳು ಪ್ರಕಾಶವಾಗಿವೆ. ಕಥಾ ಸಾರಾಂಶವನ್ನು ಹೃದಯಂಗಮವಾಗಿ ನಿರೂಪಿಸಿದ್ದಾರೆ. ಆದರೆ ಪುಟ ೪೧ ರಲ್ಲಿ ಇಲ್ಲಿಂದ ಮರುಳ ಮುಂದೆ ಸಾಗಿಬರಲು ಪಲ್ಲವ ಅರಸರ ಸತ್ತಿಗೆಗಳು ಅವನ ಎಡಬಲದಲ್ಲಿ ಬಂದು ಕರಣೆಂದಾಗ ಅವರಿಗೂ ಸಲ್ಲಲಿತ ವರವನ್ನು ಕೊಟ್ಟು ಕಳುಹಿಸಿದನು ಎಂದು ಹೇಳಿದ್ದಾರೆ. ಹಳೆಯ ಬೀಡಿನ ಅರಸರು ಹೊಯ್ಸಳರು. ಪಲ್ಲವ ಅರಸರಲ್ಲಿ ಮೂಲ ಪದ್ಯದಲ್ಲಿ (೩–೧೧೦) ಪಲ್ಲವದ ಸತ್ತಿಗೆಗಳು ಎಂದಿದೆಯೇ ಹೊರತು ಪಲ್ಲವರ ಸತ್ತಿಗೆಗಳಲ್ಲ. ಬಹುಶಃ ಪಲ್ಲವ ಅಂದರೆ ಜಿಗುರುಗಳ ಅಥವ ಕೋಮಲವಾದ ಹಸುರೆಲೆಗಳ ಛತ್ರಿಗಳನ್ನು ಮರ್ಯಾದಾರ್ಥವಾಗಿ ಹಿಡಿದಿರಬಹುದು. ಇಲ್ಲಿ ಮಾತ್ರ ಶ್ರೀ ಅರ್ಚಕರು ಸ್ವಲ್ಪ ಎಡವಿದ್ದಾರೆ. ಅನಂತರ ತೆಲುಗ ಬಾಳಿಗೆ ಬಂದು ಒಕ್ಕಲಿಗ ಕಾಯುಕದ ಸಿದ್ಧಯ್ಯನಿಗೆ ಮುರು ಮುದ್ರೆಯನ್ನೂ ಅರಿವೆ ಅಂದರೆ ಕಾವಿ ವಸ್ತ್ರವನ್ನೂ ಕೊಟ್ಟು ಮಠಾಧಿಕಾರಿಯನ್ನಾಗಿ ಮಾಡಿ ಗುರುಸೇವೆಯನ್ನು ಮಾಡೆಂದು ಹರಸಿದನು. ಇದಕ್ಕಾಗಿ ತೆಲುಗಬಾಳು ಮನೆತನದವರು ಮರುಳಸಿದ್ಧನನ್ನು ಛಾಂಗು! ಭಲರೆ! ಎಂದು ಹೊಗಳಿದರು ಎಂದು ೫ನೇ ಸಂಧಿಯ ಮೊದಲನೇ ಪ್ರಕರಣವನ್ನು ಬದಲಾಯಿಸುವುದು ಸೂಕ್ತವಾಗಿದೆ. ಇದೇ ಸಂಧಿಯ ಅಂತ್ಯ ಪ್ರಕರಣದಲ್ಲಿ ಕೊನೆಯ ಪದ್ಯದ ಸಾರಾಂಶವು ವ್ಯಕ್ತವಾಗಿಲ್ಲ.

ಮರುಳಸಿದ್ಧನು.

ಇಂತು ಪರಿ ಲೀಲೆಗಳ ನಟಿಸುತ ಸಕಲದೇಶ-
ಕಾಂ ತಿರುಗಿ ಬಂದು ತರಳಬಾಳಸಿದ್ಧಯ್ಯನನು
ಮುಂತೆ ತನ್ನಂತೆ ಲೀಲೆಯನು ನಟಿಸಿ ಬಾಳೆಂದು
ಶಾಂತನಪ್ಪಣೆಯಿತ್ತು.

ತನ್ನ ಮಠದ ಉತ್ತರಾಧಿಕಾರವನ್ನು ತರಳಬಾಳಸಿದ್ಧಯ್ಯನಿಗೆ ವಹಿಸಿ ಉಜ್ಜಯಿನಿಯ ಶಿವಲಿಂಗದಲ್ಲಿ ಐಕ್ಯವಾಗುತ್ತಾರೆ ಎಂದು ಶ್ರೀ ದೇವೀರಪ್ಪನವರು ಹೇಳಿರುವಂತೆ ವ್ಯಕ್ತಮಾಡುವುದು ಸೂಕ್ತವಾಗಿದೆ.

(೬) ಸಿದ್ಧಲಿಂಗನ ಚಂತ್ರೆ, ಸಿದ್ಧಲಿಂಗನ ಕೃತಿ, ಮರುಳಸಿದ್ಧೇಶ ಚರಿತ, ಸಿದ್ಧೇಶ್ವರ ಕೃತಿ ಎಂಬ ವಿವಿಧ ಹೆಸರನ್ನು ದೇಪ ಕವಿಯು ಹೇಳಿರುವಾಗ ಇದನ್ನು ಸಂಪಾದಕರು "ದೇವ ಕವಿಯ ಮರುಳಸಿದ್ಧ ಕಾವ್ಯ" ಎಂದು ಏಕೆ ಹೆಸರಿಸಿದರೋ? ಕಾರಣ ಹೇಳಬೇಕಾಗಿತ್ತು. ಬರೆದವನು ದೇಪ ಅಥವ ದೇವ ಎಂದು ರಾಯರು ಅಭಿಪ್ರಾಯಪಟ್ಟಿದ್ದಾರೆ. ಕವಿಯ ಹೆಸರು ೧–೧೬ನೇ ಪದ್ಯದಲ್ಲಿ ದೇಪ ಎಂದು ಉಕ್ತವಾಗಿದೆ. ಮತ್ತೊಂದೆಡೆ (೬–೨೨) ಪೇಳಿದನು ದೇವಸುತ ಪೇಳೆನು ಕಲೀಕೃತಿಯ ಅಂದರೆ ದೇವಸುತ ಪೇಳೆನುತಲು ಈ ಕೃತಿಯ (ದೇಪ) ಪೇಳಿದನು ಎಂದು ಅರ್ಥವಾಗುತ್ತದೆ ದೇವಸುತನೆಂಬುವನ ಪ್ರೇರಣೆಯಿಂದ ದೇಪನು ಈ ಕೃತಿಯನ್ನು ರಚಿಸಿರಬಹುದು. ಅಥವ ದೇಪನು ದೇವನೆಂಬುವನ ಸುತನಾಗಿರಬಹುದು. ಆದ್ದರಿಂದ ಈ ಕವಿಯು ಕವಿಸರು ದೇಪ ಕವಿ, ದೇವ ಕವಿಯಲ್ಲ. ಬಾಳ್ಗುಲಿಯ ಕಲಿದೇವ ದೇಪ ಕವಿಯ ಗುರುವೆಂದು ಗೊತ್ತಾಗುತ್ತದೆ ಎಂಬುದು ರಾಯರ ಅಭಿಪ್ರಾಯ. ಇದು ಸರಿಯಲ್ಲ. ಬಾಳ್ಗುಲಿ ಗ್ರಾಮವು ಹರಪನಹಳ್ಳಿಯಿಂದ ಉತ್ತರ ದಿಕ್ಕಿನಲ್ಲಿ ನಾಲ್ಕು ಮೈಲಿ ಅಂತರದಲ್ಲಿದೆ. ಇಮ್ಮಡಿ ವೀರಬಲ್ಲಾಳನಿಗೆ ಒಮ್ಮೆ ಇದು ಉಪರಾಜಧಾನಿಯಾಗಿತ್ತು. ಕ್ರಿ. ಶ. ೧೦೦೮ನೇ ವರ್ಷಕ್ಕೂ ಮುಂಚೆಯೇ ಸ್ಥಾಪಿತವಾಗಿದ್ದ ಕಲ್ಲೇಶ್ವರ ದೇವರಿಗೆ ಕಲಿದೇವ ಎಂಬ ಹೆಸರು ಶಾಸನಗಳಲ್ಲಿ ಉಕ್ತವಾಗಿದೆ. ೫ "ಪಶುಪತಿ ಸ್ವಯಂಭು ಬಾಳ್ಗುಳಿಯ ಕಲಿದೇವನಿಂತುಸುಂದವೊಲು" ಅಂದರೆ ಬಾಗಲೀ (ಈಗಿನ ಹೆಸರು) ಗ್ರಾಮದ ಸ್ವಯಂಭು ಕಲಿದೇವ ಸ್ವಾಮಿಯು ಕರುಣಿಸಿದುದರಿಂದ ದೇಪ ಕವಿಯು ಈ ಚಂತ್ರೆಯನ್ನು ರಚಿಸಿದನು ಎಂದು ವ್ಯಕ್ತವಾಗುತ್ತದೆ. ಕಲಿದೇವನು ದೇಪನ ಗುರುವಲ್ಲ, ದೇವನ ಆರಾಧ್ಯದೇವರು.

ಈ ಕಾವ್ಯದಲ್ಲಿ ೪೩೫ ಪದಗಳು ಇವೆ ಎಂದು ಇಂಗ್ಲೀಷು ಮುನ್ನುಡಿಯಲ್ಲಿ ಉಕ್ತವಾಗಿದೆ. ೬ನೇ ಸಂಧಿಯ ೬೩ನೇ ಪದ್ಯದಲ್ಲಿ ಸಮಸ್ತ ಪದ ನಾನೂರೆಂಭತ್ತು ನಾಲ್ಕು ಎಂದು ಕವಿಯು ಹೇಳಿರುವನು. ಮುದ್ರಣ ಕಾವ್ಯದಲ್ಲಿ ೪೫೬ ಪಟ್ಟಿಯಿಗಳೂ ೨೧ ಕಂದ ಮತ್ತು ಇತರ ಪದಗಳೂ ಪದ್ಯದಂತಿರುವ ೫ ವಚನಗಳೂ ಒಟ್ಟು ೪೮೨ ಪದಗಳಿವೆ. ಎರಡು ಪದಗಳೂ ಮಾತ್ರ ಲೋಪವಾದಂತೆ ತಾಣುತ್ತದೆ.

೫. Bellary District Gazeteer page. ೪೪೮.

ನಿಸರ್ಗನಿಯಮಕ್ಕನುಗುಣವಾಗಿ ಋತುವಾದುದು ಅಕೆಯ ತಪ್ಪಲ್ಲ. ಇದನ್ನು ತಿಳಿಯದೆ ಅಕೆಗೆ ಶಾಪಕೊಡುವ ಮುನಿ ಶುದ್ಧರುಷ್ಟನಾಗಿರಬೇಕು ಎಂದು ಸಂಪಾದಕರು ಹೇಳುವ ಅಭಿಪ್ರಾಯದಲ್ಲಿ ಹುರುಳಿಲ್ಲ. ಮುನಿಯು ಶಾಪ ಕೊಟ್ಟದ್ದು ಋತುವಾದದ್ದಕ್ಕಲ್ಲ. "ಎಲೆ ನೀರಿ ಹರ ಪೂಜೆಯಂ ಮಾಪ್ಪ ಸಮಯದೋಳ್ ಕಳೆಯಳಿದು ಕರವಾಜಿ ಮಾರ್ಪರೀ" ಅಂದರೆ ಋತುವಾಗಿಯೂ ಹರನನ್ನು ಕರವಾಜಿ ಮಾಡಿದ್ದಕ್ಕೆ. ಕರವಾಜಿ ಅಂದರೆ ಅರ್ಜಿಸು ಎಂದು ಟೀಕಿಕೆಯ ಸಾರಾಂಶದಲ್ಲಿ ಅರ್ಥ ಮಾಡಲಾಗಿದೆ. ಕುಲಸ್ತ್ರೀಯರು ಋತುವಾದ ಸಮಯದಲ್ಲಿ ಶುಭ ಕೆಲಸವನ್ನು ಮಾಡಕೂಡದೆಂಬುದು ಹಿಂದೂ ಧರ್ಮ ನಿಯಮಬದ್ಧವಾದುದು. ದೇವರ ಪೂಜೆಯು ನಿಷಿದ್ಧ. ವಿಜ್ಞಾನಶಾಸ್ತ್ರವೂ ಇದನ್ನೇ ಹೇಳುತ್ತದೆ. ಋಷಿಯನ್ನು ರೂಕ್ಷನೆಂದುದು ಅಕ್ಷವ್ಯವಾದುದು. ಋಷಿಯು ರೂಕ್ಷನಲ್ಲ. ತನ್ನ ಪತ್ನಿಯೆಂದೂ ಪರಿಗಣಿಸದೆ ನ್ಯಾಯವಾದ ಶಿಕ್ಷೆಯನ್ನು ವಿಧಿಸಿದ ಪರಮಾರ್ಥಿ.

೬೮ ಸಾವಿರ ವಚನಗಳನ್ನು ರಚಿಸಿದ ಪಂಡಿತೋತ್ತಮನಾದ ಮರುಳಸಿದ್ಧನು ಕೆಲವು ಗ್ರಂಥಗಳನ್ನಾದರೂ ರಚಿಸಿರಬೇಕು. ಮರುಳ ಸಿದ್ಧನ ದಾರುಕ ಭಾಷ್ಯವೂ ಇತರೇ ಗ್ರಂಥಗಳೂ ದೊರೆಯದೇ ಇರುವುದು ಶೋಚನೀಯ ವಿಷಯ. ವೀರಶೈವ ಮಠಾಧಿಪತಿಗಳು ತಮ್ಮ ತಮ್ಮ ಗ್ರಂಥ ಭಂಡಾರದಲ್ಲಿರುವ ಗ್ರಂಥಗಳ ಪಟ್ಟಿಯನ್ನಾದರೂ ಮಾಡಿ ಮಾಸಪತ್ರಿಕೆ ಮುಕ್ತು ತ್ರೈಮಾಸಿಕ ಪತ್ರಿಕೆ ಮುಂತಾದವುಗಳಲ್ಲಿ ಒಂದುವೇಳೆ ಪ್ರಕಟಮಾಡಿದ್ದಾದರೆ ಸಂಶೋಧಕರಿಗೆ ಹೆಚ್ಚಿಗೆ ಸಹಾಯವಾಗುವುದು. ಇಲ್ಲವಾದರೆ ನುಶಿತಿಂದು ಗ್ರಂಥಗಳು ಹಾಳಾಗಿ ಮಹಾತ್ಮರ ನೈಜ ಚರಿತ್ರೆಯು ಬೆಳಕಿಗೆ ಬಾರದಂತಾಗುತ್ತದೆ. ಮರುಳಸಿದ್ಧನ ವಚನಗಳನ್ನು ಸಂಗ್ರಹಿಸುವುದು ಆ ಮಹಾತ್ಮನ ಶಿಷ್ಯ ಮಂಡಲಿಯ ಮುತ್ತೂ ಕನ್ನಡ ಸಾಹಿತ್ಯ ಸೇವಕರ ಮುಖ್ಯ ಕರ್ತವ್ಯವಾಗಿದೆ.

ಈ ಮರುಳಸಿದ್ಧನೇ ಆಚಾರ್ಯರಲ್ಲಿ ಒಬ್ಬನಾದ ಮರುಳಾರಾಧ್ಯರೋ ಅಲ್ಲವೋ ಎಂಬ ವಿಷಯ ಕೊಡಕಿನದು. ಇದರ ಚರ್ಚೆ ಅನಾವಶ್ಯಕ. ರೋಷಕೋಪಗಳಿಗೆ ಮೂಲವಾಗುವುದರಿಂದ ನಾವು ಅದಕ್ಕೆ ಕೈಹಾಕುವುದಿಲ್ಲವೆಂದು ಸಂಪಾದಕರು ಹೇಳಿರುತ್ತಾರೆ. ಓದುಗರ ಸಂಶಯ ಪರಿಹರಿಸುವುದು ಸಂಪಾದಕರ ಮುಖ್ಯ ಕರ್ತವ್ಯವೆಂದು ಹೇಳದಿರಲಾರೆ.

ಸಂಪಾದಕರೇ ತೊಡಕಿನದು ಎಂದು ಕೈಬಿಟ್ಟರೆ ಓದುಗರ ಸಹಾಯಕ್ಕೆ ಬರುವವರಿನ್ನಾರು? ರಾಯರು ತಮ್ಮ ಅಧೈರ್ಯವನ್ನು ಸೂಚಿಸಿ ಕರ್ತವ್ಯ ಲೋಪ ಮಾಡಿದ್ದಾರೆ. ಸದವಕಾಶವನ್ನು ಕಳೆದುಕೊಂಡಿದ್ದಾರೆ.

"ಸತ್ತವರ ಕಥೆಯಲ್ಲ ಜನನದ ಕುತ್ತದಲಿ ಕುದಿಕುದಿದು ಕರ್ಮವ ಕತ್ತಲಿಗೆ ಸಿಲುಕುವವರ ಸೀಮೆಯು ಹೊಲಬು ತಾನಲ್ಲ" ಎಂಬ ಡಾಮರ ಸೋಕ್ತಿಯಂತೆಯೂ "ಶಿವನಂ ತದೀಯ ಶರಣ ವ್ರಜಮುಂ ನುತಿಪೆ ನುತಿಸೆ ನಾಳದ ಸುರರಂ ನರರಂ" ಎಂಬ ಷಡಕ್ಷರ ಕವಿಯ ಉಕ್ತಿಯಂತೆಯೂ ಶಿವಕವಿತ್ವವನ್ನುಳಿದು ನರಕವಿತ್ವವನ್ನು ಮಾಡುವುದಿಲ್ಲವೆಂದು ಪ್ರತಿಜ್ಞೆಮಾಡಿದ ವೀರಶೈವ ಕವಿಗಳ ಪಂಗ್ತಿಯಲ್ಲಿ ದೇಪನೂ ಸೇರಿದ್ದಾನೆ. ರಾಜ, ಇಂದ್ರ, ಮನ್ಮಥ, ಕರ್ಣ ಎಂದು ನಾನಾ ವಿಧವಾಗಿ ನರರನ್ನು ನುತಿಸುವ ಗ್ರಂಥವಿದಲ್ಲ. ಹರನ ಕೃತಿರಸ ಎಂದು ಕವಿಯೇ ಹೇಳಿದ್ದಾನೆ. ಅದ್ದರಿಂದಲೇ ಮಾನವನಾದ ಮರುಳ ಸಿದ್ಧನನ್ನು ಹರಾಂಶ ಸಂಭೂತನೆಂದಿದ್ದಾನೆ. ಮಾನವನ ಕೃತಿಯನ್ನು ರಚಿಸದ ಮಾನವನಿಂದ ಮಾನವನ ಕೃತಿಯನ್ನು ಮಾಡಿಸಿದ ಮರುಳ ಸಿದ್ಧನು ನಿಜವಾಗಿಯೂ ಮಾರಾರಿ ಅಂಶ ಸಂಭೂತನೇ ಸರಿ. ಶಿವಶರಣರ ವೃಂದದಲ್ಲಿ ಅಗ್ರಗಣ್ಯ ಎಂಬುದಲ್ಲಿ ಸಂದೇಹವಿಲ್ಲ. ಇದು ಹರಿಹರ, ರಾಘವಾಂಕ, ಡಾಮರಸ, ಕುಮಾರ ವ್ಯಾಸ ಮೊದಲಾದ ಕವಿ ಪುಂಗವರ ಗ್ರಂಥಗಳ ಪಂಗ್ತಿಯಲ್ಲಿ ಬರುವಂತಹ ಉತ್ತಮ ಕಾವ್ಯವಲ್ಲವೆಂದು ಪರಿಗಣಿಸಿದರೂ ಚರಿತ್ರೆಯ ದೃಷ್ಟಿಯಿಂದ ಬಹು ಮುಖ್ಯವಾದ ಗ್ರಂಥವಾಗಿದೆ. ಕವಿಯೇ ಸಿದ್ಧಲಿಂಗ ಚರಿತ್ರೆ, ಮರುಳ ಸಿದ್ಧ ಚರಿತ್ರೆ, ಎಂದು ಹೇಳಿರುತ್ತಾನೆ. ಇದರಲ್ಲಿ ಕಾವ್ಯಕ್ಕಿಂತಲೂ ಚರಿತ್ರಾಂಶವೇ ಹೆಚ್ಚಾಗಿದೆ. ಭರತ ಖಂಡದ ನಾನಾ ಭಾಷೆಗಳಲ್ಲಿ ನಡೆದ ಸಂಗತಿಯನ್ನು ಯಥಾರ್ಥವಾಗಿ ಹೇಳುವ ಚಾರಿತ್ರಗ್ರಂಥಗಳು ಬಹಳ ಕಮ್ಮಿ. ಭಾರತೀಯರು ಧಾರ್ಮಿಕ ವಿಷಯುಗಳಿಲ್ಲದ ಗ್ರಂಥಗಳನ್ನು ರಚಿಸಿರುವುದು ಬಹಳ ಅಪರೂಪ. ಒಟ್ಟಿನಲ್ಲಿ ದೇಪ ಕವಿ, ಮತ್ತು ಚರಿತ್ರೆಕಾರ.

(೭) ದೇಪನ ಕಾವ್ಯ ಶ್ರೀ ಜೀರಿಗೆ ಕಟ್ಟಿ ಬಸಪ್ಪನವರ ಶೋಧನ, ಶಾಸನಗಳ ಆಧಾರ, ಮುಂತಾದವುಗಳಿಂದ ಶ್ರೀ ಮರುಳ ಸಿದ್ಧನ ಜೀವನ ಚರಿತ್ರೆಯ ಕಟ್ಟಡವನ್ನು ನಿರ್ಮಿಸಲು ಪ್ರಯತ್ನಿಸಿದ್ದೇನೆ.

ಮುರುಳ ಸಿದ್ಧನ ಜೀವನ ಚರಿತ್ರೆಯ ಸಂಗ್ರಹ.

ಸ್ವಸ್ತಿಸಮಸ್ತ ಪ್ರಶಸ್ತಿ ಸಹಿತಂ ಶ್ರೀಮನ್ಮಹಾಮಂಡಲೇಶ್ವರಂ ವಿಜಯ ಪಾಂಡ್ಯ ದೇವರು ಉಚ್ಚಂಗಿ ನೆಲೆವೀಡಿನಲಿರ್ದು ನೊಳಂಬವಾಡಿ ಮೂವತ್ತಿಜ್ಞಾಸಿರವುಂ ದುಷ್ಟನಿಗ್ರಹ ಶಿಷ್ಟಪ್ರತಿಪಾಳನಂ ಗಯ್ದು ಸುಖಸಂಕಥಾವಿನೋದದಿಂ ರಾಜ್ಯಾಂಗಯುತವಿರೆ. ೬

ಸ್ವಸ್ತಿ ತತ್ವಾದ ಪದ್ಮೋಪಜೀವಿ ಕರುಗಲೆಂಬ ಜನಪದಕ್ಕಧಿಪ ಪ್ರಭು ದಾಚಣ್ಣನು ಕಗ್ಗಲ ಪ್ರಭುವಾಗಿದ್ದನು. ಇವನ ಬಳಿ ಕೂಗಿ ಮಾರನೆಂಬ ಧೃತ್ಯನಿದ್ದನು. ಅವನ ಸತಿ ಸುಪ್ರಭೆ. ಪತಿಪತಿಯರು ಭೇದವಿಲ್ಲದೆ ಶಿವಭಕ್ತಿಯಲ್ಲಿ ನಿರುತರಾಗಿ ಹಗ್ಗ, ಹುರಿ, ನೇಣು, ಮಿಡಿ, ಪಾದುಕೆ, ಮುಂತಾದ್ದನ್ನು ಮಾಡುವ ಕಾಯಕದಿಂದ ದ್ರವ್ಯ ಸಂಪಾದಿಸುತ್ತಾ ಸುಖದಿಂದಿರುತ್ತಿದ್ದರು. ಆದರೆ ಮಕ್ಕಳಿಲ್ಲವೆಂಬ ಚಿಂತೆ ಬಾಧಿಸುತ್ತಿತ್ತು. ಹರ ಪ್ರಸಾದದಿಂದ ಕಾಲಕ್ರಮದಲ್ಲಿ ಒಂದು ಗಂಡು ಶಿಶುವು ಜನಿಸಿತು. ಜಾತಕ ಫಲವಾಗಿ ತಂದೆತಾಯಿಗಳು ಕೂಡಲೇ ಮಡಿದರು.

ದನದ ಮಂದೆಯಿಂದ ತಪ್ಪಿಸಿಕೊಂಡಿದ್ದ ಕರೆಯುವ ಆಕಳನ್ನು ಅರಸುತ್ತಾ ಬಂದ ಬಾಚಣ್ಣನು ಸೊಕ್ಕೆಹಳ್ಳದ ತೀರದಲ್ಲಿ ಒಂದು ಕಮಂಪವೃಕ್ಷದ ಬುಡದಲ್ಲಿ ಸೊಂಪಾದ ಪೆಳೆಯೊಂದರಲ್ಲಿ ಈ ಶಿಶುವನ್ನೂ, ಹಾಲು ಜಿಸುತ್ತಿದ್ದ ಆಕಳನ್ನೂ ಕಂಡು ಆಶ್ಚರ್ಯಹೊಂದಿದನು. ಮಕ್ಕಳಿಲ್ಲದ ಮಡದಿ ಮಲ್ಲವ್ವನ ಮಡಲಲ್ಲಿ ಮಗುವನ್ನು ಮಲಗಿಸಿದನು. ಮುದ್ದಿನಿಂದ ಮರುಳ ಎಂದು ಕರೆಯುತ್ತಾ ಅಕ್ಕರೆಯಿಂದ ಸಾಕಿ ಸಲಹಿ ಬಲವಂತನೆಂದು ನಾಮಕರಣ ಮಾಡಿದರು. ಮುದ್ದಿನಿಂದ ಕರೆದ ಮರುಳ ಎಂಬ ಹೆಸರೇ ರೂಢವಾಯಿತು.

ತರುಣ ಬಂದ ಸುಮುಹೂರ್ತದಿಂದ ಬಾಚಣ್ಣನ ಗೋವ್ಯಂದವು ಅಭಿವೃದ್ಧಿಯಾಯಿತು. ಬೆಳೆಯು ಹುಲುಸಾಯಿತು. ಸಕಲಸಂಪತ್ತು ಕೈಸೇರಿತ.. ಕೃಷ್ಣನು ನಂದಗೋಕುಲದಲ್ಲಿ ಬೆಳೆದಂತೆ ಬಾಚಣ್ಣನ ಗೋವ್ಯಂದ ಮಧ್ಯದಲ್ಲಿ ಕರುಕಾಯ್ವ ಬಾಲರೊಡನೆ ಬಾಲಲೀಲೆಗಳ

೬. ದಾವಣಗೆರೆ ೭೭.

ನ್ನಾಡುತ್ತಾ ಬೆಳೆದನು. ಅಲ್ಲಿ ಮುರುಳನ ತುಂಟತನವು ಹೆಚ್ಚಾಯಿತು. ನೆರೆಯುವರ ಚಾಡಿ ಮಾತುಗಳನ್ನು ಕೇಳಿ ತಂದೆತಾಯಿಗಳು ನಂಬಲಾರದವರಾದರು.

ಒಂದು ದಿನ ಮುರುಳನ ತುಂಟತನದಿಂದ ಕರುಗಾವ ಮಕ್ಕಳು ಮೌನ ಮುದ್ರೆಯನ್ನು ತಳೆದರು. ಆಗ ಕುಂಚಟಿಗ ರಾಮು, ಕುಡಿವಕ್ಕಲಿಗ ಮುದ್ದಯ್ಯ, ಪಂಚಮರ ಪರಮಯ್ಯ, ಪಡಿಹಾರಿ ಬಸವಣ್ಣ, ಕಂಚುಗಾರ ಶಿವನಪ್ಪ, ಕರಿಕುಲದ ಮಹದೇವ, ಅಂಚುಕಟ್ಟುವ ಶರ್ವ, ಜೋರ ವಿದ್ಯದ ಮಲ್ಲ, ಮಾದ, ಹಂಚುಮಾಡುವ ಚಕ್ರಿ, ಕುಲಹೀನ ಚನ್ನ, ಚವುಡ ಮೊದಲಾದವರು ತುರುಮುಂದೆ ಮೇಯುವ ಕಾನನಕ್ಕೆ ಬಂದು ಪ್ರಾಣದೋರದೆ ನಾಡಿಯೊಳು ನಾಣುದೋರದಿರುವ ಮಕ್ಕಳ ಕಾಯವನ್ನು ನೋಡಿ ಶೋಕವಿಡಿದು ಹುಲ್ಲು ಕಡ್ಡಿ ಕಚ್ಚಿಕೊಂಡು (ಶರಣುಬರುವ ಒಂದು ಪದ್ಧತಿ) ಅರಸನ ಬಳಿಗೆ ಬಂದು ಬಾಚಣ್ಣ ಗೌಡರ ಮಗ ಕರುಗಾಹಿ, ಪರಪುಟ ಸಾಮುವೇದಿ (ಮಾಟ ಮಂತ್ರಗಾರ) ಮುರುಳನು ಧೂರ್ತನಾಗಿ ತಮ್ಮ ಮಕ್ಕಳನ್ನು ತರಿಕರಿದು ಬಿಸುಟನು. ಬೆಳೆಯನ್ನು ದನಗಳಿಗೆ ತಿನ್ನಿಸಿ ಹಾಳು ಮಾಡಿದನು ಎಂದು ಮೊರೆಯಿಟ್ಟರು. ಅರಸನು ಮೊದಲು ವಿಚಾರ ವಿಹೀನನಾಗಿ ಭಿಲ್ಲರನ್ನು ಕರೆಸಿ ಬಾಚಣ್ಣನನ್ನು ಕಲ್ಲುಗಾಣಕ್ಕೆ ಹಾಕಿ ಅರಿಸುವುದು ಎಂದು ಆಜ್ಞೆ ಮಾಡಿದನು. ಮರುಕ್ಷಣದಲ್ಲಿಯೇ ವಿವೇಕಹೊಂದಿ "ಸಾಧುಗಳಿಗೆ ೭ ಇದು ಸಲ್ಲದು" ಎಂದು ನುಡಿಯುತ್ತ ನಿಜಾಂಶವನ್ನರಿಯಲು ಪುರಜನರೊಡನೆ ಆಡವಿಗೆ ಹೋಗಿ ನೋಡಲು ತರಳರೆಲ್ಲಾ ಮುರುಳನೊಡನೆ ಆಟವಾಡುತ್ತಿದ್ದುದು ಕಂಡುಬಂದಿತು. ಬೆಳೆದ ಪಲವು ನಳನಳಿಸುತ್ತಿತ್ತು. ಅರಸನು ನಿಜಾಂಶವನ್ನು ತಿಳಿದು ಬಾಚಣ್ಣನೊಡನೆ ವಿನಯಪರನಾಗಿ ನುಡಿದು, ಸಂತೈಸಿದನು.

ಕಗ್ಗಲ್ಲಪುರದಲ್ಲಿ ವಿವಾದ ಉಂಟಾಯಿತು. ಮುರುಳನು ಕಗ್ಗಲ್ಲ ಪುರವನ್ನು ತ್ಯಜಿಸಿ ವಲಸೆ ಹೊರಟು ಗೋವ್ಯಂದಕ್ಕೆ ಅತ್ಯಾವಶ್ಯಕವಾದ ತೃಣಜಲ ಸಮೃದ್ಧಿಯಾದ ಆಡವಿಯನ್ನು ಹುಡುಕುತ್ತಾ ಬಂದು ರಂಗ

೭. (೧) ಸಾಧು–ಅಹಿಂಸಕ (೨) ಸಾಧುಸಮಾಜಕ್ಕೆ ಸೇರಿದ ಎಂಬ ಎರಡರ್ಥದಲ್ಲಿ ಕವಿಯು ಸಾಧು ಶಬ್ದವನ್ನು ಉಪಯೋಗಿಸಿದಂತೆ ಕಾಣುತ್ತದೆ.

ಯ್ಯನ ದುರ್ಗವೆಂಬ ಅರಣ್ಯವನ್ನು [೮] ಕಂಡು ಆನಂದದಿಂದ ಅದರ ಪಕ್ಕದಲ್ಲಿಯೇ ಹಟ್ಟಿಯನ್ನು ನಿರ್ಮಿಸಿ ಬೀಡುಬಿಟ್ಟನು. ಈ ಹಟ್ಟಿಗೆ ಪಲ್ಲಾಗಟ್ಟಿ ಎಂದು ಹೆಸರಾಯಿತು. ಗೋಪಾಲಬಾಲರು ಆಡುತ್ತಿದ್ದ ನೆರೆಯಲ್ಲಿನ ಬಯಲೇ ಮಸಣೇ ಕಟ್ಟಿ ಎಂಬ ಊರಾಯಿತು. ಅಲ್ಲಿ ವಾಸವಾಡುತ್ತಿದ್ದ ಮಲ್ಲಗೊಂಡ, ಮರುಳಗೊಂಡರೆಂಬ ವಕ್ಕಲಿಗರು ತಾವು ಮಾಡಿದ ಋಣವನ್ನು ತೀರಿಸಲಾರದೆ ಸಾಹುಕಾರನಲ್ಲಿ ಅಳುತನ ಮಾಡಿಕೊಂಡು ದುಡಿಯುತ್ತಿದ್ದರು. ಮರುಳಸಿದ್ಧನು ಇವರ ಕಷ್ಟವನ್ನು ನೋಡಿ ಸಹಿಸಲಾರದೆ ಅವರಿಗೆ ಸಹಾಯ ಮಾಡಿ ಎಳ್ಳಿನ ಫಸಲನ್ನು ಹೆಚ್ಚಾಗಿ ಬೆಳೆದು ಗೌಡನ ಬಳಿಯ ಋಣವನ್ನು ಉತ್ತರಿಸಿ ಋಣ ಮುಕ್ತರನ್ನಾಗಿ ಮಾಡಿದನು. ಸಂತೋಷಹೊಂದಿದ ಆ ವಕ್ಕಲಿಗರು ತಮ್ಮ ಮದುವೆಗಾಗಿ ಗಾಡಿಯಲ್ಲಿ ಕಟ್ಟಿಗೆಯನ್ನು ತೆಗೆದುಕೊಂಡು ಹೋಗಲು ಅರಣ್ಯಕ್ಕೆ ಬಂದರು. ಅವರ ಎತ್ತು ಕಳೆದು ಹೋಯಿತು. ಹಾರಕದ ಬುತ್ತಿಯುಂಡು ಜೀವಿಸುವಷ್ಟು ಕಡುಬಡವರಾಗಿದ್ದ ಅವರು ಬೇರೆ ಎತ್ತು ಕೊಂಡು ತರಲು ಸಾಧ್ಯವೇ? ಮರುಳಸಿದ್ಧನು ಇದನ್ನು ಕಂಡು ಮನಕರಗಿ ಅಡವಿಯಿಂದ ಕಟ್ಟಿಗೆ ಗಾಡಿಯನ್ನು ಊರಿನ ವರೆಗೆ ಸಾಗಿಸಿಕೊಟ್ಟು ಮದುವೆಯ ಕೆಲಸವು ನಿರ್ವಿಘ್ನವಾಗಿ ನಡೆಯುವಂತೆ ಮಾಡಿದನು. ಈ ರೀತಿ ಬಾಲ್ಯದಲ್ಲಿಯೇ ಸಮಾಜ ಸೇವೆಯನ್ನು ಮಾಡಲು ಆರಂಭಿಸಿದನು.

ಗ್ರಾಮಕ್ಕೆ ಲೇಸಾಗಿ ಶಾಂತಿಯಾಗಲೆಂದು ಬಾಚೀಗೌಡನ ಅಧ್ಯಕ್ಷತೆಯಲ್ಲಿ ಗ್ರಾಮಸ್ಥರು ಪಶುಘಾತಕವಾದ ಮಾಂಹಬ್ಬವನ್ನಾಚರಿಸಿದರು. ಅಲ್ಲಿ ನಡೆದ ಪ್ರಾಣಿ ಹಿಂಸೆಯು ಮರುಳಸಿದ್ಧನಿಗೆ ಸಹಿಸದಾಯಿತು. ಪ್ರಯತ್ನ ಮಾಡಿ ಮಾಂಹಬ್ಬವು ಮುಂದುವರಿಯದಂತೆ ನಿಲ್ಲಿಸಿ ಪ್ರಾಣಿ ಕೊಲೆಯನ್ನು ನಿಲ್ಲಿಸಿದನು. ಈ ಕೊಲೆಯನ್ನು ನೋಡಿದ ಮೇಲೆ ಇವನ ಮನಸ್ಸೇ ಬದಲಾಯಿತು. ಮೌಢ್ಯದ ಮುಸುಕು ಹರಿದು ಜ್ಞಾನೋದಯವಾಯಿತು. ಬಾಲಲೀಲೆಗಳನ್ನು ಕಳೆದು ಈ ವೇಳೆಗೆ ಪ್ರೌಢನಾಗಿದ್ದನು. ೧೫–೧೬ ವರ್ಷದವನಾಗಿರಬಹುದು. ಇನ್ನು ಅಲ್ಲಿರಬಾರದೆಂದು

---

೮. ಈಗಲೂ ಇದು ತೃಣಜಲ ಸಮೃದ್ಧಿಯಾದ ಅರಣ್ಯವಾಗಿದೆ.

ಯೋಚಿಸಿ ಘನಕಂತೆಯನ್ನು [೯] ಧರಿಸಿ ದೇಶಾಂತರಕ್ಕೆ ತೆರಳಿದನು. ಬಾಚಣ್ಣನು ಮರುಳನನ್ನು ಅರಸಿ ಹೋದ ಪಥವನ್ನು ಕಾಣದೆ ಹಿಂತಿರುಗಿದನು.

ಮರುಳನು ದೇಶ ಪರ್ಯಾಟನದಲ್ಲಿ ಜ್ಞಾನಾರ್ಜನೆ ಮಾಡಿ ಸ್ವದೇಶಕ್ಕೆ ಹಿಂತಿರುಗುವಾಗ ಮಾರ್ಗದಲ್ಲಿದ್ದ ಬ್ರಾಹ್ಮಣರು ವಾಸಿಸುತ್ತಿದ್ದ ಬೇತೂರು ವಳಯಾಕರಂ ತನಗೆ ವಾಸ ಯೋಗ್ಯವೆಂದು ಅಲ್ಲಿ ಕೆಲವು ಕಾಲನಿಂತನು.

ಬೇತೂರು ಎಂಬ ಅನಾಮಧ್ಯೇಯವಾದ ಎರಡು ಹಳ್ಳಿಗಳು ದಾವಣಗೆರೆಯ ಸಮೀಪದಲ್ಲಿವೆ. ಒಂದರಿಂದ ಮತ್ತೊಂದು ೫–೬ ಮೈಲುಗಳ ಅಂತರದಲ್ಲಿದೆ. ಆದರೆ ಕ್ರಿ. ಶ. ೧೧–೧೨-೧೩ ನೇ ಶತಮಾನಗಳಲ್ಲಿ ಬೇತೂರು ಒಂದು ಮಹಾನಗರವಾಗಿಯೂ, ರಾಜಧಾನಿಯಾಗಿಯೂ ಆಗಿತ್ತು. ಈಗಿನ ಎರಡು ಹಳ್ಳಿಗಳೂ ಆಂದಿನ ಬೇತೂರು ಪಟ್ಟಣದ ಅಗ್ರಹಾರಗಳಾಗಿರಬಹುದು. ಆ ನಗರದ ಆಂದಿನ ಪ್ರಸಿದ್ಧಿ ಎಂತೆಂದರೆ.

ನೋಡೆ ನೊಳಂಬವಾಡಿಯೊಳಗಗ್ಗದ ಸಾವಿರ ನಾಡಿಯೊಳಕರಂ।
ನಾಡೆಯುಂಬಳ್ಪವೆತ್ತೆಸೆವ ಬೆಳ್ತೂರು ಲಕ್ಷ್ಮಿಗೆ ಜನ್ಮಭೂಮಿ।
ಕೊಂಡಾಡುವ ಭೋಗ ಭೂಮಿಗನುಸಾರಿ ಸಮಸ್ತ ಜನಕ್ಕೆ ಸಂತಸಂ।
ವಾಡಲು ಗಂಧ ಸಾಳಿಯುಂ...ವಸಾಳಿಯುಂ...ಜೆಲ್ಲಿನಾಗರಂ॥ [೧೦]

ನೊಣಂಬ ವಾಡಿಯ ಸಾವಿರ ನಾಡಿನಲ್ಲಿ ಎಸೆವ ಬೇತೂರು ಲಕ್ಷ್ಮಿಗೆ ನಿವಾಸವಾಗಿಯೂ, ಕೊಂಡಾಡುವ ಭೋಗಭೂಮಿಯಾಗಿಯೂ, ಸಮಸ್ತ ಜನಕ್ಕೂ ಸಂತಸವನ್ನೀವ ಜಲುವಿನ ಆಗರವಾಗಿಯೂ, ರಂಜಿಸುತ್ತಿತ್ತು. ಮತ್ತಂ ಪಾಂಡ್ಯ ದೇಶಮಧ್ಯಾಧ್ಯಾಸಿತವಾದ ಬೇತೂರು ಜೆಲುವೆಂತೆನೆ.

---

೯. ರೇವಣಸಿದ್ಧನು ಕೊಲ್ಲಿಪಾಕೆಯಿಂದ ಹೊರಹೊರಟಾಗ ಧರಿಸಿದ್ದ ಉಡುಪುಗಳಲ್ಲಿ ಕಂತೆಯೂ ಒಂದಾಗಿತ್ತು.

೧೦. ದಾವಣಗೆರೆ ೩.

ನಿರುಪಮ ದೇವಾಗಾರಂ।
ಸುರಾಚಿರಮೆನಿಸಿರ್ದ ವಿಪಣಿ ಕಾವಾಟಂ।
ಕರಮೆಸೆವ ಪ್ರಾಕಾರಂ।
ಪಂದೆಸೆದುದ್ಯಾನದಿಂದೆ ಬೇತೂರಿಸಗುಂ॥ ೧೧

ದೇವಾಲಯಗಳಿಂದಲೂ, ಗಡಕೆಯರ ಗೃಹಗಳಿಂದಲೂ, ಪ್ರಸಿದ್ಧವಾದ ಕೋಟೆಯ ಪ್ರಾಕಾರದಿಂದಲೂ, ಉದ್ಯಾನಗಳಿಂದಲೂ, ಬೇತೂರು ನಗರವು ಪ್ರಸಿದ್ಧಿಯಾಗಿತ್ತು. ಅಲ್ಲಿ ಮೂಲಸ್ಥಾನ ಮಹದೇವನ ಗುಡಿ, ಪಾಂಡೇಶ್ವರ, ಮತ್ತು ಧರ್ಮೇಶ್ವರ ದೇವಾಲಯಗಳೂ ಇದ್ದವು. ಬ್ರಹ್ಮಶಿವದೇವ, ಮಲ್ಲಿಕಾರ್ಜುನ ಗುರುಗಳು, ರುದ್ರಶಕ್ತಿ ದೇವರು, ಶೈವಾಚಾರ್ಯ ವಿದ್ಯಾಪಂಡಿತನಾಮ ಶ್ರೀ ೧ಾಮುಂಡ ದೇವ ಮುಂತಾದ ಕಾಳಾಮುಖ ಸ್ಥಾನಾಚಾರ್ಯರೂ, ಶಿವಧರ್ಮದೀಪಕಂಾದ ಶೈವರ ದೇವಿತೆಪ್ಪ ಮುಂತಾದ ಭಕ್ತರೂ ವಾಸವಾಗಿದ್ದ ಪ್ರಸಿದ್ಧವಾದ ಐತಿಹಾಸಿಕ ಸ್ಥಳ.

ಇಂಥ ಪ್ರಸಿದ್ಧವಾದ ಸ್ಥಳದಲ್ಲಿ ಮರುಳನು ಬಂದಾಗ್ಗೆ ಅಗ್ರಹಾರದ ಬ್ರಾಹ್ಮಣರು ಯಜ್ಞವನ್ನು ಮಾಡತೊಡಗಿದ್ದರು. ಬ್ರಾಹ್ಮಣರ ಸಂತರ್ಪಣೆಯ ಸಮಯದಲ್ಲಿ ಮರುಳನು ಭಿಕ್ಷಬೇಡಿದನು. ಕೀಳುಕುಲದ ಶೂದ್ರನೆಂದು ಊಟದ ಸಮಯದಲ್ಲಿ ಬ್ರಾಹ್ಮಣರು ಒಪ್ಪಲಿಲ್ಲ. "ಕುಲದಲ್ಲಿ ಮೇಲು ಕೀಳೆಂಬ ಭೇದವಿಲ್ಲ. ನಿಮಗೆ ನಿವ್ಯ ಕುಲದಲ್ಲಿ ಫಲವೇಕೆ? ಬಹುಕುಲದಲ್ಲಿ ಓರ್ವರು ನೀವು" ಎಂದು ವಾರ್ ನುಡಿದು ವಾದಿಸುತ್ತಿರಲು ಬ್ರಾಹ್ಮಣರು ಮುನಿದು ಮರುಳನನ್ನು ಪಾಶದಲ್ಲಿ ಬಂಧಿಸಿ ಅಣಜಿ ಕೆರೆಯ ಕಟ್ಟೆಯ (ಅಂದರೆ ಏರಿಯಾ) ಹಿಂದಣ ಗೊಂದಿಯಲ್ಲಿ ಬಿಟ್ಟು ಬಂದರು. ಮರುಳನು ಸೋತುಬಿಡುವನೇ? ಪಾಶಬಂಧ ವಿಮೋಚನನಾಗಿ ಪುನಃ ಯಾಗ ಶಾಲೆಯ ಬಳಿಗೆ ಬಂದು ಬ್ರಾಹ್ಮಣರನ್ನು ಕಾಡಿಸಿದನು. ಬ್ರಾಹ್ಮಣರು ಮರುಳನನ್ನು ಒಂದು ಗುಮ್ಮಿಯಲ್ಲಿ ಸೆರೆ ಹಾಕಿದರು. ಅಲ್ಲಿಂದಲೂ ಮರುಳನು ಪಾರಾಗಿ ಬಂದು ತುರುಡಿ ಗ್ರಾಮದಲ್ಲಿ ಹದಿನೆಂಟು ಕುಲದವರನ್ನು ಅಂದರೆ ನಾನಾ ಜಾತಿಯವರನ್ನು ಬೆರೆಕೆಯಿಂದುಣಿಸಿದನು. ಮರುಳನು ಪುನಃ ಹುಡುಗರನ್ನು ಜೊತೆಮಾಡಿಕೊಂಡು ಯಜ್ಞ ಶಾಲೆಯ ಬಳಿಗೆ ಬಂದು ಕುಲವೆಲ್ಲಾ

೧೧. ದಾವಣಗೆರೆ ೧೩.

ಒಂದೇ ಎನ್ನುತ್ತ ಸತ್ಯಾಗ್ರಹವೆಂಬ ಬ್ರಹ್ಮಾಸ್ತ್ರವನ್ನು ಹೂಡಿ ಯಾಗದ ಬಳಿ ಹುಡುಗರೊಡನೆ ಕುಳಿತನು. ಈ ಅಸ್ತ್ರಕ್ಕೆ ಬ್ರಾಹ್ಮಣರು ಬೆದರಿ ತಲೆಬಾಗಿದರು. ನದಿಯ ತನಕ ಓಟ ದೊರೆಯತನಕ ದೂರು ಎನ್ನುವಂತೆ ಮರುಳನನ್ನು ಹಿಡಮುರಿಗೆ ಕಟ್ಟಿ (ಅಂದಿನ ಕಾಲದಲ್ಲಿ ತಪ್ಪಿತಸ್ಥರನ್ನು ಬೇಡಿಹಾಕಿ ಹಿಡಿದುಕೊಂಡು ಹೋಗುವ ವಿಧಾನ) ಬ್ರಾಹ್ಮಣರೂ, ಗೌಡಪ್ರಜೆಗಳೂ, ನೊಣಬ ಚಕ್ರೇಶನಾದ ವಿಜಯಪಾಂಡ್ಯ ದೇವನ ಬಳಿಗೆ ಬಂದು ಮರುಳನು ಮಾಡಿದ ದುಷ್ಕಾರ್ಯವನ್ನು ವಿವರಿಸಿ ದೂರು ಹೇಳಿದರು. ವರ್ಣಾಶ್ರಮಿ ಧರ್ಮಿಯಾದ ರಾಜನು ಕಡುಸೊಂದು ತನಗೆ ವಾಪ ಸಂಭವಿಸಿತೆಂದು ಕೋಪೋದ್ರೇಕನಾಗಿ ಮರುಳನನ್ನು ಮದದಾನೆಯ ಮುಂದೆ ನೂಕಿರೆಂದು ಚರರಿಗೆ ನೇಮವನ್ನಿತ್ತನು. ಮದಗಜವು ಮರುಳನಿಗೆ ಉಪಹತಿಕೊಡದೆ ಮಸ್ತಕದ ಮೇಲೆ ಮುಂಡಿಸಿಕೊಂಡು ಓಡಿತು. ರಾಜನ ಸೈನಿಕರು ಹಿಂಬಾಲಿಸಿದರು. ಮರುಳನು ಮುಚ್ಚನೂರು, ಹುಳಿಪನಕಟ್ಟೆ ಮುಂತಾದ ಸ್ಥಳಗಳಿಗೆ ಹೋಗಿ ಅಂತ್ಯದಲ್ಲಿ ಅನಗೋಡಿಗೆ ಹೋಗಿ ನೆಲೆಸಿದನು. ಅಂತ್ಯದಲ್ಲಿ ಬನ್ನಿಕೋಡಿಗೆ ಹೋಗಿ ಕೆಲವುಕಾಲ ತಂಗಿದನು.

ಆ ಬನ್ನಿಕೋಡು ಗ್ರಾಮವು ಆಗ್ಗೆ (ಕ್ರಿ. ಶ. ೧೧೬೫) ಒಂದು ವಿದ್ಯಾ ಮತ್ತು ಧರ್ಮದ ಕೇಂದ್ರವಾಗಿತ್ತು. ಅಲ್ಲಿ ಸ್ವಯಂಭು ಕಲಿದೇವ ಮತ್ತು ಮಲ್ಲಿಕಾರ್ಜುನ ಎಂಬ ದೇವಾಲಯಗಳು ಶೋಭಿಸುತ್ತಿದ್ದವು. ಪ್ರಸಿದ್ಧನಾದ ಜ್ಞಾನ ಶಕ್ತಿಯು ಸ್ಥಾನಾಚಾರ್ಯನಾಗಿದ್ದನು. ಈ ಮುನಿಯು ಉತ್ಕೃಷ್ಟತೆಯು ಈ ಕೆಳಗಿನ ಪದ್ಯದಿಂದ ವ್ಯಕ್ತವಾಗುತ್ತದೆ.

ಚತುಸಮುಯದಾಗ ಮೋಕ್ತೆಯ।
ನತಿಶಯವಾಗರಿದು ನಂಬಿತಂ ನೆಲೆ ತಾಂ।
ಸಕಲೈಕ್ಯ ಭಾವಿಕಾತ್ಮಕ ಶಿವನೋರ್ವನೇ।
ಕರ್ತೃಯಂದ ಜ್ಞಾನ ಶಕ್ತಿ ಮುನೀಂದ್ರ॥ ೧೨

ಯಮನೇಮ ಸ್ವಾಧ್ಯಾಯ ಧ್ಯಾನ ಧಾರಣ ಮೌನಾನುಷ್ಠಾನ ಸಂಪನ್ನರಪ್ಪ ಜ್ಞಾನಶಕ್ತಿಪಂಡಿತರು ವಿಜಯದೇವಪಾಂಡ್ಯನ ಮಾತೆಯಾದ ಸೋವಳದೇವಿಯಿಂದ ಪೂಜಿತರಾಗಿದ್ದರು. ಇಂತಹ ಮಹಾಮಹಿಮ

೧೨. ದಾವಣಗೆರೆ ೭೭ ಬನ್ನಿಕೋಡು ಗ್ರಾಮದಲ್ಲಿರುವ ಶಿಲಾಶಾಸನದಿಂದ.

ರಾದ ತಪೋಧನರ ದರ್ಶನಕ್ಕಾಗಿಯೇ. ಅವರಿಂದ ಜ್ಞಾನಾರ್ಜನೆ ಮಾಡಲೋಸುಗವೋ ಅಥವ ವಾದವಾಡಲೋಸುಗವೋ ಅಲ್ಲಿಗೆ ಬಂದು ನೆಲೆಸಿದನೆಂದರೆ ಅತಿಶಯೋಕ್ತಿಯಾಗಲಾರದು. ಅಂದಿನಿಂದ "ಪಸರ್ವತಿದು ಮುಸುಳಿಸದ ಕೀರ್ತಿಯಿಂದೆಸುದುದಾ ಪುರವರಂ" ಎಂಬುದರಿಂದ ಮರುಳನು ಅಲ್ಲಿ ನೆಲೆಸಿದ್ದರಿಂದ ಬನ್ನಿಕೋಡುಪುರದ ಕೀರ್ತಿಯು ಹಬ್ಬಿತು.

ಮರುಳನು ಅಸಗೋಡಿಗೆ ಹೋಗಿ ಸಲೆನಿಂದು ವಸುಮತಿಗೆ ಹೆಸರು ಪಡೆದನು. ಜಗಲೂರು ತಾಲ್ಲೂಕಿನಲ್ಲಿರುವ ಅಸಗೋಡು ಈಗ ಒಂದು ಹಳ್ಳಿಯಾಗಿದೆ. ಆದರೆ ಮರುಳಸಿದ್ಧನ ಕಾಲದಲ್ಲಿ ವಿದ್ಯೆಯು ಮತ್ತು ಧರ್ಮದ ಕೇಂದ್ರವಾಗಿ ಸುಪ್ರಸಿದ್ಧ ಪುರವಾಗಿತ್ತೆಂಬುದಕ್ಕೆ ಸಾಕಾದಷ್ಟು ನಿದರ್ಶನಗಳು ದೊರೆಯುತ್ತವೆ. ಕ್ರಿ. ಶ. ೧೦೫೪ ರಲ್ಲಿ ಚಿದಾನಂದ ಭುವನ ಕರ್ತಾರ ಪಂಡಿತದೇವ . ಎಂಬ ಜ್ಞಾನಿಗಳು ಅಸಗೋಡುಪುರದಲ್ಲಿ ವಿಸ್ತಾರವಾದ ಈಶ್ವರನ ದೇವಾಲಯವನ್ನು ನಿರ್ಮಿಸಿ ಸ್ವಯಂಭು ಕಲಿದೇವರನ್ನು ಪ್ರತಿಷ್ಠಿಸಿದರು. ಅಲ್ಲಿಗೆ ವಿದ್ಯಾ ಪ್ರಚಾರಕ್ಕಾಗಿ ತಪೋಧನರಾದ ಅಧ್ಯಾಪಕರನ್ನು ನೆಲೆಗೊಳಿಸಿ ಅನೇಕ ವಿದ್ಯಾರ್ಥಿಗಳನ್ನುಳ್ಳ ವಿದ್ಯಾಮಂದಿರವನ್ನು ಸ್ಥಾಪಿಸಿದರು. " ಇದು ಕಾಳಾಮುಖಸ್ಥಾನಂ ನೈಷ್ಟಿಕವೇದಿ ಕರ್ತರ ಮಠಂ " ಪ್ರಸಿದ್ಧಿಯಾಯಿತು. ಈ ದೇವಾಲಯದ ಪೂಜಾರಿಗಳಿಗೂ ಮಠದಲ್ಲಿದ್ದ ಉಪಾಧ್ಯಾಯರುಗಳ ಮತ್ತು ವಿದ್ಯಾರ್ಥಿಗಳ ಸಾರೋದ್ಧಾರವಾದ ಆಹಾರ ವ್ಯವಸ್ಥೆಗೂ ಮುತ್ತಿಕಟ್ಟೆ ಎಂಬ ಗ್ರಾಮವನ್ನು ಅಂದಿನ ಅರಸರು ದಾನ ಮಾಡಿರುವರು. ಈ ಮಠಕ್ಕೆ ಕ್ರಿ. ಶ. ೧೧೦೮ ರಲ್ಲಿಯೂ ಕ್ರಿ. ಶ. ೧೧೧೧ ರಲ್ಲಿಯೂ ಸಾಮಂತರೂ, ಶ್ರೀಮಂತರೂ ಹೇರಳವಾಗಿ ದತ್ತಿಗಳನ್ನೇ ಬಿಟ್ಟುಕೊಟ್ಟರು ೧೩ ಇದು "ಕಾಳಾಮುಖಸ್ಥಾನಂ ನೈಷ್ಟಿಕ ವೇದಿಕರ್ತರ ಮಠಂ" ಎಂದಿದೆಯಷ್ಟೆ. ಕಾಳಾಮುಖರು ಒಳ್ಳೆ ನಿಷ್ಠಾವಂತರಾದ ಶೈವರು ಕೆಚ್ಚಿನ ಶೈವೋಪಾಸಕರು. ಆದುದರಿಂದ ಲಿಂಗವಂತ ಧರ್ಮದ ಇತಿಹಾಸಕ್ಕೆ ನಿಕಟವಾದ ಸಂಬಂಧವಿದೆ. ಆಗ ಅಸ್ತಿತ್ವದಲ್ಲಿದ್ದ ಪ್ರಮುಖ ಮಠಗಳಲ್ಲೆಲ್ಲಾ ಕಾಳಾಮುಖರು ಸ್ಥಾನಾಚಾರ್ಯರಾಗಿದ್ದರು. ಆದರೆ ಕಾಳಾಮುಖರ ಮಠಗಳು ಲಿಂಗವಂತರವುಗಳಾಗಿ ಹೇಗೆ ಮಾರ್ಪಟ್ಟವೆಂಬ ಪ್ರಶ್ನೆಯು ನಮ್ಮನ್ನೆದುರಿಸುತ್ತಿದೆ. " ಎಂದು ಶ್ರೀಯುತ ಎಸ್. ಎಸ್. ಮಾಳವಾಡರು ಅಭಿಪ್ರಾಯಪಟ್ಟಿದ್ದಾರೆ. ೧೪

೧೩. ಜಗಲೂರು ೯-೧೦ ಮತ್ತು ೧೩ನೆಯ ಶಾಸನಗಳು.

೧೪. ಕರ್ನಾಟಕ ಸಾಹಿತ್ಯ ಸಂಸ್ಕೃತಿ ದರ್ಶನ ಪುಟ ೧೪೨.

ವಿದ್ಯಾ ಮತ್ತು ಧರ್ಮ ಕೇಂದ್ರಗಳಾದ ಬೇತೂರು, ಅಣಜ ಬನ್ನಿಕೋಡುಪುರ, ಮತ್ತು ಅಸಗೋಡುಪುರಗಳಲ್ಲಿ ಮರುಳಸಿದ್ಧನು ಕೆಲವುಕಾಲ ನೆಲೆಸಿದನು ಎಂಬುದನ್ನು ಗಮನಿಸಿದರೆ ಅವನು ಘನ ಪಂಡಿತನಾಗಿದ್ದನೆಂದು ಹೇಳಲೇಬೇಕಾಗುತ್ತದೆ. ಬೇತೂರು ಅಗ್ರಹಾರದಲ್ಲಿ ಯಾಗ ಮಾಡುತ್ತಿದ್ದ ವಿದ್ವಾಂಸರಾದ ಬ್ರಾಹ್ಮಣರೊಡನೆ ಮತ ಧರ್ಮದ ವಿಷಯದಲ್ಲಿ ಸಂಸತ್ಸಾನವಾಗಿ ನಿಂತು ಹೋರಾಡಲು ಅವಿದ್ಯಾವಂತನಾಗಿದ್ದರೆ ಸಾಧ್ಯವಾಗುತ್ತಿತ್ತೆ?

ಅಸಗೋಡಿನ ಸ್ವಯಂಭು ಕಲಿದೇವ ಎಂಬ ಹೆಸರಿಗೆ ಬದಲಾಗಿ ಶಂಭು ಸಿದ್ಧೇಶ್ವರ ಎಂಬ ಹೆಸರು ಪ್ರತೀತಿಯಾಗಿರುವುದನ್ನು ಪರಿಗಣಿಸಿದರೆ ಮರುಳಸಿದ್ಧನ ಪ್ರಭಾವವು ಈ ದೇವಾಲಯದ ಮೇಲೆ ಬೀರಿದೆ ಎಂಬುದರಲ್ಲಿ ಸಂದೇಹವಿಲ್ಲ. ಘನಪಂಡಿತನಾದ ಮರುಳಸಿದ್ಧನು ನೈಷ್ಠಿಕ ಬ್ರಹ್ಮಚಾರಿಗಳ ಮಠಕ್ಕೆ ಬಹುಶಃ ಸ್ಥಾನಪತಿಯಾಗಿದ್ದು ಮಠವನ್ನು ಸುವ್ಯವಸ್ಥಿತ ಮಾಡಿರಬೇಕೆಂದು ಭಾಸವಾಗುತ್ತದೆ. ಶೈವರಾದ ಕಾಳಾಮುಖರು ಮರುಳಸಿದ್ಧನ ಅನುಯಾಯಿಗಳಾದರು. ಈ ದೇವಾಲಯದಲ್ಲಿ ಇಂದಿಗೂ ವೀರಶೈವರೇ ಪೂಜಾರಿಗಳಾಗಿರುವುದೇ ಇದಕ್ಕೆ ದೃಷ್ಟಾಂತವಾಗಿದೆ. ಪ್ರಸಿದ್ಧವಾದ ಈ ಮಠದಿಂದ ಅಸಗೋಡು ಪುರದೊಳು ಸಲೆನಿಂದ ಮರುಳಸಿದ್ಧೇಶನು ವಸುಮತಿಗೆ ಹೆಸರು ಪಡೆದನು. ಹೆಸರು ಪಡೆದ ಮರುಳಸಿದ್ಧನಿಂದ ಅಸಗೋಡು ಪುರವು ವಸುಮತಿಯಲ್ಲಿ ಕೀರ್ತಿವೆಸೆದುದು.

ಹೀಗೆ ಕೀರ್ತಿವೆತ್ತ ಮರುಳಸಿದ್ಧೇಶ್ವರನು ಭಿಕ್ಷಾಟನದಿಂದಲೇ ದೇಶ ಸಂಚಾರಕ್ಕೆ ಹೊರಟು ಮಾರ್ಗದಲ್ಲಿ ತನ್ನ ಜನ್ಮಸ್ಥಳವನ್ನು ಸಂದರ್ಶಿಸಿದನು. ಯಾವ ಸೊಕ್ಕೆಹಳ್ಳದ ದಂಡೆಯಲ್ಲಿ ಅಕಳ ಬಾಲನು ಸವಿದು ಬೆಳೆದನೋ ಆ ಹಯಸ ಹಳ್ಳವು ಪರಮ ಪವಿತ್ರವಾದುದು ಎಂದು ಹೇಳಿದನು. ಶೈಶವದಲ್ಲಿ ಇವನಿಗೆ ಆಶ್ರಯವಿತ್ತ ಕಮರ ವೈಷ್ಣವನ್ನೇ ತಂಭವನ್ನಾಗಿ ಪರಿಣಮಿಸಿ ಭಕ್ತರು ಈಚೆಗೆ ಒಂದು ದೇವಾಲಯವನ್ನು ನಿರ್ಮಿಸಿ ಈಶ್ವರ ಪ್ರತಿಷ್ಠೆ ಮಾಡಿರುವರು. ಅವನ ಸಾರು ತಂದೆಯ ಮನೆತನದವರೇ ಈ ಲಿಂಗವನ್ನು ಪೂಜಿಸಲಾರಂಭಿಸಿದರು. ಈಗಲೂ ಆ ಮನೆತನದವರೇ ಪೂಜಿಸುತ್ತಿದ್ದಾರೆ. ಅಂದಿನಿಂದಲೂ ಸಿದ್ಧೇಶ್ವರ ದೇವಾಲಯ ಎಂದು ಕರೆಯಲ್ಪಡುತ್ತಿದೆ.

ಕಲ್ಯಾಣವು ಅಳಿದನಂತರ ದಕ್ಷಿಣ ಭರತಖಂಡದಲ್ಲಿ ಮಹದ್ವೈಶ್ವರ್ಯ ದಿಂದ ಶೋಭಿಸುತ್ತಿದ್ದ ನಗರವೆಂದರೆ ಹೊಯಿಸಳ ರಾಜಧಾನಿಯಾದ ದೋರ ಸಮುದ್ರ. ಇಂದಿನ ಹಳೆಯ ಬೀಡು. ಈಗಲೂ ಪ್ರಪಂಚದ ಕಲಾದೃಷ್ಟಿಯನ್ನೇ ಆಕರ್ಷಿಸುತ್ತಿರುವ ಪಾಳಾದ ಆ ಹಳೆಯ ಬೀಡಿನಲ್ಲಿರುವ ಕಲಾಕೃತಿಯನ್ನು ನೋಡಿ ಗತವೈಭವವನ್ನು ನೆನೆಸಿಕೊಂಡು ಕಣ್ಣೀರಿಡದ ಮಾನವನುಂಟೇ? ಸಾಮಂತ ರಾಜ್ಯವಾಗಿದ್ದ ಹೊಯಿಸಳ ರಾಜ್ಯವನ್ನು ತನ್ನ ಬಾಹುಬಲದಿಂದ ಚಕ್ರಾಧಿಪತ್ಯವನ್ನಾಗಿ ಕಟ್ಟಿ ತೆಂಕಣ ಚಕ್ರವರ್ತಿ ಎಂಬ ಬಿರುದಾಂತು, ಸತ್ಯೈಕ ಬಾಂಧವನಾಗಿ ಇಮ್ಮಡಿ ವೀರಬಲ್ಲಾಳನು ಶೋಭಿಸುತ್ತಿದ್ದನು. ಆದ್ದರಿಂದಲೇ ಮರುಳ ಸಿದ್ಧನು ದೋರ ಸಮುದ್ರಕ್ಕೆ ಹೋಗಿರಬೇಕು. ವೀರಬಲ್ಲಾಳನು ಮರುಳ ಸಿದ್ಧನ ಘನಪಾಂಡಿತ್ಯವನ್ನೂ, ಮಹಾತ್ಮೆಯನ್ನೂ ಕಂಡು ಅತ್ಯಾನಂದದಿಂದ ಅರಮನೆಗೆ ಆಹ್ವಾನಿಸಿ ರಾಜಯೋಗ್ಯವಾದ ಛತ್ರಿಚಾಮರಾದಿ ಬಿರುದುಗಳಿಂದ ಸನ್ಮಾನಿಸಿದುದು ಯೋಗ್ಯವೇ ಆಗಿದೆ.

ಮರುಳ ಸಿದ್ಧನು ಮುಂದಕ್ಕೆ ಪ್ರಯಾಣ ಮಾಡುತ್ತಾ ಹಂಹರದ ಪ್ರಾಂತದಲ್ಲಿರುವ ಕುಂಬಳೂರನ್ನು ಸೇರಿ ಮಾಂಸ ಮದ್ಯಾದಿ ಸೇವಕರಾದ ಜೋಗಿಗಳನ್ನು ಪೂಜಿಸುತ್ತಾ ಶಿವಭಕ್ತಳಾದ ಸತಿಗೆ ವಿರೋಧವಾಗಿದ್ದ ಭೈರವನ ಭಕ್ತ ಭೈರವಗೊಂಡನನ್ನು ಸನ್ಮಾರ್ಗಕ್ಕೆ ತಿರುಗುವಂತೆ ಬೋಧೆ ಮಾಡಿದನು. ಸತಿಪತಿಗಳು ಒಂದಾಗಿ ಮರುಳ ಸಿದ್ಧನ ಹಿಂಬಾಲಕರಾದರು.

ಮರುಳ ಸಿದ್ಧನು ಸ್ವಯಂ ಪ್ರತಿಭೆಯಿಂದ ಶೋಭಿಸುತ್ತಿದ್ದರೂ ಗುರು ಕಾರುಣ್ಯ ದೊರೆತಿರಲಿಲ್ಲವಾದ್ದರಿಂದ ಒಪ್ಪವಿಲ್ಲದ ಚಿನ್ನದಂತಿದ್ದನು. ಅಂದು ಕನ್ನಡನಾಡಿನಲ್ಲಿ ಮಹಾಪ್ರಭಾವ ಶಾಲಿಗಳಾಗಿದ್ದ ಗುರುಗಳೆಂದರೆ ಶ್ರೀ ರೇವಣಸಿದ್ಧರು. ರಾಜಾಧಿರಾಜರುಗಳಿಂದ ಸನ್ಮಾನಿತರಾಗಿ ಚಿನ್ಮೂಲಾದ್ರಿಯ ಸಿದ್ಧರ ಗವಿಯಲ್ಲಿ ತಪಸ್ಸನ್ನಾಚರಿಸುತ್ತಿದ್ದರು. ಮರುಳ ಸಿದ್ಧನು ಗುರುವನ್ನು ಕಂಡು ಶಾಸ್ತ್ರವಿಧಿಯಾಗಿ ಗುರುದೀಕ್ಷೆಯನ್ನು ಹೊಂದಿ ಗುರು ಕರಸಂಜಾತನಾಗಿ ದೇಶಸಂಚಾರದಿಂದ ಭಿಕ್ಷವನ್ನು ಸಂಪಾದಿಸಿ ತಂದು ಗುರುವಿಗೆ ಸಮರ್ಪಿಸಿದನು. ರೇವಣಸಿದ್ಧರು ಅವನ್ನು ಇಂದುಧರಗರ್ಪಿಸಿ ಪ್ರಸಾದವನ್ನು ಭೋಗಿಸಿದರು.

ಉತ್ತರ ದಿಕ್ಕಿಗೆ ಹೋಗಬೇಡ, ಕೊಲ್ಲಾಪುರದಲ್ಲಿ ದುರುಳ ಸಿದ್ಧರ ತಂಡವಿರುವುದು. ಅವರನ್ನು ನಾನೊಮ್ಮೆ ಭಂಗಪಡಿಸಿದೆನು. ಆದರೂ ರಿಂಬಿಗಳನ್ನು ಕಡಿದ ಮರವು ಇನ್ನೂ ಹುಲುಸಾಗಿ ಚಿಗುರುವಂತೆ ಆ ಸಿದ್ಧರು ಹೆಚ್ಚಿರುವರು. ಅವರ ದುಷ್ಪತನದಿಂದ ಪಾರಾಗಿ ಬರುವುದು ಬಹು ಕಷ್ಟ ಎಂದು ಗುರುವು ಎಚ್ಚರಿಸಿದನು. ಮರುಳ ಸಿದ್ಧನು ಆ ದುರುಳ ಸಿದ್ಧರನ್ನು ಮುರಿದೇ ಬಿಡುವೆನೆಂದು ಶಪಥ ಮಾಡಿ ಗುರುವಿನ ಆಶೀರ್ವಾದವನ್ನು ಹೊಂದಿ ಪ್ರಯಾಣೋನ್ಮುಖನಾದನು.

ಉತ್ತರ ದಿಕ್ಕಿನ ಪ್ರಯಾಣವನ್ನು ಪ್ರಾರಂಭಿಸಿ ರಾಯಶೆಟ್ಟಿಯ ಕೆರೆಯ ಪುರಕ್ಕೆ (ಮುದನೂರು ಎಂದು ಶ್ರೀ. ಟಿ. ಎಚ್. ಯಂ. ಸದಾಶಿವಯ್ಯನವರ ಅಭಿಪ್ರಾಯ) ಬಂದಾಗ ಮರುಳ ಸಿದ್ಧನಿಗೆ ದುಷ್ಪರೋಗ ಪ್ರಾಪ್ತವಾಯಿತು. ಆ ಪುರದಲ್ಲಿ ಹರನ ಪೂಜೆಯಲ್ಲಿ ನಿರತನಾಗಿ ಲಿಂಗ ಜಂಗಮಕ್ಕೆ ತನುಮನಧನಗಳನ್ನರ್ಪಿಸಿ ಮಠಾಧಿಪತಿಯಾಗಿದ್ದ ಶಿವಶರಣ ರಾಮಿ ತಂದೆಯು ಮರುಳ ಸಿದ್ಧನನ್ನು ತನ್ನ ಮಠದ ಔಷಧಾಲಯಕ್ಕೆ ಕರದೊಯ್ದು ಭಕ್ತಿಯಿಂದ ಉಪಚಾರ ಮಾಡಿದನು. ರೋಗವು ವಾಸಿಯಾಗಿ ಸರ್ವಾಂಗ ಪರಿಶುದ್ಧವಾಯಿತು. ಮರುಳ ಸಿದ್ಧನ ಮಹಾತ್ಮೆಯನ್ನರಿತು ರಾಮಿ ತಂದೆಯು ಅವನ ಮುಖ್ಯ ಶಿಷ್ಯನಾದನು. ೧೫

ಮುಂದಕ್ಕೆ ಪ್ರಯಾಣ ಮಾಡುತ್ತಾ ಇದ್ದಾಗ ಒಬ್ಬ ವಕ್ಕಲಿಗನು ಶಿಷ್ಯನಾದನು. ಅವನೊಡನೆ ಪ್ರಯಾಣವಾಡುತ್ತಾ ತೋರಗಲ್ಲು ಪುರದ ಹೊರವಳಯದಲ್ಲಿ ಮಠದಲ್ಲಿದ್ದ ಅಚಲನೇಮಿ ಗುಂಡಬ್ರಹ್ಮಯ್ಯಗಳನ್ನು ಸಂದರ್ಶಿಸಿದನು. ಪ್ರಯಾಣವನ್ನು ಮುಂದುವರಿಸಿ ಗಣಪತಿ ರಾಜ್ಯದಲ್ಲಿ ಸಂಚರಿಸಿ ಓರಗಲ್ಲುಪುರದ ಶೃಂಗಾರವನ್ನು ನೋಡಿಕೊಂಡು ಶುದ್ಧ ಶೈವಾಚಾರ ಶೀಲವ್ರತರನ್ನೂ ಶಿವಶರಣರನ್ನೂ ಸಂದರ್ಶಿಸುತ್ತಾ ಮುಂದಕ್ಕೆ ಸಂಚಾರ ಹೊರಟನು.

ಕೊಲ್ಲಾಪುರದ ಸಮೀಪದಲ್ಲಿದ್ದ ಸಿದ್ಧನಗಿರಿಯಲ್ಲಿ ಬಹಳ ಜನ ಸಿದ್ಧರು ವಾಸಮಾಡುತ್ತಿದ್ದರು. ಕರಟನೆಂಬುವನು ಅವರೆಲ್ಲರಿಗೂ ಮುಖ್ಯನು. ಈ ಸಿದ್ಧರು ಅನೇಕತರಜೆಯ ಯೋಗಸಾಧನೆಗಳಿಂದಲೂ, ಮಂತ್ರವಾಟ

---

೧೫. ಆದಿನ ಕಾಲದಲ್ಲಿ ಮಠಗಳಲ್ಲಿ ಔಷಧಾಲಯಗಳೂ ಇದ್ದವು. ಬಳ್ಳಿಗಾವಿಯ ಕೋಡಿ ಮಠದಲ್ಲಿ ಮೂರು ಔಷಧಾಲಯಗಳಿದ್ದವಂತೆ.

ಗಳಿಂದಲೂ, ಗಿಡವೂಲಿಕೆಗಳ ವಿಶೇಷ ಜ್ಞಾನದಿಂದಲೂ, ಅಗ್ನಿಸ್ತಂಭ, ಅಂತರಿಕ್ಷಗಮನ, ಅಂಜನಸಿದ್ಧಿ, ಮುಂತಾದ ಅನೇಕ ಅದ್ಭುತಗಳನ್ನು ಮಾಡುತ್ತಿದ್ದರು. ಇವರಿಗೆ ಭೂತ ಪಿಶಾಚಗಳು ವಶವಾಗಿದ್ದವು. ಇವರು ಶಕ್ತಿಪೂಜಕರಾಗಿ ನರಬಲಿಗಳನ್ನು ಕೊಡುತ್ತಾ ಮಾಂಸಭಕ್ಷಕರಾಗಿಯೂ, ಅಪೇಯಪಾನಾಸಕ್ತರಾಗಿಯೂ ಅನಾಚಾರ ಪ್ರವರ್ತಕರಾಗಿಯೂ ಇದ್ದರು. ೧೬ ಮಾಯೆ ಎಂಬ ಮಾಟಗಾತಿಯು ಎಲ್ಲಾ ಸಿದ್ಧರನ್ನೂ ಮಾಟಗಾತಿಯರನ್ನೂ ತನ್ನ ಅಂಕೆಯಲ್ಲಿಟ್ಟುಕೊಂಡಿದ್ದಳು. ಇಂಥಾ ದುಷ್ಟರಿಂದ ಪಾರಾಗಿಬರುವುದು ಕಷ್ಟ ಎಂದು ರೇವಣಸಿದ್ಧ ಗುರು ಮುಖದಿಂದ ತಿಳಿದಿದ್ದರೂ ಮರುಳಸಿದ್ಧನು ಧೈರ್ಯದಿಂದ ಅಲ್ಲಿಗೆ ಹೋಗಿ ತನ್ನ ಸಿದ್ಧಿ ಸಾಮರ್ಥ್ಯದಿಂದ ಎಲ್ಲರನ್ನೂ ಜಯಿಸಿದನು. ಗರುಡನನ್ನು ಕಂಡ ಸರ್ಪಗಳಂತೆ ದುಷ್ಟ ಸಿದ್ಧರೆಲ್ಲಾ ಹೆದರಿ ಚದರಿ ಓಡಿ ಹೋದರು. ಅಲ್ಲಿದ್ದ ಜಟ್ಟಿಗ, ಬ್ರಹ್ಮ, ಭೈರವ, ಎಂಬುವರು ಮರುಳಸಿದ್ಧನ ಶಿಷ್ಯರಾಗಿ ಹಿಂಬಾಲಿಸಿದರು. ಮಾಯೆಯು ಮುಖಭಂಗಿತಳಾದಳು. ಮರುಳಸಿದ್ಧನು ಆ ಸಿದ್ಧರ ಬೆಟ್ಟದಲ್ಲಿದ್ದ ಘನಲಿಂಗವನ್ನು ಸ್ವಾಧೀನ ಮಾಡಿಕೊಂಡು ಕಾಳ್ಯುಜ್ಜನೆಂದು ಹೆಸರಿಟ್ಟು ಅದನ್ನು ತೆಗೆದುಕೊಂಡು ತನ್ನ ಜನ್ಮಸ್ಥಳಕ್ಕೆ ಹಿಂದಿರುಗಿದನು.

ತೆಲುಗದಾಳಿಗೆ ಬಂದು ಒಕ್ಕಲಿಗ ಸಿದ್ಧಯ್ಯನಿಗೆ ಅರಿವೆಯನ್ನು ಅಂದರೆ ಕಾಷಾಯ ವಸ್ತ್ರವನ್ನು ಕೊಟ್ಟು ಚರಮೂರ್ತಿಯನ್ನಾಗಿ ಮಾಡಿ ಮಠಾಧಿಪತ್ಯವನ್ನು ವಹಿಸಿರುವಂತೆ ಹರಸಿದನು. ಅನಂತರ ಗುರುವರನಾದ ಮರುಳಸಿದ್ಧನು ರೇವಣಸಿದ್ಧನನ್ನು ಕಂಡು ಚರಣಕ್ಕಭಿನಂದಿಸಿ ಆಶೀರ್ವಾದ ಪಡೆದು ಅನಗೋಡು, ಬೇತೂರು, ಕುರುಡಿ, ಬಲ್ಲೂರು, ಕುಂಬಳೂರು, ಅಸಗೋಡು ೧೯ ಮುಂತಾದ ಸ್ಥಳಗಳಲ್ಲಿ ಸಂಚರಿಸಿ ಸಾಲುಶಾಸನಲಿಂಗನಾಗಿ ಮೆರೆದನು.

ಅನಂತರ ತನ್ನ ಜನ್ಮಸ್ಥಳಕ್ಕೆ ಬಂದು ಅಂತ್ಯಕಾಲವನ್ನು ಅಲ್ಲಿಯೇ ಕಳೆಯಬೇಕೆಂದಾಲೋಚಿಸಿ ಕಗ್ಗಲ್ಲಪುರ ಮತ್ತು ಕೇತನಹಳ್ಳಿಯ ಮಧ್ಯ

---

೧೬. ಫ. ಗು. ಹಳಕಟ್ಟಿಯವರ ಶಿವಶರಣರ ಚರಿತ್ರೆಗಳು ಎಂಬಪುಸ್ತಕದಿಂದ ಸಂಗ್ರಹಿಸಿದೆ.

೧೯. ಅನಗೋಡು ಸಿದ್ಧೇಶ್ವರ ದೇವಾಲಯವು ಕ್ರಿ. ಶ. ೧೧ನೇ ಶತಮಾನದ ಶ್ರೀಕೂಟಾಚಲದೇವಾಲಯಗಳ ಮಾದರಿಯಲ್ಲಿದೆ.

ವಾದ ಅರಣ್ಯ ಪ್ರದೇಶವು ಶಾಂತಮಯವಾಗಿಯೂ, ಹಿತಕರವಾಗಿಯೂ ಇದ್ದುದರಿಂದ ಅಲ್ಲಿಯೇ ಶಿವಾಲಯವನ್ನೂ ಮಠವನ್ನೂ ನಿರ್ಮಿಸಲು ಯೋಚಿಸಿದನು. ಪ್ರಸಿದ್ಧರಾದ ದಕ್ಷಿಣದೇಶದ ಶಿಲ್ಪಿಗರನ್ನು ಹಳೆಯ ಬೀಡು, ಕೈದಾಳ ಮುಂತಾದ ಪ್ರಾಂತಗಳಿಂದ ಕರೆಸಿ ಉತ್ಕೃಷ್ಟವಾದ ಶಿಲಾಮಯವಾದ ದೇವಾಲಯವನ್ನು ಕಟ್ಟಿಸಿದನು. "ಹಳೆಯ ಬೀಡ ಹೊರಗೆ ನೋಡು. ಉಜ್ಜಿನಿಯ ಒಳಗೆ ನೋಡು" ಎಂದು ಈಗಲೂ ಆ ಶಿವಾಲಯವು ಶೋಭಿಸುತ್ತಿದೆ. ನಾನಾ ಕಡೆಯಿಂದ ಭಕ್ತರು ಅಲ್ಲಿಗೆ ಬಂದು ನೆರೆದರು. ಅದೊಂದು ಮಹಾಕ್ಷೇತ್ರವಾಯಿತು. ಅಂತ್ಯಕಾಲವು ಸಮೀಪಿಸಲು ತೆಲುಗಬಾಳ ಸಿದ್ಧಯ್ಯನನ್ನು "ತರಳ! ಬಾಳು" ಎಂದು ಹರಸಿ ಮಠದ ಉತ್ತರಾಧಿಕಾರವನ್ನು ವಹಿಸಿ ಶಿವಲಿಂಗೈಕ್ಯನಾದನು.

ಗುರುವಿನ ಆಶೀರ್ವಾದದಂತೆ ತರಳಬಾಳು ಸಿದ್ಧಯ್ಯನು ಪ್ರಖ್ಯಾತನಾಗಿದ್ದು ಲೀಲೆಗಳನ್ನು ನಟಿಸಿ ಸಮಾಜೋದ್ಧಾರಕನಾಗಿದ್ದನೆಂಬುದಕ್ಕೆ ಅವರ ಸ್ಮಾರಕವಾದ ಉಜ್ಜಯಿನಿಯಲ್ಲಿರುವ ತರಳಬಾಳು ಸಿದ್ಧನ ಮಠವೇ ಸಾಕ್ಷಿ. ಈಗ್ಗೆ ಏಳು ಶತಮಾನಗಳುರುಳಿದವು. ಇಂದಿಗೂ ಈ ಗುರುಪೀಠವು ಪಿಂಗಳೆರೆಯಲ್ಲಿ ಉಜ್ಜಯಿನೀ ಸದ್ಧರ್ಮ ಸಿಂಹಾಸನ ತರಳಬಾಳು ಸಂಸ್ಥಾನದ ಮಠವೆಂದು ಪ್ರಖ್ಯಾತವಾಗಿದೆ.

(೮) ಕ್ರಿ. ಶ. ೧೨ನೆಯ ಶತಮಾನವು ಕನ್ನಡನಾಡಿನಲ್ಲಿ ಧರ್ಮಕ್ರಾಂತಿಯ ಯುಗ. ಮೊದಲು ದೇವರದಾಸಿಮಯ್ಯ, ಶಂಕರದಾಸಿಮಯ್ಯ, ಏಕಾಂತದರಾಮಯ್ಯ, ರೇವಣಸಿದ್ಧ ಮೊದಲಾದವರು ಒಂಟೊಂಟಿಯಾಗಿ ಶಿವಸರ್ವೋತ್ಕೃಷ್ಟತೆಯ ವಿಷಯದಲ್ಲಿ ಧರ್ಮಪ್ರಸಾರ ಮಾಡಿದರು. ಇವರ ಕಿರಿಯ ಸಮಕಾಲೀನರಾದ ಅಲ್ಲಮಪ್ರಭು, ಬಸವಣ್ಣ ಚನ್ನಬಸವಣ್ಣ ಮೊದಲಾದವರು ಸಂಘಶಕ್ತಿಯಿಂದ ಉಗ್ರ ಕ್ರಾಂತಿಕಾರರಾಗಿ ಉತ್ತರ ಕರ್ನಾಟಕ ರಾಜಧಾನಿಯಾದ ಕಲ್ಯಾಣದಲ್ಲಿ ಚಳವಳಿ ಹೂಡಿದರು. ಕೊನೆಕಾಲದಲ್ಲಿ ರುದ್ರಮುನಿಯೂ ಈ ಗುಂಪಿಗೆ ಸೇರಿದನು. ಸಿದ್ಧರಾಮನು ಇವರಿಂಗೆ ನೆರವಿತ್ತರೂ ತನ್ನದೇ ಮಾರ್ಗದಲ್ಲಿ ಇನ್ನೂ ಉತ್ತರದ ಸೊನ್ನಲಾಪುರದಲ್ಲಿ ಶ್ರಮಿಸಿದನು. ಮರುಳಸಿದ್ಧನು ತುಂಗಭದ್ರಾ ದಕ್ಷಿಣತೀರದಲ್ಲಿ ಉಗ್ರ ಕ್ರಾಂತಿಕಾರನಾಗಿ ಶ್ರಮಿಸಿದನು. ದೀರ್ಘಾಯುವಾದ ರೇವಣಸಿದ್ಧನು, ಮರುಳಸಿದ್ಧನಿಗೆ ನೆರವನ್ನಿತ್ತನು. ಒಟ್ಟಿನಲ್ಲಿ ಮರುಳಸಿದ್ಧನ ಜೀವನಕಾಲವನ್ನು ತಾತ್ಕಾಲಿಕವಾಗಿ ಕೆಳಗೆ

ಕಂಡಂತೆ ಸೂಚಿಸುತ್ತೇನೆ. ಶೋಧನೆಯಿಂದ ಇದರಲ್ಲಿ ಅನೇಕ ಬದಲಾವಣೆಗಳಾಗುವುದರಲ್ಲಿ ಸಂದೇಹವಿಲ್ಲ.

ಜನನಕಾಲ ಕ್ರಿ. ಶ. ಸುಮಾರು	೧೧೪೦.
ಕಗ್ಗಲ್ಲ ವರಕರುಗಳ ಕಾಯ್ದುದ್ದು	೧೧೪೫ ರಿಂದ ೧೧೫೫.
ದೇಶಸಂಚಾರ	೧೧೫೫ ರಿಂದ ೧೧೬೫.
ಯಾಗದ ಬಳಿ ಸತ್ಯಾಗ್ರಹ ಹೂಡಿದ್ದು	೧೧೬೫ ರಿಂದ ೧೧೭೦.
ಬನ್ನಿಕೋಡು, ಅಸಗೋಡು ಪುರಗಳಲ್ಲಿ ನಿಂತದ್ದು.	೧೧೭೦ ರಿಂದ ೧೧೮೦.
ಹಳೆಯಬೀಡಿನಲ್ಲಿ ರಾಜಮನ್ನಣೆ.	ಕ್ರಿ. ಶ. ೧೧೮೦ ರಿಂದ ೧೧೮೫ ರೊಳಗೆ
ದೇವಣಸಿದ್ಧರ ಬಳಿ ಶಿಷ್ಯತ್ವ ಮತ್ತು ಕಾವಿ ಧರಿಸಿದ್ದು.	೧೧೮೫ ರಿಂದ ೧೧೯೦ ,,
ರಾಯಶೆಟ್ಟಿಯ ಕೆರೆ, ಓರಗಲ್ಲು ಸಂದರ್ಶನ ಸಾಲುಶಾಸನಲಿಂಗ ಸ್ಥಾಪನೆ.	೧೧೯೦ ರಿಂದ ೧೨೦೦ ,,
ಉಜ್ಜನೀಮಠ ನಿರ್ಮಾಣ ಕಾರ್ಯ, ಮಠಸ್ಥಾಪನೆ, ಉತ್ತರಾಧಿಕಾರ, ಕೋಟಿ ಜಂಗಮ ನೆರೆದದ್ದು.	೧೧೯೦ ರಿಂದ ೧೨೦೫ ,,
ಲಿಂಗೈಕ್ಯ.	ಕ್ರಿ. ಶ. ೧೨೧೦.

ಕೊನೆಯದಾಗಿ ಒಂದು ಮಾತು. ಶಬ್ದಕೋಶದಲ್ಲಿ ಸೇರಿಸತಕ್ಕ ಹಲವು ಶಬ್ದಗಳಿವೆ. ಉದಾಹರಣೆಗಾಗಿ ಕಂಥೆಕಾಳ್ಕ, ಕರವಾಜಿ, ಹೆರಿಗೆ, ಹೆಡತಲೆ, ಪಡಿಹಾರಿ, ವಳಿಯಾಕರಂ, ಮುಂತಾದವು. ವೀರಶೈವ ತತ್ವದ ಮುಖ್ಯಾಂಶಗಳನ್ನೂ, ಚಾರಿತ್ರಕ ವ್ಯಕ್ತಿಗಳ ಮತ್ತು ಧಾರ್ಮಿಕ ಪುರುಷರ ಪರಿಚಯವನ್ನು ವಿವರಿಸುವ ಟಿಪ್ಪಣಿಗಳನ್ನು ಅನುಬಂಧರೂಪದಲ್ಲಿ ಕೊಡಬೇಕಾಗಿತ್ತು. ಇದು ಒಂದು ಕೊರತೆ. ಈ ಕೊರತೆಗಳನ್ನು ಸರಿಪಡಿಸುವ ಅವಕಾಶ ಬೇಗ ದೊರೆಯಲಿ. ಶ್ರೀ. ಅ. ನ. ಕೃಷ್ಣರಾಯರು ಕನ್ನಡ ಸಾಹಿತ್ಯದಲ್ಲಿ ನುರಿತವರು. ಕನ್ನಡ ಸಾಹಿತ್ಯ ಬೆಳವಣಿಗೆಗಾಗಿ ತುಂಬಾ ದುಡಿಯುತ್ತಿದ್ದಾರೆ. ತುಂಬಾ ಉತ್ಸಾಹಶಾಲಿಗಳು. ಕನ್ನಡನಾಡಿಗೆ ಇವರ ಸತತ ಸೇವೆಯು ದೊರಕಲಿ. ಇಂತಹ ಅನೇಕ ಉಪಯುಕ್ತ ಗ್ರಂಥಗಳು ಪ್ರಕಟವಾಗಲಿ ಎಂಬುದೇ ನನ್ನಹಾರೈಕೆ.

ಆತ್ಮನಿವೇದನೆ

ಈಗಿನ ಸಂಚಿಕೆಗೆ ಶಿವಾನುಭವ ಪತ್ರಿಕೆಯ ೧೯ನೆಯ ವರ್ಷವು ಪೂರ್ತಿಯಾಗುತ್ತಿದೆ. ಮುಂದಿನ ಸಂಚಿಕೆಯಿಂದ ಅದರ ೨೦ನೆಯ ವರ್ಷವು ಪ್ರಾರಂಭವಾಗುತ್ತಿದೆ. ಈ ವರೆಗೆ ಪತ್ರಿಕೆಗೆ ಬಹುಜನ ವಿದ್ವಾಂಸರು ತಮ್ಮ ಮಹತ್ವದ ಮತ್ತು ವಿಚಾರ ಪರಿಷ್ಕೃತವಾದ ಲೇಖನಗಳನ್ನು ಕಳಿಸಿ ಅದರ ಧೋರಣವನ್ನು ಮುಂದುವರಿಸಲು ಸಹಾಯ ಮಾಡುತ್ತ ಬಂದಿದ್ದಾರೆ. ಅವರಿಗೆ ನಮ್ಮ ಅನಂತ ವಂದನೆಗಳು. ಇದೇ ಪ್ರಕಾರ ಅವರು ಶಿವಾನುಭವ ತತ್ವ ಸಂಶೋಧನೆ, ವೀರಶೈವ ವಾಂಙ್ಮಯ ಪ್ರಸಾರ, ವೀರಶೈವೇತಿಹಾಸ ಮತ್ತು ವೀರಶೈವ ಶಿವಶರಣರ ಜೀವನ ಚರಿತ್ರೆ ಇವುಗಳನ್ನು ಪ್ರಕಟಮಾಡುವ ಪತ್ರಿಕೆಯ ಧ್ಯೇಯವನ್ನು ಸಫಲಗೊಳಿಸಲು ಮುಂದಾದರೂ ಸಹಾಯ ಮಾಡುವರೆಂದು ಅವರಿಗೆ ನಮ್ಮ ನಮ್ರ ವಿನಂತಿ ಇದೆ.

ಮೈಲಾರದ ಶ್ರೀ ಬಸವಲಿಂಗ ಶರಣರ ಕೃತಿಗಳು: — (ಬೆಲೆ ೨-೮-೦)

ಈ ಗ್ರಂಥವು ಬಾಲಲೀಲಾ ಮಹಂತ ಶಿವಯೋಗೀಶ್ವರ ಗ್ರಂಥಮಾಲೆಯ ನಾಲ್ಕನೆಯ ಗ್ರಂಥವಿದೆ. ಇದರ ಪ್ರಕಾಶಕರು ಶ್ರೀ. ಮ. ನಿ. ಪ್ರ. ಮೃತ್ಯುಂಜಯ ಸ್ವಾಮಿಗಳು ಮುರುಘಾಮಠ ಧಾರವಾಡ ಇವರು ಇದ್ದು ಸಂಪಾದಕರು ರಾ. ರಾ. ಶಿ. ಶಿ ಬಸವನಾಳ ಎಂ. ಏ. ಇವರು ಇರುವರು. ಮೈಲಾರ ಬಸವಲಿಂಗರು ಆಧುನಿಕ ವೀರಶೈವ ಶಿವಶರಣರಲ್ಲಿ ಉನ್ನತ ಸ್ಥಾನವನ್ನು ಹೊಂದಿದ್ದಾರೆ. ಅವರು ಷಟ್‌ಸ್ಥಲ ನಿರಾಧಾರ ವೀರಶೈವ ಸಿದ್ಧಾಂತ, ಗುರುಕರುಣ ತ್ರಿವಿಧಿ, ಶಿವಾನುಭವ ದರ್ಪಣ, ಲಿಂಗಜಂಗಮ ವಿಜ್ಞಾನ, ಹೀಗೆ ಗ್ರಂಥಗಳನ್ನು ರಚಿಸಿದ್ದು ಅವೆಲ್ಲವೂ ಈ ಒಂದೇ ಗ್ರಂಥದಲ್ಲಿ ಅಡಕವಾಗಿವೆ. ವೀರಶೈವ ಸಮಾಜದಲ್ಲಿ ಬಹುಜನ ವಿದ್ವಾಂಸರೂ, ಧರ್ಮನಿಷ್ಠರೂ, ಆಗಿ ಹೋಗಿದ್ದಾರೆ. ಅವರಲ್ಲಿ ಬಸವೇಶ್ವರನ ಕಾಲದಲ್ಲಿ ಆಗಿಹೋದ ಶಿವಶರಣರ ನಡೆಗಳಲ್ಲಿ ಶಿವಾನುಭವದ ತತ್ವಗಳು ತುಂಬಿ ತುಳುಕುತ್ತವೆ. ಅವೇ ವಿಚಾರಗಳನ್ನು ಶ್ರೀ. ಬಸವಲಿಂಗ ಶರಣರು ತಮ್ಮ ಈ ಕೃತಿಗಳಲ್ಲಿ ವಿಸ್ತರಿಸಿದ್ದಾರೆ. ಅವರ ಗ್ರಂಥಗಳು ಎಲ್ಲರಿಗೂ ತಿಳಿಯುವಂತೆ ಬಹು ಸುಲಭ ಭಾಷೆಯಲ್ಲಿ ಬರೆದವುಗಳಿರುತ್ತವೆ. ಈ ಮಹತ್ವದ ಪ್ರಕಟನಾ ಕಾರ್ಯವನ್ನು ಸಿದ್ಧಿಗೆ ಒಯ್ದು ಶ್ರೀ ಮತ್ಯುಂಜಯ ಸ್ವಾಮಿಗಳನ್ನು ನಾವು ಬಹಳ ಅಭಿನಂದಿಸುತ್ತೇನೆ. ಸಂಪಾದ

ಕರು ಸಂಶೋಧನಾತ್ಮಕವಾದ ಒಂದು ವಿಸ್ತಾರವಾದ ಮತ್ತು ವಿಚಾರ ಪರಿಪ್ಲುತವಾದ ಪ್ರಸ್ತಾವನೆಯನ್ನು ಬರೆದಿದ್ದಾರೆ. ಈ ಗ್ರಂಥವನ್ನು ಗ್ರಾಹಕರು ಸಂಗ್ರಹಿಸುವದು ಅತ್ಯಾವಶ್ಯಕವಾಗಿರುತ್ತದೆ.

ವೇ. ಮೂ. ಬಿ. ಶಿವ ಮೂರ್ತಿ ಶಾಸ್ತ್ರಿಗಳವರು ಕೀರ್ತನ ಕೇಸರಿ

ಮು. ಬೆಂಗಳೂರು:- ಇವರಿಗೆ ಶ್ರೀಮನ್ಮಹಾರಾಜರವರು ಈ ವರ್ಷದ ತಮ್ಮ ವರ್ಧಂತಿಯ ಶುಭ ಸಮಯದಲ್ಲಿ "ಆಸ್ಥಾನ ವಿದ್ವಾನ್' ಎಂಬ ಪದವಿಯನ್ನು ಅನುಗ್ರಹಿಸಿದ್ದಾರೆ. ಇದಕ್ಕೋಸ್ಕರ ನಾವು ಶಾಸ್ತ್ರಿಗಳವರನ್ನು ಅಭಿನಂದಿಸುತ್ತೇವೆ. ವೇ. ಮೂ. ಶಿವಮೂರ್ತಿ ಶಾಸ್ತ್ರಿಗಳವರು ವೀರಶೈವ ಸಂಸ್ಕೃತಿಯ ಉನ್ನತಿಗಾಗಿ ಮಾಡಿದ ಮತ್ತು ಮಾಡುತ್ತಲಿರುವ ಪ್ರಯತ್ನಗಳು ಬಹು ಮುಖವಾಗಿರುತ್ತವೆ. ಅವರು ಉತ್ತಮ ಕೀರ್ತನ ಕಾರರು ಮಾತ್ರವಲ್ಲದೆ, ತತ್ವ ಸಂಶೋಧಕರೂ ಪ್ರಚಾರಕರೂ, ಗ್ರಂಥಕರ್ತರೂ, ಅತ್ಯುತ್ತಮ ಲೇಖಕರೂ, ವಾಗ್ಮಿಗಳೂ, ಇರುತ್ತಾರೆ. ಅವರು ಈ ಘನತರವಾದ ಪದವಿಯನ್ನು ಮಹಾರಾಜರವರಿಂದ ಹೊಂದಲಿಕ್ಕೆ ಪಾತ್ರರಿದ್ದು ಅವರಿಂದ ಇನ್ನೂ ಹೆಚ್ಚಾದ ಸಮಾಜ ಸೇವೆಯು ಘಟಿಸುವದೆಂದು ನಾವು ಧರವಸೆ ತಾಳಿದ್ದೇವೆ.

ಮರುಳಸಿದ್ಧ ಕಾವ್ಯ :—ಇದರ ಪ್ರಕಾಶಕರು ವಿಶ್ವವಾಣಿ ಪ್ರಕಟನ ಮಂದಿರ ಬೆಂಗಳೂರು ಬೆಲೆ ೩ ರೂಪಾಯಿ. ಈ ಗ್ರಂಥವನ್ನು ದೇಪ ಕವಿಯು ವಾರ್ಧಿಕ ಷಟ್ಪದಿಯಲ್ಲಿ ವಿರಚಿಸಿದ್ದಾನೆ. ಇದು ಶ್ರೀಯುತ ಆ. ನ. ಕೃಷ್ಣರಾಯರ ಸಂಪಾದಕತ್ವದಲ್ಲಿ ಪ್ರಕಟವಾಗಿದೆ. ಶ್ರೀಮರುಳಸಿದ್ಧರು ಪಂಚಾಚಾರ್ಯರಲ್ಲಿ ಒಬ್ಬರಿದ್ದಾರೆ. ಅವರ ಚರಿತ್ರೆಯು ಈವರೆಗೂ ಅಪ್ರಕಾಶಿತವಾಗಿತ್ತು. ಅವರು ಎಲ್ಲಿ ಜನಿಸಿದರು, ಅವರು ತಮ್ಮ ಜೀವಿತಕಾಲದಲ್ಲಿ ಅವಾವ ಕಾರ್ಯಗಳನ್ನು ಮಾಡಿದರು, ಇವೇ ಮೊದಲಾದ ವಿಷಯಗಳು ಯಾರಿಗೂ ತಿಳಿದಿರಲಿಲ್ಲ. ಆದರೆ ಇವುಗಳೆಲ್ಲ ಈ ಗ್ರಂಥದಲ್ಲಿ ಬಹು ವಿಸ್ತಾರವಾಗಿ ವರ್ಣಿಸಲ್ಪಟ್ಟಿರುತ್ತವೆ. ಇದಕ್ಕೆ ೫೬ ಪುಟಗಳುಳ್ಳ ವಿಸ್ತಾರವಾದ ಮುನ್ನುಡಿಯು ಇದೆ. ಈ ಗ್ರಂಥದ ವಿಮರ್ಶೆಯು ಇದೇ ಸಂಚಿಕೆಯಲ್ಲಿ ಬಂದಿದೆ. ಅದನ್ನು ವಾಚಕರು ಅವಶ್ಯವಾಗಿ ಅವಲೋಕಿಸಬೇಕು. ಈ ಮಹತ್ವದ ಗ್ರಂಥವನ್ನು ವೀರಶೈವರೆಲ್ಲರೂ ಸಂಗ್ರಹಿಸುವದು ಅವಶ್ಯವು.

ಇತ್ತ ವೆರೆವಿುಂಡದೇವನು ಗರ್ಭಗುಡಿಯು ಮುಚ್ಚಿದ ಒಳಬಾಗಿಲುಗಳು ತೆರೆಯದ್ದನ್ನು ನೋಡಿ ಖತಿಗೊಂಡು—ಶಂಕರನೂ ನಂಬಿಣ್ಣನೂ ಒಂದಾಗಿದ್ದಾರೆ. ಅವರು ಬಾಗಿಲನ್ನು ತೆರೆಯುವದಿಲ್ಲ. ದೇವರು ಶಿವ ಭಕ್ತರನ್ನು ವಿುರಿದವರೊಡನೆ ಮತ್ತು ಅವರನ್ನು ಕಣ್ಣೆತ್ತಿ ನೋಡದವರೊಡನೆ ಸ್ನೇಹ ಮಾಡಿದ್ದಾನೆ. ಆದ್ದರಿಂದ ಭಕ್ತರನ್ನು ಒಲ್ಲದ ಈಶನನ್ನು ಭಕ್ತರಿಂದ ಹೊರಗುಮಾಡಬೇಕು, ಅವನನ್ನು ಬಹಿಷ್ಕರಿಸಬೇಕು, ಎಂದು ಹೇಳಿ ಯಾವ ಭಕ್ತನೂ ಶಿವನನ್ನು ಪೂಜಿಸಬಾರದು, ಅವನನ್ನು ಹೊರಗಿಡಬೇಕೆಂದು ಡಂಗುರ ಹೊಡಿಸಿದನು.

ಗರ್ಭಗುಡಿಯೊಳಗೆ ಇದ್ದ ಈಶನೂ ಅವನ ಮುಂದಿದ್ದ ನಂಬಿಯಣ್ಣನೂ ಆ ಡಂಗುರವನ್ನು ಕೇಳಿ ಈಶನು ಭಯಪಟ್ಟು—ಭಕ್ತರ ಈ ವಿರೋಧವನ್ನು ನಾನು ಹೇಗೆ ತಡೆಯಲಿ! ಭಕ್ತರು ನನ್ನನ್ನು ಬಹಿಷ್ಕರಿಸಿದರೆ ನನ್ನನ್ನು ಕೇಳುವರಾರು? ಎಂದು ನುಡಿಯಲು ನಂಬಿಯು ಮತ್ತಿಷ್ಟು ಗಾಬರಿಗೊಂಡು ನಡುನಡುಗುತ್ತ—ಪರಮಾತ್ಮನೇ, ನಿನ್ನ ಗತಿಯು ಹೀಗಾದರೆ ನನ್ನ ಗತಿ ಏನು? ನಾನು ಸತ್ತೆನು ಸತ್ತೆನು ಎಂದು ಒರಲಹತ್ತಿದನು. ಪರಮಾತ್ಮನು ಅದನ್ನು ನೋಡಿ—ಈಗ ಮಾತ್ರ ಈ ನಂಬಿಯು ಹಾದಿಗೆ ಬಂದನು. ಭಕ್ತರೊಡನೆ ಹೇಗೆ ಆಚರಿಸಬೇಕೆಂಬುದು ಅವನಿಗೆ ಈಗ ಗೊತ್ತಾಯಿತು ಎಂದು ತಿಳಿದವನಾಗಿ ಅವನಿಗೆ—ಅಂಜದಿರು, ಅಂಜದಿರು. ನಮ್ಮ ಭಕ್ತರು ಹೀಗೆ ಕ್ರೋಧಪುಳ್ಳವರಾದರೂ ಅವರಿಗೆ ಯಾರು ಶರಣೆಂದೆನ್ನುವರೋ ಅವರನ್ನು ಅವರು ಕಾಯುವರು. ಇಷ್ಟೇಅಲ್ಲ, ಅವರಿಗೆ ತನ್ಮನ್ನೇ ಕೊಡಲು ಮುಂದಾಗುವರು. ಆದ್ದರಿಂದ ನೀನು ಪುರಾತನ ಭಕ್ತರ ಮಹಿಮೆಗಳನ್ನು ಹಾಡಹತ್ತು ಎಂದು ಹೇಳಿದನು. ಆಗ ನಂಬಿಯಣ್ಣನು ನನಗೆ ಈ ಮಹಿಮರ ಚರಿತ್ರೆಗಳು ಲಕ್ಷದಲ್ಲಿ ಏನೂ ಉಳಿದಿಲ್ಲ. ಇಷ್ಟೇಅಲ್ಲ, ಅವರ ಹೆಸರುಗಳನ್ನು ಸಹ ಮರೆತುಬಿಟ್ಟಿದ್ದೇನೆ. ಅಂದಬಳಿಕ ಅವರ ಚರಿತ್ರೆಗಳನ್ನು ನಾನು ಹೇಗೆ ಹಾಡಲಿ ಎಂದು ಅಂದನು. ಆಗ ತಿರುವಾರೂರೇಶ್ವರನು ಪ್ರಸನ್ನ ಮುದ್ರೆಯಿಂದ—ನಂಬಿಯಣ್ಣನೇ ಕೇಳು, ಇನ್ನು ಮೇಲೆ ನೀನು ಭಕ್ತರನ್ನು ನಿಂದಿಸಬೇಡ, ಪುರಾತನರ ಹೆಸರುಗಳನ್ನೂ ಅವರ ದಿವ್ಯ ಚರಿತ್ರೆಗಳನ್ನೂ ನಿನ್ನ ಸ್ಮರಣೆಗೆ ತಂದುಕೊಡುತ್ತೇನೆ. ಅವರನ್ನು ಹಾಡಹತ್ತು ಎಂದು ಒರೆದನು. ಆಗ ನಂಬಿಯಣ್ಣನ ಮನ

ನಿನಲ್ಲಿ ಏನೋ ಒಂದು ಝಗ್ಗನೇ ಪ್ರಕಾಶವು ಬಿದ್ದಿತು. ಅವನಲ್ಲಿ ಅಂತಃಸ್ಫೂರ್ತಿಯಾಯಿತು. ಆಗ ಅವನು ಪುರಾತನರ ಚರಿತ್ರೆಗಳನ್ನು ತಿರುಪಾಡುಗಳ ಮೂಲಕ ಹಾಡಹತ್ತಿದನು. ಅವನು ತಿರುನೀಲಕಂಠ, ಇಹಪ್ಪಗೆಯಾಂಡ, ಇಳಿಯಾಂಡಗುಡಿವಾರ, ಸೇದಿರಾಜ ಮೊದಲಾದ ೬೩ ಪುರಾತನರ ಚರಿತ್ರೆಗಳನ್ನು ವೀಣೆಯ ನಾದದಲ್ಲಿ ಹಾಡಹತ್ತಿದನು. ಆಗ ಪರಮಾತ್ಮನೇ ಅವನ ಮೂಲಕ ಹಾಡುತ್ತಾನೋ ಎನ್ನುವಂತೆ ಭಾಸವಾಯಿತು. ನಂಬಿಯಣ್ಣನು ಹಾಡುತ್ತ ಹಾಡುತ್ತ ಗರ್ಭಗುಡಿಯ ಬಾಗಿಲುಗಳ ಕಡೆಗೆ ಬರಲು ಆ ಬಾಗಿಲುಗಳು ತಾವಾಗಿಯೇ ತೆರೆದವು. ಅಷ್ಟರಲ್ಲಿ ಪರಮಾತ್ಮನು ಒಳಗೆ ಅಂತರ್ಧಾನನಾಗಿದ್ದನು. ಆದರೆ ಹೊರಗೆ ಮಾತ್ರ ಕ್ರೋಧಾವಿಷ್ಟರಾದ ಭಕ್ತ ಜನರು ಮುಕುರಿದ್ದರು. ಆದರೆ ನಂಬಿಯಣ್ಣನ ತಿರುಪಾಡಿನ ದನಿಯು ಅವರ ಕಿವಿಗೆ ಬಿದ್ದ ಕೂಡಲೆ ಅವರ ರೋಷವು ತತ್‌ಕ್ಷಣವೇ ಅಡಗಿತು. ಅವನು ಪುರಾತನರನ್ನು ತನ್ನ ದಿವ್ಯ ಸ್ವರದಿಂದ ಸ್ತುತಿಸುತ್ತ ಮುಂದುವರಿದನು. ಅದನ್ನು ಕೇಳಿದ ಬಳಿಕ ಅವರ ಮನಸ್ಸಿನಲ್ಲಿ ಭಕ್ತಿಯ ರಸಪ್ರವಾಹವು ಉಕ್ಕೇರಿ ಬರಹತ್ತಿತು.

ಭಕ್ತ ಜನರ ಇದಿರಿಗೆ ಮೆರೆಯಿಂಡದೇವನು ನಿಂತಿದ್ದನು. ಅವನು ತನ್ನ ಮುಂದೆ ತಿರುಪಾಡುಗಳನ್ನು ಹಾಡುತ್ತ ಬರುವ ನಂಬಿಯಣ್ಣನನ್ನು ಕಂಡು—ನಂಬಿಯಣ್ಣನಿಗೆ ಇದೆಲ್ಲಿಯ ಭಕ್ತಿ? ಇದು ಹೊಸತಾದದ್ದು. ನನಗೆ ತಿಳಿಯದೆ ಪರಮಭಕ್ತನಾದ ಇವನೊಡನೆ ಕೋಪಿಸಿದೆನು, ಎಂದು ಅವನಿಗೆ ಬಹಳ ಪಶ್ಚಾತ್ತಾಪವಾಯಿತು ಮತ್ತು ಅವನ ಮೊದಲಿನ ಕೋಪವು ಅಡಗಿತು. ಆಗ ಅವನು—ನಾನು ನಂಬಿಯಣ್ಣನನ್ನು ಭಂಗಿಸಿದೆನು. ಇಷ್ಟೇಅಲ್ಲ, ಪರಮಾತ್ಮನು ತಿರುವಾರೂರು ಭಕ್ತರಿಂದ ಹೊರಗೆಂದು ಡಂಗುರವನ್ನು ಹೊಯಿಸಿದೆನು. ನಾನು ಪಾಪಿಷ್ಠನು. ನಾನು ಇನ್ನೇಕೆ ಜೀವಿಸುವುದು? ಶಿವದ್ರೋಹವನ್ನು ಮಾಡಿದ ತಪ್ಪಿಗಾಗಿ ನನ್ನನ್ನು ಮೃಡನಿಗೊಪ್ಪಿಸುವೆನೆಂದು ನಿರ್ಧರಿಸಿ ಹದನಾದ ಒಂದು ಖಡ್ಗವನ್ನು ತೆಗೆದುಕೊಂಡು ತನ್ನ ಕೊರಳನ್ನು ಕತ್ತರಿಸಿಕೊಳ್ಳುವಷ್ಟರಲ್ಲಿ ಭಕ್ತಪ್ರೇಮಿಯಾದ ಸದಾಶಿವನು ಅವನ ಸಾಹಸವನ್ನು ತಡೆದು ಅವನಿಗೆ ತನ್ನ ನಿಜರೂಪುದೋರಿ ಅವನನ್ನು ಸಂತವಿಸಿದನು.

ಪರಮಾತ್ಮನ ಪ್ರೇರಣೆಯಾದಂತೆ ಸೌಂದರ ನಂಬಿಯಣ್ಣನು ಪುರಾತನರನ್ನು ಹಾಡುತ್ತ ತಿರುವಾರೂರಲ್ಲಿ ಸುಖವಾಗಿದ್ದನು. ಇತ್ತ ಮೆರೆಯಿಂಡದೇವನು ತನ್ನ ಶಿವಾನುಭವದಂತೆ ಆಚರಿಸುತ್ತ ಶಿವಸಾಮರಸ್ಯಪದವನ್ನು ಹೊಂದಿ ವೀರಶೈವರಲ್ಲಿ ಒಬ್ಬ ಶ್ರೇಷ್ಠ ಶಿವಶರಣನೆಂದು ಎನ್ನಿಸಿಕೊಂಡನು.

ಈಪ್ರಕಾರ ಸೌಂದರ ನಂಬಿಣ್ಣನು ಪಿರಿಯ ಪುರಾಣವನ್ನು ರಚಿಸಲಿಕ್ಕೆ ಕಾರಣನಾದವನು ಶಿವಶರಣನೂ ವಚನಕಾರನೂ ಶಿವಾನುಭವಿಯೂ ಆದ ಮೆರೆಮಿಂಡದೇವನು. ಇವನು ಮಾದರ ಚನ್ನಯ್ಯನಂತೆ ಕರ್ನಾಟಕದಿಂದ ತಮಿಳುದೇಶಕ್ಕೆ ಹೋಗಿ ವಾಸಿಸಿರಬಹುದೆಂದು ತೋರುತ್ತದೆ.

ತಮಿಳುದೇಶದಲ್ಲಿ ಕೆಲವು ಪ್ರಸಿದ್ಧ ವಿಷ್ಣು ಭಕ್ತರಾಗಿದ್ದು ಅವರಿಗೆ 'ಆಳ್ವಾರ್' ಎಂಬ ಹೆಸರಿದೆ. ಹಾಗೆಯೇ ಅನೇಕ ಶಿವಭಕ್ತರೂ ಆಗಿದ್ದು ಅವರಿಗೆ 'ಪುರಾತನ'ರೆಂಬ ಹೆಸರಿದೆ. ಅವರ ವಿಷಯವಾಗಿ ನಂಬಿಯಣ್ಣನು ಹಾಡಿದ ಪದ್ಯಗಳಿಗೆ 'ತಿರುಪಾಡು' ಎಂದರೆ ದೇವರ ಹಾಡು ಎಂಬ ಹೆಸರಿದೆ.

ತಿಲಕವ್ವೆ.

ವಿಜಾಪುರ ಜಿಲ್ಲೆಯಲ್ಲಿ ಮುದ್ದೇಬಿಹಾಳ ತಾಲೂಕಿನಲ್ಲಿ ಹೇರೂರೆಂಬ ಗ್ರಾಮವಿದೆ. ಇದು ತಾಳೀಕೋಟೆಯ ವಾಯವ್ಯಕ್ಕೆ ಆರು ಮೈಲುಗಳ ಮೇಲಿದೆ. ಅಲ್ಲಿಯ ಒಂದು ಜೈನ ಕುಟುಂಬದಲ್ಲಿ ತಿಲಕವ್ವೆಯು ಜನಿಸಿದಳು. ಅವಳು ಚಿಕ್ಕಂದಿನಲ್ಲಿ ಜೈನಳಾಗಿಯೇ ಬೆಳೆದಳು. ಆದರೆ ಈ ನಾಡಿನಲ್ಲಿ ಆಗ ಬಾಹೂರು ಬ್ರಹ್ಮಯ್ಯ, ಮುದನೂರಿನ ದೇವರದಾಸಿಮಯ್ಯ, ಕೆಂಭಾವಿಯ ಭೋಗಣ್ಣ, ನಾವದಿಗೆಯ ಗುಡ್ಡಮ್ಮ, ಆಗ್ನಿಯಲ್ಲಿಯ ಅಫವಣಿಯ ಹೊನ್ನಯ್ಯ ಹೀಗೆ ಅನೇಕ ಶಿವಶರಣರು ಜನಿಸಿ ಪ್ರಸಿದ್ಧಿಯನ್ನು ಹೊಂದಿದ್ದರಿಂದ ಶಿವಾನುಭವದ ತತ್ವಗಳು ಇಲ್ಲಿ ಎಲ್ಲ ಕಡೆಗೂ ಪ್ರಸಾರವಾಗಿದ್ದವು. ಆದ್ದರಿಂದ ತಿಲಕವ್ವೆಯು ತನ್ನ ಜೈನ ಧರ್ಮವನ್ನು ಬಿಟ್ಟುಕೊಟ್ಟು ಶಿವಧರ್ಮವನ್ನು

ತೆಗೆದುಕೊಂಡು ದೇವಾಲಯವನ್ನು ಪ್ರವೇಶಿಸಿದನು. ಆಗ ಆ ದೀನ ಅಬಲೆಯು ಅವನ ಭೀಕರ ಸ್ವರೂಪನ್ನು ಕಂಡು ಅವನು ತನ್ನನ್ನು ಕೊಂದು ಹಾಕಲು ಬಂದಿರುವನೆಂಬುದನ್ನು ತಿಳಿದವಳಾಗಿ ಭಯಭೀತಳಾಗಿ ಲಿಂಗವನ್ನು ಮತ್ತಿಷ್ಟು ಗಟ್ಟಿಯಾಗಿ ಅಪ್ಪಿಕೊಂಡು ಆಕ್ರೋಶ ಮಾಡಹತ್ತಿದಳು. ಅವಳ ಆಕ್ರೋಶವು ಪರಮಾತ್ಮನಿಗೆ ಅರಿಕೆಯಾಯಿತು. ಆಗ ಒಂದು ಅದ್ಭುತವಾಯಿತು. ಅವಳು ಬೇಡಿಕೊಳ್ಳುತ್ತಿದ್ದಂತೆ ಅವಳ ಹೆಣ್ಣು ರೂಪು ಹೋಗಿ ಗಂಡು ರೂಪಾಯಿತು! ಅದನ್ನು ಕಂಡಾಕ್ಷಣವೇ ಅವಳ ಗಂಡನು ಹಿಂಜರಿದನು. ಸಮೀಪಕ್ಕೆ ಬಂದಿದ್ದ ನಿಬ್ಬಣಿಗರೆಲ್ಲರೂ ಚಕಿತರಾದರು. ಅವರು ತಿಲಕವ್ವೆಯು ಮಹಾ ಶಿವ ಶರಣೆಯು, ಅವಳು ನಿಜವಾದ ಭಕ್ತೆಯು, ಎಂದು ತಿಳಿದವರಾಗಿ ಅವರು ಶಿವಲಿಂಗದೆದುರಿನಲ್ಲಿ ಪೊಡಮಟ್ಟರು ಮತ್ತು ಶಿವನನ್ನು ಭಜಿಸಹತ್ತಿದರು. ಜೀನಸೇನನಿಗೆ ಪಶ್ಚಾತ್ತಾಪವಾಯಿತು. ಅವನು ಕೇವಲ ಶಿವಭಕ್ತೆಯುಳ್ಳವನಾದನು. ಆಗ ಅವನು ತನ್ನ ಪತ್ನಿಯಿಂದಲೇ ಸಂಸ್ಕಾರ ಪೂರ್ವಕವಾಗಿ ಮಂತ್ರೋಪದೇಶವನ್ನು ಹೊಂದಿ ವೀರಶೈವ ಧರ್ಮವನ್ನು ಪಾಲಿಸುವವನಾದನು. ಮುಂದೆ ಸತಿಪತಿಗಳೀರ್ವರು ಶಿವಾನುಭವಿಗಳಾಗಿ ಕಾಲಾಂತರದಲ್ಲಿ ತಮ್ಮ ಲಿಂಗದಲ್ಲಿ ಬೆರೆದರು.

ತಿಲಕವ್ವೆಯು ಪುರಾತನಳು. ಅವಳ ಹೆಸರು ಗಣಸಹಸ್ರದಲ್ಲಿ ಬಂದಿದೆ. ಅವಳು ಹೇರೂರು ಹೆಣ್ಣೆಂದು ಬಹು ಪ್ರಸಿದ್ಧಳಾಗಿದ್ದಾಳೆ. ದೇವಿಯರ ತ್ರಿವಿಧಿಯಲ್ಲಿ ಅವಳ ಉಲ್ಲೇಖವಿರುವದು ಹೇಗೆಂದರೆ:—

ಪುರುಷ ಭವಿಯಾಗಿರಲು। ನರನವನ ಧಿಕ್ಕರಿಸಿ
ಹರನೆಂಬ ಪುರುಷನೊಡನೂಡಿ ಪೋಗಿರ್ದ
ವಿರತೆ ತಿಲಕವ್ವೆ ಶರಣಾಗು॥

ಹೀಗೆ ಬಸವೇಶ್ವರನ ಕಾಲದಲ್ಲಿ ಅನೇಕ ಶಿವಶರಣೆಯರು ಉದ್ಭವಿಸಿ ಶಿವಾನುಭವದ ಮಹತ್ವವನ್ನು ಎಲ್ಲ ಕಡೆಗೂ ಬೀರಿದ್ದಾರೆ.

ಪಾಲಿಸುವವಳಾದಳು. ಅವಳು ತನ್ನ ಗ್ರಾಮದಲ್ಲಿದ್ದ ಶಿವಾಲಯಕ್ಕೆ ದಿನಾಲು ಹೋಗಿ ಶಿವಾರ್ಚನೆಯನ್ನು ಮಾಡಲು ಪ್ರಾರಂಭಿಸಿದಳು. ಆದರೆ ಇದು ಅವಳ ತಾಯಿ ತಂದೆಗಳಿಗೆ ರುಚಿಸಲಿಲ್ಲ. ಆದ್ದರಿಂದ ಅವರು ಅವಳು ಅಲ್ಲಿಗೆ ಹೋಗುವದನ್ನು ಪೂರ್ಣವಾಗಿ ನಿಲ್ಲಿಸಿಬಿಟ್ಟರು. ಆಗ ಅವಳು ಅತ್ಯಂತ ಖಿನ್ನ ಮನಸ್ಕಳಾಗಿ ಪರಮಾತ್ಮನಿಗೆ—ಎಲೋ ಶಿವನೇ, ಹರನೇ, ನನ್ನ ತಾಯಿ ತಂದೆಗಳು ನಿನ್ನ ಪೂಜೆಯನ್ನು ಮಾಡಗೊಡುವದಿಲ್ಲ. ಇನ್ನು ಮೇಲೆ ನಿನ್ನನ್ನು ಧ್ಯಾನಿಸುವದೇ ನನ್ನ ಪೂಜೆಯಾಯಿತು. ಅದನ್ನು ನೀನು ಸ್ವೀಕರಿಸು ಎಂದು ಬೇಡಿಕೊಂಡು ಅವಳು ಗುಪ್ತಭಕ್ತಳಾಗಿ ಪರಮಾತ್ಮನ ಧ್ಯಾನವಮಾಡುತ್ತ ವಾಸಿಸಹತ್ತಿದಳು.

ಹೀಗಿರುತ್ತಿರಲು ಅವಳಿಗೆ ಯೌವ್ವನವು ಪ್ರಾಪ್ತವಾಯಿತು. ಆಗ ಅವಳ ತಾಯಿ ತಂದೆಗಳು ಸೋದರಳಿಯನಾದ ಜಿನಸೇನ ಸೆಟ್ಟಿಗೆ ಅವಳನ್ನು ಕೊಟ್ಟು ಲಗ್ನ ಮಾಡಬೇಕೆಂದು ಬಯಸಿದರು. ಆದರೆ ತಿಲಕವ್ವೆಯು ಜೈನನನ್ನು ನಾನು ಲಗ್ನವಾಗುವದಿಲ್ಲೆಂದು ಎಷ್ಟು ಹೇಳಿದರೂ ಅವರು ಅದನ್ನು ಕೇಳದೆ ಅವನಿಗೆ ಅವಳನ್ನು ಬಲಾತ್ಕಾರದಿಂದ ಲಗ್ನ ಮಾಡಿದರು.

ಲಗ್ನವಾದ ಬಳಿಕ ಜಿನಸೇನ ಸೆಟ್ಟಿಯು ತಿಲಕವ್ವೆಯನ್ನು ಕರೆದುಕೊಂಡು ತನ್ನ ನಿಬ್ಬಣದವರೊಡನೆ ತನ್ನ ಗ್ರಾಮಕ್ಕೆ ಹೊರಟನು. ಆದರೆ ತಿಲಕವ್ವೆಗೆ ಆಗ ಎಷ್ಟು ಮಾತ್ರವೂ ಸಮಾಧಾನವಿರಲಿಲ್ಲ. ಮನಸ್ಸಿನಲ್ಲಿಯೇ ಬಹಳ ನೊಂದುಕೊಂಡು ದುಃಖಿಸುತ್ತಿದ್ದಳು. ಹೀಗಿರುವಲ್ಲಿ ನಿಬ್ಬಣಿಗರು ಊರಿಗೆ ಬರುತ್ತಿರುವಾಗ ತಿಲಕವ್ವೆಯು ಮಧ್ಯದಾರಿಯಲ್ಲಿ ಒಂದು ಶಿವಾಲಯವಿರುವದನ್ನು ಕಂಡು ಯಾರಿಗೂ ತಿಳಿಯದಂತೆ ಅಲ್ಲಿಗೆ ಹೋಗಿ ಅಲ್ಲಿದ್ದ ಲಿಂಗವನ್ನು ಗಟ್ಟಿಯಾಗಿ ಅಪ್ಪಿಕೊಂಡು—ಶಿವನೇ, ಹರನೇ, ಶಿವಭಕ್ತಕುಲದೀಪಕನೇ, ನನ್ನ ಈ ಹೆಣ್ಣು ಜನ್ಮವನ್ನು ಬಿಡಿಸು. ನನ್ನನ್ನು ರಕ್ಷಿಸು, ರಕ್ಷಿಸು ಎಂದು ಮೊರೆ ಇಡಹತ್ತಿದಳು. ಆದರೆ ಅಷ್ಟರಲ್ಲಿ ನಿಬ್ಬಣಿಗರು ಅವಳು ತಮ್ಮ ಕೂಡ ಇಲ್ಲದ್ದನ್ನು ಕಂಡು ಅವರು ಅವಳನ್ನು ಹುಡುಕಹತ್ತಲು ಅವಳು ಶಿವಾಲಯದಲ್ಲಿ ಹೋಗಿರುವಳೆಂಬುದು ಅವರಿಗೆ ತಿಳಿಯಿತು. ಇದು ಜೀನಸೇನನಿಗೆ ಗೊತ್ತಾಗಲು ಅವನು ಅತ್ಯಂತ ಕ್ರೋಧಾವಿಷ್ಟನಾಗಿ ಒಂದು ಅಲಗನ್ನು

ಮೇದರ ಕೇತಯ್ಯ.

ಮೇದರ ಕೇತಯ್ಯನೆಂಬ ಶಿವಶರಣನು ಕಲ್ಯಾಣ ಪಟ್ಟಣದಲ್ಲಿ ಬಿದಿರಿನ ಕಾಯಕವನ್ನು ಮಾಡುತ್ತ ಇದ್ದನು. ಅವನು ದಿನಾಲು ಬೆಟ್ಟಕ್ಕೆ ಹೋಗಿ ಅಲ್ಲಿದ್ದ ಬಿದಿರುಗಳನ್ನು ಕಡಿದುಕೊಂಡು ಬಂದು ಅವುಗಳಿಂದ ಬುಟ್ಟಿ ಮೊರ ಮೊದಲಾದವುಗಳನ್ನು ಮಾಡಿ ಅವುಗಳನ್ನು ಪಟ್ಟಣದಲ್ಲಿ ಮಾರಿ, ಅದರಿಂದ ಬಂದ ಹಣದಿಂದ ತನ್ನ ನಿರ್ವಾಹವನ್ನು ಸಾಗಿಸುತ್ತಿದ್ದನು. ಅವನು ಶಿವಶರಣರ ನಡೆಯಂತೆ ಶ್ರಮವನ್ನು ಮಾಡಿ ದೊರಕಿಸಿ, ದೊರಕಿಸಿದ್ದನ್ನು ಲಿಂಗಭೋಗೋಪಭೋಗಿಯಾಗಿ ಭೋಗಿಸಿ, ಉಳಿದದ್ದನ್ನು ಶಿವಾರ್ಪಣ ಮಾಡಿ ದಾಸೋಹ ಭಾವದಿಂದ ಇರುತ್ತಿದ್ದನು. ಅವನು ಬಸವೇಶ್ವರನ ಸನ್ನಿಧಿಯಲ್ಲಿ ನಡೆಯುತ್ತಿದ್ದ ಶಿವಾನುಭವಗೋಷ್ಠಿಗಳನ್ನು ದಿನಾಲು ಕೇಳಲಿಕ್ಕೆ ಹೋಗಿ ಅಲ್ಲಿ ನಡೆಯುತ್ತಿದ್ದ ಅನುಭವಾಮೃತವನ್ನು ಸೇವಿಸುವನು. ಶಿವಶರಣರಲ್ಲಿ ಅವನು ಒಬ್ಬ ಶ್ರೇಷ್ಠ ಶಿವಾನುಭವಿ ಎಂದೆನಿಸಿಕೊಂಡನು. ಅವನು ತನಗಾದ ಅನುಭವವನ್ನು ವಚನಗಳಲ್ಲಿ ಹೇಳುವವನಾದನು. ಮೇದರ ಕೇತಯ್ಯನು ವಚನಕಾರನಿದ್ದಾನೆ. ಅವನ ಮುದ್ರಿಕೆಯು 'ಗೌರೇಶ್ವರಾ' ಎಂದಿದೆ. ಹೀಗೆ ಕೇತಯ್ಯನು ಜ್ಞಾನಿಯಾಗಿದ್ದರಿಂದ ಬಸವೇಶ್ವರನು ಅವನನ್ನು ಜಂಗಮ ಸ್ಥಲದಲ್ಲಿ ಕಂಡು ಅವನಿಗೋಸ್ಕರ ಅತ್ಯಂತ ಪೂಜ್ಯಭಾವವನ್ನು ತಾಳಿದ್ದನು. ಹೀಗೆ ಕೇತಯ್ಯನು ಕಲ್ಯಾಣಪಟ್ಟಣದಲ್ಲಿ ಅನೇಕ ವರ್ಷ ಕಾಲ ಕಳೆದನು.

ಹೀಗಿರುವಲ್ಲಿ ಕೇತಯ್ಯನ ಮಹತ್ವವನ್ನು ಜಗತ್ತಿನಲ್ಲಿ ಹೆಚ್ಚಾಗಿ ಬೀರಬೇಕೆಂದು ಪರಮಾತ್ಮನು ಬಯಸಿ ಒಂದು ಉಪಾಯವನ್ನು ಯೋಜಿಸಿದನು. ಒಂದು ದಿನ ಕೇತಯ್ಯನು ಅಡವಿಗೆ ಹೋಗಿ ಒಂದು ಬಿದಿರನ್ನು ಕಡಿಯುವಾಗ ಅದರೊಳಗಿಂದ ಹೊನ್ನುಗಳು ಬಳಬಳನೆ ಹೊರಗೆ ಬೀಳಹತ್ತಿದವು. ಯಾವಾಗಲೂ ಕಾಯಕದಿಂದ ಜೀವಿಸುವವನಾದ ಕೇತಯ್ಯನು ಅವುಗಳನ್ನು ಮುಟ್ಟಲಿಲ್ಲ. ಈ ಬಿದಿರಿಗೆ ಹುಳಹತ್ತಿವೆ ಎಂದು ತಿಳಿದನು. ಆದ್ದರಿಂದ ಅವನು ಅದನ್ನು ಬಿಟ್ಟು ಮತ್ತೊಂದು ಬಿದಿರಿನ ಕಡೆಗೆ ಹೋಗಿ ಅದನ್ನು ಕಡಿಯಹತ್ತಲು ಅದರೊಳಗಿಂದಲೂ ಹೊನ್ನುಗಳು ಬೀಳಹತ್ತಿದವು. ಆಗ ಅವನು ಅದನ್ನು ಬಿಟ್ಟು ಮತ್ತೊಂ

ದರ ಕಡೆಗೆ ಹೋಗಿ ಅದನ್ನು ಕಡಿಯಲಾಗಿ ಅಲ್ಲಿಯೂ ಹೀಗೆಯೇ ಆಗಲು, ಅವನು—ಏಕೋ ಇಲ್ಲಿಯ ಗಿಡಗಳಿಗೆ ಬಂಗಾರದ ಹುಳಗಳು ಹತ್ತಿರುತ್ತವೆ. ಇವುಗಳನ್ನು ಬಿಟ್ಟು ಬೇರೊಂದು ಕಡೆಗೆ ಹೋಗಬೇಕು ಎಂದು ದೂರದಲ್ಲಿದ್ದ ಒಂದು ಎತ್ತರವಾದ ಗಿಡದ ಕಡೆಗೆ ಹೋಗಿ ಅದನ್ನು ಹತ್ತಿ ಕಡಿಯಹತ್ತಿದನು. ಅದನ್ನು ಕಡಿಯುವಾಗ ಕಾಲು ಜಾರಿ ಅವನು ನೆಲಕ್ಕೆ ಬಿದ್ದನು. ಬಹು ಎತ್ತರವಾದ ಸ್ಥಳದಿಂದ ಬಿದ್ದದರಿಂದ ಅವನು ಅಲ್ಲಿಯೇ ಗತಪ್ರಾಣನಾದನು.

ಕೇತಯ್ಯನು ಬಿದಿರಿನ ಮೆಳೆಯಲ್ಲಿ ಸತ್ತು ಬಿದ್ದಿದ್ದಾನೆಂಬ ಸುದ್ದಿಯನ್ನು ಬಸವೇಶ್ವರನು ಕೇಳಿ, ಕೂಡಲೆ ಅವನು ಅಲ್ಲಿಗೆ ಬಂದು—ಈ ಕೇತಯ್ಯನು ನನ್ನ ಪ್ರಾಣದಂತೆ ಇದ್ದನು. ಅವನು ಜ್ಞಾನಿಯಾದ್ದರಿಂದ ಜಂಗಮ ಸ್ಥಳದಲ್ಲಿಯವನು. ಅದ್ದರಿಂದ ಅವನಿಗೆ ಕ್ರಿಯಾ ಸಮಾಧಿಯೇ ಯುಕ್ತವೆಂದು ಅದನ್ನು ಮಾಡಿಸುವದರಲ್ಲಿ ತೊಡಗಿದನು. ಆಗ ಶಿವಾನುಭವ ಮಂಟಪಕ್ಕೆ ಹೋಗುವ ವೇಳೆಯಾಗಲು ಅಲ್ಲಿ ಎಲ್ಲರೂ ಕೂಡಿರುವರೋ ಹೇಗೆಂಬುದನ್ನು ನೋಡಿಕೊಂಡು ಬರಲು ತನ್ನ ನಿತ್ಯದ ಚಾರನಾದ ಉತ್ತಣ್ಣನನ್ನು ಅಲ್ಲಿಗೆ ಕಳಿಸಲು ಅವನು ಅಲ್ಲಿಗೆ ಹೋಗಿ ಅಲ್ಲಿದ್ದ ಶಿವಶರಣರಿಗೆ—ಕೇತಯ್ಯನು ಮರಣಹೊಂದಿದ್ದಾನೆ, ಆವನ ಕ್ರಿಯಾ ಸಮಾಧಿಯನ್ನು ಬಸವೇಶ್ವರನು ಮಾಡಿಸಹತ್ತಿದ್ದಾನೆ ಎಂದು ಹೇಳಲು, ಮಡಿವಾಳ ಮಾಚಯ್ಯನು ಬಸವೇಶ್ವರನು ಜಂಗಮ ಪ್ರಾಣಿಯು, ಜಂಗಮನ ಪ್ರಾಣದೊಡನೆ ಅವನ ಪ್ರಾಣವೂ ಹೋಗಬೇಕಾದುದು ಯುಕ್ತವು ಎಂದು ನುಡಿಯಲು ಉತ್ತಣ್ಣನು ಹಾಗೆಯೆ ಬಸವೇಶ್ವರನಲ್ಲಿಗೆ ಬಂದು ಮಡಿವಾಳ ಮಾಚಿದೇವನು ಅಂದದ್ದನ್ನು ಅವನಿಗೆ ತಿಳಿಸಿದನು. ಆಗ ಬಸವೇಶ್ವರನು ಮಡಿವಾಳ ಮಾಚಿದೇವನ ನುಡಿಯು ಸತ್ಯವಾದುದು. ಶಿವಾನುಭವಿಗಳು ಅದರಂತೆಯೇ ನಡಿಯಬೇಕು ಎಂದು ಅಂದು ತನ್ನ ಪ್ರಾಣವನ್ನು ಕೇತಯ್ಯನ ಪ್ರಾಣದೊಂದಿಗೆ ಸೇರಿಸಲಾಗಿ ಅವನು ಗತಪ್ರಾಣವಾಗಲು ಅವನ ಬಾಹ್ಯ ಶರೀರವು ಹೊರಗೆ ಕಳಚಿಬಿದ್ದಿತು. ಶಿವಾನುಭವ ಮಂಟಪದಲ್ಲಿದ್ದ ಶಿವಶರಣರು ಬಸವೇಶ್ವರನಿಗೂ ಕೇತಯ್ಯನಿಗೂ ಹೀಗಾದುದನ್ನು ಕೇಳಿ ಅವರೆಲ್ಲರೂ ಅಲ್ಲಿಗೆ ಬಂದು—ಬಸವೇಶ್ವರನೂ, ಕೇತಯ್ಯನೂ, ಹೀಗೆ ನಮ್ಮನ್ನು ಬಿಟ್ಟು ಹೋದರೆ ನಮ್ಮನ್ನು ಉದ್ಧಾರಮಾಡುವವರು ಯಾರು? ಅವರ ಪ್ರಾಣ

ಗಳನ್ನು ನೀನು ಮರಳುವಂತೆ ಮಾಡು ಎಂದು ಮುಡಿವಾಳ ಮಾಚಯ್ಯನಿಗೆ ಅವರು ಹೇಳಲು, ಮಾಚಯ್ಯನು ಪರಮಾತ್ಮನನ್ನುದ್ದೇಶಿಸಿ--ಪರಶಿವನೇ, ಭಕ್ತಿತತ್ಪರರೂ ಜಂಗಮ ಪ್ರಾಣಿಗಳೂ ಆದ ಇವರೀರ್ವರನ್ನು ಅಕಾಲದಲ್ಲಿ ಹೀಗೆ ನೀನು ನಿನ್ನಲ್ಲಿ ಬರಮಾಡಿಕೊಳ್ಳಬೇಕೇ? ಈ ಕೇತಯ್ಯನ ಪ್ರಾಣವನ್ನು ಜಾಗ್ರತೆಯಾಗಿ ನಮಗೆ ಕೊಡು, ಅದರೊಡನೆ ಬಸವೇಶ್ವರನ ಪ್ರಾಣವೂ ಬರುವದು ಎಂದು ಆವೇಶದಿಂದಲೂ ತನ್ನ ಭಕ್ತಿಯ ಉದ್ರೇಕದಿಂದಲೂ ನುಡಿಯಲು ಉಭಯತರು ಸ್ವಲ್ಪ ಹೊತ್ತಿನಲ್ಲಿ ಚೇತರಿಸಿಕೊಂಡು ಎದ್ದರು. ಅವನು ಎದ್ದ ಕೂಡಲೆ ಮೂರ್ಛೆತಿಳಿದವನಂತೆ ಬಸವೇಶ್ವರನೂ ಎದ್ದು ಕುಳಿತನು. ಆಗ ನೆರೆದ ಶರಣರೆಲ್ಲರು ಆನಂದಸಾಗರದಲ್ಲಿ ಮುಳುಗಿದರು. ಮುಂದೆ ಮೇದರ ಕೇತಯ್ಯನು ಎಂದಿನಂತೆ ತನ್ನ ಬಿದಿರಿನ ಕಾಯಕವನ್ನು ಮಾಡುತ್ತ ದಾಸೋಹದಲ್ಲಿ ವರ್ತಿಸುತ್ತ ಕಲ್ಯಾಣದಲ್ಲಿ ಇರುವವನಾದನು. ಮತ್ತು ಅಲ್ಲಿಯೇ ಅವನು ಸಮಾಧಿಸ್ತನಾದನು.

ಈ ಪ್ರಕಾರ ಬಸವೇಶ್ವರನ ಕಾಲದಲ್ಲಿ ಶಿವಶರಣರೆಲ್ಲರು ದೇಹ ಬೇರೆಯುಳ್ಳವರಾದರೂ ಅವರು ಪ್ರಾಣ ಒಂದೇ ಆಗಿ ಶಿವಾನುಭವದ ಆಚರಣೆಯಂತೆ ಆಚರಿಸುವವರಾಗಿದ್ದರು.

ಮೇದರ ಕೇತಯ್ಯನ ಆರು ವಚನಗಳು ಮಾತ್ರ ನಮಗೆ ದೊರೆತಿದ್ದು ಅವುಗಳನ್ನು ನಾವು ಕೆಳಗೆ ಕೊಟ್ಟಿದ್ದೇವೆ.

ವಚನಗಳು.

(೧) ಒಂದು ಬಿದಿರಿಗೆ ಕವೆ ಮೂರು, ಆ ಕವೆಯ ಒಳಗೆ ಲಕ್ಷಸಿಬಿರು. ಮೂರು ಕವೆಯ ಕೊಚ್ಚಿಸಿ ಲಕ್ಷಸಿಬಿರು ಬಿಡಿಸಿ, ಸೀಳಿದ ಬಿದಿರ ಹೊರೆ ಹೊರೆಯಲ್ಲಿ ನೆಯ್ದುಡೆ ತೊಟ್ಟಿಲ ಸಂದ ಕಾಣದಂತೆ ನಾಲ್ಕು ಕಾಲನಿಕ್ಕಿ, ಅಂದು ಅಂದವಾದ ತೊಟ್ಟಿಲದಂಡೆಯನಿಕ್ಕಿ ಕಟ್ಟುವುದಕ್ಕೆ ಶ್ರುತ, ದೃಷ್ಟವೆಂಬೆರಡು ದಾರದಲ್ಲಿ ತೊಟ್ಟಿಲ ಕಟ್ಟಿ ಗೌರೀಶ್ವರ ಲಿಂಗಕ್ಕೆ ಹುಟ್ಟು ಹೋಗೋ ಎಂದು ಜೋಗುಳವಾಡಿದೆ.